ಅಮೃತ ವರ್ಷ

೭೫



ಕರ್ನಾಟಕ ಸಂಘ (ರಿ.)
ಶಿವಮೊಗ್ಗ

ಅಮೃತ ವರ್ಷ

ಕರ್ನಾಟಕ ಸಂಘ-೭೫

೧೯೩೦-೨೦೦೫

ಸಂಪಾದಕರು:
ಪ್ರೊ. ಪಾಂಡುರಂಗ ಉಡುಪ
ಶ್ರೀ ಜಯದೇವಪ್ಪ ಜೈನಕೇರಿ

ಪ್ರಕಾಶಕರು
ಕರ್ನಾಟಕ ಸಂಘ (ರಿ.)
ಬಿ.ಹೆಚ್. ರಸ್ತೆ, ಶಿವಮೊಗ್ಗ-೫೭೭೨೦೧
ದೂರವಾಣಿ : ೦೮೧೮೨-೨೭೭೪೦೬

AMRUTHA VARSHA Karnataka Sangha-75 : Edited by : Prof. Panduranga Udupa, Sri Jayadevappa Jainakeri. Published by : Sampadaka Mandali, Karnataka Sangha (R), Shimoga-577201.

Copies : 1000

First Edition : 2005

Pages : xxvi+382

Price : **Rs. 200/-**

ಅಮೃತ ವರ್ಷ : ಕರ್ನಾಟಕ ಸಂಘ-೭೫ : ಸಂಪಾದಕರು: ಪ್ರೊ. ಪಾಂಡುರಂಗ ಉಡುಪ, ಶ್ರೀ ಜಯದೇವಪ್ಪ ಜೈನಕೇರಿ, ಪ್ರಕಾಶಕರು: ಸಂಪಾದ ಮಂಡಳಿ, ಕರ್ನಾಟಕ ಸಂಘ (ರಿ), ಶಿವಮೊಗ್ಗ-೫೭೭೨೦೧

ಪ್ರತಿಗಳು : ೧೦೦೦

ಮೊದಲನೆಯ ಮುದ್ರಣ : ೨೦೦೫

ಪುಟಗಳು : xxvi+೩೮೨

ಬೆಲೆ : ರೂ. ೨೦೦/-

ಲೇಖನಗಳ ಅಭಿಪ್ರಾಯಗಳು ಆಯಾಯ ಲೇಖಕರದು.

ಮುಖಪುಟ ವಿನ್ಯಾಸ : ಜಯದೇವಪ್ಪ ಜೈನಕೇರಿ

ಕಲೆ : ಜೋಯ್ಸ್ ಬುಕ್‌ಹೌಸ್ ಅಂಡ್ ಪ್ರಿಂಟರ್ಸ್
ಶಿವಮೊಗ್ಗ ✆ : 595041

ಛಾಯಾಕ್ಷರ ಜೋಡಣೆ:
ವರ್ಷಿಣಿ ಗ್ರಾಫಿಕ್ಸ್, ಬೆಂಗಳೂರು-೪೦ ✆ : 23402575

ಮುದ್ರಕರು:
ಸ್ನೇಹಾ ಪ್ರಿಂಟರ್ಸ್
ನಂ. ೧೧೪, ೪ನೇ ಅಡ್ಡರಸ್ತೆ, ಬಿ.ಸಿ.ಸಿ. ಬಡಾವಣೆ
ಅತ್ತಿಗುಪ್ಪೆ, ವಿಜಯನಗರ ೨ನೇ ಹಂತ, ಬೆಂಗಳೂರು-೪೦ ✆ : 23392814
E-Mail-snehaprinters@gmail.com
karthikenterprise@gmail.com

ಸಂಪಾದಕ ಮಂಡಳಿ

ಪ್ರೊ|| ಪಾಂಡುರಂಗ ಉಡುಪ

ಶ್ರೀ ಜಯದೇವಪ್ಪ ಜೈನಕೇರಿ

ಶ್ರೀ ಹೆಚ್.ಡಿ. ಮೋಹನ ಶಾಸ್ತ್ರಿ

ಶ್ರೀ ಕೆ.ಜಿ. ಸುಬ್ರಹ್ಮಣ್ಯ

ಡಾ|| ತೀ.ನಂ. ಶಂಕರನಾರಾಯಣ

ಡಾ|| ನಾಗಮಣಿ ಎಸ್.

ಸಂಪಾದಕರ ನುಡಿ

ನಿವೇದನೆ

ಕನ್ನಡ ಬಂಧುಗಳೇ,

ಶಿವಮೊಗ್ಗದ ಕರ್ನಾಟಕ ಸಂಘ ತನ್ನ ಎಪ್ಪತ್ತೈದನೇ ವರ್ಧಂತಿಯನ್ನು ಆಚರಿಸಿಕೊಳ್ಳುತ್ತಿದೆ. ೧೯೩೦ರಲ್ಲಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಅಭಿಮಾನಿಗಳಾಗಿದ್ದ ಕೆಲವು ಉತ್ಸಾಹೀ ತರುಣರ ಪ್ರಯತ್ನದ ಫಲವಾಗಿ ಕರ್ಣಾಟಕ ಸಂಘ, ಮುಕ್ಕಾಲು ಶತಮಾನ ಕಾಲ ಕನ್ನಡದ ಕೈಂಕರ್ಯವನ್ನು ಸಾರ್ಥಕವಾಗಿ ನಡೆಸುತ್ತಾ ಸಾಗಿಬಂದಿದೆ. ಮುಂದೆಯೂ ಸಾಗಲಿದೆ. ಒಂದು ಸಂಸ್ಥೆಯ ಅನಂತ ಆಯುರ್ಮಾನದಲ್ಲಿ ಎಪ್ಪತ್ತೈದು ವರ್ಷಗಳೆಂಬುದು ಸ್ವಲ್ಪವೇ ಎನ್ನಿಸಿದರೂ, ಅದು ನಡೆಸಿದ ಕಾರ್ಯಚಟುವಟಿಕೆಗಳ ಮಹತ್ವದಿಂದ ಮಹತ್ತಾಗಿಯೇ ತೋರುತ್ತದೆ. ಧಾರವಾಡದ ವಿದ್ಯಾವರ್ಧಕ ಸಂಘ ಮತ್ತು ಕನ್ನಡ ಸಾಹಿತ್ಯ ಪರಿಷತ್ತನ್ನು ಬಿಟ್ಟರೆ, ಶಿವಮೊಗ್ಗದ ಕರ್ಣಾಟಕ ಸಂಘವೇ; ಕನ್ನಡ ಭಾಷೆ; ಸಾಹಿತ್ಯ, ಸಂಸ್ಕೃತಿಗಳ ಪ್ರಚಾರಕ್ಕಾಗಿ ಸ್ಥಾಪಿತವಾದ ಮೂರನೇ ಹಿರಿಯ ಸಂಸ್ಥೆ ಎಂಬ ಹೆಗ್ಗಳಿಕೆಗೆಪಾತ್ರವಾಗಿದೆ.

ಪಂ. ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು, ಶ್ರೀ ಗುರುರಾವ್ ದೇಶಪಾಂಡೆ, ಕೂಡಲಿ ಚಿದಂಬರಂ, ಎಸ್.ವಿ. ಕೃಷ್ಣಮೂರ್ತಿರಾಯರು, ಭೂಪಾಳಂ ಚಂದ್ರಶೇಖರಯ್ಯ ಮತ್ತು ಇತರ ಆಗಿನ ಉತ್ಸಾಹೀ ತರುಣ ಪೀಳಿಗೆಯ ಕನ್ನಡಾಭಿಮಾನಿಗಳು, "ಹಚ್ಚೇವು ಕನ್ನಡದ ದೀಪ" ಎಂದು ಕವಿ ಸಾರುವ ಮೊದಲೇ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂದು ಹಂಬಲಿಸಿ ಬೆಳಗಿದ ದೀಪದ ಕುಡಿ ಈ ಕರ್ನಾಟಕ ಸಂಘ. ಮುಂದೆ ಮಹಾಕವಿಯಾಗಿ ಬೆಳೆದ ತರುಣ ಕವಿ ಅದಮ್ಯ ಕನ್ನಡಾಭಿಮಾನಿ ಶ್ರೀ ಕುವೆಂಪು, ಈ ತರುಣ ಬಳಗದ ಒಡನಾಡಿ ಅವರಿಂದಲೇ ಈ ಕರ್ನಾಟಕ ಸಂಘವನ್ನು ಉದ್ಘಾಟಿಸಬೇಕೆಂದು ಅವರನ್ನು ಕರೆಸಿಕೊಂಡು ಶಿವಮೊಗ್ಗದ ವಾಣಿಜ್ಯ ಪ್ರಮುಖ ಪರಿಸರದಲ್ಲಿ ಕನ್ನಡ ಶಾರದೆಯ ಪೀಠವನ್ನು ಪ್ರತಿಷ್ಠಾಪಿಸಿ ದೀಪ ಬೆಳಗಿದರು. ಅಂದು ಶ್ರೀ ಕುವೆಂಪು ಮಾಡಿದ ಉದ್ಘಾಟನಾ ಭಾಷಣ, ಇಂದಿಗೂ ಕನ್ನಡಿಗರ ಮನಸ್ಸಿನಲ್ಲಿ ಕನ್ನಡಾಭಿಮಾನವನ್ನು ಬೆಳಗಿಸುವಂತಿದೆ.

ಕನ್ನಡ ಪುಸ್ತಕ ಪ್ರಕಟಣೆ, ಪುಸ್ತಕ ಪ್ರಚಾರ, ಕನ್ನಡದ ಹಿರಿಯ ವಿದ್ವಾಂಸರಿಂದ ಭಾಷಣ, ಉಪನ್ಯಾಸಗಳು, ಕವಿ ಸಮ್ಮೇಳನ, ಕಮ್ಮಟ-ಕಾರ್ಯಾಗಾರಗಳು, ಪುಸ್ತಕ ಕೊಡುಗೆ ಇತ್ಯಾದಿ ಇತ್ಯಾದಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಕಾರ್ಯ ನಿರ್ವಹಿಸಿತು.

ಆದರೆ, ಕರ್ನಾಟಕ ಸಂಘಕ್ಕೆ ತನ್ನದೇ ಆದ ನೆಲೆ ಇರಲಿಲ್ಲ. ಎಲ್ಲೆಲ್ಲೋ ಸುತ್ತಾಡಿ ಕೊನೆಗೆ, ಶಿವಮೊಗ್ಗದ ಸುಪ್ರಸಿದ್ಧ ಅಡಿಕೆ ಮಂಡಿ ವರ್ತಕರೂ, ವಿದ್ಯಾಭಿಮಾನಿಗಳೂ, ವಿದ್ವದಭಿಮಾನಿಗಳೂ ಆಗಿದ್ದ ದಿ. ಹಸೂಡಿ ವೆಂಕಟಶಾಸ್ತ್ರಿಗಳ ಔದಾರ್ಯದಿಂದ ಇಂದಿನ, ಕರ್ನಾಟಕ ಸಂಘ ಭವನ ತಲೆ ಎತ್ತಿನಿಂತಿತು. ಕನ್ನಡ ಕಣ್ವ ಬಿ.ಎಂ.ಶ್ರೀ. ಇದರ ಶಂಕುಸ್ಥಾಪನೆ ಮಾಡಿ, ಅಂದಿನ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರಿಂದ ಉದ್ಘಾಟಿಸಲ್ಪಟ್ಟಿದ್ದು, ಅನಂತರ ಈ ಸಂಘ ಎರಡು ಸಾಹಿತ್ಯ ಸಮ್ಮೇಳನಗಳನ್ನು ನಡೆಸುವುದರಲ್ಲಿ ಪ್ರಮುಖ ಪಾತ್ರವಹಿಸಿದ್ದು. ಇವೆಲ್ಲವೂ ಶಿವಮೊಗ್ಗದ ಸಾಂಸ್ಕೃತಿಕ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಬೇಕಾದ ಘಟನಾವಳಿಗಳು. ಕರ್ನಾಟಕ ಸಂಘ ಬಹಳ ಕಾಲದವರೆಗೂ ಶಿವಮೊಗ್ಗದ ಏಕೈಕ ಸಾಂಸ್ಕೃತಿಕ ಕೇಂದ್ರವಾಗಿ ಮೆರೆಯಿತು.

೧೯೯೧ರಲ್ಲಿ ಕರ್ನಾಟಕ ಸಂಘ ತನ್ನ ವಜ್ರ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿಕೊಂಡಿತು. ಆಗ ಉತ್ಸಾಹಿಗಳೂ ಸಾಹಿತ್ಯಾಭಿಮಾನಿಗಳೂ ಆದ ಶ್ರೀಯುತ ಕೆ.ಜಿ. ಸುಬ್ರಹ್ಮಣ್ಯ, ಅಧ್ಯಕ್ಷರು, ಗೌರವ ಕಾರ್ಯದರ್ಶಿ ಶ್ರೀ ಟಿ.ಆರ್. ಪಾಂಡುರಂಗ, ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಪ್ರಶಂಸನೀಯ ಕಾರ್ಯ ಮಾಡಿದೆ.

ವಜ್ರ ಮಹೋತ್ಸವದ ಸಂದರ್ಭದಲ್ಲಿ ಕರ್ನಾಟಕ ಸಂಘ ಹೊಸ ಯೋಜನೆಗಳನ್ನು ಹಮ್ಮಿಕೊಂಡಿತು. ಶಿವಮೊಗ್ಗ ಜಿಲ್ಲೆಯ ಸುಪ್ರಸಿದ್ಧ ಹಿರಿಯ ಸಾಹಿತಿಗಳನ್ನು ಕರ್ನಾಟಕ ಸಂಘದ ಗೌರವ ಸದಸ್ಯರನ್ನಾಗಿ ಸ್ವೀಕರಿಸಿತು. ಶ್ರೀ ಕುವೆಂಪು, ಶ್ರೀ ಎಸ್.ವಿ. ಪರಮೇಶ್ವರ ಭಟ್ಟರು, ಶ್ರೀಮತಿ ಎಂ.ಕೆ. ಇಂದಿರಾ, ಶ್ರೀ ಪಿ. ಲಂಕೇಶ್, ಡಾ|| ಜಿ.ಎಸ್. ಶಿವರುದ್ರಪ್ಪ, ಡಾ|| ಹಾ.ಮಾ. ನಾಯಕರು, ಡಾ|| ಯು.ಆರ್. ಅನಂತಮೂರ್ತಿ ಮತ್ತು ಶ್ರೀ ಕೆ.ವಿ. ಸುಬ್ಬಣ್ಣ -ಇವರುಗಳನ್ನು ಕರ್ನಾಟಕ ಸಂಘದ ಗೌರವ ಸದಸ್ಯರಾಗಿ ಸ್ವೀಕರಿಸಿ, ಅವರ ಇಚ್ಛೆಯಂತೆ ಪ್ರತಿ ವರ್ಷ ಅವರ ಹೆಸರಿನ ಸಾಹಿತ್ಯ ಪ್ರಶಸ್ತಿಗಳನ್ನು ಶ್ರೇಷ್ಠ ಸಾಹಿತ್ಯ ಕೃತಿಗಳಿಗೆ ನೀಡಲಾಗುತ್ತಿದೆ. ಹಾಗೆಯೇ ಸಂಶೋಧಕ ವಿದ್ವಾಂಸರಿಗೆ ಶಂ.ಬಾ. ಜೋಶಿ ಪ್ರಶಸ್ತಿಯನ್ನು ಹಿರಿಯ ಮಕ್ಕಳ ಸಾಹಿತಿಗಳಿಗೆ ಮಕ್ಕಳ ಸಾಹಿತ್ಯ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

ಕರ್ನಾಟಕ ಸಂಘ ಭವನ ತನ್ನ ವಜ್ರ ಮಹೋತ್ಸವವನ್ನು ೨೦೦೩ರಲ್ಲಿ ಆಚರಿಸಿಕೊಂಡಿದೆ. ಆ ಸಂದರ್ಭದ ಸ್ಮರಣೆಗಾಗಿ ಕರ್ನಾಟಕ ಸಂಘ ಪ್ರತಿವರ್ಷ ಶಾಲೆ, ಕಾಲೇಜುಗಳ ಗ್ರಂಥಾಲಯಗಳಿಗೆ ಉಚಿತವಾಗಿ ಸಾವಿರಾರು ರೂಪಾಯಿ ಬೆಲೆಯ ಪುಸ್ತಕಗಳನ್ನು ವಿತರಿಸುತ್ತಾ ಬಂದಿದೆ.

ಪ್ರತಿ ವರ್ಷ ನವೆಂಬರ್ ತಿಂಗಳಿನಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕರ್ನಾಟಕ ಸಂಘದಲ್ಲಿ ಪುಸ್ತಕ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆ ಮಾಡಲಾಗುತ್ತಿದೆ.

ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ವಿಶ್ವವಿದ್ಯಾಲಯ, ಕೇಂದ್ರ ಸಾಹಿತ್ಯ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಮೈಸೂರು ವಿ.ವಿ., ಕುವೆಂಪು ವಿ.ವಿ. ಪ್ರಕಟನೆಗಳನ್ನು ರಿಯಾಯಿತಿ ದರದಲ್ಲಿ ಪುಸ್ತಕಗಳ ಮಾರಾಟ ನಡೆಯುತ್ತದೆ. ಪ್ರತಿ ವರ್ಷವೂ ಲಕ್ಷಾಂತರ ರೂಪಾಯಿಗಳ ಪುಸ್ತಕ ಮಾರಾಟ ನಡೆಯುತ್ತಾ ಬಂದಿದೆ.

ಕನ್ನಡದ ಹಿರಿಯ ಕಿರಿಯ ಸಾಹಿತಿಗಳು, ವಿದ್ವಾಂಸರು, ಕಲೆಗಾರರು, ಸಂಗೀತಗಾರರು ಕರ್ನಾಟಕ ಸಂಘಕ್ಕೆ ಆಗಮಿಸಿ, ಕರ್ನಾಟಕ ಸಂಘದ ವೇದಿಕೆಯನ್ನು ಪಾವನಗೊಳಿಸಿದ್ದಾರೆ. ಬೀದರ್‌ನಿಂದ ಮಂಗಳೂರು, ಕೋಲಾರದಿಂದ ಕಾರವಾರದ ತನದ ಎಲ್ಲ ಹಿರಿಯ ಕಿರಿಯ ಸಾಹಿತಿಗಳೂ ವಿದ್ವಾಂಸರೂ ಈ ವೇದಿಕೆಯನ್ನು ಅಲಂಕರಿಸಿದ್ದಾರೆ.

ಕರ್ನಾಟಕ ಸಂಘವನ್ನು ಕಟ್ಟಿ ಬೆಳೆಸುವಲ್ಲಿ ನೂರಾರು ಕೈಗಳು ಮನಸ್ಸುಗಳು ನಿರ್ವಂಚನೆಯಿಂದ ಕೈಜೋಡಿಸಿವೆ. ಕರ್ನಾಟಕ ಸಂಘದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಈ ಎಲ್ಲರನ್ನು ಸ್ಮರಿಸಿಕೊಳ್ಳುತ್ತೇವೆ. ಅಮೃತ ಮಹೋತ್ಸವವನ್ನು ವಿಜೃಂಭಣೆಯಿಂದ ನಡೆಸುವ ಕಾರ್ಯಕ್ರಮವನ್ನು ಸಂಘದ ಕಾರ್ಯಕಾರಿ ಮಂಡಳಿ ಮತ್ತು ಸದಸ್ಯರು ರೂಪಿಸಿದ್ದಾರೆ. ಅಲ್ಲದೇ ಈ ಸಂದರ್ಭದಲ್ಲಿ ಒಂದು 'ಅಮೃತ ವರ್ಷ' ಗ್ರಂಥವನ್ನು ಹೊರತರುವ ಯೋಜನೆ ರೂಪಿತವಾಗಿದೆ. ಕರ್ನಾಟಕ ಸಂಘದ ಪ್ರಾರಂಭದಿಂದ ಇಲ್ಲಿಯ ತನಕದ ಕಾರ್ಯಚಟುವಟಿಕೆಗಳನ್ನು ಬಿಂಬಿಸುವ ಚಿತ್ರಲೇಖನಗಳಿಂದ ಸಮೃದ್ಧವಾಗಿದೆ ಎಂದು ಭಾವಿಸುತ್ತೇನೆ. ಇದರ ಸಂಪಾದಕ ಮಂಡಳಿಗೆ ನನ್ನ ಕೃತಜ್ಞತೆಗಳು.

ಕಾಲ ಬಂಜೆಯಲ್ಲ, ಭವಿಷ್ಯದಲ್ಲಿ ಕರ್ನಾಟಕ ಸಂಘ ಬದಲಾಗುತ್ತಿರುವ ಕಾಲ ಪರಿಸ್ಥಿತಿಗನುಗುಣವಾಗಿ ಹೊಸ ಹೊಸ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತಾ, ತನ್ನ ಚೌಕಟ್ಟನ್ನು ವಿಸ್ತರಿಸಿಕೊಳ್ಳುತ್ತಾ ಉತ್ಸಾಹದಿಂದ ಶತಮಾನೋತ್ಸವದತ್ತ ಸಾಗಿ ನಡೆಯುತ್ತಿದೆ.

ಈ ಸಂದರ್ಭದಲ್ಲಿ ಈ ಕರ್ನಾಟಕ ಸಂಘವನ್ನು ಕಟ್ಟಿ ಬೆಳೆಸಿ, ಮುನ್ನಡೆಸಿದ, ಇದರ ಶ್ರೇಯೋಭಿವೃದ್ಧಿಯನ್ನು ಬಯಸುವ ಎಲ್ಲರನ್ನೂ ಎಲ್ಲ ಮನಸ್ಸುಗಳನ್ನು ಅಭಿನಂದಿಸುತ್ತಾ, ಅಭಿನಂದನೆಗಳನ್ನು ಅರ್ಪಿಸಿ, ಈ ಗ್ರಂಥವನ್ನು ತಮ್ಮ ಕೈಗಿಡುತ್ತಿದ್ದೇವೆ.

ಶಿವಮೊಗ್ಗ
ದಿ. ೨೮.೧೦.೦೫

-ಪ್ರೊ. ಪಾಂಡುರಂಗ ಉಡುಪ
-ಶ್ರೀ ಜಯದೇವಪ್ಪ ಜೈನಕೇರಿ

ಅರ್ಪಣೆ



ಕರ್ನಾಟಕ ಸಂಘ ಭವನದ ದಾನಿಗಳಾದ

ಹಸೂಡಿ ವೆಂಕಟ ಶಾಸ್ತ್ರಿಗಳವರು

ಇವರು ನಮ್ಮ ಗೌರವ ಸದಸ್ಯರು



ಕುವೆಂಪು



ಎಸ್.ವಿ.ಪಿ.



ಎಂ.ಕೆ. ಇಂದಿರಾ



ಪಿ. ಲಂಕೇಶ್



ಡಾ. ಜಿ.ಎಸ್.ಎಸ್.



ಡಾ. ಹಾ.ಮಾ.ನಾ.



ಡಾ. ಯು.ಆರ್. ಅನಂತಮೂರ್ತಿ



ಕೆ.ವಿ. ಸುಬ್ಬಣ್ಣ

ಹಿರಿಯ ಸಂಶೋಧಕರು




ಶಂ.ಬಾ. ಜೋಷಿ

ಕಾರ್ಯಕಾರಿ ಸಮಿತಿ ಸದಸ್ಯರು



ಪ್ರೊ|| ಪಾಂಡುರಂಗ ಉಡುಪ,
ಅಧ್ಯಕ್ಷರು




ಶ್ರೀ ಕೆ.ಜಿ. ಸುಬ್ರಹ್ಮಣ್ಯ
ಮಾಜಿ ಅಧ್ಯಕ್ಷರು



ಶ್ರೀ ಜಯದೇವಪ್ಪ ಜೈನಕೇರಿ,
ಗೌರವ ಕಾರ್ಯದರ್ಶಿ



ಶ್ರೀ ಹೆಚ್.ಡಿ. ಮೋಹನಶಾಸ್ತ್ರಿ
ಕೋಶಾಧ್ಯಕ್ಷರು



ಶ್ರೀ ಹೆಚ್. ಕೃಷ್ಣಮೂರ್ತಿ,
ಕಾರ್ಯಕಾರಿ ಸಮಿತಿ ಸದಸ್ಯರು



ಶ್ರೀಮತಿ ವಿಶಾಲಾಕ್ಷಿ,
ಕಾರ್ಯಕಾರಿ ಸಮಿತಿ ಸದಸ್ಯರು



ಶ್ರೀ ಹೆಚ್.ಡಿ. ಉದಯಶಂಕರಶಾಸ್ತ್ರಿ
ಕಾರ್ಯಕಾರಿ ಸಮಿತಿ ಸದಸ್ಯರು



ಶ್ರೀ ನಿರಂಜನ ಹೆಚ್. ಕೋರಿ

ಕಾರ್ಯಕಾರಿ ಸಮಿತಿ ಸದಸ್ಯರು



ಶ್ರೀ ಕೆ. ಚಕ್ರಪಾಣಿ



ಶ್ರೀಯುತ ಎಫ್. ಅಸಾದುಲ್ಲಾ ಬೇಗ್



ಡಾ|| ಜಿ.ಎಸ್. ಮಹಾದೇವ



ಶ್ರೀ ಹೆಚ್.ಎನ್. ಚಂದ್ರಶೇಖರ್,
ಕಾರ್ಯಕಾರಿ ಸಮಿತಿ ಸದಸ್ಯರು



ಶ್ರೀಮತಿ ವಿಜಯಾ ಶ್ರೀಧರ್,
ಕಾರ್ಯಕಾರಿ ಸಮಿತಿ ಸದಸ್ಯರು



ಶ್ರೀ ಕೆ. ಯುವರಾಜ



ಡಾ|| ಶೀ.ನಂ. ಶಂಕರನಾರಾಯಣ
ಸದಸ್ಯರು



ಟಿ.ಪಿ. ಹೆಗ್ಗಡೆ,
ಕಾ.ಕಾ.ಸ. ಸದಸ್ಯರು



ನಾಗಮಣಿ ಎಸ್.

ಸ್ಥಾಪಕ ಕಾರ್ಯಕಾರಿ ಸಮಿತಿ (೮.೧೧.೧೯೩೦)

ಅಧ್ಯಕ್ಷರು

ಪಂ॥ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು

ಗೌರವ ಕಾರ್ಯದರ್ಶಿ

ಶ್ರೀ ದೇಶಪಾಂಡೆ ಗುರುರಾವ್, ಬಿ.ಎ., ಬಿ.ಟಿ.

ಸಹ ಕಾರ್ಯದರ್ಶಿ ಮತ್ತು ಖಜಾಂಚಿ

ಶ್ರೀ ಕೂಡಲಿ ಚಿದಂಬರಂ, ಬಿ.ಎ., ಎಲ್.ಎಲ್.ಬಿ.

ಮಂಡಳಿ ಸದಸ್ಯರು

ಶ್ರೀ ಭೂಪಾಳು ಚಂದ್ರಶೇಖರಯ್ಯ, ಬಿ.ಎ.

ಶ್ರೀ ಎನ್.ಎಸ್. ಕೃಷ್ಣಮೂರ್ತಿ, ಬಿ.ಎಸ್ಸಿ., ಎಲ್.ಎಲ್.ಬಿ.

ಶ್ರೀ ಎಸ್.ವಿ. ಕೃಷ್ಣಮೂರ್ತಿರಾವ್, ಬಿ.ಎಸ್ಸಿ., ಎಲ್.ಎಲ್.ಬಿ.

ಶ್ರೀ ಆರ್. ಕೃಷ್ಣಶೆಟ್ಟಿ, ಬಿ.ಎ., ಎಲ್.ಎಲ್.ಬಿ.

ಶ್ರೀ ಎ.ಎನ್. ನಾರಾಯಣಭಟ್ಟ, ಬಿ.ಎ., ಎಲ್.ಎಲ್.ಬಿ.

ಶ್ರೀ ಭೂಪಾಳು ಪುಟ್ಟನಂಜಪ್ಪ, ಎಂ.ಎ., ಎಲ್.ಎಲ್.ಬಿ.

ಶ್ರೀ ಡಿ.ಆರ್. ಮಾನಪ್ಪ

ಆಧಾರ:
(ಕರ್ನಾಟಕ ಸಂಘ- ಮೊದಲ ಐದು ವರ್ಷಗಳು (೧೯೩೦-೧೯೩೫)
(ಕೃಪೆ : ಕೂಡಲಿ ಕೃಷ್ಣಮೂರ್ತಿ, ಮೈಸೂರು)

ಕಾರ್ಯಕಾರಿ ಸಮಿತಿ (೨೦೦೫)

ಅಧ್ಯಕ್ಷರು

ಪ್ರೊ|| ಪಾಂಡುರಂಗ ಉಡುಪ

ಗೌರವ ಕಾರ್ಯದರ್ಶಿ

ಶ್ರೀ ಜಯದೇವಪ್ಪ ಜೈನಕೇರಿ

ಕೋಶಾಧ್ಯಕ್ಷರು

ಶ್ರೀ ಹೆಚ್.ಡಿ. ಮೋಹನಶಾಸ್ತ್ರಿ

ಸದಸ್ಯರು

ಶ್ರೀ ಹೆಚ್.ಎನ್. ಚಂದ್ರಶೇಖರ್

ಶ್ರೀ ಹೆಚ್.ಟಿ. ಕೃಷ್ಣಮೂರ್ತಿ

ಡಾ|| ಬಿ.ಎಸ್. ಮಹಾದೇವಯ್ಯ

ಶ್ರೀ ಹೆಚ್.ಡಿ. ಉದಯಶಂಕರ ಶಾಸ್ತ್ರಿ

ಶ್ರೀಮತಿ ವಿಜಯಾ ಶ್ರೀಧರ್

ಶ್ರೀಮತಿ ವಿಶಾಲಾಕ್ಷಿ

ಶ್ರೀ ಎಫ್. ಅಸಾದುಲ್ಲಾಬೇಗ್

ಡಾ|| ತೀ.ನಂ. ಶಂಕರನಾರಾಯಣ

ಶ್ರೀ ಕೆ. ಚಕ್ರಪಾಣಿ

ಶ್ರೀ ನಿರಂಜನ ಹೆಚ್. ಕೋರಿ

ಡಾ|| ನಾಗಮಣಿ ಎಸ್.

ಶ್ರೀ ಕೆ. ಯುವರಾಜ್

ಪ್ರೊ|| ಟಿ.ವಿ. ಹೆಗಡೆ

ವಿಶೇಷ ಆಹ್ವಾನಿತರು

ಶ್ರೀ ಕೆ.ಜಿ. ಸುಬ್ರಹ್ಮಣ್ಯ

ಮಾಜಿ ಅಧ್ಯಕ್ಷರು, ಕರ್ನಾಟಕ ಸಂಘ

ಆರಂಭ ಕಾಲದಿಂದ
ಅಧ್ಯಕ್ಷರು, ಗೌರವ ಕಾರ್ಯದರ್ಶಿಗಳು ಮತ್ತು
ಕೋಶಾಧ್ಯಕ್ಷರುಗಳ ಪಟ್ಟಿ

ಅಧ್ಯಕ್ಷರು

೧.	ಪಂ॥ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿ	೮.೧೧.೧೯೩೦
೨.	ಶ್ರೀ.ಹಸೂಡಿ ವೆಂಕಟ ಶಾಸ್ತ್ರಿ	೭.೧೧.೧೯೪೮
೩.	ಶ್ರೀ ಹೆಚ್.ವಿ. ದತ್ತಾತ್ರೇಯ ಶಾಸ್ತ್ರಿ	೨೭.೧೧.೧೯೫೯
೪.	ಶ್ರೀ ಎಸ್. ನರಸಿಂಹಮೂರ್ತಿ	೧೮.೧೨.೧೯೭೭
೫.	ಶ್ರೀ ಕೆ.ಜಿ. ಸುಬ್ರಹ್ಮಣ್ಯ	೮.೬.೧೯೯೧
೬.	ಶ್ರೀ ಟಿ.ಆರ್. ಪಾಂಡುರಂಗ	೩೦.೩.೧೯೯೭
೭.	ಪ್ರೊ॥ ಪಾಂಡುರಂಗ ಉಡುಪ	೨೭.೧೧.೨೦೦೦ ರಿಂದ

ಗೌ॥ ಕಾರ್ಯದರ್ಶಿಗಳು

೧.	ಶ್ರೀ ಗುರುರಾವ್ ದೇಶಪಾಂಡೆ	೮.೧೧.೧೯೩೦
೨.	ಶ್ರೀ ಎಸ್.ವಿ. ಕೃಷ್ಣಮೂರ್ತಿರಾವ್	೧೫.೧೧.೧೯೩೯
೩.	ಶ್ರೀ ಎಸ್. ನರಸಿಂಹಮೂರ್ತಿ	೭.೧೧.೧೯೪೮
೪.	ಶ್ರೀ ಬಿ.ಎನ್. ಕೃಷ್ಣಮೂರ್ತಿ	೨೭.೧೧.೧೯೬೬
೫.	ಶ್ರೀ ಬಳ್ಳೆಕೆರೆ ಹನುಮಂತಪ್ಪ	೧೮.೧೨.೧೯೭೭
೬.	ಶ್ರೀ ಟಿ.ಆರ್. ಪಾಂಡುರಂಗ	೮.೬.೧೯೯೧
೭.	ಶ್ರೀ ಹೆಚ್.ಟಿ. ಕೃಷ್ಣಮೂರ್ತಿ	೪.೪.೧೯೯೭
೮.	ಶ್ರೀ ಜಯದೇವಪ್ಪ ಜೈನಕೇರಿ	೨೭.೪.೧೯೯೮ ರಿಂದ

ಕೋಶಾಧ್ಯಕ್ಷರು

೧.	ಶ್ರೀ ಕೂಡಲಿ ಚಿದಂಬರಂ	೮.೧೧.೧೯೩೦
೨.	ಶ್ರೀ ಬಿ.ಆರ್. ಪುಟ್ಟನಂಜಪ್ಪ	೧.೩.೧೯೩೭
೩.	ಶ್ರೀ ಬಿ.ಎನ್. ರಾಘವಯ್ಯ	೭.೧೧.೧೯೪೮
೪.	ಡಾ. ಕೆ.ಎನ್. ದತ್ತಾತ್ರಿ	೨೪.೧೧.೧೯೫೬
೫.	ಶ್ರೀ ಆರ್.ಎನ್. ನಾಗರಾಜ್	೨೭.೧೧.೧೯೬೬
೬.	ಶ್ರೀ ಡಿ.ಆರ್. ರತ್ನಾಕರ	೧೮.೧೨.೧೯೭೭
೭.	ಶ್ರೀ ಹೆಚ್.ಡಿ. ಮೋಹನಶಾಸ್ತ್ರಿ	೪.೪.೧೯೯೪ ರಿಂದ

ಗೌರವ ಕಾರ್ಯದರ್ಶಿಯವರ ವರದಿ

೧೯೩೬ಕ್ಕಿಂತ ಹಿಂದಿನ ದಾಖಲೆ ಇದುವರೆಗೆ ಲಭ್ಯವಾಗಿರಲಿಲ್ಲ. ಇತ್ತೀಚೆಗೆ ಸ್ಥಾಪಕ ಸದಸ್ಯರಲ್ಲೊಬ್ಬರಾಗಿದ್ದ ಶ್ರೀ ಕೂಡಲಿ ಚಿದಂಬರಂ ಹುಟ್ಟಿ ನೂರು ವರ್ಷಗಳಾದವು ಎಂಬ ಹಿನ್ನೆಲೆಯಲ್ಲಿ ಮೈಸೂರಿನಲ್ಲಿರುವ ಅವರ ಪುತ್ರ ಕೂಡಲಿ ಕೃಷ್ಣಮೂರ್ತಿ ಅವರನ್ನು ಸಂಪರ್ಕಿಸಿದೆವು. ಅವರು ತಮ್ಮ ತಂದೆಯ ಬಗ್ಗೆ ತುಂಬ ಹೆಮ್ಮೆಯಿಂದ, ಅವರ ಕೆಲವು ದಾಖಲೆಗಳನ್ನು, ಭಾವಚಿತ್ರಗಳನ್ನು, ಕಾಯ್ದಿಟ್ಟುಕೊಂಡಿರುವ ಸಂಗತಿ ತಿಳಿಯಿತು. ಅವರಲ್ಲಿದ್ದ ಒಂದೇ ಒಂದು ಪ್ರತಿ, ಕರ್ನಾಟಕ ಸಂಘ, ಶಿವಮೊಗ್ಗ. ಮೊದಲ ಐದು ವರ್ಷಗಳು, ಮುದ್ರಿತ ವರದಿ ಎಂಬ ೬೩ ಪುಟಗಳ ಪುಸ್ತಕವನ್ನು ಕೆಲವು ಅಪರೂಪದ ಭಾವಚಿತ್ರಗಳನ್ನು ಕಳಿಸಿದರು. ೧೯೩೦ ರಿಂದ ೧೯೩೬ರ ವರೆಗಿನ ಯಾವುದೇ ದಾಖಲೆ ಸಿಗದೆ ಕತ್ತಲಲ್ಲಿ ಕರಿ ಬೆಕ್ಕನ್ನು ಹುಡುಕುತ್ತಿದ್ದ ನಮಗೆ ಬೆಳಕಿನ ಬಳ್ಳಿಯೇ ಕೈಗೆ ಸಿಕ್ಕು, ಸಂಘದ ಆರಂಭ ಕಾಲದ ಎಲ್ಲ ಅಧಿಕೃತ ದಾಖಲೆಗಳ ವಿಸ್ತೃತ ವರದಿ ಲಭ್ಯವಾಯಿತು. ಇದೊಂದು ಅಪರೂಪದ ದಾಖಲೆಯಾದ್ದರಿಂದ ಕಾರ್ಯಕಾರಿ ಸಮಿತಿಯು ಆರಂಭದ ಐದು ವರ್ಷಗಳ ವರದಿಯನ್ನು ಯಥಾವತ್ತಾಗಿ 'ಅಮೃತ ವರ್ಷ'ದಲ್ಲಿ ಪ್ರಕಟಿಸಲು ತೀರ್ಮಾನಿಸಿತು.

ಈ ವರದಿಯಲ್ಲಿ ಪ್ರಕಟವಾಗಿರುವಂತೆ ಕರ್ನಾಟಕ ಸಂಘದ ಸ್ಥಾಪಕ ಸದಸ್ಯರಾಗಿ ಶ್ರೀ ಭೂಪಾಳಂ ಪುಟ್ಟ ನಂಜಪ್ಪನವರು, ಶ್ರೀ ಎ. ಸೀತಾರಾಮ್, ಶ್ರೀ ದೇಶಪಾಂಡೆ ಗುರುರಾವ್, ಕೂಡಲಿ ಚಿದಂಬರಂ ಅವರು ಸಂಘದ ಚಾಲನೆಗೆ ನಿಯುಕ್ತರಾಗಿರುವುದು ಕಂಡುಬರುತ್ತದೆ. ದಿ. ೮-೧೧-೧೯೩೦ರ ಶನಿವಾರ ಸಾಯಂಕಾಲ ಕರ್ನಾಟಕ ಸಂಘದ ಪ್ರಾರಂಭೋತ್ಸವವನ್ನು ಶ್ರೀಮಾನ್ ಕೆ.ವಿ. ಪುಟ್ಟಪ್ಪನವರು, ಶಿವಮೊಗ್ಗ ಸರ್ಕಾರಿ ಹೈಸ್ಕೂಲ್ ಮಂದಿರದಲ್ಲಿ ನೆರವೇರಿಸಿರುವುದು ಅವರ ಅಂದಿನ ಅಧ್ಯಕ್ಷ ಭಾಷಣವು "ಸಾಹಿತ್ಯ ಪ್ರಚಾರ" ಎಂಬ ಹೆಸರಿನಿಂದ ಪುಸ್ತಕ ರೂಪದಲ್ಲಿ ಸಂಘದಿಂದ ಪ್ರಕಟವಾಗಿದೆ ಎಂದು ದಾಖಲಿಸಲಾಗಿದೆ.

ಸಂಘದ ಆರಂಭಿಕ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆಗೊಂಡು ಕಷ್ಟದ ಸೇವೆ ಸಲ್ಲಿಸಿದ್ದಾರೆ. ನಂತರದ ಎಲ್ಲ ವರದಿಯನ್ನೂ ಸಂಪೂರ್ಣ ಮುದ್ರಿಸಲಾಗಿದೆ. ಪ್ರಥಮ ಐದು ವರ್ಷಗಳ ಅಧಿಕೃತ ವರದಿಯನ್ನು ದೊರಕಿಸಿಕೊಟ್ಟ ಶ್ರೀ ಕೂಡಲಿ

ಕೃಷ್ಣಮೂರ್ತಿ ಅವರಿಗೆ ಪ್ರಸ್ತುತ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯು ಕೃತಜ್ಞತೆಗಳನ್ನು ಅರ್ಪಿಸುತ್ತದೆ. ೧೯೩೬ರ ನಂತರದ ಕಾರ್ಯಕಾರಿ ಸಮಿತಿ ಪಟ್ಟಿ ಮತ್ತು ವರದಿಯನ್ನು ಸ್ಥೂಲವಾಗಿ ಕರ್ನಾಟಕ ಸಂಘ ಭವನ-೬೦ ಸಂಚಿಕೆಯಲ್ಲಿ ದಾಖಲಿಸಲಾಗಿದೆ.

ದಿ. ೨೭.೪.೧೯೯೮ರಂದು ಗೌರವ ಕಾರ್ಯದರ್ಶಿಯಾಗಿ ಆಯ್ಕೆಯಾದೆ. ಆಗ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಶ್ರೀ ಟಿ.ಆರ್. ಪಾಂಡುರಂಗ ಅವರು ಸುಮಾರು ೬ ವರ್ಷಗಳ ಕಾಲ ಗೌರವ ಕಾರ್ಯದರ್ಶಿಯಾಗಿ, ನಂತರ ೧ ವರ್ಷ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ, ವೈವಿಧ್ಯಮಯವಾಗಿ ಕನ್ನಡ ಸಾಹಿತ್ಯ, ಸಂಗೀತ, ನಾಟಕಗಳ ಕಾರ್ಯಕ್ರಮಗಳನ್ನು ನಡೆಸಿದ್ದರು. ಕುವೆಂಪು, ಎಸ್.ವಿ. ಪರಮೇಶ್ವರ ಭಟ್ಟ, ಎಂ.ಕೆ. ಇಂದಿರಾ, ಪಿ. ಲಂಕೇಶ್, ಡಾ॥ ಜಿ.ಎಸ್. ಶಿವರುದ್ರಪ್ಪ ಪ್ರಶಸ್ತಿಗಳು ಆರಂಭವಾಗಿದ್ದವು. ದಿ. ೨೭.೯.೧೯೯೮ ರಂದು ಡಾ॥ ಹಾ.ಮಾ. ನಾಯಕರನ್ನು, ದಿ. ೧೯.೭.೧೯೯೯ ರಿಂದ ಡಾ॥ ಯು.ಆರ್. ಅನಂತಮೂರ್ತಿಯವರನ್ನು, ದಿ. ೨೩.೧೧.೨೦೦೧ರಂದು ಶ್ರೀ ಕೆ.ವಿ. ಸುಬ್ಬಣ್ಣನವರನ್ನು ಕರ್ನಾಟಕ ಸಂಘದ ಗೌರವ ಸದಸ್ಯರನ್ನಾಗಿ ಆಯ್ಕೆ ಮಾಡಿ, ಅವರ ಆಶಯದಂತೆ ಅವರ ಹೆಸರಿನಲ್ಲಿ ಕ್ರಮವಾಗಿ ಅಂಕಣ ಬರಹ ಸಂಕಲನ, ಸಣ್ಣ ಕಥಾಸಂಕಲನ ಮತ್ತು ನಾಟಕ ಕೃತಿಗಳಿಗೆ ಪ್ರಶಸ್ತಿ ಮತ್ತು ರೂ. ಎರಡು ಸಾವಿರ ನಗದು ಪುರಸ್ಕಾರವನ್ನು ನೀಡಲು ಆರಂಭಿಸಲಾಯಿತು. ಒಟ್ಟು ೯ ಸಾಹಿತ್ಯ ಪ್ರಶಸ್ತಿಗಳನ್ನು ಮತ್ತು ಒಂದು ಡಾ॥ ಶಂ.ಬಾ. ಜೋಶಿ ಪ್ರಶಸ್ತಿ ನಗದು ಪುರಸ್ಕಾರಗಳನ್ನು ಕನ್ನಡ ಭಾಷೆ, ಸಂಶೋಧನೆ, ಗಮನಾರ್ಹ ಸಾಧನೆಗೈದ ಹಿರಿಯರಿಗೆ ನೀಡುತ್ತಾ ಬಂದಿದೆ. ಈಗ ಕರ್ನಾಟಕ ಸಂಘದ ಪ್ರಶಸ್ತಿಗಳಿಗೆ ರಾಜ್ಯ ಮತ್ತು ರಾಷ್ಟ್ರ ಮನ್ನಣೆಯ ಸ್ಥಾನ ದೊರಕಿರುವುದು ಸಂತೋಷದ ಸಂಗತಿ. ೧೯೯೧ರಿಂದ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದ ಶ್ರೀ ಕೆ.ಜಿ. ಸುಬ್ರಹ್ಮಣ್ಯ ಅವರ ಕನಸು ನನಸಾಗಿಸುವುದರಲ್ಲಿ ಕಾರ್ಯಕಾರಿ ಸಮಿತಿಯು ಶ್ರಮಿಸುತ್ತಿದೆ.

ಪ್ರಶಸ್ತಿಗಳು ಸ್ಥಾಪನೆಯಾದಾಗಿನಿಂದ ಪುರಸ್ಕೃತರ ಪಟ್ಟಿಯನ್ನು ಪ್ರಕಟಿಸಲಾಗಿದೆ. ಮೊದಲು ರೂ. ೨೦೦೦/- ನಗದು ಪುರಸ್ಕಾರವಿದ್ದ ಪ್ರಶಸ್ತಿಗಳ ಮೊತ್ತವನ್ನು ೨೦೦೩ರಲ್ಲಿ ತಲಾ ರೂ. ೩೦೦೦/- ಕ್ಕೂ, ೨೦೦೪ರಲ್ಲಿ ತಲಾ ರೂ. ೪೦೦೦/- ಕ್ಕೂ ಹೆಚ್ಚಿಸಲಾಗಿದೆ. ಅಮೃತ ವರ್ಷದ ಕೊಡುಗೆಯಾಗಿ ಪ್ರಶಸ್ತಿಯ ಮೊಬಲಗನ್ನು ೨೦೦೫ನೇ ಸಾಲಿನಿಂದ ರೂ. ೫೦೦೦/- ನೀಡಲು ಕಾರ್ಯಕಾರಿ ಸಮಿತಿ ತೀರ್ಮಾನಿಸಿರುತ್ತದೆ.

ಕರ್ನಾಟಕ ಸಂಘವು ೧೯೯೨ರಲ್ಲಿ ಸ್ಥಾಪಿಸಿದ ಶ್ರೀ ಕುವೆಂಪು ಪ್ರಶಸ್ತಿ ಮತ್ತು ನಗದು ಪುರಸ್ಕಾರ ಪಡೆದ ಕುವೆಂಪು ವಿ.ವಿ.ಯ ವಿದ್ಯಾರ್ಥಿಗಳು

ಎಂ.ಎ. ಮೊದಲ ರ್‍ಯಾಂಕ್

೧೯೯೨	೨೨-೧೦-೧೯೯೨	ಶ್ರೀ ಬಿ.ಎಂ. ಪುಟ್ಟಯ್ಯ
೧೯೯೩	೨೧-೧೧-೧೯೯೩	ಶ್ರೀ ಟಿ. ರವಿಕುಮಾರ
೧೯೯೪	೧೩-೧೧-೧೯೯೪	ಶ್ರೀ ಕೆ.ಜಿ. ಲಿಂಗರಾಜ
೧೯೯೫	೧೬-೧೧-೧೯೯೫	ಕು. ಭಾರತಿ
೧೯೯೬	೨೪-೧೧-೧೯೯೬	ಕು. ಅಶ್ವಿನಿ ಎ.ಎಂ.
೧೯೯೭	೨೨-೧೧-೧೯೯೭	ಕು. ಅನಿತಾ ಹೆಚ್.ಜಿ.
೧೯೯೮	೨೭-೧೧-೧೯೯೮	ಶ್ರೀ ತೇಜೋಮೂರ್ತಿ ಆರ್.
೧೯೯೯	೧೭-೧೨-೧೯೯೯	ಕು. ಸೀಮಾ ಎಸ್.ಆರ್.
೨೦೦೦	೨೭-೦೧-೨೦೦೧	ಶ್ರೀ ಬಸವರಾಜ ಜೆ.ಡಿ.
೨೦೦೧	೧೬-೧೨-೨೦೦೧	ಶ್ರೀ ದಿನೇಶಕುಮಾರ್ ಬಿ.ಪಿ.
೨೦೦೨	೦೪-೦೨-೨೦೦೩	ಶ್ರೀ ಪರಶುರಾಮ ಕೆ.
೨೦೦೩	೧೬-೧೨-೨೦೦೩	ಶ್ರೀ ಪರಮೇಶ್ವರ ಕೆ.ಎನ್.
೨೦೦೪	೨೪-೦೧-೨೦೦೫	ಕು. ಸವಿತ ಜಿ.

ಕರ್ನಾಟಕ ಸಂಘವು ೧೯೯೨ರಲ್ಲಿ ಸ್ಥಾಪಿಸಿದ ಶ್ರೀ ಎಸ್.ವಿ. ಪರಮೇಶ್ವರಭಟ್ಟ ನಗದು ಪುರಸ್ಕಾರ ಪಡೆದ ಕುವೆಂಪು ವಿ.ವಿ.ಯ ವಿದ್ಯಾರ್ಥಿಗಳು

ದ್ವಿತೀಯ ಎಂ.ಎ.

	ಮೊದಲ ಸ್ಥಾನ	ಎರಡನೇ ಸ್ಥಾನ
೧೯೯೨	ಶ್ರೀ ರವಿಕುಮಾರ ಟಿ.	ಕು. ಲತಾ ಜಿ.ಎಸ್.
೧೯೯೩	ಶ್ರೀ ಕೆ.ಜಿ. ಲಿಂಗರಾಜ	ಕು. ಕೆ.ಸಿ. ರೂಪರೇಖಾ
೧೯೯೪	ಕು. ಸುಮನಾ	ಕು. ಭಾರತಿ
೧೯೯೫	ಕು. ಅಶ್ವಿನಿ ಎ.ಎಂ.	ಶ್ರೀ ರುದ್ರೇಶ್ ಎಸ್.ಎನ್.
೧೯೯೬	ಕು. ಅನಿತ ಹೆಚ್.ಜಿ.	ಶ್ರೀ ಜಗದೀಶ್ ಟಿ.
೧೯೯೭	ಶ್ರೀ ತೇಜೋಮೂರ್ತಿ. ಆರ್.	ಶ್ರೀ ಮಲ್ಲಿಕಾರ್ಜುನ ಎಂ.ವಿ.
೧೯೯೮	ಕು. ಸೀಮಾ ಎಸ್.ಆರ್.	ಶ್ರೀ ಮುತ್ತಯ್ಯ ಎಸ್.ಎಂ.
೧೯೯೯	ಶ್ರೀ ಬಸವರಾಜ ಜೆ.ಡಿ.	ಕು. ವಸುಧ. ಆರ್.
೨೦೦೦	ಶ್ರೀ ದಿನೇಶಕುಮಾರ ಬಿ.ಪಿ.	ಶ್ರೀ ರವಿನಾಯಕ. ಎಂ.

೨೦೦೧	ಶ್ರೀ ಪರಶುರಾಮ. ಕೆ.	ಶ್ರೀ ನಾಗೇಶ್ ವಿ.ಎಸ್.
೨೦೦೨	ಕು. ಶ್ವೇತಾ ಹೆಚ್.ಬಿ.	ಶ್ರೀ ನೀಲಕಂಠಪ್ಪ. ಜಿ.
೨೦೦೩	ಕು. ಸವಿತ ಜಿ.	ಶ್ರೀ ಪ್ರವೀಣಚಂದ್ರ ಎನ್.
೨೦೦೪	ಕು. ಮಾಲಿನಿ ಎನ್.	ಕು. ಎಸ್.ಆರ್. ವೀಣಾದೇವಿ

ಪ್ರಥಮ ಎಂ.ಎ.

	ಮೊದಲ ಸ್ಥಾನ	ಎರಡನೇ ಸ್ಥಾನ
೧೯೯೨	ಕು. ಚಂದ್ರಿಕಾ. ಪಿ.	ಕು. ವಿಜಯಮಣಿ. ಜಿ.
೧೯೯೩	ಕು. ರಾಜೇಶ್ವರಿ. ಎಸ್.	ಶ್ರೀ ದತ್ತಾತ್ರೇಯ ವಿ. ಯಾಜಿ
೧೯೯೪	ಶ್ರೀ ಶಿವಕುಮಾರಸ್ವಾಮಿ	ಶ್ರೀ ಶಿವಲಿಂಗಪ್ಪ ಎಂ.ಬಿ.
೧೯೯೫	ಶ್ರೀ ಪ್ರಕಾಶ್ ಸಿದ್ಧಪ್ಪ ಬಣಗಾರ	ಸುಭಾಶ್ ತಳವಾರ
೧೯೯೬	ಶ್ರೀ ಎಸ್.ಆರ್. ಮಲ್ಲಿಕಾರ್ಜುನಯ್ಯ	ಕು. ಶಾಂತಕುಮಾರಿ ಎಸ್.
೧೯೯೭	ಕು. ಸೀಮಾ ಎಸ್.ಆರ್.	ಶ್ರೀ ಪರಮೇಶ್ವರ ಎಸ್.ಜಿ.
೧೯೯೮	ಕು. ವಸುಧ ಆರ್.	ಕು. ಅಶ್ವಿನಿ. ಬಿ.ಪಿ.
೧೯೯೯	ಶ್ರೀ ರವಿ	ಶ್ರೀ ರವಿನಾಯಕ. ಎಂ.
೨೦೦೦	ಕು. ಪ್ರೀತಿ. ಎಸ್.ಎನ್.	ಶ್ರೀ ಪರಶುರಾಮ. ಕೆ.
೨೦೦೧	ಕು. ದೀಪ್ತಿ ಡಿ.ಬಿ.	ಶಿವಾನಂದ ಹೆಚ್.ಜೆ.
೨೦೦೨	ಶ್ರೀ ಪರಮೇಶ್ವರ ಕೆ.ಎಸ್.	ಕು. ಪ್ರೇಮಕುಮಾರಿ. ಪಿ.
೨೦೦೩	ಕು. ಬಿ. ಶ್ವೇತಾ	ಶ್ರೀ ದಾಸರ ಮಂಜಪ್ಪ
೨೦೦೪	ಕು. ನಯನ. ಕೆ.ಜಿ.	ಕು. ರಾಜೇಶ್ವರಿ. ಜಿ.ವಿ.

ಕರ್ನಾಟಕ ಸಂಘವು ಇದುವರೆಗೆ ನೀಡಿರುವ ಗೌರವ ಸದಸ್ಯರ ಹೆಸರಿನ ಸಾಹಿತ್ಯ ಪ್ರಶಸ್ತಿಗಳ ಪಟ್ಟಿ

ವರ್ಷ	ಶ್ರೀಮತಿ ಎಂ.ಕೆ. ಇಂದಿರಾ ಪ್ರಶಸ್ತಿ (ಮಹಿಳಾ ಕಾದಂಬರಿ)	
೧೯೯೪	ಶ್ರೀಮತಿ ವೈದೇಹಿ	ಕೃತಿ: ಅಸ್ಪೃಶ್ಯರು
೧೯೯೬	ಶ್ರೀಮತಿ ಸುನಂದ ಬೆಳಗಾಂವಕರ	ಕೃತಿ: ಝುವಾದಿ
೧೯೯೭	ಶ್ರೀಮತಿ ಸವಿತಾ ನಾಗಭೂಷಣ	ಕೃತಿ: ಸ್ತ್ರೀ ಲೋಕ
೧೯೯೯	ಶ್ರೀಮತಿ ಶಾಂತಾದೇವಿ ಮಾಳವಾಡ	ಕೃತಿ: ಶೂರ ರಾಣಿ ಕೆಳದಿ ಚೆನ್ನಮ್ಮಾಜಿ
೨೦೦೦	ಶ್ರೀಮತಿ ಕುಸುಮಾ ಅಬ್ಬೂರು	ಕೃತಿ: ಜಗುಲಿ
೨೦೦೧	ಶ್ರೀಮತಿ ಲೀಲಾ ಮಣ್ಣಾಲ	ಕೃತಿ: ಕೆಂಪು ಚಿನ್ನ
೨೦೦೨	ಶ್ರೀಮತಿ ಜಾನಕಿ ಸುಂದರೇಶ್	ಕೃತಿ: ಗೌರಿ
೨೦೦೩	ಶ್ರೀಮತಿ ಗಂಗಾ ಬಿ. ರಾಜಪುರೋಹಿತ	ಕೃತಿ: ಪ್ರಾಜಕ್ತಾ
೨೦೦೪	ಶ್ರೀಮತಿ ಸುಧಾಮೂರ್ತಿ	ಕೃತಿ: ಪರಿಧಿ

ವರ್ಷ	ಶ್ರೀ ಪಿ. ಲಂಕೇಶ್ ಪ್ರಶಸ್ತಿ (ಮುಸ್ಲಿಂ ಲೇಖಕರು)	
೧೯೯೬	ಶ್ರೀ ಪಿ.ಜು. ಪಾಶ	
೧೯೯೮	ಶ್ರೀ ಅಬ್ದುಲ್ ರಶೀದ್	
೧೯೯೯	ಶ್ರೀಮತಿ ಡಿ.ಪಿ. ರಜಿಯಾ	
೨೦೦೦	ಶ್ರೀ ಅದೀಬ್ ಅಖ್ತರ್	ಕೃತಿ: ಬೃಂದಾವನ ಮತ್ತು ಇತರ ಕಥೆಗಳು
೨೦೦೧	ಶ್ರೀ ಮಹಮದ್ ಕುಳಾಯಿ	ಕೃತಿ: ಕದನ ಕುತೂಹಲ
೨೦೦೨	ಶ್ರೀ ಅಬ್ಬಾಸ್ ಮೇಲಿನಮನಿ	ಕೃತಿ: ಹುಡುಕಾಟ
೨೦೦೩	ಡಾ॥ ಸಯದ್ ಝುಮೀರುಲ್ಲಾ ಷರೀಫ್	ಕೃತಿ: ಷಾಮಿಯಾನ
೨೦೦೪	ಪ್ರೊ॥ ಹಸನಬಿ ಬೀಳಗಿ	ಕೃತಿ: ಅರಿವಿಂಗೆ ಬೇರೊಂದೊಡಲುಂಟೆ

ವರ್ಷ	ಡಾ॥ ಜಿ.ಎಸ್. ಶಿವರುದ್ರಪ್ಪ ಪ್ರಶಸ್ತಿ (ಕವನ ಸಂಕಲನ)	
೧೯೯೯	ಶ್ರೀ ಸರಜೂ ಕಾಟಕರ್	ಕೃತಿ: ವಾಜಪೇಯಿ ಕವಿತೆಗಳು
೨೦೦೦	ಶ್ರೀಮತಿ ರೂಪಾ ಹಾಸನ	ಕೃತಿ: ಒಂದಿಷ್ಟು ಹಸಿ ಮಣ್ಣು
೨೦೦೧	ಡಾ॥ ಬಸವರಾಜ ಸಬರದ	ಕೃತಿ: ಕೆಂಡ ಸಂಪಿಗೆ
೨೦೦೨	ಶ್ರೀ ಡಿ.ಎಸ್. ರಾಮಸ್ವಾಮಿ	ಕೃತಿ: ಮರೆತ ಮಾತು
೨೦೦೩	ಡಾ॥ ಎಸ್.ಜಿ. ಸಿದ್ಧರಾಮಯ್ಯ	ಕೃತಿ: ಕರೆ ಬಳಗ
೨೦೦೪	ಶ್ರೀ ಚಂದ್ರಶೇಖರ ತಾಳ್ಯ	ಕೃತಿ: ಎಲ್ಲಿ ನವಿಲು ಹೇಳಿರೇ

ವರ್ಷ	ಡಾ॥ ಹಾ.ಮಾ. ನಾಯಕ್ ಪ್ರಶಸ್ತಿ (ಅಂಕಣ ಬರಹ)	
೧೯೯೯	ಶ್ರೀ ಹೆಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ (ಎಚ್ಚೆಸ್ಕೆ)	
೨೦೦೦	ಶ್ರೀಮತಿ ಅನಿತಾ ಹುಳಿಯಾರ್	ಕೃತಿ: ನಿಮ್ಮ ಕಾಲಂ
೨೦೦೧	ಡಾ॥ ಲಿಂಗದೇವರು ಹಳೆಮನೆ	ಕೃತಿ: ಪ್ರಸ್ತುತ
೨೦೦೨	ಶ್ರೀ ಸತ್ಯಮೂರ್ತಿ ಆನಂದೂರು	ಕೃತಿ: ರಗಳೆ
೨೦೦೩	ಶ್ರೀ ನಾಗತಿಹಳ್ಳಿ ಚಂದ್ರಶೇಖರ	ಕೃತಿ: ನನ್ನ ಪ್ರೀತಿಯ ಹುಡುಗಿಗೆ
೨೦೦೪	ಶ್ರೀ ಶ್ರೀ ಚಂದ್ರಶೇಖರ ಆಲೂರು	ಕೃತಿ: ಒಂದು ಸುಂದರ ಮನಸ್ಸು ಮತ್ತು ಇತರ ಬರಹಗಳು

ವರ್ಷ	ಡಾ॥ ಯು.ಆರ್. ಅನಂತಮೂರ್ತಿ ಪ್ರಶಸ್ತಿ (ಸಣ್ಣ ಕಥಾಸಂಕಲನ)	
೨೦೦೦	ಶ್ರೀ ಕೃಷ್ಣ ಮಾಸಡಿ	ಕೃತಿ: ಭೂತ
೨೦೦೧	ಡಾ॥ ಮೊಗಳ್ಳಿ ಗಣೇಶ್	ಕೃತಿ: ಭೂಮಿ
೨೦೦೨	ಡಾ॥ ಕೃಷ್ಣಮೂರ್ತಿ ಹನೂರ	ಕೃತಿ: ಕತ್ತಲಲ್ಲಿ ಕಂಡ ಮುಖ



ನ್ಯಾಯಮೂರ್ತಿ ಶ್ರೀ ಇ.ಎಸ್. ವೆಂಕಟರಾಮಯ್ಯ ಶ್ರೀ ಶಿವರಾಮ ಕಾರಂತ,
ಶ್ರೀ ಗೊ.ರು. ಚನ್ನಬಸಪ್ಪ.



ಶ್ರೀ ಯಶವಂತ ಚಿತ್ತಾಲ, ಶ್ರೀ ವ್ಯಾಸರಾಯ ಬಲ್ಲಾಳರಿಗೆ ಸನ್ಮಾನ
ಶ್ರೀ ಕೆ.ಜಿ. ಸುಬ್ರಹ್ಮಣ್ಯ ಅಧ್ಯಕ್ಷರು.



ಪ್ರೊ॥ ಎಸ್. ಪಂಚಾಕ್ಷರಿ, ಶ್ರೀ ಟಿ. ವೆಂಕಟರಾಮಾಶಾಸ್ತ್ರಿ
ಪ್ರೊ॥ ಹೊಸಬಾಳೆ ಸೀತಾರಾಮರಾವ್, ಶ್ರೀ ನಿಟ್ಟೂರು ಶ್ರೀನಿವಾಸರಾವ್,
ಶ್ರೀ ಎಸ್. ನರಸಿಂಹಮೂರ್ತಿ.



ಶ್ರೀ ಎಸ್. ನರಸಿಂಹಮೂರ್ತಿಯವರಿಗೆ ಶ್ರೀ ಕೆ.ಜಿ. ಸುಬ್ರಹ್ಮಣ್ಯರವರಿಂದ ಸನ್ಮಾನ
ಪ್ರೊ॥ ಜಿ.ಎಸ್. ಸಿದ್ಧಲಿಂಗಯ್ಯ, ಪ್ರೊ॥ ಗಜೇಂದ್ರಗಡ, ಕುಲಪತಿ.



ಕೆ.ವಿ. ಸುಬ್ಬಣ್ಣನವರಿಗೆ ಗೌರವ ಸದಸ್ಯತ್ವ ಪ್ರದಾನ.



ಡಾ॥ ತೀ.ನಂ. ಶಂಕರನಾರಾಯಣ, ನಂದಳಿಕೆ ಬಾಲಚಂದ್ರ,
ಶ್ರೀ ಜಯದೇವಪ್ಪ ಜೈನಕೇರಿ, ಪ್ರೊ॥ ಎಸ್.ಪಿ. ಹಿರೇಮಠ,
ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಪ್ರೊ॥ ಪಾಂಡುರಂಗ ಉಡುಪ,
ಡಾ॥ ಬಿ.ಎಸ್. ಮಹದೇವಯ್ಯ, ಪ್ರೊ॥ ವಿವೇಕ ರೈ.



ಪ್ರಶಸ್ತಿ ವಿಜೇತರೊಂದಿಗೆ-ಶ್ರೀ ಕೆ.ಜಿ. ಸುಬ್ರಹ್ಮಣ್ಯ, ಪ್ರೊ।। ಪಾಂಡುರಂಗ ಉಡುಪ, ಡಾ।। ಗಿರಡ್ಡಿ ಗೋವಿಂದರಾಜ, ಶ್ರೀ ಜಯದೇವಪ್ಪ ಜೈನಕೇರಿ.



ಶ್ರೀಮತಿ ಗಂಗೂಬಾಯಿ ಹಾನಗಲ್, ಶ್ರೀಮತಿ ಕೃಷ್ಣ ಹಾನಗಲ್.



ಶಂ.ಬಾ. ಜೋಷಿ ಪ್ರಶಸ್ತಿ ಪ್ರದಾನ-೨೦೦೫
ಪ್ರೊ|| ಹಂ.ಪ. ನಾಗರಾಜಯ್ಯ, ಶ್ರೀಮತಿ ಕಮಲಾ ಹಂಪನಾ.



ಡಾ|| ವಿಜಯಾದೇವಿ, ಡಾ|| ವಿಜಯಕುಮಾರ ಮಹಾನುಭಾವಿ,
ಪ್ರೊ|| ಪಾಂಡುರಂಗ ಉಡುಪ, ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ.



ಶ್ರೀ ಜಯದೇವಪ್ಪ ಜೈನಕೇರಿ, ಡಾ|| ಸಿದ್ಧಲಿಂಗ ಪಟ್ಟಣಶೆಟ್ಟಿ,
ಶ್ರೀ ಅ. ಸುಂದರ, ಪ್ರೊ|| ಪಾಂಡುರಂಗ ಉಡುಪ,
ಪ್ರೊ|| ಬಿ. ರಾಜಶೇಖರಪ್ಪ, ಶ್ರೀಯುತ ಡಾ|| ಎನ್. ಪ್ರಸಾದಸ್ವಾಮಿ.



ಶ್ರೀಮತಿ ವಿಜಯ ಶ್ರೀಧರ, ಶ್ರೀ ಜಯದೇವಪ್ಪ ಜೈನಕೇರಿ,
ಶ್ರೀ ಜಿ.ವಿ. ಅಯ್ಯರ್, ಶ್ರೀ ಎ.ಎಸ್. ವೇಣುಗೋಪಾಲರಾವ್,
ಶ್ರೀ ಕೆ.ಜಿ. ಸುಬ್ರಹ್ಮಣ್ಯ.



ಡಾ|| ಚಿದಾನಂದಗೌಡ ಕುಲಪತಿಗಳು, ಪ್ರೊ|| ಪಾಂಡುರಂಗ ಉಡುಪ,
ಶ್ರೀ ಜಯದೇವಪ್ಪ ಜೈನಕೇರಿ.



ಶ್ರೀ ಜಯದೇವಪ್ಪ ಜೈನಕೇರಿ, ಪ್ರೊ|| ಪಂಚಾಕ್ಷರಿ
ಪ್ರೊ|| ಕಿ.ರಂ. ನಾಗರಾಜ್, ಪ್ರೊ|| ಪಾಂಡುರಂಗ ಉಡುಪ,
ಶ್ರೀ ಕೆ.ಎಚ್. ಶ್ರೀನಿವಾಸ್, ಶ್ರೀಮತಿ ರಮ



ಶ್ರೀ ಜಿ.ಎಸ್. ದೀಕ್ಷಿತ್‌ರವರಿಗೆ ಶಂ.ಬಾ. ಜೋಷಿ ಪ್ರಶಸ್ತಿ ಪ್ರದಾನ.



೨೦೦೩ರ ಪುಸ್ತಕ ಸಮ್ಮೇಳನದಲ್ಲಿ ಚಿಗಟೇರಿಯ ಮುದೇನೂರು ಸಂಗಣ್ಣ.



ಪುಸ್ತಕ ಪ್ರದರ್ಶನ ಮತ್ತು ಮಾರಾಟ ಸಂದರ್ಭದಲ್ಲಿ
ಬೆಕ್ಕಿನಕಲ್ಮಠದ ಸ್ವಾಮೀಜಿಗಳು.



ಶ್ರೀ ಎಸ್.ಬಿ. ಮುದ್ದಪ್ಪ, ಶ್ರೀ ಎಂ.ಪಿ. ಪ್ರಕಾಶ್, ಶ್ರೀ ಕೆ.ಜಿ. ಸುಬ್ರಹ್ಮಣ್ಯ.



ಶ್ರೀ ಬಿ.ಎಂ. ಇದಿನಬ್ಬ ಅವರಿಗೆ ಸನ್ಮಾನ.



ಡಾ॥ ಹೆಚ್.ಎಲ್. ನಾಗೇಗೌಡರು, ಶ್ರೀ ರಾಮಾ ಜೋಯಿಸರು,
ಶ್ರೀ ವೈ.ಎಸ್. ಪುಟ್ಟಣ್ಣ.



ಡಾ|| ಬಿ.ಸಿ. ರಾಮಚಂದ್ರ ಶರ್ಮರವರಿಗೆ ಸನ್ಮಾನ
ಶ್ರೀ ಕೆ.ಜಿ. ಸುಬ್ರಹ್ಮಣ್ಯ, ಡಾ|| ಸುಮತೀಂದ್ರ ನಾಡಿಗ್,
ಪ್ರೊ|| ಟಿ.ಆರ್. ಪಾಂಡುರಂಗ.



ಶ್ರೀ ಎಸ್.ವಿ. ಪರಮೇಶ್ವರ ಭಟ್ಟರಿಗೆ ಅವರ ಮನೆಯಲ್ಲಿ ಸನ್ಮಾನ.



ಶ್ರೀ ಪಿ. ಲಂಕೇಶ್, ಶ್ರೀ ತೇಜಸ್ವಿ, ಶ್ರೀ ಕೆ. ರಾಮದಾಸ್.



ಶ್ರೀ ಟಿ. ವೆಂಕಟರಾಮ ಶಾಸ್ತ್ರಿ ಡಾ॥ ಯು.ಆರ್. ಅನಂತಮೂರ್ತಿ,
ಶ್ರೀ ಶಾಂತಿನಾಥ ದೇಸಾಯಿ, ಡಾ॥ ಗಜೇಂದ್ರಗಡ, ಕುಲಪತಿ.



ಶ್ರೀ ವಿ. ಸೀತಾರಾಮಯ್ಯನವರಿಗೆ ಸನ್ಮಾನ.



ಶ್ರೀ ಎ.ಎನ್. ಮೂರ್ತಿರಾಯರಿಗೆ ಸನ್ಮಾನ.



ಶ್ರೀ ಎಸ್.ವಿ. ಕೃಷ್ಣಮೂರ್ತಿ, ಶ್ರೀ ಹಸೂಡಿ ವೆಂಕಟ ಶಾಸ್ತ್ರಿಗಳು,
ಶ್ರೀ ದ.ರಾ. ಬೇಂದ್ರೆ, ಶ್ರೀ ಎಸ್. ನರಸಿಂಹಮೂರ್ತಿ.



ಶ್ರೀ ಸುರೇಶ್ ಹೆಬ್ಳೀಕರ್, ಶ್ರೀ ಕೀರ್ತಿನಾಥ ಕುರ್ತಕೋಟಿ,
ಶ್ರೀ ಎಸ್. ನರಸಿಂಹಮೂರ್ತಿ, ಪದ್ಮಶ್ರೀ ಜಿ.ಬಿ. ಜೋಷಿ,
ಪ್ರೊ|| ಶಾಂತಿನಾಥ ದೇಸಾಯಿ



ಡಾ. ದ.ರಾ. ಬೇಂದ್ರೆ ಅವರಿಗೆ ಮಾನಪತ್ರ ಅರ್ಪಣೆ
ಓದುತ್ತಿರುವವರು- ಶ್ರೀ ಎಸ್.ಎನ್. ಶಿವರಾಮಶಾಸ್ತ್ರಿ, ಕಾರ್ಯದರ್ಶಿ,
ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ದತ್ತಾತ್ರೇಯ ಶಾಸ್ತ್ರಿಗಳು,
ಶ್ರೀ ನಿಟ್ಟೂರು ಶ್ರೀನಿವಾಸರಾಯರು, ಡಾ. ದ.ರಾ. ಬೇಂದ್ರೆ,
ಶ್ರೀ ಬದರಿ ನಾರಾಯಣ ಅಯ್ಯಂಗಾರ್.



ಶ್ರೀ ಎಸ್. ನರಸಿಂಹಮೂರ್ತಿ, ಡಾ. ಲಕ್ಕಪ್ಪಗೌಡರು, ಶ್ರೀ ಕೆ.ಆರ್. ಲಿಂಗಪ್ಪ,
ಡಾ|| ಹೆಚ್.ಎಲ್. ನಾಗೇಗೌಡರು



ಶ್ರೀ ಜಾರ್ಜ್ ಫರ್ನಾಂಡಿಸ್, ಪ್ರೊ॥ ಗೋಪಾಲಕೃಷ್ಣ ಅಡಿಗ,
ಡಾ॥ ಯು.ಆರ್. ಅನಂತಮೂರ್ತಿ.



ಜೋಳದರಾಶಿ ದೊಡ್ಡನಗೌಡರ, ಎಸ್. ನರಸಿಂಹಮೂರ್ತಿ, ಶಿವಮೊಗ್ಗ ಸುಬ್ಬಣ್ಣ.

೨೦೦೩	ಶ್ರೀ ಶ್ರೀಧರ ಬಳಗಾರ	ಕೃತಿ: ಇಳೆ ಎಂಬ ಕನಸು
೨೦೦೪	ಶ್ರೀ ಶ್ರೀ ವಸುಧೇಂದ್ರ	ಕೃತಿ: ಯುಗಾದಿ
ವರ್ಷ	**ಶ್ರೀ ಕೆ.ವಿ. ಸುಬ್ಬಣ್ಣ ಪ್ರಶಸ್ತಿ (ನಾಟಕ)**	
೨೦೦೧	ಡಾ|| ಸಿದ್ಧಲಿಂಗ ಪಟ್ಟಣಶೆಟ್ಟಿ	ಕೃತಿ: ಕೋರ್ಟ್ ಮಾರ್ಷಲ್
೨೦೦೨	ಶ್ರೀ ಚಿ. ಶ್ರೀನಿವಾಸ ರಾಜು	ಕೃತಿ: ಎರಡು ಏಕಾಂಕಗಳು
೨೦೦೩	ಶ್ರೀ ಬಿ. ಚಂದ್ರೇಗೌಡ	ಕೃತಿ: ಬಯಲು ಸೀಮೆಯ ಕಟ್ಟೆ ಪುರಾಣ
೨೦೦೪	ಡಾ|| ಲಿಂಗದೇವರು ಹಳೆಮನೆ	ಕೃತಿ: ತಸ್ಕರ

ಕರ್ನಾಟಕ ಸಂಘವು ಇದುವರೆಗೆ ಕೊಟ್ಟಿರುವ ಡಾ|| ಶಂ.ಬಾ. ಜೋಶಿ ಪ್ರಶಸ್ತಿಗಳ ವಿವರ

	ವರ್ಷ	ಪ್ರಶಸ್ತಿ ಪುರಸ್ಕೃತರು	ಪ್ರಶಸ್ತಿ ಪ್ರಧಾನ ದಿನಾಂಕ
೧.	೧೯೯೧	ಡಾ|| ಮಲ್ಲೇಪುರಂ ಜಿ. ವೆಂಕಟೇಶ	೧೮-೧೦-೧೯೯೧
೨.	೧೯೯೩	ಶ್ರೀ ಶ್ರೀನಿವಾಸ ಮೂರ್ತಿ	೨೯-೦೯-೧೯೯೩
೩.	೧೯೯೪	ಶ್ರೀ ಟಿ.ಎಸ್. ಸತ್ಯನಾಥ್	೨೪-೦೯-೧೯೯೫
೪.	೧೯೯೫	ಡಾ|| ಬಸವರಾಜ ಕಲ್ಗುಡಿ	೦೪-೦೧-೧೯೯೬
೫.	೧೯೯೬	ಡಾ|| ಅ. ಸುಂದರ	೦೧-೧೨-೧೯೯೭
೬.	೧೯೯೭	ಪ್ರೊ. ಜಿ. ವೆಂಕಟಸುಬ್ಬಯ್ಯ	೦೬-೦೨-೧೯೯೯
೭.	೧೯೯೮	ಡಾ|| ಎ.ಎನ್. ಮೂರ್ತಿರಾವ್	೨೮-೧೧-೧೯೯೯
೮.	೨೦೦೦	ಡಾ|| ಜಿ.ಎಸ್. ದೀಕ್ಷಿತ್	೦೫-೦೫-೨೦೦೧
೯.	೨೦೦೧	ಡಾ|| ಎಂ. ಚಿದಾನಂದಮೂರ್ತಿ	೧೬-೧೨-೨೦೦೧
೧೦.	೨೦೦೨	ಡಾ|| ಟಿ.ವಿ. ವೆಂಕಟಾಚಲ ಶಾಸ್ತ್ರಿ	೦೪-೦೨-೨೦೦೩
೧೧.	೨೦೦೩	ಡಾ|| ಎನ್. ಬಸವಾರಾಧ್ಯ	೨೪-೧೦-೨೦೦೩
೧೨.	೨೦೦೪	ಡಾ|| ಸಂಗಮೇಶ ಸವದತ್ತಿಮಠ	೦೮-೧೧-೨೦೦೪
೧೩.	೨೦೦೫	ಡಾ|| ಹಂ.ಪ. ನಾಗರಾಜಯ್ಯ	೩೧-೦೮-೨೦೦೫

ಮಕ್ಕಳ ಸಾಹಿತ್ಯ ಪ್ರಶಸ್ತಿಗಳು

೧.	೨೦೦೩	ಶ್ರೀ ಕಂಚ್ಯಾಣಿ ಶರಣಪ್ಪ, ವಿಜಾಪುರ	೨೧-೦೮-೨೦೦೪
೨.	೨೦೦೪	ಶ್ರೀ ಪಳಕಳ ಸೀತಾರಾಮ ಭಟ್ಟ	೨೩-೦೭-೨೦೦೫

೨೦೦೦ನೇ ಇಸವಿಯಿಂದ ಕರ್ನಾಟಕ ಸಂಘದ ಪ್ರಶಸ್ತಿಗಳನ್ನು ಆಯ್ಕೆ ಮಾಡಲು ಲೇಖಕರು, ಪ್ರಕಾಶಕರಿಂದ ಪ್ರತಿ ವರ್ಷ ಪುಸ್ತಗಳನ್ನು ಆಹ್ವಾನಿಸಿ, ತೀರ್ಪುಗಾರರಿಗೆ ಮೌಲ್ಯಮಾಪನಕ್ಕೆ ನೀಡಿ, ಅವರ ತೀರ್ಪಿನಂತೆ ಪ್ರಶಸ್ತಿ ಪುರಸ್ಕಾರ ನೀಡುತ್ತಾ ಬಂದಿರುತ್ತದೆ. ನಿಷ್ಪಕ್ಷಪಾತವಾಗಿ ನಡೆಯುತ್ತಿರುವ ಪ್ರಶಸ್ತಿ ನಿರ್ಧಾರದ ರೀತಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿ ಕರ್ನಾಟಕ ಸಂಘಕ್ಕೆ ಕೀರ್ತಿ ತಂದಿದೆ. ಪ್ರತಿ ವರ್ಷದಿಂದ ವರ್ಷಕ್ಕೆ ಪ್ರಶಸ್ತಿ ಆಯ್ಕೆಗೆ ಬಂದಿರುವ ಪುಸ್ತಕಗಳ ಪಟ್ಟಿ ಕೆಳಗಿನಂತಿದೆ.

(೧) ೨೦೦೦ - ೮೫ ಕೃತಿಗಳು

(೨) ೨೦೦೧ - ೧೧೫ ಕೃತಿಗಳು

(೩) ೨೦೦೨ - ೧೩೫ ಕೃತಿಗಳು

(೪) ೨೦೦೩ - ೧೫೫ ಕೃತಿಗಳು

(೫) ೨೦೦೪ - ೧೮೧ ಕೃತಿಗಳು

ಪ್ರಶಸ್ತಿಗಳನ್ನು ನಿರ್ಧರಿಸುವುದರಲ್ಲಿ ತೀರ್ಪುಗಾರರು ನೀಡುತ್ತಿರುವ ಸಹಕಾರವನ್ನು ಕಾರ್ಯಕಾರಿ ಸಮಿತಿಯು ಕೃತಜ್ಞತೆಯಿಂದ ನೆನೆಯುತ್ತದೆ. ಪ್ರಶಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಪಡೆಯದ ಎಲ್ಲ ಲೇಖಕರಿಗೆ ಪುಸ್ತಕ ವಿನಿಮಯ ಯೋಜನೆಯಂತೆ ಸಾಹಿತ್ಯ ಕೃತಿಗಳನ್ನು ಕೊಡುಗೆಯಾಗಿ ನೀಡಲಾಗಿದೆ.

೧೯೯೭ರಿಂದೀಚೆಗೆ ಸುಮಾರು ೧೨೫ ವೈವಿಧ್ಯಮಯವಾದ ಸಾಹಿತ್ಯ, ಸಂಗೀತ, ಕಲೆ, ನಾಟಕ, ಕವಿಗೋಷ್ಠಿ, ಕನ್ನಡ ಗೀತಗಾಯನ, ಗೌರವ ಸದಸ್ಯತ್ವ ಪ್ರದಾನ, ಪ್ರಶಸ್ತಿ ವಿತರಣೆ, ಹಿರಿಯ ವಿದ್ವಾಂಸರಿಗೆ ಅಭಿನಂದನೆ, ಅಗಲಿದ ಸಾಹಿತಿಗಳ ನೂರರ ನೆನಪು, ವಿಚಾರ ಸಂಕಿರಣ, ಸಾಹಿತ್ಯ ಕಮ್ಮಟ, ಪುಸ್ತಕ ಬಿಡುಗಡೆ, ಪುಸ್ತಕ ಪ್ರದರ್ಶನ ಮತ್ತು ಮಾರಾಟ ಶೋತೃ ಸಂಸ್ಥೆಯೊಂದಿಗೆ ಹಿಂದೂಸ್ಥಾನಿ ಸಂಗೀತ ಸಪ್ತಾಹ ಮುಂತಾದ ಕಾರ್ಯಕ್ರಮಗಳನ್ನು ಕರ್ನಾಟಕ ಸಂಘವು ಯಶಸ್ವಿಯಾಗಿ ನಡೆಸಿರುತ್ತದೆ. ಮುಖ್ಯ ಸಮಾರಂಭಗಳ ಪಟ್ಟಿಯನ್ನು ಕೊನೆಯಲ್ಲಿ ಮುದ್ರಿಸಲಾಗಿದೆ. ಪ್ರತಿ ವರ್ಷ ನವೆಂಬರ್ ತಿಂಗಳಿನಲ್ಲಿ ಕನ್ನಡ ರಾಜ್ಯೋತ್ಸವವನ್ನು ಕನ್ನಡ ಪುಸ್ತಕ ಪ್ರದರ್ಶನ, ಮಾರಾಟ ಏರ್ಪಡಿಸುವುದರ ಮೂಲಕ ವಿಶಿಷ್ಟವಾಗಿ ಆಚರಿಸಲಾಗುತ್ತಿದೆ. ಪ್ರತಿದಿನ ಸಂಜೆ "ನನ್ನ ಪ್ರೀತಿಯ ಪುಸ್ತಕ" ಕುರಿತು ವಿದ್ವಾಂಸರೊಂದಿಗೆ ಸಂವಾದ ಕಾರ್ಯಕ್ರಮ ತುಂಬಾ ಜನಪ್ರಿಯವಾಗಿ ಪುಸ್ತಕಗಳನ್ನು ಓದುವ ಹವ್ಯಾಸವನ್ನು ಬೆಳೆಸುತ್ತಿದೆ. ಪ್ರತಿ ವರ್ಷ ಮಾರಾಟವಾದ ಪುಸ್ತಕಗಳ ವ್ಯಾಪಾರ ೪ ಲಕ್ಷದಿಂದ ೨೦೦೪ರಲ್ಲಿ ಸುಮಾರು ೯ ಲಕ್ಷಗಳಿಗೆ ಹೆಚ್ಚಿರುವುದನ್ನು ದಾಖಲಿಸಲು ಸಂತೋಷವಾಗುತ್ತಿದೆ.

೨೦೦೩ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಗೆ ಸದಸ್ಯರನ್ನು ಆಯ್ಕೆ ಮಾಡುವ ಮತ್ತು ೨೦೦೪ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಗೌರವ ಸದಸ್ಯರನ್ನು ಆಯ್ಕೆಗೆ ಸೂಚಿಸುವ ಗೌರವ ಕರ್ನಾಟಕ ಸಂಘಕ್ಕೆ ದೊರಕಿದ್ದನ್ನು ಇಲ್ಲಿ ಸ್ಮರಿಸಲು ಬಯಸುತ್ತೇನೆ.

ವಿಶೇಷ ವರ್ಷಾಚರಣೆಗಳು:

೨೦೦೩ - ಡಾ. ಶಿವರಾಮ ಕಾರಂತ ಜನ್ಮಶತಮಾನೋತ್ಸವ ವರ್ಷಾಚರಣೆ

೨೦೦೪ - ಡಾ॥ ಕೆ.ವಿ. ಪುಟ್ಟಪ್ಪ (ಕುವೆಂಪು) ಜನ್ಮಶತಮಾನೋತ್ಸವ ವರ್ಷಾಚರಣೆ

೨೦೦೫ - ಕರ್ನಾಟಕ ಸಂಘ ಅಮೃತ ವರ್ಷಾಚರಣೆ

೨೦೦೩ರಲ್ಲಿ ಕರ್ನಾಟಕ ಸಂಘ ಭವನ ನಿರ್ಮಾಣವಾಗಿ ೬೦ ವರ್ಷ ತುಂಬಿದ ಸಮಾರಂಭವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ಸಂಘ ಭವನ-೬೦ ನೆನಪಿನ ಸಂಪುಟವನ್ನು ಸುಂದರವಾಗಿ ಮುದ್ರಿಸಿ ಸದಸ್ಯರಿ. ಉಚಿತವಾಗಿ ನೀಡಲಾಗಿದೆ. ಉತ್ತಮವಾದ ಲೇಖನಗಳು, ಅಪರೂಪದ ಛಾಯಾಚಿತ್ರಗಳು, ಮಾಹಿತಿಗಳಿಂದ ಕೂಡಿದ ನೆನಪಿನ ಸಂಪುಟ ಎಲ್ಲ ವಿದ್ವಾಂಸರ ಪ್ರಶಂಸೆಗೆ ಪಾತ್ರವಾಯಿತು ಎಂದು ತಿಳಿಸಲು ಸಂತೋಷವಾಗುತ್ತಿದೆ.

ಇದೇ ಸಂದರ್ಭದಲ್ಲಿ ಕರ್ನಾಟಕ ಸಂಘವು ತನ್ನ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು, ಆರ್ಥಿಕವಾಗಿ, ಸದೃಢವಾಗಿರುವುದು ಪ್ರತಿ ವರ್ಷದ ಆಡಿಟ್ ವರದಿಯಿಂದ ತಿಳಿದುಬರುತ್ತದೆ. ಇದಕ್ಕೆ ಕಾರಣರಾದ ಸಂಘದ ಎಲ್ಲ ಆಜೀವ ಸದಸ್ಯರಿಗೆ, ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಮುಖ್ಯವಾಗಿ ಕರ್ನಾಟಕ ಸಂಘದ ಅಧ್ಯಕ್ಷರಾದ ಪ್ರೊ॥ ಪಾಂಡುರಂಗ ಉಡುಪರಿಗೆ, ಕೋಶಾಧ್ಯಕ್ಷರಾದ ಶ್ರೀ ಹೆಚ್.ಡಿ. ಮೋಹನಶಾಸ್ತ್ರಿ ಅವರಿಗೆ, ಮಾಜಿ ಅಧ್ಯಕ್ಷರಾದ ಶ್ರೀ ಕೆ.ಜಿ. ಸುಬ್ರಹ್ಮಣ್ಯ ಅವರಿಗೆ ಕೃತಜ್ಞತೆಗಳು.

ಕಾರ್ಯಕಾರಿ ಸಮಿತಿಯ ತೀರ್ಮಾನದಂತೆ ೨೦೦೪ನೇ ಸಾಲಿನಲ್ಲಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳ ಗ್ರಂಥಾಲಯಗಳಿಗೆ ಆಕಾಶವಾಣಿ, ಸಂಘ ಸಂಸ್ಥೆಗಳಿಗೆ ಉಚಿತವಾಗಿ ಪುಸ್ತಕ ಕೊಡುಗೆ ನೀಡುತ್ತಾ ಬಂದಿದೆ. ಹೀಗೆ ನೀಡಿದ ವಿವರವಾದ ಪಟ್ಟಿಯನ್ನು ವರದಿಯಲ್ಲಿ ಮುದ್ರಿಸಲಾಗಿದೆ. ಸಂಘದ ಆಜೀವ ಸದಸ್ಯರಿಗೆ ಪುಸ್ತಕ ಕೊಡುಗೆಯನ್ನು ೨೦೦೩ ಮತ್ತು ೨೦೦೪ ನೀಡಲಾಗಿದೆ.

ಕರ್ನಾಟಕ ಸಂಘ ಗ್ರಂಥಾಲಯ ಸುಮಾರು ೫೦೦೦ ಅಮೂಲ್ಯ ಗ್ರಂಥಗಳನ್ನು ಹೊಂದಿದೆ. ಹಲವಾರು ವಿದ್ವಾಂಸರು ಗ್ರಂಥಾಲಯದ ಬಳಕೆ ಮಾಡುತ್ತಿದ್ದಾರೆಂಬುದು ಹೆಮ್ಮೆಯ ಸಂಗತಿ. ಸ್ಥಾಪಕರ ಆಶಯಗಳನ್ನು ಕಾರ್ಯಗತ ಮಾಡುವುದರಲ್ಲಿ ಕಾರ್ಯಕಾರಿ ಸಮಿತಿಯು ಕಾರ್ಯನಿರತವಾಗಿದೆ.

'ಅಮೃತ ವರ್ಷ' ಗ್ರಂಥಕ್ಕೆ ಲೇಖನಗಳನ್ನು ಸಕಾಲದಲ್ಲಿ ಬರೆದುಕೊಟ್ಟ ಲೇಖಕರಿಗೆ, ಛಾಯಾಕ್ಷರ ಜೋಡಣೆ ಮಾಡಿದ ವರ್ಷಿಣಿ ಗ್ರಾಫಿಕ್ಸ್, ಅಂದವಾಗಿ ಮುದ್ರಿಸಿದ ಸ್ನೇಹಾ ಪ್ರಿಂಟರ್ಸ್, ಬೆಂಗಳೂರು, ಗ್ರಂಥದ ಕರಡು ತಿದ್ದಿದ ಶ್ರೀ ಚಂದ್ರದಾಸ್ ಅವರಿಗೆ ಕೃತಜ್ಞತೆಗಳು.


ಶಿವಮೊಗ್ಗ, ದಿ. ೨೮.೧೦.೦೫

-ಜಯದೇವಪ್ಪ ಜೈನಕೇರಿ

ಗೌರವ ಕಾರ್ಯದರ್ಶಿ

ಪರಿವಿಡಿ

ದಾರ್ಶನಿಕ ವಿಜ್ಞಾನಿ ಕುವೆಂಪು



❒ ಪ್ರೊ. ನೊ.ಸಂ. ತಿಮ್ಮೇಗೌಡ

ಶಿವಮೊಗ್ಗ ಕರ್ಣಾಟಕ ಸಂಘವು ಶ್ರೀ ಕುವೆಂಪು ಅವರಿಗೆ ಗೌರವ ಸದಸ್ಯತ್ವ ನೀಡಿ ತನ್ನನ್ನು ತಾನು ಗೌರವಿಸಿಕೊಂಡಿದೆ. ನಮ್ಮ ಕಾಲದ ಬಹುದೊಡ್ಡ ಲೇಖಕರಾದ ಕುವೆಂಪು ಅವರಿಗೂ ಕರ್ಣಾಟಕ ಸಂಘಕ್ಕೂ ಹಳೆಯನಂಟು. ಕರ್ಣಾಟಕ ಸಂಘದ ಸ್ಥಾಪಕ ಸದಸ್ಯರಾದ ಎಸ್.ವಿ. ಕೃಷ್ಣಮೂರ್ತಿ ಅವರು; ಕೂಡಲಿ ಚಿದಂಬರಂ ಅವರು; ವಸುದೇವ ಭೂಪಾಲಂ ಮೊದಲಾದ ಮಹನೀಯರು ಕುವೆಂಪು ಅವರ ಆತ್ಮೀಯ ಗೆಳೆಯರು. ೮-೧೧-೩೦ರಲ್ಲಿ ಅತಿಥಿಯಾಗಿ ಬಂದು ಕರ್ಣಾಟಕ ಸಂಘವನ್ನು ಉದ್ಘಾಟನೆ ಮಾಡಿದವರೂ ಕುವೆಂಪು ಅವರೇ, ಕರ್ಣಾಟಕ ಸಂಘವು ತನ್ನ ಚಟುವಟಿಕೆಗಳನ್ನು ಆಗ ಹೈಸ್ಕೂಲು ಮಂದಿರದಲ್ಲಿ ನಡೆಸುತ್ತಿತ್ತು. ಆನಂತರ ಕರ್ಣಾಟಕ ಸಂಘವು ತನ್ನ ಚಟುವಟಿಕೆಗಳನ್ನು ಪುರಸಭಾ ಭವನದಲ್ಲಿ ನಡೆಸುತ್ತಿದ್ದಾಗ ೨೭-೪-೩೨ರಂದು ಕುವೆಂಪು ತಮ್ಮ ಶ್ಮಶಾನ ಕುರುಕ್ಷೇತ್ರವನ್ನು ವಾಚಿಸಿದ್ದರು ಮುಂದೆ ೧೯೩೨ರಲ್ಲಿ ಕುವೆಂಪು ಅವರ ರಕ್ತಾಕ್ಷಿ ನಾಟಕವನ್ನೂ ೧೯೩೩ರಲ್ಲಿ ಪಾಂಚಜನ್ಯ ಕವನ ಸಂಗ್ರಹವನ್ನೂ ಕರ್ಣಾಟಕ ಸಂಘವೇ ಅಚ್ಚು ಹಾಕಿಸಿತು. ಕುವೆಂಪು ಮೈಸೂರಿನಿಂದ ಶಿವಮೊಗ್ಗಕ್ಕೆ ಬಂದಾಗಲೆಲ್ಲ ಕರ್ಣಾಟಕ ಸಂಘದ ಗೆಳೆಯರ ಬೈಠಕ್ ಇಲ್ಲದೆ ಇರುತ್ತಿರಲಿಲ್ಲ.

ಹೀಗೆ ಕರ್ಣಾಟಕ ಸಂಘಕ್ಕೂ ಕುವೆಂಪು ಅವರಿಗೂ ಎಡೆಬಿಡದ ನಂಟು ಇದ್ದದ್ದರಿಂದಲೂ ಹಾಗೂ ಅವರು ಗೌರವ ಸದಸ್ಯರಾಗಿರುವುದರಿಂದಲೂ ಕರ್ಣಾಟಕ ಸಂಘವು ಕುವೆಂಪು ಬಗ್ಗೆ ಪರಿಚಯಾತ್ಮಕ ಲೇಖನ ಪ್ರಕಟಿಸಲು ಯೋಜಿಸಿದೆ. ಈ ಕಿರು ಲೇಖನದಲ್ಲಿ ಕುವೆಂಪು ಅವರನ್ನು ಸಮಗ್ರವಾಗಿ ಪರಿಚಯಿಸುವುದು ಅಸಾಧ್ಯದ ಮಾತು ಆದ್ದರಿಂದ ಅವರ ಬದುಕಿನ ಹಂತಗಳನ್ನು ಮತ್ತು ಅವರ ಕೃತಿಗಳ ಹೆಸರನ್ನು ಈ ಲೇಖನದ ಕೊನೆಯಲ್ಲಿ ಕೊಟ್ಟು ಈ ಲೇಖನದಲ್ಲಿ ಕುವೆಂಪು ಅವರನ್ನು ರೂಪಿಸಿದ ಬಾಲ್ಯದ ಪರಿಸರ ಮತ್ತು ಕುವೆಂಪು ಪಡೆದುಕೊಂಡ ಜ್ಞಾನದಮೂಲವನ್ನಷ್ಟೇ ಗಮನದಲ್ಲಿರಿಸಿಕೊಂಡಿದ್ದೇನೆ. ಕಾರಣ ಈ ಸಂಗತಿಗಳು ಕುವೆಂಪು ಅವರನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಸಹಾಯಕವಾಗುತ್ತವೆ ಎಂಬ ನಂಬಿಕೆಯಿಂದ ಕುವೆಂಪು ಕವಿ

ವಿಳಾಸ : ಗುರುಕೃಪಾ, ಆನೇ ತಿರುವು, ವಿದ್ಯಾನಗರ, ಶಿವಮೊಗ್ಗ-೩

ಎಂದಾದರೆ 'ನಾನು' ಕವಿಯಲ್ಲ; 'ನಾನು' ಕವಿಯೆಂದಾದರೆ ಕುವೆಂಪು ಕವಿಯಲ್ಲ ಎಂಬ ತೀರ್ಮಾನಕ್ಕೆ ಈ ಓರ್ಟ ಕೆಲವರು ಬಂದದ್ದು ಉಂಟು. ಕುವೆಂಪು ಅವರ "ದರ್ಶನ"ವನ್ನು ಲೇವಡಿ ಮಾಡಿದ್ದು ಉಂಟು. ಕುವೆಂಪು ಅವರ ಮಹಾಛಂದಸ್ಸಿನ ಬಳಕೆಯನ್ನು ಅಪಹಾಸ್ಯ ಮಾಡಿದ್ದು ಉಂಟು, ಕುವೆಂಪು ಕಾದಂಬರಿಗಳಿಗೆ ಕೇಂದ್ರವೇ ಇಲ್ಲ ಎಂದವರೂ ಉಂಟು ಇವರೆಲ್ಲರ ಖಿಂಡಗ್ರಾಹಿ ಪ್ರಜ್ಞಾ ಪ್ರಕ್ರಿಯೆಗೆ ಕುವೆಂಪು ವ್ಯಕ್ತಿತ್ವ ರೂಪುಗೊಂಡ ಬಗೆ ಅರ್ಥವಾದರೆ ಕನ್ನಡ ವಿಮರ್ಶಾ ಲೋಕ ತನ್ನ ಗ್ರಹಿಕೆಯ ಕ್ರಮಗಳನ್ನು ತನ್ನ ರುಚಿಗಳನ್ನು ತಿದ್ದಿಕೊಳ್ಳುತ್ತದೆ ಎಂಬುದು ನನ್ನ ಆಶಯ.

ಈ ಲೇಖನದ ನಿರೂಪಣೆಗೆ ನಾನು ಕುವೆಂಪು ಅವರ ನೆನಪಿನ ದೋಣಿಯಲ್ಲಿ, ಕೆ.ವಿ. ಸುಬ್ಬಣ್ಣ ಅವರ ಕುವೆಂಪುಗೆ ಪುಟ್ಟ ಕನ್ನಡಿ ಮತ್ತು ತೇಜಸ್ವಿಯವರ ಅಣ್ಣನ ನೆನಪುಗಳು ಕೃತಿಗಳಲ್ಲಿನ ವಿಷಯಗಳನ್ನು ಪೋಣಿಸಿಕೊಂಡಿದ್ದೇನೆ. ಕುವೆಂಪು ಅವರ ತಂದೆ ಕುಪ್ಪಳಿ ವೆಂಕಟಯ್ಯ ಗೌಡರು ಹಿರೇಕೊಡಿಗೆಯ ತಿಮ್ಮಯ್ಯ ನಾಯಕರ ಮತ್ತು ಶೇಷಮ್ಮ ಅವರ ಪುತ್ರಿ ಸೀತಮ್ಮ ಅವರನ್ನು ಮದುವೆಯಾಗಿದ್ದು ಕ್ರಿ.ಶ. ೧೯೦೧ನೇ ಮೇ ತಿಂಗಳು ೩೧ರಂದು. ಕುಪ್ಪಳಿ ಮತ್ತು ಹಿರೇಕೊಡಿಗೆ ಈ ಎರಡೂ ಏಕ ಗೃಹ ಹಳ್ಳಿಗಳು ತೀರ್ಥಹಳ್ಳಿಯಿಂದ ಕೊಪ್ಪಕ್ಕೆ ಹೋಗುವ ಮಾರ್ಗದಲ್ಲಿ ಇವೆ. ಈಗ ಕುಪ್ಪಳಿಯ ಕುವೆಂಪು ಅವರ ಮನೆಯನ್ನು ಕುವೆಂಪು ಟ್ರಸ್ಟ್ ಮೂಲಕ ಸರ್ಕಾರದವರು ಪುನರ್ ನಿರ್ಮಿಸಿ ಪ್ರವಾಸಿ ತಾಣವನ್ನಾಗಿ ಮಾಡಿದ್ದಾರೆ. ಎಲ್ಲ ಭಾರತೀಯ ಕುಟುಂಬಗಳ ಆಚರಣೆಯಂತೆಯೆ ಸೀತಮ್ಮನವರು ಕುವೆಂಪು ಅವರನ್ನು ಹಡೆದದ್ದು ಹಿರೇಕೊಡಿಗೆಯಲ್ಲಿ. ಆದ್ದರಿಂದ ಕುವೆಂಪು ಟ್ರಸ್ಟ್‌ನವರು ಆ ಸ್ಥಳದಲ್ಲಿ ಒಂದು ಮಂಟಪವನ್ನು ನಿರ್ಮಾಣ ಮಾಡಿ ಸಂದರ್ಶನದ ಸ್ಥಳವಾಗಿ ಮಾರ್ಪಡಿಸಿದ್ದಾರೆ.

ಸೀತಮ್ಮನವರಿಗೆ ಮದುವೆಯಾಗಿ ನಾಲ್ಕು ವರ್ಷಗಳಾದರೂ ಸಂತಾನವಿಲ್ಲದಿದ್ದಾಗ ಕುವೆಂಪು ಅವರ ಅಜ್ಜಿ ಶೇಷಮ್ಮನವರು ಅನೇಕಾನೇಕ ದೇವರಿಗೆ ಹರಕೆ ಹೊತ್ತು, ನಾಟಿ ಔಷಧಿಗಳಿಗೆ ಮಾರುಹೋಗಿ ಮಗಳಿಗೆ 'ಮಗು' ಆಗಲಿ ಎಂದು ಹಂಬಲಿಸಿದ್ದು ಕುವೆಂಪು ಅವರ ಪ್ರಜ್ಞೆಯಲ್ಲಿ ಅಚ್ಚೊತ್ತಿದೆ. ಕುವೆಂಪು ಹೇಳುತ್ತಾರೆ "ಅಂತೂ ಎಷ್ಟೊಂದು ದೇವ ದೇವಿಯರ ಕಮ್ಮಾರ ಸಾಲೆಯಲ್ಲಿ ಅವರ ಹೃದಯದ ದಿವ್ಯ ಮೂಷೆಯಲ್ಲಿ ಕಾಯಿಸಿ, ತಮ್ಮ ಬಯಕೆಯ ತಪಸ್ಸಿನ ಅಡಿಗಲ್ಲಿನ ಮೇಲೆ ಬಡಿ ಬಡಿದು ನನ್ನ ಅಜ್ಜಿ ನನ್ನನ್ನು ತಯಾರಿಸಿದ್ದಾರೆ ಎಂಬುದನ್ನು ನೆನದರೆ ನನ್ನ ವಿಚಾರ ಬುದ್ಧಿಯ ನಾಸ್ತಿಕತೆ ತನ್ನ ಕೃತಜ್ಞತೆಗೆ ನಾಚಿ ಆಸ್ತಿಕತೆಗೆ ತಿರುಗಿ ಕೃತಜ್ಞತೆಯ ಕಣ್ಣೀರು ಕಪೋಲಗಳನ್ನು ತೊಯ್ಯಿಸಿ ಮೀಯಿಸಿದಂತಾಗುತ್ತದೆ."

ಕುವೆಂಪು ಅವರು ಹಿರೇಕೊಡಿಗೆಯಲ್ಲಿ ಜನಿಸಿದ್ದು ೨೯-೧೨-೧೯೦೪ರಲ್ಲಿ. ಬಾಲ್ಯದಲ್ಲಿ ತಾಯಿಯ ಮನೆ ತಂದೆಯ ಮನೆಗಳ ಮಧ್ಯೆ ಬಾಲಕನ ಓಡಾಟದ

ಕಾಲದಲ್ಲೇ ಅರಣ್ಯದ ಸೇಂದ್ರಿಯಾನುಭವ ಕುವೆಂಪು ವ್ಯಕ್ತಿತ್ವದ ಪ್ರಸುಪ್ತ ಪ್ರಜ್ಞೆಗೆ ಧಾತುವಾಯಿತು. ಕುವೆಂಪು ಹೇಳುತ್ತಾರೆ, ಆಳಿನ ಹೆಗಲ ಮೇಲೆ ಕುಳಿತು ಪ್ರಯಾಣ ಮಾಡುವಾಗ '.........ತುಸು ಎತ್ತರದಿಂದಲೇ ಆ ಆರಣ್ಯಕ ಮನೋಹರ ಭಯಂಕರ ದೃಶ್ಯವನ್ನು ನಿರಪಾಯ ಸ್ಥಾನದಿಂದ ಮುಗ್ಧಾಧಿಸ್ಮಿತನಾಗಿ ವೀಕ್ಷಿಸುತ್ತಾ ಸಾಗುತ್ತಿದ್ದುದು.! ಬಹುಶಃ ಆಗಲೇ ಇರಬೇಕು. ಸಹ್ಯಾದ್ರಿಯ ಅರಣ್ಯದೇವಿ ನನ್ನ ಕವಿಚೇತನದಲ್ಲಿ ದೈವ ದತ್ತವಾಗಿದ್ದು ಪ್ರಸುಪ್ತ ಸ್ಥಿತಿಯಲ್ಲಿದ್ದ ಸೌಂದರ್ಯ ಪ್ರಜ್ಞೆಯನ್ನು ಎಚ್ಚರಿಸಿ. ಅದಕ್ಕೆ ನಿಸರ್ಗ ಪ್ರೇಮ ದೀಕ್ಷೆಯನ್ನಿತ್ತು, ನನ್ನನ್ನು ಪ್ರಕೃತಿ ಉಪಾಸನೆಗೆ ನಿವೇದಿಸಿದ್ದು!

ನೆನಪಲ್ಲ ವಾಸ್ತವ-ಕಾಲದೇಶಾತೀತವಾಗಿ ನಿತ್ಯವರ್ತಮಾನದಲ್ಲಿ ಇರುವ ಈ ಅನುಭವ ನಿಬಿಡ ತರು ಗುಲ್ಮ ಪಂಕ್ತಿ, ಗಗನ ಚುಂಬಿ ವೃಕ್ಷರಾಜಿ ನಾನಾವಿಧ ಪಕ್ಷಿಕಲರವ ನಯನ ಗೋಚರವಾಗಿರದಿದ್ದರೂ ಪ್ರಜ್ಞೆಯ ಮೇಲೆ ತಮ್ಮ ಸಾನ್ನಿಧ್ಯದ ಮತ್ತು ಸಂಚಲನೆಯ ನಿಗೂಢ ಮುದ್ರೆಯನ್ನೊತ್ತುವುವರಿಂದಲೇ ಭೀಷ್ಮ ಭಾವ ಪ್ರಚೋದಿಗಳಾಗಿರುವ ವಿವಿಧ ಮೃಗ ಸಮೂಹ ಬಂಡೆಯಿಂದ ಜಾರಿ ಉಂಡೆ ಗಲ್ಲುಗಳ ಮೇಲೆ ಹರಿಯುವ ಸ್ಪಟಿಕ ನಿರ್ಮಲ ಸಲಿಲ ಲೀಲೆ, ತೇಲುವ ವೀಳೆಯದೆಲೆ ದಡದ ಬಿದಿರಿನ ಮೆಳೆಯ ಮೇಲೆ ಕುಳಿತಿದ್ದು ನಮ್ಮ ಕೇಕೆಗೆ ಬೆವರಿ ಮಿಾ ಮಿಾ ಮಿಾ ಎಂದುಲಿಹಬೀರಿ ಹಾರುವ ಮಿಂಚುಳ್ಳಿ, ನೀರಿಗೆ ಬಾಗಿರುವುದರಿಂದ ಕೊರಳಿನಿಂದ ಇಳಿಬಿದ್ದು ಮಿರುಗಿ ಹೊಳೆಯುವ ಚಿನ್ನದ ಕಟ್ಟಾಣಿಯ ಸರಪಂಕ್ತಿಯಿಂದ ದೇವತೆಯಾಗಿರುವ ಅವ್ವನ ನೆಂಟರ ಮನೆಯ ಹೊಸ ಸೀರೆಯ ತಾಯಿಗಂಪು!-ನೆನಪಲ್ಲ ವಾಸ್ತವ:"

ಕುಪ್ಪಳಿಯಲ್ಲಿದ್ದ ಕುವೆಂಪು ಅವರ ಮನೆಯೂ ಕೂಡ ಅರಣ್ಯಾಚ್ಛಾದಿತವಾದ ಆಕಾಶದವರೆಗೆ ಗೋಡೆ ಹಾಕಿದಂತೆ ಕಾಣುವ ಮಲೆಯ ಮಧ್ಯದಲ್ಲೇ ಇದೆ. ಕುವೆಂಪು ಅವರ ಬಾಲಕ ಪ್ರಜ್ಞೆಯಲ್ಲಿ ಬೇಟೆಯ ಅನುಭವಗಳನ್ನು ಅರಣ್ಯದ ನಿಗೂಢ ಪರಾತ್ಪರತೆಯನ್ನು ರೂಪುಗೊಳಿಸಿದ್ದು ಈ ಅರಣ್ಯವೇ ಆಗಿದೆ.

ಕುವೆಂಪು ಅವರಿಗೆ ನಡು ಬೆರಳ ಮೇಲೆ ತೋರು ಬೆರಳನ್ನು ಇಡಿಸಿ ಮರಳಿನ ಮೇಲೆ ಆ ಬರೆಸಿದವರು ದಕ್ಷಿಣ ಕನ್ನಡ ಜಿಲ್ಲೆಯಿಂದ ಇವರ ಮನೆಗೆ ಬಂದು ಮಕ್ಕಳಿಗೆ ವಿದ್ಯೆಕಲಿಸುತ್ತಿದ್ದ 'ಐ'ಗಳು ಆನಂತರ ಅವರ ವಿದ್ಯಾಭ್ಯಾಸ ಮುಂದುವರೆದಿದ್ದು ಇವರ ಮನೆಗೆ ಕ್ರೈಸ್ತಪಾದರಿಗಳು ಕಳುಹಿಸಿಕೊಟ್ಟು ಕ್ರೈಸ್ತ ತರುಣ ಮೇಷ್ಟರಾದ 'ಮೋಸಸ್' ಅವರಿಂದ. ಈ ಮೋಸಸ್ ಅವರ ವೇಷಭೂಷಣ ನಡೆನುಡಿ. ಅವರ ಮಾತು ಕಥೆಗಳು ಬಾಲಕ ಕುವೆಂಪುವಿನ ಅಂತರಂಗದಲ್ಲಿ ಬಿರುಗಾಳಿಯನ್ನೇ ಎಬ್ಬಿಸಿದವು. ಕುವೆಂಪು ಬರೆಯುತ್ತಾರೆ 'ಮನೆಯಲ್ಲಿ ದೇವರ ಪೂಜೆ ನಡೆಯುತ್ತಿತ್ತು ಭೂತದ ಬನದಲ್ಲಿ

ಏಷ್ಟಾಕ್ಕಮ್ಮ ಬಲಿ, ಹರಕೆ ಜರುಗುತ್ತಿತ್ತು ದಯ್ಯ, ಜಕ್ಕಿಣಿ, ಕಲ್ಕುಟಿಗ ಮುಂತಾದ ದೆವ್ವ ಪಿಶಾಚಿಗಳ ಭೀಕರ ಕಥನಗಳೂ, ಕಿವಿಯ ಮೇಲೆ ಬಿದ್ದು ಕತ್ತಲೆಯಾದ ಮೇಲೆ ಮನೆ ತುಂಬಾ ಅವುಗಳ ಓಡಾಟದ ಮೊಂಚಿಕೆಯನ್ನು ಊಹಿಸಿ ಭಾವಿಸಿ ಬೆವರಿ ಬೇಗುದಿಗೊಳ್ಳುತ್ತಿದ್ದವು.

ದೇವರು, ಜೀವ, ಜಗತ್ತು, ಪಾಪ, ಪುಣ್ಯ, ಕರ್ಮ ಇಂತಹ ಗುರುತರವಾದ ವಿಷಯಗಳನ್ನು ಮೋಸೆಸ್‌ರವರು ಪ್ರಸ್ತಾಪಿಸುವುದರ ಮೂಲಕ ಕುವೆಂಪು ಅವರ ಅರಿವಿನ ಲೋಕಕ್ಕೆ ಬೇರ ಲೋಕದ ಕಿಟಕಿಗಳನ್ನು ತೆರೆದಿಡುತ್ತಾರೆ. ಬಾಲಕ ಕುವೆಂಪು ಅವರು ತಮ್ಮ ಮನೆಯಲ್ಲಿ ರಾಮಾಯಣ ಮಹಾಭಾರತದ ಕಥೆಗಳ ಪಠಣವನ್ನು ಕೇಳಿದ್ದರಾದರೂ ಅವರು ಮೊಟ್ಟ ಮೊದಲು ಓದಿದ ಪುಸ್ತಕ 'ಮಾರ್ಕನ ಸುವಾರ್ತೆ' ಭಾರತೀಯ ಪುರಾಣ ಲೋಕದ ಸಮುದ್ರದಲ್ಲಿ ಈಜುವುದಕ್ಕೆ ಮೊದಲೇ ಯೇಸುವಿನ ಸರೋವರದಲ್ಲಿ ಕುವೆಂಪು ಪ್ರಜ್ಞೆ ಮಿಂದಿತು.

ಕುವೆಂಪು ಅವರ ವಿದ್ಯಾಭ್ಯಾಸ ಮುಂದುವರೆದಿದ್ದು ತೀರ್ಥಹಳ್ಳಿಯ ಸರ್ಕಾರಿ ಶಾಲೆಗಳಲ್ಲಿ. ಪ್ರೈಮರಿ ಶಾಲೆ ಪೂರೈಸಿದ ಮೇಲೆ ಹಾಸನದ ಟೋಪಿ, ದಗಲೆಕೋಟು, ಲಳಬಳ ಅಡ್ಡ ಪಂಚೆ ಸುತ್ತಿಕೊಂಡಿದ್ದ ಬಾಲಕ ಕುವೆಂಪು ತೀರ್ಥಹಳ್ಳಿಯಲ್ಲಿಯೇ ಇದ್ದ ಅಪ್ಪರ್ ಸೆಕೆಂಡರಿ ಸೇರಿದರು. ಬೆಳೆಯುತ್ತಿರುವ ಬಾಲಕನ ಆಲೋಚನೆಯು ಪಾಪ, ಪುಣ್ಯ, ದೇವರು, ಜಗತ್ತು, ಸೃಷ್ಟಿ, ವಿಧಿ, ಕಾಡು, ಬೆಟ್ಟ, ಸೂರ್ಯ, ಚಂದ್ರ ಹೀಗೆ ಅಲೆಯಲು ಶುರು ಮಾಡಿತು. ಒಂದು ದಿನ ಈ ಕಾಡು, ಈ ಗುಡ್ಡ ಸಾಲು, ಈ ಮೋಡ, ಈ ಆಕಾಶ ಇದನ್ನೆಲ್ಲ ಮಾಡಿದ್ದಾನಲ್ಲ ದೇವರು, ಅವನು ಎಂತಹ ಅದ್ಭುತ ಶಕ್ತಿಶಾಲಿಯಾಗಿರಬೇಕು? ಈ ಪೊದೆಯಬಳಿ ಹಸುರಿನ ಮೇಲೆ ಅರ್ಧಕಾಣಿಸಿಕೊಂಡು ಇಲ್ಲಿ ಬಿದ್ದಿರುವ ಈ ಕಲ್ಲುಗುಂಡು ಇಲ್ಲಿಯೇ ಹೀಗೆಯೇ ಬಿದ್ದಿರಬೇಕೆಂದು ದೇವರು ನಿಯಮಿಸಿದ್ದಾನೆ. ಅದರಿಂದಲೇ ಅದು ಇಲ್ಲಿಯೇ ಬಿದ್ದಿದೆ, ಇಲ್ಲಿಂದ ಹಂದುವುದಿಲ್ಲ. ಎಲ್ಲ ಭಗವಂತನ ವಜ್ರನಿಯಮಕ್ಕೆ ಅಧೀನ. ಸ್ವತಂತ್ರೇಚ್ಛೆ ಎಲ್ಲಿಯೂ ಇಲ್ಲ, ಯಾರಿಗೂ ಇಲ್ಲ. ಇದ್ದಕ್ಕಿದ್ದ ಹಾಗೆ ಹುಡುಗನ ಮನಸ್ಸು ಸೆರೆಯಲ್ಲಿ ಸಿಕ್ಕಿ ಬಿದ್ದ ಸಿಂಹದಂತಾಗಿ ಕಂಬಿಗಳನ್ನೆಲ್ಲ ಕಿತ್ತೂ ಬಿಡುವಂತೆ ನುಗ್ಗ ತೊಡಗಿತು. ಛೆ! ಇದೆಂತಹ ದಾಸ್ಯ?

ಅಷ್ಟು ಹೊತ್ತಿಗೆ ಬಾಳೆಯಹಣ್ಣು ತಿಂದು ಮುಗಿದು ಸಿಪ್ಪೆ ಮಾತ್ರ ಕೈಯಲ್ಲಿತ್ತು. ಕೈಯಾಂತ್ರಿಕವಾಗಿ ಅದನ್ನು ಬಲವಂತವಾಗಿ ಎಸೆಯಿತು. [illegible] ತುಸುವೆ ದೂರದಲ್ಲಿದ್ದ ಒಂದು ಮುಳ್ಳು ಪೊದೆಯ ಹರೆಗೆ ತಗುಲಿ ಒಂದೆರಡು [illegible] ಅಲ್ಲಿ ನೇತಾಡಿ ಕೆಳಗೆ ನೆಲದ ಹಸುರಿಗೆ ಬಿತ್ತು. ಕಾಲು ತನ್ನ ಪಾಡಿಗೆ ತಾನು ಮುಂದುವರಿಯಿತು ಹತ್ತಿಪ್ಪತ್ತು ಮಾರು.

ಭಗವಂತನ ನಿರಂಕುಶೇಚ್ಛೆಯ ಪ್ರಭುತ್ವದ ಮೇಲೆ ದಂಗೆಯೆದಿದ್ದ ನನ್ನ (ಕುವೆಂಪು ಅವರ) ಮನಸ್ಸು ಒಡನೆಯೆ ಆಗ ತಾನೆ ನಡೆದಿದ್ದ ಘಟನೆಯ ನಿದರ್ಶನವನ್ನು ಆಶ್ರಯಿಸಿ ಪ್ರತಿಭಟಿಸಲು ಹೆಡೆಯೆತ್ತಿ ನಿಂತಿತು. ನೋಡಿದೆಯಾ ದೇವರ ಇಚ್ಛೆಯನ್ನು ಉಲ್ಲಂಘಿಸಲು ಯಾರಿಗೂ ಎಂದಿಗೂ ಸಾಧ್ಯವಿಲ್ಲ. ಈ ಬಾಳೆ ಹಣ್ಣಿನ ಸಿಪ್ಪೆ ಇಲ್ಲಿಯೇ ಇಂಥ ಜಾಗದಲ್ಲಿಯೇ ಬೀಳಬೇಕೆಂದು ಅವನು ನಿಯಮಿಸಿ ಬಿಟ್ಟಿದ್ದ. ಆದ್ದರಿಂದ ಅದು ಅಲ್ಲಿಯೇ ಬೀಳಬೇಕಾಯಿತು. ಅದು ಯಾರ ತೋಟದ್ದೊ? ಯಾರು ಯಾರಿಗೆ ಮಾರಿದ್ದೊ? ಅದನ್ನು ನಮ್ಮ ಮನೆಯವರು ತಂದು, ನೀನು ತಿಂದು, ಅದರ ಸಿಪ್ಪೆಯನ್ನು ಇಲ್ಲಿಗೇ ತಂದು ಹಾಕಬೇಕಾಯಿತು. ಆ ವಿಧಿಯ ಇಚ್ಛೆ ನೀನೆ ವಾಹಕ ಗುಲಾಮ! ನೀನು ಮನೆಯಲ್ಲಿಯೇ ಅದನ್ನು ತಿಂದು ಅಲ್ಲಿಯೇ ಎಸೆಯ ಬಹುದಾಗಿತ್ತು ಆದರೆ ಅದರ ಆ ನೂರಾರು ಗೊನೆಗಳಲ್ಲಿ ಒಂದು ಗೊನೆಯ ನೂರಾರು ಹಣ್ಣುಗಳಲ್ಲಿ ಒಂದು ಯಃಕಶ್ಚಿತ ಹಣ್ಣಿನ ಆ ಸಿಪ್ಪೆ ಇಲ್ಲಿಯೇ ಬೀಳಬೇಕೆಂದು ವಿಧಿ ಇಚ್ಛಿಸಿದ್ದುದರಿಂದ ನೀನು ಇಂದು ಸಂಜೆ ಶಾಲೆಯಿಂದ ಬಂದು ತಿಂಡಿಯ ನೆವದಿಂದ ಅದನ್ನು ಇಲ್ಲಿಗೆ ತಂದು ಇಲ್ಲಿಯೇ ಹಾಕಬೇಕಾಯಿತು. ಹಾಗಿದೆ ಭಗವಂತನ ಅಲುಗಾಡದ ಕಟ್ಟಳೆ. ಹುಡುಗನ ಮನಸ್ಸು ರೇಗಿತು. ನಾನೇನು ವಿಧಿಯ ಗುಲಾಮನಲ್ಲ, ವಿಧಿಯ ಇಚ್ಛೆಗೆ ಭಂಗ ತರಲೇಬೇಕು.

ಸೂರ್ಯ ಚಂದ್ರ ಪೃಥ್ವಿ ನಕ್ಷತ್ರಾದಿಗಳನ್ನು ಸೃಷ್ಟಿಸಿ ನಿಯಮ ಬಂಧನದಲ್ಲಿರುವ ಆ ದುಷ್ಟ ವಿಧಿಯನ್ನು ಭಂಗಿಸುವ ದೃಢ ಛಲದಿಂದ, ಸಿಪ್ಪೆಯನ್ನೆಸೆದು ಅಷ್ಟು ದೂರ ಹೋಗಿದ್ದ ನಾನು ಮತ್ತೆ ಹಿಂದಕ್ಕೆ ಬಂದೆ! ಸಿಪ್ಪೆ ಬಿದ್ದಿದ್ದ ಸ್ಥಳಕ್ಕೆ ಧಾವಿಸಿ ಹುಡುಕಿದೆ ಅದು ಹಸುರು ಹುಲ್ಲಿನಲ್ಲಿ ಅಡಗಿ ಬಿದ್ದಿತ್ತು (ಪಾಪ! ಆ ಸೆರೆಮನೆಯ ಭಯಂಕರ ಶಿಕ್ಷೆಗೆ ಗೋಳಿಡುತ್ತಾ!) ಸೆರೆಬಿಡಿಸುವವನಂತೆ ಅದನ್ನು ಎತ್ತಿಕೊಂಡೆ! ಮತ್ತೆ ಸ್ವಲ್ಪ ದೂರ ನಡೆದು ಅದನ್ನು ಬೇರೊಂದು ಕಡೆಗೆ ಎಸೆದು ವಿಜಯಿಯ ಹೆಮ್ಮೆಯಿಂದ ಮುಂದುವರೆದಿದೆ.

ಆದರೆ ಆ ಹೆಮ್ಮೆ ಅಲ್ಪಾಯುವಾಗಿ ಬಿಟ್ಟಿತು! ಹಾಳು ವಿಧಿ ಮೂದಲಿಸ ತೊಡಗಿತು. ಆ ಬಾಳೆಹಣ್ಣಿನ ಸಿಪ್ಪೆ ನಾನು ಮತ್ತೆ ಎಸೆದು ಈಗ ಅದು ಬಿದ್ದಿರುವ ಜಾಗದಲ್ಲಿಯೆ ಅದು ಬೀಳಬೇಕೆಂದು ವಿಧಿಯ ಇಚ್ಛೆಯಿದ್ದುದರಿಂದಲೇ ನಾನು ಪುನಃ ಅದರ ದಾಸನಂತೆ ಹಿಂದಕ್ಕೆ ಹೋಗಿ ಅದನ್ನು ತಂದು ಇಲ್ಲಿ ಎಸೆಯ ಬೇಕಾಯಿತಲ್ಲಾ! ನನಗೆ ಪರಚಿಕೊಳ್ಳುವಷ್ಟು ಸಿಟ್ಟು ಬಂದಿತು ನನ್ನ ಅಸಹಾಯಕತೆಗೆ ನಾನೇ ದುಃಖಿಸಿ ಕಣ್ಣು ಹನಿ ತುಂಬಿತು. ಸೋಲಿಗೂ ಅವಮಾನಕ್ಕೂ ಅಳು ಬರುವಂತಾಯ್ತು. ಈ ಬಿದ್ದಿರುವ ಜಾಗದಿಂದಲೂ ಅದನ್ನು ತೆಗೆದು ಬೇರೆ ಕಡೆ ಬಿಸಾಡಬೇಕು ಎಂದೆನಿಸಿತು. ಆದರೆ ಏನು ಪ್ರಯೋಜನ? ಮತ್ತೆ ವಿಧಿಯ ದಾಸನಾಗಿಯೇ ಕೆಲಸ ಮಾಡಿದಂತಾಗುತ್ತದೆ.

ಥೂ! ಹಾಳು ವಿಧಿಯಬಾಯಿಗೆ ಮಣ್ಣು ಹಾಕಲಿ! ಏನಾದರೂ ಸಾಯಲಿ! ನನಗೇಕೆ? ಎಂದೆಲ್ಲ ಶಪಿಸಿಬಿಟ್ಟು, ಮನಸ್ಸಿನಿಂದ ಅದನ್ನು ತಳ್ಳಿ, ರಬ್ಬರು ಬಿಲ್ಲಿಗೆ ಕಲ್ಲು ಹರಳು ಹಾಕಿಕೊಂಡು ಬೇಗ ಬೇಗ ಕತ್ತಲಾಗುವುದರ ಒಳಗೆ ಮನೆಸೇರಿಕೊಳ್ಳಲು ಧಾವಿಸಿದೆ! ಹೊತ್ತು ಮೀರಿ ಹೋದರೆ ಹಾಳು ವಿಧಿ, ಮನೆ ಮೇಷ್ಟರ ಕೈಲಿ ಛಡಿಪೆಟ್ಟು ಹಾಕಿಸುವ ಹುನ್ನಾರು ಮಾಡಿದೆಯೋ ಏನೋ ಯಾರು ಬಲ್ಲರು?"

ಈ ಮೇಲಿನ ಘಟನೆಯನ್ನು ಗಮನಿಸಿದಾಗ ಮುಂದೆ ಕುವೆಂಪು ಅವರು ರಾಮಾಯಣದರ್ಶನಂನಲ್ಲಿ ಕಂಡರಿಸಿದ "ಪೂರ್ಣ ದೃಷ್ಟಿಯ ಪ್ರಾದುರ್ಭಾವದ ಬೀಜ ಈ ಬಾಲಕ ಕುವೆಂಪುವಿನ ಮನಸ್ಸಿನಲ್ಲಿ ದತ್ತವಾಗಿರುವುದು ಗೋಚರಿಸುತ್ತದೆ."

ಕುವೆಂಪು ಅವರು "ವಿಶ್ವದಲ್ಲಿ ನಡೆಯುವ ಯಾವ ಘಟನೆಯಾಗಲಿ ಇತರ ಎಲ್ಲ ಘಟನೆಗಳಿಗೂ ಸಂಬಂಧಿಸಿದಂತೆಯೆ ನಡೆಯುತ್ತದೆ ಎಂಬುದು ಪೂರ್ಣ ಅಥವಾ ಅಖಂಡ ದೃಷ್ಟಿಗೆ ಸುಸಂವೇದ್ಯ. ಹಾಗಿಲ್ಲದಿದ್ದರೆ ಜರ್ಮನಿಯ ಕೈಸರ್ ಚಕ್ರವರ್ತಿಯ ತಲೆಯಲ್ಲಿ ಜರುಗಿದ ಒಂದು ಅಸುರೀ ವ್ಯಾಪಾರ ಸಹ್ಯಾದ್ರಿಯ ಅರಣ್ಯಶ್ರೇಣಿಯ ಒಂದು ಕೊಂಪೆಯಲ್ಲಿರುವ ಏಕ ಗೃಹ ಗ್ರಾಮವಾದ ಕುಪ್ಪಳಿಯ ಬದುಕನ್ನೇ ಬಿರಿದು ಪಾಳುಗೈಯಲು ಸಾಧ್ಯವಾಗುತ್ತಿತ್ತೇ" ಎಂದು ಹೇಳುತ್ತಾ ೧೯೧೪-೧೮ರ ಅವಧಿಯಲ್ಲಿ ನಡೆದ ಮೊದಲನೇ ಮಹಾಯುದ್ಧದ ಕಾಲದಲ್ಲಿ ಕುವೆಂಪು ಅವರ ದೊಡ್ಡ ಚಿಕ್ಕಪ್ಪಯ್ಯ ರಾಮಣ್ಣ ಗೌಡರು ಅಡಿಕೆ ವ್ಯಾಪಾರಕ್ಕಾಗಿ ಮದ್ರಾಸ್ ನಗರಕ್ಕೆ ಹೋದದ್ದು, ಅದೇ ದಿನ ಜರ್ಮನಿಯ ಜಲಾಂತರ್‌ಗಾಮಿಯಾದ 'ಎಮ್‌ಡನ್' ಮದ್ರಾಸಿನ ಲೈಟ್ ಹೌಸಿಗೆ ಗುಂಡು ಹಾರಿಸಿದ್ದು, ಪರಿಣಾಮವಾಗಿ ಮದ್ರಾಸ್ ನಗರ ಅಲ್ಲೋಲ್ಲ ಕಲ್ಲೋಲವಾಗಿ ರಾಮಣ್ಣಗೌಡರು ಪೂರ್ಣ ಹಣಕಳೆದುಕೊಂಡು ಊರಿಗೆ ಬಂದದ್ದು, ಇದರ ಪರಿಣಾಮವಾಗಿ ಕುಪ್ಪಳಿ ಮನೆ ಪಾಲಾದದ್ದು ಮೊದಲಾದ ವಿಚಾರಗಳನ್ನು ಹೇಳುತ್ತಾರೆ.

ಇಂತಹ ಹತ್ತಾರು ಘಟನೆಗಳನ್ನು ಪರಿಭಾವಿಸಿದರೆ ಕುವೆಂಪು ಅವರ ಚೇತನ ಸಂಸ್ಕಾರಗೊಳ್ಳುತ್ತಿದ್ದ ಬಗೆಯನ್ನು ನಾವು ಮನಗಾಣಬಹುದು.

ಕುವೆಂಪು ಅವರು ತೀರ್ಥಹಳ್ಳಿಯಲ್ಲಿ ಓದುತ್ತಿರುವಾಗಲೇ ಅವರ ತಂದೆಯವರು ರೋಗದಿಂದಾಗಿ ಮರಣ ಹೊಂದಿದರು. ತಂದೆಯ ಮರಣ ಬಾಲಕ ಕುವೆಂಪುವಿನ ಮನಸ್ಸಿನ ಮೇಲೆ ಅಳಿಸಲಾಗದ ಬರೆ ಎಳೆಯಿತು.

ತೀರ್ಥ ಹಳ್ಳಿಯ ಶಾಲೆಯಲ್ಲಿ ರಾಮರಾಯರು ಎಂಬ ಸಂಪ್ರದಾಯಸ್ಥರಾದ ಇಂಗ್ಲಿಷ್ ಅಧ್ಯಾಪಕರು ಹಣೆಯ ಮೇಲೆ ನಾಮ ಹಾಕಿಕೊಳ್ಳುವುದನ್ನು ಕಡ್ಡಾಯ ಮಾಡಿದಾಗ ಕುವೆಂಪು ಶಿಕ್ಷೆಗೆ ಒಳಗಾಗಿದ್ದರು. ಹಾಗೆಯೇ ಸಂಸ್ಕೃತ ಓದಲು ಬ್ರಾಹ್ಮಣ

ಹುಡುಗರ ಜೊತೆ ಇವರೂ ಸೇರಿಕೊಂಡಾಗ "ಸಂಸ್ಕೃತ ಕಷ್ಟ ಕಣೋ ಅದು ಬ್ರಾಹ್ಮಣರಿಗೆ ಮಾತ್ರ" ಎಂದೂ "ನೀನ್ಯಾಕೆ ಬಂದೆಯೋ ನಮ್ಮ ಜೊತೆಗೆ? ಶೂದ್ರರಿಗೆ ಯಾಕೋ ಸಂಸ್ಕೃತ? ನೀನೇನು ಮಂತ್ರಗಿಂತ್ರ ಹೇಳಿ ಪುರೋಹಿತ್ಯ ಮಾಡ್ತಿಯೇನೊ? ಸಂಸ್ಕೃತ ಉಚ್ಛಾರ ಮಾಡೋದಕ್ಕೆ ಆಗೋದಿಲ್ಲ. ನೀನು ಅದನ್ನು ಕಲ್ತು ಬರೆದು ಪಾಸು ಮಾಡುವುದು ಹೌದೇನೋ" ಎಂದು ಸಹಪಾಠಿಗಳು ಛೇಡಿಸಿದರು. ಜೊತೆಗೆ ಮೂರುನಾಮದ ಪಂಡಿತರು "ಯಸ್ಯಜ್ಞಾನ ದಯಾ ಸಿಂಧೂ" ಹೇಳಲು ಆಜ್ಞಾಪಿಸಿ "ಶೂದ್ರ ಮಕ್ಕಳಿಗೆ ಬಾಯಿ ತಿರುಗುವುದೇ ಇಲ್ಲ! ಇವು ಸಂಸ್ಕೃತ ಕಲಿಯುತ್ತವಂತೆ! ನಿಲ್ಲೋ ಬೆಂಚಿನ ಮೇಲೆ" ಎಂದು ಶಿಕ್ಷೆಯನ್ನು ವಿಧಿಸಿದರು. 'ಎರಡು ಮೂರುದಿನ ಏಟು ತಿಂದು ಬೆಂಚಿನ ಮೇಲೆ ಹತ್ತಿನಿಂತು ನೋವಿಗೂ ಅವಮಾನಕ್ಕೂ ಹೇಸಿ ರೋಸಿ 'ಹಾಳು ಸಂಸ್ಕೃತ ಹಾಳಾಗ! ಎಂದು ಬೈದು ಮತ್ತೆ ಕನ್ನಡ ತರಗತಿಗೇ ಸೇರಿದೆವು. ತಾಯಿಯ ಮಡಿಲಿಗೆ ಓಡುವಂತೆ!' ಇಂತಹ ಕೆಲವು ಘಟನೆಗಳು ಮುಂದೆ ಕುವೆಂಪು ಅವರು ಪ್ರತಿಪಾದಿಸಿದ ಸರ್ವೋದಯ ಸಮನ್ವಯ, ದೃಷ್ಟಿಗೆ ಬೀಜಾಂಕುರಗಳಾದವು.

ಬಾಲಕ ಕುವೆಂಪು ಧಾರ್ಮಿಕ ಗ್ರಂಥ ಮಾರ್ಕನ ಸುವಾರ್ತೆಯ ನಂತರ ಓದಿದ ಮತ್ತೊಂದು ಗ್ರಂಥ "ಶಂಕರಾಚಾರ್ಯರು ಹಸ್ತಾಮಲಕರಿಗೆ ಬೋಧಿಸಿದ್ದು" ಎಂಬುದು. ಇದರಲ್ಲಿನ ನರಕದ ವರ್ಣನೆ ಬಾಲಕನ ಪ್ರಜ್ಞೆಯನ್ನು ಗಾಢವಾಗಿ ಕಲಕಿದ್ದಲ್ಲದೆ ಅನೇಕ ದಿನಗಳ ಕಾಲ ಮಾಂಸಾಹಾರವನ್ನು ತ್ಯಜಿಸುವಂತೆ, ಪ್ರತಿಜ್ಞೆ ಮಾಡುವಂತೆ ಪ್ರೇರೇಪಿಸಿತ್ತು. "ಹೀಗೆಯೆ ನನ್ನ ಬದುಕಿನಲ್ಲಿ ಭಂಗಗೊಂಡ ಪ್ರತಿಜ್ಞೆಗಳಿಗೆ ಲೆಖ್ಖವಿಲ್ಲ. ಆಧ್ಯಾತ್ಮಿಕ ಸಾಧನೆಗೂ ಬ್ರಹ್ಮ ಚರ್ಯೆ ಪಾಲನೆಗೂ ಆಹಾರ ನಿಯಂತ್ರಣ ಬಹಳ ಅವಶ್ಯಕವೆಂಬ ಭ್ರಾಂತಿಗೆ ಸಿಕ್ಕಿ ಅನೇಕ ವರ್ಷಕಾಲ ಒಪ್ಪತ್ತು ಊಟಮಾಡಿ ರಾತ್ರಿ ನೆನೆಸಿಟ್ಟಿದ್ದ ಕಡಲೆ ತಿಂದು ಕಾಲಹಾಕಿದ್ದೆ" ಮುಂದೆ ಕುವೆಂಪು ಅವರು ರಾಮಾಯಣ ದರ್ಶನಂ ಬರೆಯುವ ಸಂದರ್ಭದಲ್ಲಿ 'ಕುವೆಂಪು ಮಾಂಸ ತಿನ್ನುವುದನ್ನು ಬಿಟ್ಟಿದ್ದಾರಂತೆ' ಎಂಬ ದಂತ ವಾರ್ತೆ ಹರಡಿತ್ತು. ಆದರೆ ಸ್ವತಃ ಕುವೆಂಪು ಅವರೇ ಅದನ್ನು ನಿರಾಕರಿಸಿ ವ್ಯಾಸ ವಾಲ್ಮೀಕಿಯರಂತೆಯೇ ತಾನೂ ಮಾಂಸಾಹಾರವನ್ನು ಸೇವಿಸುತ್ತಿದ್ದುದಾಗಿ ಹೇಳಿದ್ದಾರೆ.

ಕುವೆಂಪು ಅವರು ಲೋಯರ್ ಸೆಕೆಂಡರಿ ಪಬ್ಲಿಕ್ ಪರೀಕ್ಷೆಯನ್ನು (೧೯೨೦) ತೀರ್ಥಹಳ್ಳಿಯಿಂದ ೩೬ ಮೈಲಿದೂರದಲ್ಲಿರುವ ಶಿವಮೊಗ್ಗಕ್ಕೆ ಕಾಡು ಕೊರಕಲಿನ ದಾರಿಯಲ್ಲಿ ಸಾಗಿ ಹೋಗಿ ಬರೆದು ಪಾಸಾದರು. ಪರೀಕ್ಷೆ ಪಾಸಾಯಿತು ಇದೇ ಸಂದರ್ಭದಲ್ಲಿ ಮಂಜಪ್ಪಗೌಡರು ಒಂದು ಬೆಳಗ್ಗೆ ತೀರ್ಥಹಳ್ಳಿಯಿಂದ ಇಂಗ್ಲಾದಿಗೆ ಕುವೆಂಪು ಅವರನ್ನು ಕರೆದುಕೊಂಡು ಹೊರಟು. ದಾರಿಯಲ್ಲಿ ಲಾಂಗ್‌ಫೆಲೋ ಕವಿಯ 'ದಿಸಾಮ್ ಆಫ್ ಲೈಫ್' ಕವನದ ಮಹತ್ವವನ್ನು ಹೇಳಿ ಉದಾಹರಣೆ ಸಹಿತ ವಿವರಿಸಿದ್ದು

ಕುವೆಂಪು ಅವರ ಸುಪ್ತ ಚೇತನಕ್ಕೆ ಪ್ರಪ್ರಥಮ ದೀಕ್ಷಾ ಗುರುವಾಗಿ ಮಂತ್ರದೀಕ್ಷೆಯನ್ನು ಕೊಟ್ಟಿತು. ಮುಂದೆ ಭಗವತ್ ಗೀತೆ, ಉಪನಿಷತ್ತುಗಳ ಸಾರವನ್ನು ಹೀರಲು ಇದು ಭಾವಕೋಶದಲ್ಲಿ ವೇದಿಕೆಯನ್ನು ಸಜ್ಜುಗೊಳಿಸಿತು.

ಮುಂದಿನ ವಿದ್ಯಾಭ್ಯಾಸಕ್ಕೆ ಮೈಸೂರಿನ ವೆಸ್ಲಿಯನ್ ಮಿಶನ್ ಹೈಸ್ಕೂಲಿನ ನಾಲ್ಕನೆಯ ಫಾರಂಗೆ ಸೇರಿದರು. ಕಾಡಿನಿಂದ ಬಂದಿದ್ದ ಬಾಲಕನಿಗೆ ಮೈಸೂರು ಒಂದು ಅದ್ಭುತದ ಮತ್ತು ಸೌಂದರ್ಯದ ಔತಣ ಒದಗಿಸಿತ್ತು. ಕನ್ನಡಕ್ಕೆ ಅಷ್ಟೇನೂ ಒತ್ತಾಸೆಯಿಲ್ಲದ ವಾತಾವರಣದಲ್ಲಿ ಕುವೆಂಪು ಅವರ ಪ್ರಜ್ಞೆ ಇಂಗ್ಲಿಷ್ ಪ್ರಭಾವಕ್ಕೆ ಒಪ್ಪಿಕೊಂಡಿತು. ಕನ್ನಡ ಸಾಹಿತ್ಯಲೋಕ ಪರಿಚಿತವಾಗುವುದಕ್ಕೆ ಮುಂಚೆಯೆ "ಷೇಕ್ಸ್‌ಪಿಯರ್, ಮಿಲ್ಟನ್, ಕಾರ್ಲೇಲ್, ಗಿಬ್ಬನ್, ಡಾನಿಯಲ್ ಡೀಫೊ, ಸ್ವಿಫ್ಟ್, ಲ್ಯಾಂಬ್, ಡಿಕ್ಸಿನ್ಸ್, ರಸ್ಕಿನ್ ಮುಂತಾದ ಲೇಖಕರ ಭಾಗಗಳು ಕುವೆಂಪು ಅವರಿಗೆ ಹೊಸ ಲೋಕವನ್ನು ತೆರೆದು ಕೈಬೀಸಿ ಕರೆದವು.

ಮೈಸೂರು ಪಬ್ಲಿಕ್ ಲೈಬ್ರರಿಗೆ ಸದಸ್ಯನಾಗಿ ಓದಿನ ತಹ ತಹದಲ್ಲಿ ರಾಬಿನ್‌ಸನ್ ಕ್ರೂಸೋ ಕೃತಿಯನ್ನು ಆಪೋಶನ ತೆಗೆದು ಕೊಳ್ಳುತ್ತಿದ್ದಾಗಲೆ ಮೊಟ್ಟಮೊದಲಬಾರಿಗೆ ಶ್ರೀ ರಾಮಕೃಷ್ಣ-ವಿವೇಕಾನಂದ ವಿಷಯಕವಾದ ಕೃತಿ ಶ್ರೇಣಿಯ ದರ್ಶನ ಕುವೆಂಪು ಅವರಿಗೆ ಆಯಿತು.

ಹೈಸ್ಕೂಲಿನ ಎರಡನೆಯ ವರ್ಷ ಅಂದರೆ ಐದನೆಯ ಫಾರಂನಲ್ಲಿ ಇವರ ಇಂಗ್ಲಿಷ್ ಅಧ್ಯಾಪಕರಾಗಿದ್ದ ಶ್ರೀ ಸುಂದರ ಅವರು ತರಗತಿಯಲ್ಲಿ ಬ್ರೌನಿಂಗ್ ಕವಿಯ 'ಪೈಡ್‌ಪೈಪರ್ ಆಫ್ ಹ್ಯಾಮಲಿನ್' ಅನ್ನು ನಾಟಕೀಯವಾಗಿ ಓದಿ ತರಗತಿಯನ್ನು ನಗೆಯ ಹೊನಲಿನಲ್ಲಿ ತೇಲಿಸಿದ ಪರಿಣಾಮವಾಗಿ ಕುವೆಂಪು ಮುಂದೆ ೧೯೨೬ರಲ್ಲಿ ಬರೆದ 'ಬೊಮ್ಮನಹಳ್ಳಿಯ ಕಿಂದರಿ ಜೋಗಿ'ಗೆ ಪ್ರೇರಣೆ ನೀಡಿತು. ಹಾಗೆಯೇ ಶ್ರೀ ಸುಂದರ ಅವರು ರವೀಂದ್ರನಾಥ ಠಾಕೂರರ ಗೀತಾಂಜಲಿಯನ್ನು ಕುವೆಂಪು ಹೃದಯದಲ್ಲಿ ಬಿತ್ತಿದ್ದ ಕಾರಣಪುರುಷರಾದರು.

ಕುವೆಂಪು ಅವರು ಆರಂಭದಲ್ಲಿ ಬರೆಯಲು ಪ್ರಾರಂಭಿಸಿದ್ದು ಇಂಗ್ಲಿಷ್ ಪದ್ಯಗಳನ್ನು ಹೆಡ್ಮಾಸ್ಟರ್ ಸುಬ್ಬಕೃಷ್ಣಯ್ಯನವರಿಂದ ಇಂಗ್ಲೀಷ್ ಪದ್ಯದ ಛಂದಸ್ಸಿನಲ್ಲಿ ಲಘು ಗುರುಗಳ ವಿನ್ಯಾಸವನ್ನು ಕಲಿತುಕೊಂಡು ಇಂಗ್ಲಿಷಿನಲ್ಲಿ ಪದ್ಯಗಳನ್ನು ಬರೆಯಲು ಪ್ರಾರಂಭಿಸಿದರು. ಪ್ರಿನ್ಸಿಪಾಲರ ಬೀಳ್ಕೊಡಿಗೆ ಸಮಾರಂಭಕ್ಕೆಂದು ಬರೆದ 'ಆಡ್ಯೂ' ಎಂಬ ಪದ್ಯವೇ ಕುವೆಂಪು ಅವರ ಮೊದಲ ಇಂಗ್ಲಿಷ್ ಪದ್ಯ.

ಕುವೆಂಪು ಅವರು ಮೈಸೂರಿನ ಸಂತೆ ಪೇಟೆಯ ಕಿಷ್ಕಿಂದೆ ರಸ್ತೆಯಲ್ಲಿದ್ದ ಹೆಸರಿನ ಮಟ್ಟಿಗೆ 'ಆನಂದ ಮಂದಿರ'ವಾಗಿದ್ದ ಹೋಟೆಲಿನಲ್ಲಿ ೩-೪ ವರ್ಷ ವಾಸಿಸಿದರು. ಈ

ಸಂದರ್ಭದಲ್ಲಿ ಕುವೆಂಪು ಅವರ ಅಧ್ಯಯನದ ವ್ಯವಸಾಯ ಅನವರತವಾಗಿ ಸಾಗಿತು. 'ಆ ವಾಗ್ದೇವಿಯ ಕೃಪೆ ನನಗೆ (ಕುವೆಂಪು) ಸುಲಭವಾಗಿ ಲಭಿಸಿ ಬಿಟ್ಟಿತೆಂದು ಯಾರೂ ಭಾವಿಸದಿರಲಿ. ಅದಕ್ಕಾಗಿ ತುಂಬ ಕಷ್ಟಪಡಬೇಕಾಯಿತು; ಹಗಲಿರುಳೂ ನಿಷ್ಠೆಯಿಂದ ಸಾರಸ್ವತ ಅನುಸಂಧಾನದಲ್ಲಿ ಮನಸ್ಸು ಮಗ್ನವಾಗಿತ್ತು... ಯಾರ ನೆರವನ್ನೂ ಹಾರೈಸದೆ ಏಕಾಂಗ ಸಾಹಸಿಯಾಗಿಯೆ ಮುಂದುವರಿಯಬೇಕಾಗಿತ್ತು. ಅದರಿಂದ ಒಂದು ದೊಡ್ಡ ಲಾಭವಾಯಿತು. ಸಾಹಿತ್ಯದೊಡನೆ ಹೋರಾಡಿ ಅರ್ಥದೊಡನೆ ಗುದ್ದಾಡಿ ತಪ್ಪೊನೆಪ್ಪೊ ಭಾವಗಳೊಡನೆ ಗರುಡಿಯಾಡಿ, ನನ್ನ ಬುದ್ಧಿಗೆ ವ್ಯಾಯಮ ಒದಗಿ ಬಲಿಷ್ಠವಾಯಿತು. ಉಜ್ಜಿ ಉಜ್ಜಿ ನನ್ನ ಭಾವ ಶಕ್ತಿ ಉಜ್ವಲವಾಯಿತು. ಪ್ರತಿಭೆಗೆ ಒಂದು ಕೆಚ್ಚು ಲಭಿಸಿ ಆತ್ಮಪ್ರತ್ಯಯ ನಿಷ್ಠೆಗೆ ನಾಂದಿಯಾಯಿತು. ಆದ್ದರಿಂದ ನಾನು ಎಸ್.ಎಸ್.ಎಲ್.ಸಿ. ತರಗತಿಯಲ್ಲಿರುವಾಗಲೆ ಷೇಕ್ಸ್‌ಪಿಯರ್ ಪುಸ್ತಕವನ್ನು ಓದಲು ಸಮರ್ಥನಾದೆ.

ಕುವೆಂಪು ಮೈಸೂರಿಗೆ ಬಂದ ಮೇಲೆ ೧೯೨೦ರಲ್ಲಿ ಬಾಲಗಂಗಾಧರತಿಲಕ್‌ರು ತೀರಿಕೊಂಡು ಮಹಾತ್ಮಾಗಾಂಧೀಯವರು ಅಸಹಕಾರ ಚಳುವಳಿ ಘೋಷಿಸಿದ ಸುಮಾರಿನಲ್ಲಿ ಕುವೆಂಪು ಅವರಿಗೆ ರಾಜಕೀಯ ವಿದ್ಯಾಮಾನಗಳ ಅರಿವು ಮೂಡಿತು. ಹೈಸ್ಕೂಲ್ ವಿದ್ಯಾರ್ಥಿಗಳ ಚಳುವಳಿಯ ಮೆರವಣಿಗೆಯಲ್ಲಿ ತಾವೂ ಒಬ್ಬರಾಗಿ ಸಾಗಿ 'ಬಾನ್ ಫೈರ್'ನಲ್ಲಿ ತಮ್ಮ ಟೋಪಿ ಮತ್ತು ಇದ್ದಂತಹ ಒಂದೇ ಒಂದು ಕೋಟನ್ನು ಬೆಂಕಿಗೆ ಅರ್ಪಿಸಿದರು. ಅಂದಿನಿಂದ ಮುಂದೆ ಗಾಂಧಿ ಟೋಪಿ ಮತ್ತು ಖಾದಿ ಬಟ್ಟೆಗಳನ್ನೇ ತೊಡುವ ವ್ರತ ತೊಟ್ಟರು. ಆದರೆ ಇಂಗ್ಲಿಷ್ ಭಾಷೆಯನ್ನು ಮಾತ್ರ ಬಿಡಲಿಲ್ಲ. "ಇಂಗ್ಲೀಷರ ಮೇಲೆ ಎಷ್ಟು ದ್ವೇಷವಿದ್ದಿತೋ ಅದಕ್ಕೆ ದ್ವಿಗುಣಿತ, ತ್ರಿಗುಣಿತವಾಗಿ ಇಂಗ್ಲಿಷ್ ಭಾಷೆಯ ಮೇಲೆ ನನಗೆ ಗೌರವ ಮಮತೆಗಳಿದ್ದವು... ಮೊದಲ ಕಾರಣ ಇಂಗ್ಲಿಷ್ ಸಾಹಿತ್ಯಕ್ಕೆ ನಾನು ಮಾರುಹೋಗಿದ್ದೆ. ಎರಡನೆಯ ಕಾರಣ... ನನಗೆ ಚಿಕ್ಕಂದಿನಿಂದಲೂ ಸಹಜವಾಗಿದ್ದ ಆಧ್ಯಾತ್ಮಿಕ ಆಸಕ್ತಿಗೆ ವಿಚಾರಾತ್ಮಕವಾದ ಜಿಜ್ಞಾಸೆಗೆ ಆಹಾರ ಒದಗಿದುದು ಆಂಗ್ಲೇಯ ಭಾಷೆಯ ಮುಖಾಂತರವೇ. ಪ್ರಚಲಿತ ವೈದಿಕ ಹಿಂದೂ ಧರ್ಮದ ಅನೇಕ ಶ್ರದ್ಧೆ ಆಚಾರ ವಿಚಾರಗಳಲ್ಲಿ ನನಗೆ ನಂಬುಗೆ ಇರಲಿಲ್ಲ ಮಾತ್ರವಲ್ಲ ಅತ್ಯಂತ ತಿರಸ್ಕಾರವೂ ಇತ್ತು... ಪ್ರಾಚೀನ ಮಹರ್ಷಿಗಳ ವೇದಾಂತ ವಾಣಿ ನನ್ನ ಪ್ರಜ್ಞೆಗೆ ಪ್ರವೇಶಿಸಲು ಸಾಧ್ಯವಾದುದು ಇಂಗ್ಲಿಷ್ ಭಾಷೆಯ ಕೃಪೆಯಿಂದಲೇ! ಮೂರನೆಯದಾಗಿ... ಶೂದ್ರಾದಿ ವರ್ಗದವರನ್ನು ತಲೆಯೆತ್ತುವಂತೆ ಪ್ರೇರೇಪಿಸಿದ್ದೂ ಇಂಗ್ಲಿಷರೇ... ಇಂಗ್ಲಿಷ್ ಆಳುವವರ ಅಧಿಕೃತ ಭಾಷೆಯಾಗಿ ಸಮಸ್ತ ಭರತ ಖಂಡವನ್ನು ಮೊತ್ತ ಮೊದಲಿಗೆಂಬಂತೆ ಏಕತ್ವದಲ್ಲಿ ಜಿಗಿದು ನಮ್ಮಲ್ಲಿ ಧಾರ್ಮಿಕ ಭೂಮಿಕೆಯಲ್ಲಿ ಮಾತ್ರವೇ ಇದ್ದ ಅಖಿಲ ಭಾರತೀಯತ್ವವು ರಾಜಕೀಯಾದಿ ಭೂಮಿಕೆಗಳಲ್ಲಿಯೂ ನಿಶ್ಚಿತವಾಗುವಂತೆ ಕೃಪೆಗೈದಿತ್ತು... ಇಂಗ್ಲಿಷ್ ಮಾತನಾಡುವವರು 'ಪೂಜ್ಯ'ರಾಗಿ ದಕ್ಕುವಂತೆ

"ದೊರೆ"ಗಳಾದರು, "ಸಾಹೇಬ"ರೂ ಆದರು. ಆ ಕಾರಣದಿಂದಲೂ ಆ ಭಾಷೆ ನನ್ನಂತಹ ಎಳೆಯರ ಮೇಲೆ ತನ್ನ ಪ್ರಭುತ್ವಾಧಿಕಾರ ಸ್ಥಾಪಿಸಿ ಪೂಜ್ಯಸ್ಥಾನವನ್ನು ಗಿಟ್ಟಿಸಿಕೊಂಡು ಬಿಟ್ಟಿತು!" ಈ ಹಿನ್ನೆಲೆ ಮತ್ತು ಸಂಕಲ್ಪಗಳಿಂದ ಕುವೆಂಪು ಅವರು ೧೯೨೧ರಿಂದ ಮೊದಲುಗೊಂಡು ಪುಂಖಾನುಪುಂಖವಾಗಿ ನೂರಾರು ಇಂಗ್ಲಿಷ್ ಕವನಗಳನ್ನು ಬರೆದರು. ಈ ಕವನಗಳಿಗೆ ಶ್ರೀ ಸ್ವಾಮಿ ವಿವೇಕಾನಂದ ಶ್ರೀ ರಾಮಕೃಷ್ಣ ಪರಮಹಂಸ, ಶ್ರೀ ಕೃಷ್ಣ ಚೈತನ್ಯ, ರವೀಂದ್ರನಾಥ ಠಾಕೋರ್ ಉಪನಿಷತ್ತುಗಳು ಮತ್ತು ಭಗವದ್ಗೀತೆಗಳು ಪ್ರೇರಣೆಯಾಗಿದ್ದವು.

ಕುವೆಂಪು ಅವರಿಗೆ ಆಗಿನ ಕಾಲದ ಕನ್ನಡ ಸಾಹಿತ್ಯರಂಗದಲ್ಲಿ ಕೆಲಸ ಮಾಡುತ್ತಿದ್ದ ಯಾವ ಸಾಹಿತಿಯ ಸಂಪರ್ಕವೂ ಇರಲಿಲ್ಲ. ಅವರು ೧೯೨೪ರಲ್ಲಿ ಮಹಾರಾಜಾ ಕಾಲೇಜಿಗೆ ಸೇರಿ ಬಿ.ಎ. ತೇರ್ಗಡೆಯಾಗಿ ಎಂ.ಎ. ತರಗತಿಗೆ ಬಂದಾಗ ಅನೇಕ ಸಾಹಿತಿಗಳ ಸಂಪರ್ಕ ಬಂದಿತು.

ಕುವೆಂಪು ಅವರು ಎಂಟ್ರೆನ್ಸ್ ಪರೀಕ್ಷೆಗೆ ಆರಿಸಿಕೊಂಡ ವಿಷಯಗಳು ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತಶಾಸ್ತ್ರವಾಗಿತ್ತು. ಕಲೆ, ಸಾಹಿತ್ಯ ತತ್ವಶಾಸ್ತ್ರಗಳ ಕಡೆ ಬಂದಿದ್ದ ವ್ಯಕ್ತಿತ್ವಕ್ಕೆ ಇದು ಸ್ವಲ್ಪಮಟ್ಟಿಗೆ ಅಡಚಣೆಯನ್ನೇ ಉಂಟು ಮಾಡಿತು. ಉಪಾಧ್ಯಾಯರು ಪ್ರಶ್ನೆ ಕೇಳಿದಾಗ ಬೆಪ್ಪು ಬೆಪ್ಪಾಗಿ ಉತ್ತರಿಸಿ "ಶುದ್ಧ ಗಮಾರನಂತೆ ಕಾಣುತ್ತೀಯಾ" ಎಂದು ಬೈಗುಳ ಪಡೆದುಕೊಂಡಿದ್ದು ಉಂಟು.

೧೯೨೪ ಜುಲೈ ೨ನೇ ತಾರೀಕು ಕುವೆಂಪು ಅವರ ಬರವಣಿಗೆಯ ದಿಕ್ಕನ್ನು ಬದಲಿಸಿದ ದಿನ. ಶ್ರೀ ಎಂ.ಎಚ್. ಕೃಷ್ಣ ಐಯ್ಯಂಗಾರ್ ಅವರ ಸಲಹೆ ಮೇರೆಗೆ ಕುವೆಂಪು ಅವರು ಐರಿಷ್ ಕವಿಯಾದ ಶ್ರೀಯುತ ಕಸಿನ್ಸ್ ಅವರನ್ನು ಮೈಸೂರಿನಲ್ಲಿ ಭೇಟಿ ಮಾಡಿದರು ಕುವೆಂಪು ಅವರ ಇಂಗ್ಲಿಷ್ ಕವನಗಳನ್ನು ಓದಿದ ಕಸಿನ್ಸ್ ಅವರು "ಏನಿದೆಲ್ಲ ಕಗ್ಗ? ನಿಮ್ಮ ಮೈಮೇಲೆ ನೋಡಿದರೆ ತಲೆಯಿಂದ ಕಾಲಿನವರೆಗೂ ಸ್ವದೇಶೀ ವಸ್ತ್ರಗಳೇ ಕಾಣುತ್ತವೆ. ಇದು ಮಾತ್ರ ಸ್ವದೇಶಿಯಲ್ಲ. ನಿಮ್ಮ ಭಾಷೆಯಲ್ಲಿ ಏನಾದರೂ ಬರೆದಿದ್ದೀರಾ?" ಎಂದು ಕೇಳಿದಾಗ ಕುವೆಂಪು ಅವರು ಸೂಕ್ತವಾಗಿ ಉತ್ತರಿಸದಾದರು. ಆಗ ಕಸಿನ್ಸ್ ಅವರು ರವೀಂದ್ರನಾಥ ಠಾಗೋರರನ್ನು ಉದಾಹರಿಸಿ 'ನೀವು ಇಂಗ್ಲಿಷಿನಲ್ಲಿ ಸೃಜನ ಸಾಹಿತ್ಯ ಸೃಷ್ಟಿ ಮಾಡಲಾರಿರಿ ಅದು ನಿಮಗೆ ಪರಭಾಷೆ. ಹುಟ್ಟಿನೊಡನೆ ಬಂದ ಭಾಷೆಯಲ್ಲಿ ಮಾತ್ರ ಉತ್ತಮ ಸೃಜನ ಸಾಹಿತ್ಯ ಸೃಷ್ಟಿಯಾಗಬಲ್ಲದು. ಅದರಲ್ಲಿಯೂ ಕವಿತೆಯಲ್ಲಂತೂ ಉತ್ತಮ ಸೃಜನ ಸಾಹಿತ್ಯ ಯಾರಿಗೂ ಪರಭಾಷೆಯಲ್ಲಿ ಸಾಧ್ಯವಿಲ್ಲ. ಅದು ನಿಮಗೆ ಗೊತ್ತಾಗುವುದೂ ಇಲ್ಲ. ಅದನ್ನು ಓದುವ ನಮಗೆ ಗೊತ್ತಾಗುತ್ತದೆ ಅದೆಂತಹ ನಗೆಪಾಟಲಸೃಷ್ಟಿ ಎಂಬುದು" ಎಂದು ಹೇಳಿದರು.

ಕುವೆಂಪು ಅವರ ಅಂತರಂಗಕ್ಕೆ ಈ ಮಾತುಗಳು ತಟ್ಟಿದ್ದರೂ ಅವರ ಇಂಗ್ಲಿಷ್ ಗರ್ವ ಈ ಮಾತುಗಳನ್ನು ತಕ್ಷಣವೇ ಒಪ್ಪಿಕೊಳ್ಳಲು ಸಿದ್ಧವಾಗದೆ ಈ ಘಟನೆ ನಡೆದ ನಂತರವೂ ಸುಮಾರು ೬-೭ ವರ್ಷಗಳು ಕುವೆಂಪು ಅವರ ಪದ್ಯ ರಚನೆ ಇಂಗ್ಲೀಷಿನಲ್ಲಿ ಸಾಗಿತ್ತು. ಆದರೆ ಕನ್ನಡದಲ್ಲೂ ಜೊತೆ ಜೊತೆಗೆ ಪದ್ಯ ರಚನೆ ಪ್ರಾರಂಭಿಸಿದ್ದು ಒಂದು ಮಹತ್ತರ ಬದಲಾವಣೆಗೆ ನಾಂದಿಯಾಯಿತು. "ಪೂವು" ಎಂಬ ಬಿಡಕಲು ಕವನವನ್ನು ಕನ್ನಡದಲ್ಲಿ ರಚಿಸಿ ಕನ್ನಡ ಬರವಣಿಗೆಗೆ ಕುವೆಂಪು ನಾಂದಿ ಹಾಡಿದರು. ಕುವೆಂಪು ಚೇತನದಲ್ಲಿ ಭಾವಾಂಶ, ಚಿಂತನಾಂಶ, ಕಲ್ಪನಾಂಶಗಳು ಅಗಾಧವಾಗಿದ್ದರೂ ರೂಪಾಂಶದ ಕೊರತೆಯ ಕಾರಣ ಈ 'ಪೂವು' ಕವನ ಸೊರಗಿ ಹೋಗಿತ್ತು. ಆ ನಂತರವೇ ಕುವೆಂಪು ಅವರ ವ್ಯಕ್ತಿತ್ವ ಕನ್ನಡ ಪರಂಪರೆಗೆ ಧಾಳಿ ಇಟ್ಟಿತು. ಪಂಪನಿಂದ ಮೊದಲಗೊಂಡು ಲಕ್ಷ್ಮೀಶನವರೆಗೆ ಮುಂದುವರಿದು ಮುದ್ದಣನವರೆಗೆ ಈಜಿ, ರೂಪಾಂಶ, ನಾದಾಂಶಗಳನ್ನು ಸೂರೆಗೈದಿತು. ಮುಂದೆ ಕನ್ನಡದಲ್ಲಿ ಪ್ರವಾಹದೋಪಾದಿಯಲ್ಲಿ ಬರವಣಿಗೆ ಸಾಗಿತು. ಈ ಮಧ್ಯ ಜೂನ್ ೧೯೨೪ರಲ್ಲಿ ಕುವೆಂಪು ಅವರಿಗೆ ಮಾತೃ ವಿಯೋಗವಾಯಿತು. ಮೊದಲನೆ ವರ್ಷದ ಬಿ.ಎ. ಓದುವಾಗ ೧೯೨೪ನೆಯ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನಕ್ಕೂ ಹೋಗಿ ಗಾಂಧೀಜಿಯ ದರ್ಶನ ಪಡೆದು ಬಂದರು. ಮುಂದಿನ ಎರಡು ಮೂರು ವರ್ಷಗಳಲ್ಲಿ ಕನ್ನಡದಲ್ಲಿ ನಿರಂತರವಾಗಿ ಬರವಣಿಗೆಯನ್ನು ಮುಂದುವರಿಸಿದ್ದೇ ಅಲ್ಲದೆ ಟಾಲ್‌ಸ್ಟಾಯ್‌ನ 'ರಿಸರಕ್ಷನ್' "ಅನ್ನಾ ಕೆರಿನಿನಾ" ಮತ್ತು "ವಾರ್ ಅಂಡ್ ಪೀಸ್"ಗಳನ್ನು ಆಪೋಷನಗೊಂಡದ್ದಲ್ಲದೆ ಇಂಗ್ಲೀಷಿನ ಮೂಲಕ ಬಂದ ಹೋಮರ್ ವರ್ಜಿಲ್ ಡಾಂಟೆ ಮಿಲ್ಟನ್, ಕಂಬ, ಅರವಿಂದ ಎಲ್ಲರನ್ನೂ ಅರಗಿಸಿಕೊಂಡರು. ಈ ಮಧ್ಯೆ ೧೯೨೬ ಅಕ್ಟೋಬರ್‌ನಲ್ಲಿ ಸಂತೇ ಪೇಟೆಯ ಕಿಷ್ಕಿಂದೆಯಿಂದ ಸ್ವಾಮಿ ಸಿದ್ಧೇಶ್ವರಾನಂದರ ಕೃಪೆಯಿಂದ ತಮ್ಮ ವಾಸ್ತವ್ಯವನ್ನು ರಾಮಕೃಷ್ಣಾಶ್ರಮಕ್ಕೆ ಬದಲಿಸಿಕೊಂಡು ಅಂತರಂಗದ ವಿಕಾಸಕ್ಕೆ ಅನುಗುಣವಾದ ಬಾಹ್ಯ ಪರಿವೇಶ ಪರಿಸರವನ್ನೂ ಪಡೆದುಕೊಂಡರು. ಬಿ.ಎ. ಪದವಿಯಲ್ಲಿ ಕುವೆಂಪು ಅವರು ಆರಿಸಿಕೊಂಡ ವಿಷಯಗಳು ತತ್ವಶಾಸ್ತ್ರ ಮತ್ತು ಮನಶ್ಶಾಸ್ತ್ರ ಹಾಗೂ ಎಂ.ಎ. ಪದವಿಯಲ್ಲಿ ಆರಿಸಿಕೊಂಡದ್ದು ಕನ್ನಡ ಸಾಹಿತ್ಯ. ಹೀಗಾಗಿ ಕಾಡಿನಲ್ಲಿ ಅಡ್ಡಾದಿಡ್ಡಿ ಸಾಗುತ್ತಿದ್ದ ಅವರ ಓದು ಮತ್ತು ಗ್ರಹಿಕೆಯ ಕ್ರಮಗಳಿಗೆ ಅಚ್ಚುಕಟ್ಟಾದ ಶಿಸ್ತು ಕೂಡ ಲಭ್ಯವಾಯಿತು. ಎಂ.ಎ. ಮುಗಿಸಿ ಕುವೆಂಪು ಅವರು ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇರಿದರು. ರಾಮಕೃಷ್ಣಾಶ್ರಮದ ಪರಿಸರದಲ್ಲಿ ಕುವೆಂಪು ಅವರ ಸಾಹಿತ್ಯ-ಗದ್ಯ ಪದ್ಯ ನಾಟಕ, ಪ್ರಬಂಧ, ಜೀವನ ಚರಿತ್ರೆ -ಇತ್ಯಾದಿ ಬಹುಮುಖವಾಗಿ ರಸಾವೇಶದಿಂದ ಸಾಗುತ್ತಿತ್ತು. ೧೯೩೬ನೇ ಜನವರಿಯಲ್ಲಿ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯಕ್ಕೂ ನಾಂದಿ ಪ್ರಾರಂಭವಾಗಿತ್ತು.

೧-೫-೧೯೩೭ರ ಇಸವಿಯಲ್ಲಿ ತಮಗಿಂತ ೧೬ ವರ್ಷ ಚಿಕ್ಕವರಾಗಿದ್ದ ದೇವಂಗಿ ರಾಮಣ್ಣಗೌಡರ ಪುತ್ರಿ ಹೇಮಾವತಿಯನ್ನು ಮದುವೆಯಾದರು. ವಿಚಿತ್ರವೆಂದರೆ ಈ ಹೇಮಾವತಿಗೆ ೧೯೨೧ರಲ್ಲಿ ಹೆಸರು ಸೂಚಿಸಿದವರು ಕುವೆಂಪು ಅವರೇ. ಕುವೆಂಪು ಅವರು ಸಂಸಾರಸ್ಥರಾದ ಮೇಲೆ ಮೈಸೂರಿನ ಒಂಟಿ ಕೊಪ್ಪಲಿನಲ್ಲಿ ಮನೆ ಕಟ್ಟಿ ವಾಸಿಸಿದರು. ಮುಂದೆ ವೃತ್ತಿಯಲ್ಲಿ ಮೇಲ ಮೇಲಕ್ಕೆ ಸಾಗುತ್ತ, ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರಾಗಿ, ಮೈಸೂರು ವಿ.ವಿಯ ಕುಲಪತಿಗಳಾಗಿ ಕೆಲಸ ನಿರ್ವಹಿಸಿದರು. ಈಗಿನ 'ಮಾನಸಗಂಗೋತ್ರಿ' ಕುವೆಂಪು ಅವರ ಕಲ್ಪನೆಯ ಸಾಕಾರರೂಪವಾಗಿ ಸಂಶೋಧನಾಂಗ, ಬೋಧನಾಂಗ, ಪ್ರಸಾರಾಂಗಗಳೆಂಬ ತ್ರಿಮುಖ ಬೆಳವಣಿಗೆಗೆ ಕಾರಣವಾಯಿತು.

ಕುವೆಂಪು ಅವರು ೧೯೨೪ರಲ್ಲಿ ಅಮಲನ ಕಥೆ ಬರೆದಾಗ ಎಂತೋ ೧೯೪೯ರಲ್ಲಿ ರಾಮಯಣ ದರ್ಶನಂ ಪ್ರಕಟವಾದಾಗಲೂ ಕೆಲವು ವಿಮರ್ಶಕರು ಹುಬ್ಬೇರಿಸಿ ತ್ವೇಷಗೊಂಡಿದ್ದು ಕನ್ನಡ ವಿಮರ್ಶಾ ಚರಿತ್ರೆಯ ಒಂದು ಭಾಗವಾಗಿದೆ. ಆದರೆ ಒಂದೆರಡು ಕೊಂಕುಗಳು ಕಾಣಿಸಿಕೊಂಡರೂ ಕನ್ನಡದ ಬಹು ವ್ಯಾಪ್ತಿಯ ಎಲ್ಲ ವರ್ಗದ, ಎಲ್ಲ ಜಾತಿಯ ಮನಸ್ಸುಗಳೂ ಕುವೆಂಪುರವರಿಗೆ ಮತ್ತು ಅವರ ಸಾಹಿತ್ಯಕ್ಕೆ ಆದರವನ್ನೂ ಮನ್ನಣೆಯನ್ನೂ ಕೊಟ್ಟಿವೆ. ಕುವೆಂಪು ಅವರಿಗೆ ಇದ್ದ ಅಪಾರವಾದ ಅದೃಶ್ಯ ಸಾಮುದಾಯಿಕ ಬೆಂಬಲ ಯಾವ ಕನ್ನಡ ಬರಹಗಾರರಿಗೂ ಲಭ್ಯವಾಗಿಲ್ಲ.

"ಕುವೆಂಪು ೧೯೨೮ರಲ್ಲಿ ಬರೆದ ತಮ್ಮ ಆರಂಭದ ಕೃತಿಯಾದ 'ಜಲಗಾರ' (ನಾಟಕದಲ್ಲಿ) ಜಾತಿ ಸಮಸ್ಯೆಯನ್ನು ಧೈರ್ಯವಾಗಿ, ನೇರವಾಗಿ, ನಿರ್ದಾಕ್ಷಿಣ್ಯವಾಗಿ ಪ್ರಾಂಜಲವಾಗಿ ಪ್ರಸ್ತಾಪಿಸಿದರು, ಮಂಡಿಸಿದರು. ಮುಂದೆ ಕಾನೂರು ಹೆಗ್ಗಡತಿಯಿಂದ ಮಲೆಗಳಲ್ಲಿ ಮದುಮಗಳು ತನಕ ಅನೇಕ ಕೃತಿಗಳಲ್ಲಿ ಅಗತ್ಯವಿರುವಲ್ಲೆಲ್ಲ ಅವರು ಈ ಸಮಸ್ಯೆಯನ್ನು ತೆರೆದು ತೋರಿಸಿದ್ದಾರೆ." ಹಾಗೆಯೇ ಮೇಲು ಜಾತಿಗಳ ಯಾಜಮಾನ್ಯ ವಂಚನೆ ದಮನಗಳನ್ನು ವಿರೋಧಿಸುತ್ತಲೇ ವಿದೇಶೀ ಧರ್ಮದ ಬಲು ಸೂಕ್ಷ್ಮ ಕಪಟ ಆಮಿಷ, ಆಕ್ರಮಣಗಳನ್ನೂ ವಿರೋಧಿಸುತ್ತಾರೆ.

"ರಾಮಾಯಣದ ಮೂಲಕ ಕುವೆಂಪು ವಾಲ್ಮೀಕಿ-ಭಾಸ-ಕಾಳಿದಾಸ-ಭವಭೂತಿ ಮುಂತಾದ ಸಂಸ್ಕೃತ ಕಾವ್ಯಪರಂಪರೆ ಜತೆಗೂ ಬೌದ್ಧ, ಜೈನ, ಶಾಕ್ತ, ತಾಂತ್ರಿಕ, ಮುಂತಾದ ಧಾರ್ಮಿಕ ಪರಂಪರೆಗಳ ಜತೆಗೂ ಕನ್ನಡದ ಜೈನ ವೈದಿಕ ರಾಮಾಯಣ ಪರಂಪರೆಯ ಜತೆಗೂ, ಕಂಬ-ತುಲಸಿ ಮುಂತಾದ ಭಾರತೀಯ ದೇಶ ಭಾಷಾ ಪರಂಪರೆಗಳ ಜತೆಗೂ ಅಸಂಖ್ಯಾತವಾದ ಕನ್ನಡ-ಭಾರತೀಯ ಜಾನಪದ ರಾಮಾಯಣ ಪರಂಪರೆಗಳ ಜತೆಗೂ ಅಥವಾ ರಾಮಾಯಣವೇನು ಒಟ್ಟೂ ಕನ್ನಡ-ಭಾರತೀಯ-ಸಂಸ್ಕೃತ-ದೇಶಭಾಷಾ-ಜಾನಪದ ಪುರಾಣ ಮಹಾಕಾವ್ಯ ಪರಂಪರೆಯ ಜತೆಗೂ

ಹೆಣೆಗೆಗೊಂಡಿದ್ದಾರೆ" ಹೋಮರ್, ವರ್ಜಿಲ್ ಡಾಂಟೆಯವರಲ್ಲದೆ "ಮಿಲ್ಟನ್ ಮಹಾಕಾವ್ಯದಿಂದ (ಕುವೆಂಪು) ಅವರು ತಂತ್ರ-ಶೈಲಿ-ಗತಿ-ಛಂದೋ ಸೂಕ್ಷ್ಮಗಳು ಮುಂತಾದವನ್ನಲ್ಲದೆ ಮಹೋಪಮೆಯಂಥ ಹೊಸ ಕಾವ್ಯಾಂಶವನ್ನು ಪಡೆದುಕೊಂಡರು" ಪಿಂತೆ ವಾಲ್ಮೀಕಿಯುಲಿದ ಕಥೆಯಾದೊಡಂಕನ್ನಡದಿ ಬೇರೆ ಕಥೆಯೆಂಬಂತೆ, ಬೇರೆ ಮೈಯ್ಯಾಂತಂತೆ ಮರು ಹುಟ್ಟು ಒಡೆದಂತೆ ಸೃಜಿಸಿದರು ರಾಮಾಯಣದ ಕೃತಿ ನೇತ್ರದ ಮೂಲಕ ಮತಿ ಲೋಕದೊಳ್ ಪೊಳೆವ ಋತ ಕಲ್ಪನಾ ಮೂರ್ತಂಗಳನು; ಭಾವಚರ ನಿತ್ಯಸತ್ಯಗಳನು; ಕುವೆಂಪು ತೆರೆದು ತೋರಿಸಿದರು. ಅಂತೆಯೇ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಮಲೆನಾಡಿನ ಬದುಕನ್ನು ಚಿತ್ರಿಸುವುದರ ಮೂಲಕ ಕಾಲ ಘಟ್ಟವೊಂದರಲ್ಲಿ ಅನೇಕ ಸಮಾಜಗಳ ಚಲನೆಯನ್ನು ಅಂತರ್ಗತ ಮಾಡಿ ಮದುಮಕ್ಕಳ ಜೋಡಿಯ ಸೆಳೆತ ಸಂಬಂಧಗಳನ್ನು ಸೂಕ್ಷ್ಮವಾಗಿ ಚಿತ್ರಿಸಿದರು.

"ಕುವೆಂಪು ನಮ್ಮ ಕಾಲದ ಅತಿ ಸಂಕೀರ್ಣ ವ್ಯಕ್ತಿತ್ವದ ಪ್ರತಿಭೆ ಎಂದು ನಿರ್ವಿವಾದವಾಗಿ ಹೇಳಬಹುದು. ಅವರನ್ನು ಕವಿಯಾಗಿಯೇ, ಕಾದಂಬರಿಕಾರರನ್ನಾಗಿಯೇ, ತತ್ವ ಮೀಮಾಂಸಕರನ್ನಾಗಿಯೇ, ವಿಚಾರವಾದಿಯಾಗಿಯೇ ಪರಿಗಣಿಸಿದಾಗ, ಅಥವಾ ಬಿಡಿ ಬಿಡಿಯಾಗಿ ಕಥೆ ಕಾವ್ಯಗಳನ್ನು ಅವಲೋಕಿಸಿದಾಗ ಸ್ಪಷ್ಟವಾಗಿ ಸರಳವಾಗಿ ಕಾಣುವ ವ್ಯಕ್ತಿತ್ವ ಒಟ್ಟಂದದಲ್ಲಿ ನೋಡಿದ ಕೂಡಲೆ ಅತ್ಯಂತ ಸಂಕೀರ್ಣವಾಗಿ ಕಾಣುತ್ತದೆ. ಒಂದು ಕಡೆ ಇಂಗ್ಲಿಷ್ ಜ್ಞಾನ ಅತಿ ಮುಖ್ಯವೆಂದು ಶೂದ್ರರನ್ನೆಲ್ಲ ಎಚ್ಚರಿಸುತ್ತಾರೆ. ಕನ್ನಡದ ವಿಷಯಕ್ಕೆ ಬಂದಾಗ ಇಂಗ್ಲಿಷನ್ನು ಪೂತನಿ ಎಂದು ಕಟುವಾಗಿ ಟೀಕಿಸುತ್ತಾರೆ. ಭಾರತೀಯ ಸನಾತನ ಧರ್ಮದ ಅತ್ಯಂತ ಕಟು ಟೀಕೆ ವಿಮರ್ಶೆ ಕುವೆಂಪುರವರಲ್ಲಿ ಕಾಣಬಹುದು. ಅಂತೆಯೆ ಉಪನಿಷದ್ ದರ್ಶನಗಳ ಆರಾಧನೆಯನ್ನೂ ಅವರಲ್ಲಿ ಕಾಣಬಹುದು. ಅವರ ಜೀವನಾದ್ಯಂತ ಎಂದೂ ಯಾವ ದೇವಸ್ಥಾನಕ್ಕೂ ಕಾಲಿಡಲಿಲ್ಲ. ಆದರೆ ಅಷ್ಟೇ ಗಾಢವಾಗಿ ಧ್ಯಾನ, ತಪಸ್ಯೆ, ಪ್ರಾರ್ಥನೆಗಳನ್ನು ಪ್ರತಿಪಾದಿಸಿದರು. ಆದ್ದರಿಂದಲೇ ಅನೇಕ ವೇಳೆ ಸನಾತನಿಗಳು, ದೈವಭಕ್ತರು, ವಿಚಾರವಾದಿಗಳು ನಾಸ್ತಿಕರು ಎಲ್ಲರೂ ತಮ್ಮ ಪ್ರತಿಪಾದನೆಯನ್ನು ಕುವೆಂಪುರವರಲ್ಲಿ ಕಾಣುತ್ತಾ ಹೋದರು" ಕುವೆಂಪು ಅವರದು ಸಮಸ್ತ ವಿಶ್ಲೇಷಣೆಗಳನ್ನೂ ಗ್ರಹಿಸಿ ಅವುಗಳನ್ನು ಸಂಶ್ಲೇಷಣೆಗೆ ಒಳಪಡಿಸುವ ಪ್ರತಿಭೆ. ಅನೇಕ ವಾಸ್ತವಗಳು ಮನುಷ್ಯನ ವಿಶ್ಲೇಷಣೆಯ ಗಡಿಯಾಚೆಗೆ ನಿಲ್ಲುತ್ತವೆ. ಎಲ್ಲ ವಾಸ್ತವಗಳನ್ನು ಒಗ್ಗೂಡಿಸಿಕೊಂಡು ಗ್ರಹಿಸಿಕೊಳ್ಳುವುದೇ ಸಮ್ಯಕ್ ದೃಷ್ಟಿ. ಈ ದೃಷ್ಟಿಯು ಸಂಶ್ಲೇಷಣಾತ್ಮಕ ಪ್ರಭೆಗೆ ಮಾತ್ರ ಸಾಧ್ಯ.

ಕುವೆಂಪು ಅವರ ಬರವಣಿಗೆಯ ಹಿಂದೆ ಪ್ರಾಚೀನ ಪರಂಪರೆಗಳ ಸಾರ ಮತ್ತು ವಿವೇಕ ಕೆಲಸ ಮಾಡಿರುವಂತೆ ಅರ್ವಾಚೀನ ವೈಜ್ಞಾನಿಕ ತಿಳುವಳಿಕೆಗಳೂ ಗಾಢವಾಗಿ

ಪ್ರಭಾವ ಬೀರಿವೆ. ಅವುಗಳಲ್ಲಿ ಬಹಳ ಮುಖ್ಯವಾದವು ಐನ್‌ಸ್ಟೀನ್, ಡಾರ್ವಿನ್ ಮತ್ತು ಫ್ರಾಯ್ಡ್ ಅವರುಗಳು ಮಂಡಿಸಿದ ವೈಜ್ಞಾನಿಕ ತಿಳುವಳಿಕೆಗಳ ಜೊತೆಗೆ ಬಿಗ್‌ಬ್ಯಾಂಗ್ ತತ್ವವೂ ಸೇರಿಕೊಂಡಿದೆ.

ಓ ನನ್ನ ಚೇತನಾ ಆಗು ನೀ ಅನಿಕೇತನಾ, ರೂಪ ರೂಪಗಳನು ದಾಟಿ ನಾಮ ಕೋಟಿಗಳನ್ನು ಮೀಟಿ... ಎನ್ನುವ ತಿಳುವಳಿಕೆ; ಹಾಗೆಯೇ ಹಾರೈಸಿ ಹಾರಿದುದೂ ನೀರಧಿಯಮೀನ ಎನ್ನುವ ಮಾತುಗಳು ಡಾರ್ವಿನ್‌ನ ವಿಕಾಸವಾದದ ಜಾಡನ್ನು ತೋರಿಸುತ್ತವೆ. 'ರಾಮಾಯಣ ದರ್ಶನ'ದ ಪ್ರಧಾನ ದನಿಯಾಗಿ ಈ ವಿಕಾಸವಾದ ಕೆಲಸ ಮಾಡಿದೆ. ಕೂಸಿನ ಕನಸು ಪದ್ಯದಲ್ಲಿ ಕುವೆಂಪು ಕೂಸನ್ನೂ 'ಕಲ್ಪಾಂತರಗಳ ಸಂಕ್ಷಿಪ್ತಾಕೃತಿ ಜಗಶಿಲ್ಪಿಯ ಯುಗಯುಗ ಕರ್ಮದ ಕೃತಿ' ಎಂದು ಚಿತ್ರಿಸುತ್ತಾರೆ. 'ರಾಮಾಯಣದರ್ಶನಂ'ನಲ್ಲಿ 'ಕೃತಿಲೋಕ ಮೀ ಪ್ರಕೃತಿ ಲೋಕದೊಲೆ ಬಹುಲೋಕ ಕಿರಣಮಯ ಸೂರ್ಯೋತ್ತಮನ ಚಿತ್ ಪ್ರಕಾಶನದೊಂದು ರಸಲೋಕ ರೂಪಕಿರಣಂ' ಎನ್ನುವ ಮಾತನ್ನು ಹೇಳುತ್ತಾರೆ. ಶ್ಮಶಾನ ಕುರುಕ್ಷೇತ್ರದಲ್ಲಿ ಕಲಿಯು ದ್ವಾಪರನಿಗೆ ಹೇಳುವ ಮಾತುಗಳಲ್ಲಿ "ವ್ಯಕ್ತ ಸೃಷ್ಟಿಯನ್ನೆಲ್ಲ ತನ್ನೊಡಲಿನೊಳ್ ಪೊತ್ತು ಸಲಹಿದಾ ನಿತ್ಯತೆ ಮರಳಿಯದನ್ ಅವ್ಯಕ್ತಮನ್ನಾಗಿ ಮಾಡಲ್ಕೆ ಯುಗ ಪುರುಷನಾದ ನೀನದಕೇಕೆ ದುಮ್ಮಾನಂ/ ಗೊಳುತಿಹೆ? ರಸಪೂರ್ಣ ಶೂನ್ಯದಿಂದೊಗೆ ತಂದುದಿ ಲೆ/ ವಿಶ್ವಂ; ಅದರೊಳೆ ವಿಲೀನ ಮಾಗಡಗುವುದು ತಾನ್ / ಅದೊಡೇನ್? ಮರಳಿ ಬೇರೊಂದಾ ಕೃತಿಯ ತಳೆದು / ಬೇರೊಂದು ಕಟ್ಟಳೆಗೆ ತಲೆಬಾಗಿ ಬೇರೊಂದು / ಕಾಲದಲಿ ಮೂಡುವುದು ಲೀಲೆಯೆಂಬುದೆಲ್ಲ / ಮೂಡುವುದು, ಮುಳುಗುವುದರಲ್ಲಿಹುದು. ಅದಕೇಕೆ / ಮರುಗುವುದು?" ಎಂದು ಚಿತ್ರಿಸುತ್ತಾರೆ. "ದೋಣಿ ಸಾಗಲಿ ಮುಂದೆ ಹೋಗಲಿ ದೂರತೀರವ ಸೇರಲಿ" ಎಂದು ಹೇಳುತ್ತಾ "ನಾವು ಲೀಲಾ ಲೀಲ ಮಾತ್ರರು ಜಗದ ಜೀವನ ಲೀಲೆಗೆ" ಎನ್ನುವ ಗ್ರಹಿಕೆಯಲ್ಲಿ ಜಗದ ಲೀಲೆಯ ಕಡೆ ನಮ್ಮ ಗಮನ ಸೆಳೆಯುತ್ತಾರೆ. ಹೀಗೆ ಕುವೆಂಪು ಬರಹದ ಸರ್ವಸ್ವದೃಷ್ಟಿಯೂ ಈ ಬಿಗ್‌ಬ್ಯಾಂಗ್‌ಥಿಯರಿಯ ಬೀಜ ಸ್ವರೂಪವನ್ನು ಹೊಟ್ಟೆಯಲ್ಲಿ ಇಟ್ಟುಕೊಂಡೇ ಇದೆ.

ಹೀಗೆಯೇ ರಾವಣನ ಪಾತ್ರವನ್ನು, ಮಂಥರೆಯ ಪಾತ್ರವನ್ನು, ಅನೇಕ ಪಾತ್ರಗಳನ್ನು ಚಿತ್ರಿಸುವಾಗ ಹಾಗೂ ರಾಮಾಯಣ ದರ್ಶನಂನಲ್ಲಿ ಚಿತ್ರಿತವಾಗಿರುವ ಕನಸುಗಳ ಕಂಡರಣೆ ಮಾಡುವಾಗ ಫ್ರಾಯ್ಡ್‌ನ ಅನನ್ಯವಾದ ತತ್ವಗಳು ಕೆಲಸ ಮಾಡಿವೆ.

ಕುವೆಂಪು ಅವರು ಪ್ರತಿಪಾದಿಸುವ ಅದ್ವೈತ ದರ್ಶನದ ಬೇರುಗಳು ಭಾರತೀಯ ದರ್ಶನದ ಜೊತೆಗೆ ಸಂಶ್ಲೇಷಣೆಗೊಂಡ ಐನ್‌ಸ್ಟೀನನ ತಾತ್ವಿಕ ಪ್ರತಿಪಾದನೆಯಲ್ಲಿ ಕಾಣುತ್ತೇವೆ. "ಅದ್ವೈತ ಅನ್ನೋದು ಮನುಷ್ಯ ಸಮುದಾಯದ ಅಂತರಾಳದ

ಒಳಮಿಂಚು. ಇದು... ಯಾವ ಆಚಾರ್ಯರೂ ಬೇಡ ನೀವೇ ನಿಮ್ಮ ಮನೇ ಎದುರು ಇರೋ ಒಂದು ಪುಟ್ಟ ಹಸಿರು ಗಿಡದ ಹತ್ತಿರ ಹೋಗಿ ಕುತ್ಕೊಳಿ ನೋಡಿ... ಅದೇನು ಅದು?... ಕಾಂಡ, ಎಲೆ, ಹೂವು... ಮತ್ತೂ ನೋಡಿ... ದಿನಾ ಅರ್ಧತಾಸು ಕೂತು ನೋಡ್ತಾ ಹೋಗಿ... ತಿಂಗಳು ಎರಡು ತಿಂಗಳು ಹೀಗೇ ನೋಡ್ತಾ ಹೋಗಿ... ಏನೋ ಸಿಕ್ಕತ್ತೆ ಅಂತ ನೋಡ್ಬೇಡಿ....ಆಕಾಂಕ್ಷೆ ಆತುರ ಏನೂ ಇಲ್ಲದೇ ನೋಡ್ತಾ ಇರಿ... ಈ ಗಿಡ, ಈ ಜಗತ್ತು ಇಲ್ಲಿನ ಒಂದೊಂದು ಸಂಗ್ತೀನೂ ನಿಮಗೆ ಹೊಸದು... ಆದ್ರೆ ಒಂದೊಂದು ನೋಡ್ತಾ ನೋಡ್ತಾ ನಿಮಗೆ ಅರ್ಥವಾಗುತ್ತೆ... ಎಲ್ಲೋ ಗೊತ್ತು ಅನ್ನೋಥರ ಕಾಣಿಸುತ್ತೆ... ಹ್ಯಾಗೆ... ಯಾಕೆ? ಅಧ್ಯಾತ್ಮ ಜ್ಞಾನವೂ ವಿಜ್ಞಾನದ ಹಾಗೇನೇ ಪ್ರಯೋಗ ಸಿದ್ಧವಾಗಿರೋದು... ಅದ್ವೈತ ಪ್ರಜ್ಞೆ ಹುಟ್ಟಿದೋನು ಏನೂ ಈ ವಸ್ತು ಜಗತ್ತಿನ ಸತ್ಯಾನ ಮರೆಯೋದಿಲ್ಲ, ಕಡೆಗಣಿಸೋದಿಲ್ಲ... ಐನ್‌ಸ್ಟೈನ್ ಮಹಾವಿಜ್ಞಾನಿ. ತನ್ನ ಮನೇಲಿ ಕೂತು ಎದುರು ನೋಡುವಾಗ ಅವನಿಗೆ ಗೊತ್ತು. ಎದುರು ಕಾಣೋ ಮೇಜು ಮೇಜಲ್ಲ, ಕುರ್ಚಿ ಕುರ್ಚಿಯಲ್ಲ, ಗೋಡೆ ಗೋಡೆಯಲ್ಲ ಅಂತ... ಅವೆಲ್ಲಾ ಹಾಗೆ ಗ್ರಹಿಕೆಯ ಮಟ್ಟಿಗೆ ಸತ್ಯವಾಗಿ ಭಾಸವಾಗ್ತಿವೆ ಅಂತ... ಈ ಮೇಜು ಅಂದ್ರೆ ಏನಿದೆ ಇಲ್ಲಿ? ಇದರಲ್ಲಿ ಅಸಂಖ್ಯಾತ ಮರದ ಕಣಗಳಿವೆ. ಒಂದೊಂದು ಕಣದಲ್ಲೂ ಅಸಂಖ್ಯಾತ ಅಣುಗಳು... ಅಣು ಅಂದ್ರೆ ಏನು? ಅದೇನೂ ಮುಟ್ಟೋಕೆ ಸಿಕ್ಕೋ ವಸ್ತು ಅಲ್ಲ... ಒಂದೊಂದು ಅಣುವೂ ಎಲೆಕ್ಟ್ರಾನ್ ಪ್ರೋಟಾನ್ ಅನ್ನೋ ಉಪಾಣು ಅಂಗಗಳನ್ನು ಒಳಗೊಂಡಿರುತ್ತೆ... ಅವಾದ್ರೂ ಏನು? ಏನೂ ಇಲ್ಲ ಬರೀ ಅದೃಶ್ಯ ಶಕ್ತಿಯ ಅಪಾರ ವೇಗದ ಪರಿಭ್ರಮಣೆಗಳು ಅಷ್ಟೇ... ಪ್ರಯೋಗಾಲಯದಲ್ಲಿ ಸೂಕ್ಷ್ಮ ಉಪಕರಣಗಳ ಮೂಲಕ ವಿವರವಾಗಿ ಪರೀಕ್ಷೆ ಮಾಡಿ ಸ್ವತಃ ಇದನ್ನ ಕಂಡು ಕೊಂಡಿರೋ ಐನ್‌ಸ್ಟೈನ್‌ಗೆ ಎದುರಿನ ಜಗತ್ತು ಅನ್ನೋದು, ಅಸಂಖ್ಯಾತ ಅಸಂಖ್ಯಾತ ಶಕ್ತಿ ಬೀಜಗಳ ಮಹಾತಾಂಡವ ಮೇಳವಾಗಿ ಕಾಣುತ್ತೆ... ಭಗವದ್ಗೀತೇಲಿ ವಿಶ್ವರೂಪದರ್ಶನ ಬರುತ್ತಲ್ಲ ಆ ಥರಾ... ಆದ್ರೆ ಹಾಗಂತ, ಐನ್‌ಸ್ಟೈನ್ ಏನೂ ಮೇಜು ಸುಳ್ಳು ಕುರ್ಚಿ ಸುಳ್ಳು ಅನ್ನೋದಿಲ್ಲ. ಅದನ್ನೆಲ್ಲಾ ಸತ್ಯ ಅಂತ ಇಟ್ಕೊಂಡೇ ನಮ್ಮ ಥರಾ ಅವನ್ನೆಲ್ಲ ನಂಬ್ಕೊ ತಾನೇ ವ್ಯವಹರಿಸ್ತಾನೆ... ಶಂಕರಾಚಾರ್ಯರು 'ಅಹಂ ಬ್ರಹ್ಮಾಸ್ಮಿ' ಅಂದರು. ಹಾಗೇನೇ ಈ ಜಗತ್ತನ ನಂಬಿ ಆ ಸೇತು ಹಿಮಾಚಲ ತಿರುಗಾಡುತ್ತಾ ವೀರ ಸನ್ಯಾಸಿಯಾಗಿ ಮಹತ್ ಸಾಮಾಜಿಕ ವ್ಯಕ್ತಿಯಾಗಿ ಬದುಕಿದ್ರು..."

ಹೀಗೆ ಕುವೆಂಪು "ದರ್ಶನ"ವನ್ನು ರಾಮಾಯಣದ ಮೂಲಕ ಮಾಡಿಸುತ್ತಾರೆ. ಬುದ್ಧಿ ಭಾವಗಳ ಒಳಗಣ್ಣು ತೆರೆದಿರುವವರಿಗೆ ಕುವೆಂಪು ಕೃತಿಗಳು ಖಚಿತವಾಗಿ "ದರ್ಶನ" ಮಾಡಿಸುತ್ತವೆ.

ಕುವೆಂಪು ಅವರು ಶೂದ್ರ ಸಮುದಾಯವೊಂದರಿಂದ ಉದಯಿಸಿ ಬಂದದ್ದರಿಂದ ಅವರ ಪ್ರಜ್ಞೆ ಸಾಂಸ್ಥಿಕವಾದ ಮತ ಧರ್ಮಗಳ ಚೌಕಟ್ಟಿಗೆ ಬಂದಿಯಾಗಲಿಲ್ಲ. ಆದರೆ ಭಾರತೀಯವೆನ್ನಬಹುದಾದ ಗ್ರಂಥ ರಾಶಿಗಳಿಂದ ಬಂದ ವಿವೇಕವನ್ನು ತಮ್ಮ ದರ್ಶನ ಪ್ರತಿಪಾದನೆಗೆ ಸಮರ್ಥವಾಗಿ ಬಳಸಿಕೊಂಡರು. ಇದಕ್ಕೆ ನೆಲವನ್ನು ಹದಮಾಡಿ ಕೊಟ್ಟಿದ್ದು ರಾಮಕೃಷ್ಣ ವಿವೇಕಾನಂದರ ಆದರ್ಶ ಮತ್ತು ಮೈಸೂರಿನ ಶ್ರೀ ರಾಮಕೃಷ್ಣ ಮಠದ ಪರಿಸರ ಎನ್ನಬಹುದು.

ಕುವೆಂಪು ಅವರು ತಮ್ಮ ಕಾಲದ ಪ್ರಧಾನವಾದ ಎಲ್ಲ ವಿಚಾರ ಧಾರೆಗಳನ್ನೂ ತಮ್ಮ ವಿವೇಚನೆಗೆ ಅಳವಡಿಸಿಕೊಂಡರು. ಆದರೆ ಪಕ್ಕದ ರಾಜ್ಯದಲ್ಲಿ ನಡೆದ ಇ.ವಿ. ರಾಮಸ್ವಾಮಿ ನಾಯ್ಕರ್ ಅವರ ದ್ರಾವಿಡ ಮುನ್ನೇತ್ರಂ ಚಳುವಳಿಯಾಗಲಿ, ಅಂಬೇಡ್ಕರ್ ಅವರ ವಿಚಾರ ಧಾರೆಗಳಾಗಲಿ, ಮಾರ್ಕ್ಸ್‌ವಾದವಾಗಲಿ ಕುವೆಂಪು ಅವರನ್ನು ಗಾಢವಾಗಿ ಕಲಕಲಿಲ್ಲ. ಮಾರ್ಕ್ಸ್‌ವಾದವನ್ನಂತೂ "ಕೋಗಿಲೆ ಮತ್ತು ಸೋವಿಯತ್ ರಷ್ಯಾ" ಎಂಬ ಕವನದಲ್ಲಿ ಗೇಲಿಗೆ ಒಳಪಡಿಸುತ್ತಾರೆ. ಹಾಗೆಯೇ ಪುನರ್ ಜನ್ಮದ ಬಗ್ಗೆ ಕುವೆಂಪು ಅವರಿಗಿರುವ ಶ್ರದ್ಧೆ ನಸ್ನಂತಹ ಸಾಮಾನ್ಯರಿಗೆ ಅರ್ಥವಾಗುವುದೇ ಇಲ್ಲ. ಈ ಹಿನ್ನೆಲೆಯಲ್ಲಿ ಕುವೆಂಪು ಅವರನ್ನು ಗ್ರಹಿಸಿಕೊಳ್ಳಲು ಉಪಕ್ರಮಿಸಿದರೆ ಕುವೆಂಪು ಅವರಿಗೆ ಭಾರತೀಯವೆನ್ನಬಹುದಾದ ಶ್ರದ್ಧಾ ಕೇಂದ್ರಗಳನ್ನು ಭಂಜನೆ ಮಾಡುವುದು ಗುರಿಯಾಗಿರಲಿಲ್ಲ. ಬದಲಿಗೆ ಈ ಶ್ರದ್ಧಾ ಕೇಂದ್ರಗಳನ್ನು ಶುಚಿರ್ಭೂತಗೊಳಿಸಿ ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ ಹಾಗೂ ಪೂರ್ಣ ದೃಷ್ಟಿಯ ಹಾದಿಗಳನ್ನು ನಿರ್ಮಿಸುವುದು ಅವರ ಗುರಿಯಾಗಿತ್ತು ಎನಿಸುತ್ತದೆ. ಆದ್ದರಿಂದಲೇ ಅವರು ಮನುಕುಲ ಜಗತ್ತಿನ ವ್ಯಾಪಾರವನ್ನು 'ಯುಗದ' ಅಳತೆಗೋಲಿನ ಮಾನದಲ್ಲಿ ಗ್ರಹಿಸುತ್ತಾರೆ. ಬೇಂದ್ರೆಯವರ ಮಾತಿನಿಂದ ಈ ಚಿಕ್ಕ ಲೇಖನವನ್ನು ಮುಗಿಸುತ್ತೇನೆ.

ಯುಗದ ಕವಿಗೆ
ಜಗದ ಕವಿಗೆ
ಶ್ರೀ ರಾಮಾಯಣ ದರ್ಶನದಿಂದಲೆ ಕೈ
ಮುಗಿದ ಕವಿಗೆ ಮಣಿಯದವರು ಯಾರು?

೧. ಕುವೆಂಪು ಕೃತಿಗಳು

೧. Beginners Muse-೧೯೨೨- ಪ್ರಾರಂಭದ ಇಂಗ್ಲಿಷ್ ಕವಿತೆಗಳ ಸಂಕಲನ.

೨. ಅಮಲನ ಕಥೆ-೧೯೨೪-ಮಕ್ಕಳಿಗಾಗಿ 'ಗೋವಿನ ಹಾಡಿ'ನ ಧಾಟಿಯಲ್ಲಿ ಬರೆದ ಕಥನ ಕವನ; ಕುವೆಂಪುರ ಮೊದಲ ಕನ್ನಡ ಕೃತಿ.

೩. ಮೋಡಣ್ಣನ ತಮ್ಮ-೧೯೨೬-ಮಕ್ಕಳಿಗಾಗಿ ಬರೆದ ಲಘು ಕಾಲ್ಪನಿಕ.

೪. ಹಾಳೂರು-೧೯೨೬-ಗೋಲ್ಡ್‌ಸ್ಮಿತ್‌ನ THE DESERTED VILLAGEನ್ನು ಹೋಲುವ ಖಂಡಕಾವ್ಯ.

೫. ಜಲಗಾರ-೧೯೨೮-ಕವಿತಾನಾಟಕ.

೬. ಯಮನ ಸೋಲು-೧೯೨೮- ಸರಳ ರಗಳೆಯ ನಾಟಕ.

೭. ಕೊಳಲು-೧೯೩೦-ಕವಿತಾಸಂಕಲನ

೮. ಬಿರುಗಾಳಿ-೧೯೩೦-ಶೇಕ್‌ಸ್ಪಿಯರ್‌ನ THE TEMPESTನ್ನು ಆಧರಿಸಿದ ಸರಳ ರಗಳೆಯ ನಾಟಕ.

೯. ನನ್ನ ಗೋಪಾಲ-೧೯೩೦-ಮಕ್ಕಳ ಕವಿತಾನಾಟಕ.

೧೦. ಸಾಹಿತ್ಯ ಪ್ರಚಾರ-೧೯೩೦-ಭಾಷಣಗಳ ಸಂಕಲನ.

೧೧. ನರಿಗಳಿಗೇಕೆ ಕೋಡಿಲ್ಲ-೧೯೩೦-ಮಕ್ಕಳ ಕಥೆ.

೧೨. ವಾಲ್ಮೀಕಿಯ ಭಾಗ್ಯ-೧೯೩೧- ಸರಳರಗಳೆಯ ನಾಟಕ.

೧೩. ಶ್ಮಶಾನ ಕುರುಕ್ಷೇತ್ರಂ-೧೯೩೧- ಸರಳ ರಗಳೆಯ ನಾಟಕ.

೧೪. ಮಹಾರಾತ್ರಿ-೧೯೩೧-ಕವಿತಾನಾಟಕ.

೧೫. ಸ್ವಾಮಿ ವಿವೇಕಾನಂದ-೧೯೩೨-ಜೀವನಚರಿತ್ರೆ.

೧೬. ರಕ್ತಾಕ್ಷಿ-೧೯೩೨-ಶೇಕ್ಸ್‌ಪಿಯರ್‌ನ HAMLET ಕೃತಿಯನ್ನಾಧರಿಸಿದ ಸರಳ ರಗಳೆಯ ನಾಟಕ.

೧೭. ಪಾಂಚಜನ್ಯ-೧೯೩೩-ಕವಿತಾಸಂಕಲನ.

೧೮. ಮಲೆನಾಡಿನ ಚಿತ್ರಗಳು-೧೯೩೩-ಗದ್ಯಚಿತ್ರಗಳು.

೧೯. ನವಿಲು-೧೯೩೪-ಕವಿತಾಸಂಕಲನ.

೨೦. ಶ್ರೀರಾಮಕೃಷ್ಣ ಪರಮಹಂಸ-೧೯೩೪-ಜೀವನ ಚರಿತ್ರೆ.

೨೧. ವೇದಾಂತ-೧೯೩೪-ವಿವೇಕಾನಂದರ ಭಾಷಣದ ಅನುವಾದ.

೨೨. ಕಥನ ಕವನಗಳು-೧೯೩೬-ಕಥನಕವನಗಳ ಸಂಕಲನ.

೨೩. ಚಿತ್ರಾಂಗದಾ-೧೯೩೬-ಸರಳರಗಳೆಯ ಖಂಡಕಾವ್ಯ; ಇದರಲ್ಲಿ ಮಹಾ ಛಂದಸ್ಸಿನ ಪ್ರಯೋಗವಿದೆ.

೨೪. ಕಾನೂರು ಹೆಗ್ಗಡಿತಿ-೧೯೩೬-ಮಹಾಕಾದಂಬರಿ.

೨೫. ಸನ್ಯಾಸಿ ಮತ್ತು ಇತರ ಕಥೆಗಳು-೧೯೩೬-ಕಥಾಸಂಕಲನ.

೨೬. ನನ್ನ ದೇವರು ಮತ್ತು ಇತರ ಕಥೆಗಳು-೧೯೪೦-ಕಥಾಸಂಕಲನ.

೨೭. ಕಲಾಸುಂದರಿ-೧೯೪೩-ಕವಿತಾಸಂಕಲನ.

೨೮. ನಿರಂಕುಶಮತಿಗಳಾಗಿ-೧೯೪೪-ಭಾಷಣಗಳ ಸಂಕಲನ.

೨೯. ಕೋಗಿಲೆ ಮತ್ತು ಸೋವಿಯಟ್ ರಷ್ಯಾ-೧೯೪೪-ಕವಿತಾ ಸಂಕಲನ.

೩೦. ಶೂದ್ರ ತಪಸ್ವಿ-೧೯೪೪-ಕವಿತಾ ನಾಟಕ.

೩೧. ಕಾವ್ಯವಿಹಾರ-೧೯೪೬-ವಿಮರ್ಶಾ ಲೇಖನಗಳು.

೩೨. ಕಿಂಕಿಣಿ-೧೯೪೬-ಕವಿತಾಸಂಕಲನ.

೩೩. ಅಗ್ನಿಹಂಸ-೧೯೪೬-ಕವಿತಾಸಂಕಲನ.

೩೪. ಪ್ರೇಮಕಾಶ್ಮೀರ-೧೯೪೬-ಕವಿತಾಸಂಕಲನ.

೩೫. ಬೆರಳ್ಗೆಕೊರಳ್-೧೯೪೭-ಕವಿತಾ ನಾಟಕ.

೩೬. ಮರಿವಿಜ್ಞಾನಿ-೧೯೪೭-ಮಕ್ಕಳ ಕವಿತೆಗಳು.

೩೭. ಮೇಘಪುರ-೧೯೪೭-ಮಕ್ಕಳ ಕವಿತೆಗಳು.

೩೮. ನನ್ನ ಮನೆ-೧೯೪೭-ಶಿಶುಗೀತೆಗಳು

೩೯. ಬಲಿದಾನ-೧೯೪೮-ಕವಿತಾ ನಾಟಕ.

೪೦. ಶ್ರೀ ರಾಮಾಯಣದರ್ಶನಂ-೧೯೪೯-ಮಹಾಛಂದಸ್ಸಿನ ಮಹಾಕಾವ್ಯ. ಇದರ ಪ್ರಥಮ ಸಂಪುಟ ೧೯೪೯ರಲ್ಲೂ ಎರಡನೆಯದು ೧೯೫೨ರಲ್ಲೂ ಪ್ರಕಟವಾಯಿತು.

೪೧. ಜನಪ್ರಿಯ ವಾಲ್ಮೀಕಿ ರಾಮಾಯಣ-೧೯೫೦-ಸರಳ ಭಾಷೆಯಲ್ಲಿ ಬರೆದ ರಾಮಾಯಣ ಕಥಾನಕ.

೪೨. ತಪೋನಂದನ-೧೯೫೧-ವಿಮರ್ಶಾ ಲೇಖನಗಳು.

೪೩. ಜೇನಾಗುವಾ-೧೯೫೨-ಕವಿತಾ ಸಂಕಲನ.

೪೪. ವಿಭೂತಿಪೂಜೆ-೧೯೫೩-ವಿಮರ್ಶಾ ಲೇಖನಗಳು.

೪೫. ಚಂದ್ರಮಂಚಕೆ ಬಾ ಚಕೋರಿ-೧೯೫೪-ಕವಿತಾ ಸಂಕಲನ.

೪೬. ಗುರುವಿನೊಡನೆ ದೇವರಡಿಗೆ (ಭಾಗ-೧-ಮತ್ತು-೨)-೧೯೫೪ ಅನುವಾದ.

೪೭. ಇಕ್ಷುಗಂಗೋತ್ರಿ-೧೯೫೭-ಕವಿತ ಪ್ರಗಾಥಗಳ ಸಂಕಲನ.

೪೮. ಕೃತ್ತಿಕೆ-೧೯೫೯-ಕವಿತಾ ಸಂಕಲನ (ಸಾನೆಟ್ಟುಗಳು)

೪೯. ವಿಶ್ವವಿದ್ಯಾನಿಲಯದ ಪ್ರಸಾರಾಂಗ-೧೯೫೯-ಭಾಷಣ ಸಂಗ್ರಹ.

೫೦. ದ್ರೌಪದಿಯ ಶ್ರೀಮುಡಿ-೧೯೬೦-ವಿಮರ್ಶಾ ಲೇಖನಗಳು.

೫೧. ಬೊಮ್ಮನಹಳ್ಳಿಯ ಕಿಂದರಿಜೋಗಿ-೧೯೬೧ ಕವಿತೆ.

೫೨. ರಸೋ ವೈಸಃ : ೧೯೬೨-ವಿಮರ್ಶಾ ಲೇಖನ ಸಂಕಲನ.

೫೩. ಅನಿಕೇತನ-೧೯೬೩-ಕವಿತಾ ಸಂಕಲನ.

೫೪. ಚಂದ್ರಹಾಸ-೧೯೬೩-ಕವಿತಾ ನಾಟಕ.

೫೫. ಷಷ್ಠಿ ನಮನ-೧೯೬೪-ಭಾಷಣಸಂಗ್ರಹ.

೫೬. ಷೋಡಶಿ-೧೯೬೫-ಕವಿತಾ ಸಂಕಲನ.

೫೭. ಅನುತ್ತರಾ-೧೯೬೫-ಕವಿತಾ ಸಂಕಲನ.

೫೮. ಮಂತ್ರಾಕ್ಷತೆ-೧೯೬೬-ಕವಿತಾ ಸಂಕಲನ.

೫೯. ಮಲೆಗಳಲ್ಲಿ ಮದುಮಗಳು-೧೯೬೭-ಮಹಾಕಾದಂಬರಿ.

೬೦. ಕದರಡಿಕೆ-೧೯೬೭-ಕವಿತಾಸಂಕಲನ.

೬೧. ಕುಟೀಚಕ-೧೯೬೭-ಕವಿತಾಸಂಕಲನ.

೬೨. ಪ್ರೇತಕ್ಯೂ-೧೯೬೭-ಕವಿತಾಸಂಕಲನ.

೬೩. ಪಕ್ಷಿಕಾಶಿ-೧೯೭೦-ಕವಿತಾಸಂಕಲನ.

೬೪. ಇತ್ಯಾದಿ-೧೯೭೦-ವಿಮರ್ಶಾ ಸಂಕಲನ.

೬೫. ಮನುಜಮತ ವಿಶ್ವಪಥ-೧೯೭೧- ಭಾಷಣ ಲೇಖನ ಸಂಗ್ರಹ.

೬೬. ಕಾನೀನ-೧೯೭೪-ನಾಟಕ. ಸು. ೩೦ರ ದಶಕದಲ್ಲೇ ಬರೆದದ್ದು.

೬೭. ಹೊನ್ನ ಹೊತ್ತಾರೆ-೧೯೭೬-ಸು. ೩೦ರ ದಶಕದಲ್ಲಿ ಬರೆದ ಕವಿತೆಗಳ ಸಂಕಲನ.

೬೮. ವಿಚಾರ ಕ್ರಾಂತಿಗೆ ಆಹ್ವಾನ-೧೯೭೬-ಭಾಷಣ ಸಂಕಲನ.

೬೯. ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ-೧೯೭೮-ಭಾಷಣ ಸಂಗ್ರಹ.

೭೦. ನೆನಪಿನ ದೋಣಿಯಲ್ಲಿ-೧೯೮೦-ಆತ್ಮಕಥೆ.

ಆಯ್ದ ಸಂಕಲನಗಳು:

ಕಬ್ಬಿಗನ ಕೈಬುಟ್ಟಿ

ಪ್ರಾರ್ಥನಾ ಗೀತಾಂಜಲಿ

ಕನ್ನಡಡಿಂಡಮ ಇತ್ಯಾದಿ

೨. ಕುವೆಂಪು-ಇಸವಿ ತಃಖ್ತೆ

೧೯೦೪ ಜನನ: ೨೯-೧೨-೧೯೦೪-ಹಿರೇಕೊಡಿಗೆಯಲ್ಲಿ ತಾಯಿ: ಸೀತಮ್ಮ (ಹಿರೇಕೊಡಿಗೆ, ಕೊಪ್ಪ ತಾ. ಚಿಕ್ಕಮಗಳೂರು ಜಿ.) ತಂದೆ: ವೆಂಕಟಯ್ಯಗೌಡರು, ಕುಪ್ಪಳಿ ತೀರ್ಥಹಳ್ಳಿ, ತಾ. ಶಿವಮೊಗ್ಗ ಜಿ. ಮೇಲಿನ ಇಬ್ಬರ ಮದುವೆ ೩೧-೫-೧೯೦೧. ಹಿರೇಕೊಡಿಗೆ-ಕುಪ್ಪಳಿ ಕುಟುಂಬಗಳೆರಡೂ ಸಾಕಷ್ಟು ಶ್ರೀಮಂತ ಕುಟುಂಬಗಳಾಗಿದ್ದು ಸು. ೧೯೦೦ರ ಅನಂತರ ಕ್ರಮೇಣ ಅವುಗಳ ಶ್ರೀಮಂತಿಕೆ ಇಳಿಮುಖವಾಯಿತೆಂದು ತೋರುತ್ತದೆ.

೧೯೧೬ ರತನಕ ಕುಪ್ಪಳಿಯಲ್ಲಿ ಮನೆಯಲ್ಲೇ ಖಾಸಗಿ ಮೇಷ್ಟರ ಮೂಲಕ ಪ್ರಾರಂಭಿಕ ವಿದ್ಯಾಭ್ಯಾಸ. ಇಬ್ಬರು ಸೋದರಿಯರು (ದಾನಮ್ಮ-ಪುಟ್ಟಮ್ಮ) ಹುಟ್ಟಿದ್ದು.

೧೯೧೬ ತಂದೆಯ ಮರಣ.

೧೯೧೬ ರಿಂದ ೧೯೨೦ ತೀರ್ಥಹಳ್ಳಿಯಲ್ಲಿ ಮಾಧ್ಯಮಿಕ ವಿದ್ಯಾಭ್ಯಾಸ; ೧೯೧೯ರಲ್ಲಿ ಕನ್ನಡ ಲೋಅರ್ ಸೆಕೆಂಡರಿಯಲ್ಲಿ ೧೯೨೦ರಲ್ಲಿ ಇಂಗ್ಲಿಷ್ ಲೋ ಅರ್ ಸೆಕೆಂಡರಿಯಲ್ಲಿ ಉತ್ತೀರ್ಣರಾದ್ದು.

೧೯೨೦ ರಿಂದ ೧೯೨೭ ಮೈಸೂರಿನಲ್ಲಿ ವಿದ್ಯಾಭ್ಯಾಸ: ವೆಸ್ಲಿಯನ್ ಮಿಷನ್ ಹೈಸ್ಕೂಲು ಮತ್ತು ಮಹಾರಾಜಾ ಕಾಲೇಜುಗಳಲ್ಲಿ: ೧೯೨೭ರಲ್ಲಿ ಬಿ.ಎ. ಪದವಿ ಪಡೆದದ್ದು. ಈ ಮಧ್ಯೆ-೧೯೨೪ರಲ್ಲಿ ತಾಯಿಯ ಮರಣ; ಮುಂದೆ ಕೆಲವು ವರ್ಷಗಳಲ್ಲಿ ಮದುವೆಯಾಗಿದ್ದ ಸೋದರಿಯರಿಬ್ಬರೂ ಅರೆವಯಸ್ಸಲ್ಲಿ ತೀರಿಕೊಂಡದ್ದು.

೧೯೨೬ ಹೋಟೆಲು ಬಿಟ್ಟು ಸ್ವಾಮಿ ಸಿದ್ದೇಶ್ವರಾನಂದರ ಪ್ರೋತ್ಸಾಹದಿಂದ ರಾಮಕೃಷ್ಣಾಶ್ರಮಕ್ಕೆ ಹೋಗಿ ಸೇರಿಕೊಂಡದ್ದು; ಅದೇ ವರ್ಷ ಮೈಲಿಬೇನೆಯನುಭವಿಸಿದ್ದು; ಅನಂತರ, ಕೆಲವು ದಿನ ಮನೋ ವಿಲಕ್ಷಣತೆಯುಂಟಾಗಿ ಆ ಕಾಲದಲ್ಲಿ ತಾನು ಪುಟ್ಟಪ್ಪನಲ್ಲ, ವಿವೇಕಾನಂದ ಅಂತ ಸಾರಿಕೊಂಡದ್ದು. ಆರಂಭದ ಬರವಣಿಗೆಗಳು ಪ್ರಕಟವಾದ್ದು: ಮೊದಲ ಇಂಗ್ಲಿಷ್ ಕವಿತಾ ಸಂಕಲನ ಬಿಗಿನರ್ಸ್ ಮ್ಯೂಸ್ (೧೯೨೨) ಮತ್ತು ಕೆಲವು ಕನ್ನಡ ಬರವಣಿಗೆಗಳು.

೧೯೨೪ ಬೆಂಗಳೂರಲ್ಲಿ ನಡೆದ ವಿದ್ಯಾರ್ಥಿ ಕವಿ ಸಮ್ಮೇಳನದ ಅಧ್ಯಕ್ಷರಾದದ್ದು.

೧೯೨೯ ಕಲ್ಕತ್ತಾ ಯಾತ್ರೆ; ಬೇಲೂರು ರಾಮಕೃಷ್ಣಮಠದಲ್ಲಿ ಸ್ವಾಮಿ ಶಿವಾನಂದರಿಂದ ದೀಕ್ಷೆ ಪಡೆದದ್ದು. (೮-೧೦-೧೯೨೯) ಎಂ.ಎ.ನಲ್ಲಿ ಉತ್ತೀರ್ಣರಾದ್ದು; ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇರಿಕೊಂಡದ್ದು.

೧೯೩೦ ಮೊತ್ತಮೊದಲನೆಯ ಕವನಸಂಕಲನ-'ಕೊಳಲು' ಪ್ರಕಟಣೆ

೧೯೩೩ ಹುಬ್ಬಳ್ಳಿಯಲ್ಲಿ ನಡೆದ ೧೯ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಕವಿಗೋಷ್ಠಿ'ಯ ಅಧ್ಯಕ್ಷರಾದದ್ದು.

೧೯೩೬ 'ಕಾನೂರು ಹೆಗ್ಗಡಿತಿ' ಪ್ರಕಟಣೆ; ಮಹಾಛಂದಸ್ಸು ಮಹೋಪಮೆಗಳ ಪ್ರಯೋಗವಿರುವ 'ಚಿತ್ರಾಂಗದಾ' ಖಂಡಕಾವ್ಯದ ಪ್ರಕಟಣೆ.

೧೯೩೭ ಶ್ರೀಮತಿ ಹೇಮಾವತಿ ಅವರೊಡನೆ ಮದುವೆ; ಹೊಸದಾಗಿ ಕಟ್ಟಿಸಿಕೊಂಡ ಸ್ವಂತಮನೆ 'ಉದಯರವಿ' (ಒಂಟಿ ಕೊಪ್ಪಲು, ಮೈಸೂರು)ಗೆ ಹೋಗಿ ನೆಲೆಸಿದ್ದು.

೧೯೩೮ ಮೊದಲನೆಯ ಮಗ ಪೂರ್ಣಚಂದ್ರ ತೇಜಸ್ವಿ ಹುಟ್ಟಿದ್ದು (೮-೯-೧೯೩೮)

೧೯೩೯ ಕನ್ನಡ ರೀಡರ್ ಆಗಿ ಸೆಂಟ್ರಲ್ ಕಾಲೇಜಿನಲ್ಲಿ ನೇಮಕ; ಬೆಂಗಳೂರಿಗೆ ಹೋಗಿ ನೆಲೆಸಿದ್ದು. ಗುರು ವೆಂಕಣ್ಣಯ್ಯನವರ ನಿಧನ.

೧೯೪೧ ಎರಡನೆಯ ಮಗ ಕೋಕಿಲೋದಯ ಚೈತ್ರ ಹುಟ್ಟಿದ್ದು (೨-೫-೧೯೪೧)

೧೯೪೩ ಮೊದಲನೆಯ ಮಗಳು ಇಂದುಕಲಾ ಹುಟ್ಟಿದ್ದು (೨೧-೭-೧೯೪೩)

೧೯೪೫ ಎರಡನೆಯ ಮಗಳು ತಾರಿಣಿ ಹುಟ್ಟಿದ್ದು (೬-೨-೧೯೪೫)

೧೯೪೬ ಕನ್ನಡ ಪ್ರಾಧ್ಯಾಪಕರು ಮತ್ತು ಕನ್ನಡ ವಿಭಾಗ ಮುಖ್ಯಸ್ಥರಾಗಿ ಮಹಾರಾಜಾ ಕಾಲೇಜಿನಲ್ಲಿ ನೇಮಕವಾದ್ದು; ಮೈಸೂರಿಗೆ ವಾಪಸಾಗಿ ನೆಲೆಸಿದ್ದು.

೧೯೪೯ ಶ್ರೀ ರಾಮಾಯಣ ದರ್ಶನಂ ಮೊದಲ ಮಹಾಸಂಪುಟದ ಪ್ರಕಟಣೆ.

೧೯೫೧ ಶ್ರೀ ರಾಮಾಯಣ ದರ್ಶನಂ ಎರಡನೇ ಮಹಾಸಂಪುಟ (ಪೂರ್ಣಗ್ರಂಥ) ಪ್ರಕಟಣೆ.

೧೯೫೫ ಮಹಾರಾಜಾ ಕಾಲೇಜಿನಲ್ಲಿ ಪ್ರಿನ್ಸಿಪಾಲರಾದದ್ದು; 'ರಾಮಾಯಣ ದರ್ಶನಂ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದ್ದು.

೧೯೫೬ ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಿ.ಲಿಟ್ ಸ್ವೀಕರಿಸಿದ್ದು; ಮೈಸೂರು ವಿಶ್ವವಿದ್ಯಾನಿಲಯ ಉಪಕುಲಪತಿಗಳಾಗಿ ನೇಮಕವಾದದ್ದು.

ಮೈಸೂರಿನಲ್ಲಿ ನಡೆದ ೩೮ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತಾಧ್ಯಕ್ಷರಾದದ್ದು.

ಕರ್ನಾಟಕ ಏಕೀಕರಣವಾದದ್ದು.

೧೯೫೭ ಧಾರವಾಡದಲ್ಲಿ ನಡೆದ ೩೯ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದದ್ದು.

೧೯೫೮ ರಾಷ್ಟ್ರಪತಿಗಳಿಂದ 'ಪದ್ಮಭೂಷಣ' ಪ್ರಶಸ್ತಿ ಸ್ವೀಕರಿಸಿದ್ದು.

೧೯೬೦ 'ಮಾನಸ ಗಂಗೋತ್ರಿ' (ಮೈಸೂರು ವಿ.ವಿ. ಮೈಸೂರು ಸ್ನಾತಕೋತ್ತರ ಕೇಂದ್ರ) ವಿಸ್ತರಣೆಯ ಸ್ಥಾಪನೆ; ಉಪಕುಲಪತಿ ಹುದ್ದೆಯಿಂದ ನಿವೃತ್ತರಾದ್ದು.

೧೯೬೪ ರಾಜ್ಯಸರ್ಕಾರದಿಂದ 'ರಾಷ್ಟ್ರಕವಿ' ಪ್ರಶಸ್ತಿಯನ್ನು ಸ್ವೀಕರಿಸಿದ್ದು.

೧೯೬೬ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಿ. ಲಿಟ್ ಸ್ವೀಕರಿಸಿದ್ದು.

೧೯೬೭ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಪ್ರಕಟಣೆ

೧೯೬೮ 'ರಾಮಾಯಣ ದರ್ಶನಂ' ಕೃತಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದ್ದು. (ಕನ್ನಡದ ಮೊದಲ ಜ್ಞಾನಪೀಠ ಪ್ರಶಸ್ತಿ.)

೧೯೬೯ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಗೌರವ ಡಿ.ಲಿಟ್ ಪ್ರಶಸ್ತಿ ಸ್ವೀಕರಿಸಿದ್ದು.

೧೯೭೪ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಘಟಿಕೋತ್ಸವ ಭಾಷಣ ಮಾಡಿದ್ದು.

೧೯೭೯ ಕನ್ನಡ ಭಾಷೆ-ಸಾಹಿತ್ಯಗಳಿಗೆ ಸಲ್ಲಿಸಿದ ಸೇವೆಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸ್ವೀಕರಿಸಿದ್ದು.

೧೯೮೨ ಪತ್ನಿ ಶ್ರೀಮತಿ ಹೇಮಾವತಿ ಅವರ ನಿಧನ.

೧೯೮೫ ಮೊದಲನೇ 'ವಿಶ್ವಕನ್ನಡ ಸಾಹಿತ್ಯ ಸಮ್ಮೇಳನ' (ಮೈಸೂರು) ಉದ್ಘಾಟಿಸಿದ್ದು.

೧೯೯೪ ನಿಧನ: ೧೦.೧೧.೧೯೯೪

೩. ಕುವೆಂಪು ಮಕ್ಕಳು, ಮೊಮ್ಮಕ್ಕಳು

೧. ಶ್ರೀ ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಎಂ.ಎ. (ಜನನ-ಶಿವಮೊಗ್ಗ ೧೯೩೮) ಕನ್ನಡ ಸಾಹಿತ್ಯದಲ್ಲಿ ಎಂ.ಎ. ಈಗ ಇರುವುದು-ಮೂಡಿಗೆರೆ, ವೃತ್ತಿ-ವ್ಯವಸಾಯ; ಹೆಂಡತಿ-ರಾಜೇಶ್ವರಿ, ಎಂ.ಎ.

ಮಕ್ಕಳು: ಕು. ಸುಸ್ಮಿತಾ (ಜನನ-ಮೈಸೂರು ೧೯೭೧) ಎಂಜಿನಿಯರಿಂಗ್ ಪದವೀಧರೆ, ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಕೆಲಸ.

ಕು. ಈಶಾನ್ಯ (ಜನನ-ಮೈಸೂರು ೧೯೭೩) ಎಂಜಿನಿಯರಿಂಗ್ ಪಧವೀಧರೆ, ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಕೆಲಸ.

೨. ಶ್ರೀ ಕೋಕಿಲೋದಯ ಚೈತ್ರ, ಎಂ.ಇ. (ಜನನ-ಶಿವಮೊಗ್ಗ ೧೯೪೧) ಈಗ ಇರುವುದು-ಮೆಲ್ಬೋರ್ನ್, ಆಸ್ಟ್ರೇಲಿಯಾ, ವೃತ್ತಿ-ಡಿಸೈನ್ ಇಂಜಿನಿಯರಿಂಗ್.

ಮಗಳು: ಕು. ಸಿಮೋನ್ ಶಿವಾಣಿ (ಜನನ-ಮೆಲ್ಬೋರ್ನ್ ೧೯೮೮)

೩. ಶ್ರೀಮತಿ ಕೆ.ಪಿ. ಇಂದುಕಲಾ ಸುರೇಂದ್ರ ಎಂ.ಎ. (ಜನನ-ಬೆಂಗಳೂರು ೧೯೪೩) ಈಗ ಇರುವುದು ಬೆಂಗಳೂರು, ಗಂಡ-ಡಾ.ಕೆ.ಟಿ. ಸುರೇಂದ್ರ ಅರ್ಥೋಸರ್ಜನ್, ಬೆಂಗಳೂರು.

ಮಕ್ಕಳು: ಕು.ಕೆ.ಎಸ್. ತಮಾಲ, ಎಂ.ಬಿ.ಬಿ.ಎಸ್. (ಜನನ-ಲಿವರ್ ಫೂಲ್, ಇಂಗ್ಲೆಂಡ್ ೧೯೭೦) ಮಣಿಪಾಲದಲ್ಲಿ ಎಂ.ಡಿ. ಓದುತ್ತಿದ್ದಾರೆ. ಕು.ಕೆ.ಎಸ್. ಶಾದ್ವಲ, (ಜನನ-ಲಿವರ್, ಫೂಲ್, ಇಂಗ್ಲೆಂಡ್ ೧೯೭೪) ಬೆಂಗಳೂರಿನಲ್ಲಿ ಡೆಂಟಲ್ ಸರ್ಜರಿ ಓದುತ್ತಿದ್ದಾರೆ.


೪. ಶ್ರೀಮತಿ ಕೆ.ಪಿ. ತಾರಿಣಿ ಚಿದಾನಂದ ಎಂ.ಎ. (ಜನನ: ಶಿವಮೊಗ್ಗ ೧೯೪೫) ಈಗ ಇರುವುದು-ಶಿವಮೊಗ್ಗ ಗಂಡ-ಪ್ರೊ.ಕೆ. ಚಿದಾನಂದಗೌಡ ಎಂ.ಇ. ಕಂಪ್ಯೂಟರ್ ಸೈನ್ಸ್ ಪ್ರೊಫೆಸರ್, ಕುವೆಂಪು ವಿ.ವಿ.ಯ ಕುಲಪತಿಗಳು ಶಿವಮೊಗ್ಗ, ಕು.ಕೆ.ಸಿ. ಪ್ರಾರ್ಥನ (ಜನನ-ಮೈಸೂರು ೧೯೭೪) ಎಂಜಿನಿಯರಿಂಗ್ ಪದವಿಧರೆ, ಬೆಂಗಳೂರು ಇನ್‌ಫೋಸಿಸ್‌ನಲ್ಲಿ ಕೆಲಸ.

ವಿವರ ನೆರವು : ೧೯೯೫

ಗೆ. ತೇಜಸ್ವಿ : ಗೆ. ಹಾಮಾನಾ.

□□

ಶ್ರೀ ಎಸ್.ವಿ. ಪರಮೇಶ್ವರ ಭಟ್ಟರ ಬದುಕು-ಬರಹ



❑ ಡಾ. ಜೆ.ಕೆ. ರಮೇಶ

೧

ಕನ್ನಡ ಸಾಹಿತ್ಯ ನವೋದಯದ ಸಂದರ್ಭದ ಕವಿ ಮುಖ್ಯರಲ್ಲಿ ಒಬ್ಬರಾದ ಶೃಂಗೇರಿ ವಿದ್ಯಾರಣ್ಯಪುರ ಪರಮೇಶ್ವರ ಭಟ್ಟರ ಬದುಕನ್ನು ಕುರಿತು ಬರೆಯುವ ಕೆಲಸ ಬಹಳ ಸುಲಭ. ಏಕೆಂದರೆ ಅಕ್ಷರಶಃ ಅದೊಂದು ತೆರೆದಿಟ್ಟ ಪುಸ್ತಕ. ಪದ್ಯರೂಪದಲ್ಲಿ ಪ್ರೀತಿಯಿಂದ ಭಟ್ಟರೇ ಅದನ್ನು ಬರೆದಿಟ್ಟು ಹೋಗಿದ್ದಾರೆ. 'ಇಂದ್ರ ಚಾಪ'ದ ಮೊದಲ ಮುನ್ನೂರು ಮತ್ತು 'ಮಳೆಬಿಲ್ಲು' ಸಂಕಲನದ ಕೆಲವು ಸಾಂಗತ್ಯಗಳು ಭಟ್ಟರ ಜೀವನವನ್ನು ನಿರೂಪಿಸುತ್ತವೆ. ಅಲ್ಲದೆ ಅವರ ಮಗಳೂ ಸೇರಿದಂತೆ ಆಪ್ತರನೇಕರು ಭಟ್ಟರ ಬಗ್ಗೆ ಬರೆದಿದ್ದಾರೆ. ಅವರನ್ನು ನೋಡಿದ ಕೇಳಿದ ಹಲವರು ಅವರ ವ್ಯಕ್ತಿತ್ವದ ಬಗ್ಗೆ ಹೇಳಬಲ್ಲವರಾಗಿದ್ದಾರೆ. ಅವರ ಅನೇಕ ಮುಕ್ತಕಗಳು ವಚನಗಳು ಸ್ವವಿಚಾರವನ್ನು ಹೇಳುತ್ತವೆ.

ತಮ್ಮ ಆತ್ಮಕಥೆಯನ್ನು ಬಹು ದೀರ್ಘವಾಗಿ ಗದ್ಯ ರೂಪದ ಹೆಬ್ಬೊತ್ತಿಗೆಗಳಲ್ಲಿ ಬರೆದಿಟ್ಟು ಹೋಗಿರುವ ದೊಡ್ಡ ಸಾಹಿತಿಗಳು ನಮ್ಮಲ್ಲಿ ಹಲವರಿದ್ದಾರಾದರೂ ಭಟ್ಟರಂತೆ ಪದ್ಯರೂಪದಲ್ಲಿ ಸಂಕ್ಷಿಪ್ತವಾಗಿ ಹಾಡಿ ಹೋದವರು ಇಲ್ಲವೆಂದೇ ತೋರುತ್ತದೆ. "ಹಿಡಿದರೆ ಹಿಡಿ ತುಂಬ ಬಿಟ್ಟರೆ ಜಗವೆಲ್ಲ" ಎಂಬ ಮುಕ್ತಕಗಳ ಮರ್ಮವನ್ನು ಭಟ್ಟರು ತಮ್ಮ ಜೀವನ ನಿವೇದನೆಗೆ ಬಳಸಿಕೊಂಡಿದ್ದಾರೆ. ಪರಿಭಾವಿಸುತ್ತಾ ಹೋಗುವವರಿಗೆ ಈ ಕಾವ್ಯಮಾಲೆ ಭಟ್ಟರ ಬದುಕನ್ನು ಭಾವಪೂರ್ಣವಾಗಿ ಬಿತ್ತರಿಸುತ್ತದೆ.

ಪರಮೇಶ್ವರ ಭಟ್ಟರ ಪೂರ್ವಿಕರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರು. ಪುಣ್ಯಕ್ಷೇತ್ರ ಶೃಂಗೇರಿಗೆ ಸಮೀಪದ ವಿದ್ಯಾರಣ್ಯಪುರದ ಸಾಂಬಶಿವ ದೇವಾಲಯದಲ್ಲಿ ಅರ್ಚಕರಾಗಿ ಬಂದು ನೆಲೆ ನಿಂತವರು. ಈ ಮನೆತನದ ಸದಾಶಿವರಾಯರೆಂಬುವರು ಕನ್ನಡ ಇಂಗ್ಲೀಷುಗಳನ್ನು ಕಲಿತು ಸರಕಾರಿ ಶಾಲೆಯ ಶಿಕ್ಷಕರಾಗಿ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಮಾಳೂರು ಎಂಬಲ್ಲಿಗೆ ಬಂದರು. ಸುತ್ತ ಮುತ್ತ ಗಣ್ಯ ಮನೆತನಗಳನ್ನು ಹೊಂದಿದ್ದ ಆ ಊರಿಗೆ ಅದಾಗ ಒಂದು ಅಂಚೆ ಕಛೇರಿಯೂ ಬಂದಿತ್ತು.

ವಿಳಾಸ : "ಚಕೋರ", ೧೨ನೇ ಅಡ್ಡರಸ್ತೆ, ಸೊಪ್ಪುಗುಡ್ಡೆ, ತೀರ್ಥಹಳ್ಳಿ-೫೭೭೪೩೨

ಸದಾಶಿವರಾಯರು ದಕ್ಷ ಶಿಕ್ಷಕರಾಗಿರುವುದರೊಂದಿಗೆ ಅಂಚೆ ಮಾಸ್ತರ ಕಾರ್ಯವನ್ನೂ ನಿರ್ವಹಿಸುತ್ತಿದ್ದರು. ಅಲ್ಲಿಯೇ ಲಕ್ಷ್ಮಮ್ಮನವರೊಂದಿಗೆ ಅವರ ವಿವಾಹವಾಯಿತು. ಈ ದಂಪತಿಗೆ ಹುಟ್ಟಿದ ಮೂವರು ಮಕ್ಕಳಲ್ಲಿ ಕೊನೆಯವರೇ ಎಸ್.ವಿ. ಪರಮೇಶ್ವರ ಭಟ್ಟರು. ಹಿರಿಯರಿಬ್ಬರು ಸೋದರಿಯರು. ಮೊದಲ ವಿಶ್ವಸಮರ ಪ್ರಾರಂಭವಾದ ವರ್ಷದಲ್ಲಿ (೧೯೧೪) ಹುಟ್ಟಿದ ಭಟ್ಟರು ಮರುವರ್ಷವೇ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದರು.

ಬಾಲ್ಯ ಹುಟ್ಟೂರು ಮಾಳೂರಿನ ಸುತ್ತಮುತ್ತಲ ಹಳ್ಳಿಗಳಲ್ಲಿ ಕಳೆಯಿತು. ತಂದೆ ಸದಾಶಿವರಾಯರು ತಾಯಿಯಿಲ್ಲದ ಮಕ್ಕಳನ್ನು ಪ್ರೀತಿಯಿಂದ ಪೋಷಿಸಿದರು. ಸ್ವತಃ ಕಲಾವಿದರಾಗಿದ್ದ ಸದಾಶಿವರಾಯರು ಸಂಗೀತ, ನಾಟಕ, ಹರಿಕಥೆ, ತಾಳಮದ್ದಲೆಗಳಲ್ಲಿ ಪರಿಣತರಾಗಿದ್ದರು. ಯಕ್ಷಗಾನದ ಪ್ರಸಂಗ ರಚನಕಾರರೂ, ವೇಷಧಾರಿಗಳೂ, ಅರ್ಥಧಾರಿಗಳೂ, ಆಗಿ ಪ್ರಸಿದ್ಧರಾಗಿದ್ದರು. ಮಣ್ಣಿನಲ್ಲಿ ಮಕ್ಕಳ ಆಟಿಕೆಗಳನ್ನೂ ಪಾಠೋಪಕರಣಗಳನ್ನೂ ಮಾಡುವ ಕರಕುಶಲ ಕಲೆಯಲ್ಲಿ ನಿಪುಣರಾಗಿದ್ದು ಅದಕ್ಕಾಗಿ ಸರಕಾರದ ಪಾರಿತೋಷಕವನ್ನು ಪಡೆದಿದ್ದರು. ಸ್ಥಳೀಯ ಜನಪದಕಲೆ ಅಂಟಿಗೆ ಪಂಟಿಗೆಯನ್ನು ಅವರು ಪ್ರೋತ್ಸಾಹಿಸಿದ್ದರು. ಪುತ್ರ ಪರಮೇಶ್ವರನಿಗೂ ಬಾಲಕೃಷ್ಣನ ವೇಷ ಹಾಕಿಸಿದ್ದುಂಟು. ಹೀಗೆ ಅವರೊಬ್ಬ ಜನಮೆಚ್ಚಿದ ಆದರ್ಶ ಅಧ್ಯಾಪಕರಾಗಿದ್ದರು.

ತಂದೆಯವರಲ್ಲಿದ್ದ ಈ ಬಹುಮುಖೀ ಪ್ರತಿಭೆಯೇ ಸಾಹಿತ್ಯ ರಚನಾಶಕ್ತಿಯಾಗಿ ಭಟ್ಟರಲ್ಲಿ ಮೈದಳೆಯಿತೆನ್ನಬಹುದು. ಮಲೆನಾಡ ಹೊಳೆ-ಹಳ್ಳ, ಗಿರಿ-ದರಿ, ಕಾಡು-ಮೇಡು, ಖಗ-ಮಿಗ, ಹೊಲ-ಗದ್ದೆ, ತೆಂಗು-ಕಂಗು, ಬತ್ತ-ಬಾಳೆಗಳಿಂದೊಡಗೂಡಿದ ಚಲುವಾದ ಪ್ರಕೃತಿ ಈ ಪ್ರತಿಭೆಯನ್ನು ಪೋಷಿಸಿತು.

ಭಟ್ಟರ ಅಕ್ಷರಾಭ್ಯಾಸ ಮನೆಯಲ್ಲಿಯೇ ಆರಂಭವಾಯಿತು. ಮಾಳೂರು ತೂದೂರುಗಳಲ್ಲಿ ಪ್ರಾಥಮಿಕ ಶಿಕ್ಷಣ ಮುಗಿದ ಮೇಲೆ ಅವರನ್ನು ತೀರ್ಥಹಳ್ಳಿಯ ಪ್ರೌಢಶಾಲೆಗೆ ಸೇರಿಸಿದರು. ಇದರಿಂದಾಗಿ ಕಮಕೋಡು ನರಸಿಂಹ ಶಾಸ್ತ್ರಿಗಳಂಥ ಶ್ರೇಷ್ಠ ಶಿಕ್ಷಕರ ಸಾನ್ನಿಧ್ಯ ದೊರೆಯುವಂತಾಯಿತು. ಅಲ್ಲಿದ್ದಾಗ ಕೆರೆಮನೆಯ ಬಂಧುಗಳು ಭಟ್ಟರನ್ನು ಪೋಷಿಸಿದರು.

ನಂತರದ ಶಿಕ್ಷಣ ತಂದೆಯ ಮಿತ್ರರಾದ ಸುಬ್ಬರಾಯರೆಂಬುವರ ಕೃಪೆಯಿಂದಾಗಿ ಬೆಂಗಳೂರಿನಲ್ಲಿ ನಡೆಯಿತು. ಅಲ್ಲಿನ ಕೋಟೆ ಪ್ರೌಢಶಾಲೆಯಲ್ಲಿ ಒಂದು ಹಂತದ ಓದು ಮುಗಿಸಿ ಊರಿಗೆ ಬರುವ ಹೊತ್ತಿಗೆ ತಂದೆಯವರು ಸರಕಾರಿ ನೌಕರಿಯಲ್ಲಿ ಬಸವಳಿದಿದ್ದರು. ವಯೋವೃದ್ಧರಾಗಿ ಬಳಲಿದ್ದರು. ನಿವೃತ್ತಿಗೆ ಮೊದಲೇ ಅವರು ಕೊನೆಯುಸಿರೆಳೆದರು. ಒಂಟಿಯಾಗಿ ತಮ್ಮನ್ನೆಲ್ಲ ಸಾಕಿ ಸಲಹಿದ ತಂದೆಯನ್ನು

ಕಳೆದುಕೊಂಡು ಭಟ್ಟರು ಪೂರ್ಣ ಪ್ರಮಾಣದ ಪರದೇಸಿಯಾಗಿದ್ದರು. ಕುಟುಂಬದ ಇತರರೇ ಈಗವರ ಪೋಷಕರಾದರು.

ಮತ್ತೆ ಬೆಂಗಳೂರಿನ ಸುಬ್ಬರಾಯರೇ ನೆರವಿತ್ತು ಕಾಲೇಜು ಶಿಕ್ಷಣಕ್ಕೆ ಸೇರಿಕೊಳ್ಳುವಂತೆ ಮಾಡಿದರು. ಮನೆಯವರೂ ಪ್ರೋತ್ಸಾಹಿಸಿದರು. ಆಗಲೇ ಭಟ್ಟರ ಕೈಗಳು ಪದ್ಯ ಹೊಸೆಯಲು ಆರಂಭಿಸಿದ್ದವು. ಬೆಂಗಳೂರಿನ ಇಂಟರ್ ಮೀಡಿಯೇಟ್ ಕಾಲೇಜಿನಲ್ಲಿ ಅವರಿಗೆ ಪ್ರಾಧ್ಯಾಪಕರಾಗಿ ದೊರೆತ ಪ್ರಸಿದ್ಧ ಕವಿ ವಿ. ಸೀತಾರಾಮಯ್ಯನವರು, ವಿದ್ವಾಂಸರಾದ ಕೆ.ವೆಂಕಟರಾಮಪ್ಪನವರು ಇವರ ಕವಿತೆಯ ಬೆಳಸಿಗೆ ನೀರೆರೆದರು.

ಇಂಟರ್ ಮುಗಿಸಿ ಪದವಿ ಓದಿಗಾಗಿ ಮೈಸೂರಿಗೆ ಬಂದು ಮಹಾರಾಜ ಕಾಲೇಜಿಗೆ ಸೇರಿ ಕನ್ನಡವನ್ನೇ ಐಚ್ಛಿಕ ವಿಷಯವಾಗಿ ಆಯ್ದುಕೊಂಡರು. ಆಗ ಅಲ್ಲಿ ನಾ. ಕಸ್ತೂರಿ, ಟಿ.ಎಸ್. ವೆಂಕಣ್ಣಯ್ಯ, ತೀ.ನಂ. ಶ್ರೀಕಂಠಯ್ಯ, ಡಿ.ಎಲ್. ನರಸಿಂಹಾಚಾರ್ಯ, ಕವಿ ಕುವೆಂಪು, ಇವರೆಲ್ಲ ಪ್ರಾಧ್ಯಾಪಕ ವರ್ಗದಲ್ಲಿದ್ದು ಶಿಷ್ಯ ವಾತ್ಸಲ್ಯವನ್ನು ಮೆರೆದರು. ಕೆ.ವಿ. ಪುಟ್ಟಪ್ಪನವರು ಭಟ್ಟರು ಮಲೆನಾಡಿಗರೆಂಬ ಕಾರಣಕ್ಕೆ ಕಾವ್ಯ ಕಲೆಗೆ ಮಾರ್ಗದರ್ಶನ ನೀಡಿ ವಿಶೇಷ ಮಮತೆ ತೋರಿದರು. ಇಂಥ ವಿದ್ವತ್ ಪರಿಸರದಲ್ಲಿ ಶ್ರೀಮಂತವಾಗಿ ಸಾಗಿದ ಓದಿಗೆ ಭಟ್ಟರ ಬಡತನ ಅಡ್ಡಿ ಮಾಡಲಿಲ್ಲ. ಉದಾರಿಗಳ ಮನೆಯಲ್ಲಿ ವಾರಾನ್ನದ ವ್ಯವಸ್ಥೆ, ಸರಕಾರದ ವತಿಯಿಂದ ಶುಲ್ಕರಿಯಾಯಿತಿ ಮುಂತಾದ್ದು ದೊರೆತು ಅಶನ ವಸನಗಳಿಗೆ ಏರ್ಪಾಡಾಗಿತ್ತು. ಕೃಷ್ಣಮೂರ್ತಿ ಎಂಬೊಬ್ಬ ಶಾಶ್ವತ ಅನ್ನದಾತರೇ ದೊರೆತರು. ಭಟ್ಟರ ಅಭ್ಯಾಸ ಚೆನ್ನಾಗಿಯೇ ಸಾಗಿತ್ತು. ತರಗತಿಗೆ ಒಬ್ಬರೇ ಆದರೂ ಕಾಲೇಜಿನ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮುಂದಿದ್ದರು. ಕವನ ರಚನೆಯೂ ನಡೆದಿತ್ತು. ಶ್ರೇಷ್ಠ ಕವಿತೆಗಾಗಿ ಬಿ.ಎಂ.ಶ್ರೀ ಇರಿಸಿದ್ದ ಚಿನ್ನದ ಪದಕ ಅವರ ನೀಳ್ಗವನ 'ಮಾಚಯ್ಯ'ನಿಗೆ ದೊರೆತು (೧೯೩೭) ವಿದ್ಯಾರ್ಥಿಕವಿಯ ಕೀರ್ತಿಯನ್ನು ಹೆಚ್ಚಿಸಿತು. ಭಟ್ಟರು ಸಾಂಗವಾಗಿ ಕನ್ನಡ ಎಂ.ಎ. ಪರೀಕ್ಷೆ ಪಾಸುಮಾಡಿದರು. ಈ ಸಂಭ್ರಮದ ಸಂದರ್ಭದಲ್ಲೇ ತಮ್ಮ ಬಂಧುವರ್ಗದಲ್ಲಿ ಅನೇಕ ಆಪ್ತರನ್ನು ಕಳೆದುಕೊಂಡರು.

ಮೈಸೂರಿನ ಯುವರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇರಿದ (೧೯೩೯) ಹೊಸತರಲ್ಲೇ ಭಟ್ಟರ ವಿವಾಹ-ಮಹೋತ್ಸವ ಶ್ರೀಮತಿ ರಾಜಲಕ್ಷ್ಮಿಯವರೊಂದಿಗೆ ನೆರವೇರಿತು (೧೯೪೦). ಸಂಸಾರ ಸುಖವಾಗಿ ಸಾಗಿದ್ದಾಗ ಮೈಸೂರಿನಿಂದ ತುಮಕೂರಿಗೆ ವರ್ಗವಾಯಿತು. ಅಲ್ಲಿ ನಡೆದ ಒಂದು ಘಟನೆ ಭಟ್ಟರ ಜೀವಿತದಲ್ಲಿ ಎಂದೂ ನೆನಸಿಡುವಂಥದು. ಅದು ಸ್ವಾತಂತ್ರ್ಯ ಸಂಗ್ರಾಮ ಬಲು

ಬಿರುಸಿನಿಂದ ಸಾಗಿದ್ದ ಕಾಲ. ಗಾಂಧೀಜಿ 'ಕ್ವಿಟ್ ಇಂಡಿಯಾ' ಘೋಷಣೆ ಮಾಡಿದ್ದಾಗಿತ್ತು. ತುಮಕೂರಿನಲ್ಲೂ ಚಳುವಳಿ ತುದಿಮುಟ್ಟಿ ಸದ್ಯ ತಣ್ಣಗಾಗಿತ್ತು. ಒಂದು ದಿನ ಭಟ್ಟರು ತರಗತಿಯಲ್ಲಿ ಪಾಠ ಮಾಡುತ್ತಿದ್ದಾಗ ಮೇಜಿನ ಅರೆಯೊಳಗೆ ಮರೆಯಾಗಿರಿಸಿದ್ದ ಕೈಬಾಂಬೊಂದು ಪಿಡಿದುಬಿಟ್ಟಿತು. ಕಾದಿದ್ದ ಗಂಡಾಂತರದಿಂದ ಪಾರಾದ ಭಟ್ಟರು ಮೃತ್ಯುವೇ ತನ್ನ ಹಾಸ್ಯೋಕ್ತಿಗಳಿಗೆ ಹೆದರಿ ಓಡಿತೆಂದು ಲಘುಮಾತಿನಿಂದ ಈ ಪ್ರಸಂಗವನ್ನು ತೇಲಿಸಿದ್ದಾರೆ.

ಶಿವಮೊಗ್ಗೆಯ ಕಾಲೇಜಿಗೆ ವರ್ಗವಾಗಿ ಅಲ್ಲಿ ಬಂದು ಮನೆಮಾಡಿ ವಾಸಿಸಿದ ಕೆಲವು ವರ್ಷಗಳು ಅತ್ಯಂತ ಸುಖಮಯವಾಗಿದ್ದವು ತನ್ನೂರಿನ ಪರಿಸರದಲ್ಲಿ ಪ್ರೀತಿಯ ಪತ್ನಿಯೊಂದಿಗೆ ಸಂತೋಷದಿಂದ ದಿನಗಳನ್ನು ಕಳೆದರು. ಸಂಸಾರದಲ್ಲಿ ಸಂತಾನದ ಕುಸುಮಗಳರಳಿದವು. ಸಾಹಿತ್ಯದ ಸುಗಂಧವನ್ನು ಎಲ್ಲೆಡೆ ಹರಡಿದರು. ಕರೆದ ಊರಿಗೆಲ್ಲ ಹೋಗಿ ಕನ್ನಡ ಸಾಹಿತ್ಯ ಸುಧೆಯನ್ನುಣಿಸಿಬಂದರು. ಶಿವಮೊಗ್ಗ ನಗರದ ನಡುವಿರುವ ಕರ್ನಾಟಕ ಸಂಘ ಅವರ ಉಪನ್ಯಾಸಗಳಿಗೆ ವೇದಿಕೆಯಾಗಿ ಭಟ್ಟರನ್ನು ಬೆಳಗಿಸಿತು ಬೆಳೆಯಿಸಿತು.

ಇಂಥ ಸೊಗದ ದಿನಗಳನ್ನು ಸಾಗಿಸಿದ್ದಾಗಲೇ ಸಂಸಾರದಲ್ಲಿ ದುಗುಡದ ಧೂಳು ತುಂಬಿದ ಬಿರುಗಾಳಿ ಬೀಸ ತೊಡಗಿತು. ಶ್ರೀಮತಿ ರಾಜಲಕ್ಷ್ಮಿಯವರ ಚಿತ್ತಸ್ವಾಸ್ಥ್ಯ ಇದ್ದಕ್ಕಿದ್ದಂತೆ ಹದಗೆಟ್ಟಿತು. ಪರಿಸ್ಥಿತಿ ವಿಕೋಪಕ್ಕೆ ಹೋದಾಗ ಮೈಸೂರಿಗೆ ತಿರುಗಿ ಬಂದ ಭಟ್ಟರು ಶ್ರೀಮತಿಯವರನ್ನು ತೌರಿನ ಆರೈಕೆಗೆ ಬಿಟ್ಟರು (೧೯೫೦). ತಂದೆ ತಾಯಿ ಬಂಧುಗಳ ಸಂಘ ಸುಶ್ರೂಷೆಗಳ ಪರಿಣಾಮದಿಂದ ಪತ್ನಿಯ ಮನಃಸ್ಥಿತಿ ಸ್ಥಿಮಿತಕ್ಕೆ ಬದು ಮೊದಲಿನಂತಾದರು. ಸಂತಸದ ತಂಗಾಳಿ ಬೀಸಿತು. ಆದರೆ ಇದು ಕ್ಷಣಿಕವಾಗಿತ್ತು. ಮತ್ತೊಮ್ಮೆ ಮಡದಿಯ ಮನೋರೋಗ ಉಲ್ಬಣಿಸಿತು. ಅಡುಗೆ ಮನೆಯಲ್ಲಿ ಭಟ್ಟರು ಸೌಟು ಹಿಡಿದು ಅಡಬೇಕಾಯಿತು. ಎಲ್ಲ ಬವಣೆಗಳನ್ನು ಅನುಭವಿಸುತ್ತ ಬದುಕು ಸಾಗಿಸಿದ್ದಾಗ ರಾಜಲಕ್ಷ್ಮಿಯು ಸರಿಯಾದರೆನಿಸಿತು.

ಭಟ್ಟರು ಮೈಸೂರಿನಲ್ಲಿ ಹೊಸ ಮನೆ ಕಟ್ಟಿಸಿದರು. ನಾಲ್ವರು ಮಕ್ಕಳು ಮನೆ ತುಂಬಿದರು. ಸ್ನಾತಕೋತ್ತರ ತರಗತಿಗಳ ಬೋಧನೆಗೆ ಅವಕಾಶವಾಯಿತು. ಏನಾದರೇನು ಮರಳಿ ಮಡದಿ ಮನೋರೋಗದ ಕೋಶದಲ್ಲಿ ಸೇರಿಕೊಂಡರು.....ಅದೀಗ ಮೂಮೂಲಾಯಿತು. ನೋವು ನಷ್ಟ ಕಷ್ಟಗಳು ಭಟ್ಟರಿಗೆ ಅಭ್ಯಾಸವಾದವು. "ಸಂಸಾರದ ಒರಳಿನಲ್ಲಿ ವಿಧಿ ರುಬ್ಬುಗುಂಡಾಗಿ ತಿರುಪಿ ಭಟ್ಟರನ್ನು ಚಟ್ನಿ ಮಾಡಿದ. ಬಹು ಸಾವು ಕಂಡರು ಬಹು ನೋವನ್ನುಂಡರು ಬಳಲಿ ಬೆಂಡಾದರು." ಇದನ್ನೆಲ್ಲ ಮರೆಯಲು ಅವರ ಮಾನಸ ಗಂಗೋತ್ರಿಯ ಬದುಕು ಸಹಾಯಕವಾಯಿತು. ಅಲ್ಲಿ ಯಶಸ್ವಿ

ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿದರು. ನಾಡಿನ ಖ್ಯಾತ ಸಾಹಿತಿಗಳಾಗಿ ಕೀರ್ತಿಗಳಿಸಿದರು. 'ಬೆಳಗಿನ ಹೊತ್ತಿನೊಳಡುಗೆಯ ಭಟ್ಟನು ಸಂಜೆಗೆ ಭಾಷಣಕಾರ ಕನ್ನಡ ದೊವಜನು ಮಧ್ಯಾಹ್ನದೊಳು ನಾನು ಇರುಳು ಸರಸ ಕೃತಿಕಾರ' ಎಂಬುದಾಗಿ ತಮ್ಮ ಆಗಿನ ಸ್ಥಿತಿಯನ್ನು ಅವರು ಬಣ್ಣಿಸಿಕೊಂಡಿದ್ದಾರೆ. ಇದು ಭಟ್ಟರ ಬದುಕಿನ ದಾರುಣ ಮುಖ. ನಂಜುಂಡು ಪರಮೇಶ್ವರನೆಂಬ ಹೆಸರನ್ನು ಅನ್ವರ್ಥ ಮಾಡಿಕೊಂಡಿದ್ದೇ ಅಸಾಧಾರಣ ಸಂಗತಿ.

೧೯೬೮ರಲ್ಲಿ ಪರಮೇಶ್ವರ ಭಟ್ಟರು ಮೈಸೂರು ವಿಶ್ವವಿದ್ಯಾನಿಲಯದ ಮಂಗಳೂರು ಸ್ನಾತಕೋತ್ತರ ಕೇಂದ್ರಕ್ಕೆ ನಿರ್ದೇಶಕರಾಗಿ ನೇಮಕಗೊಂಡರು. ಇಲ್ಲಿಂದ ಅವರು ನಿವೃತ್ತರಾಗುವವರೆಗೆ (೧೯೭೪) ಕಳೆದ ಕಾಲ ಭಟ್ಟರ ಜೀವಿತದ ಸುವರ್ಣಯುಗ. ಮಂಗಳಗಂಗೋತ್ರಿಯ ಸ್ಥಳದ ಆಯ್ಕೆ ನಾಮಕರಣದಿಂದ ಹಿಡಿದು ಕೇಂದ್ರದ ಸರ್ವತೋಮುಖ ಅಭಿವೃದ್ಧಿಗೆ ಅವರು ಕಾರಣಕರ್ತೃಗಳಾದರು ತಮ್ಮ ಪ್ರವಚನಗಳಿಂದ ವಿದ್ಯಾರ್ಥಿಗಳಿಗೆ ಅತ್ಯಂತ ಪ್ರೀತಿಯ ಪ್ರಾಧ್ಯಾಪಕರೆನಿಸಿಕೊಂಡರೆ ಹೊರಗಿನ ಸಭೆ ಸಮಾರಂಭಗಳ ಭಾಷಣಗಳಿಂದ ಇಡೀ ಕರಾವಳಿಯಲ್ಲಿ ಕನ್ನಡದ ಕಂಪು ಹರಡುವಂತೆ ಮಾಡಿದರು. ಕಡಲತೀರದಲ್ಲಿ ಜನಪ್ರಿಯತೆಯ ಅಲೆಯಮೇಲೆ ತೇಲಿದರು. ಅಲ್ಲಿನ ಗಂಡು ಕಲೆ ಯಕ್ಷಗಾನದ ಬಗ್ಗೆ ಭಟ್ಟರಿಗೆ ಗೀಳು. ಜನರಿಗೆ ಇವರ ಭಾಷಣದಗೀಳು. ಹೀಗಾಗಿ ಯಕ್ಷಗಾನ ಪ್ರದರ್ಶನಗಳಿಗೆ ಭಟ್ಟರು ಹೋದಲ್ಲಿ ಜನ ಆಟದ ಮೊದಲಲ್ಲೋ ಕೊನೆಯಲ್ಲೋ ಅವರಿಂದ ಭಾಷಣಮಾಡಿಸಿ ಕೇಳಿ ಮನೆಗೆ ಹೋಗುತ್ತಿದ್ದರಂತೆ. ಇದೇ ವೇಳೆಯಲ್ಲೇ ಭಟ್ಟರನ್ನು ಬಹು ಬಗೆಯಲ್ಲಿ ಗೌರವಿಸಲಾಯಿತು ಹಲವು ಮಾನ ಸನ್ಮಾನ ಸಮಾರಂಭಗಳು ನಡೆದವು. ಅವರನ್ನು ಕುರಿತು 'ಪೂರ್ಣಕುಂಭ' 'ಮಂಗಳಗಂಗೆ' ಎಂಬ ಅಭಿನಂದನ ಗ್ರಂಥಗಳು ಬಂದವು ಭಟ್ಟರ ಮುಖ್ಯ ಕೃತಿಗಳು ಈ ಸಂದರ್ಭದಲ್ಲಿಯೇ ಪ್ರಕಟವಾದವು. ನಿಜಕ್ಕೂ ಘಟ್ಟದ ಕೆಳಗೆ ಭಟ್ಟರು ಯಕ್ಷಗಾನದ ಎರಡನೇ ವೇಷಧಾರಿಯಂತೆ ರೈಸಿದರು. ತಾನು ಬಡವನೆಂಬ ದೀನತೆ ಅವರನ್ನು ಬಿಟ್ಟು ತೊಲಗಿ ಶ್ರೀಮಂತನಲ್ಲವಾದರೂ ಮಧ್ಯಮ ವರ್ಗದ ಸುಖಿ ಎಂದು ಸಂತೃಪ್ತಿ ಪಟ್ಟುಕೊಳ್ಳುವಂತಾಯಿತು.

ನಿರ್ದೇಶಕ ಹುದ್ದೆಯಿಂದ ನಿವೃತ್ತಿ ಪಡೆದನಂತರ ಭಟ್ಟರು ಉಡುಪಿಯಲ್ಲಿ ಬ್ಯಾಂಕ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದ ತಮ್ಮ ಹಿರಿಯ ಮಗ ರಾಮಚಂದ್ರ ಅವರ ಅಂಬಲಪಾಡಿ ಮನೆಯಲ್ಲಿ ಇರತೊಡಗಿದರು. ಇಲ್ಲಿದ್ದಾಗಲೇ ಪತ್ನಿ ತೀರಿಕೊಂಡರು. ಮಗನಿಗೆ ಬೊಂಬಾಯಿಗೆ ವರ್ಗವಾದ್ದರಿಂದ ಮೈಸೂರಿನಲ್ಲಿದ್ದ ಇನ್ನೊಬ್ಬ ಮಗ ಶಿವಪ್ರಕಾಶರ ಮನೆಗೆ ಹೋಗಿ ನೆಲಸಬೇಕಾಯಿತು. ಹೆಣ್ಣುಮಕ್ಕಳು ನಾಗರತ್ನ ಮತ್ತು ವತ್ಸಲ

ತಮ್ಮ ಗಂಡಂದಿರೊಂದಿಗೆ ಅಮೆರಿಕ ಮತ್ತು ಬೆಂಗಳೂರುಗಳಲ್ಲಿದ್ದರು. ಭಟ್ಟರು ಸ್ವಂತ ಮನೆಯನ್ನು ಮಾರಿದರು. ಊರಿನಲ್ಲಿ ಅವರದ್ದೆಂಬ ಆಸ್ತಿ ಇರಲಿಲ್ಲ. ಬಹಳಹಿಂದೆಯೇ ಅಲ್ಲಿದ್ದ ಸ್ವಲ್ಪ ಆಸ್ತಿಯನ್ನು ನಿಭಾಯಿಸಲಾರದೆ ಭಟ್ಟರೇ ಮಾರಿಯಾಗಿತ್ತು. ಮಾರಣಾಂತಿಕ ರೋಗಗಳು ತಲೆದೋರಿ ಕೆಲವು ಕಾಲದ ದೈಹಿಕ ಸಂಕಟ ಅನುಭವಿಸಿ ಭಟ್ಟರು ಕೊನೆಯುಸಿರೆಳೆದಾಗ (೨೦೦೦) ಖ್ಯಾತಿ ಮತ್ತು ಜನರ ಪ್ರೀತಿ ಮಾತ್ರ ಅವರೊಂದಿಗಿದ್ದವು.

ನೊಂದ ನೋವನ್ನು ನಗುವಿನಲ್ಲಿ ಮರೆಸುತ್ತಿದ್ದ ಭಟ್ಟರು ಬಡತನದಿಂದ ಬೆಂದು ಸಮಾಜದ ಕೈಗೂಸಾಗಿ ಬೆಳೆದು ಸ್ವಲ್ಪ ಸುಖದಲ್ಲೇ ಸಂತೃಪ್ತರಾಗಿ ಜೀವನಯಾತ್ರೆ ಮುಗಿಸಿದವರು. ಶ್ರೀಮಂತಿಕೆ ತಾನಾಗಿ ಭಟ್ಟರ ಬಳಿ ಸುಳಿಯಲಿಲ್ಲ. ಗತ್ತು, ಗಾಂಭೀರ್ಯಗಳನ್ನು ಅವರು ತಮ್ಮ ಬಳಿ ಸುಳಿಯಗೊಡಲಿಲ್ಲ. ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾಗಿದ್ದು, ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾಗಿದ್ದು ಶ್ರೀ ಸಾಮಾನ್ಯರೇ ಆಗಿದ್ದರು: ತಾನು ಕಾರಿನಲ್ಲಿ ಓಡಾಡ ಬೇಕಾದವ ಎಂದು ಅವರಿಗೆ ಅನಿಸಲೇ ಇಲ್ಲ. ಬಸ್ಸೇ ಸರ್ವಸ್ವವಾಯಿತು-ತನ್ಮೂಲಕ ಅವರ ಸಾಹಿತ್ಯದಲ್ಲೂ ಒಂದು ದೊಡ್ಡ ಸೀಟು ಪಡೆಯಿತು-ಮಹಾನ್ ಪಂಡಿತರಾಗಿದ್ದೂ ಪಾಮರರೆಂದೇ ತೋರಿಸಿಕೊಂಡರು. ಗರ್ವವನ್ನೇ ದೊಡ್ಡತನವೆಂದು ಭಾವಿಸುವವರು ಇವರೆಂಥ ಡೈರೆಕ್ಟರು ಎಂದು ಉಪೇಕ್ಷೆ ಮಾಡುವ ಮಟ್ಟದ ಸರಳತೆ ಭಟ್ಟರದಾಗಿತ್ತು. ಗುರುವಾಗಿಯೂ ಹಗುರವಾಗಿದ್ದವರವರು. ನಿಗರ್ವಿಯಾಗಿದ್ದಂತೆಯೇ ನಿರ್ಮತ್ಸರಿ, ತಾನು ಉಪಕಾರಿ, ಉಪಕರಿಸಿದವರನ್ನು ಸದಾ ನೆನೆಯುವ ನಮ್ರ ವಿನಯಿ, ಕಟು ನುಡಿಗಳಿಂದ ಯಾರನ್ನೂ ನೋಯಿಸದ ಮೃದು ಹೃದಯಿ.

ಈ ಹೂಮನದ ಭಟ್ಟರ ಮುಖದಲ್ಲಿ ಆವಾಗಲೂ ನಗು. ಸಾಕಷ್ಟು ಎತ್ತರದ ನಿಲುವಿನ ಗೌರವರ್ಣದ ಅರುಣ ಛಾಯೆಯ ಮೊಗದ, ಬಿಳಿಗೂದಲ, ಶುಭ್ರ ವಸ್ತ್ರ ಧಾರಿ ಭಟ್ಟರ ರೂಪ ಒಮ್ಮೆ ನೋಡಿದರೆ ಮರೆಯಲಾಗದಂಥದು. ರಸಿಕ ನುಡಿಗಳನ್ನು ಕೇಳಿದ ಮೇಲಂತೂ ಎಂದೂ ಮರೆಯಲಾಗದಂಥದ್ದು. ಪ್ರಾಧ್ಯಾಪಕರಾಗಿಯಂತೂ ಅವರ ಯಶಸ್ಸು ಅದ್ಭುತ. ಎಂದೂ ತರಗತಿಗಳನ್ನು ತಪ್ಪಿಸದ ಶಿಸ್ತುಗಾರರಾಗಿದ್ದ ಅವರ ತರಗತಿಗಳನ್ನು ವಿದ್ಯಾರ್ಥಿಗಳು ತಪ್ಪಿಸಿಕೊಳ್ಳುತ್ತಿರಲಿಲ್ಲ. ಭಟ್ಟರ ತರಗತಿ ಇತ್ತೆಂದರೆ ಇತರ ತರಗತಿಗಳಲ್ಲಿ ವಿದ್ಯಾರ್ಥಿಗಳಿಲ್ಲವೆಂದೇ ಅರ್ಥ. ಹಾಸ್ಯ ಅವರ ಮಾತಿನ ಮುಖ್ಯ ಆಕರ್ಷಣೆ, ಧರ್ಮಶ್ರದ್ಧೆ, ದೈವಭಕ್ತಿ, ಅವರಿಗಿದ್ದುವಾದರೂ ಅವು ಅಂಧಶ್ರದ್ಧೆ ಮತೀಯ ದ್ವೇಷ, ಹುರುಳಿಲ್ಲದ ಆಚರಣೆಗಳಾಗಿರಲಿಲ್ಲ. ಎಲ್ಲರೊಂದಿಗೆ ಬೆರೆಯುತ್ತಿದ್ದ, ಸಕಲರಿಗೆ

ಒಳಿತನ್ನೇ ಬಯಸುತ್ತಿದ್ದ ಭಟ್ಟರು ಬಹಳ ಸಾರಿ ವ್ಯಾವಹಾರಿಕ ದಡ್ಡತನದಿಂದಾಗಿ ಮೋಸ ಹೋದದ್ದುಂಟು. ಪುಸ್ತಕ ಪ್ರಕಟಣೆಯ ಹುಚ್ಚಿನಲ್ಲಿ ನಷ್ಟ ಅನುಭವಿಸಿದ್ದುಂಟು. ಸಾರಸ್ವತ ಲೋಕಕ್ಕೆ ಅವರು ಕೊಟ್ಟ ಕೊಡುಗೆಗೆ ಮಾತ್ರ ಬೆಲೆ ಕಟ್ಟಲಾಗುವುದಿಲ್ಲ.

ಕಾಳಿದಾಸ ಮಹಾ ಸಂಪುಟಕ್ಕೆ ಕೇಂದ್ರ ಸಾಹಿತ್ಯ ಅಕೆಡೆಮಿಯಿಂದ ಪುರಸ್ಕೃತರಾದ ಭಟ್ಟರಿಗೆ ಇತರ ಅನೇಕ ಗೌರವಗಳು ಸಂದಿವೆಯಾದರೂ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಕೊನೆಗೂ ಸಲ್ಲಲಿಲ್ಲ. ಅಧ್ಯಕ್ಷ ಪಟ್ಟವನ್ನು ಕಾದಿರಿಸಿ ಕೇಳಲು ಬಂದಾಗ ಹೋಗಿ ಭಾಷಣ ಮಾಡಲಾರದಷ್ಟು ನಿತ್ರಾಣರಾಗಿದ್ದರು. ಭಟ್ಟರಿಗಲ್ಲದಿದ್ದರೂ ಅವರ ಅಭಿಮಾನಿಗಳಿಗೆ ಇದು ನಿರಾಶೆಯ ಸಂಗತಿಯಾಗಿತ್ತು. ಇದು ೮೭ ವರ್ಷಗಳ ಭಟ್ಟರ ಬದುಕಿನ ಸುಖ ಸಂತೋಷ ಭರಿತ ಉತ್ತರಾರ್ಧ.

೨

ಪರಮೇಶ್ವರ ಭಟ್ಟರ ಬರಹವನ್ನು ಕುರಿತು ಬರೆಯುವುದು ಕಷ್ಟದ ಕೆಲಸ. "ಕನ್ನಡ ಸಾಹಿತ್ಯದ ನಂದವನದಲ್ಲಿ ನನ್ನದೂ ಒಂದು ಜಮೀನಿದೆ. ಈ ಜಮೀನಿನಲ್ಲಿ ಕಳೆದ ನಲವತ್ತು (ನಾವಿದನ್ನು ಅರವತ್ತು ಎಂದು ತಿದ್ದಿಕೊಳ್ಳಬಹುದು) ವರುಷಗಳಿಂದ ನಾನು ಕೃಷಿ ಮಾಡಿ ಹಲವು ಬೆಳೆ ತೆಗೆದಿದ್ದೇನೆ" ಎಂದಿರುವ ಭಟ್ಟರ ಜಮೀನಿನ ವಿಸ್ತಾರ ಬಹಳ ಹೆಚ್ಚು. ಅಲ್ಲಿ ಬೆಳೆದ ಗಿಡ ಮರ ಬಳ್ಳಿ, ಹೂ ಹಣ್ಣು ಕಾಯಿಗಳಲ್ಲಿ ವೈವಿಧ್ಯವೂ ಹೆಚ್ಚು. ಅವರ ಸಾಹಿತ್ಯವನ್ನು ಓದುವವರಿಗೆ ಒರೆ ಹಚ್ಚುವವರಿಗೆ ಬಹುಶ್ರುತತೆ ಬೇಕು. ಸಹೃದಯತೆ ಬೇಕೇ ಬೇಕು. ಸಂಸ್ಕೃತ ಇಂಗ್ಲಿಷ್ ಕನ್ನಡ ಭಾಷೆಗಳ ಆಳವಾದ ಪರಿಚಯವಿರಬೇಕು. ಛಂದಸ್ಸಿನಂಥ ಕಾವ್ಯ ಶಾಸ್ತ್ರಗಳ ಚೆನ್ನಾದ ಪ್ರವೇಶವಿರಬೇಕು. ಇಷ್ಟಿದ್ದು ಶ್ರಮ ಪಡುವವರಿಗೆ ಆಸ್ವಾದದಲ್ಲಿ ಯಶಸ್ಸು ದೊರೆತೀತು.

ಎಸ್.ವಿ. ಪಿ. ಯವರು ನಮ್ಮ ಪ್ರಮುಖ ಅನುವಾದಕಾರರು. ಬಹು ಸಂಖ್ಯೆಯ (ಅರವತ್ತಕ್ಕೂ ಹೆಚ್ಚು) ಅವರ ರಚನೆಗಳಲ್ಲಿ ಸ್ವತಂತ್ರ ಕೃತಿಗಳಿಗಿಂತ ಭಾಷಾಂತರಗಳೇ ಹೆಚ್ಚು. ಸ್ವಂತದವೆನಿಸಿಕೊಳ್ಳುವುಗಳಲ್ಲಿಯೂ ಬಹಳಷ್ಟು ಭಾವಾನುವಾದವೋ, ಛಾಯಾನುವಾದವೋ, ವಿಚಾರಾನುವಾದವೋ ಆಗಿವೆ. ಅನುವಾದಕಾರರಲ್ಲಿ ಭಟ್ಟರು ಶ್ರೇಷ್ಠ ದರ್ಜೆಯವರೆಂಬ ಬಗ್ಗೆ ಎರಡು ಮಾತಿಲ್ಲ. ಅನುವಾದ ಎರಡನೆಯ ದರ್ಜೆಯ ಸ್ಫೋಟ ಎಂದು ಕೊಳ್ಳಬೇಕಾದ ಅಗತ್ಯವೂ ಇಲ್ಲ

ಅನುವಾದವೆಂದರೆ ಮೌಲ್ಯವು ಕಡಿಮೆಯೆ
ಓದಿದರಾಗದೆ ಅರಿವು
ಕಡತಂದ ಕೊಡಲಿಯ ಹರಿತವು ಕಡಿಮೆಯೆ
ಕಡಿದರೆ ಬೀಳದೆ ಮರವು (ಇಂದ್ರಚಾಪ)

ಎಂದು ಭಟ್ಟರು ಪ್ರಶ್ನಿಸಿದ್ದು ಸರಿಯಾಗಿಯೇ ಇದೆ. ಅನುವಾದದ ಶಕ್ತಿ ಸಾಮರ್ಥ್ಯಗಳನ್ನು ವ್ಯಕ್ತಪಡಿಸಿರುವ ಪ್ರಶ್ನೆ ಇದು. ಒಳ್ಳೆಯ ಅನುವಾದ ಯಾವುದೆಂಬುದು ಭಟ್ಟರಿಗೆ ಚೆನ್ನಾಗಿ ಗೊತ್ತಿದೆ. "ಅನುವಾದವನ್ನು ಓದುತ್ತಿರುವಾಗ ಯಾವುದೋ ಪರಭಾಷೆಯನ್ನು ಓದುತ್ತಿದ್ದೇನೆ ಎಂಬ ಭಾವ ಬರಬಾರದು. ಸ್ವತಂತ್ರ ಕೃತಿಯೊಂದನ್ನು ಓದುತ್ತಿದ್ದೇನೆ ಎಂಬಂತೆಯೇ ಸಲೀಲವಾಗಿ ಕೃತಿ ಓದಿಸಿಕೊಳ್ಳಬೇಕು" ಎಂಬುದು ಅವರದೇ ಅಭಿಪ್ರಾಯ. "ಅನುವಾದಗಳೆಲ್ಲ ನನ್ನ ಅಭ್ಯಾಸಕ್ಕೆ ನಾನು ಮಾಡಿಕೊಂಡವು" ಎಂದು ವಿನಯದಿಂದ ಹೇಳುತ್ತಾರಾದರೂ ಉಭಯ ಭಾಷೆಗಳನ್ನೂ ಬಲ್ಲ ಪ್ರಾಜ್ಞರು ಮುಕ್ತಕಂಠರಾಗಿ ಪ್ರಶಂಸಿಸುವಂಥ ಭಾಷಾಂತರವನ್ನು ಭಟ್ಟರು ಮಾಡಿದ್ದಾರೆ. ಮೂಲದ ಗೇಯತೆ, ಮಾಧುರ್ಯ, ಧ್ವನಿರಮ್ಯತೆ ಮುಂತಾದವು ಮುಕ್ಕಾಗದಂತೆ ಮತ್ತು ಕನ್ನಡದ ಜಾಯಮಾನಕ್ಕೆ ಹೊಂದುವಂತೆ ಅವರು ಮಾಡುವ ಅನುವಾದದ ಸೊಗಸನ್ನು, ಶ್ರೇಷ್ಠತೆಯನ್ನು ಮನವರಿಕೆ ಮಾಡಿಕೊಳ್ಳಲು ಸಂಸ್ಕೃತದ ಪ್ರಸಿದ್ಧ ಸೂಕ್ತಿಗಳ ಈ ಕೆಳಗಿನ ಎರಡು ಕನ್ನಡ ರೂಪಗಳ ಉದಾಹರಣೆ ಸಾಕು.

> ಲಲಿತ ಲವಂಗದ ಲತೆಗಳ ತೊನೆ
> ತೊನೆ ದಾಡುವ ಕೋಮಲ ಮಲಯ ಸಮೀರನೊಳು ಬಂಡುಣಿವಿಂಡು
> ನಿರಂತರ ಮೊರೆದಿರೆ ಕುಕಿಲುತಲಿರೆ ಪಿಕಕುಂಜ ಕುಟೀರದೊಳು
> (ಜಯದೇವ, ಗೀತಗೋವಿಂದ)

> ಚಿನ್ನದ ಪಾತ್ರೆಯೊಳವಿತಿರಿಸಿರುವನು
> ಸತ್ಯವನಾಸದಾಶಿವನು
> ಪಾತ್ರೆಯನೊಂದಿನಿತು ಓರೆಯ ಮಾಡು ಸದಾಶಿವ
> ಸತ್ಯವ ಕಾಣುವೆ ನಾನು (ಸುಭಾಷಿತ, ಕುಣ್ಣಿಲ್ಲು)

ಅನುವಾದದ ವಿಚಾರಕ್ಕೆ ಭಟ್ಟರದು ಸೋಲದ ಕೈ. ಸಮಗ್ರ ಸಂಸ್ಕೃತ ಸಾಹಿತ್ಯವನ್ನೇ ಕನ್ನಡಕ್ಕೆ ಭಟ್ಟಿ ಇಳಿಸುವ ವ್ರತ ತೊಟ್ಟವರಂತೆ ದುಡಿದಿದ್ದಾರೆ. ಕಾಳಿದಾಸನೊಬ್ಬನಲ್ಲದೆ ಭಾಸ, ಹರ್ಷರ ಸಮಗ್ರ ಕೃತಿಗಳನ್ನು ಅನುವಾದಿಸಿ ಸಂಪುಟಗಳನ್ನು ಪ್ರಕಟಿಸಿದ್ದಾರೆ. ಅಲ್ಲದೆ ಹಾಲರಾಜ (ಗಾಥಾ ಸಪ್ತಶತಿ) ಅಶ್ವಘೋಷ (ಬುದ್ಧ ಚರಿತೆ) ಭರ್ತೃಹರಿ

ಒಂದು ವಿಸ್ಮಯದ ಸಂಗತಿ ಎಂದರೆ ಭಟ್ಟರಿಗೆ ತಲಸ್ಪರ್ಶಿಯಾದ ಸಂಸ್ಕೃತ ಭಾಷೆಯ ಪ್ರವೇಶ ಹೇಗೆ ದೊರೆಯಿತೆಂಬ ಬಗ್ಗೆ ಎಲ್ಲೂ ಮಾಹಿತಿ ದೊರೆಯದಿರುವುದು. ಭಟ್ಟರೂ ಇದನ್ನು ಆತ್ಮಕಥೆಯಲ್ಲಿ ಹೇಳಿಕೊಂಡಿಲ್ಲ ಇತರರೂ ಹೇಳಿಲ್ಲ. ಏಕೆ ಮರೆಮಾಚಿದರೂ ತಿಳಿಯುವುದಿಲ್ಲ. ಬಹುಶಃ ಅವರ ತಂದೆಯವರು ಮನೆಯಲ್ಲೇ ಅವರಿಗೆ ಹೇಳಿ ಕೊಟ್ಟಿರಬೇಕೆಂದು ಊಹಿಸಬಹುದಾಗಿದೆ. ತಂದೆಯವರೂ ಸಂಸ್ಕೃತ ಬಲ್ಲವರೆಂಬ ಬಗ್ಗೆ ಉಲ್ಲೇಖವಿಲ್ಲ. ಸ್ವಂತ ಶ್ರಮದಿಂದಲೇ ಸಂಸ್ಕೃತ ಒಲಿಯಿತೆಂದು ತಿಳಿಯೋಣ.

(ಶತಕತ್ರಯ) ಜಯದೇವ (ಗೀತಗೋವಿಂದ) ಲಕ್ಷ್ಮೀ ನರಸಿಂಹಕವಿ (ಕವಿ ಕೌಮುದಿ) ಅಮರುಕ ಕವಿ (ಪ್ರೇಮಾರಾಧನೆ)- ಹೀಗೆ ಹಲವರ ಕೃತಿಗಳನ್ನು ಅನುವಾದಿಸಿ ಸಂಸ್ಕೃತ ಸಾಹಿತ್ಯದ ಸಾರವನ್ನು ಕನ್ನಡದಲ್ಲಿ ಅಟ್ಟು ರಸಿಕರಿಗೆ ಉಣಬಡಿಸಿದ್ದಾರೆ. ಇವುಗಳಲ್ಲಿ ಹಲವು ಮೂಲ ಸಮೇತ ಅಚ್ಚಾಗಿರುವುದು ಇನ್ನೊಂದು ಹೆಚ್ಚುಗಾರಿಕೆ. ಪ್ರಬಂಧಗಳನ್ನು ಮತ್ತು ಕವಿತೆಗಳನ್ನು ಇಂಗ್ಲಿಷಿನಿಂದ ಭಾಷಾಂತರಿಸಿ ಕೊಟ್ಟಿದ್ದಾರೆ. ಅನುವಾದ ಕ್ಷೇತ್ರಕ್ಕೆ ಭಟ್ಟರ ಕೊಡುಗೆ ಅನನ್ಯವಾದುದು ಜನಜನಿತವಾಗಿರುವ ಭಟ್ಟರ ಮುಕ್ತಕಗಳಲ್ಲಿ ಹಲವು ರೂಪಾಂತರಗಳೇ ಆಗಿವೆ.

ಭಟ್ಟರು ಕಾವ್ಯ ಕೃಷಿಯನ್ನು ಆರಂಭಿಸಿದಾಗಲೇ ಅನುವಾದ ಕಾರ್ಯವನ್ನೂ ಪ್ರಾರಂಭಿಸಿದ್ದರು. ವಿದ್ಯಾರ್ಥಿದೆಸೆಯಲ್ಲಿ ಮೈ. ವಿ.ವಿ. ರಜತೋತ್ಸವ ಸ್ವರ್ಣ ಪದಕ ಅವರಿಗೆ (ಶ್ರೀಯವರ ಪದಕ) ತಂದು ಕೊಟ್ಟಿದ್ದು 'ಮಾಚಯ್ಯ' ಎಂಬ ಕಥನ ಕವನ ಎಂದು ಹಿಂದೆಯೇ ಹೇಳಿದೆ. ಆ ನೀಳ್ಗವಿತೆ ವರ್ಡ್ಸ್‌ವರ್ತ್ ಕವಿಯ ಮೈಕಲ್ ಕವನದ ಭಾವಾನುವಾದ. ಅವರು ಕೀರ್ತಿಯ ಉತ್ತುಂಗದಲ್ಲಿದ್ದಾಗ ಅದಕ್ಕೆ ಕಿರೀಟವಿಟ್ಟ 'ಕಾಳಿದಾಸ ಮಹಾಸಂಪುಟ' ಅನುವಾದ ಕೃತಿ ಕೇಂದ್ರ ಸಾಹಿತ್ಯ ಅಕೆಡೆಮಿಯ ಪ್ರಶಸ್ತಿಯನ್ನು ಪಡೆಯಿತಲ್ಲದೆ ಭಟ್ಟರಿಗೆ 'ಕನ್ನಡದ ಕಾಳಿದಾಸಲ್ನೆಂಬ ಬಿರುದನ್ನೂ ಜನತೆಯಿಂದ ಕೊಡಿಸಿತು. ವಿಶ್ವದರ್ಜೆಯ ಮಹಾಕವಿಯೊಬ್ಬನ ಎಲ್ಲ ಕೃತಿಗಳನ್ನೂ ಇನ್ನೊಂದು ಭಾಷೆಗೆ ತರ್ಜುಮೆ ಮಾಡಿದ, ಪ್ರಕಟಿಸಿದ ಮಹಾನ್ ಸಾಹಸ ಕಾರ್ಯ ಭಟ್ಟರದಾಯಿತು. ಒಟ್ಟಿನಲ್ಲಿ ಭಟ್ಟರದು ಬೆರಗುಗೊಳಿಸುವ ಭಾಷಾಂತರ ಪ್ರತಿಭೆ.

೩

ಕವಿಯಾಗಿ ಪರಮೇಶ್ವರ ಭಟ್ಟರನ್ನು ಪರಿಗಣಿಸುವಾಗ ರಮ್ಯ ಪಂಥದ ಪ್ರಮುಖ ಭಾವಗೀತಕಾರರಲ್ಲಿ ಅವರೊಬ್ಬರೆಂಬುದನ್ನು ಮರೆಯುವಂತಿಲ್ಲ. ಶ್ರೀಯವರ ಶಿಷ್ಯರ ಗುಂಪಿನ ಕುವೆಂಪು, ಬೇಂದ್ರೆ, ಮಾಸ್ತಿಯಂಥವರೊಂದಿಗೇ ಗಣಿಸಬೇಕಾದವರು ಭಟ್ಟರು. ಸ್ವಾತಂತ್ರ್ಯಪೂರ್ವ ಕಾಲದಿಂದಲೂ ಗೀತ ರಚನೆಯಲ್ಲಿ ತೊಡಗಿಕೊಂಡಿದ್ದ ಅವರ ಐದು ಭಾವಗೀತೆಗಳ ಸಂಕಲನಗಳು ಪ್ರಕಟಿತವಾಗಿವೆ. ಭಾವಗೀತೆಗಳು ವ್ಯಕ್ತಿನಿಷ್ಠ ಸಾಹಿತ್ಯ ರೂಪಗಳಾಗಿರುವುದರಿಂದ ಕವಿಯ ಮನೋಧರ್ಮವನ್ನೇ ಬಿಂಬಿಸುತ್ತವೆ.

ರಾಗಿಣಿ (೧೯೪೦) ಪರಮೇಶ್ವರ ಭಟ್ಟರ ಮೊದಲ ಕವನಸಂಕಲನ. ಇದನ್ನೊಂದು ಪ್ರೇಮ ಕವನಗಳ ಗುಚ್ಛವೆಂದು ಕರೆಯಬಹುದು. ಇಲ್ಲಿರುವ ಇಪ್ಪತ್ತೇಳರಲ್ಲಿ ಇಪ್ಪತ್ತು ಪ್ರೀತಿಯನ್ನೇ ವಸ್ತುವಾಗುಳ್ಳ ಕವಿತೆಗಳು. ಮೇಲ್ನೋಟಕ್ಕೆ ಇವು ಬೆಟ್ಟ ಕಾಡು, ನದಿ, ಪಕ್ಕಿ, ಹೂವು ಮುಂತಾಗಿ ಪ್ರಕೃತಿಯ ಅಂಗಗಳ ವರ್ಣನೆಗಳಂತೆ ಕಾಣುತ್ತವಾದರೂ ಇಲ್ಲಿನ ಪ್ರಕೃತಿ ಪ್ರಿಯ ಪ್ರಿಯತಮೆಯರ ಪ್ರಣಯ ಇಲ್ಲವೇ ವಿರಹಕ್ಕೆ ಪೂರಕವೋ

ಪ್ರೇರಕವೋ ಆಗಿರುವಂತದು. ಮಲೆನಾಡಿನ ಮಳೆಯಮೋಡಿ ಪ್ರಣಯೀ ಜನದ ಮನದ ಜೋಡಿಯಾಗುತ್ತದೆ. ಮೋಡ ಬಿಸಿಲು ಮುನಿದ ಇನಿಯಳ ನೆನಪು ತರುತ್ತವೆ. ಮಳೆಬಿಲ್ಲು ಮನದನ್ನೆಯ ಪವಳದುಟಿಯ, ಚೆಂಗೆನ್ನೆಯ ಬಣ್ಣವಾಗಿ ಕಾಣುತ್ತದೆ. ಮಿಂಚು ಕುಪಿತೆಯ ಕಣ್ಣ ನೋಟವಾಗುತ್ತದೆ. (ಮಳೆಯ ಮೋಡಿ) ತನ್ನವಳಲ್ಲಿಗೆ ಮೆಲ್ಲಗೆ ಹೊರಟ ಇನಿಯನನ್ನು 'ಎಲ್ಲಿಗೆ ಎಲ್ಲಿಗೆ ಪಯಣವಿದೆಲ್ಲಿಗೆ' ಎನ್ನುತ್ತ ಮಲ್ಲಿಗೆ, ಗುಲಾಬಿ, ಬಕುಳ, ಚಂಪಕ ಮುಂತಾದ ಪುಷ್ಪಗಳು ಚಿವುಟಿ ಛೇಡಿಸುತ್ತವೆ ನಕ್ಕುನಲಿಯುತ್ತವೆ. (ಒಂದು ಹಾಡು). ತುಂಗೆ ಪ್ರೇಮಿಗಳ ನೌಕಾ ಕ್ರೀಡೆಗೆ ಅನುವುಗೊಡುತ್ತದೆ. ಚಂದಿರ ಇವರಿಗಾಗಿ ಬೆಳಗುತ್ತಾನೆ ಹೀಗೆ ಪ್ರಕೃತಿ ಪ್ರೇಮಿಗಳ ಸಖ್ಯ ಸಾಗುತ್ತದೆ. ಅಂತೆಯೇ ಈ ಪ್ರೇಮ ಪ್ರಪಂಚದಲ್ಲಿ ರಾಧಾಕೃಷ್ಣನ ರಾಸಲೀಲೆಯಿದೆ. ಕಲ್ಪನಾ ವಿಲಾಸವಿದೆ. 'ರಾಗಿಣಿ' ಇಲ್ಲಿರುವ ಕವನಗಳಲ್ಲೆಲ್ಲ ಉತ್ತಮವಾದದ್ದು. ವಿರಹಿಣಿ ಕನ್ಯೆಯೊಬ್ಬಳು ಅಭಿಸಾರಿಕೆಯಾಗಿ ಕಾತರತೆಯಿಂದ ಇನಿಯನಿಗಾಗಿ ಕಾದು ನಿರಾಶೆಗೊಳ್ಳುವ, 'ಪ್ರೇಮ ಶೂನ್ಯ'ವೆಂಬ ಅಭಾವ ವೈರಾಗ್ಯದ ನಿಲುವಿಗೆ ಬಂದು ನಿಲ್ಲುವ ಸಂಗತಿ ಇದರಲ್ಲಿ ಸೊಗಸಾಗಿ ಮೂಡಿಬಂದಿದೆ. 'ಒಂದು ಹಾಡು' ಮತ್ತು 'ದೀಪ ಹಚ್ಚ' ತಮ್ಮ ಗೇಯಗುಣದಿಂದ ಆಗಲೇ ಜನಮನವನ್ನು ಗೆದ್ದಿರುವ ಗೀತೆಗಳು. ದೀಪಹಚ್ಚ ಕವನದಲ್ಲಿ ಪ್ರೇಮಾಕಾಂಕ್ಷೆ ಪ್ರೇಮ ಭಿಕ್ಷೆಯೊಂದಿಗೆ ಜ್ಞಾನಭಿಕ್ಷೆಯೂ ಸಮನ್ವಯವಾಗಿ ಕವನ ಎರಡು ಆಯಾಮಗಳಲ್ಲಿ ಕೆಲಸ ಮಾಡುತ್ತದೆ. ಅಲ್ಪತೃಪ್ತಿ, ನಿಶ್ಚಿಂತೆ, ಸಹನಶೀಲತೆ ಮುಂತಾದ ಗಹನ ತತ್ವಗಳನ್ನು ಹೇಳುವ ಉದ್ದೇಶದ ಇತರ ಕವನಗಳು ಇಲ್ಲಿದ್ದು ಈ ಸಂಕಲನದ ಮೌಲ್ಯವನ್ನು ಹೆಚ್ಚಿಸಿವೆ. ಪ್ರಾರಂಭಿಕ ಕವಿಯೊಬ್ಬನ ತಾರುಣ್ಯದ ಭಾವಗಳ ವಿಲಾಸವನ್ನು ರಾಗಿಣಿಯಲ್ಲಿ ಕಾಣಬಹುದಾಗಿದೆ.

ಭಟ್ಟರ ಭಾವಗೀತೆಗಳ ಎರಡನೇ ಸಂಕಲನ "ಗಗನಚುಕ್ಕಿ". ಮೊದಲ ಕೃತಿಯಲ್ಲಿ ಪ್ರೇಮ ಮಾನ್ಯತೆ ಪಡೆದಂತೆ ಇಲ್ಲಿ ಪ್ರಕೃತಿಗೆ ಪೂಜ್ಯತೆ ಪಡೆದಿದೆ. ಪ್ರಕೃತಿ ಕವಿ ಕುವೆಂಪು ಅವರ ಈ ಮಲೆಯಣುಗದಮ್ಮನೂ ಅದೇ ಪ್ರಕೃತಿಗೆ ಮರುಳಾದದ್ದು ಸಹಜವಾದದ್ದೇ. ಇಲ್ಲಿ ಬಹುತೇಕ ಕವನಗಳು ಪ್ರಕೃತಿ ಸೌಂದರ್ಯದ ಬೇರೆ ಬೇರೆ ಮುಖಗಳನ್ನು ವರ್ಣಿಸುತ್ತವೆ. ಬೇಸಿಗೆ, ಮಳೆಗಾಲ, ಚಳಿಗಾಲ, ಹೀಗೆ ಎಲ್ಲ ಋತುಗಳು ಇಲ್ಲಿ ಬಣ್ಣನೆಗೊಂಡಿವೆ. ಹೇಮಂತದ ವರ್ಣನೆಯ ಒಂದು ಉದಾಹರಣೆಯಲ್ಲಿ ಈ ಸೌಂದರ್ಯದ ಸವಿನೋಡಬಹುದು.

ಹೇಮಂತ ಋತುರಾಜನಿಳೆಗೆ ಬಂದಿಳಿವಂದು
ಹೂವಿಲ್ಲ ಹಸುರಿಲ್ಲ ಚಿಗುರೆಲೆಗಳಿಲ್ಲ
ದುಂಬಿಗಳ ದನಿಯಿಲ್ಲ ಹಕ್ಕಿಗಳ ಹಾಡಿಲ್ಲ
ಕುಸುಮ ಗಂಧವ ತರುವ ಮರುತನಿಲ್ಲ (ಹೇಮಂತ)

ಈ ಸಾಲುಗಳ ಸರಳತೆ ಸುಭಗತೆ ಓದುಗರನ್ನು ಹಿಡಿದು ನಿಲ್ಲಿಸುತ್ತವೆ.

ಭಟ್ಟರ ಪುಷ್ಪ ಪ್ರೇಮ ವಿಶಿಷ್ಟವಾದದ್ದು. ಉದ್ಯಾನದ ಪ್ರಸಿದ್ಧ ಪುಷ್ಪಗಳೊಂದಿಗೆ ರಂಜದಹೂ ಸುರಗಿ, ಸುರಹೊನ್ನೆ, ಮುತ್ತುಗ, ಮುಂತಾದ ಅಪರೂಪದ ಕಾಡಿನ ಹೂಗಳು ಭಟ್ಟರ ಪ್ರೀತಿ ಪ್ರಶಂಸೆ ಪಡೆದಿವೆ. ಪ್ರಸಿದ್ಧಿಗಳಿಸಿಕೊಂಡಿವೆ. ಬಹುಶಃ ಪಂಪ ಹರಿಹರರನ್ನು ಬಿಟ್ಟರೆ ಇಂಥ ಸುಮ ಸಮೂಹದ ಬೆಳೆಸು ಬೇರ್ಯಾವ ಕವಿಯ ಕೃತಿಯಲ್ಲೂ ಕಾಣಸಿಗುವುದಿಲ್ಲವೆನಿಸುತ್ತದೆ. ಬೈಗು ಭೈರವಿ, ದಿನಾವಸಾನ, ಸಂಜೆಯಾಗುವ ಕ್ರಿಯೆಯನ್ನು ರುದ್ರ ರೀತಿಯಲ್ಲಿ ವರ್ಣಿಸುವ ಪ್ರಯತ್ನಗಳು.

ಮುಗಿಲಿನಂಚಿನುರಿಜ್ವಾಲೆ
ಅದೊ ಧಗಧಗಿಸುತಿದೆ
ಹಚ್ಚಹಸುರು ಬನದ ಮಾಲೆ
ಬೆಂಕಿಗೆ ಗುರಿಯಾಗಿದೆ (ಬೈಗು ಭೈರವಿ)

ಎಂಬಂಥ ಪರಂಪರೆಯಿಂದ ಪಡೆದುಕೊಂಡ ಕಲ್ಪನೆಗಳಂತೆಯೇ

ಬೋರಲಿಟ್ಟಿಹ ಬಾನ ಬಟ್ಟಲಿನ ಕೆಳಗೆ ಬುವಿ
ಅವಿತುಕೊಂಡಿತು ಮುದರಿ! ಬೆದರಿದನು ನೋಡಿ ಕವಿ

ಎಂಬಂಥ ನವೀನ ಚಿತ್ರಣಗಳನ್ನು ಈ ಪದ್ಯಗಳು ನೀಡುತ್ತವೆ. (ದಿನಾವಸಾನ) 'ಕಾಜಾಣ' ಆ ಪಕ್ಷಿಯನ್ನು ಕುರಿತ ಸುದೀರ್ಘ ಕವನ. ಶೆಲ್ಲಿಯ ಸ್ಕೈಲಾರ್ಕ್‌ನ್ನು ನೆನಪಿಗೆ ತರುವಂಥದು. 'ಗಗನ ಚುಕ್ಕಿ' ನಕ್ಷತ್ರ ವರ್ಣನೆಯ ನೆಪದಲ್ಲಿ ನಿಷ್ಕಾಂಕ್ಷೆಯ ಕರ್ತವ್ಯ ನಿಷ್ಠೆಯನ್ನು ಸಾರುವ ಕವನವಾದರೆ, ಒಂದು ರಾತ್ರಿ ಕನ್ನಡಿಗರೆಲ್ಲರ ಮನಸೂರೆಗೊಂಡಿರುವ ಪ್ರಸಿದ್ಧ ಗೀತೆ. (ತಿಳಿಮುಗಿಲ ತೊಟ್ಟಿಲಲಿ) ಗೇಯ ಗುಣದೊಂದಿಗೆ ಇಲ್ಲಿನ ವಸ್ತು ವರ್ಣನೆಗಳೂ ಉತ್ತಮವಾಗಿವೆ. ದೇವರಾಯನ ದುರ್ಗ, ಭಟ್ಕಳ, ಸ್ಥಳ ವರ್ಣನೆಗಳು ವಿಜಯನಗರದ ಗಿಣಿಗಳು, ಹಂಪೆಯಲ್ಲಿ ಗತ ಇತಿಹಾಸದ ಸ್ಮರಣೆಗಳು.

'ಅಂಚೆ ಪೆಟ್ಟಿಗೆ' ಹತ್ತೊಂಬತ್ತು ವರ್ಷಗಳ ನಂತರ ಬಂದ ಮತ್ತೊಂದು ಕವನ ಸಂಕಲನ. ಇಲ್ಲಿನ ಕವನಗಳಲ್ಲಿ ವಸ್ತು ವಿಸ್ತಾರವನ್ನು ಕಾಣಬಹುದು. ಪ್ರೇಮ ಪ್ರಕೃತಿಗಳಿಗೆ ಸೀಮಿತವಾಗಿದ್ದ ಕವಿದೃಷ್ಟಿ ದೇಶ ಸಮಾಜಗಳತ್ತ ಹರಿದಿದೆ. ಆಗಸ್ಟ್ ೧೫, ಜನವರಿ ೨೬, ಧ್ವಜವಂದನೆ ಇದಕ್ಕೆ ಸಾಕ್ಷಿಯಾಗಿವೆ.

ಜನಗಣ ಗೀತಾ ಪ್ರಸರಣ ಚಾರಣ
ರಾಷ್ಟ್ರ ನಿಕೇತನ ಚಾಲನ ಕಾರಣ
ಶ್ರಾವಣ ಸಂಧ್ಯಾ ಸುಖದ ಸಮೀರಣ
ಝುಮು ಝುಮು ಝುಮು ಝುಮು ಬೀಸುತಿದೆ
ಹೊಸ ಹೊಸ ಹರುಷವ ಸೂಸುತಿದೆ. (ಆಗಸ್ಟ್ ೧೫)

ಎಂಬಂಥ ಇಲ್ಲಿನ ಸಾಲುಗಳು ಪದಬಂಧ ಲಯಗಳ ಲವಲವಿಕೆ ಶಬ್ದಗಳ ರಿಂಗಣ ಗುಣಗಳಿಂದ ಗಮನ ಸೆಳೆಯುತ್ತವೆ. 'ಅಂಚೆ ಪೆಟ್ಟಿಗೆ' ನಿರ್ಜೀವ ಪೆಟ್ಟಿಗೆಗೆ ವ್ಯಕ್ತಿತ್ವ ನೀಡಿ ಅವಧೂತನನ್ನಾಗಿಸಿ ಸೇವಾಧರ್ಮದ ಸಂಕೇತವಾಗಿಸಿರುವ ಪದ್ಯ ಗುಚ್ಛ. ಆದರೆ ಸಾಂಕೇತಿಕತೆಯ ಸೂಚ್ಯತೆಯನ್ನು ಕಾಪಾಡಿಕೊಳ್ಳಲಾಗದೆ ವಾಚ್ಯವಾಗಿ ಬಿಡುವ ಪದ್ಯ. ಈ ಸಂಕಲನದ ಬಹುತೇಕ ಕವನಗಳು ವ್ಯಕ್ತಿ ಚಿತ್ರಣಗಳು, ಸ್ಮಾರಕ ಗೀತೆಗಳು ಬುದ್ಧ ಗಾಂಧಿಯಂಥ ರಾಷ್ಟ್ರೀಯ ಪುರುಷರಿಂದ ಇಂದಿನ ವಿದ್ಯಾರ್ಥಿಯವರೆಗೆ, ಪ್ರಾಚೀನ ಕವಿ ವೇದವ್ಯಾಸರಿಂದ ವೆಂಕಣ್ಣಯ್ಯನವರೆಗೆ ಬೇರೆ ಬೇರೆ ವ್ಯಕ್ತಿಗಳಿಗೆ ಇಲ್ಲಿ ಗೌರವ ಸಂದಿದೆ. ವಿಜ್ಞಾನಿ ವೈಮಾನಿಕರೂ ಕವಿ ದೃಷ್ಟಿಗೆ ಬಿದ್ದಿದ್ದಾರೆ. ಇದರಿಂದ ಕವಿಯ ದೃಷ್ಟಿ ಧೋರಣೆಗಳೂ ಹೊರಹೊಮ್ಮಿದೆ. ವಿಜ್ಞಾನಿಯನ್ನು ಕುರಿತು ಹೇಳುತ್ತಾ.

ಆತ್ಮ ಸಾಕ್ಷಾತ್ಕಾರದಮೃತದಾನಂದಮಂ
ಪಡೆದೆಯೇಂ? ಅದನುಳಿದ ಈ ಸಿದ್ಧಿ ಬರಿಯಹುಸಿ
ಅದೆ ಋತಂ ಅದೆ ಶಿವಂ ಅದೆ ಜಗದ್ಧಾರಣಂ

ಎಂಬುದಾಗಿ ಅಧ್ಯಾತ್ಮದ ಮಹತ್ವವನ್ನು ಆತನಿಗೆ ಬೋಧಿಸುತ್ತಾರೆ. ತಮ್ಮ ಸಂಪ್ರದಾಯಶ್ರದ್ಧೆ, ಭಕ್ತಿಭಾವ, ದೈವಶ್ರದ್ಧೆಗಳನ್ನು ಇಲ್ಲಿನ ಕವನಗಳಲ್ಲಿ ತೋರಿಸಿಕೊಂಡಿದ್ದಾರೆ.

ಈ ಸಂಕಲನದ ಇನ್ನೊಂದು ಗಮನಾರ್ಹ ಸಂಗತಿ ಎಂದರೆ ಇಲ್ಲಿನ ವ್ಯಕ್ತಿಚಿತ್ರಗಳು ಸಾನೆಟ್‌ಗಳಾಗಿರುವುದು. ಲೀಲಾಜಾಲವಾಗಿ ಸುನೀತಗಳನ್ನು ರಚಿಸಿರುವ ಕವಿ ಬಳಸಿರುವ ಸಂಸ್ಕೃತ ಭೂಯಿಷ್ಠ ಭಾಷೆಯಲ್ಲಿ ಕುವೆಂಪು ಪ್ರಭಾವ ನಿಚ್ಚಳವಾಗಿ ಕಾಣುತ್ತದೆ.

ಓದಿವ್ಯ ವಿಜ್ಞಾನಿ! ನಿನ್ನ ಪ್ರತಿಭೋದ್ದೀಪ್ತ
ಗುಪ್ತ ಸಂಶೋಧನೆಯನಾದ ಸಂಹಾರಮಂ
ಪರಮಾಣು ಸಿಡಿಮದ್ದಿನತುಳ ಪರಿಣಾಮಮ್ ನೆನೆದೆ ನಾಂ

ಇಂಥ ಸಾಲುಗಳು ಕುವೆಂಪು ಅವರನ್ನೇ ಓದಿದ ಅನುಭವ ನೀಡುತ್ತವೆ.

೧೯೭೦ರಲ್ಲಿ ಅಂದರೆ ಅಂಚೆಪೆಟ್ಟಿಗೆಗೆ ನಾಲ್ಕು ವರ್ಷಕ್ಕೆ ನಂತರ ಬಂದದ್ದು ಭಟ್ಟರ ನಾಲ್ಕನೆಯ ಸಂಕಲನ 'ಇಂದ್ರಗೋಪ.' ಧ್ವನಿಪೂರ್ಣವಾದ ಹೆಸರು ಹೊತ್ತು ಬಂದ ಈ ಕೃತಿಯಲ್ಲಿನ ಕವನಗಳಲ್ಲೂ ಧ್ವನಿಪೂರ್ಣತೆ ಕಾಣಿಸಿಕೊಂಡದ್ದೊಂದು ಸಂತಸದ ಬೆಳವಣಿಗೆ. ಭಾವಗೀತೆಗಳ ಮುಖ್ಯ ಲಕ್ಷಣವಾದ ಸಂಕ್ಷಿಪ್ತತೆಯನ್ನು ಕವಿ ಇಲ್ಲಿ ಸಾಧಿಸಿಕೊಂಡಂತೆ ಕಾಣುತ್ತದೆ. ಇಲ್ಲಿಯೂ ಪ್ರಕೃತಿಗೇ ಕವಿಯ ಪ್ರಥಮ ಪೂಜೆ ಸಂದಿದೆ. ದೈವಾರಾಧನೆಯೂ ಇಲ್ಲಿ ಮುಂದುವರಿದಿದೆ. ಭಾಗ್ಯೋದಯ, ನಿನ್ನದೆಯೊಂದಿಲ್ಲದಿದ್ದರೆ ಮುಂತಾದವು ಈ ಬಗೆಯ ಕವನಗಳು. 'ಅನುಭಾವ' ಒಂದು ಮುದ್ದಾದ ಕವನ.

ಅನುಭಾವವನ್ನೆಲ್ಲಲ್ಲಿಯೋ ಅರಸಿ ಕೊನೆಗೆ ಮನೆಯ ಮಗುವಿನ ನಗೆಯಲ್ಲಿ ಅದನ್ನು ಕಂಡುಕೊಳ್ಳುವ ಪರಿ ಸ್ವತಪೂರ್ಣವಾಗಿ ಮೂಡಿಬಂದಿದೆ. 'ಅತಿಥಿಗೆ' ಎಂಬ ಇನ್ನೊಂದು ಕವನವನ್ನು ಇಲ್ಲಿ ಹೆಸರಿಸಬೇಕು. ಆಕಸ್ಮಿಕವಾಗಿ ಅತಿಥಿಯೊಬ್ಬ ಬಂದಾಗ ಒಂದು ಬಡಕುಟುಂಬದಲ್ಲುಂಟಾಗುವ ಅವ್ಯವಸ್ಥೆ ಆತಂಕ ಮನೆಯವರ ಪರದಾಟ ಇವುಗಳನ್ನು ಹೇಳುತ್ತಲೇ ಆಧುನಿಕ ಸಮಾಜದ ಕೌಟುಂಬಿಕ ವ್ಯವಸ್ಥೆಯನ್ನು ಲೇವಡಿ ಮಾಡುವ ಈ ಕವಿತೆಗೆ ನವಿರಾದ ಹಾಸ್ಯದ ಲೇಪನವಿದೆ. ಇಂಥವೇ ಕೆಲವು ಮಿಂಚುವ ಮಿಣುಕು ಹುಳಗಳ ಹೊಳಪನ್ನುಳ್ಳ ಸಾರ್ಥಕ ಕವನಗಳ ಸಂಕಲನ ಇಂದ್ರಗೋಪ. ಮೊದಲ ಸಂಕಲನಗಳಿಗೆ ಹೋಲಿಸಿ ನೋಡಿದಾಗ ಭಾವಗೀತಕಾರರಾಗಿ ಭಟ್ಟರು ಇಲ್ಲಿ ಯಶಸ್ಸು ಕಂಡುಕೊಂಡಿದ್ದಾರೆ ಎನಿಸುತ್ತದೆ. ೧೯೯೦ರಲ್ಲಿ ಸಂಜೆಮಲ್ಲಿಗೆ ಎಂಬ ಹೆಸರಿನಿಂದ ಪ್ರಕಟಗೊಂಡ ಇನ್ನೊಂದು ಕವನ ಸಂಕಲನದ ೧೨ ಪದ್ಯಗಳಲ್ಲಿ ಇಲ್ಲಿಲ್ಲದ ವಿಶೇಷ ಲಕ್ಷಣಗಳಾವುವೂ ಕಾಣಬರುವುದಿಲ್ಲ.

ಇಷ್ಟರವರೆಗಿನ ಸಮೀಕ್ಷೆಯಿಂದ ಭಾವಗೀತೆಗಳ ಮುಖೇನ ವ್ಯಕ್ತವಾಗುವ ಭಟ್ಟರ ಮನೋಧರ್ಮವನ್ನು ಅರಿತಂತಾಯಿತು. ನವೋದಯ ಕಾಲದ ಕನ್ನಡ ಕವಿಗಳ ಅದೇ ಕಾಲ್ಪನಿಕತೆ, ಪ್ರಕೃತಿ ಆರಾಧನೆ ಆದರ್ಶಪ್ರಿಯತೆ ದೈವ ಭಕ್ತಿ ಇವು ಭಟ್ಟರ ಮನಸ್ಸನ್ನೂ ಆಳಿವೆ. ಅವರ ಕಾವ್ಯ ಒಂದು ರಮ್ಯ ಪ್ರಪಂಚ. ಅಲ್ಲಿ ದುಷ್ಟತನವಿಲ್ಲ, ಘರ್ಷಣೆಗಳಿಲ್ಲ, ಕಷ್ಟ ಕಾರ್ಪಣ್ಯಗಳಿಲ್ಲ, ಸಾವು ಸೇಡುಗಳಿಲ್ಲ, ಸಾವನ್ನೂ "ಇರುಳಿನಲಿ ಸುಳಿದು ಬಹ ನೆರಳಿನಂದದಿ ಕವಿದು ಮೆಲುನಡೆಯಿ ನಡಿಯಿಟ್ಟು ಕದ್ದು ಬಾರೆಂದು" ಕರೆಯುತ್ತಾರೆ. ಇಂಥದೊಂದು ಮನೋಧರ್ಮ ಮೆಚ್ಚುಗೆಯಾಗುತ್ತದೆ, ನಿಜ ಆದರೆ ಅಷ್ಟೇ ಸಾಕೆಂದು ತೀರ್ಮಾನಿಸಲಾಗುವುದಿಲ್ಲ. ಈ ನಿಟ್ಟಿನಿಂದ ನೋಡಿದಾಗ ಕೆಡುಕಿನ ಚಿತ್ರಣ, ಬಡತನ, ವರ್ಗ ಸಂಘರ್ಷ, ಅಮಾನವೀಯ ನಡೆಗಳನ್ನು, ಅನ್ಯಾಯಗಳನ್ನು ಕುರಿತ ಸಾತ್ವಿಕ ಪ್ರತಿಭಟನೆ ರೋಷಗಳೂ ಇಲ್ಲದ ಭಟ್ಟರ ಕಾವ್ಯದಲ್ಲಿ ದೊಡ್ಡ ಕೊರತೆ ಕಾಣಿಸಿಕೊಳ್ಳುತ್ತದೆ. ಈ ಬಗೆಗೆ ಅವರಿಗೆ ಅರಿವಿಲ್ಲವೆಂದಲ್ಲ.

ಇಂದಿನೀ ಯುಗ ಧರ್ಮವೆಂತಿಹುದದನರಿತು
ಕೃತಿ ಶತವ ರಚಿಸಿ ನೀಂ ಕೃತ ಕೃತ್ಯನಾಗು......ಎಂದು

ಕವಿಗೆ ಕರೆಕೊಡುತ್ತಾರವರು.

ಪತಿತ ಪಾಮರ ದಲಿತ ಕೂಲಿ ದೀನಾನಾಥ
ಅವಿವೇಕಿ ಅಜ್ಞಾನಿ ಪಾಪಿ ಪರದೇಸಿ
ಕೃಷಿಕ ಕಾರ್ಮಿಕ ರೋಗಿ ಯುವ ಜನ ನಿರುದ್ಯೋಗಿ
ತಿರುಕ ಶಿಪ್ಪೆಯ ಭಂಗಿ ಮೇಣ್ ದೇವದಾಸಿ

ಇವರ ನೀಂ ಸ್ವಾಗತಿಸಿ ಇವರ ನೀನಾದರಿಸಿ
ಕನಿಕರಿಸಿ ಸತ್ಕರಿಸಿ ಪೂಜೆಯಂ ಸಲಿಸಿ
ರುದ್ರ ವೀಣೆಯ ನುಡಿದು ಸಿಡಿಲು ದನಿಯಂ ನುಡಿದು
ಇವರ ಚರಿತೆಯ ಹಾಡು (ಕವಿಗೆ)

ಎಂದೂ ಉಪದೇಶಿಸುತ್ತಾರೆ. ಆದರೆ ಅವರ ಕಾವ್ಯದಲ್ಲೇ ಈ ಬಗೆಯ ಚರಿತೆಗಳು ಕಾಣಸಿಗುವುದಿಲ್ಲ. ಸ್ವಾತಂತ್ರ್ಯೋತ್ತರದ ಕಾಲದಲ್ಲಿ ರಚಿತವಾದ ಕವನಗಳಲ್ಲಿ ಅಲ್ಲಲ್ಲಿ ಈ ಬಗೆಯ ಸೂಚನೆಗಳಿವೆಯಾದರೂ ಅವೆಲ್ಲ ಬರಿಯ ಹೇಳಿಕೆಗಳ ರೂಪದಲ್ಲೋ ಉಪದೇಶ ಪ್ರಶಂಸೆಗಳ ರೂಪದಲ್ಲೋ ಕಾಣಿಸಿಕೊಳ್ಳುತ್ತವೆ. ಈಗಿನ ಸಮಾಜದ ಪಿಡುಗುಗಳಿರಲಿ ಸ್ವಾತಂತ್ರ್ಯ ಪೂರ್ವದಲ್ಲೇ ಬರೆಯಲು ತೊಡಗಿದ ಈ ಕವಿಗೆ ಸ್ವಾತಂತ್ರ್ಯ ಸಂಗ್ರಾಮದಂತಹ ಮಹತ್ವದ ಘಟನೆಯು ಪ್ರಚೋದಕವಾಗದಿದ್ದದ್ದು ಏಕೆಂದು ಅರ್ಥವಾಗುವುದಿಲ್ಲ. ಉತ್ಕಟ ಕನ್ನಡಾಭಿಮಾನಿಗಳೂ ಆಗಿರುವ ಭಟ್ಟರಿಂದ ದೇಶ ಭಾಷೆಗಳಿಗೆ ಸಂಬಂಧಿಸಿದಂತೆಯೂ ಸ್ಫೂರ್ತಿದಾಯಕ ಗೀತೆಗಳು ಸೃಷ್ಟಿಯಾದಂತಿಲ್ಲ. ಹೀಗಾಗಿ ಈ ಕವಿ ಊದಿದ "ಸುಳಿದಳಿರೆಲೆಯ ಪೀಪಿ" ವೇಣುವಾಯಿತು. ವೀಣೆಯಾಯಿತು ನಿಜ, ಕಹಳೆಯಾಗಲಿಲ್ಲ. ಮೃದಂಗವಾಯಿತು, ಭೇರಿಯಾಗಲಿಲ್ಲ. ಇನ್ನೊಂದು ಸೋಜಿಗದ ಸಂಗತಿ ಎಂದರೆ ಭಟ್ಟರ ಬದುಕಿನ (ಭಾಷಣಗಳ) ಅವಿಭಾಜ್ಯ ಅಂಗವಾಗಿರುವ, ಮುಕ್ತಕ ಮುಂತಾದ ಇತರ ಪ್ರಕಾರಗಳಲ್ಲಿ ಮುಖ್ಯಸ್ಥಾನಗಳಿಸಿಕೊಂಡಿರುವ ಹಾಸ್ಯಕ್ಕೆ ಅವರ ಭಾವಗೀತೆಗಳಲ್ಲಿ ಎಡೆದೊರೆತಿಲ್ಲ ಎನ್ನುವುದು. ವ್ಯಂಗ್ಯ ವಿಡಂಬನೆಗಳು ಕಾಣುವುದಿಲ್ಲ. ಇಂದಿನ ಯುಗಧರ್ಮಕ್ಕೆ ತಕ್ಕಂತೆ ಭಟ್ಟರ ಮನೋಧರ್ಮ ಶೈಲಿಗಳು ವ್ಯತ್ಯಾಸ ಹೊಂದಲಿಲ್ಲ. ಅದು ಗೊತ್ತಿದ್ದೂ ಭಾವಗೀತೆಗಳ ಮಟ್ಟಿಗಂತೂ ಆ ಬಗೆಯ ಬದಲಾವಣೆಗಳನ್ನು ತರಲಿಲ್ಲ. ವಸ್ತು ವೈವಿಧ್ಯತೆ, ಭಾವ ತ್ರೀವತೆ, ಭಾಷೆಯ ಜೀವಂತಿಕೆ-ಇತರ ಪ್ರಕಾರಗಳಿಗೆ ಹೋಲಿಸಿದಾಗ -ಇವುಗಳಲ್ಲೇನೋ ಕೊರತೆ ಕಂಡು ಭಾವಗೀತಕಾರರಾಗಿ ಭಟ್ಟರು ಮುಂಚೂಣಿಯಲ್ಲಿ ನಿಲ್ಲದೆ ಒಂದು ಹೆಜ್ಜೆ ಹಿಂದೆ ನಿಲ್ಲುತ್ತಾರೆನಿಸುತ್ತದೆ.

೪

ಹೊಸಗನ್ನಡ ಸಾಹಿತ್ಯಕ್ಕೆ ಪರಮೇಶ್ವರ ಭಟ್ಟರ ಕೊಡುಗೆ ಏನೆಂದು ಅವರನ್ನೇ ಕೇಳಿದಾಗ ಬಂದ ಉತ್ತರ 'ಮುಕ್ತಕ'ಗಳು ಎಂದು. ನಿಜ ಸುಮಾರು ಮೂರು ಸಾವಿರದಷ್ಟು ಮುಕ್ತಕಗಳನ್ನು ಭಟ್ಟರು ರಚಿಸಿಕೊಟ್ಟಿದ್ದಾರೆ. ಅವುಗಳಲ್ಲಿ ಬಹುತೇಕ ಅನುವಾದಗಳೇ (ರೂಪಾಂತರ) ಆದರೂ ಸಾಕಷ್ಟು ಸ್ವಂತ ಸೃಷ್ಟಿಗಳು ಇವೆ. ಸಾಂಗತ್ಯ, ತ್ರಿಪದಿ, ಏಳೆಗಳಲ್ಲಿ ಇವು ಹೆಣೆಯಲ್ಪಟ್ಟಿವೆ. ಹೆಚ್ಚಾಗಿ ರೂಪುಗೊಂಡಿರುವುದು ಸಾಂಗತ್ಯ ಛಂದದಲ್ಲಿ: ಸಾಂಗತ್ಯದ ಲಯ ಭಟ್ಟರ ಕರತಲಾಮಲಕ. ಎಲ್ಲೆಂದರಲ್ಲಿ ಸಲೀಸಾಗಿ ಸಾಂಗತ್ಯ

ಸೃಷ್ಟಿಸಬಲ್ಲ ಸಿದ್ಧ ಹಸ್ತ ಅವರದು. ಇಂದ್ರಚಾಪ, ಚಂದ್ರವೀಥಿ, ಗಾಥಾ ಸಪ್ತಶತಿ, ಕಪಿ ಕೌಮುದಿ, ಮಳೆಬಿಲ್ಲು ಈ ಎಲ್ಲವೂ ಸಾಂಗತ್ಯ ಗ್ರಂಥಗಳೇ.

ಇವುಗಳಲ್ಲಿ ಬಹುತೇಕ ಸಂಸ್ಕೃತ ಸುಭಾಷಿತಗಳು. ಹಲವರ ವಸ್ತು ದಂಪತಿಗಳ ಪ್ರೇಮ. ಕೌಟುಂಬಿಕ ಜೀವನದ ಸರಸ ವಿರಸ. ಮತ್ತೆ ಕೆಲವರಲ್ಲಿ ಲೋಕಾನುಭವ ಸ್ವಾನುಭವಗಳು ಮಾತು ಪಡೆದಿವೆ. ಹಳೆಯ ಮೌಲ್ಯಗಳ ನಡುವೆ ಹೊಸ ವಿಚಾರಗಳೂ ಆಧುನಿಕ ಸಮಾಜದ ಬದುಕೂ ಕೆಲವೊಮ್ಮೆ ತಲೆ ಹಾಕಿವೆ. ಅತ್ಯಾಧುನಿಕ ದೃಷ್ಟಾಂತಗಳು ಸಾರ್ವಕಾಲಿಕ ಸತ್ಯಗಳನ್ನು ಹೇಳಿವೆ. ಉದಾಹರಣೆಗೆ:

ಬೀದಿಯ ವಿದ್ಯುತ್ತಿನೊಂದು ಕಂಬದ ಮೇಲೆ
ಸ್ವಿಚ್ಚಿನ ಪೆಟ್ಟಿಗೆಯೊಳಗೆ
ಗೂಡು ಕಟ್ಟಿದ ಗುಬ್ಬಿ, ಸುಖವಾದುದೆನುವೋಲೆ
ಸುಖವಹುದೀಜಗ ನಿನಗೆ (ಇಂದ್ರಚಾಪ)

ಇಪ್ಪತ್ತನೇ ಶತಮಾನದ ಮಾನವನ ಅದ್ಭುತ ಸಾಧನೆಗಳಲ್ಲಿ ಅತ್ಯುನ್ನತವಾದದ್ದು ಚಂದ್ರನನ್ನು ತಲುಪಿ ಅಲ್ಲಿಳಿದು ತಂಗಿ ಹಿಂದಿರುಗಿದ್ದು. ಆ ಸಾಹಸವನ್ನು ಭಟ್ಟರು ಸಾಂಗತ್ಯದಲ್ಲಿ ಸಾಕ್ಷಾತ್ಕರಿಸಿ ಹಳತನ್ನೇ ನವ್ಯವಾಗಿಸಿದ್ದಾರೆ.

ರವಿಕಂಡ ಸಂಗತಿ ಕವಿಕಂಡ ಸಾಂಗತ್ಯ
ದಿಂದಾಯಿತೀ ನವ್ಯ ಕಾವ್ಯ (ಕೃಷ್ಣಮೇಘ)

ಕೃಷ್ಣ ಮೇಘದಲ್ಲಿ ನೀಲ್ ಆರ್ಮ್‌ಸ್ಟ್ರಾಂಗ್ ಎಡ್ವಿನ್ ಆಲ್ಡ್ರಿನ್ ಮತ್ತು ಕಾಲಿನ್ಸ್‌ರ ವೀರಗಾಥೆಯನ್ನು ಬಣ್ಣಿಸಿ ಸಾಂಗತ್ಯದ ಸಾಧ್ಯತೆಗಳನ್ನು ಒರೆ ಹಚ್ಚಿದ್ದಾರೆ. ಹೀಗೆ ಲಯ ಒಂದೇ ಆದರೂ ವಸ್ತು ವಿವಿಧವಾಗಿ ಮುಕ್ತಕಗಳು ಮನಸೆಳೆಯುತ್ತವೆ.

ಶೃಂಗಾರವೊಂದೇ ರಸವೆಂಬರು
ಕರುಣೆಯೊಂದೇ ರಸವೆಂಬರು
ಶಾಂತವೊಂದೇ ರಸವೆಂಬರು
ನಾನು ಹಾಸ್ಯವೊಂದೇ ರಸವೆಂಬ ಪಂಥದವನು ಸದಾಶಿವಗುರು
(ಪಾಮರ)

ಎನ್ನುವ ಎಸ್.ವಿ.ಪಿ.ಯವರು ಹಾಸ್ಯದ ಉಪಾಸಕರು "ಶುದ್ಧ ಬುದ್ಧಿಯಿಂದ ಉದ್ಭವಿಸಿದಂತಹ ಸದುದ್ದೇಶದಿಂದ ಕೂಡಿದಂತಹ ಸುಂದರವಾದ ಹಾಸ್ಯೋಕ್ತಿಗಳು ಅವುಗಳ ಕರ್ತಾರನ ಸಂಸ್ಕೃತಿಯ ಶ್ರೀಮಂತಿಕೆಯ ಪರಿಚಯಕ್ಕೆ ತೆರೆದ ಗವಾಕ್ಷಗಳಾಗಿ ಪರಿಣಮಿಸುತ್ತವೆ" ಎಂಬುದು ಅವರ ಖಚಿತ ನಂಬುಗೆ ಭಟ್ಟರ ಮುಕ್ತಕ ಸಾಹಿತ್ಯ ಈ ನಂಬುಗೆಗೆ ದ್ಯೋತಕವಾಗಿದೆ. ಅವರ ಬದುಕು ಈ ಸಂಸ್ಕೃತಿಗೆ ನಿದರ್ಶನವಾಗಿದೆ.

ನಗೆಗಾರಿಕೆ ಭಟ್ಟರ ಬರಹಗಳಲ್ಲಿ ಎದ್ದು ಕಾಣುವ ಗುಣಗಳಲ್ಲೊಂದಾದರೂ ಹಾಸ್ಯಸಾಹಿತಿಗಳ ಪ್ರತ್ಯೇಕ ಗುಂಪಿಗೆ ಅವರು ಸೇರಿದವರಲ್ಲ. ಹಾಸ್ಯಕ್ಕಾಗಿ ಹಾಸ್ಯವನ್ನು ತಿಣುಕಿ ಹೊಮ್ಮಿಸಿದವರೂ ಅಲ್ಲ. ಅವರ ವ್ಯಕ್ತಿತ್ವದ ಪ್ರವೃತ್ತಿಯೇ ಸಹಜವಾಗಿ ಸಾಹಿತ್ಯದಲ್ಲಿ ಅಭಿವ್ಯಕ್ತಿ ಪಡೆದಿದೆ.

ಕೆಲವು ಮುಕ್ತಕಗಳಲ್ಲಿನ ವ್ಯಂಗ್ಯ ಮೊನಚಾದರೂ ಸೂಕ್ಷ್ಮವಾದುದು. ಸೂಚ್ಯವಾದುದು ಪಕ್ಕನೆ ಹೊಲಬಾಗದೆ ಸ್ವಲ್ಪ ಹೊತ್ತಿನ ನಂತರ ಹೊತ್ತಿಕೊಂಡು ನಗೆಯ ಬೆಳಕು ಬೀರುವಂಥದು.

ಹರಿಕಥೆ ಮುಗಿವಾಗ ತಟ್ಟೆಯ ಘುಡುಗನು
ಹತ್ತಿರ ಬಂದುದು ಕಂಡು
ಜಿಪುಣರು ಮೂವರೊಳೊಬ್ಬನು ಬಿದ್ದನು
ನಡೆದರಿಬ್ಬರು ಹೊತ್ತುಕೊಂಡು (ಇಂದ್ರಚಾಪ)

ಇಂಥ ನಗೆ ಮತಾಪಿಗೆ ಇನ್ನೆರಡು ಉದಾಹರಣೆಗಳು ಇಲ್ಲಿವೆ.

ಶಾಲೆಯ ಮೇಷ್ಟರು ತುಂಟ ವಿದ್ಯಾರ್ಥಿಯ
ನೆಂದರು ತೋರಿ ತರ್ಜನಿಯ
ಸಭ್ಯರ ಜೊತೆ ನೀನು ಸೇರಲಯೋಗ್ಯನು
ಹೋಗು ಹೆಡ್ಮಾಷ್ಟರ ಬಳಿಗೆ (ಇಂದ್ರಚಾಪ)

ಪುರುಷರು ಸ್ತ್ರೀಯರು ಒಟ್ಟಿಗೆ ನಡೆದಿರೆ
ಹುಲಿಯೊಂದು ಬಂದಿತು ಮುಂದೆ
ಸ್ತ್ರೀಯರಿಗಾದ್ಯತೆ ನೀಡುವುದೊಳಿತೆಂದು
ಪುರುಷರು ನಿಂತರು ಹಿಂದೆ. (ಮುಕ್ತಕ)

ಜಾಣ್ಮೆಯಿಂದ ಕಚಗುಳಿ ಇಡುವ ಕುಹಕವಾಡುವ ಈ ಮುಕ್ತಕಗಳು ನೆನೆಸಿಕೊಂಡಷ್ಟೂ ನಗೆ ತರಿಸುತ್ತವೆ.

ಪರಮೇಶ್ವರ ಭಟ್ಟರ ಮುಕ್ತಕಗಳಲ್ಲಿನ ಹಾಸ್ಯ ಶ್ರೇಷ್ಠ ದರ್ಜೆಯದು. ಅದು ನಗಿಸುವ ಉದ್ದೇಶ ಪೂರೈಸಿ ವಿರಮಿಸುವುದಿಲ್ಲ. ನಕ್ಕಾದ ನಂತರ ಓದುಗನನ್ನು ಚಿಂತನೆಗೆ ಹಚ್ಚುತ್ತದೆ. ನೋವೇ ನಗುವಿನ ಮುಖವಾಡ ಧರಿಸಿ ಬಂದಾಗ ಅದರ ಕಾರಣವನ್ನು ನೆನೆದು ಮನಸ್ಸು ಖಿನ್ನವಾಗುತ್ತದೆ. ಗಂಡ ಹೆಂಡಿರ ಈ ಸಂಭಾಷಣೆಯನ್ನು ಕೇಳಿ:

ನೀವೊಂದು ಸೀರೆಯ ತಂದಂತೆ
ನಾ ಕಂಡೆ ಕನಸನು ನಿನ್ನೆ
ನಾಳೆ ಆ ಸೀರೆಯ ನೀನುಟ್ಟು ಮೆರೆದಂತ
ಕನಸನು ಕಾಣೆನ್ನ ಚೆನ್ನೆ (ಇಂದ್ರಚಾಪ)

ನಕ್ಕಾವ ಮೇಲೆ ಈ ದಂಪತಿಯ ಬಡತನವನ್ನು ನೆನೆದು ಹೃದಯ ಆರ್ದ್ರವಾಗುತ್ತದೆ. ಈ ಕೆಳಗಿನ ಪ್ರಸಿದ್ಧ ನಗೆ ಚಾಟಿಕೆ ಇಂದಿನ ಸ್ಪರ್ಧಾಯುಗದ ಈರ್ಷಾ ಸೂಯೆಗಳ ನಡುವೆ ಏಗುತ್ತಿರುವ ಅವಕಾಶ ವಂಚಿತ ಪ್ರತಿಭಾವಂತನ ಅಳಲನ್ನು ಹೇಳುತ್ತದೆ.

ಮೇಲಕೆ ಹತ್ತಿರಿ ಮುಂದಕೆ ಬನ್ನಿರಿ
ಎಂದು ಕಂಡಕ್ಟರು ಕರೆಯೆ
ಉಳಿದೆಲ್ಲ ಕಡೆಯೊಳು ಹಿಂದಕೆ ತಳ್ಳಿಸಿ
ಕೊಂಡವನಾನಂದಕೆಣೆಯೆ

ಹಾಸ್ಯದ ವಿಚಾರದಲ್ಲಿ 'ಭವತಿ ಭಿಕ್ಷಾಂದೇಹಿ' ಎಂದು ಹೆಂಡತಿಯೊಡನೆ ಸರಸವಾಡಿದ ತಮ್ಮ ಪರಮ ಪ್ರಿಯ ಕವಿ ಮುದ್ದಣನ ಹಾದಿಯನ್ನೇ ಹಿಡಿದು ನಡೆದಿದ್ದಾರೆ ಎಸ್.ವಿ.ಪಿ. ಇಂಥ ನಗೆ ಲೇಪನದೊಂದಿಗೆ ನೀತಿಯನ್ನು ಹೇಳಿ, ಜ್ಞಾನದ ಬೆಳಕನ್ನು ಚೆಲ್ಲಿ ಬದುಕಿಗೆ ಮಾರ್ಗದರ್ಶನ ನೀಡುವ ಭಟ್ಟರ ಮುಕ್ತಕಗಳು ಅಮೂಲ್ಯವಾಗಿವೆ. ತನ್ಮೂಲಕ ನವೋದಯ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ.

೫

ಸಾಂಗತ್ಯಗಳನ್ನು ಬಿಟ್ಟರೆ ಭಟ್ಟರು ಬಹುಸಂಖ್ಯೆಯಲ್ಲಿ ಬರೆದದ್ದು ವಚನಗಳನ್ನು. ನಿಜಕ್ಕೂ ಇದೊಂದು ವಿಶಿಷ್ಟ ಸಾಧನೆ. ಹನ್ನೆರಡನೆಯ ಶತಮಾನದಲ್ಲಿ ಜಗ್ಗನೆ ಹೊತ್ತಿ ಉಜ್ವಲವಾಗಿ ಉರಿದು ಮಾಯವಾಗಿದ್ದ ವಚನ ಸಾಹಿತ್ಯ ಪ್ರಕಾರ ಇಪ್ಪತ್ತನೇ ಶತಮಾನದಲ್ಲಿ ಮತ್ತೆ ಪ್ರತ್ಯಕ್ಷವಾಯಿತು. ಈ ಕಾಲದಲ್ಲಿ ಕುವೆಂಪು ಬೇಂದ್ರೆಯವರಂಥ ಪ್ರಥಮ ಶ್ರೇಣಿಯ ಕವಿಗಳಿಂದ ಹಿಡಿದು ಅನೇಕ ಅಪ್ರಸಿದ್ಧರೂ ಸೇರಿ ಕೃಷಿಮಾಡಿ ಈ ಪ್ರಕಾರದಲ್ಲಿ ಹೊರವಾದ ಬೆಳೆ ತೆಗೆದಿದ್ದಾರೆ. ಸುಮಾರು ಇಪ್ಪತ್ತಕ್ಕೂ ಹೆಚ್ಚು ಕವಿಗಳು ಹತ್ತು ಸಾವಿರಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದಾರೆಂದು ಡಾ॥ ಹಾ.ಮಾ. ನಾಯಕರು ಹೇಳುತ್ತಾರೆ. ಇವರಲ್ಲೆಲ್ಲ ಆಧುನಿಕ ವಚನಕಾರರೆಂದು ಪ್ರಸಿದ್ಧಿ ಪಡೆದವರು ಮೂವರು ಮಾತ್ರ. ಒಬ್ಬರು ಪ್ರೊ.ಎಸ್.ವಿ. ರಂಗಣ್ಣನವರು, ಇನ್ನೊಬ್ಬರು ಜ.ಚ.ನಿ.ಯವರು ಮತ್ತೊಬ್ಬರು ಎಸ್.ವಿ. ಪರಮೇಶ್ವರ ಭಟ್ಟರು.

ಭಟ್ಟರ ವಚನಗಳು ಸಂಖ್ಯೆಯಲ್ಲಿ ಸುಮಾರು ಎರಡು ಸಾವಿರದ ನೂರು. ಉಪ್ಪು ಕಡಲು ಪಾಮರ ಮತ್ತು ಉಂಬರ ಎಂಬ ಮೂರು ಪುಸ್ತಕಗಳಲ್ಲಿ ತಲಾ ಏಳುನೂರರಂತೆ ಅವು ಹಂಚಿ ಹೋಗಿವೆ. ಪುಸ್ತಕಗಳ ಶೀರ್ಷಿಕೆಗಳೇ ತುಂಬ ಅರ್ಥ ಪೂರ್ಣವಾಗಿವೆ. ಹಾಗೆ ನೋಡಿದರೆ ಭಟ್ಟರ ಎಲ್ಲ ಸ್ವತಂತ್ರ ಕೃತಿಗಳ ಹೆಸರುಗಳೂ ತುಂಬ ಸುಂದರ, ಧ್ವನಿಸಮನ್ವಿತ. ಇಂದ್ರಚಾಪ, ಚಂದ್ರವೀಥಿ, ಚಿತ್ರಕಥೆ, ಮಂಥಾನ, ಸುರಗಿ ಸುರಹೊನ್ನೆ,

ಕಣ್ಣುಮುಚ್ಚಾಲೆ, ತುಂಬೆಯ ಹೂ ಹೀಗೆ ಒಂದೊಂದನ್ನೂ ಪರಿಭಾವಿಸುತ್ತಾ ಹೋಗಬಹುದು-ವಚನಗಳೆಂಬ ಈ ಗದ್ಯಗೀತೆಗಳ ರೂಪಾಂಶವೆಲ್ಲ ಬಸವಾದಿ ಪ್ರಾಚ್ಯ ವಚನಕಾರರದ್ದೇ. ಅಂಕಿತದ ಛಾಪಿನಲ್ಲಿಯೂ ಆದ್ಯ ವಚನಕಾರರನ್ನೇ ಅನುಕರಿಸಲಾಗಿದೆ. ಭಟ್ಟರು ತಾವಿಟ್ಟು ಕೊಂಡ ಅಂಕಿತದ ಕುರಿತು ವಿವರಣೆ ನೀಡಿದ್ದಾರೆ. "ಸದಾಶಿವಗುರು" ಎಂಬ ನಾಮಧೇಯದಲ್ಲಿ ಮನೆದೇವರ ಹೆಸರು ಇದೆ. ಭಟ್ಟರ ತಂದೆಯವರ ಹೆಸರೂ ಇದೆ. ಆ ತಂದೆಯವರೇ ಆರಂಭದಲ್ಲಿ ಜ್ಞಾನ ಮಾರ್ಗದಲ್ಲಿ ಇವರನ್ನು ಕೈ ಹಿಡಿದು ನಡೆಸಿದ ಗುರು. ಹೀಗಾಗಿ ಅಂಕಿತ ಸಾರ್ಥಕವಾಗಿದೆ. ಇನ್ನು ಆಧುನಿಕ ಯುಗದಲ್ಲಿ ವಚನ ರಚಿಸುತ್ತಿರುವ ಭಟ್ಟರ ಕೃತಿಗಳ ಕಣಕ ಹಳೆಯದೇ ಆದರೂ ಹೂರಣ ಹೊಸತು. ಧಾಟಿ ಹಿಂದಿನದೆ ಆದರೂ ಹಾಡು ಇಂದಿನದಾಗಿದೆ.

ಶೈವ ಪಂಥದ ವಚನಕಾರರ 'ದೈವಭಕ್ತಿ, ಧರ್ಮಶ್ರದ್ಧೆ, ಮತ ಸ್ಥಾಪನೆಯ ಯತ್ನ ಆತ್ಮ ನಿವೇದನೆ, ಆತ್ಮವಿಮರ್ಶೆ, ಸಮಾಜದ ಡೊಂಕನ್ನು ತಿದ್ದುವ ಛಲ ಇವುಗಳಲ್ಲಿ ಮತ ಧರ್ಮಸ್ಥಾಪನೆ ಪ್ರಚಾರದ ಆಶಯವೊಂದನ್ನುಳಿದು ಮತ್ತೆಲ್ಲವೂ ಪಂಥಾತೀತರಾದ ಪರಮೇಶ್ವರ ಭಟ್ಟರ ವಚನಗಳಲ್ಲೂ ಇವೆ. ವಾಸ್ತವ ದೃಷ್ಟಿಯಿಂದ ಸುತ್ತಲ ಜನರ ರೀತಿ ನೀತಿಗಳನ್ನು ಕಂಡು, ಕೆಡುಕನ್ನು ವಿಡಂಬಿಸುವ, ಗೇಲಿಗೊಡ್ಡಿ ನಗುವ, ಅನುಕಂಪ ತೋರಿ ವ್ಯಥೆ ಪಡುವ, ನೀತಿ ಹೇಳಿ ಒಳಿತು ಹಾರೈಸುವ ಭಟ್ಟರ ನಿರ್ಮತ್ಸರ ಮನಸ್ಸು ಇಲ್ಲಿನ ವಚನಗಳಲ್ಲಿ ಬಿಂಬಿತವಾಗಿದೆ. ಕೆಲವು ವಚನಗಳು ವಸ್ತು ಗಹನತೆಯಿಂದಾಗಿ ಚಿಂತನೆಗೆ ಹಚ್ಚುತ್ತವೆ. ವಚನಗಳ ಭಾಷೆ ತನ್ನ ಸರಳತೆ ಸುಭಗತೆ ಧ್ವನಿರಮ್ಯತೆಗಳಿಂದ ಮನಸೆಳೆಯುತ್ತದೆ. ಭಟ್ಟರ ಸರಾಗ ವಚನ ರಚನಾ ಚಾತುರ್ಯ ತಲೆದೂಗಿಸುತ್ತದೆ. ಭಟ್ಟರಿಗೆ ಸಹಜ ಮಾಧ್ಯಮ ವಚನವೇ ಇರಬೇಕೆನಿಸಿ ಅತ್ಯಂತ ಸಂತೋಷವಾಗುತ್ತದೆ.

ವಚನ ರಚನೆಗೆ ತಮಗಿದ್ದ ತುರ್ತನ್ನು ಭಟ್ಟರು ಹೀಗೆ ಹೇಳಿಕೊಳ್ಳುತ್ತಾರೆ.

ಕಟ್ಟು ಕಥೆಯಾಗಿ ನನ್ನ ವಚನಗಳನ್ನು ಬರೆಮುದಲ್ಲ
ಕೆಟ್ಟ ಕಥೆಯಾಗಿ ನನ್ನ ವಚನಗಳನ್ನು ಬರೆದುದಲ್ಲ
ನನ್ನ ಅನಿಸಿಕೆಗಳನ್ನು ಇಂತು ಮೂಡಿಸಿದಲ್ಲದೆ ನನಗೆ ನೆಮ್ಮದಿಯಿಲ್ಲ
ಅದು ಕಾರಣ ಈ ರಚನೆಗಳೆಲ್ಲ ಹೀಗೆ ಹೊಮ್ಮಿವೆ ಸದಾಶಿವಗುರು

(ಪಾಮರ)

ನಮ್ಮ ಸಮಾಜವನ್ನು ಭಟ್ಟರ ವಚನ ಸುಲೋಚನದ ಮೂಲಕ ನೋಡೋಣ. ಬಸವಾದಿ ಪ್ರಮಥರು ಅಂದಿನ ಸಾಮಾಜಿಕರ ಮೋಸ, ನಿಷ್ಕರುಣೆಗಳನ್ನು ವಿಡಂಬಿಸಿದ್ದರು. ಉದ್ದೇಶ ಇಲ್ಲೂ ಅದೇ ಆದರೂ ದೃಷ್ಟಾಂತಗಳ ಸಾಮಗ್ರಿ ನವೀನ ಕಾಲದ್ದು ಎಂಬುವನ್ನು ಗಮನಿಸಬೇಕು. ನಮ್ಮ ನಡುವಿನ ಭ್ರಷ್ಟತೆ ಇಂದಿನ ವಚನದಲ್ಲಿ ಆದ್ಯತೆ ಪಡೆಯುತ್ತದೆ.

ಕಲ್ಲಿಲ್ಲದ ಅಕ್ಕಿಯ ಕಂಡೆನಯ್ಯ
ಕಲಬೆರಕೆಯಿಲ್ಲದ ಎಣ್ಣೆಯ ಕಂಡೆನಯ್ಯ
ನೀರು ಬೆರಸದ ಹಾಲನು ಕಂಡೆನಯ್ಯ
ಮುಷ್ಕರಗೈಯ್ಯದ ಶಾಲೆಯ ಮಕ್ಕಳ ಕಂಡೆನಯ್ಯ
ಲಂಚವಿಲ್ಲದ ಕಛೇರಿಯ ಕಂಡೆನಯ್ಯ
ಪರಾನುಕಂಪೆಯ ಪೋಲೀಸು ಕಂಡೆನಯ್ಯ
ಎಷ್ಟೊಂದು ಸುಂದರವಾದ ಕನಸಯ್ಯ ಸದಾಶಿವಗುರು (ಪಾಮರ)

ಆಧುನಿಕ ವಚನಕಾರರ ಹೆಚ್ಚುಗಾರಿಕೆ ಎಂದರೆ ವಚನ ಮಾಧ್ಯಮದಲ್ಲಿ ಪ್ರಕೃತಿಯನ್ನು ವರ್ಣಿಸಿದ್ದು. ಈ ವಿಚಾರದಲ್ಲಿ ಭಟ್ಟರೇ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ವೃತ್ತಿ ಜೀವನದ ಕೊನೆಯ ಹಂತದಲ್ಲಿ ಮಂಗಳೂರಿನಲ್ಲಿದ್ದ ಭಟ್ಟರ ಮೇಲೆ ಪಡುಗಡಲು ಅಗಾಧವಾದ ಪ್ರಭಾವ ಬೀರಿತು. ತಾವು ಕಂಡ ಸಮುದ್ರದ ವಿರಾಟ್ ಸೌಂದರ್ಯವನ್ನು ವಚನಗಳ ಸರಳವಾದ ಸಾಲುಗಳಲ್ಲಿ ಹಿಡಿದಿಟ್ಟಿದ್ದಾರೆ. ಈ ಪಶ್ಚಿಮಾಬ್ಧಿಯನ್ನು ಕುರಿತೇ ನೂರಾರು ವಚನಗಳನ್ನು ರಚಿಸಿದ್ದಾರೆ. ಅದರ ಸೌಂದರ್ಯಕಷ್ಟೆ ಮರುಳಾದದ್ದಲ್ಲ ಸಮುದ್ರವನ್ನೇ ತಮ್ಮಲ್ಲಿ ಆವಾಹಿಸಿಕೊಂಡು ಆ ತಾದಾತ್ಮ್ಯದಲ್ಲಿ ಅದರ ಒಳಹೊರಗನ್ನು ಪ್ರತ್ಯಕ್ಷೀಕರಿಸಿದ್ದಾರೆ. ಆತ್ಮೀಯವಾದ ಅದರೊಂದಿಗಿನ ಒಡನಾಟದಲ್ಲಿ ನಡೆಸಿದ ಅನುಸಂಧಾನವನ್ನು ನಿರೂಪಿಸಿದ್ದಾರೆ.

ಕಡಲು ನನ್ನೊಳು ತನ್ನನೆ ಕಂಡುಕೊಂಡಿತ್ತಯ್ಯ
ನಾನು ಕಡಲೊಳು ನನ್ನನೆ ಕಂಡುಕೊಂಡೆನಯ್ಯ
ಹೀಗಾಗಿ ಕಡಲಾಯಿತು ನಾನು
ಹೀಗಾಗಿ ನಾನಾದೆನು ಕಡಲು
ಹೀಗಾಗಿ ನಾವಿಬ್ಬರು ಆದೆವು ನಿನ್ನವರು ಸದಾಶಿವ ಗುರು
(ಉಪ್ಪು ಕಡಲು)

ಕಡಲ ಕಂಡವನು ನುಡಿಯನಾಡಲು ಹೆದರುವನಯ್ಯ
ಕಡಲ ಕಂಡವನು ಅಡಿಯನೆತ್ತಲು ಹೆದರುವನಯ್ಯ
ವಿಸ್ಮಯಕೆ ವಿಸ್ಮಯವಯ್ಯ ನಿನ್ನ ಕಡಲು ಸದಾಶಿವ ಗುರು
(ಉಪ್ಪು ಕಡಲು)

ಎಂದು ಸಾಗರದ ರುದ್ರ ರಮಣೀಯತೆ ಭವ್ಯತೆಗಳನ್ನು ಧ್ವನಿಸುತ್ತಲೇ ಭೂಮಿಯ ಮೇಲಿನ ಜನಸಾಗರದ ಮನದ ವಿಚಿತ್ರ ನಡೆಗಳನ್ನು ಎತ್ತಿ ತೋರುತ್ತಾರೆ.

ನನ್ನ ಕಡಲ ಸಲ್ಲಾಪ ಮೊನ್ನೆ ಸೊಗಸಾಗಿ ನಡೆಯಿತ್ತಯ್ಯ
ಅದು ತನ್ನ ಮನೋವ್ಯಥೆಯ ತೋಡಿಕೊಂಡರೆ
ನಾನು ನನ್ನ ಮನೋವ್ಯಥೆಯ ತೋಡಿಕೊಂಡೆನಯ್ಯ
ತನ್ನೊಳಗಣ ಮತ್ಸ್ಯ ಜಗತ್ತಿನ ಮಾತ್ಸರ್ಯಮಯದ ಬದುಕು ಸಾವುಗಳ

ಹೋರಾಟದ ಕಥೆಯನು ಕಡಲು ಹೇಳಿಕೊಂಡು ಅಳುತ್ತಿತ್ತಯ್ಯ
ನನ್ನೊಳಗಣ ನೆಲದ ಮಕ್ಕಳ ಹೇರಾಳದಸೂಯೆಯ ಬದುಕು ಸಾವುಗಳ
ಹೋರಾಟದ ಕಥೆಯನು ನಾನು ಹೇಳಿಕೊಂಡು ಅಳುತ್ತಿದ್ದೆನಯ್ಯ
ಹೀಗೆ ಉಭಯ ಕುಶಲೋಪರಿಯೊಳಿಬ್ಬರು
ತುಸು ಆಡಿ ಕೊನೆಗೆ ನಿನ್ನ ನೆನಹಿನೊಳಗದ್ದೆನಯ್ಯ ಸದಾಶಿವಗುರು.

(ಉಪ್ಪು ಕಡಲು)

ಒಂದು ನಾಟಕೀಯ ಸನ್ನಿವೇಶವನ್ನೇ ನಿರ್ಮಿಸುವ ಇಂಥ ಮಾತುಗಳು ಭಟ್ಟರ ವಚನ ರಚನಾ ಸಾಮರ್ಥ್ಯದ ದ್ಯೋತಕಗಳು. ಕೃತಕವೆನಿಸದ ಹೃದಯದಾಳದಿಂದಲೇ ಹುಟ್ಟಿ ಬಂದಂತಿರುವ ಇಂಥ ಸಾಲುಗಳ ಸೊಗಸೇ ಸೊಗಸು. ಒಂದು ಸಾಲಿನಿಂದ ಒಂದು ಪುಟದಷ್ಟು ಬೆಳೆಯುವ ಭಟ್ಟರ ವಚನಗಳು ಕೊನೆಯಲ್ಲಿ ಕೋಲ್ಮಿಂಚಿನಂತೆ ಬೆಳಗಿಸುವ ತಿರುವು ಪಡೆದಿರುತ್ತವೆ. ಕಡಲಿನ ದರ್ಶನದ ವಿಚಾರಕ್ಕಂತೂ ವಿನಾಯಕರನ್ನು ಬಿಟ್ಟರೆ ಭಟ್ಟರೇ ಸೈ. ಅವರು ಕವನ ಮುಖೇನ ಮಾಡಿದ್ದನ್ನು ಇವರು ವಚನಗಳ ಮುಖೇನ ಮಾಡಿ ಸಿದ್ಧಿಗಳಿಸಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯಕ್ಕೆ ಶ್ಲಾಘನೀಯ ಕೊಡುಗೆ ಎಸ್.ವಿ.ಪಿ. ಅವರ ವಚನಗಳು.

೬

ಪರಮೇಶ್ವರ ಭಟ್ಟರ ಸುರಗಿ-ಸುರಹೊನ್ನೆ ಎಂಬ ಕೃತಿ ತ್ರಿಪದಿಯಲ್ಲಿ ರಚಿತವಾಗಿದೆ. ತ್ರಿಪದಿ ಕನ್ನಡದ ಮೂಲ ಮಟ್ಟು. ನಮ್ಮ ಭಾಷೆಯಲ್ಲಿ ದೊರೆತ ಮೊಟ್ಟಮೊದಲ ಪದ್ಯವೇ ಮೂರುಸಾಲಿನ ತ್ರಿಪದಿ ಎಂದರೆ ಇದರ ಹಳಮೆಯ ಅರಿವಾದೀತು. ಜನಪದರ, ಮುಖ್ಯವಾಗಿ ಹಳ್ಳಿಯ ಹೆಂಗಳೆಯರ ಬಾಯಲ್ಲಿ ನಲಿದ ತ್ರಿಪದಿ ಶಿಷ್ಟ ಕಾವ್ಯಗಳಲ್ಲಿ ಬಳಕೆಯಾದದ್ದು ಕಡಿಮೆ. ನಡುಗನ್ನಡ ಕಾಲದ ಜನರಕವಿ ಸರ್ವಜ್ಞನೊಬ್ಬ ತ್ರಿಪದಿಕಾರನಾದರೆ ಹೊಸಗನ್ನಡದಲ್ಲಿ ಜಯದೇವಿ ತಾಯಿ ಲಿಗಾಡೆಯವರಿನ್ನೊಬ್ಬ-ರಿದ್ದಾರೆ. ಮತ್ತೊಬ್ಬರು ಕಾಣಸಿಗುವುದಿಲ್ಲ. ಭಟ್ಟರೇ ಈ ದೇಸಿ ಲಯವನ್ನು ಮತ್ತೆ ಹಿಡಿದು ನಡೆದವರು. ಸುರಗಿ ಸುರಹೊನ್ನೆಯಲ್ಲಿ ಏಳುನೂರು ತ್ರಿಪದಿಗಳು ಏಕತ್ರ ದೊರೆಯುತ್ತವೆ.

ಸುಂದರ ಸಂಸಾರದ ಗಂಡಹೆಂಡಿರ ಸಂಭಾಷಣೆಯ ತಂತ್ರವೊಂದು ಈ ತ್ರಿಪದಿಗಳ ಹಿನ್ನೆಲೆಗಿದೆ. ಬಾಳು ರಸಮಯವಾಗಬೇಕಾದರೆ ಪರಸ್ಪರ ಹೊಂದಾಣಿಕೆ ಅಗತ್ಯ. ಪತಿಪತ್ನಿಯರ ನಡುವಿನ ಸಾಮರಸ್ಯಕ್ಕಂತೂ ಇದು ಅತ್ಯಗತ್ಯ. ಇಂಥ ಹೊಂದಾಣಿಕೆ ಮೃದು ಮನಸ್ಸುಗಳಿಂದ ಮಾತ್ರ ಸಾಧ್ಯ. ಆದ್ದರಿಂದ ನಮ್ಮ ಮನ ಸುಮನವಾಗಬೇಕು. ಸುರಗಿಯ ಹೂವಾಗಬೇಕು. ಅದು ಸುರಗಿ(ಕತ್ತಿ)ಯಾಗಬಾರದು. ಹೃದಯ ಆರ್ದ್ರವಾಗಿರಬೇಕು. ಮನವೆಂಬ ಹೂವನ್ನು ಬಾಡಲು ಬಿಡಬಾರದು. ಈ ತತ್ವವನ್ನೇ

ಇಲ್ಲಿನ ಗೃಹಸ್ಥ ಗೃಹಿಣಿಗೆ ಹೇಳುತ್ತಾನೆ. ಎಲ್ಲ ದಂಪತಿಗೂ ಬೇಕಾದ ನೀತಿಯನ್ನು ನೀಡುತ್ತಲೇ ಕೃತಿ ತನ್ನಲ್ಲೇ ಒಂದು ಪರಿಮಿತಿಯನ್ನೂ ಹಾಕಿಕೊಳ್ಳುತ್ತದೆ.

ಪತಿ ಉಪದೇಶಿಸುತ್ತಾನೆ:

ಜೀವನವೆನುವುದು ದೇವನ ಎಡೆಗಾಗಿ
ಸಾವಧಾನದೊಳು ನಾವೆಲ್ಲ-ಕೈಗೊಂಡ
ಪಾವನಯಾತ್ರೆ ಸರಸಿಯೆ.
ಇನಿಯನೆ ಚಾಲಕ ಇನಿಯೆ ನಿಯಂತ್ರಿಣೆ
ಮನೆವಾಳ್ತೆಯೆಂಬ ಯಂತ್ರಕೆ-ಪೆಟ್ರೋಲು
ಮನದೊಲವರವು ಸರಸಿಯೆ.

ಕಡೆಯಲ್ಲಿ ಸರಸಿಯೆ ಎಂಬ ಅಂಕಿತವನ್ನೂ ಆದಿಯಲ್ಲಿ ಪ್ರಾಸವನ್ನೂ ಸುರಗಿ ಸುರಹೊನ್ನೆಯ ತ್ರಿಪದಿಗಳು ಪರಿಪಾಲಿಸಿವೆ.

೭

ಪ್ರಾಚೀನವನ್ನೇ ನವೀನವೆನಿಸುವಂತೆ ಸಮಕಾಲೀನರೆದುರು ಪ್ರಚುರ ಪಡಿಸುವ ಭಟ್ಟರ ಹಂಬಲದ ಪ್ರತಿಫಲ ತುಂಬೆಯ ಹೂ ಎಂಬ ಪುಸ್ತಕ. ಏಳೆ ಎಂಬ ತುಂಬೆಯಂತೆ ಚಿಕ್ಕದಾದ ಛಂದದಲ್ಲಿ ರಚಿಸಲ್ಪಟ್ಟಿರುವ ಈ ಕೃತಿ ಹೊಸಗನ್ನಡದಲ್ಲಿ ಅನನ್ಯ.

ಪ್ರಾಚೀನ ಕೃತಿಗಳನಾಚೀಚೆ ಮಗುಚಿದೆ
ಚಾರು ಏಳೆ ಸಿಗಲಿಲ್ಲ.

ಎನ್ನುವ ಭಟ್ಟರು ಹೊಸಗನ್ನಡದ ಹಾಡುಗಳಲ್ಲಿಯೂ ಇದು ಬಳಕೆಯಾಗಿಲ್ಲ ಎಂಬುದನ್ನೂ ಬಲ್ಲರು. ಆದ್ದರಿಂದ ಇಂಥ ಹಾಡುಗಳನ್ನು ತಾನೇ ಮೆಲ್ಲಗೆ ಹೇಳಲು ತೊಡಗಿದೆನೆಂದು ಸುಮ್ಮಾನಗೊಳ್ಳುತ್ತಾರೆ. ಭಟ್ಟರ ನಂತರ ಡಾ. ಡಿ.ಟಿ. ರಂಗಸ್ವಾಮಿ ಎನ್ನುವವರು ನುಡಿಬೆಳಕು ಎಂಬ ಏಳೆಗಳ ಸಂಗ್ರಹವನ್ನು ಪ್ರಕಟಿಸಿದ್ದಾರೆ. (೧೯೮೫)

ಗೀತದೊಳೀತೆರ ನೂತನ ರೀತಿಯ
ಮಾತಿನ ಸೊಗಸು ಎಲ್ಲಿತ್ತು
ಇಲ್ಲಿಯವರೆಗಿಂಥ ಸೊಲ್ಲೆಂಬುದಿರಲಿಲ್ಲ
ಮೆಲ್ಲಗೆ ನಾನೆ ಹೇಳಿದೆ.

ಆದರೆ ನಮ್ಮ ಜನಪದ ಹಾಡುಗಳಲ್ಲಿ ವ್ಯಾಪಕವಾಗಿ ಬಳಕೆಯಾದ ಮಟ್ಟು ಏಳೆ ಎಂಬುದನ್ನು ಭಟ್ಟರು ಮರೆತಿರಲಾರರು. ಏಳು ನೂರರಷ್ಟು ಏಳೆಗಳನ್ನು ಏಕತ್ರ ನೀಡಿದ ಎಸ್ಕೆಪಿ ಏಕಮೇವಾದ್ವಿತೀಯರು. ಸಾಂಗತ್ಯ ಸೃಜಿಸುವಾಗ ಅಂತ್ಯ ಪ್ರಾಸಕ್ಕೆ ಮಾನ್ಯತೆ ಇತ್ತ ಕವಿ. ತ್ರಿಪದಿ ಏಳೆಗಳಲ್ಲಿ ಆದಿಪ್ರಾಸವನ್ನು ನಿಯತವಾಗಿಟ್ಟು ಕೊಂಡಿದ್ದಾರೆ. ಇಲ್ಲೂ ನೀತಿ ತತ್ವಯುಕ್ತ ಮುಕ್ತಕಗಳೇ ಮುಂದುವರಿದಿವೆ.

"ಕ್ಷಣಿಕವಾದರೊ ಸಾರ್ಥಕವಾದ ಬಾಳನ್ನು ಬಾಳುವ ತುಂಬೆಯಂತೆ ಮಾನವನೂ ತನ್ನ ಬಾಳಿನ ರೂಕ್ಷತೆಯನ್ನು ಹೋಗಲಾಡಿಸಿಕೊಂಡು ಸುಂದರವಾದ ಬಾಳನ್ನು ಬಾಳಬೇಕು" ಎಂಬುದೇ ಭಟ್ಟರು ಈ ಕೃತಿಯ ಮೂಲಕ ಸಾರುವ ಸಂದೇಶ. ಈ ಸದಾಶಯ ಸುಂದರ ಉಪಮೆ ದೃಷ್ಟಾಂತ ಪ್ರಾಣಿ ಪಕ್ಷಿ ರೂಪಕಗಳ ಮುಖೇನ ಕವಿಯ ಶ್ರೀಮಂತ ಲೋಕಾನುಭವವನ್ನು ದುಡಿಸಿಕೊಳ್ಳುತ್ತ ಧ್ವನಿಪೂರ್ಣವಾಗಿ ಹೊಮ್ಮಿ ಬಂದಿದೆ. ಸವಿ ನೋಡಲು ಎರಡು ಏಳೆಗಳ ಉದಾಹರಣೆ ಸಾಕು.

ನೀಚರ ಸಂಗವು ಈಚಲ ರಸದಂತೆ
ದೋಚುವುದೊಳಗಣರಿವನು
ಎಲುಬಿಲ್ಲದಿರುವೆಯ ಬಲವನೇವೇಳ್ವುದು
ಬಲು ದೊಡ್ಡ ಕಾಳು ಹೊರುವುದು.

೮

ಮಂಥಾನ ಮತ್ತು ನೆನಪಿಗೆ ಬಂದ ಗಾದೆಗಳು ಎಂಬೆರಡು ಪುಸ್ತಕಗಳು ಗಾದೆಗಳ ಸಂಗ್ರಹಗಳಾಗಿವೆ. ವ್ಯತ್ಯಾಸವೆಂದರೆ ಮೊದಲಿನದು ಸ್ವಂತಗಾದೆಗಳನ್ನೊಳಗೊಂಡಿದ್ದರೆ ಎರಡನೆಯದು ಹಳೆಯ ಗಾದೆಗಳನ್ನು ಕಲೆ ಹಾಕಿದ್ದು. ಅವೆಲ್ಲ ಪ್ರಸಿದ್ದವೂ ಪರಿಚಿತವೂ ಆಗಿರುವಂಥವು. ಹೊಸ ಗಾದೆಗಳನ್ನೊಳಗೊಂಡ ಮಂಥಾನ ವಿಶೇಷ ಉಲ್ಲೇಖಕ್ಕೆ ಅರ್ಹವಾದ ಕೃತಿ.

ಗಾದೆಗಳು ಲೋಕಾನುಭವದ ಕೋಶಗಳಿದ್ದಂತೆ. ಇವುಗಳಲ್ಲಿ ಸೂತ್ರ ಸ್ವರೂಪದಲ್ಲಿ ಸಂಕ್ಷಿಪ್ತವಾಗಿ ಸ್ವಾರಸ್ಯಕರವಾಗಿ ನೀತಿಬೋಧಕವಾದ ಜೀವನಾನುಭವಗಳನ್ನು ಹಿಡಿದಿಟ್ಟ ಹಿರಿಮೆ ನಮ್ಮ ಜಾನಪದರದು. ಗಾದೆಗಳು ಜನಪದರ ಸಮಷ್ಠಿ ಪ್ರತಿಭೆ ಸೃಷ್ಟಿಸಿ ಚಲಾವಣೆಗೆ ಬಿಟ್ಟ ಘಟ್ಟಿನಾಟಗಳು ಸಾಧಾರಣವಾಗಿ ಗ್ರಾಮೀಣರಲ್ಲಿ ಚದುರಿ ಹೋದ ಇಂಥ ನಿಧಿಯನ್ನು ಹುಡುಕಿ ಕಲೆ ಹಾಕುವ ಕೆಲಸವನ್ನಷ್ಟೆ ವಿದ್ವಾಂಸರು ಸಾಹಿತಿಗಳು ಮಾಡುತ್ತ ಬಂದಿದ್ದಾರೆ. ಇಂಥ ಗಾದೆಗಳ ಹೊಸ ಹುಟ್ಟು ಅಸಾಧ್ಯವೆಂಬುದೇ ಎಲ್ಲರ ನಂಬಿಕೆ. ಈ ನಂಬಿಕೆಯನ್ನು ಬುಡಮೇಲು ಮಾಡಿ ಹೊಸಗಾದೆಗಳನ್ನು ಹೆಣೆದ ಹೆಗ್ಗಳಿಕೆ ಎಸ್.ವಿ.ಪಿ. ಅವರದು. ಇವು ಅವರ ಸ್ವಂತದವು. ತಮ್ಮ ಕಾಲದ ಜನರ ಬದುಕಿಗೆ ಹಿಡಿದ ಕಿರುಗನ್ನಡಿಗಳು. ಅನುಭಾವದ ಅಮೃತ ಬಿಂದುಗಳು

ಕುಣಿತ ನೋಡಿ ಗಣಿತ ಮರೆತ
ಬುದ್ಧಿ ಹೇಳಿದರೆ ಯುದ್ಧಕ್ಕೆ ಬಂದ
ಕಸಬು ಕಸಾಯಿ ಹೆಸರು ದಯಾಮಯಿ
ಆಕಳಿಕೆ ಅಕ್ಕ ತೂಕಡಿಕೆ ತಂಗಿ
ಎಷ್ಟಾದರೂ ಹೆಣ್ಣು ಏನಾದರೂ ಗಂಡು.

ಹೊಸ ಪರಿಭಾಷೆಯ ಇಂಥ ನುಡಿಜೋಡಣೆಗಳು ನೂರಾರು ಭಟ್ಟರ ಲೇಖನಿಯಿಂದ ಹೊಮ್ಮಿವೆ. ಕಾವ್ಯ ಲಕ್ಷಣಗಳ ಮಿನಿ ರೂಪಗಳಾದ ಇವು ಲೇಖಕರೇ ಹೇಳುವಂತೆ ಒಂದು ಸಾಲಿನ ಪದ್ಯಗಳು. ಹೀಗೆ ಭಟ್ಟರ "ಜ್ಞಾನವೆಂಬ ಪಾಲ್ಗಡಲಿನ ಮಥನದಿಂದ ಜನಸಿದ ನವನೀತದ" ರಾಶಿ 'ಮಂಥಾನ'ದಲ್ಲಿ ಬೆಳೆದು ನಿಂತು ಇದು ಸಾಧ್ಯವೇ ಎಂದು ಸಹೃದಯರು ಆಶ್ಚರ್ಯಾನಂದಗಳನ್ನು ಒಟ್ಟಾಗಿ ಅನುಭವಿಸುವಂತೆ ಮಾಡಿದೆ.

ಗಾದೆಗಳ ವ್ಯತ್ಯಸ್ತರೂಪಗಳಂತಿರುವ ಒಗಟುಗಳು ಕೂಡ ನಮ್ಮ ಪೂರ್ವಿಕರದೇ ಆಸ್ತಿ. ಗ್ರಾಮೀಣ ಜನರ ಚುತುರವಾಗ್ಮಿತೆ ಮತ್ತು ನಿಶಿತ ಬುದ್ಧಿಮತ್ತೆಗೆ ಸಾಕ್ಷೀ ರೂಪದ ಕಲಾಕೃತಿಗಳು ಈ ಒಗಟುಗಳು. ಸುಲಭವಾಗಿ ಬಿಡಿಸಲಾಗದ ಸಮಸ್ಯೆ ಅಥವಾ ವಿಚಿತ್ರ ಸಂಗತಿಯೊಂದನ್ನು ಸುಂದರವಾಗಿ ಹೇಳಿ ಸವಾಲೆಸೆದು ಜಾಣರಿಂದ ಪರಿಹಾರ ನಿರೀಕ್ಷಿಸುವಂಥವು. ಪುಸ್ತಕ ವಿದ್ಯೆಯನ್ನವಲಂಬಿಸದೆ. ಲೋಕಜ್ಞಾನವನ್ನೇ ನೆಮ್ಮಿ ಸೃಷ್ಟಿಯಾದವು. ಭಟ್ಟರು ಆಧುನಿಕ ಬದುಕಿನ ನೆಲೆಯಲ್ಲೇ ನಿಂತು ಚತುರೋಕ್ತಿಗಳನ್ನು ಹೊಸೆದು ತೋರಿದ್ದಾರೆ. ಇಂಥ ಉಕ್ತಿಗಳ ಸಂಕಲನ 'ಕಣ್ಣು ಮುಚ್ಚಾಲೆ'

ಹಸ್ತಿನಾ ವತೀಲಿ ಪಂಚಪಾಂಡವರು
(ಹಸ್ತದ ಐದು ಬೆರಳು)

ಹತ್ತು ಹೇರು ಹೊತ್ತುಕೊಂಡು
ಸತ್ತ ಆನೆ ಸಾಗ್ತಾ ಇದೆ (ಲಾರಿ)

ಕಾಲಿಗೆ ನಾನು ಕೈಗೆ ನೀನು ತಲೆಗೆ ಅವನು
(ಕೆರ, ಕೋಲು, ಕೊಡೆ)

ಒಗಟುಗಳೊಂದಿಗೆ ಒಡನಾಟವಾಡಿಸಿ ಭಟ್ಟರು ಮತ್ತೆ ಓದುಗರನ್ನು ಜಾನಪದ ಜಗತ್ತಿಗೆ ಕೊಂಡೊಯ್ಯುತ್ತಾರೆ. ಆ ಜನರ ಕೌಟುಂಬಿಕ ಜೀವನದ ಸರಸ ಸಂತೋಷವನ್ನು ಕಣ್ಮುಂದೆ ಕಟ್ಟಿಕೊಳ್ಳುವಂತೆ ಮಾಡುತ್ತಾರೆ. ತಮ್ಮ ಅನುವಾದ ಕೃತಿಗಳ ಮೂಲಕ ಪ್ರಾಚೀನ ಸಂಸ್ಕೃತ ವಿದ್ವತ್ ಲೋಕದ ಪಂಡಿತೋತ್ತಮರನ್ನು ಪುನರುಜ್ಜೀವಿಸಿದ ಎಸ್.ವಿ.ಪಿ. ಕನ್ನಡ ದೇಸಿ ಛಂದಸ್ಸುಗಳ ಪುನರ್ ಪ್ರಯೋಗದ ನೆಪದಲ್ಲಿ ಜನಪದರ ಕುರಿತ ಪ್ರೀತಿಯನ್ನೇ ಮೆರೆದಿದ್ದಾರೆನಿಸುತ್ತದೆ. ತ್ರಿಪದಿ ಏಳೆ ಗಾದೆ ಒಗಟುಗಳೆಲ್ಲ ಕನ್ನಡದ ಪಂಡಿತ ಕವಿಗಳ ಪರಿಕರಗಳಾಗಿರದೆ ಜನಪದ ಕವಿಗಳ ವಾಗ್ಮಾರ್ಗಗಳೇ ಆಗಿದ್ದವೆಂಬುದನ್ನು ನೆನಪಿಸಿಕೊಳ್ಳಬೇಕು. ಈ ಅರ್ಥದಲ್ಲಿ ಪರಮೇಶ್ವರ ಭಟ್ಟರನ್ನು ನವ ನಾಗರಿಕ ಜನಪದ ಕವಿ ಎನ್ನಬಹುದು. ಅಂದಿನವರು ಅಜ್ಞಾತರಾಗಿದ್ದರೆ ಇವರು ಸುವಿಖ್ಯಾತರಾಗಿದ್ದಾರೆ ಎಂಬುದಷ್ಟೆ ವ್ಯತ್ಯಾಸ.

ಕವಿ, ವಾಗ್ಮಿಯಾಗಿ ಖ್ಯಾತಿ ಪಡೆದಿರುವ ಪರಮೇಶ್ವರ ಭಟ್ಟರು ಗದ್ಯಕಾರರಾಗಿಯೂ ಸುಪರಿಚಿತರು. ಏಳೆಂಟು ಗದ್ಯ ಕೃತಿಗಳನ್ನು ರಚಿಸಿ ಪ್ರಕಟಿಸಿದ್ದಾರೆ. ಅವುಗಳಲ್ಲಿ ಮುನ್ನುಡಿಗಳು ಭಾಷಣಗಳು ಅನುವಾದಿತ ಪ್ರಬಂಧಗಳೊಂದಿಗೆ ವಿಮರ್ಶಾಕೃತಿಗಳೂ ಇವೆ. ಉತ್ಕಟ ಕನ್ನಡ ಅಭಿಮಾನಿಯಾದ ಭಟ್ಟರು ಸಾಂಗತ್ಯ ಮತ್ತಿತರ ಪದ್ಯ ಪ್ರಕಾರಗಳಲ್ಲಿ ಅಲ್ಲಲ್ಲಿ ಭಾಷೆಯ ಪ್ರೀತಿ, ಪರಿಶುದ್ಧತೆ, ಏಳಿಗೆಗಳನ್ನು ಕುರಿತು ಬರೆದದ್ದಿದೆ. ಇವಲ್ಲದೆ 'ಕನ್ನಡ ಮತ್ತು ನಾನು' ಎಂಬ ಪ್ರತ್ಯೇಕ ಗದ್ಯ ಕೃತಿಯನ್ನೇ ಹೊರತಂದು ಕನ್ನಡ ಕಾಳಜಿಯನ್ನು ತೋರ್ಪಡಿಸಿದ್ದಾರೆ.

ಅವರ ವಿಮರ್ಶಾ ಕೃತಿಗಳಲ್ಲಿ 'ಸೀಳುನೋಟ' ಸಾಕಷ್ಟು ಪ್ರಸಿದ್ಧಿ ಪಡೆದಿದೆ. ಪಂಪ, ಅಕ್ಕಮಹಾದೇವಿ, ಬಸವಣ್ಣ, ಕುವೆಂಪು ಮತ್ತು ವೀ.ಸೀ.ಯವರ ಸಾಹಿತ್ಯವನ್ನು ಕುರಿತ ರಸ ವಿಮರ್ಶಾ ಪ್ರಬಂಧಗಳು ಇದರಲ್ಲಿವೆ. 'ಪ್ರಬಂಧಗಳು' ಎಂಬ ಹೆಸರಿನ ಇನ್ನೊಂದು ಪುಸ್ತಕದಲ್ಲಿ ಕಾಳಿದಾಸ, ಹಾಲರಾಜ, ಅಮರುಕ ಕವಿಗಳ ಸಂಸ್ಕೃತ ಕೃತಿಗಳು -ಇವುಗಳನ್ನು ಎಸ್.ವಿ.ಪಿ. ಅನುವಾದಿಸಿಯೂ ಇದ್ದಾರೆ-ಕನ್ನಡದ ಮುದ್ದಣ ಮತ್ತು ವಿನಾಯಕರ ಗದ್ಯ ಪದ್ಯ ಕಾವ್ಯಗಳನ್ನು ವಿಶ್ಲೇಷಿಸಿದ್ದಾರೆ.

ಭಟ್ಟರ ವಿಮರ್ಶೆ ಸಾಹಿತ್ಯ ಕೃತಿಗಳಲ್ಲಿ ಲಕ್ಷಣಗಳಲ್ಲಿನ ಸಲ್ಲಕ್ಷಣಗಳು ಮತ್ತು ಉಚ್ಚ ಗುಣಗಳ ಮೇಲೆ ಬೆಳಕು ಚೆಲ್ಲುವ ದಾರಿದೀಪ ಕೃತಿಯನ್ನು ಬೆಳಗಿಸುವುದು ಕೃತಿಕಾರನನ್ನು ಗೌರವಿಸುವುದು ಅವರ ಸಾತ್ವಿಕ ವಿಮರ್ಶೆಯ ಉದ್ದೇಶ. ದೋಷಗಳಿದ್ದರೂ ಎತ್ತಿ ಹೇಳದೆ ಮುಚ್ಚಿಡುವ ಸೌಜನ್ಯ ಅವರದು. ಕಾವ್ಯರಚನೆಯ ಸಂದರ್ಭದಲ್ಲಿ ಕ್ರಿಯಾಶೀಲವಾಗಿದ್ದ ಸುಮನಸ್ಸನ್ನು ಕಾವ್ಯಕೃತಿಗಳನ್ನು ಒರೆ ಹಚ್ಚುವ ಸಂದರ್ಭದಲ್ಲೂ ಜಾಗೃತವಾಗಿಟ್ಟುಕೊಳ್ಳುವುದು ಭಟ್ಟರ ವೈಶಿಷ್ಟ್ಯ.

ಮೈಸೂರು ವಿಶ್ವ ವಿದ್ಯಾನಿಲಯ ಪ್ರಕಟಿಸಿರುವ 'ಭಾವಗೀತೆ' ಆ ಪ್ರಕಾರದ ಹುಟ್ಟು, ಬೆಳವಣಿಗೆ, ಒಳ ಭೇದಗಳು, ಮುಖ್ಯ ಲಕ್ಷಣಗಳು ಮತ್ತು ಮಹತ್ವಗಳನ್ನು ಸರಳವಾಗಿ ಪರಿಣಾಮಕಾರಿಯಾಗಿ ವಿವರಿಸುವ ಕಿರು ಹೊತ್ತಿಗೆ 'ಅಕ್ಕಮಹಾದೇವಿ' ಎಂಬುದು ಕೂಡ ಶಿವಶರಣೆಯ ಜೀವನಾನುಭವ, ಅನುಭಾವಗಳನ್ನು ಅವಳ ವಚನಗಳ ಸಾಹಿತ್ಯಿಕ ಗುಣಗಳನ್ನು ಬಣ್ಣಿಸುವ ಪುಟ್ಟ ಪುಸ್ತಿಕೆ. ಈ ಕೃತಿಗಳ ಕಾರಣಕ್ಕೆ ಆಧುನಿಕ ವಿಮರ್ಶೆಯ ಸಂದರ್ಭದಲ್ಲಿ ಎಸ್.ವಿ.ಪಿ. ನೆನಪಿಸಿಕೊಳ್ಳಲ್ಪಡುತ್ತಾರೆ. ಕುವೆಂಪು ಅವರನ್ನು ಕುರಿತು ಅವರು ಬರೆದಿರುವ ಮಹತ್ವಾಕಾಂಕ್ಷೆಯ ಪುಸ್ತಕ 'ರಸಋಷಿ ಕುವೆಂಪು' ಐದು ಸಂಪುಟಗಳಲ್ಲಿ ಮೈ.ವಿ.ವಿ. ಪ್ರಸಾರಾಂಗದಿಂದ ಪ್ರಕಟವಾಗಿದೆ.

ಮುದ್ದಣ್ಣ ಕವಿಯ ಶ್ರೀರಾಮ ಪಟ್ಟಾಭಿಷೇಕಂ ಮತ್ತು ಶ್ರೀ ರಾಮಾಶ್ವಮೇಧಂ ಎಂಬ ಕೃತಿಗಳು ಭಟ್ಟರ ಸಂಪಾದನ ಕ್ಷೇತ್ರದ ದುಡಿಮೆಯ ಸತ್ಫಲಗಳಾಗಿವೆ.

೧೦

ಈ ಸಮೀಕ್ಷೆ ಎಲ್ಲ ಕೃತಿಗಳನ್ನೂ ಒಳಗೊಂಡಿಲ್ಲ ಇಷ್ಟರಿಂದಲೇ ಭಟ್ಟರ ಸಾಹಿತ್ಯ ಕೃಷಿಯ ಅಗಾಧತೆ ತಿಳಿಯುತ್ತದೆ. ನವೋದಯದ ಕವಿಗಳಲ್ಲಿ ಈ ಪ್ರಮಾಣದಲ್ಲಿ ಕೃತಿ ರಚಿಸಿದವರು ವಿರಳ. ಗದ್ಯ ರಚನೆ ಅದರಲ್ಲೂ ಕಥೆ ಕಾದಂಬರಿಗಳ ರಚನೆಯಲ್ಲಿ ಐವತ್ತು ನೂರರ ಸಂಖ್ಯೆಯನ್ನು ಸಮೀಪಿಸಿದವರು ಮೀರಿ ನಡೆದವರೂ ಇದ್ದಾರೆ. ಪದ್ಯ ಕೃತಿಗಳನ್ನು ಈ ಸಂಖ್ಯೆಯಲ್ಲಿ ರಚಿಸಿದವರು ಅಪರೂಪವೆನ್ನಬಹುದು. ಅದರಲ್ಲೂ ಛಂದೋಬದ್ಧ ರಚನೆಗಳು ಈ ಪ್ರಮಾಣದಲ್ಲಿ ಯಾರಿಂದಲೂ ಸೃಷ್ಟಿಯಾಗಿಲ್ಲ. ರಮ್ಯ ಕವಿಗಳೆಲ್ಲ ಹೊಸಗನ್ನಡದ ಲಯಗಳನ್ನು ರೂಢಿಗೊಳಿಸಿದರೇ ಹೊರತು ಹಳೆಯ ಛಂದಗಳಿಗೆ ಅಂಟಿಕೊಳ್ಳಲಿಲ್ಲ. ಭಟ್ಟರಾದರೋ ಸಂಕಲ್ಪ ತೊಟ್ಟು ದೇಸಿ ಛಂದಸ್ಸುಗಳನ್ನು ಪುನರುದ್ಧಾರ ಮಾಡಿದರು. ಅವರ ಮೊದಲ ಕವಿತೆಗಳಲ್ಲಿ ಮತ್ತು ಅನುವಾದ ಕೃತಿಗಳಲ್ಲಿ ಷಟ್ಪದಿಯೂ ಹೇರಳವಾಗಿ ಬಳಕೆಯಾಗಿದೆ. ಹೀಗಾಗಿ ಈ ಪ್ರಯೋಗಶೀಲ ಕವಿ ಹಳೆಯ ಬಾಟಲಿಯಲ್ಲಿ ಹೊಸ ಜೇನು ಕೊಟ್ಟವರು. ಶೀಶೆಗಳ ಆಕೃತಿಯಲ್ಲಿ ವೈವಿಧ್ಯತೆ ಇರುವಂತೆ ಒಳಗಿರುವ ದ್ರವ್ಯದಲ್ಲಿಯೂ ರುಚಿ ಭಿನ್ನತೆ ಇದೆ. ಭಟ್ಟರು ಪದ್ಯಗಳ ವಸ್ತುವಿಗಾಗಿ ತಡಕಾಡಲಿಲ್ಲ. ಬದುಕಿನಲ್ಲಿ ಕಣ್ಣೆದುರು ಮನದೆದುರು ಹಾದು ಹೋದ ಎಲ್ಲವೂ ಅವರ ಕಾವ್ಯಕ್ಕೆ ಸಾಮಗ್ರಿಯಾದವು. ಅದು ಹೂ, ಮರ, ಕಾಡು, ಕಡಲು, ಹೆಣ್ಣು- ಗಂಡು, ಮಾನವ, ದೇವತೆ, ವೇದಾಂತ- ವಿಜ್ಞಾನ ಸೈಕಲ್ಲು- ಬಸ್ಸು- ಬಡತನ- ಸಿರಿತನ- ಜಿಪುಣತೆ- ಉದಾರತೆ- ಶೃಂಗಾರ- ಹಾಸ್ಯ- ವ್ಯಾಕರಣ- ಕಾವ್ಯಮೀಮಾಂಸೆ- ಕಡೆಗೆ ತಾನು ತನ್ನ ಸಂಸಾರ ಹೀಗೆ ಯಾವುದೂ ಆದೀತು. ಮೇಲು ಕೀಳುಗಳಿಲ್ಲ ಆಯ್ಕೆಯ ಪ್ರಶ್ನೆ ಇಲ್ಲ. ಈ ವಿಚಾರದಲ್ಲಿ ಅವರು ನವ್ಯಾತಿ ನವ್ಯರು. ಕಾವ್ಯದ ರೂಪ (form) ಕ್ಕೆ ಸಂಬಂಧಿಸಿದಂತೆ ಮಾತ್ರ ಅವರು, ಸಂಪ್ರದಾಯ ನಿಷ್ಠರು. ಆದ್ದರಿಂದಲೇ ಇರಬೇಕು. ತಾವು ಯಾವುದೇ ಪಂಥಕ್ಕೆ ಸೇರಿದವರಲ್ಲ ಎಂದುಕೊಳ್ಳುವ. ವಾಸ್ತವದಲ್ಲಿ ಅವರು ರಮ್ಯ ಪಂಥದವರೇ. ಭಾವುಕತೆ, ಪ್ರಕೃತಿ ಪ್ರೇಮ, ಸೌಂದರ್ಯ ಪ್ರಿಯತೆ, ದೇಶ ಭಾಷೆಗಳ ಪ್ರೀತಿ, ದೈವಭಕ್ತಿ, ಆದರ್ಶಮಯತೆ, ಗೀತಾತ್ಮಕತೆ, ಅಶ್ಲೀಲ, ಕೊಳಚೆ, ಕೆಡುಕುಗಳನ್ನು ದೂರವಿಡುವ ಮಡಿವಂತಿಕೆ ಈ ಎಲ್ಲ ಗುಣಗಳೂ ಅವರ ಕಾವ್ಯದಲ್ಲಿವೆ. ಪರಮೇಶ್ವರ ಭಟ್ಟರಿಗೆ ಅದೇಕೊ ನವ್ಯ ಸಾಹಿತ್ಯದ ಬಗೆಗೆ ಗೌರವವಿಲ್ಲ. "ಸಾಹಿತ್ಯದಲ್ಲಿ ನವ್ಯರದಷ್ಟೇ ದಿವ್ಯ ಭವ್ಯ ಎಲ್ಲವೂ ಬೇಕು, ಎಲ್ಲವನ್ನೂ ಮೆಚ್ಚಬೇಕು" ಎಂಬ ಒಂದು ಸಂದರ್ಶನದ ಸಂದರ್ಭದ ಅವರ ಮಾತಿನಲ್ಲೇ ವ್ಯಂಗ್ಯ ಅಡಗಿರುವಂತೆ ತೋರುತ್ತದೆ. ಮುಕ್ತಕ ವಚನ ಮುಂತಾದವುಗಳಲ್ಲಿ ಹಲವು ಬಾರಿ ನವ್ಯವನ್ನು ಅವರು ಗೇಲಿ ಮಾಡಿದ್ದಾರೆ.

ನವ್ಯ ಕಾವ್ಯದೊಳು ಪ್ರತಿ ಪದವೂ ಅರ್ಥವಾಗುತ್ತದೆ
ತಾತ್ಪರ್ಯಾರ್ಥ ಮಾತ್ರ ಅರ್ಥವಾಗದೆ ಉಳಿಯುತ್ತದೆ
ಕವಿಯ ಕೇಳಿದರೆ ಆತ ಸಹ ಅರ್ಥೈಸಲಾರ
ಎಂಥ ಅಸಹಾಯಕ ಪರಿಸ್ಥಿತಿಯಾಯಿತು ಸದಾಶಿವಗುರು (ಪಾಮರ)

ನವ್ಯಕಾವ್ಯವೊಂದು ನನಗರ್ಥವಾಗುತ್ತಿಲ್ಲವೆಂದು ನಾನು ನಡುಗುತ್ತಿಲ್ಲ
ಅರ್ಥವಾದವರ ಗತಿಯೇನೆಂದು ನಡುಗುತ್ತಿದ್ದೇನೆ ಸದಾಶಿವಗುರು
(ಪಾಮರ)

ನವ್ಯ ಕಾವ್ಯದೊಳು ನವ್ಯವೆನಿಪ್ಪುದಾವುದು? ಭಾಷೆಯೇ? ಛಂದವೊ? ಬಂಧವೊ-ಎಂದು ಮುಂತಾಗಿ ಪ್ರಶ್ನಿಸಿ ಟೀಕಿಸುವ ಭಟ್ಟರನ್ನೂ ನವ್ಯರೋ ಇತರ ಸೂಕ್ಷ್ಮ ಪ್ರಜ್ಞೆಯ ಓದುಗರೋ ಪ್ರಶ್ನಿಸಲು ಅವಕಾಶಗಳಿವೆ ಎನಿಸುತ್ತದೆ. ಅವರ ಸಮಗ್ರ ಸಾಹಿತ್ಯ ಅದರಲ್ಲೂ ಕಾವ್ಯ ಕೃಷಿಯನ್ನು ಗಮನಿಸಿದರೆ, ಪ್ರಾಚೀನ ಸಂಸ್ಕೃತ ಕವಿಗಳನ್ನು ಅವಲಂಬಿಸಿದ ಅನುವಾದ ಅರ್ಧಕ್ಕಿಂತ ಹೆಚ್ಚು ಉಳಿದದ್ದರಲ್ಲಿ ದಾರ್ಶನಿಕರ ತತ್ವಗಳು. ಸಂಸ್ಕೃತ ಸುಭಾಷಿತಗಳ ಸಾರ, ಹಿಂದಿನ ಕನ್ನಡ ಕವಿಗಳ ಅಭಿಪ್ರಾಯಗಳು. ಇಲ್ಲವೇ ಜನಪದರ ಅಥವಾ ಇಂದಿನ ಸಾಮಾಜಿಕರ ಅನುಭವದ ನುಡಿಗಳು. ಇಂಥವುಗಳನ್ನು ದೇಶಿ ಛಂದಸ್ಸಿನ ಶರೀರಕ್ಕೆ ಅಳವಡಿಸಿದ್ದಷ್ಟೆ ಭಟ್ಟರ ಹಿರಿಮೆಯೆ? ಅನುವಾದ ಅನುಸರಣೆಗಳ ನಡುವೆ ಸ್ವಂತದ್ದಾಗಿ ಭಟ್ಟರು ಕೊಟ್ಟದ್ದೇನು? ವಾಕ್ಚಾತುರ್ಯ ವಚನ ರಚನಾ ಕೌಶಲವಷ್ಟೇ ಅವರದಾಗಿ ತೋರುತ್ತವಲ್ಲವೆ ಎಂದು ಯಾರಿಗೂ ಸಂದೇಹ ಮೂಡಬಹುದಾಗಿದೆ. ಇನ್ನೊಂದು ನಿಟ್ಟಿನಿಂದ ನೋಡಿದಾಗ ಎಲ್ಲ ಕಾಲದ, ಭಾಷೆಯ ಕವಿಗಳೂ ಮಾಡಿದ್ದಿಷ್ಟೇ ಅಲ್ಲವೆ. ಪ್ರಾಚೀನ ಅರ್ವಾಚೀನ ಶ್ರೇಷ್ಠ ಕವಿಗಳಲ್ಲಿ ಶ್ರೇಷ್ಠತೆ ಎಂದು ಪ್ರಾಜ್ಞರು ಗುರುತಿಸುವುದು, ಸ್ವೋಪಜ್ಞತೆ ಎಂದು ಕರೆಯುವುದು ಈ ವಚನರಚನಾ ಚಾತುರ್ಯವನ್ನೇ ಅಲ್ಲವೆ? ಭಟ್ಟರೊಬ್ಬರನ್ನು ಇದಕ್ಕೆ ಹೊರತು ಪಡಿಸಿ ನೋಡುವ ಅಗತ್ಯವೇನಿದೆ ಎಂದು ಸಮಾಧಾನ ಹೇಳಿಕೊಳ್ಳಲೂಬಹುದು. ಚಾತುರ್ಯ ಕೂಡ ಭಟ್ಟರ ಕೆಲವು ಪದ್ಯಗಳಲ್ಲಿ ಮಸಳಿಸಿದೆ ಎಂಬುದು ನಿಶ್ಚಿತವಾಗಿ ಒಂದು ದೋಷವೆನ್ನಬಹುದು.

ಉದಾ:

ಖಾಸಗಿ ಶಾಲೆಗೆ ಹಲವು ಕೋಣೆಗಳಿರುವ
ಸ್ವಂತದ ಕಟ್ಟಡಬೇಕು
ಅದಕೆ ಕ್ರೀಡಾಂಗಣ ಅದಕೆ ಗ್ರಂಥಾಲಯ
ವಾಚನಾಲಯ ಸಹಬೇಕು
ದಕ್ಷರಾಗಿರುವಂಥ ಬೋಧಕರಿರಬೇಕು

ತಿಂಗಳ ಮೊದಲನೆ ದಿನವೆ
ಸಂಬಳ ಸಾರಿಗೆ ನೀಡುವಂತಿರಬೇಕು. (ಮಳೆಬಿಲ್ಲು)

ಎಂಬತ್ಯಾದಿ ಸಾಲುಗಳನ್ನು ಕಾವ್ಯವೆಂದು ಕರೆಯುವುದು ಹೇಗೆ?

ಭಟ್ಟರ ಕಾವ್ಯದ ಮುಖ್ಯ ದೌರ್ಬಲ್ಯವೆಂದರೆ ಪುನರಾವರ್ತನೆ. ಭಟ್ಟರ ವಾಚಾಳಿತನದ ಪರಿಣಾಮದಿಂದ ಹೀಗಾಗಿದ್ದೀತು. ಮರೆವೆ ಇದ್ದೀತು ಹೇಳಿದ ತತ್ತ್ವ (ನೀತಿ)ಗಳನ್ನೇ ಮತ್ತೆ ಹೇಳಿದ್ದಾರೆ. ಒಮ್ಮೆ ನೀಡಿದ ದೃಷ್ಟಾಂತವನ್ನೇ ಮತ್ತೊಂದು ವಿಚಾರಕ್ಕೆ ಬಳಸಿದ್ದಾರೆ. ಬರೆದ ಒಂದೇ ಮಾತನ್ನು ಬೇರೆ ಬೇರೆ ರೂಪಗಳಲ್ಲಿ ಇಟ್ಟಿದ್ದಾರೆ.

ಉದಾ:

ಅವ್ವನ ಅಪ್ಪನು ಬಡಿದರೆ ಅಪ್ಪನ
ದೆವ್ವವು ಬಡಿವುದು ಭರದೆ-

ಎಂಬ ಸಾಂಗತ್ಯದ ಸಾಲನ್ನೆ

ಅವ್ವನ ಅಪ್ಪ ಹೊಡೆದರೆ ಅಪ್ಪನ ದೆವ್ವ ಹೊಡೀತು

ಎಂಬ ಗಾದೆ ಮಾಡಿದ್ದಾರೆ.

ಇರುವೆ ಉಬ್ಬಿದರೇನು ಗೊದ್ದ ವಾದಿತೇನು.
ಪಾಠವಾಗಿರಲಿದು ನಿನಗೆ

ಎಂಬ ಸಾಂಗತ್ಯದ ಸಾಲು ಇರುವೆ ಉಬ್ಬಿದರೆ ಗೊದ್ದವಾದೀತೆ? ಎಂಬ ಗಾದೆಯಾಗಿದೆ. ಪದ್ಯದಲ್ಲಿ ಹಾಡಿದನ್ನೇ ಗದ್ಯದಲ್ಲಿ ವಿವರಿಸಿದ್ದಾರೆ. ವಚನಗಳೇ ಒಗಟುಗಳಾಗಿವೆ.

ಕೆಲವು ಪ್ರಸಿದ್ಧ ಮುಕ್ತಕಗಳು ಬೇರೆ ಬೇರೆ ಪುಸ್ತಕಗಳಲ್ಲಿ ಮತ್ತೆ ಮತ್ತೆ ಅಚ್ಚಾಗಿವೆ. ಬಹುಶಃ ಪ್ರತಿ ಪುಸ್ತಕದಲ್ಲೂ ಒಂದೊಂದು ಪ್ರಕಾರದ ಏಳುನೂರು ಬಂಧಗಳನ್ನು ನೀಡಬೇಕೆಂಬ ಅವರ ರೂಢಿಯಿಂದಾಗಿ ಸಂಖ್ಯೆ ಪೂರ್ಣಕ್ಕಾಗಿ ಹೀಗೆ ಮಾಡಿದ್ದಿರಬಹುದೆ? ಹಾಗೆ ಏಳುನೂರೇ ಇರಬೇಕೆಂಬ ಸಂಕಲ್ಪದ ಹಿಂದೆ ಯಾವ ತತ್ತ್ವ ಅಡಗಿದೆ ಎಂಬುದು ತಿಳಿಯುವುದಿಲ್ಲ. ಒಟ್ಟಾರೆ

ಬೆಂಕಿಯ ಪೊಟ್ಟಣದೊಳಗೊಂದೆ ಕಡ್ಡಿಯು
ಇರುವಾಗ ಜೋಪಾನವಾಗಿ
ಬಳಸುವ ತೆರೆದೊಳು ನನ್ನೆಲ್ಲ ಶಕ್ತಿಯ
ಬಳಸುವೆ ನಾ ಮಿತವಾಗಿ (ಮಳೆಬಿಲ್ಲು)

[illegible] ತಮ್ಮದೇ ಮಾತಿಗೆ ವಿರುದ್ಧವಾಗಿ ಭಟ್ಟರು ನಡೆದುಕೊಂಡಿದ್ದಾರೆಂಬುದು ನಿಜ.

ಹೀಗೆಂದ ಮಾತ್ರಕ್ಕೆ ಒಬ್ಬ ಸಾಹಿತಿಯಾಗಿ ಹಿರಿಮೆಯಲ್ಲಿ ಇಳಿಕೆಗಳೆದಂತಾಗುವುದಿಲ್ಲ. ಇಲ್ಲಿ ಗುರುತಿಸಿರುವ ಸಂಗತಿಗಳನ್ನು ದೊಡ್ಡ ದೋಷಗಳೆಂದು ಪರಿಗಣಿಸಬೇಕಾಗಿಲ್ಲ. ದೊಡ್ಡ ಸಾಹಿತ್ಯ ರಾಶಿಯನ್ನು ಸೃಷ್ಟಿಸುವ ಸಂದರ್ಭದಲ್ಲಿ ಈ ಬಗೆಯ ದೌರ್ಬಲ್ಯಗಳು ಕಾಣಿಸಿಕೊಳ್ಳುವುದು ಸಹಜ. ಅವರ ಸಾಹಿತ್ಯ ಪ್ರಾಚೀನ ಶಿಷ್ಟ ಸಾಹಿತ್ಯವನ್ನೋ ಜನಪದ ಮಟ್ಟುಗಳನ್ನೋ ಅವಲಂಬಿಸಿದೆ ಎಂದ ಮಾತ್ರಕ್ಕೆ ಅವರನ್ನು ಛಾಯಾನುವರ್ತಿ ಎಂದು ಕರೆಯುವುದು ಅನ್ಯಾಯವಾದೀತು. ಹಳೆಯದರ ಅನುಕರಣೆ ಅವಲಂಬನೆ ಇದೆ ಎಂಬುದು ನಿಜವಾದರೂ ಸ್ವತಂತ್ರವಾದದ್ದು ಇಲ್ಲವೆಂದಲ್ಲ. ಭಟ್ಟರ ವಾಙ್ಮಯದ ಸ್ವೋಪಜ್ಞ ಗುಣಗಳು ಎಲ್ಲೆಲ್ಲೂ ಕಾಣಸಿಗುತ್ತವೆ. ಶಕ್ತಿಯ ಮಿತಬಳಕೆಯನ್ನು ಕುರಿತ ಮೇಲಿನ ಉದಾಹರಣೆಯನ್ನೇ ಗಮನಿಸಬಹುದು ಬೆಂಕಿಕಡ್ಡಿಯ ದೃಷ್ಟಾಂತ ಹಳೆಯ ಕೃತಿಗಳಲ್ಲಿ ಸಿಗುವಂಥದಲ್ಲ. ವಸ್ತುವಿನ ಗಹನತೆಯೂ ಇಲ್ಲಿ ಕಡಿಮೆಯದಲ್ಲ.

ಹುಡುಗರು ಕೂದಲು ಬೆಳೆಯಿಸಿಕೊಂಬರು
ಹುಡುಗಿಯರು ಕೂದಲು ಕತ್ತರಿಸಿಕೊಂಬರು
ಮುದುಕರ ಕೂದುಲು ತಾನಾಗಿ
ಉದುರಿ ಹೋಹುದು ಸದಾಶಿವಗುರು (ಉಂಬರ)

ಕಚ್ಚಿಯಾದರು ನಾಯಿ ಎನಿಸಿಕೊಳ್ಳಬೇಕು
ಬೊಗಳಿಯಾದರು ನಾಯಿ ಎನಿಸಿಕೊಳ್ಳಬೇಕು
ಕಚ್ಚದ ಬೊಗಳದ ಕುನ್ನಿತನ ಯಾವ ಕರ್ಮಕ್ಕೆ ಸದಾಶಿವಗುರು
(ಪಾಮರ)

ಎಂಬಂಥ ಸಾವಿರಾರು ಉಕ್ತಿಗಳಲ್ಲಿರುವ ಸಮಾಜದ ಸೂಕ್ಷ್ಮ ನಿರೀಕ್ಷಣೆ, ಅನುಭವದ ಪಕ್ವತೆ, ಲಘು ಬಿಗುಗಳನ್ನು ಕಾಣುವ ಕಣ್ಣುಬೇಕು. ಗಂಭೀರ ಸಾಹಿತ್ಯಕ್ಕೆ ಭಟ್ಟರು ನೀಡಿರುವ ನಗೆ ಲೇಪನ ಅವರಿಂದಷ್ಟೆ ಸಾಧ್ಯವಾಗುವಂಥದು. ಇದೊಂದೇ ಕೊಡುಗೆ ಸಾಕು ಸಾರಸ್ವತ ಲೋಕದಲ್ಲಿ ಅವರ ಹೆಸರನ್ನು ಶಾಶ್ವತಗೊಳಿಸಲು. ಇವಲ್ಲದೆ ನೆನಪಿನಲ್ಲುಳಿಯುವ ನೂರಾರು ನುಡಿ ಮುತ್ತುಗಳು ಅವರ ಮುಕ್ತಕಗಳಿಂದ ಬಂದಿವೆ. ಒಟ್ಟಿನಲ್ಲಿ ಎಸ್.ವಿ. ಪರಮೇಶ್ವರ ಭಟ್ಟರ ಬರಹ ಗಾತ್ರ ಗುಣಗಳೆರಡರಲ್ಲೂ ದೊಡ್ಡದು.

ನಾನು ಪಂಡಿತನಲ್ಲ, ಪ್ರಾಜ್ಞನಲ್ಲ ವಿದ್ವನ್ಮಣಿಯಲ್ಲ,
ಬುದ್ಧಿ ಜೀವಿಯಲ್ಲ,
ನಾನು ಕವಿಯಲ್ಲ, ಕಲಾವಿದನಲ್ಲ, ವಿಮರ್ಶಕನಲ್ಲ ರಸಿಕ
ಕುಲಶೇಖರನಲ್ಲ (ಉಂಬರ)

ಎಂದು ಏನೆಲ್ಲವನ್ನು ಅವರು ನಿರಾಕರಿಸಿದ್ದಾರೆಯೋ ಅವೆಲ್ಲವೂ ಆಗಿರುವ ಸಂಸ್ಕೃತಿವಂತ. ತನ್ನಲ್ಲಿರುವ ಎಲ್ಲ ಶಕ್ತಿಯನ್ನು ವ್ಯರ್ಥ ಮಾಡದೆ ಬಳಕೆ ಮಾಡಿಕೊಂಡು ಸಮೃದ್ಧವಾದ

ಸಾಹಿತ್ಯ ಸೃಷ್ಟಿಸಿ ಕೊಟ್ಟ ಉಚ್ಚಮಟ್ಟದ ಸಾಹಿತಿ, ಅಹರ್ನಿಶಿ ಕನ್ನಡ ಸಾಹಿತ್ಯ, ಭಾಷೆಗಳ ಪ್ರಚಾರ ಮಾಡಿ ನುಡಿಯ ಗುಡಿ ಎತ್ತಿದ 'ಡಿಂಗರಿಗ;' ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮುಖ್ಯವಾದ ಸ್ಥಾನ ಪಡೆಯಲೇ ಬೇಕಾಗಿರುವ ಸಾಧಕ ಶ್ರೀ ಎಸ್.ವಿ. ಪರಮೇಶ್ವರ ಭಟ್ಟರು ಎಂದರೆ ಅತಿಶಯೋಕ್ತಿಯಲ್ಲ.

ಪ್ರೊ. ಎಸ್.ವಿ. ಪರಮೇಶ್ವರ ಭಟ್ಟರ ಜೀವನದ ಕೆಲವು ಮುಖ್ಯ ವರ್ಷಗಳು

ಜನನ	೮ನೆಯ ಫೆಬ್ರವರಿ, ೧೯೧೪
ಬಿ.ಎ., (ಆನರ್ಸ್) ಪದವಿ	೧೯೩೭
ಶ್ರೀ ಬಿ.ಎಂ.ಶ್ರೀ. ಯವರ ಬಂಗಾರದ ಪದಕ ಪಡೆದುದು	೧೯೩೭
ಎಂ.ಎ., ಪದವಿ	೧೯೩೮
ಶ್ರೀ ಕೇಣಿ ಸಿದ್ಧಪ್ಪನವರ ಬಂಗಾರದ ಪದರ ಪಡೆದುದು	೧೯೩೮
ಮೈಸೂರು ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು	೧೯೩೯
ಮದುವೆ	೧೯೪೦
ತುಮಕೂರು ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರು	೧೯೪೦
ಮೊತ್ತಮೊದಲ ಕೃತಿ 'ರಾಗಿಣಿ'ಯ ಪ್ರಕಟಣೆ	೧೯೪೦
ಶಿವಮೊಗ್ಗ ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯರು	೧೯೪೩
ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು	೧೯೫೦
ಮಾನಸ ಗಂಗೋತ್ರಿಯಲ್ಲಿ ಕನ್ನಡ ಅಧ್ಯಾಪಕರು	೧೯೬೦
ಸರಸ ಸಾಹಿತ್ಯ ಪ್ರಕಾಶನದ ಸ್ಥಾಪನೆ	೧೯೬೧
ಕನ್ನಡ ಕಾಳಿದಾಸ ಮಹಾಸಂಪುಟದ ಪ್ರಕಟಣೆ	೧೯೬೩
ಮಾನಸ ಗಂಗೋತ್ರಿಯಲ್ಲಿ ಕನ್ನಡ ರೀಡರ್	೧೯೬೪
ಹಾಸನದ ಮಿತ್ರವೃಂದದವರು ಸಲ್ಲಿಸಿದ ಸನ್ಮಾನ	೧೯೬೭
ಶ್ರವಣಬೆಳಗೊಳದಲ್ಲಿ ನಡೆದ ೪೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ	೧೯೬೭
ಮಂಗಳಗಂಗೋತ್ರಿಯ ಕನ್ನಡ ಪ್ರಾಧ್ಯಾಪಕರು ಹಾಗೂ ಅದರ ನಿರ್ದೇಶಕರು	೧೯೬೮
ಮೈಸೂರು ವಿಶ್ವವಿದ್ಯಾನಿಲಯದ ಚಿನ್ನದ ಹಬ್ಬದ ಅಂಗವಾಗಿ ನಡೆದ ಕವಿಗೋಷ್ಠಿಯ ಅಧ್ಯಕ್ಷತೆ	೧೯೬೮
ಕೋಟೆಕಾರು ಸಾಹಿತ್ಯ ಸಂಘದವರು ಸಲ್ಲಿಸಿದ ಸನ್ಮಾನ	೧೯೬೮
ರಾಜ್ಯ ಸಾಹಿತ್ಯ ಅಕಾಡೆಮಿಯಿಂದ 'ಚಂದ್ರವೀಥಿ' ಕೃತಿಗೆ ಪ್ರಥಮ ಬಹುಮಾನ ದೊರೆತುದು	೧೯೬೯

ಕನ್ನಡ ಸಾಹಿತ್ಯ ಪರಿಷತ್ತಿನ ಚಿನ್ನದ ಹಬ್ಬದ ಅಂಗವಾಗಿ ನಡೆದ ಸಾಹಿತ್ಯ ಸನ್ಮಾನ ೧೯೭೦

ಮೈಸೂರಿನ ಎಲ್ಲ ಕನ್ನಡ ಸಂಘಗಳ ಕನ್ನಡ ರಾಜ್ಯೋತ್ಸವ ಸನ್ಮಾನ ೧೯೭೦

ಹೊಸನಗರ ತಾಲ್ಲೂಕಿನ ಕನ್ನಡ ಸಂಘದ ಸದಸ್ಯರು ಸಲ್ಲಿಸಿದ ಸನ್ಮಾನ ೧೯೭೦

'ಮಂಗಳ ಗಂಗೆ'ಯ ಅರ್ಪಣೆ ೧೯೭೦

ಪಲಚಂವಿ ಪ್ರಕಾಶನದ ಸ್ಥಾಪನೆ ೧೯೭೦

ಮಂಗಳಗಂಗೋತ್ರಿಯ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಸಲ್ಲಿಸಿದ ಸನ್ಮಾನ ೧೯೭೧

ದ.ಕ. ಜಿಲ್ಲೆಯ ಮಹಾಜನರಿಂದ ಮಂಗಳೂರಿನಲ್ಲಿ ನಡೆದ ಸನ್ಮಾನ ೧೯೭೧

ಮೂಡಬಿದರೆಯ 'ಸಮಾಜಮಂದಿರ ಸಭಾ' ಇವರು ಸಲ್ಲಿಸಿದ ಸನ್ಮಾನ ೧೯೭೧

Academy of General Education, Manipal ಅವರು ಸಲ್ಲಿಸಿದ "Honorary Fellowship" ೧೯೭೧

ಕಾಸರಗೋಡಿನ ಎಣ್ಮಕಜೆ ಪಂಚಾಯತಿನ ಸಹೃದಯ ಸಾರ್ವಜನಿಕರು ಸಲ್ಲಿಸಿದ ಸನ್ಮಾನ ೧೯೭೧

ಶಿವಮೊಗ್ಗಾ ಜಿಲ್ಲಾ ಸಾಹಿತ್ಯ ಪರಿಷತ್ತಿನಲ್ಲಿ ಸಲ್ಲಿಸಿದ ಸನ್ಮಾನ ೧೯೭೧

ಮುಂಡಾಜೆಯ ಶತಾಬ್ದಿ ವಿದ್ಯಾಲಯ ಸಮಿತಿಯವರು ಸಲ್ಲಿಸಿದ ಸನ್ಮಾನ ೧೯೭೧

ಭಾರತೀಯ ವಿದ್ಯಾಭವನ, ಮಂಗಳೂರು ಶಾಖೆ ಸಲ್ಲಿಸಿದ ಸನ್ಮಾನ ೧೯೭೧

ರಾಜ್ಯಸಾಹಿತ್ಯ ಅಕಾಡೆಮಿಯಿಂದ ಸನ್ಮಾನಿತರಾದುದು ೧೯೭೧

'ಪೂರ್ಣಕುಂಭ' ಸಂಭಾವನಾ ಗ್ರಂಥದ ಸಮರ್ಪಣೆ ೧೯೭೨

ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ೧೯೭೪

ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ

ನಿಧನರಾದದ್ದು ೨೦೦೦

ಪ್ರೊ. ಎಸ್.ವಿ. ಪರಮೇಶ್ವರ ಭಟ್ಟರ ಕೃತಿಗಳು

೧. ರಾಗಿಣಿ
೨. ಗಗನಚುಕ್ಕಿ
೩. ಅಂಚೆಯ ಪೆಟ್ಟಿಗೆ
೪. ಜಹನಾರ
೫. ಇಂದ್ರಚಾಪ
೬. ಇಂದ್ರಗೋಪ
೭. ಕೃಷ್ಣಮೇಘ
೮. ಸುರಗಿ-ಸುರಹೊನ್ನೆ
೯. ತುಂಬೆಹೂವು
೧೦. ಚಂದ್ರವೀಥಿ
೧೧. ಉಪ್ಪು ಕಡಲು
೧೨. ಪಾಮರ
೧೩. ಉಂಬರ
೧೪. ಮಂಥಾನ
೧೫. ನೆನಪಿಗೆ ಬಂದ ಗಾದೆಗಳು
೧೬. ಕಣ್ಣುಮುಚ್ಚಾಲೆ
೧೭. ಅಕ್ಕಮಹಾದೇವಿ
೧೮. ಭಾವಗೀತೆ
೧೯. ಸೀಳುನೋಟ
೨೦. ಲೇಖನಗಳು

೨೧. ಪ್ರಬಂಧಗಳು
೨೨. ಭಾಷಣಗಳು
೨೩. ಮುನ್ನುಡಿಗಳು
೨೪. ಗಾಥಾಸಪ್ತಶತಿ
೨೫. ಅಮರುಶತಕ
೨೬. ಕವಿಕೌಮುದಿ
೨೭. ಭರ್ತೃಹರಿಯ ಶತಕತ್ರಯ
೨೮. ಗೀತಗೋವಿಂದ
೨೯. ಋತುಸಂಹಾರ
೩೦. ಮೇಘದೂತ
೩೧. ರಘುವಂಶ
೩೨. ಕುಮಾರಸಂಭವ
೩೩. ಮಾಳವಿಕಾಗ್ನಿಮಿತ್ರ
೩೪. ವಿಕ್ರಮೋರ್ವಶೀಯ
೩೫. ಅಭಿಜ್ಞಾನ ಶಾಕುಂತಳ
೩೬. ಕನ್ನಡ ಕಾಳಿದಾಸ ಮಹಾಸಂಪುಟ
೩೭. ಪ್ರತಿಮಾನಾಟಕ
೩೮. ಅಭಿಷೇಕನಾಟಕ
೩೯. ಪ್ರತಿಜ್ಞಾಯೌಗಂಧರಾಯಣ
೪೦. ಸ್ವಪ್ನವಾಸವದತ್ತ
೪೧. ಮಧ್ಯಮವ್ಯಾಯೋಗ
೪೨. ಪಂಚರಾತ್ರಿ
೪೩. ದೂತವಾಕ್ಯ
೪೪. ದೂತಘಟೋತ್ಕಚ
೪೫. ಕರ್ಣಭಾರ
೪೬. ಊರುಭಂಗ
೪೭. ಚಾರುದತ್ತ
೪೮. ಅವಿಮಾರಕ
೪೯. ಬಾಲಚರಿತ
೫೦. ಯಜ್ಞಫಲ
೫೧. ಕನ್ನಡ ಭಾಸ ಮಹಾಸಂಪುಟ
೫೨. ಕನ್ನಡ ಬುದ್ಧಚರಿತೆ
೫೩. ಕೆಲವು ಇಂಗ್ಲಿಷ್ ಪ್ರಬಂಧಗಳು
೫೪. ಸ್ವರಾಜ್ಯದೆಡೆಗೆ
೫೫. ಭೂಮಿ ಮತ್ತು ಧೂಮಕೇತು
೫೬. ಕನ್ನಡ ಮತ್ತು ನಾನು
೫೭. ಅರುವತ್ತರ ಅರಳು
೫೮. ಮಂಗಳಗಂಗೋತ್ರಿ
೫೯. ಮುದ್ದಣಕವಿಯ ಶ್ರೀರಾಮ ಪಟ್ಟಾಭಿಷೇಕಂ
೬೦. ಮುದ್ದಣಕವಿಯ ಅದ್ಭುತ ರಾಮಾಯಣಂ
೬೧. ಸಂಜೆ ಮಲ್ಲಿಗೆ
೬೨. ಕನ್ನಡ ಹರ್ಷ ಮಹಾಸಂಪುಟ
೬೩. ರಸಋಷಿ ಕುವೆಂಪು

ಶ್ರೀಮತಿ ಎಂ.ಕೆ. ಇಂದಿರಾ
(ಅವರ ಬದುಕು-ಬರಹ)



❐ ಹೇಮಲತಾ ಮಹಿಷಿ

ಪ್ರಕಟವಾದ ಮೊದಲ ಕಾದಂಬರಿಯೇ ಅದರ ಕರ್ತೃವ್ಯವನ್ನು ಪ್ರಸಿದ್ಧಿಯ ಶಿಖರಕ್ಕೇರಿಸಿರುವುದು ಅಪರೂಪದ ಸಂಗತಿ, ಆದರೆ ಎಂ.ಕೆ. ಇಂದಿರಾ ಅಂತಹ ಅಪರೂಪದ ವ್ಯಕ್ತಿ. ಅವರ ಮೊದಲ ಪ್ರಕಟಿತ ಕಾದಂಬರಿ ತುಂಗ-ಭದ್ರ ಓದುಗರ ಕೈಸೇರಿದಾಗ ರಾತ್ರೋರಾತ್ರಿ ಒಬ್ಬ ಸಾಮಾನ್ಯ ಗೃಹಿಣಿ ಪ್ರಸಿದ್ಧ ಕಾದಂಬರಿಗಾರ್ತಿಯಾಗಿ ಮಿಂಚಿದಳು.

ಎಂ.ಕೆ. ಇಂದಿರಾ ಹುಟ್ಟಿದ್ದು ದಿನಾಂಕ ೫.೧.೧೯೧೭ ರಂದು ತೀರ್ಥಹಳ್ಳಿಯ ಅಜ್ಜನ ಮನೆಯಲ್ಲಿ (ತಾಯಿಯ ತವರು ಮನೆ), ತಂದೆ ತರೀಕೆರೆ ಸೂರ್ಯನಾರಾಯಣ ರಾವ್, ತಾಯಿ ಬನಶಂಕರಮ್ಮ. ತಂದೆ ನರಸಿಂಹರಾಜಪುರದ ದೊಡ್ಡ ಜಮೀನ್ದಾರರು, ಅಡಿಕೆ, ಭತ್ತ, ಕಬ್ಬು, ಮಾವು, ತೆಂಗುಗಳ ನಡುವೆ ಸಂಸಾರ ನಂದಗೋಕುಲವಾಗಿತ್ತು. ಕೊಟ್ಟಿಗೆಯ ತುಂಬ ಇದ್ದ ಹಸುಗಳಿಂದ ಹಾಲಿನ ಹೊಳೆಯೇ ಮನೆಯಲ್ಲಿ ಹರಿಯುತ್ತಿತ್ತು. ಸುರ್ಯನಾರಾಯಣ ರಾವ್- ಬನಶಂಕರಮ್ಮ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ಪ್ರಜಾವಾಣಿಯ ಸಂಪಾದಕರಾಗಿದ್ದ ಛೂ ಬಾಣದ ಟಿ.ಎಸ್. ರಾಮಚಂದ್ರರಾವ್ ಒಬ್ಬ ಮಗ, ಮತ್ತೊಬ್ಬರು ಆನಂದರಾವ್. ಎರಡು ಹೆಣ್ಣು ಮಕ್ಕಳಲ್ಲಿ ಹಿರಿಯವಳು ಶಾರದಮ್ಮ.

ಇಂದಿರಾರವರ ಪ್ರತಿಭೆ ಬಹುಶಃ ತಾಯಿಯ ಕಡೆಯಿಂದ ಬಂದುದು. ತಾಯಿ ಬನಶಂಕರಮ್ಮ ಸುರೂಪಿ, ಎತ್ತರದ ಆಳು, ತಾರುಣ್ಯದಲ್ಲಿ ಅಕಸ್ಮಾತ್ ಬೀದಿಯಲ್ಲಿ ಹೊರಟರೆ ಎಲ್ಲರೂ ನಿಂತು ನೋಡುತ್ತಿದ್ದರಂತೆ, ಅಂತಹ ಚೆಲುವೆ. ಆ ಕಾಲದ ಹೆಣ್ಣು ಮಕ್ಕಳಲ್ಲಿ ಸಮಾಜ ನಿರೀಕ್ಷಿಸುತ್ತಿದ್ದ ಸಕಲ ಗುಣಗಳೂ- ಅವರಲ್ಲಿದ್ದವು. ಹಾಡು-ಹಸೆ-ಕಸೂತಿ- ಗಮಕ- ಹಾರ್ಮೋನಿಯಂನಲ್ಲಿ ಅವರು ನಿಪುಣೆ. ಕುಶಲ ಕಲಾವಿದೆಯ ಲಕ್ಷಣಗಳು ಅವರಲ್ಲಿದ್ದವು. ೧೦೦೦ ನುಡಿಗಳಿದ್ದ ಯಕ್ಷಗಾನದ ಅನೇಕ ಪ್ರಸಂಗಗಳನ್ನು ಅವರು ಹೇಳುತ್ತಿದ್ದರಂತೆ. ಸುಪ್ರಭಾಕಲ್ಯಾಣ ಎಂಬ ನಾಟಕವನ್ನೂ ಅವರು ಬರೆದಿದ್ದರಂತೆ.

ವಿಳಾಸ : ನಂ. ೨೦೬, ಶಶಿಕಿರಣ ಅಪಾರ್ಟ್‌ಮೆಂಟ್, ೧೮ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು-೫೬೦೦೫೫

ಇಂದಿರಾ ತಮ್ಮ ಬಾಲ್ಯದ ದಿನಗಳನ್ನು ನರಸಿಂಹರಾಜಪುರ- ತೀರ್ಥಹಳ್ಳಿ ನಡುವೆ ಓಡಾಡುತ್ತ ಕಳೆದರು. ಇತ್ತ ತಾಯಿಯ ತವರಿನಲ್ಲಿ ಸಮೃದ್ಧಿ, ಅತ್ತ ತಂದೆಯ ಮನೆಯ ಶ್ರೀಮಂತಿಕೆ. ಒಟ್ಟಿನಲ್ಲಿ ಬಾಲ್ಯದಲ್ಲಿ ತಮ್ಮ ಜೀವನದಲ್ಲಿ ಯಾವ ಕೊರತೆಯನ್ನೂ ಅನುಭವಿಸಲಿಲ್ಲ ಅವರು. ಆದರೆ, ಸುಖದ ಬಾಲ್ಯ ಜೀವನ ಇತರರ ಕಷ್ಟದ- ಕೊರತೆಯ ಜೀವನವನ್ನು ಸೂಕ್ಷ್ಮವಾಗಿ ಅವಲೋಕಿಸುವಲ್ಲಿ, ಅರ್ಥಮಾಡಿಕೊಳ್ಳುವಲ್ಲಿ ಅಡ್ಡಿ ಬರಲಿಲ್ಲವೆಂಬುದು ಮಹತ್ವದ ವಿಷಯ. ತೀರ್ಥಹಳ್ಳಿ- ನರಸಿಂಹರಾಜಪುರ, ಸುತ್ತಲಿನ ಮಲೆನಾಡಿನ ಪುಟ್ಟಪುಟ್ಟ ಹಳ್ಳಿಗಳಲ್ಲಿ ಓಡಾಡುತ್ತಲೇ ಇಂದಿರಾ ತೆರೆದ ಕಣ್ಣಿನಿಂದ ಮಲೆನಾಡಿನ ಪ್ರಕೃತಿ ಸೌಂದರ್ಯವನ್ನು ಸವಿದರು. ರೌದ್ರ ರೂಪವನ್ನು ಕಂಡರು. ಅದರ ನಡುವೆ ಬದುಕುವ ಜನರ ನೋವು-ನಲಿವುಗಳನ್ನು ಗುರುತಿಸಿ ಸ್ಪಂದಿಸಿದರು. ಅವರ ಹೆಚ್ಚಿನ ಪುಸ್ತಕಗಳಲ್ಲಿ ಬಾಲ್ಯದ ಈ ಅನುಭವ ಯಥಾವತ್ತಾಗಿ ಮೂಡಿಬಂದಿದೆ.

ಇಂದಿರಾ ವಿದ್ಯಾಭ್ಯಾಸ ಮಿಡ್ಲ್ ೨ನೇ ತರಗತಿಗೇ ಮುಗಿಯಿತು. ಅವರ ಕ್ಲಾಸಿನಲ್ಲಿ ಇದ್ದವರು ಇಬ್ಬರು ಹುಡುಗಿಯರು ಮಾತ್ರ. ಇಂದಿರಾ ಯಾವಾಗಲೂ ತರಗತಿಗೆ ಮೊದಲು. ಶಾಲೆಯ ಪುಸ್ತಕ ಭಂಡಾರದಿಂದ ಬಂಕಿಮಚಂದ್ರ, ಶರಚ್ಚಂದ್ರ, ರವೀಂದ್ರನಾಥ ಠಾಕೂರ್ -ಎಲ್ಲರ ಸಾಹಿತ್ಯದ ಪರಿಚಯವಾಯಿತು. ಶಾಲೆಯ ಪುಸ್ತಕ ಭಂಡಾರದಿಂದ ಇಷ್ಟು ಪುಸ್ತಕ ತೆಗೆದುಕೊಂಡು ಹೋಗಿ ಓದಿದ ಏಕಮಾತ್ರ ವಿದ್ಯಾರ್ಥಿನಿ ಇವರೆಂಬ ಪ್ರಶಂಸೆ ಶಾಲೆಯ ಮುಖ್ಯೋಪಾಧ್ಯಾಯರಿಂದ ದೊರೆಯಿತು. ಮಿಡ್ಲ್ ೨ನೇ ತರಗತಿಯ ಅನಂತರ ಎಷ್ಟು ಅತ್ತು ಕರೆದರೂ ತಂದೆ ಮುಂದೆ ಓದಿಸಲು ಒಪ್ಪಲಿಲ್ಲ.

೧೨ನೇ ವಯಸ್ಸಿನಲ್ಲಿ ಎಂ. ಕೃಷ್ಣರಾವ್ ಅವರೊಂದಿಗೆ ಇಂದಿರಾರವರ ವಿವಾಹವಾಯಿತು. ಕೃಷ್ಣರಾವ್ ತೀರ್ಥಹಳ್ಳಿ- ಶಿವಮೊಗ್ಗ ನಡುವೆ ಮೋಟಾರ್ ಸರ್ವಿಸ್ ನಡೆಸುತ್ತಿದ್ದರು. ಮುಂದೆ ಮಂಡ್ಯದಲ್ಲಿಯೂ ಇದ್ದರು. ೧೭ನೇ ವಯಸ್ಸಿಗೆ ಗಂಡನ ಮನೆಗೆ ಹೋದ ಇಂದಿರಾ ೧೮ನೇ ವಯಸ್ಸಿಗೆ ಮೊದಲ ಮಗುವಿನ ತಾಯಿಯಾದರು. ಅವರಿಗೆ ಹುಟ್ಟಿದ ೮ ಮಕ್ಕಳಲ್ಲಿ ಉಳಿದವರು ೫ ಜನ ಮಾತ್ರ- ೪ ಗಂಡು, ಒಂದು ಹೆಣ್ಣು. ೧೯೭೪ರಲ್ಲಿ ವಯಸ್ಸಿಗೆ ಬಂದ ಮಗನೊಬ್ಬ ಹೃದಯಾಘಾತದಿಂದ ಮರಣ ಹೊಂದಿದ್ದು ಅವರ ಜೀವನದ ಒಂದು ದೊಡ್ಡ ಆಘಾತ. ಉಳಿದ ನಾಲ್ವರು ಮಕ್ಕಳು ಮದುವೆಯಾಗಿ ಜೀವನದಲ್ಲಿ ತಮ್ಮ ತಮ್ಮ ನೆಲೆ ಕಂಡುಕೊಂಡಿದ್ದಾರೆ. ಅವರು ಯಾರೂ ತಾಯಿಯನ್ನು ಅನುಸರಿಸಿ ಸಾಹಿತ್ಯ ಕ್ಷೇತ್ರದಲ್ಲಿ ಕಾಲಿಟ್ಟಿಲ್ಲ.

ಇಂದಿರಾರವರಿಗೆ ತುಂಗ-ಭದ್ರ ಬರೆಯಲು ಪ್ರೇರಣೆಯಾದದ್ದು ಆಕಸ್ಮಿಕವಾಗಿ, ತಾಯಿಯ ಊರಿನ ನೆಂಟರೊಬ್ಬರ ಆಗಮನದಿಂದಾಗಿ, ಬಾಲ್ಯದ ಹಳೆಯ ನೆನಪುಗಳ ಮಹಾಪೂರವೇ ಉಕ್ಕಿ, ಅದು ತುಂಗ-ಭದ್ರ ಕೃತಿಯಲ್ಲಿ ಹರಿದಾಗಲೇ ಅವರ

ತುಡಿಯುತ್ತಿದ್ದ ಮನಸ್ಸು ಶಾಂತವಾಗಿದ್ದು. ಅಲ್ಲಿಂದೀಚೆಗೆ ಅವರಿಗೆ ಯಾರ ಪ್ರೇರಣೆಯೂ, ಪ್ರೋತ್ಸಾಹವೂ ಬೇಕಾಗಲಿಲ್ಲ. ಲೇಖನಿ ತನ್ನಿಂದ ತಾನೇ ಓಡಿ ಹಲವಾರು ಕೃತಿಗಳನ್ನು ರಚಿಸಿತು. ಜೀವನದ ಮಧ್ಯಕಾಲದಲ್ಲಿ ತಾವು ಇದ್ದಕ್ಕಿದ್ದಂತೆ ಪ್ರಸಿದ್ಧರಾಗಿ, ಕನ್ನಡದ ಒಬ್ಬ ಜನಪ್ರಿಯ ಲೇಖಕಿಯಾದುದು ಅವರಿಗೇ ಒಂದು ಪವಾಡ.

ಇಂದಿರಾರವರ ಕಾದಂಬರಿ-ಕಥೆಗಳ ಮೊದಲ ಓದುಗರಾಗಿದ್ದವರು ಅವರ ಪತಿ ಶ್ರೀ ಕೃಷ್ಣರಾವ್ ಅವರು. ಕಥಾತಂತ್ರ, ಶೈಲಿ ಇತ್ಯಾದಿ ಸಾಹಿತ್ಯಕ ಚರ್ಚೆ ಮಾಡಲು ಅವರಿಗೆ ಸಾಧ್ಯವಾಗದಿದ್ದರೂ ಪ್ರಾಪಂಚಿಕ ವಿಷಯಗಳ ಬಗ್ಗೆ ಉಪಯುಕ್ತ ಸಲಹೆ ನೀಡುತ್ತಿದ್ದರು. ಗೃಹಿಣಿಯಾಗಿ ಮನೆ ಮಕ್ಕಳ ನಡುವೆ ಹೆಚ್ಚಿನ ಕಾಲ ಕಳೆದ ಇಂದಿರಾಗೆ ಇಂತಹ ಸಲಹೆ ಬರವಣಿಗೆಯಲ್ಲಿ ಸಹಾಯವಾಗುತ್ತಿತ್ತು. ಇದಕ್ಕಿಂತ ಹೆಚ್ಚಾಗಿ, ಅವರ ಮನೆಯಲ್ಲಿ ಬರೆಯಲು ಪೂರ್ಣ ಸ್ವಾತಂತ್ರ್ಯವಿತ್ತು. ಹೆಂಡತಿ ಪ್ರಸಿದ್ಧಿಗೆ ಬಂದಾಗ ಅಸೂಯೆಪಡದೆ ಸಂತೋಷಪಡುವ ಹೃದಯ ವೈಶಾಲ್ಯತೆ ಅವರ ಪತಿಗಿತ್ತು. ಮನೆ ಕೆಲಸ, ಮಕ್ಕಳ ಪೋಷಣೆಯ ನಡುವೆಯೆ ಇಂದಿರಾರವರ ಸಾಹಿತ್ಯ ಕೃಷಿ ವಿಪುಲವಾಗಿ ನಡೆಯಿತು. ಸಾಮಾನ್ಯ ಗೃಹಿಣಿಯಾಗಿದ್ದ, ಅದರಲ್ಲೂ ಹೆಚ್ಚಿನ ಶಾಲಾಶಿಕ್ಷಣ ಪಡೆಯದ ಮಹಿಳೆಯೊಬ್ಬಳ ಈ ಸಾಧನೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಉಲ್ಲೇಖನಾರ್ಹ. ಇಂತಹ ಲೇಖಕಿಯ ಸಾಹಿತ್ಯ ಸೇವೆಯ ಬಗ್ಗೆ ಡಾ. ಮಂದಾಕಿನಿ ಪುರೋಹಿತರವರು ಅಧ್ಯಯನ ನಡೆಸಿ, ೧೯೮೬ರಲ್ಲಿ ತಮ್ಮ ಎಂ.ಕೆ. ಇಂದಿರಾ ಅವರ ಕಾದಂಬರಿಗಳು ಎನ್ನುವ ಮಹಾಪ್ರಬಂಧಕ್ಕೆ ಪಿಎಚ್.ಡಿ., ಪದವಿಗಳಿಸಿರುವುದು ಗಮನಾರ್ಹ ವಿಷಯ.

ತಾಯಿಯ ಚಿಕ್ಕಪ್ಪನ ಮಗನೇ ಆಗಿದ್ದ ಪತಿ ಕೃಷ್ಣರಾವ್ ೧೯೭೯ರಲ್ಲಿ ನಿಧನರಾದ ಮೇಲೆ ಇಂದಿರಾ ಬಾಳಿನಲ್ಲಿ ಒಂಟಿಯಾದರು. ಆದರೂ ಸಾಹಿತ್ಯ ಕೃಷಿ ಮುಂದುವರಿಯಿತು. ಬಾಲ್ಯದಲ್ಲಿ, ಯೌವನದಲ್ಲಿ ಯಾವುದಕ್ಕೂ ಕೊರತೆ ಕಾಣದಂತೆ ಜೀವನ ನಡೆಸಿದ ಇಂದಿರಾ ಸಾರ್ಥಕ ಬಾಳು ಬಾಳಿದ್ದಾರೆ. ದೇಶದ ಮೂಲೆ-ಮೂಲೆಯಲ್ಲಿರುವ ಕನ್ನಡ ಓದುಗರು ಇಂದಿರಾರವರ ಮೇಲೆ ಪ್ರಶಂಸೆಯ, ಅಭಿಮಾನದ ಮಳೆಗರೆದಿದ್ದಾರೆ, ಕರೆದು ಸನ್ಮಾನಿಸಿದ್ದಾರೆ. ಆ ಬಗ್ಗೆ ಅಪಾರ ಹೆಮ್ಮೆ ಇದೆ ಅವರಿಗೆ.

ಈ ಕನ್ನಡದ ಲೇಖಕಿಯ ಹೆಮ್ಮೆಯ ಸಾಧನೆಯನ್ನು ಗೌರವಿಸಲು ಕರ್ನಾಟಕ ಲೇಖಕಿಯರ ಸಂಘವು ದಿನಾಂಕ ೨೮ನೇ ಏಪ್ರಿಲ್, ೧೯೯೧ ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಲೇಖಕಿಯು ತಮ್ಮ ೭೫ನೇ ವರ್ಷಕ್ಕೆ ಕಾಲಿಟ್ಟಿರುವ ಸಂದರ್ಭದಲ್ಲಿ ಅದ್ದೂರಿಯ ಸಮಾರಂಭವನ್ನು ಏರ್ಪಡಿಸಿತ್ತು. ಆ ದಿನವಂದು ಲೇಖಕಿಗೆ ಸುರಗಿ ಅಭಿನಂದನಾ ಗ್ರಂಥ ಹಾಗೂ ನಿಧಿಯನ್ನು ಸಮರ್ಪಿಸಿ ಗೌರವಿಸಲಾಯಿತು.

ಸುರಗಿ ಸುಗಂಧ ಬೀರುವ ಮಲೆನಾಡಿನ ಒಂದು ಪುಟ್ಟ ಹೂವು. ಬೇಗ ಉದುರಿದರೂ ಸುವಾಸನೆ ಉಳಿದಿರುತ್ತದೆ. ಇಂದಿರಾರವರಿಗೆ ಒಳ್ಳೆಯ ಹೋಲಿಕೆ. ಅಧ್ಯಕ್ಷತೆ ವಹಿಸಿದ್ದ ಹಿರಿಯ ಲೇಖಕರಾದ ಶ್ರೀ ಪು.ತಿ.ನ ರವರು ಇಂದಿರಾರವರ ಸಾಹಿತ್ಯಕೃಷಿಯನ್ನು ಮೆಚ್ಚಿಮಾತನಾಡಿದರು. ಅಂದು ಇಂದಿರಾರವರ ಮೇಲಿನ ಅಭಿಮಾನದಿಂದ ತಾವಾಗಿಯೇ ಆಗಮಿಸಿದ್ದ, ಕಿಕ್ಕಿರಿದು ತುಂಬಿದ್ದ ಸಾಹಿತ್ಯಾಸಕ್ತರು ಇಂದಿರಾರವರ ಜನಪ್ರಿಯತೆಗೆ ಸಾಕ್ಷಿಯಾಗಿದ್ದರು. ಎಲ್ಲಾ ಪತ್ರಿಕೆಗಳು ಇಂದಿರಾರವರ ಜೀವನ ಸಾಧನೆಯ ಬಗ್ಗೆ ಮುಖ್ಯ ಲೇಖನಗಳನ್ನು ಪ್ರಕಟಿಸಿದ್ದವು.

ಮೊದಲಿನಿಂದಲೂ ಸ್ವತಂತ್ರಪ್ರವೃತ್ತಿ ಹೊಂದಿದ್ದ ಇಂದಿರಾ ಆ ವಯಸ್ಸಿನಲ್ಲೂ ಸ್ವತಂತ್ರವಾಗಿ ಇರಲು ಇಚ್ಛಿಸುತ್ತಿದ್ದರು. ಸರಕಾರದಿಂದ ಅವರಿಗೆ ಬರುತ್ತಿದ್ದ ಮಾಸಿಕ ಗೌರವಧನ ೫೦೦ ರೂಗಳಲ್ಲಿ ತಮ್ಮ ಜೀವನ ನಡೆಸುವ ಛಲ ಅವರದಾಗಿತ್ತು. ಒಂದು ಸಾವಿರ ಪುಟವನ್ನು ಮೀರಬಹುದಾದ ಆತ್ಮಚರಿತ್ರೆ ಬಿಂದುವನ್ನು ಬರೆದು ಮುಗಿಸುವ ಹಂಬಲ ಅವರಿಗೆ ಇತ್ತು ಹಾಗೂ ಭವಿಷ್ಯದ ಏಕಮಾತ್ರ ಗುರಿಯಾಗಿತ್ತು. ಬೇರೆ ಸಾಹಿತ್ಯ ರಚನೆ ಅಸಾಧ್ಯವಾಗಿತ್ತು. ಉಳಿದಂತೆ ಆರೋಗ್ಯ ಚೆನ್ನಾಗಿದ್ದರೂ ವಯಸ್ಸು ಅವರ ಮೇಲೆ ಪ್ರಭಾವ ಬೀರಿತ್ತು. ಕಣ್ಣು ಪೊರೆಯಿಂದ ಮಂಜಾಗಿತ್ತು. ಬರೆದರೆ ಕೈನೋವು ಕಾಣಿಸಿಕೊಳ್ಳುತ್ತಿತ್ತು. ಸ್ವಾತಂತ್ರ್ಯ ಪೂರ್ವದ ಮಲೆನಾಡಿನ ಜೀವನವನ್ನು, ಅನಂತರದ ಬದಲಾವಣೆಯ ಸಂಧಿಕಾಲವನ್ನು ಕಂಡಂತಹ ಇಂದಿರಾರಂತಹ ಲೇಖಕಿಯರು ಮತ್ತಾರೂ ಇರಲಿಲ್ಲ. ಹಾಗಾಗಿಯೇ ಲೇಖಕಿಯರ ಸಂಘ ಅವರ ಇಚ್ಛೆಯಂತೆ ಬೇರೆ ಮನೆ ಮಾಡಿಕೊಂಡು, ಆತ್ಮಚರಿತ್ರೆಯನ್ನು ಬರೆದು ಮುಗಿಸಬೇಕೆಂಬ ಅಭಿಲಾಷೆಯಿಂದ ನಿಧಿಯನ್ನು ಸಮರ್ಪಿಸಿತ್ತು. ಶೀಘ್ರಲಿಪಿಕಾರರ ಸಹಾಯವನ್ನೂ ಒದಗಿಸಲು ಸಿದ್ಧವಿತ್ತು. ಬೇರೆ ಮನೆ ಮಾಡಿಕೊಂಡರೂ ಇಂದಿರಾ ಸಂಸಾರದ ಜಂಜಾಟದಿಂದ ಮುಕ್ತರಾಗಲಿಲ್ಲ. ಬರವಣಿಗೆ ಮುಂದೆ ಸಾಗಲಿಲ್ಲ. ಆತ್ಮಚರಿತ್ರೆ ಮನಸ್ಸಿನಲ್ಲೇ ಉಳಿದುಹೋಯಿತು. ಸುಮಾರು ೬೫ ಪುಸ್ತಕಗಳನ್ನು ಪ್ರಕಟಿಸಿದ್ದರೂ ಒಂದು ಪುಸ್ತಕದ ಪ್ರತಿಯಾಗಲೀ, ಹಸ್ತಪ್ರತಿಯಾಗಲೀ ಯಾವುದೂ ಅವರ ಬಳಿ ಇರಲಿಲ್ಲ. ಬೆಂಗಳೂರಿನ ಖಾಸಗಿ ನರ್ಸಿಂಗ್ ಹೋಂನಲ್ಲಿ ಕೊನೆಯುಸಿರೆಳೆದಾಗ ಕೇವಲ ಇಂದಿರಾರವರ ಜೀವನವಲ್ಲ, ಒಂದು ಪರಂಪರೆಯನ್ನು ಪ್ರತಿನಿಧಿಸುತ್ತಿದ್ದ ಲೇಖಕಿಯ ಕೊನೆಯಾಗಿತ್ತು ಅದು. ನಿಜಕ್ಕೂ ತುಂಬಲಾರದ ನಷ್ಟವದು.

ಬರಹ

ಮಲೆನಾಡಿನಲ್ಲಿ ಹುಟ್ಟಿ ಬೆಳೆದ ಇಂದಿರಾ ಅಲ್ಲಿಯ ಜನರ ಜೀವನವನ್ನು, ಕಷ್ಟಸುಖಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ. ದಕ್ಷಿಣ ಕನ್ನಡ, ಉತ್ತರ ಕನ್ನಡ,

ಮಲೆನಾಡಿನ ಮೂಲೆ ಮೂಲೆಗಳನ್ನು ಸುತ್ತಿ ಆಯಾ ಪ್ರದೇಶಗಳ ಭಾಷೆ-ಪದ್ಧತಿ-ವ್ಯವಹಾರಗಳ ಪರಿಚಯ ಚೆನ್ನಾಗಿ ಮಾಡಿಕೊಂಡಿದ್ದಾರೆ. ಹಾಗಾಗಿ ಅವರ ಕಾದಂಬರಿಗಳಲ್ಲಿ ಬೇರೆ-ಬೇರೆ ಪ್ರದೇಶದ ಕನ್ನಡದ ಆಡುನುಡಿಯ ಪ್ರಯೋಗಗಳನ್ನು ಕಾಣಬಹುದಾಗಿದೆ. ಉದಾಹರಣೆಗೆ, ಸದಾನಂದ ಕಾದಂಬರಿಯಲ್ಲಿ ಆರು ವಿಧದ ಕನ್ನಡ ಆಡುಭಾಷೆಯ ಬಳಕೆಯಾಗಿದೆ.

ಬಾಲ್ಯದಿಂದ ಉತ್ತಮ ಸಾಹಿತ್ಯವನ್ನು ಆಶ್ಚರ್ಯದಿಂದ, ಆನಂದದಿಂದ ಓದಿದರೇ ಹೊರತು, ಬರೆಯುವ ವಿಚಾರ ಎಳ್ಳಷ್ಟೂ ಇಂದಿರಾ ಅವರಿಗೆ ಬಂದಿರಲಿಲ್ಲ. ಹಾಗೆ ನೋಡಿದರೆ ತಾಯಿ ಬನಶಂಕರಮ್ಮನ ಏಳು ಜನ ಸೋದರ ಮಾವಂದಿರು ಕಲಾವಿದರು, ಕವಿಗಳು, ಸಂಸ್ಕೃತ ವಿದ್ವಾಂಸರು. ಅವರಲ್ಲಿ ಒಬ್ಬರಾದ ಹೊಯ್ಸಳ ಮಕ್ಕಳ ಸಾಹಿತ್ಯದಲ್ಲಿ ಹೆಸರಾದವರು. ಇನ್ನೊಬ್ಬ ಸೋದರಮಾವ ಅನಂತಶರ್ಮ ಅವರ ಬಗ್ಗೆ ಇಂದಿರಾ ಅವರು ಆತ್ಮಸಖಿ ಎನ್ನುವ ಚರಿತ್ರೆಯನ್ನು ಬರೆದಿದ್ದಾರೆ. ಪ್ರಸಿದ್ಧ ನಾಟಕಕಾರ ಡಾ. ಎಚ್.ಕೆ. ರಂಗನಾಥ್ ಇಂದಿರಾ ಅವರ ತಾಯಿಯ ತಂಗಿಯ ಮಗ. ಪ್ರಜಾವಾಣಿ ಸಂಪಾದಕರಾಗಿದ್ದ ದಿವಂಗತ ಟಿ.ಸ್. ರಾಮಚಂದ್ರರಾವ್ ಇವರ ಸಹೋದರ. ಶಿವಮೊಗ್ಗೆಯಲ್ಲಿರುವ ಸಾಹಿತಿ-ವಿಮರ್ಶಕ ಡಾ.ಎ.ಎಸ್. ವೇಣುಗೋಪಾಲರಾವ್ ತಂದೆಯ ತಂಗಿಮಗ.

ಹೀಗಿದ್ದೂ ಇಂದಿರಾ ಅವರು ಬರೆಯಲು ಆರಂಭಿಸಿದ್ದು ತಮ್ಮ ೪ಳನೇ ವಯಸ್ಸಿನಲ್ಲಿ ಮೊಮ್ಮಗಳು ಹುಟ್ಟಿದ ಮೇಲೆ, ಅದೂ ಆಕಸ್ಮಿಕವಾಗಿ ಎನ್ನುವುದು ಆಶ್ಚರ್ಯಕರಸಂಗತಿ. ಅವರ ಪ್ರತಿಭೆ ಅಲ್ಲಿಯವರೆಗೆ ಸುಪ್ತವಾಗಿ ಉಳಿದಿದ್ದೇ ಹೆಚ್ಚು.

ತ್ರಿವೇಣಿ ಮತ್ತು ಎಂ.ಕೆ. ಇಂದಿರಾ ಭೇಟಿಯಾದ ಘಟನೆ ಉಲ್ಲೇಖನಾರ್ಹ. ೧೯೪೫-೪೬-೪೭ರಲ್ಲಿ ಇಂದಿರಾ ಅವರ ಕುಟುಂಬ ಮಂಡ್ಯದಲ್ಲಿತ್ತು. ಇಂದಿರಾ ಹಾಗೂ ಎದುರುಮನೆ ತ್ರಿವೇಣಿ ಹಿಂದಿ ತರಗತಿಗೆ ಹೋಗುತ್ತಿದ್ದರು. ತ್ರಿವೇಣಿ ಆಗಿನ್ನೂ ಗ್ರಾಜ್ಯುಯೇಟ್ ಆಗಿದ್ದು, ತಾಯಿಯ ಮನೆಯಲ್ಲಿ ಯೇ ಇದ್ದರು. ಒಂದು ದಿನ ಹಿಂದಿ ಮಾಸ್ತರರು ಪ್ರೇಮಚಂದ್ರರ ನಿರ್ಮಲಾ ಕಾದಂಬರಿಯ ಕಥಾ ಸಾರಾಂಶವನ್ನು ಕನ್ನಡದಲ್ಲಿ ಆರು ಪುಟಗಳಲ್ಲಿ ಬರೆಯಲು ತಿಳಿಸಿದ್ದರು. ಉಳಿದವರೆಲ್ಲ ಪುಟ್ಟಗಟ್ಟಲೆ ಬರೆದಿದ್ದರೆ ಇಂದಿರಾ ಚೊಕ್ಕವಾಗಿ ಆರು ಪುಟಗಳಲ್ಲಿ ಬರೆದು ಮಾಸ್ತರರ ಮೆಚ್ಚಿಕೆಗಳಿಸಿದರು. ಅದನ್ನು ಓದಲು ತೆಗೆದುಕೊಂಡು ಹೋಗಿದ್ದ ತ್ರಿವೇಣಿ (ಆಗಿನ್ನೂ ಅನಸೂಯ), ಮಾರನೆಯ ದಿನವೆ ಇಂದಿರಾರವರ ಮನೆಗೇ ಬಂದು ಅವರ ಬರವಣಿಗೆಯನ್ನು ಮೆಚ್ಚಿ ಅದನ್ನು ಮುಂದುವರಿಸಲು ತಿಳಿಸಿದರು. ತ್ರಿವೇಣಿಗೆ ತಮ್ಮ ಮದುವೆಯಾದ ಮೇಲೆ, ಮತ್ತಷ್ಟು ಜೀವನದ ಅನುಭವ ಗಳಿಸಿ ಬರೆಯುವ ವಿಚಾರವಿತ್ತು. ಇಂದಿರಾ

ತ್ರಿವೇಣಿಯ ಪ್ರೋತ್ಸಾಹದ ಅನಂತರವೂ ಬರೆಯುವ ಬಗ್ಗೆ ಮನಸ್ಸು ಮಾಡಲಿಲ್ಲ. ಮೊತ್ತಮೊದಲ ಬರಹಗಳಾದ ಎರಡು ಕತೆಗಳೂ ಮಕ್ಕಳ ಕೈಗೆ ಸಿಕ್ಕಿ ಹಾಳಾಗಿ ಹೋದವು. ಮುಂದೆ ಪುನಃ ತ್ರಿವೇಣಿ ಮೈಸೂರಿನ ವಸ್ತು ಪ್ರದರ್ಶನದಲ್ಲಿ ಪತಿಯೊಂದಿಗೆ ಭೇಟಿಯಾದಾಗ ಅವರಾಗಲೇ ಒಂದೆರಡು ಕಾದಂಬರಿಗಳನ್ನು ಬರೆದು ಹೆಸರು ಮಾಡಿದ್ದರು. ಆದರೆ, ಇಂದಿರಾ ಇನ್ನೂ ಸಂಸಾರದ ಜಂಜಾಟದಲ್ಲಿಯೇ ಮುಳುಗಿದ್ದರು. ಆಗಲೂ ತ್ರಿವೇಣಿ ಇಂದಿರಾಗೆ ಬರೆಯಲು ಒತ್ತಾಯ ಪೂರ್ವಕವಾಗಿ ತಿಳಿಸಿದರೂ ಬರೆಯುವ ಘಳಿಗೆ ಕೂಡಿ ಬಂದಿರಲಿಲ್ಲ.

೧೯೬೧-೬೨ರ ಸುಮಾರಿಗೆ ತೀರ್ಥಹಳ್ಳಿಯ ಸನಿಹದ ಬಂಧುವೊಬ್ಬರು ಮನೆಗೆ ಬಂದಾಗ ಬಾಲ್ಯದ ದಿನಗಳ, ನೆಂಟರಿಷ್ಟರ ಬಗ್ಗೆ ನೆನಪಿಸಿಕೊಳ್ಳುತ್ತ ಕುಳಿತಾಗ ಇದ್ದಕ್ಕಿದಂತೆ ಇಂದಿರಾ ಅವರಿಗೆ ಆ ದಿನಗಳ, ವ್ಯಕ್ತಿಗಳ, ಘಟನೆಗಳ ಬಗ್ಗೆ ಬರೆಯುವ ಪ್ರೇರಣೆಯುಂಟಾಯಿತು. ಅದೇ ಗುಂಗಿನಲ್ಲಿ ಬರೆಯಲು ಕುಳಿತಾಗ ಎಲ್ಲ ಘಟನೆಗಳು, ವ್ಯಕ್ತಿಗಳು ಯಥಾವತ್ತಾಗಿ ಅಕ್ಷರದಲ್ಲಿ ಮೂಡಿದವು. ಮೂರು ತಿಂಗಳಿನಲ್ಲಿ ತುಂಗ-ಭದ್ರ ರೂಪುಗೊಂಡಿತು. ಆದರೂ ಅದನ್ನು ಪ್ರಕಟಿಸಲು ಹಿಂಜರಿಕೆ. ಇಂದಿರಾ ಅವರ ಪತಿ ಕೃಷ್ಣರಾವ್ ಅವರ ಅಣ್ಣನ ಮಗ ಶ್ರೀರಾಮಸ್ವಾಮಿ ಅದನ್ನು ಓದಿ, ಆಗ ಧಾರವಾಡ ಆಕಾಶವಾಣಿಯಲ್ಲಿದ್ದ ಡಾ. ಎಚ್.ಕೆ. ರಂಗನಾಥ್ ಅವರಿಗೆ ಪುಸ್ತಕದ ಬಗ್ಗೆ ತಿಳಿಸಿ, ಮನೋಹರ ಗ್ರಂಥಮಾಲೆಗೆ ಪ್ರಕಾಶನಕ್ಕಾಗಿ ಕಳಿಸಲು ತಿಳಿಸಿದರು. ಅವರಿಂದ ಶ್ರೀ ಕುರ್ತುಕೋಟಿಯವರಿಗೆ ಹಸ್ತಪ್ರತಿ ದೊರೆಯಿತು. ಓದಿದ್ದೂ ಅಲ್ಲದೇ ಪ್ರಕಾಶನಕ್ಕೂ ಆಯ್ಕೆಯಾಯಿತು. ಆದರೆ ಇದ್ದ ಒಂದೇ ಹಸ್ತಪ್ರತಿ ಕಳೆದುಹೋಗಿ, ಪುನಃ ಹನ್ನೆರಡು ದಿನದಲ್ಲಿ ಇಂದಿರಾ ಒಂದು ಅಕ್ಷರವೂ ತಪ್ಪದಂತೆ ಬರೆದು ಮುಗಿಸಿದ್ದು ಪವಾಡವೇ ಸರಿ. ೧೯೬೩ರಲ್ಲಿ ತುಂಗಭದ್ರ ಮೊದಲ ಮುದ್ರಣ ಕಂಡು, ಕನ್ನಡ ಸಾಹಿತ್ಯ ಕ್ಷಿತಿಜದಲ್ಲಿ ಹೊಸ ನಕ್ಷತ್ರದ ಉದಯವಾದದ್ದು ಇಂದು ಇತಿಹಾಸದ ಭಾಗವಾಗಿದೆ. ತುಂಗಭದ್ರ ಇಂದಿರಾ ಅವರಿಗೆ ಸಾಕಷ್ಟು ಪ್ರಸಿದ್ಧಿಯನ್ನು ತಂದಿತು. ಉತ್ತಮ ಲೇಖಕಿಯರ ಸಾಲಿನಲ್ಲಿ ನಿಲ್ಲಿಸಿತು. ಅನಂತರ ಈ ಕಾದಂಬರಿ ಹಲವಾರು ಬಾರಿ ಮರು ಮುದ್ರಣಗೊಂಡಿದೆ. ಅವರ ಹೆಚ್ಚಿನ ಪುಸ್ತಕಗಳು ಮರು ಮುದ್ರಣಗೊಂಡಿವೆ.

ಮೊದಲ ಪುಸ್ತಕ ತುಂಗಭದ್ರ ಹೊರಬಂದ ಅನಂತರ ಇಂದಿರಾ ಹಿಂದಿರುಗಿ ನೋಡಲಿಲ್ಲ. ಯಾವ ಪ್ರಕಾಶಕರನ್ನೂ ತಾವಾಗಿ ಹುಡುಕಿಕೊಂಡು ಹೋಗಲಿಲ್ಲ. ಪ್ರಕಾಶಕರು, ಪತ್ರಿಕೆಯವರೇ ಅವರನ್ನು ಹುಡುಕಿಕೊಂಡು ಬಂದರು. ಒತ್ತಾಯದಿಂದ ಬರೆಸಿದರು. ಮೊದಲ ಬೇಡಿಕೆ ಬಂದುದು ಉತ್ತರ ಕರ್ನಾಟಕದಿಂದ, ಅನಂತರ ಬೆಂಗಳೂರಿನಿಂದ.

ಸೋದರ ಟಿ.ಎಸ್. ರಾಮಚಂದ್ರರಾವ್, ಪ್ರಜಾವಾಣಿ ಸಂಪಾದಕರಾಗಿದ್ದರೂ ಇಂದಿರಾರವರ ಕಾದಂಬರಿಯನ್ನು ತಮ್ಮ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಹಾಕುವ ಮನಸ್ಸು ಮಾಡಿರಲಿಲ್ಲ. ಇಂದಿರಾ ಕೂಡ ಅವರನ್ನು ಕೇಳುವ ಗೋಜಿಗೇ ಹೋಗಿರಲಿಲ್ಲ. ಅವರ ಗೆಜ್ಜೆ ಪೂಜೆ ಕಾಂದಬರಿಯ ಹಸ್ತಪ್ರತಿಯನ್ನು ಓದಿದವರೊಬ್ಬರು ಅದನ್ನು ಮೆಚ್ಚಿಕೊಂಡು, ರಾಮಚಂದ್ರರಾವ್ ಅವರನ್ನು ಪ್ರಜಾವಾಣಿಯಲ್ಲಿ ಪ್ರಕಟಿಸುವಂತೆ ಒತ್ತಾಯಿಸಿದ ಮೇಲೆ ಅವರು ಅದನ್ನು ಓದಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು ನಿರ್ಧರಿಸಿದರು. ಗೆಜ್ಜೆಪೂಜೆ ಓದುಗರ ಮನ ಸೂರೆಗೊಂಡಿತು. ಮುಂದಿನ ಸಂಚಿಕೆಗಾಗಿ ಕಾತರದಿಂದ ಕಾಯುವಂತೆ ಮಾಡಿತು. ಗೆಜ್ಜೆಪೂಜೆಯನ್ನು ಓದಿದ ಎಲ್ಲ ಓದುಗರು (ಇಂದಿರಾ ಅವರನ್ನು ಕಣ್ಣಾರೆ ನೋಡದಿದ್ದವರು) ಲೇಖಕಿ ಒಬ್ಬ ಸುಶಿಕ್ಷಿತ, ಆಧುನಿಕ ಯುವತಿ ಎಂದೇ ಬಹುಕಾಲ ಭಾವಿಸಿದ್ದರು. ಗೆಜ್ಜೆಪೂಜೆ ಧಾರಾವಾಹಿ ಕೊನೆಗೊಂಡ ಕೆಲವು ದಿನಗಳಲ್ಲಿ ಟು-ಲೆಟ್ ಎನ್ನುವ ಹಾಸ್ಯ ಕಾದಂಬರಿ ಧಾರಾವಾಹಿಯಾಗಿ ಪ್ರಜಾವಾಣಿಯಲ್ಲಿ ಪ್ರಕಟವಾಯಿತು. ಅದು, ಇಂದಿರಾ ಗೆಜ್ಜೆಪೂಜೆ ಯಂತಹ ಗಂಭೀರ ವಿಷಯದ ದುಃಖಾಂತ ಕಾದಂಬರಿಯಲ್ಲದೆ ಟು-ಲೆಟ್ ನಂತಹ ಲಘು ಬರಹಗಳನ್ನೂ ಬರೆಯಬಲ್ಲರೆಂದು ಸಾಬೀತು ಪಡಿಸಿತು. ಈವರೆಗೆ ಅವರ ಸುಮಾರು ೧೫೦ ಸಣ್ಣ ಕತೆಗಳು ಬೇರೆ-ಬೇರೆ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಇಂದಿರಾ ೪೯ ಕಾದಂಬರಿಗಳನ್ನು ೧೧ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಕಾದಂಬರಿಗಳಲ್ಲಿ ಜೀವನ ಚರಿತ್ರೆ, ವ್ಯಕ್ತಿ ಚಿತ್ರ, ಪ್ರವಾಸಕಥನಗಳೂ ಸೇರಿವೆ. ಕಥಾಸಂಕಲನದಲ್ಲಿ ನಗೆಬರಹಗಳೂ ಇವೆ. ತುಂಗಭದ್ರ ೧೯೮೪ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಡಿಗ್ರಿ ತರಗತಿಗಳಿಗೆ ಪಠ್ಯಪುಸ್ತಕವಾಗಿತ್ತು. ಈ ಪುಸ್ತಕಕ್ಕೆ ಪ್ರಸಿದ್ಧ ವಿಮರ್ಶಕ ಕೀರ್ತಿನಾಥ ಕುರ್ತುಕೋಟಿಯವರು ವಿಮರ್ಶಾತ್ಮಕ ಮುನ್ನುಡಿಯನ್ನು ಬರೆದು ತಮ್ಮ ಮೆಚ್ಚಿಕೆ ವ್ಯಕ್ತಪಡಿಸಿದ್ದಾರೆ. ಇಂದಿರಾ ಅವರ ಮೊದಲ ಅಭಿಮಾನಿಯಾದ ತ್ರಿವೇಣಿಯವರ ಹೆಸರಿನಲ್ಲಿ ಲೇಖಕಿಯರ ಚೊಚ್ಚಲ ಕೃತಿಗೆ ಕೊಟ್ಟ ಬಹುಮಾನ (ತ್ರಿವೇಣಿ ಕಾದಂಬರಿ ಸ್ಪರ್ಧೆ) ತುಂಗ-ಭದ್ರಕ್ಕೆ ಲಭಿಸಿರುವುದು ವಿಧಿಯ ಆಟವೇ ಸರಿ. ಅವರ 'ಸದಾನಂದ', 'ನವರತ್ನ', 'ಫಣಿಯಮ್ಮ' ಕೃತಿಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ೧೯೭೫ರಲ್ಲಿ ಶ್ರೇಷ್ಠ ಲೇಖಕಿಯ ಪ್ರಶಸ್ತಿಯೂ ದೊರೆತಿದೆ. 'ಗೆಜ್ಜೆಪೂಜೆ', 'ಸದಾನಂದ', 'ಹೂಬಾಣ', 'ಫಣಿಯಮ್ಮ' ಚಲನಚಿತ್ರಗಳಾಗಿವೆ. 'ಗೆಜ್ಜೆಪೂಜೆ' ಪುಟ್ಟಣ್ಣ ಕಣಗಾಲ್ ನಿರ್ದೇಶನದ ಅತ್ಯಂತ ಜನಪ್ರಿಯ ಚಿತ್ರವಾಗಿತ್ತು.

'ತುಂಗ-ಭದ್ರ', 'ಗೆಜ್ಜೆಪೂಜೆ' ತೆಲುಗಿಗೆ ಹಾಗೂ 'ಫಣಿಯಮ್ಮ' ಮಲಯಾಳಂ ಮತ್ತು ಇಂಗ್ಲೀಷಿಗೆ ಅನುವಾದಗೊಂಡಿವೆ. ಇಂದಿರಾ ಅವರಿಗೆ ಇಷ್ಟವಾದ ತಮ್ಮ

ಕೃತಿಗಳೆಂದರೆ 'ತುಂಗಭದ್ರ', 'ಸದಾನಂದ', 'ಫಣಿಯಮ್ಮ' ಮತ್ತು 'ತೆಗ್ಗಿನ ಮನೆ ಸೀತೆ'. ತಾವುಕಂಡ, ಅನುಭವಿಸಿದ ಘಟನೆಗಳ ಆಧಾರದ ಮೇಲೆ, ತಮ್ಮ ಬಾಲ್ಯದ ಆತ್ಮೀಯ ಗೆಳೆಯರ, ಬಂಧುಗಳ ಜೀವನವನ್ನು ಆಧರಿಸಿ ಬರೆದ ಈ ಕೃತಿಗಳು ಅವರಿಗೆ ಪ್ರಿಯವಾದದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಅದನ್ನು ಬರೆಯುವಾಗ ಬಹುಶಃ ಅವರು ಮಾನಸಿಕವಾಗಿ ತಮ್ಮ ಬಾಲ್ಯವನ್ನು ಪುನಃ ಅನುಭವಿಸಿರಬೇಕು. ಮಲೆನಾಡಿನ ಪ್ರಕೃತಿಯ ಸೊಬಗಿನ ನಡುವೆ ಲಂಗ-ಕುಪ್ಪಸ ತೊಟ್ಟ ಪುಟ್ಟ ಹುಡುಗಿಯಾಗಿ ಮರ ಹತ್ತುತ್ತ, ತೀರ್ಥಹಳ್ಳಿಯ ಕಲ್ಲುಸಾರ ದಾಟುತ್ತ ಆನಂದಪಟ್ಟಿರಬೇಕು.

ಅವರ ಒಂದು ಕಾದಂಬರಿ ಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಬರುತ್ತಿದ್ದಾಗ ಬಂಧುಗಳೊಬ್ಬರ ಕೋಪಕ್ಕೆ ಈಡಾಗಿ ಇಂದಿರಾ ನ್ಯಾಯಲಯದ ಮೆಟ್ಟಿಲು ಹತ್ತುವ ಪ್ರಸಂಗ ಬಂದಿತ್ತು. ಆದರೆ, ಉಪಾಯವಾಗಿ ತಪ್ಪಿಸಲಾಯಿತು. ಇಂದಿರಾ ಕವನ ಮತ್ತು ನಾಟಕವನ್ನು ಮಾತ್ರ ಬರೆದಿಲ್ಲ. ಇಂಗ್ಲೀಷ್ ಪುಸ್ತಕಗಳನ್ನು ಓದಿಯೇ ಇಲ್ಲ. ಆದ್ದರಿಂದ, ಅವರ ಕತೆಗಳು ಕಾದಂಬರಿಗಳು, ಅಪ್ಪಟ ಕನ್ನಡ ನೆಲದಿಂದ ಹುಟ್ಟಿದವು. ಕೃತಿಚೌರ್ಯ ಅವರಿಂದ ಬಲುದೂರ. ಇಂಗ್ಲೀಷ್ ಸಾಹಿತ್ಯದಿಂದ ಪ್ರಭಾವಿತರಾಗಿ ಬರೆಯಲು ಯಾವ ವಿಶ್ವವಿದ್ಯಾಲಯದಲ್ಲೂ ಅವರು ಅಧ್ಯಾಪಕಿ ಆಗಿರಲಿಲ್ಲ. ಅಂತೆಯೇ ಯಾವುದೇ ಅಕಾಡೆಮಿಕ್ ಚರ್ಚೆಯಲ್ಲೂ ಭಾಗವಹಿಸಿರಲಾರರು. ತುಂಗಭದ್ರ, ಸದಾನಂದ, ಫಣಿಯಮ್ಮನಂತಹ ಮಹತ್ವದ ಕೃತಿಗಳನ್ನೂ ಯಾವುದೇ ಸಾಹಿತ್ಯ ಚರ್ಚೆಯಲ್ಲೂ ಉಲ್ಲೇಖ ಮಾಡದೆ ಇರುವುದು ಆಶ್ಚರ್ಯಕರ. ಬಹುಶಃ ಲೇಖಕಿಯೊಬ್ಬಳ ಕಾದಂಬರಿಗಳು ಎನ್ನುವ ಅಸಡ್ಡೆ, ಧೋರಣೆಯ ಮನೋಭಾವ ಇದಕ್ಕೆ ಕಾರಣವಿರಬೇಕು.

ಮಲೆನಾಡಿನ ಜನರ ಆಡು ಭಾಷೆಯ ಬಳಕೆ, ಆಕರ್ಷಕ ಕಥನ ಶೈಲಿ ಇಂದಿರಾರವರ ಆಸ್ತಿ. ಬಾಲ್ಯದ ಕೇವಲ ೧೭ ವರ್ಷಗಳಲ್ಲಿ ಕಂಡುಂಡ ಅನುಭವವೇ ಅವರ ಬರವಣಿಗೆಯ ಮೂಲ ಬಂಡವಾಳ. ಆ ಅನುಭವಗಳನ್ನು ಆಧರಿಸಿ ಬರೆದಾಗ ಇಂದಿರಾ ಸಹಜವಾಗುತ್ತಾರೆ, ಆತ್ಮೀಯರಾಗುತ್ತಾರೆ, ಯಶ್ವಸಿಯಾಗುತ್ತಾರೆ. ಅನುಭವದಿಂದ ದೂರವಾಗಿ ಕಲ್ಪನೆಯ ಬೆನ್ನೇರಿದಾಗ ಕೃತಕವಾಗುತ್ತಾರೆ, ಅಪರಿಚಿತರಾಗುತ್ತಾರೆ, ವಿಫಲರಾಗುತ್ತಾರೆ. ಮಲೆನಾಡಿನ ಜೀವನದ ಅನುಭವವೇ ಇಂದಿರಾ ಅವರ ದೊಡ್ಡ ಸಂಪತ್ತು. ಯಾವುದನ್ನೂ ವೈಭವೀಕರಿಸದೆ ನಿರ್ಲಿಪ್ತರಾಗಿ ಕಥೆ ಹೇಳುವ, ಪಾತ್ರಕ್ಕೆ ಜೀವ ತುಂಬುವ ಕಲೆ ಇಂದಿರಾರವರಿಗೆ ಸಿದ್ಧಿಸಿದೆ. ಫಣಿಯಮ್ಮನ ಗಂಡ ನಂಜುಂಡಯ್ಯ ಹಾವು ಕಡಿದು ಸತ್ತ ಘಟನೆಯನ್ನು ನಿರ್ವಹಿಸಿರುವ ರೀತಿ ಇದಕ್ಕೆ ಒಂದು ಉದಾಹರಣೆ. ಕೆಲವೇ ಕೆಲವು ಮಾತುಗಳಲ್ಲಿ ವ್ಯಕ್ತಿ ಚಿತ್ರಣವನ್ನು

ಘಟನೆಗಳ ಚಿತ್ರವನ್ನು ಕಟ್ಟಿಕೊಡುವುದರಲ್ಲಿಯೂ ಇಂದಿರಾ ನಿಪುಣರು. ತುಂಗಭದ್ರದ ನದಿಯಾಚೆಯ ಫಣಿಯಮ್ಮ ಹಾಗೂ ಶಂಕರಪ್ಪನವರ ಹೆಂಡತಿ ಗಂಗಮ್ಮ ಕಾದಂಬರಿಯಲ್ಲಿ ಸಣ್ಣ ಪಾತ್ರಗಳಾದರೂ ಬಹು ಸಮರ್ಥವಾಗಿ ಮೂಡಿ ಬಂದಿವೆ. ಕತೆಯೊಂದಿಗೆ ಹೊರಗಿನ ಸಮಾಜದಲ್ಲಿ ನಡೆಯುತ್ತಿದ್ದ ಬದಲಾವಣೆಗಳನ್ನು ಸುತ್ತಮುತ್ತಲಿನ ಆಗು-ಹೋಗುಗಳನ್ನು ಇಂದಿರಾ ದಾಖಲಿಸುತ್ತ ಹೋಗುತ್ತಾರೆ. ಈ ತಲೆಮಾರಿನ ಓದುಗರಿಗೆ ಅದರ ಐತಿಹಾಸಿಕ ಮಹತ್ವವಿದ್ದೇ ಇದೆ. ಮುಖ್ಯವಾಗಿ, ತಲ ತಲಾಂತರದಿಂದ ಸಮಾಜದಲ್ಲಿ ನಡೆದುಕೊಂಡು ಬಂದ ಆನೇಕ ಅನಿಷ್ಟ ಸಂಪ್ರದಾಯಗಳನ್ನು ಕಟುವಾಗಿ ಟೀಕಿಸುತ್ತಾರೆ. ಜಾತಿಪದ್ಧತಿ, ವಿಧವೆಯರ ದುಃಸ್ಥಿತಿ, ಬಾಲ್ಯ ವಿವಾಹದ ಅಪಾಯ, ವಿಧವಾ ವಿವಾಹ, ಹೆಣ್ಣು-ಗಂಡಿನ ನಡುವೆ ಸಮಾಜದ ತಾರತಮ್ಯ ಧೋರಣೆ ಇಂತಹ ವಿಷಯಗಳು ಅವರ ಕಾದಂಬರಿಗಳ ವಸ್ತುವಾಗಿರುವುದಲ್ಲದೆ ಅವು ಇಂದಿರಾ ಅವರ ಕ್ರಾಂತಿಕಾರಿ ಅಲ್ಲದಿದ್ದರೂ ಸುಧಾರಣಾವಾದಿ ಮನೋಭಾವಕ್ಕೆ ಸಾಕ್ಷಿಯಾಗುತ್ತವೆ. ಅವರ ಮಾನವೀಯ ಅನುಕಂಪ ಎದ್ದು ಕಾಣುತ್ತದೆ. ಚುರುಕಾದ ಸಂಭಾಷಣೆಗಳು, ಅದರಲ್ಲಿರುವ ಹಾಸ್ಯದ ಲೇಪ ಅವರ ಬರವಣಿಗೆಯ ವಿಶೇಷತೆ. ಕೀರ್ತಿನಾಥ ಕುರ್ತುಕೋಟಿಯವರು ತುಂಗಭದ್ರದ ತಮ್ಮ ಮುನ್ನುಡಿಯಲ್ಲಿ, ಈ ಕಾದಂಬರಿಯ ತುಂಬೆಲ್ಲ ಹೆಣ್ಣು ಮಕ್ಕಳಿಗೆ ಮಾತ್ರ ವೇದ್ಯವಾಗಿರುವ ಜೀವನ ದರ್ಶನ ಹರಡಿದೆ ಎಂದಿರುವುದು ಅಕ್ಷರಶಃ ಸತ್ಯ.

೪೬ ವರ್ಷಗಳ ಅವಧಿಯಲ್ಲಿ ಇಂದಿರಾ ಸುಮಾರು ೬೫ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಕೊನೆಯ ಪುಸ್ತಕವಾಗಬಹುದಾಗಿದ್ದ ಅವರ ಆತ್ಮಚರಿತ್ರೆ ಬಿಂದು ೧೨೦ ಪುಟಗಳಷ್ಟು ಮಾತ್ರ ಮುಂದುವರಿದಿದ್ದು ಪೂರ್ಣಗೊಳ್ಳದೇ ನಿಂತು ಹೋಯಿತು. ಆ ಮೂಲಕ ಹಿಂದಿನ ತಲೆಮಾರಿನ ಲೇಖಕಿಯ ವಿಶಿಷ್ಟ ಅಮೂಲ್ಯ ಅನುಭವ ಸಂಪತ್ತು, ಮಲೆನಾಡ ಜೀವನ ದರ್ಶನ ದೊರಕದೇ ಹೋಯಿತು. ಆ ಮಟ್ಟಿಗೆ ಕನ್ನಡದ ಓದುಗರು ದುರದೃಷ್ಟಶಾಲಿಗಳು.

ಇಂದಿರಾರವರ ಸಾಹಿತ್ಯ ಕೃತಿಗಳನ್ನು ಅನೇಕ ಹಿರಿಯ ಸಾಹಿತಿಗಳು, ಕಿರಿಯ ತಲೆಮಾರಿನವರು, ವಿಮರ್ಶಕರು ಅವರ ಬರವಣಿಗೆಯ ಬಗ್ಗೆ ಮೆಚ್ಚಿಗೆಯ ಮಾತುಗಳನ್ನು ಹೇಳಿದ್ದಾರೆ. ಅವುಗಳನ್ನು ವಿಶ್ಲೇಷಿಸಿದ್ದಾರೆ. ಅವುಗಳ ಮೂಲಕ ನೀವು ಇಂದಿರಾರವರ ಸಾಹಿತ್ಯ ಸೇವೆಯ ಮಹತ್ವವನ್ನು ಕಂಡುಕೊಳ್ಳಬಹುದು. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ.

ಡಾ. ಪು.ತಿ. ನರಸಿಂಹಾಚಾರ್: ದಿವಂಗತ ಶ್ರೀಮಾನ್ ಕೀರ್ತಿಶೇಷ ಎಂ.ಎಸ್. ಪುಟ್ಟಣ್ಣನವರನ್ನು ಬಿಟ್ಟರೆ ಅಷ್ಟೇ ಮೋಹಕವಾಗಿ, ಅಂಥದೇ ಸೊಗಡುಳ್ಳ, ಅದರಂಥದೇ

ಬನಿಯಾದ ಕನ್ನಡವನ್ನು ನೀವು ಕಾಣುವುದು ಶ್ರೀಮತಿಯವರ ಕಾದಂಬರಿಗಳಲ್ಲಿ. ಇವರ 'ತೆಗ್ಗಿನ ಮನೆ ಸೀತೆ'ಯನ್ನು ಓದಿದಾಗ ನನ್ನ ಮನಸ್ಸು ಪ್ರಫುಲ್ಲವಾಯಿತು, ಹೃದಯ ತಣಿಯಿತು. ಈ ಸಣ್ಣ ಕಾದಂಬರಿಯ ಪಾತ್ರಗಳ ಸೊಗಡನ್ನು ಓದಿಯೇ ತಿಳಿಯಬೇಕು. ಫಣಿಯಮ್ಮ ಕೂಡಾ ಓದಿಗೆ ಬಹು ಒಳ್ಳೆಯ ಪುಸ್ತಕ. ಕನ್ನಡವೋ, ಎಂಥ ದೇಸೀ ಕನ್ನಡ!

ಎಚ್.ಎಸ್ ಪಾರ್ವತಿ: ಎಂ.ಕೆ. ಇಂದಿರಾರವರನ್ನು ನೋಡಿದರೆ ಯಾರೇ ಆದರೂ ಅವರನ್ನು ತುಂಬಾ ಸಂಪ್ರದಾಯವಾದಿ ಎಂದೇ ಭಾವಿಸಬಹುದು. ಆದರೆ ಅವರ ಕೆಲವು ಕಾದಂಬರಿಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವುಗಳಲ್ಲಿನ ಸಂಪ್ರದಾಯಕ್ಕೆ ವಿರುದ್ಧವಾದ ಭಾವನೆಗಳೇ ಕಂಡುಬರುತ್ತವೆ. ಅದರಲ್ಲೂ ಅವರ 'ತಪೋವನ'ದಲ್ಲಿಯಂತಹ ಕಾದಂಬರಿಗಳನ್ನು ಓದಿದಾಗ ಸ್ವಾಮಿಗಳು, ಸನ್ಯಾಸಿಗಳು, ಬಾಬಾಗಳ ಬಗ್ಗೆ ಅವರಿಗೆ ಗೌರವವೇನೂ ಇಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ಇಂದಿರಾ ಅವರ ಯಶಸ್ಸಿಗೆ ಕಾರಣವಾದ ಅಂಶಗಳಲ್ಲಿ ಅವರು ಬಳಸುವ ಭಾಷೆಯದೂ ಮುಖ್ಯ ಪಾತ್ರವಿದೆ. ಅವರ ಭಾಷೆಯಲ್ಲಿ ಮಲೆನಾಡಿನ ಸೊಗಡು ತುಂಬಿದೆ. ಅವರು ಧಾರಾಳವಾಗಿ ಬಳಸುವ ಜನಪದ ಗಾದೆಗಳೂ ಆ ಭಾಷೆಯ ಆಕರ್ಷಣೆಯನ್ನು ಹೆಚ್ಚಿಸಿವೆ. ಅವರ ಕಥೆ-ಕಾದಂಬರಿಗಳು ಹೆಚ್ಚು ಜೀವಂತಿಕೆಯಿಂದ, ಸಹಜತೆಯಿಂದ ಕೂಡಿ ಸತ್ವಯುತವಾಗಿರುತ್ತವೆ.

ರಾಮಸ್ವಾಮಿ: ಒಮ್ಮೆ ಈಕೆ ಬರೆದ ಕಾದಂಬರಿ 'ತುಂಗಭದ್ರ' ನನ್ನ ಕಣ್ಣಿಗೆ ಬಿದ್ದು ಓದಿದೆ. ಇದೊಂದು ಉತ್ತಮ ಕಾದಂಬರಿ. ಇದು ಪ್ರಕಟ ಆಗದಿದ್ದಲ್ಲಿ ಇದು ಈಕೆಗಿಂತ, ಕನ್ನಡ ಸಾಹಿತ್ಯಕ್ಕೊಂದು ನಷ್ಟ ಅನ್ನಿಸಿತು. ಈ ಪುಸ್ತಕದ ಪ್ರಕಟಣೆ ಈಕೆಯ ಪ್ರತಿಭೆಗೆ ನಾಂದಿ ಆಗಿ ಒಬ್ಬ ಪ್ರಖ್ಯಾತ ಕಾದಂಬರಿಕಾರ್ತಿ ಆಗಲು ಅವಕಾಶ ಮಾಡಿಕೊಟ್ಟಿತು.

ಡಾ. ಅನುಪಮಾ ನಿರಂಜನ: ಆ ಹೊತ್ತಿಗೆ ನಾನು ಮೂರು-ನಾಲ್ಕು ಕಾದಂಬರಿ ಬರೆದಿದ್ದೆ. ತುಂಗಭದ್ರ ಓದಿದಾಗ ನನಗೆ ಅಪೂರ್ವ ಅನುಭವವಾಯಿತು. ಮಲೆನಾಡಿನ ಚಿತ್ರಗಳನ್ನು ಕುವೆಂಪು ಬಿಟ್ಟರೆ ಯಾರೂ ಬರೆದಿರಲಿಲ್ಲ. ಈಗ ಇಂದಿರಾರ ಪಾತ್ರದೊಂದಿಗೆ ಹೊಸ ಲೋಕ ಹೊಕ್ಕ ಹಾಗಾಯಿತು. ಕಾದಂಬರಿಯಲ್ಲಿ ಬಳಸಿದ ಪ್ರಾದೇಶಿಕ ಭಾಷೆಯ ಸೊಗಡು ನನ್ನನ್ನು ಮೋಹಿಸಿತು. ಅದುವರೆಗೆ ಸಾಹಿತ್ಯ ರಚನೆಯ ಸುಳಿವೆ ಇಲ್ಲದ ಈ ವ್ಯಕ್ತಿ ಇಂತಹ ಒಳ್ಳೆಯ ಕೃತಿ ರಚಿಸಿದ್ದಾರಲ್ಲ ಎಂದು ವಿಸ್ಮಯವಾಯಿತು. ಓದಿಗೂ ಸೃಜನಶೀಲತೆಗೂ ಸಂಬಂಧವಿಲ್ಲ ಎಂಬ ಅಂಶ ಆಗಲೇ ನನಗೆ ಮನದಟ್ಟಾಗಿತ್ತು. ಕಾನನದಲ್ಲಿ ಹೂವೊಂದು ವಿಕಸಿಸಿದ ಹಾಗೆ ಇಂದಿರಾ ಸಹಜ ಪ್ರತಿಭೆಯ ಲೇಖಕಿಯಾಗಿದ್ದರು.

'ತಪೋವನ'ದಂತಹ ಕೃತಿಯಲ್ಲಿ ಠಕ್ಕಬಾಬಾಗಳನ್ನು ಧೈರ್ಯದಿಂದ ಬಯಲಿಗೆಳೆದ ಹಾಗೆ 'ಫಣಿಯಮ್ಮ'ದಲ್ಲಿ ಸ್ತ್ರೀಪರ ದನಿ ಎತ್ತಿದರು, ಸಂಪ್ರದಾಯಗಳನ್ನು ಪ್ರಶ್ನಿಸಿದರು. ಹಳೆಯ ಪೀಳಿಗೆಯ ಲೇಖಕಿಯಾದ ಇಂದಿರಾ, ಆಧುನಿಕ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡು, ಹೊಸತಕ್ಕೆ ಸ್ಪಂದಿಸುತ್ತಿದ್ದ ರೀತಿ ಅನನ್ಯವಾಗಿತ್ತು.

ಟಿ. ಸುನಂದಮ್ಮ: 'ತುಂಗಭದ್ರ' ಕಾದಂಬರಿ ಕೈಸೇರಿದ್ದು ಆಗತಾನೇ ಓದಿ ಮುಗಿಸಿದ್ದ ನಾನು ಪುಳಕಿತಳಾದೆ. ಆ ಕಾದಂಬರಿಯ ವಸ್ತು ಹಾಗೂ ನಿರೂಪಣಾ ಶೈಲಿ ಆಳವಾದ ಪ್ರತಿಕ್ರಿಯೆ ಮೂಡಿಸಿತು. ಇಂದಿರಾ ಅಪ್ಪಟ ಕನ್ನಡತಿ, ಬೇರೆ ಭಾಷೆ ಬಾರದು. ಆಕೆ ಅನುಭವದ ವಿಶ್ವವಿದ್ಯಾಲಯ ಪದವೀಧರೆ!

ಎ.ಎಸ್. ವೇಣುಗೋಪಾಲರಾವ್: ಎಂ.ಕೆ. ಇಂದಿರಾ ಕೃತಿಗಳಲ್ಲಿ ಸುಲಭವಾಗಿ ಕಾಣಿಸಿಕೊಳ್ಳದೇ ಆತುರದ ವಿಮರ್ಶಕನ ಅವಸರದ ನಿರ್ಣಯಗಳನ್ನು ನಗುವಂತಹವು ಎಂದರೆ ಮೇಲು ನೋಟಕ್ಕೆ ಸಂಪ್ರದಾಯಸ್ಥರಂತೆ ತೋರುವ, ಅವರ ಅನುಭವದ ಅಂಗಳದಲ್ಲಿ ಬೆಳೆದ ಪಾತ್ರಗಳಲ್ಲಿ ಸಹಜವಾಗಿ ಸಿಡಿಯುವ, ಒಳಗೊಳಗೆ ಗುಡುಗುವ ಕ್ರಾಂತಿಯ ಕಿಡಿಗಳು. ಇಂದಿರಾ ಆವೇಶದ ಅಬ್ಬರದ ರೆಬೆಲ್ ಅಂತೂ ಅಲ್ಲ. ಸ್ವತಂತ್ರ ಸಮಕಾಲೀನತೆಗಳ ಸಾಮಾಜಿಕ ಬದ್ಧತೆ ಇತ್ಯಾದಿಗಳ ಮಾಡರ್ನ್ ತುರ್ತುಗಳಿಗೆ ಅವರು ಹರದಾರಿ ದೂರವೇ ಇದ್ದಾರೆ. ಹೊಸ ಚಿಂತನೆಗಳ ಬಗ್ಗೆ ಅಷ್ಟಾಗಿ ಅವರು ಆಸಕ್ತಿ ತೋರಿದಂತಿಲ್ಲ. ಸಂಘಟನೆಗಳಲ್ಲಿ ಸಕ್ರಿಯಪಾತ್ರವೂ ಅವರಿಗೆ ಅನೇಕರಂತೆ ಸಾಧ್ಯವಾಗಿಲ್ಲ- ಸಹಜವೂ ಆಗಿಲ್ಲ. ಈ ಎಲ್ಲಾ ಮಾತುಗಳನ್ನು ಒಪ್ಪಿಯೂ ಅವರ ಪಾತ್ರಗಳು ಅದೆಷ್ಟು ಸಹಜವಾಗಿ ಹೊಸ ಅಗತ್ಯಗಳಿಗೆ ತೆರೆದುಕೊಂಡಿವೆ ಎಂಬುದು ಅಚ್ಚರಿ ಮೂಡಿಸುವ ಅಂಶವೇ, ತೀರಾ ಕುಗ್ರಾಮದ ಮಲೆನಾಡಿನ ಮೂಲೆಯ ವಿಧವೆ ಕಮಲೆ ಮದುವೆಗೆ ಸಿದ್ಧವಾಗಿ ಬಿಡುವುದು, ಹದಿನಾರಾಣೆ, ಕಂದಾಚಾರದ ಫಣಿಯಮ್ಮ ಹೊಲೇರ ಆಳಿನ ಹೆಂಡತಿಯ ಹೆರಿಗೆಯನ್ನು ಯಾವ ಮುಜುಗರ ಇಲ್ಲದೆ ಕೋಮಲ ಬೆರಳುಗಳಲ್ಲಿ ಸಲೀಸಾಗಿ ಮಾಡಿಬಿಡುವುದು, ಗಂಡಸತ್ತ ಎಳೆ ಹುಡುಗಿಯ ಅಕ್ರಮ ಸಂಬಂಧವನ್ನು ಅಂತಃಕರಣದಿಂದ ಒಪ್ಪಿಬಿಡುವುದು ಇಂಥ ಕೆಲವು ಉದಾಹರಣೆಗಳು ಮಾತ್ರ.

ಎಚ್.ಎಸ್. ಸಾವಿತ್ರಮ್ಮ: ಅವರ ಒಂದೊಂದು ಕಾದಂಬರಿಯಲ್ಲೂ ಪ್ರತ್ಯೇಕತೆ ಇದೆ ಒಂದರಂತೆ ಮತ್ತೊಂದಿಲ್ಲ. ನಾನೂ ಕೆಲವು ಕಾದಂಬರಿಗಳನ್ನು ಓದಿ ಸಂತೋಷ ಪಟ್ಟಿದ್ದೇನೆ. 'ಗೆಜ್ಜೆಪೂಜೆ' ಚಲನಚಿತ್ರವನ್ನು ನೋಡಿ ಕಣ್ಣೀರು ಕರೆದಿದ್ದೇನೆ. ಇಂದಿರಾರವರ ಕಾದಂಬರಿಗಳಿಗೆಲ್ಲಾ ಮನೋಜ್ಞ ಹಿನ್ನೆಲೆಯಿದೆ. ಅಲ್ಲೇ ಹುಟ್ಟಿ ಬೆಳೆದ ಆಕೆ ಆ ನಿಸರ್ಗ ಸೌಂದರ್ಯದಲ್ಲಿ ಸೇರಿ ಹೋಗಿದ್ದಾರೆ. ಅಲ್ಲಿಯ ಕಷ್ಟಜೀವನ, ಮರೆಮೋಸಗಳನ್ನರಿಯದ

ಸರಳತೆ ಇವೆಲ್ಲವನ್ನೂ ಮೈಗೂಡಿಸಿಕೊಂಡು ಬರೆದಿದ್ದಾರೆ. ಮನುಷ್ಯ ಸಂಪರ್ಕವೇ ಅಪರೂಪವಾಗಿರುವ ಆ ನಾಡಿನಲ್ಲಿ, ಕಲ್ಪನಾ ಲೋಕದಲ್ಲಿ ವಿಹರಿಸಿ, ತಮ್ಮ ಅನುಭವಗಳನ್ನು ಓದುಗರ ಮನಮುಟ್ಟುವಂತೆ, ಅಯ್ಯೋ! ನಾವೂ ಇಂತಹ ಸುಂದರ ತಾಣದಲ್ಲಿ ಜೀವನ ಕಳೆಯಲಿಲ್ಲವಲ್ಲಾ ಎನ್ನಿಸುವಂತೆ ಚಿತ್ರಿಸಿದ್ದಾರೆ.

ಕೀರ್ತಿನಾಥ ಕುರ್ತಕೋಟಿ: ಎಂ.ಕೆ. ಇಂದಿರಮ್ಮನವರ 'ತುಂಗಭದ್ರ' ಕಾದಂಬರಿ ಅವರ ಜೀವನ ಶ್ರದ್ಧೆಯ ಫಲವಾಗಿದೆ. ಜೀವನ ಶ್ರದ್ಧೆ ಎಂಬ ಮಾತನ್ನು ನಾನು ಇಲ್ಲಿ ಒಂದು ವಿಶಿಷ್ಟ ಅರ್ಥದಲ್ಲಿ ಮಾತ್ರ ಪ್ರಯೋಗಿಸುತ್ತಿದ್ದೇನೆ. ಸಾಹಿತ್ಯವೆಂದರೆ ನಿಜ ಜೀವನದ ಪ್ರತಿಬಿಂಬ ಎನ್ನುವ ತೀರ ಸುಲಭವಾದ ಸಿದ್ಧಾಂತವೊಂದು ನಮ್ಮ ಕೆಲವು ಲೇಖಕರಿಗೆ ಪ್ರತಿಜ್ಞೆಯಾಗಿದ್ದರೆ ಮತ್ತೆ ಕೆಲವರಿಗೆ ಅಂಧವಿಶ್ವಾಸವೂ ಆಗಿದೆ. ಆದರೆ ಹುಟ್ಟು, ಬದುಕು, ಸಾವುಗಳಿಂದ, ಸುಖದುಃಖಗಳಿಂದ ಕೂಡಿದ ಜೀವನದ ಬುಡಕ್ಕಿರುವ ತಾತ್ವಿಕ ಅರ್ಥಪೂರ್ಣತೆಯನ್ನು ಆರಾಧಿಸುವ ಶ್ರದ್ಧೆಯುಳ್ಳ ಲೇಖಕರು ಅಪರೂಪವಾಗಿದ್ದಾರೆ. ಲೇಖಕನ ಸೃಜನಶೀಲವಾದ ಪ್ರಜ್ಞೆ, ಇಂಥ ಶ್ರದ್ಧೆಯಿಂದ ಪುನೀತವಾದ ಜೀವನದ ಮೇಲೆ ಬೆಳಕು ಚೆಲ್ಲಿ ಅದನ್ನು ಸಾಹಿತ್ಯವನ್ನಾಗಿ ಮಾರ್ಪಡಿಸಿದಾಗ ಆ ಸೊಗಸು ಹೆಚ್ಚುತ್ತದೆ. ಈ ಬಗೆಯ ಜೀವನದ ಶ್ರದ್ಧೆ ಇಂದಿರಮ್ಮನವರ ಈ ಕಾದಂಬರಿಗೆ ಪ್ರೇರಕವಾಗಿದೆ.

ತೋರಿಕೆಗೆ ಈ ಕಾದಂಬರಿ ಇಂದಿನ ಯಾವ ಒಂದು ಕಾದಂಬರಿಯಂತೆಯೇ ಕಂಡರೂ ಅದರ ಮೂಲರೂಪ ಒಂದು ಜಾನಪದ ಕತೆಯಂತೆಯೇ ನನಗೆ ಕಂಡಿತು. ಈ ಕಾದಂಬರಿಯ ಜೀವನ ದರ್ಶನ ಅದರ ಪ್ರಾದೇಶಿಕತೆಯಿಂದ ಮೂರ್ತವಾಗಿದೆ. ಈ ಬಗೆಯ ಜೀವನದರ್ಶನಕ್ಕೆ ತಕ್ಕಂತೆ ಈ ಕಾದಂಬರಿಯ ಬರವಣಿಗೆಯ ರೀತಿಯೂ ಇದೆ. ಇಲ್ಲಿಯ ಕಥನ ಮಾರ್ಗ ತೀರ ಸರಳವಾದದ್ದು. ಆದರೆ ಯಾವ ಘಟನೆಯೂ ಅನಾವಶ್ಯಕವಾಗಿಲ್ಲ.

ಒಳ್ಳೆಯ ಸಾಹಿತ್ಯಕ್ಕೆ ಯಾರ ಸಮರ್ಥನೆಯೂ ಬೇಕಾಗಿಲ್ಲ. ಈ ಕಾದಂಬರಿಯಲ್ಲಿ ಅಂಥ ಅಂತಃಸತ್ವವಿದೆ. ಆಡುನುಡಿಯ ಕಸುವನ್ನು ಹೀರಿಕೊಂಡ ಸಂಭಾಷಣೆ ಕೊನೆ ಕೊನೆಯಲ್ಲಿ ಕಾವ್ಯದ ಬೆಡಗನ್ನೂ ಪಡೆದಿದೆ. ಆರೋಗ್ಯಕರವಾದ ಜೀವನದ ಅಂಶವೊಂದಕ್ಕೆ ಕನ್ನಡಿ ಹಿಡಿದು ಅದರ ಚೆಲುವು ವಿಕಾರಗಳೊಡನೆಯೇ ಅದರ ತಳಹದಿಗಿರುವ ಶ್ರದ್ಧೆಯನ್ನೂ, ವಿವೇಕವನ್ನೂ ಕಾಣಿಸಿಕೊಟ್ಟ ಈ ಲೇಖಕಿಯರು ನಿಜವಾಗಿಯೂ ಅಭಿನಂದನಾರ್ಹರು. ಸೂಕ್ಷ್ಮವೇದಿಯಾದ ಬರವಣಿಗೆಯಿಂದ ತಮ್ಮ ಕಲೆ ಯಾವ ಮಟ್ಟದ್ದೆಂಬುದನ್ನು ತೋರಿಸಿಕೊಟ್ಟಿದ್ದಾರೆ.

ಭುವನೇಶ್ವರಿ ಹೆಗಡೆ: ಎಂ.ಕೆ ಇಂದಿರಾರಂಥ ಸರಳ ಸಂಪನ್ನ ಮನಸ್ಸಿನ ಲೇಖನಿಯೊಂದು ಹಾಸ್ಯದ ಕಚಗುಳಿಯಾಟದಲ್ಲಿ ಹೇಗೆ ತೊಡಗಿಕೊಳ್ಳಬಹುದು? ಎಂಬ ಅನುಮಾನ ಕುತೂಹಲಗಳಿದ್ದವರು ಅವರ ನಗಬೇಕು ಲೇಖನ ಸಂಗ್ರಹವನ್ನು ಓದಬೇಕು. ಹದಿನಾರು ಹರಟೆಗಳ ಈ ಸಂಕಲನ ಒಂದು ಪಕ್ವವಾದ ಆರೋಗ್ಯಕರ ಯೋಚನಾಲಹರಿಯ ಬೆನ್ನೇರಿ ಬಂದ ವಿನೋದ ಲಹರಿ. ಇದರೊಳಗಿನ ಹೂರಣವನ್ನು ಸವಿಯುತ್ತಾ ಹೋದಂತೆ ಇಂದಿರಾರಂಥ ವಿಶಾಲ ಅನುಭವದಿಂದ ಹದಗೊಂಡ ಮನಸ್ಸೊಂದು ವ್ಯಂಗ್ಯ ಕಟಕಿಗಳಿಲ್ಲದ ತಿಳಿಹಾಸ್ಯವನ್ನು ಹೇಗೆ ಚಿಮ್ಮಿಸಬಲ್ಲುದೆಂಬ ಸೋಜಿಗವೂ ಸಂತೋಷವೂ ಆಗುತ್ತಲೇ ಹೋಗುತ್ತವೆ, ಪುಸ್ತಕ ಕೆಳಗಿಡುವತನಕವೂ.

ಅನುಭವ ಶ್ರೀಮಂತವಾದ ಸುಸಂಸ್ಕೃತ ಅಭಿವ್ಯಕ್ತಿಯಿಂದ ಆತ್ಮೀಯವಾಗುವ ಇಂದಿರಾರ ಬರಹಗಳಲ್ಲಿ ಹಾಸ್ಯವನ್ನು ಹುಡುಕಬೇಕಾದ ಅಗತ್ಯವಿಲ್ಲ, ಸವಿಯುವ ಅಭಿರುಚಿ ಇದ್ದರೆ ಸಾಕು.

ಡಾ. ಜ್ಯೋತ್ಸ್ನಾ ಕಾಮತ್: ಶಿವರಾಮ ಕಾರಂತ, ಕುವೆಂಪು, ಮಾಸ್ತಿ, ಚದುರಂಗ, ಭೈರಪ್ಪ ಮೊದಲಾದವರು ಜನಸಾಮಾನ್ಯರ ಜೀವನ ಆಧರಿಸಿ ಸಮರ್ಪಕ ಸಾಹಿತ್ಯ ಸೃಷ್ಟಿಸಿದ್ದಾರೆ. ಲೇಖಕಿಯರಲ್ಲಿ ಎಂ.ಕೆ. ಇಂದಿರಾ ಈ ಸಾಲಿಗೆ ಬರುತ್ತಾರೆ. ತಾವು ಕಂಡಿದ್ದನ್ನು, ಅನುಭವಿಸಿದ್ದನ್ನು ಓದುಗರಿಗೆ ಸಾಹಿತ್ಯರೂಪದಲ್ಲಿ ಕೊಡಮಾಡಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾರೆ. ಓದುಗರ ಅಂತರಾಳವನ್ನು ಅಕ್ರಮಿಸುವುದಲ್ಲದೇ ಕೆಲವೊಮ್ಮೆ ವಿಮರ್ಶಕರಿಗೂ ಸವಾಲಾಗಿ ನಿಲ್ಲುತ್ತಾರೆ.

ಸ್ತ್ರೀಸಾಹಿತ್ಯವೆಂದರೆ ಮಡುಗಟ್ಟಿದ ನೀರು ಎಂದು ಮೂಗು ಮುರಿಯುವವರಿಗೆ, ಪಾಶ್ಚಾತ್ಯ ಪದ್ಧತಿಯ ಶಿಕ್ಷಣ, ಇಂಗ್ಲೀಷ್ ಓದಿನ ಪರಿಕರಗಳು, ತಂತ್ರ-ಶಿಲ್ಪ ಚಾತುರ್ಯಗಳ ದೊಂಬರಾಟಗಳಿಲ್ಲದೇ, ವಿಮರ್ಶಾ ಸಿದ್ಧಾಂತಗಳ ಗೊಡವೆಯೇ ಬೇಕಿಲ್ಲದೇ ಉತ್ತಮ ಸಾಹಿತ್ಯ ನಿರ್ಮಿಸಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ನಾ. ಡಿಸೋಜ: ಫಣಿಯಮ್ಮನ ಕಥೆ ಓದುತ್ತಾ ಹೋದಹಾಗೆ ನನಗೆ ಲೇಖಕಿಯ ವ್ಯಂಗ್ಯ ಸಿಟ್ಟು ತಟ್ಟುತ್ತಾ ಹೋಗುತ್ತದೆ. ಧರ್ಮ, ಸಂಪ್ರದಾಯ, ಮಡಿ, ಮಠ, ಧರ್ಮಲಂಡರಾದ ಜನ ಇಷ್ಟೆಲ್ಲಾ ಹಿಂಸೆ ಕೊಟ್ಟರೂ ಈ ಹಿಂಸೆಯ ನಡುವಿನಿಂದ ಹೀಗೊಂದು ವ್ಯಕ್ತಿ ಹುಟ್ಟಿದ ಮನೆಗೆ ಸಮಾಜಕ್ಕೆ ಬೇಕಾದವಳಾಗಿ ಬದುಕಿದಳಲ್ಲ. ಇಲ್ಲಿ ಸಂಪ್ರದಾಯಗಳ ಮಠದ ಬಿಗಿ ನಿಯಮಕ್ಕಿಂತ ಮಾನವೀಯ ಅಂತಃಕರಣ ಮಾನವೀಯ ಚಿಂತನವೇ ದೊಡ್ಡದೆಂದು ಲೇಖಕಿ ಹೇಳುತ್ತಿದ್ದಾರೆಯೋ?

ಸೌಮ್ಯ ಶಾಂತ ಸ್ವರೂಪದ ಫಣಿಯಮ್ಮ ವೈಧವ್ಯವನ್ನು ಸ್ವೀಕರಿಸಿದ ರೀತಿ ಅದೇ ದಾಕ್ಷಾಯಣಿ ಅದನ್ನು ತಿರಸ್ಕರಿಸಿದ ರೀತಿ ವಿಡಂಬನಾತ್ಮಕವಾಗಿ ಚಿತ್ರಿಸಲ್ಪಟ್ಟಿದೆ. ಸಂಪ್ರದಾಯ ಪದ್ಧತಿ ಪರಂಪರೆಯನ್ನು ಒಪ್ಪಿಕೊಂಡ ಫಣಿಯಮ್ಮನ ಬದುಕು ಒಂದು ರೀತಿಯಲ್ಲಿ ನಮ್ಮನ್ನು ವಿಚಾರಮಾಡಲು ಹಚ್ಚಿದರೆ, ಅದೇ ಪದ್ಧತಿ ಪರಂಪರೆಯನ್ನು ಧಿಕ್ಕರಿಸಿ ಒಂದು ಪರಿಹಾರ ಕಂಡ ದಾಕ್ಷಾಯಣಿ ಬೇರೊಂದು ದಿಕ್ಕಿನಲ್ಲಿ ಓದುಗರ ಗಮನ ಸೆಳೆಯುತ್ತಾಳೆ. ಸರಿದು ಹೋದ ಬದುಕಿನ ವಿವರಗಳನ್ನು, ರೀತಿ-ನೀತಿ ಪದ್ಧತಿಗಳನ್ನು ಎಂ.ಕೆ. ಇಂದಿರಾ ಈ ಕೃತಿಯಲ್ಲಿ ನೀಡಿದರೂ ಅವುಗಳನ್ನು ಬರಿದೇ ಹೊಗಳದೇ, ವೈಭವೀಕರಿಸದೇ ಅದರಲ್ಲಿರುವ ದೋಷಗಳನ್ನು ತಪ್ಪುಗಳನ್ನು ತಿಳಿಸಿಕೊಡುತ್ತಾ ಹೋಗುತ್ತಾರೆ.

ಬಿ.ಎಸ್. ವೆಂಕಟಲಕ್ಷ್ಮಿ: ಓದುಗರ ಮೆಚ್ಚುಗೆಯನ್ನು ಗಳಿಸಿಕೊಂಡಿರುವ ಎಂ.ಕೆ ಇಂದಿರಾ ಅವರ ಮತ್ತೊಂದು ಕೃತಿ 'ಗೆಜ್ಜೆಪೂಜೆ'. ಇದಕ್ಕೆ ಆಯ್ದುಕೊಂಡಿರುವ ವಿಷಯ ಈಗಾಗಲೇ ಸವಕಲಾಗಿರುವ ವೇಶ್ಯಾ ಸಮಸ್ಯೆಯೇ ಆದರೂ ಅದರ ಸುತ್ತಲೂ ಸನ್ನಿವೇಶಗಳ ಜಾಲವನ್ನು ನಿರ್ಮಿಸಿ ಓದುಗರನ್ನು ತನ್ಮಯರಾಗಿಸುವಲ್ಲಿ ಇಂದಿರಾ ತೋರುವ ಜಾಣ್ಮೆ ಅವರನ್ನು ಅತ್ಯಂತ ಪ್ರಭಾವಶಾಲಿ ಬರಹಗಾರ್ತಿಯರ ಗುಂಪಿಗೆ ಸೇರಿಸುತ್ತದೆ.

ತಮ್ಮ ಪ್ರಾರಂಭದ ಕೃತಿಗಳಾದ ತುಂಗಭದ್ರ, ಸದಾನಂದ, ಗೆಜ್ಜೆಪೂಜೆ ಇವುಗಳ ಮೂಲಕ ಯಶಸ್ಸನ್ನು ಗಳಿಸಿದ ಎಂ.ಕೆ. ಇಂದಿರಾ ಅನಂತರ ಹಲವಾರು ಅಗ್ಗದ ಕೃತಿಗಳನ್ನು ಹೆಣೆಯತೊಡಗಿ, ಸಣ್ಣಕತೆಗಳು, ಪ್ರಬಂಧ, ಹರಟೆ, ಹಾಸ್ಯಬರಹ ಹೀಗೆ ಅನೇಕ ಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಬರವಣಿಗೆಯನ್ನು ಒಂದು ಉದ್ಯಮಮಟ್ಟಕ್ಕೆ ಕೊಂಡೊಯ್ದಿರುವುದರಿಂದ ಅವರ ಪುಸ್ತಕಗಳಲ್ಲಿ ಹೆಚ್ಚಿನವುಗಳ ಬಗ್ಗೆ ವಿಶೇಷ ವಿಮರ್ಶೆ ಅಗತ್ಯವಿಲ್ಲ ಎನ್ನಿಸುತ್ತದೆ.

ಡಾ. ವಿಜಯಾ ಸುಬ್ಬರಾಜ್: ಸಾಮಾನ್ಯವಾಗಿ ಮಹಿಳೆಯರ ಕಾದಂಬರಿಗಳೆಂದರೆ ಅಡುಗೆ ಮನೆಯ ಸಾಹಿತ್ಯವೆಂದು ಸಾರಾಸಗಟಾಗಿ ಮೂಗು ಮುರಿಯುವ ಪ್ರವೃತ್ತಿ ಇದೆ. ಆದರೆ ಅಂತಹವರಿಗೆ ಇಂದಿರಾ ಅವರ ಕಾದಂಬರಿಗಳಲ್ಲಿ ವಸ್ತು ವೈವಿಧ್ಯ ಒಂದು ಸವಾಲಾಗಬಲ್ಲದು. ಇಂದಿರಾ ಅವರ ಕಾದಂಬರಿಗಳಲ್ಲಿ ಮುಖ್ಯವಾಗಿ ಕಾಣುವುದು ನವೋದಯದ ಆಶಯಗಳನ್ನು ಬಿಂಬಿಸುವ ಮನುಷ್ಯ ಸಂಬಂಧಗಳು, ಆದರ್ಶಗಳು, ಮನೆ, ಮನೆತನ, ಸಂಪ್ರದಾಯಗಳಲ್ಲಿನ ಶ್ರದ್ಧೆ ಮುಂತಾದವುಗಳೇ ಆದರೂ ಕೆಲವು ಕಾದಂಬರಿಗಳು ಇದಕ್ಕೆ ಅಪವಾದಗಳಂತಿವೆ. ಕೌಟುಂಬಿಕ ನೆಲೆಗಳಲ್ಲಿನ ಸಮಸ್ಯೆಗಳ ಗಾಢಪರಿಚಯವಿರುವಂತೆಯೇ ಸಾಮಾಜಿಕ ಆಗು ಹೋಗುಗಳ, ಸಮಸ್ಯೆಗಳ ಅರಿವೂ ಇದೆ.

ಡಾ. ಬಿ.ಎಸ್. ಸುಮಿತ್ರಾಬಾಯಿ: ಒಟ್ಟಾರೆ ಹೇಳುವುದಾದರೆ ಇಂದಿರಾ ಬಿಂಬಿಸುವ ಸ್ತ್ರೀ ಪಾತ್ರಗಳು ಒಂದೋ ಹಳೆಯ ಪರಂಪರೆಯ ಆಧುನಿಕ ಸ್ಥಿರರೂಪಗಳ ಸೃಷ್ಟಿ. ಮಂದಾಕಿನಿ ಅಥವಾ ಗೌರಿ, ಕಮಲೆಯರ ರೂಪ ತಳೆಯುವರು. ಸಂಪ್ರದಾಯದ ಬೇರುಗಳೇ ಇವರ ಗಟ್ಟಿತನಕ್ಕೆ ಆಧಾರ. ಈ ಬೇರು ಅಲುಗಿದಾಗ ಭಾವನಾ, ಫಣಿಯಮ್ಮನಂಥವರು ಸೃಷ್ಟಿಯಾಗುತ್ತಾರೆ. ಹೊಸದರೆದುರು ಚಲಿಸುವಂತೆ ಇವರು ತೋರಿದರೂ ಇವರ ಚಲನೆ ಅಂತಿಮವಾಗಿ ಹಿಮ್ಮುಖವಾಗಿರುತ್ತದೆ. ಬದಲಾಗುವ, ಬದಲಾಗಲೇ ಬೇಕಾದ ಮೌಲ್ಯಗಳ ಬಗ್ಗೆ ಸಮಕಾಲೀನ ಜಗತ್ತಿನ ಆಗುಹೋಗುಗಳಿಗೆ ಸ್ಪಂದಿಸುವುದಕ್ಕಿಂತ ಹೆಚ್ಚಾಗಿ ಗತಿಸಿದ ಬದುಕಿನತ್ತಲೇ ಒಲವಿರುವ ಇಂದಿರಾ ಕೃತಿಗಳು ಸ್ತ್ರೀ ಪರವಾದಂತೆ ತೋರಿದರೂ ಪುರಾಣ ಮೌಲ್ಯಗಳ ಶೋಧನೆಗೇ ಮೀಸಲಾಗಿರುವಂತೆ ತೋರುತ್ತವೆ.

ಸಾರಾ ಅಬೂಬಕ್ಕರ್: ಮಲೆನಾಡಿನ ಕೆಂಡದ ರೊಟ್ಟಿ, ಅರಳು, ಅವಲಕ್ಕಿ, ಹಪ್ಪಳ ಸಂಡಿಗೆ, ಅಪ್ಪೆಮಿಡಿ ಉಪ್ಪಿನಕಾಯಿಂದ ಹಿಡಿದು ಕಾಸಿನಸರ, ಬೆಳ್ಳಿಡಾಬು, ಒಡ್ಯಾಣ, ಜಡೆಬಿಲ್ಲೆ ಎಲ್ಲಕ್ಕೂ ಎಂ.ಕೆ. ಇಂದಿರಾ ಕಾದಂಬರಿಗಳಲ್ಲಿ ಸ್ಥಾನವಿದೆ. ಇಂದಿರಾ ಅವರ ಕಾದಂಬರಿ ಮಲೆನಾಡಿನ ಸಂಸ್ಕೃತಿಯ ಒಂದು ಭಂಡಾರವೇ ಆಗಿದೆ.

ವೈದೇಹಿ: ಆದರೂ ಶ್ರೀ ಮತಿ ಎಂ.ಕೆ. ಇಂದಿರಾ ಮುದ್ದುರಾಮನನ್ನು ಈ ಕಾದಂಬರಿಯ (ತುಂಗಭದ್ರ) ಕೇಂದ್ರವ್ಯಕ್ತಿಯನ್ನಾಗಿ ಏಕೆ ಮಾಡಿದರೆನ್ನುವುದು ಆಶ್ಚರ್ಯವಾಗಿ ಕಾಣುತ್ತದೆ. ಈ ಹೆಣ್ಣು ಮಕ್ಕಳ ಲೋಕದ ವಿವರಗಳನ್ನು ಒಂದು ತುಣುಕೂ ಬಿಡದೆ ತಿಳಿದಿರುವ ಅಪರೂಪದ ಬರಹಗಾರ್ತಿ ಎಂ.ಕೆ. ಇಂದಿರಾ. ಊಹಿಸಿ ಬರೆಯ ಬಹುದಾದ ಮುದ್ದುರಾಮನ ಲೋಕ ಬಿಟ್ಟು ಸೀದಾ ಈ ಹುಡುಗಿಯರ ಅಂಗಳದಲ್ಲೇ ನಿಂತು ಕಥೆಯನ್ನು ನೋಡಿದ್ದರೆ ಇದಕ್ಕಿಂತ ಭವ್ಯವಾದ ಒಂದು ಕಾದಂಬರಿ ಕಟ್ಟಡವನ್ನು ನೀಡುವ ಸಾಧ್ಯತೆ ಇತ್ತು ಅಂತ ಅನಿಸುವುದಿಲ್ಲವೇ?

ಡಾ. ಎನ್. ಗಾಯಿತ್ರಿ: ಇಂದಿರಾ ಮಲೆನಾಡಿನ ದಟ್ಟಹಸುರಿನ ಪ್ರಾಕೃತಿಕ ಸಂಪತ್ತು, ಅದರ ಜೊತೆಗೆ ಆ ಪ್ರಕೃತಿಯ ಮಡಿಲಲ್ಲಿ ವಾಸವಾಗಿರುವ ಜನರ ಹೃದಯ ಸಂಪತ್ತನ್ನು ಅಭಿಮಾನದಿಂದ, ಅತಿಶಯವಾಗಿ ಚಿತ್ರಿಸುತ್ತಾರೆ. ಇಲ್ಲೆಲ್ಲಾ ಇಂದಿರಾರವರ ಸಾಹಿತ್ಯಿಕ ಪ್ರಜ್ಞೆ ಪ್ರಮುಖವಾಗಿ ಸಾಂಪ್ರದಾಯಿಕವಾಗಿ ಕೆಲಸ ಮಾಡುತ್ತದೆ. ಇಂದಿರಾರವರ ಕಾದಂಬರಿಗಳಲ್ಲಿ ಬಹುಮುಖ್ಯವಾಗಿ ಚರ್ಚಿತವಾಗುವ ಸಾಮಾಜಿಕ ಅಂಗ ಕುಟುಂಬ. ಈ ಕುಟುಂಬವೇ ಕಾದಂಬರಿ ಪ್ರತಿಪಾದಿಸುವ ಮೌಲ್ಯ ವ್ಯವಸ್ಥೆಯ ಬಹುಮುಖ್ಯ ಅಂಗವಾಗಿರುತ್ತದೆ. ಅದೇ ರೀತಿ ಅವರ ಕಾದಂಬರಿಗಳಲ್ಲಿ ವಿವಾಹ ಸಮಸ್ಯೆ ಬಹುಮುಖ್ಯ ಪಾತ್ರವಹಿಸುತ್ತದೆ, ಅವರ ಕಾದಂಬರಿಗಳಲ್ಲಿ ಇದು ಸಮಸ್ಯೆಯೂ ಹೌದು. ಹಾಗೇಯೇ ಅದೇ ಪರಿಹಾರವೂ ಕೂಡ.

...ಟ್ಟಿನಲ್ಲಿ ಇಂದಿರಾರವರ ಸಾಮಾಜಿಕ ಪ್ರಜ್ಞೆ ತೀರ ತೆಳುವಾದುದು. ಕುಟುಂಬವಲ್ಲಿ, ಸಮಾಜದಲ್ಲಿ ಉಂಟಾಗಿರುವ ಅನ್ಯಾಯಗಳಿಗೆ ಲೇಖಕಿಗೆ ಸಹಾನುಭೂತಿ, ...ಕಂಪವಿದೆ. ಆದರೆ, ಅವರ ಪ್ರಜ್ಞೆ ಈ ಸಹಾನುಭೂತಿಯಾಚೆ ಹರಿಯುವುದೇ ಇಲ್ಲ. ...ಫೆ ನಡೆಯುವ ಪರಿಸರದ ಸಾಮಾಜಿಕ ಬದಲಾವಣೆಗಳನ್ನು ಗುರುತಿಸುವಲ್ಲಿ, ವಿವರಿಸ... ...ಂದಿರಾ ಅವರ ತಾಳ್ಮೆ ಮತ್ತು ಪರಿಶ್ರಮವನ್ನು ಯಾರಾದರೂ ಮೆಚ್ಚಲೇಬ... ಆದರೆ ಈ ವಿಶ್ಲೇಷಣೆ ವ್ಯಕ್ತಿಗಳ ಬದುಕಿನ ಒಳನೋಟಗಳನ್ನು, ಸಂಘರ್ಷವ... ಗುರುತಿಸುವಲ್ಲಿ ಇಲ್ಲವಾಗುತ್ತದೆ.

ನೇಮಿಚಂದ್ರ: ಇಂದಿರಾರವರ ಸಣ್ಣ ಕಥೆಗಳು ಮಹತ್ವಾ...ಂಕ್ಷೆ ಹೊತ್ತವಲ್ಲ. ಯಾವುದೇ ನಿಖರ ಸಿದ್ಧಾಂತ-ಧೋರಣೆಯನ್ನು ಪ್ರತಿಪಾದಿಸಲು ಹೊರಟವಲ್ಲ. ಒಂದು ಘಟನೆಯನ್ನು ಹೇಳಿಯೋ, ಒಂದು ಬದುಕಿನ ಚಿತ್ರಣವನ್ನು ನೀಡಿಯೋ ತೃಪ್ತವಾಗುವ ಸರಳಕಥೆಗಳು ಇವು. ಇವರ ಅನೇಕ ಕಥೆಗಳು ವಿಪರೀತದ ಮಾತುಗಾರಿಕೆಯಲ್ಲಿ ವಾಚ್ಯವಾಗಿ, ಹರಟೆಯ ಹಣೆಪಟ್ಟಿಗೆ ಒಳಪಡುವುದೂ ಉಂಟು. ಎಂ.ಕೆ. ಇಂದಿರಾ ಕತೆಗಳ ಮುಖ್ಯ ತೊಡಕೆಂದರೆ, ಅವರ ಬಹಳಷ್ಟು ಕಥೆಗಳನ್ನು ಓದಿ ಮುಗಿಸಿದ ಮೇಲೂ ಲೇಖಕಿಯ ಸ್ವಂತ ಅಭಿಪ್ರಾಯಗಳು, ಧೋರಣೆಗಳು ಸ್ಪಷ್ಟವಾಗುವುದಿಲ್ಲ.

ಡಾ. ವಿಜಯಾ: ಎಂ.ಕೆ. ಇಂದಿರಾ ಅವರ 'ಸದಾನಂದ', 'ಫಣಿಯಮ್ಮ', 'ಹೂಬಾಣ', 'ಗೆಜ್ಜೆಪೂಜೆ' ಈ ನಾಲ್ಕು ಕಾದಂಬರಿಗಳು ಚಲನಚಿತ್ರವಾಗಿವೆ. ಹೂಬಾಣವೊಂದರ ವಿನಾ ಉಳಿದವಕ್ಕೆ ಶೀರ್ಷಿಕೆಯೂ ಬದಲಾಗಿರಲಿಲ್ಲ.

ಇಂದಿರಾ ಅವರು ಚಿತ್ರಿಸುವ ಸನ್ನಿವೇಶಗಳಲ್ಲಿರುವ ನಾಟಕೀಯತೆ, ಸಂಭಾಷಣೆಯಲ್ಲಿರುವ ಸಹಜತೆ-ಸೊಗಸಾದ ಆಡುಮಾತಿನ ಕಾರಣವಾಗಿ ಎಂಥ ನಿರ್ದೇಶಕರೇ ಆದರೂ ಕಾದಂಬರಿಯ ಕೆಲವು ಸನ್ನಿವೇಶ ಸಂಭಾಷಣೆಗಳನ್ನು ಇಡಿಯಾಗಿ ಚಿತ್ರದಲ್ಲಿ ಬಳಸಿಕೊಂಡು ಬಿಟ್ಟಿರುತ್ತಾರೆ. ಎಂದರೆ, ಅವರ ಕಾದಂಬರಿಗಳು ಪಟಕತೆಯ ಹಾಗೇ ಇರುತ್ತವೆ. ಇವು ಸಹಜವಾಗೇ ತೆರೆಗೆ ಹೊಂದಿಕೊಂಡು ಬಿಡಬಲ್ಲವು ಎನ್ನಬಹುದಾಗಿದೆ.

ಇಂದಿರಾ ಅವರು ಕೊಡುವ ಪ್ರಕೃತಿಯ ಚಿತ್ರಣ ಛಾಯಾಗ್ರಾಹಕನಿಗೆ ಒಂದು ಹಬ್ಬ; ಹಾಗೂ ಸವಾಲು. ಸಾಧಾರಣವಾದ ಪ್ರಯತ್ನವಿದ್ದರೂ, ಪ್ರೇಕ್ಷಕನನ್ನು ಹಸಿರಿನ ಲೋಕಕ್ಕೆ ಒಯ್ಯಬಲ್ಲದು. ಅವರು ನಮ್ಮ ಮುಂದಿಡುವ ಪ್ರಾದೇಶಿಕ ಸಂಸ್ಕೃತಿ ಒಂದು ಕಾಲದ, ಸಮಾಜದ ಸ್ಥಿತಿಯನ್ನು ಅದು ಇರುವ ಹಾಗೇ ಚಿತ್ರಿಸುತ್ತದೆ. ಇದನ್ನು ಹಾಗೆ ಬೆಳ್ಳಿತೆರೆಯಲ್ಲಿ ಹಿಡಿದಿಡಲು ಯಾವ ಚಿತ್ರಕರ್ತನಿಗೂ ಸಾಧ್ಯವಿಲ್ಲ. ಆ ಮಟ್ಟಿಗೆ ಚಿತ್ರ ಪ್ರೇಕ್ಷಕ ಇಂದಿರಾ ಅವರ ಜೀವಂತ ಭಾಷೆ-ಪ್ರಕೃತಿ ಚಿತ್ರಣ, ಪ್ರಾದೇಶಿಕತೆಯ ಪರಿಚಯಗಳಿಂದ ವಂಚಿತನೇ ಸರಿ.

ಪ್ರೇಮಾ ಕಾರಂತ: 'ಫಣಿಯಮ್ಮ' ಯಾರೇ ಓದಲಿ ಅದನ್ನು ಚಲನಚಿತ್ರ ರೂಪದಲ್ಲಿ ಯೋಚಿಸಲೂ ಸಾಧ್ಯವಿಲ್ಲ. ಕಾರಣ ಅದು ಯಾವುದೇ ಒಂದು ಕಾಲದ ಜೀವನಕ್ರಮವನ್ನು ಚಿತ್ರಿಸುವ ಕೃತಿ. ಇತ್ತೀಚೆಗೆ ಲೇಖಕಿಯರು ಚಲನಚಿತ್ರಕ್ಕೆಂದೇ ಕಾದಂಬರಿಗಳನ್ನು ಬರೆಯುವುದುಂಟು. ಆದರೆ ಫಣಿಯಮ್ಮ ಹಾಗೆ ಬರೆದದ್ದೇ ಅಲ್ಲ. ಇದು ಹೆಂಗಸಿನ ಆತ್ಮಬಲದ ನಾನಾ ಮುಖಗಳನ್ನು ತೋರಿಸುವ ಕಥೆ. 'ಫಣಿಯಮ್ಮ' ಹೊಸತನ್ನು ಸ್ವೀಕರಿಸುವ ಶಕ್ತಿ ಪಡೆದಿದ್ದರೂ, ಅಪಳಿಗೆ ಎದುರಿಸುವ ಮನಸ್ಥೈರ್ಯ ಇಲ್ಲ. ಸುಬ್ಬಿಯಲ್ಲಿ ಮೊದಲು ವಿರೋಧಿಸುವ ಶಕ್ತಿ ಕಂಡು ಬರುತ್ತೆ. ಸುಬ್ಬಿಯ ಮೂಲಕ ಫಣಿಯಮ್ಮಜೀವನದ ಮತ್ತೊಂದು ಮುಖವನ್ನು ಕಂಡುಕೊಳ್ಳುತ್ತಾಳೆ. ಇದು ಪೂರ್ಣವಾಗಿ ಅರಳುವುದು ಕಥೆಯ ಕೊನೆಯಲ್ಲಿ ಬರುವ ದಾಕ್ಷಾಯಿಣಿಯ ಪಾತ್ರದಲ್ಲಿ. ಹೀಗೆ 'ಫಣಿಯಮ್ಮ' ಬರೀ ಫಣಿಯಮ್ಮನ ಚರಿತ್ರೆಯಾಗದೇ, ಹೆಂಗಸಿನ ಅಸಹಾಯಕತೆ, ನೋವು, ರೊಚ್ಚು, ಸಮರ್ಪಣೆ ಎಲ್ಲವನ್ನೂ ತೋರಿಸುತ್ತದೆ. ಇಂಥ ಮಾನವೀಯ ದೃಷ್ಟಿಕೋನವುಳ್ಳ ಹೆಂಗಸಿನ ಪಾತ್ರದ ಹಿರಿಮೆಗಾಗಿ ನಾನು 'ಫಣಿಯಮ್ಮ' ಮಾಡಿದೆ. ಇಂದು 'ಫಣಿಯಮ್ಮ' ಪ್ರಪಂಚವನ್ನೆಲ್ಲಾ ಸುತ್ತಿ ಬಂದಿದ್ದಾಳೆ. ಕನ್ನಡ ಚಲನಚಿತ್ರದ ಇತಿಹಾಸದಲ್ಲಿ ಸೇರಿ ಹೋಗಿದ್ದಾಳೆ.

ಶಾಂತಾ ನಾಗರಾಜ್:

ಕತೆ-ಕಾದಂಬರಿಗಳಲ್ಲಿ ಸಾಕಷ್ಟು ಜನಪ್ರಿಯರಾದ ಸಾಹಿತಿಗಳು ಆಗೊಮ್ಮೆ-ಈಗೊಮ್ಮೆ ಲಲಿತ ಪ್ರಬಂಧವನ್ನು ಆರಿಸಿಕೊಂಡು ಹೋಗುವುದುಂಟು. ಇಂಥ ಸಾಹಿತಿಗಳ ಸಾಲಿಗೆ ಎಂ.ಕೆ. ಇಂದಿರಾರವರೂ ಸೇರಿದ್ದಾರೆ. ಇಂದಿರಾರವರ ಸೃಜನೇತರ ಕೃತಿಗಳು ಐದು. ಇಂದಿರಾರವರ ಕೈಯಲ್ಲಿ ಕಾದಂಬರಿಗಳ ಪಾತ್ರಗಳು ಸಹಜವಾಗಿ ಉಸಿರಾಡಿ ನಡೆದಾಡುವಂತೆ ಪ್ರಬಂಧದ ವಿಷಯಗಳು ಮುನ್ನಡೆಯುವುದಿಲ್ಲ. ಕಾದಂಬರಿಯ ಸಿದ್ಧತೆ, ಅಚ್ಚುಕಟ್ಟುತನಗಳು ಇಲ್ಲಿ ಮೈಗೂಡುವುದಿಲ್ಲ. ಏನೇ ಆದರೂ ಅವುಗಳಲ್ಲಿರುವ ಇಂದಿರಾತನವನ್ನು ಗಮನಿಸದೇ ಇರುವುದು ಸಾಧ್ಯವೇ ಇಲ್ಲ.

(ಈ ಎಲ್ಲಾ ಲೇಖಕರ ಅಭಿಪ್ರಾಯಗಳನ್ನು ೧೯೯೧ರಲ್ಲಿ ಕರ್ನಾಟಕ ಲೇಖಕಿಯರ ಸಂಘ ಪ್ರಕಟಿಸಿದ ಸುರಗಿ ಅಭಿನಂದನಾಗ್ರಂಥದಿಂದ ಆಯ್ದುಕೊಳ್ಳಲಾಗಿದೆ.)

೧. ತ್ರಿವೇಣಿ ಕಾದಂಬರಿ ಸ್ಪರ್ಧೆ ಬಹುಮಾನ - ತುಂಗಭದ್ರ

೨. ಸದಾನಂದ, ನವರತ್ನ, ಫಣಿಯಮ್ಮ - ರಾಜ್ಯ (ಫಣಿಯಮ್ಮ-೧೯೭೬) - ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೩. ರಾಜ್ಯ ಸಾಹಿತ್ಯ ಅಕಾಡೆಮಿ ಶ್ರೇಷ್ಠ ಲೇಖಕಿ ಪ್ರಶಸ್ತಿ - ೧೯೭೫

೪. ಮದ್ರಾಸ್ ಕನ್ನಡ ಸಂಘದ ಸನ್ಮಾನ

೫. ಕರ್ನಾಟಕ ಲೇಖಕಿಯರ ಸಂಘದ ಸನ್ಮಾನ ೭೫ನೇ ವರ್ಷಕ್ಕೆ - 'ಸುರಗಿ' ಅಭಿನಂದನಾ ಗ್ರಂಥ ಅರ್ಪಣೆ - ೧೯೯೧

೬. 'ಗೆಜ್ಜೆ ಪೂಜೆ' ಚಲನಚಿತ್ರಕ್ಕೆ ರಾಷ್ಟ್ರಪ್ರಶಸ್ತಿ

೭. 'ಫಣಿಯಮ್ಮ' ಚಲನಚಿತ್ರ ಇಂಗ್ಲೆಂಡ್, ಪ್ಯಾರಿಸ್, ಜರ್ಮನಿ, ಇಟಲಿ, ಪೋಲೆಂಡ್, ಪೋರ್ಚುಗಲ್, ಜಪಾನ್, ಹವಾಯ್, ಅಮೇರಿಕಾದಲ್ಲಿ ತೆರೆ ಕಂಡಿದೆ.

ಎಂ.ಕೆ. ಇಂದಿರಾ ಕೃತಿಸಿರಿ

ಕಾದಂಬರಿ

೧.	ತುಂಗಭದ್ರ	೧೯೬೩	ಮನೋಹರ ಗ್ರಂಥಮಾಲೆ, ಧಾರವಾಡ
೨.	ಕನಸು-ನನಸು	೧೯೬೫	ಹೇಮಂತ ಪ್ರಕಾಶನ, ಬೆಂಗಳೂರು
೩.	ಹೆಣ್ಣಿನ ಆಕಾಂಕ್ಷೆ	೧೯೬೬	ಹೇಮಂತ ಸಾಹಿತ್ಯ, ಬೆಂಗಳೂರು
೪.	ಗೆಜ್ಜೆಪೂಜೆ	೧೯೬೬	ಎಸ್.ಆರ್. ಪ್ರಕಾಶನ, ಬೆಂಗಳೂರು
೫.	ಕಲಾದರ್ಶಿ	೧೯೬೭	ಗೀತಾ ಪಬ್ಲಿಕೇಷನ್ಸ್, ಮೈಸೂರು
೬.	ತಾಪದಿಂದ ತಂಪಿಗೆ	೧೯೬೮	ಹಂಸಧ್ವನಿ ಪ್ರಕಾಶನ, ಬೆಂಗಳೂರು
೭.	ತಪೋವನದಲ್ಲಿ	೧೯೬೮	ಗೀತಾ ಪಬ್ಲಿಕೇಷನ್ಸ್, ಮೈಸೂರು
೮.	ಬ್ರಹ್ಮಚಾರಿ	೧೯೬೯	ಗೀತಾ ಪಬ್ಲಿಕೇಷನ್ಸ್, ಮೈಸೂರು
೯.	ಬಿದಿಗೆ ಚಂದ್ರಮ ಡೊಂಕು	೧೯೬೯	ಪ್ರಕಾಶ ಸಾಹಿತ್ಯ, ಬೆಂಗಳೂರು
೧೦.	ಗಿರಿಬಾಲೆ	೧೯೬೯	ಎಸ್.ಆರ್. ಪ್ರಕಾಶನ, ಬೆಂಗಳೂರು
೧೧.	ನಾಗವೀಣಾ	೧೯೬೯	ಪ್ರಕಾಶ ಸಾಹಿತ್ಯ, ಬೆಂಗಳೂರು
೧೨.	ಮನ ತುಂಬಿದ ಮಡದಿ	೧೯೬೯	-
೧೩.	ಚಿದ್ವಿಲಾಸ	೧೯೭೧	ಹೇಮಂತ ಸಾಹಿತ್ಯ, ಬೆಂಗಳೂರು
೧೪.	ಸುಖಾಂತ	೧೯೭೨	ವಾಸವಾಂಬ ಪ್ರಕಾಶನ, ಬೆಂಗಳೂರು
೧೫.	ಯಾರು ಹಿತವರು	೧೯೭೨	-
೧೬.	ಮನೆ ಕೊಟ್ಟು ನೋಡು	೧೯೭೨	ಎಸ್.ಆರ್. ಪ್ರಕಾಶನ, ಬೆಂಗಳೂರು
೧೭.	ಮುಸುಕು	೧೯೭೨	ಪ್ರಕಾಶ ಸಾಹಿತ್ಯ, ಬೆಂಗಳೂರು
೧೮.	ಆತ್ಮಸಖಿ	೧೯೭೨	ಪ್ರಕಾಶ ಸಾಹಿತ್ಯ, ಬೆಂಗಳೂರು
೧೯.	ಡಾಕ್ಟರ್	೧೯೭೩	ಹೇಮಂತ ಪ್ರಕಾಶನ, ಬೆಂಗಳೂರು
೨೦.	ಟು-ಲೆಟ್	೧೯೭೩	ಎಸ್.ಆರ್. ಪ್ರಕಾಶನ, ಬೆಂಗಳೂರು

೨೧. ಜಾತಿ ಕೆಟ್ಟವಳು	೧೯೭೩	ಹೇಮಂತ ಪ್ರಕಾಶನ, ಬೆಂಗಳೂರು
೨೨. ಹೂ ಬಾಣ	೧೯೭೩	ಪ್ರಕಾಶ ಸಾಹಿತ್ಯ, ಬೆಂಗಳೂರು
೨೩. ಕತೆಗಾರ	೧೯೭೪	ವಾಸವಾಂಬ ಪ್ರಕಾಶನ, ಬೆಂಗಳೂರು
೨೪. ಸದಾನಂದ	೧೯೭೫	ಇಂದಿರಾ ಪ್ರಕಾಶನ, ಬೆಂಗಳೂರು
೨೫. ಕೂಚುಭಟ್ಟ	೧೯೭೫	ಹೇಮಂತ ಸಾಹಿತ್ಯ, ಬೆಂಗಳೂರು
೨೬. ಹಸಿವು	೧೯೭೫	ಹೇಮಂತ ಪ್ರಕಾಶನ, ಬೆಂಗಳೂರು
೨೭. ಮಧುವನ	೧೯೭೬	ಹೇಮಂತ ಸಾಹಿತ್ಯ, ಬೆಂಗಳೂರು
೨೮. ಫಣಿಯಮ್ಮ	೧೯೭೬	ಹೇಮಂತ ಸಾಹಿತ್ಯ, ಬೆಂಗಳೂರು
೨೯. ಜಾಲ	೧೯೭೬	ಪ್ರಕಾಶ ಸಾಹಿತ್ಯ, ಬೆಂಗಳೂರು
೩೦. ಗುಂಡ	೧೯೭೭	ರವೀಂದ್ರ ಪುಸ್ತಕಾಲಯ, ಶಿವಮೊಗ್ಗ
೩೧. ಆಭರಣ	೧೯೭೯	ಪ್ರಕಾಶ ಸಾಹಿತ್ಯ, ಬೆಂಗಳೂರು
೩೨. ಒಂದೇ ನಿಮಿಷ	೧೯೭೯	ಪ್ರಕಾಶ ಸಾಹಿತ್ಯ, ಬೆಂಗಳೂರು
೩೩. ನೂರೊಂದು ಬಾಗಿಲು	೧೯೮೦	ಹೇಮಂತ ಸಾಹಿತ್ಯ, ಬೆಂಗಳೂರು
೩೪. ಪೂರ್ವಾಪರ	೧೯೮೦	ರವೀಂದ್ರ ಪ್ರಕಾಶನ, ಬೆಂಗಳೂರು
೩೫. ರಸವಾಹಿನಿ	೧೯೮೦	ಪ್ರಕಾಶ ಸಾಹಿತ್ಯ, ಬೆಂಗಳೂರು
೩೬. ಅಮರಾವತಿ	೧೯೮೧	ಪ್ರಕಾಶ ಸಾಹಿತ್ಯ, ಬೆಂಗಳೂರು
೩೭. ತುಳಿದವರು	೧೯೮೨	ಹೇಮಂತ ಸಾಹಿತ್ಯ, ಬೆಂಗಳೂರು
೩೮. ಮನೋಮಂದಿರ	೧೯೮೩	ಹೇಮಂತ ಸಾಹಿತ್ಯ, ಬೆಂಗಳೂರು
೩೯. ಸೂತ್ರಧಾರ	೧೯೮೪	ಜೈಸು ಪ್ರಕಾಶನ, ಬೆಂಗಳೂರು
೪೦. ತೆಗ್ಗಿನ ಮನೆ ಸೀತೆ	೧೯೮೪	ಪ್ರಕಾಶ ಸಾಹಿತ್ಯ, ಬೆಂಗಳೂರು
೪೧. ವರ್ಣಲೀಲೆ	೧೯೮೫	ಹೇಮಂತ ಸಾಹಿತ್ಯ, ಬೆಂಗಳೂರು
೪೨. ಅಗೋಚರ	೧೯೮೫	ಪ್ರಕಾಶ ಸಾಹಿತ್ಯ, ಬೆಂಗಳೂರು
೪೩. ಕಲ್ಪವೃಕ್ಷ	೧೯೮೬	ಪ್ರಕಾಶ ಸಾಹಿತ್ಯ, ಬೆಂಗಳೂರು
೪೪. ಕಲಾಸಂಗಮ	-	-
೪೫. ಶಾಂತಿಧಾಮ	೧೯೮೬	-
೪೬. ಕೆಸರಿನ ಕಮಲ	-	-
೪೭. ಸಂದರ್ಶನ	-	-
೪೮. ಹಂಸಗಾನ	-	-

ಕಥಾಸಂಕಲನಗಳು

೧.	ನವರತ್ನ	೧೯೬೮	ಹೇಮಂತ ಸಾಹಿತ್ಯ, ಬೆಂಗಳೂರು
೨.	ನಗಬೇಕು	೧೯೬೮	ಎಸ್.ಆರ್. ಪ್ರಕಾಶನ, ಬೆಂಗಳೂರು
೩.	ಚೆಲ್ಲಿದ ನೀರು	೧೯೬೯	-
೪.	ಅಂಬರದ ಅಪ್ಸರೆ	೧೯೭೦	ಹಂಸಧ್ವನಿ ಪ್ರಕಾಶನ, ಬೆಂಗಳೂರು
೫.	ಸ್ಫೂರ್ತಿ	೧೯೭೧	ಪ್ರಕಾಶ ಸಾಹಿತ್ಯ, ಬೆಂಗಳೂರು
೬.	ದಶಾವತಾರ	೧೯೭೩	ಹೇಮಂತ ಸಾಹಿತ್ಯ, ಬೆಂಗಳೂರು
೭.	ಕಲ್ಪನಾ ವಿಲಾಸ	೧೯೭೪	ಪ್ರಕಾಶ ಸಾಹಿತ್ಯ, ಬೆಂಗಳೂರು
೮.	ಸುಸ್ವಾಗತ	೧೯೭೬	ಪ್ರಕಾಶ ಸಾಹಿತ್ಯ, ಬೆಂಗಳೂರು
೯.	ಪವಾಡ	೧೯೭೭	ಪ್ರಕಾಶ ಸಾಹಿತ್ಯ, ಬೆಂಗಳೂರು
೧೦.	ಕವಲು	೧೯೭೯	ಪ್ರಕಾಶ ಸಾಹಿತ್ಯ, ಬೆಂಗಳೂರು
೧೧.	ಮೋಹನ ಮಾಲೆ	೧೯೮೦	ಸುರೇಶ ಪ್ರಕಾಶನ, ಬೆಂಗಳೂರು
೧೨.	ಪೌರ್ಣಿಮೆ	೧೯೮೦	ಇಂದಿರಾ ಪ್ರಕಾಶನ, ಬೆಂಗಳೂರು
೧೩.	ಅನುಭವ ಕುಂಜ	೧೯೮೧	ಹೇಮಂತ ಸಾಹಿತ್ಯ, ಬೆಂಗಳೂರು
೧೪.	ಕನ್ಯಾಕುಮಾರಿಯರಿಗೆ	೧೯೮೨	ಹೇಮಂತ ಸಾಹಿತ್ಯ, ಬೆಂಗಳೂರು
೧೫.	ನವಜೀವನ	೧೯೭೦	-

ಇತರ ಕೃತಿಗಳು

೧.	ಕನ್ನಡ ಚಿತ್ರಶಿಲ್ಪಿ ಪುಟ್ಟಣ್ಣ ಕಣಗಾಲ್	೧೯೭೦	ಹೇಮಂತ ಸಾಹಿತ್ಯ, ಬೆಂಗಳೂರು
೨.	ಚಿತ್ರಭಾರತ	೧೯೮೫	ಹೇಮಂತ ಸಾಹಿತ್ಯ, ಬೆಂಗಳೂರು

ಭಾಗಶಃ - **"ಬಿಂದು"**

□□

ಪಿ. ಲಂಕೇಶ್ (೧೯೩೫-೨೦೦೦)



□ ಸತ್ಯಮೂರ್ತಿ ಆನಂದೂರು

ಸುಖಕ್ಕಾಗಿ ಕಾತರಿಸುವ
ಕೋಟ್ಯಂತರ ಜನಕ್ಕೆ ಹಣ, ನೆಲ,
ಹೊನ್ನು ಬೇಕು,
ಕೆಲವರಿಗೆ ಪ್ರೀತಿ;
ಎಲ್ಲೋ ಕೆಲವರಿಗೆ ಕುಗ್ರಾಮದ
ಹಿತ್ತಿಲೊಂದರ ಹೂವು,
ಬಡ ಜೋಗಿಯ ಹಾಡು. –ನೀಲು

ಕನ್ನಡದ ಖ್ಯಾತ ಕವಿ, ಕಾದಂಬರಿಕಾರ, ಚಿತ್ರ ನಿರ್ದೇಶಕ, ಪತ್ರಕರ್ತ ಪಿ. ಲಂಕೇಶ್ ಅವರ ವ್ಯಕ್ತಿತ್ವದ ಭಾಗ ಎಂಬಂತೆ ಪ್ರತಿನಿಧಿಸುವ ಒಂದು ಚಿಕ್ಕ ಪದ್ಯ ಇದು. ಇದು ಅವರ ಅಂತರಂಗದ ತಳಮಳ, ಚಿಂತನೆ, ವಿಕ್ಷಿಪ್ತತೆ, ಸದಾ ಹುಡುಕಾಟಕ್ಕೆ ಹಾತೊರೆಯುವ ಮನಸ್ಸು, ಒಂದು ಕಡೆ ಸ್ಥಾವರವಾಗಿ ನಿಲ್ಲದ ಜಂಗಮ ವ್ಯಕ್ತಿತ್ವ ಎಲ್ಲವನ್ನೂ ಹೇಳಬಲ್ಲ ಕವನವಿದು. ಹಿತ್ತಲ ಹೂವು, ಪ್ರೀತಿ, ಜೋಗಿಯ ಹಾಡು; ಹಣ, ನೆಲ, ಹೊನ್ನು ಎಲ್ಲವನ್ನೂ ಒಂದೇ ತಕ್ಕಡಿಯಲ್ಲಿಟ್ಟು ಸಂಭ್ರಮಿಸುವ; ತಮ್ಮ ಅಲೆಮಾರಿ ಪ್ರವೃತ್ತಿಗೆ ತಕ್ಕಹಾಗೆ ಅನುಭವಿಸುವ ವಿಲಕ್ಷಣ ವ್ಯಕ್ತಿತ್ವ ಅವರದು.

ಅವರ ಪ್ರತಿಭೆಯೇ ಅಂಥಹದು. ಎಲ್ಲವನ್ನೂ ಆತುಕೊಳ್ಳುವ ಹಂಬಲ; ಎಲ್ಲದರ ಒಳಗೂ ಹೊಕ್ಕು ಜಾಲಾಡುವ ಕಾತುರ; ಎಲ್ಲವನ್ನೂ ತಮ್ಮ ಬೊಗಸೆಯೊಳಗೆ ಹಿಡಿದು ತನ್ನದಾಗಿಸಿಕೊಳ್ಳುವ ಅದಮ್ಯ ಆಸೆ. ಆದರೆ ಯಾವುದನ್ನೂ ತಮ್ಮ ಹಿಡಿತಕ್ಕೆ ಒಗ್ಗಿಸಿಕೊಳ್ಳದೆ ಬಿಟ್ಟವರಲ್ಲ. ಬೇರುಗಳ ಆಳಕ್ಕೆ ಇಳಿದಂತೆಯೇ ಆಗಸದಲ್ಲಿ ಹರಡಿಕೊಂಡ ಹೂವುಗಳವರೆಗೂ ವಿಸ್ತರಿಸಿಕೊಂಡ ಹಟದ ಪ್ರತಿಭೆ ಅವರದು. ಯಾವುದನ್ನೂ ಸೋಲಿಗೆ ಹೆದರಿ ಬಿಟ್ಟವರಲ್ಲ; ಆ ಮಾಧ್ಯಮವನ್ನು ತಮ್ಮದಾಗಿಸಿಕೊಂಡ ನಂತರವೇ ಮತ್ತೊಂದಕ್ಕೆ ಜಿಗಿದವರು. ಇಲ್ಲಿ ಸೈ ಅನ್ನಿಸಿಕೊಂಡ ನಂತರ ಮತ್ತೊಂದರ ಒಳಹೊಕ್ಕು ಅದರಲ್ಲಿ ತಮ್ಮತನ ಮೆರೆದವರು.

ಲಂಕೇಶರ ಪ್ರತಿಭೆಯೇ ವೈವಿಧ್ಯತೆಯೇ ಆ ಬಗೆಯದು. ಸದಾ ಹುಡುಕುವ ಪ್ರವೃತ್ತಿ. ಎಲ್ಲವನ್ನೂ ತಿಳಿಯುವ, ತಿಳಿದದ್ದನ್ನು ಸಮಾಜಕ್ಕೆ ಅರುಹುವ, ಅದರ

ವಿಳಾಸ : ನಂ. ೨೫೦, ಜೆ-೧೦, ಮಾರುತಿ, ೨ನೇ ‘ಸಿ’ ಮೈನ್, ೨ನೇ ‘ಬಿ’ ಬ್ಲಾಕ್, ಹೇಮಾವತಿ ರಸ್ತೆ, ವಿ.ಜಿ.ಹೆಚ್. ಕಾಂಪ್ಲೆಕ್ಸ್, ಶ್ರೀನಗರ, ಬೆಂಗಳೂರು-೮೫

ಕುತೂಹಲದ ಕಾವನ್ನು ಎಲ್ಲರಿಗೆ ಹಂಚುವ ಕಾತುರ. ತಮ್ಮ ಜೀವನದುದ್ದಕ್ಕೂ ಆರಿಸಿಕೊಂಡ ಹಲವು ಮಾಧ್ಯಮಗಳಲ್ಲಿ ಎಲ್ಲೆಡೆಯೂ ಅವರು ಸಮರ್ಥವಾಗಿ ಹೇಳಲು ಸಾಧ್ಯವಾಗಿರುವುದೇ ಈ ಕುತೂಹಲ. ಅದಮ್ಯ ಜೀವನ ಪ್ರೀತಿ, ಸಾಹಿತ್ಯ, ರಂಗಭೂಮಿ, ಸಿನಿಮಾ, ಪತ್ರಿಕೆ -ಈ ಎಲ್ಲ ಬಗೆಗಳಲ್ಲಿ ಲಂಕೇಶ್ ಪ್ರಚುರಪಡಿಸಿರುವ ಸಂಗತಿಗಳು ಒಂದೆರಡಲ್ಲ. ಮಾನವ ಬದುಕಿನ ಸಣ್ಣ ಸಣ್ಣ ಸೂಕ್ಷ್ಮಗಳಿಂದ ಹಿಡಿದು ಜಗತ್ತನ್ನು ವ್ಯಾಪಿಸಿರುವ ಸಾವಿರಾರು ವಿಚಾರಗಳು ಅವರ ಮೂಲಕ ಹಾದು ಬಂದಿವೆ; ಕಣ್ಣಿಗೆ ಕಂಡೂ ಕಾಣದ ನೂರಾರು ಗೌಪ್ಯಗಳು ಅವರ ಓದುಗರ, ನೋಡುಗರ ಅಚ್ಚರಿಗೆ ರೆಕ್ಕೆ ಮೂಡಿಸಿವೆ.

ವಿಚಿತ್ರವೆಂದರೆ ಲಂಕೇಶ್ ನಂತರ ಅವರು ಅನುಸರಿಸಿದ ದಾರಿಯನ್ನು ಅನುಕರಿಸಿದವರು ಹಲವು ಜನ. ಲಂಕೇಶರ ನಡೆನುಡಿ, ಅವರ ಬರವಣಿಗೆಯ ಶೈಲಿ, ಅದರಂತೆಯೇ ಬದುಕಲು ಹವಣಿಸಿ ಸೋತವರು ನೂರಾರು ಮಂದಿ. ಆದರೆ ಯಾರಿಗೂ ಲಂಕೇಶ್ ದಕ್ಕಲಿಲ್ಲ ಅನ್ನುವುದು ಬೇರೆ ಮಾತು. ಅದಿರಲಿ, ಅವರಂತೆಯೇ ನಿರ್ಭೀತವಾಗಿ ಪತ್ರಿಕೋದ್ಯಮಕ್ಕೆ ಕೈಹಾಕಿದ ನೂರಾರು ಜನರೂ ಇದ್ದಾರೆ. ಆದರೆ ಯಾರಿಗೂ ಲಂಕೇಶತ್ವ ಸಿಗಲಿಲ್ಲ. ಸಾಹಿತ್ಯದಿಂದ ಕ್ರೀಡೆಯವರೆಗೆ, ವಿಜ್ಞಾನದಿಂದ ಜಾನಪದದ ಆಚರಣೆಗಳವರೆಗೆ ಲಂಕೇಶ್ ಗ್ರಹಿಕೆ ಅನನ್ಯವಾದುದು; ಅಲ್ಲದೆ ಅದು ಎಂದೂ ನಾಟಕೀಯ ಅಥವಾ ಕೃತ್ರಿಮವಾಗಿರದೆ ಆತ್ಮದ ಗ್ರಹಿಕೆಯಾಗಿದ್ದರಿಂದಲೇ ಅದಕ್ಕೆ ನಿಜವಾದ ಮೌಲ್ಯ ಪ್ರಾಪ್ತಿಯಾಯಿತು.

ಬಾಲ್ಯದ ತಳಮಳ-ಓದಿನ ಗೀಳು

ಲಂಕೇಶ್ ಹುಟ್ಟಿದ ಊರು ಶಿವಮೊಗ್ಗೆಗೆ ಹದಿನಾಲ್ಕು ಕಿ.ಮೀ. ದೂರದಲ್ಲಿರುವ ಕೊನಗವಳ್ಳಿ; ಎಲ್ಲ ಹಳ್ಳಿಗಳಂತೆಯೇ ಕುಗ್ರಾಮ ಎಂದು ಕರೆಯಬಹುದಾದ ಊರು. ಆದರೆ ಶಿವಮೊಗ್ಗ ನಗರಕ್ಕೆ ಸಮೀಪವಾಗಿದ್ದುದೊಂದೇ ಆ ಹಳ್ಳಿಯ ವಿಶೇಷ. ನಗರದ ಹತ್ತಿರವಿರುವ ಈ ಕುಗ್ರಾಮಕ್ಕೆ ಎಂದೂ ನಗರದ ಐಷಾರಾಮುವಾಗಲೀ, ಬೇರೆ ಸವಲತ್ತುಗಳಾಗಲೀ ಇರಲಿಲ್ಲ. ಭಾರತದ ಹಲವು ಹಳ್ಳಿಗಳಂತೆ ಎಲ್ಲ ಬಗೆಯ ಬವಣೆಗಳನ್ನೂ, ಬಡತನ, ರೋಗ-ರುಜಿನಗಳನ್ನೂ ಹೊತ್ತ ಊರಿದು. ಹಾಗೆಯೇ ಹಳ್ಳಿಯ ನೆಮ್ಮದಿ, ಮುಗ್ಧತೆ, ನಂಬಿಕೆ-ಆಚರಣೆಗಳನ್ನು ತನ್ನಲ್ಲಿ ಹುದುಗಿಸಿಕೊಂಡ ಊರು ಕೊನಗವಳ್ಳಿ.

ತಂದೆ ನಂದಿಬಸಪ್ಪ; ತಾಯಿ ದೇವೀರಮ್ಮ. ಈ ದಂಪತಿಗಳಿಗೆ ಐವರು ಮಕ್ಕಳು. ಹಿರಿಯವಳು ಹನುಮಂತವ್ವ; ಎರಡನೆಯವರು ಬಸಮ್ಮ; ಮೂರನೆಯವರು ಶಿವರುದ್ರಪ್ಪ; ನಾಲ್ಕನೆಯವರು ಸಿದ್ಧಲಿಂಗಮ್ಮ ನಂತರ ಹುಟ್ಟಿದವರೇ ಲಂಕೇಶ್. ಬಹುಶಃ ಲಂಕೇಶ್ ಎಂಬ ಹೆಸರೇ ಅಪರೂಪದ್ದು. ಹುಟ್ಟಿದ ಮಗುವಿನ ಜನ್ಮರಾಶಿಯ ಪ್ರಕಾರ

ಮೊದಲ ಅಕ್ಷರ 'ಲಂ'ನಿಂದ ಆರಂಭವಾಗಬೇಕು ಎಂದು ಬಂದಿದ್ದರಿಂದ ಲಂಕೇಶಪ್ಪ ಎಂದು ನಾಮಕರಣ ಮಾಡಲಾಯಿತಂತೆ. ಬಹಳ ಕಾಲದವರೆಗೆ ಈ ಲಂಕೇಶಪ್ಪ ಚಾಲ್ತಿಯಲ್ಲಿತ್ತು. ಬೆಂಗಳೂರಿಗೆ ಬಂದ ನಂತರ ತಮ್ಮ ಹೆಸರನ್ನು ಮೊಟಕುಗೊಳಿಸಿ ಲಂಕೇಶಪ್ಪ, 'ಲಂಕೇಶ್' ಆದರು.

೧೯೩೫ ಮಾರ್ಚ್ ೮ ರಂದು ಜನಿಸಿದ ಲಂಕೇಶ್ ಮುಂದಿನ ಅರವತ್ತೈದು ವರ್ಷಗಳ ಕಾಲ ನಡೆಸಿದ್ದು ಬದುಕಿನ ಜೊತೆಗಿನ, ವೈರುಧ್ಯಗಳ ಜೊತೆಗೆ ಹೋರಾಟ. ಅದು ಒಂದು ರೀತಿಯಲ್ಲಿ ತಮ್ಮ ಜೀವನವನ್ನೇ ಪ್ರಾಯೋಗಿಕವಾಗಿ ಎದುರಿಗಿಟ್ಟು ನಡೆಸಿದ ಹೋರಾಟ. ಹಲವು ಸೋಲುಗಳ ನಡುವೆಯೂ ಅವರ ಹೋರಾಟದ ಬದುಕು ಮಾತ್ರ ಕೊನೆಯವರೆಗೂ ನಿಲ್ಲಲೇ ಇಲ್ಲ. ಅದರೊಂದಿಗೆ ಅವರಲ್ಲಿ ಹುಟ್ಟಿಕೊಂಡಿದ್ದು ಬದುಕಿನ ವಿವಿಧ ಆಯಾಮಗಳನ್ನು ಹುಡುಕುವ ಕಾತುರ ಮತ್ತು ಉತ್ಕಟ ಅಪೇಕ್ಷೆ. ಪ್ರೇಮ, ಕಾಮ, ಸಾಮಾಜಿಕ ಕಳಕಳಿ, ಜೀವನ ಮೌಲ್ಯ -ಇವೆಲ್ಲವುಗಳನ್ನು ತಮ್ಮದೇ ಬದುಕಿನ ಬಯಲಿನಲ್ಲಿ ಒಡ್ಡಿಕೊಂಡು ಒಂದಕ್ಕೊಂದು ಢಿಕ್ಕಿ ಹೊಡೆಯುತ್ತಲೇ ಸಾಗಿದರು. ಆದರೆ ಅವರೊಳಗಿನ ಕವಿ, ಸೃಜನಶೀಲ ಲೇಖಕ ಮಾತ್ರ ಕೊನೆಯ ದಿನಗಳವರೆಗೂ ಪ್ರಖರವಾಗುತ್ತಲೇ ಸಾಗಿದ.

ಹುಟ್ಟಿದ ಆರು ತಿಂಗಳಿಗೇ ಹಾಲು ಕುಡಿಸಲಾಗದೆ ಕಾಯಿಲೆಯಿಂದ ಕಂಗೆಟ್ಟ ತಾಯಿ; ಓದಿಸಲೇಬೇಕೆಂದು ಹಠ ಹೊತ್ತು ವಿಶೇಷ ಕಾಳಜಿ ವಹಿಸಿದ ತಂದೆ -ಇಲ್ಲಿಂದಲೇ ಲಂಕೇಶರ ಹೋರಾಟದ ಬದುಕು ಆರಂಭವಾಗಿತ್ತು. ತಾಯಿ ದೇವೀರಮ್ಮ ಈ ಕೊನೆಯ ಮಗನನ್ನು ಹತ್ತಿರದ ಆಯನೂರಿನ ಸಂತೆಗೆ ಕರೆದೊಯ್ದು ಬೆಣ್ಣೆ ವ್ಯಾಪಾರ ಮಾಡುತ್ತಿದ್ದರೆ, ಊರಿಗೇ ನ್ಯಾಯಸ್ಥ ಎಂಬಂತೆ ಬದುಕಿದ್ದ ತಂದೆ ಬೇಸಾಯದ ಬದುಕನ್ನು ಕಠೋರ ನಿಷ್ಠೆಯಿಂದ ಪಾಲಿಸುತ್ತಿದ್ದರು. ಆಯನೂರಿನ ಸಂತೆ, ತಂದೆಯ ಬೇಸಾಯದ ಕಠಿಣ ಬದುಕು ಲಂಕೇಶರ ಒಳಗಿನ ಬರಹಗಾರನಿಗೆ ಫಲವತ್ತಾದ ವಸ್ತುವನ್ನು ಸಿದ್ಧ ಮಾಡಿದ್ದಂತೆ ಕಾಣುತ್ತದೆ. ತಮ್ಮ ಕಡೆಯ ದಿನಗಳವರೆಗೆ ಅವರ ಬರಹಗಳಲ್ಲಿದ್ದ ಮುಗ್ಧತೆ, ಹೊಸತನ್ನು ಹೇಳುವ ಕತೆಗಾರಿಕೆ ಎಂದೂ ಮೂಲ ಸೊಗಡನ್ನು ಕಳೆದುಕೊಂಡಿರಲಿಲ್ಲ.

ಚಿಕ್ಕಂದಿನಲ್ಲೇ ಸಾವಿನ ಸಮೀಪ ಹೋಗಿ ಬಂದ ಲಂಕೇಶರಿಗೆ ಕೊನೆಯವರೆಗೂ ಅದರ ಭಯ ಕಾಡುತ್ತಲೇ ಇತ್ತು. ಆ ಕಾಲದಲ್ಲಿ ಅಂದರೆ ೧೯೩೦-೪೦ರ ದಶಕದಲ್ಲಿ ಇಡೀ ದೇಶವನ್ನು ವ್ಯಾಕುಲಕ್ಕೆ ಗುರಿ ಮಾಡಿದ್ದು ಪ್ಲೇಗ್ ಹೆಮ್ಮಾರಿ. ಬಹುಶಃ ಪ್ಲೇಗ್ ರೋಗ ತಗುಲಿತೆಂದರೆ ಸಾವು ಬಂದಷ್ಟೇ ಖಚಿತ. ಹುಡುಗ ಲಂಕೇಶರನ್ನು ತಗುಲಿದ ಪ್ಲೇಗ್ ಎಳೆಯ ವಯಸ್ಸಿನಲ್ಲೇ ಅವರನ್ನು ಸೆಳೆದೊಯ್ಯಬೇಕಾಗಿತ್ತು. ತೊಡೆಯ ಸಂದಿಯಲ್ಲಿ ಬೆಳೆದ ಪ್ಲೇಗಿನ ಗಡ್ಡೆಗಳಿಂದ ಮನೆಯವರೆಲ್ಲರೂ ಅವರನ್ನು ಕೈಬಿಟ್ಟ

ಜೀವವೆಂದೇ ನಿರೀಕ್ಷಿಸುತ್ತಿದ್ದರು. ಆದರೆ ತೀವ್ರ ಜ್ವರ ತಗುಲಿದರೂ ಲಂಕೇಶ್ ಅದರಿಂದ ಬದುಕುಳಿದು ಬಂದರು. ಪ್ಲೇಗ್ ಹೆಮ್ಮಾರಿಯ ಬಗ್ಗೆ, ಅದರ ಕಠೋರ ನಿರ್ದಯತೆಯ ಬಗ್ಗೆ ಲಂಕೇಶ್‌ಗೆ ಅರಿವಾದದ್ದೇ ಅವರು ವಯಸ್ಕರಾದ ನಂತರ. ಸರಿಯಾದ ಔಷಧವಿಲ್ಲದ ಆ ಮಹಾನ್ ರೋಗದಿಂದ ಬದುಕಿ ಬಂದ ಲಂಕೇಶ್ ಕಡೆಯವರೆಗೂ ಅದರ ರೌದ್ರಾವತಾರಕ್ಕೆ ಹೆದರುತ್ತಿದ್ದರು.

ಕೊನಗವಳ್ಳಿಗೆ ಸಮೀಪದ ಹಾರ್‍ನಳ್ಳಿ ಶಾಲೆಯೇ ಲಂಕೇಶರ ವಿದ್ಯಾಭ್ಯಾಸದ ಮೊದಲ ಮೆಟ್ಟಿಲು. ಒಂದೆರಡು ಕಿಲೋಮೀಟರ್ ನಡೆಯಬೇಕಾಗಿದ್ದ ಶಾಲೆ; ಕಾಡಿನ ದಾರಿಯಲ್ಲಿ ದೊರಕುತ್ತಿದ್ದ ಕುತೂಹಲಕರ ಸಂಗತಿಗಳು; ಸಹಪಾಠಿಗಳಾಗಿದ್ದ ಹಳ್ಳಿಯ ಹುಡುಗರು -ಇವರ ಮಧ್ಯೆ ಚುರುಕಿನ ಹುಡುಗ ಲಂಕೇಶ್‌ರ ಬಗ್ಗೆ ಅವರ ತಂದೆಗಿದ್ದುದು ಒಂದೇ ಗುರಿ ಎಂದರೆ, ಲಂಕೇಶ್ ವಿದ್ಯಾವಂತನಾಗಬೇಕು ಎಂಬುದು. ಹಾಗಾಗಿ ಕೃಷಿಯ ಕೆಲಸವಾಗಲಿ, ಹಳ್ಳಿಯ ಇತರೆ ಕೆಲಸಗಳಾಗಲಿ ಲಂಕೇಶ್ ಪಾಲಿಗೆ ಸಿಗುತ್ತಲೇ ಇರಲಿಲ್ಲ.

ಲಂಕೇಶರ ಸೂಕ್ಷ್ಮಗ್ರಹಿಕೆಗೆ ಓದುವಿಕೆ ಎಂದೂ ಕಠಿಣವಾಗಲೇ ಇಲ್ಲ. ಪ್ರಾಥಮಿಕ ಶಿಕ್ಷಣವನ್ನು ಹಾರ್‍ನಳ್ಳಿಯಲ್ಲಿ ಮುಗಿಸಿ ಕುಂಸಿಯಲ್ಲಿ ಎಲ್.ಎಸ್. (ಲೋವರ್ ಸೆಕೆಂಡರಿ) ಪಬ್ಲಿಕ್ ಪರೀಕ್ಷೆ ಕೂರುವಾಗಲೇ ಲಂಕೇಶರ ಓದಿನಲ್ಲಿ ಜಗತ್ತಿನ ಮಹಾನ್ ಲೇಖಕರ ಕೃತಿಗಳೆಲ್ಲ ಸೇರಿಹೋಗಿದ್ದವು. ಟಾಲ್‌ಸ್ಟಾಯ್‌ನಂಥ ವಿಶ್ವದ ಅಗ್ರಮಾನ್ಯ ಕಾದಂಬರಿಕಾರನ 'ನಮಗೆಷ್ಟು ಭೂಮಿ ಬೇಕು' ಎಂಬ ಕತೆ ಅವರ ಸಾಹಿತ್ಯ ಬದುಕಿನಲ್ಲಿ ಉದ್ದಕ್ಕೂ ಪ್ರಭಾವ ಬೀರುತ್ತಲೇ ಬಂದಿದೆ. ಇದನ್ನು ಅವರೇ ತಮ್ಮ ಆತ್ಮಕಥನದಲ್ಲಿ ಹೇಳಿಕೊಂಡಿದ್ದಾರೆ.

ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಭಾರತದಲ್ಲಿ ಸಾಕ್ಷರತೆ ಕೇವಲ ಶೇ. ೨೦ರಷ್ಟು ಮಾತ್ರ. ಅದರಲ್ಲೂ ಹಳ್ಳಿಯಲ್ಲಿ ನಿರಕ್ಷರತೆ ತುಂಬಿ ತುಳುಕುತ್ತಿತ್ತು. ಆ ಕಾರಣದಿಂದ ಶಿಕ್ಷಣ ಕೇಂದ್ರಗಳಿಗೆ ಪುಸ್ತಕ ಭಂಡಾರ ಕೊಡಲು ಭಾರತ ಸರ್ಕಾರ ಆರಂಭಿಸಿತ್ತು. ಇದರ ಮೂಲ ಉದ್ದೇಶ ಇದ್ದುದು ವಯಸ್ಕರ ಶಿಕ್ಷಣ. ಇದರ ಫಲವಾಗಿ ಲಂಕೇಶ್ ಓದುತ್ತಿದ್ದ ಶಾಲೆಗೂ ನೂರು ಪುಸ್ತಕಗಳ ಪುಟ್ಟ ಗ್ರಂಥಾಲಯ ಬಂತು. ಓದುವ ಬಗ್ಗೆ ತೀವ್ರ ಆಸಕ್ತಿಯಿದ್ದ, ಅಲ್ಲದೆ ಒಂದು ಬಗೆಯ ಅಂತರ್ಮುಖಿಯಾಗಿದ್ದ ಲಂಕೇಶರಿಗೆ ಈ ಲೈಬ್ರರಿಯೇ ಸಾಹಿತ್ಯಲೋಕದ ಬಾಗಿಲು ತೆರೆದದ್ದು. 'ಧ್ರುವ ಚರಿತ್ರೆ', 'ನಮಗೆಷ್ಟು ಭೂಮಿ ಬೇಕು', 'ಗರುಡಗಂಬದ ದಾಸಯ್ಯ', 'ಶಾಲು ಸಾಬಿ', 'ಚಂದ್ರಹಾಸ', 'ಮಂಕುತಿಮ್ಮನ ಕಗ್ಗ' -ಮೊದಲಾದ ಪುಸ್ತಕಗಳು ನಿಜವಾದ ಕಾವ್ಯದ ಕಾವು ಕೊಟ್ಟವು. ಲಂಕೇಶರ ವ್ಯಕ್ತಿತ್ವದ ಭಾಗವಾಗಿಯೇ ಮುಂದುವರಿದದ್ದು ಈ ಎಳೆಯ ವಯಸ್ಸಿನ ಓದುವಿಕೆಯೇ.

ಹೈಸ್ಕೂಲಿನ ವಿದ್ಯಾಭ್ಯಾಸ ಶಿವಮೊಗ್ಗೆಯ ನ್ಯಾಷನಲ್ ಹೈಸ್ಕೂಲಿನಲ್ಲಿ. ಗೆಳೆಯರೊಬ್ಬರ ಸಾರ್ವಜನಿಕ ಗ್ರಂಥ ಭಂಡಾರದ ಸದಸ್ಯತ್ವ ಲಂಕೇಶರ ಓದಿಗೆ ಇನ್ನಷ್ಟು ವಿಸ್ತಾರವನ್ನು ಸೃಷ್ಟಿ ಮಾಡಿತು. ಕಾರಂತ, ಕುವೆಂಪು, ಅನಕೃ ಮುಂತಾದವರ ಪುಸ್ತಕಗಳು ದೊರೆಯುತ್ತಿದ್ದ ಆ ಗ್ರಂಥ ಭಂಡಾರದಲ್ಲಿ ಹಲವು ಲೇಖಕರ, ಹಲವು ಅತ್ಯುತ್ತಮ ಗ್ರಂಥಗಳ ಪರಿಚಯವಾಯಿತು. ಅಲ್ಲದೆ ನವರತ್ನ ರಾಮರಾಯರ 'ಕೆಲವು ನೆನಪುಗಳು' ಕುವೆಂಪು ಅವರ 'ಕತೆಗಳು' ಮತ್ತು 'ಮಲೆನಾಡಿನ ಚಿತ್ರಗಳು' ಎ.ಎನ್. ಮೂರ್ತಿರಾಯರ ಪ್ರಬಂಧಗಳು, ಮಾಸ್ತಿಯವರ ಕತೆಗಳು, ಕೆರೂರರ ತಮಾಷೆ ಬರಹಗಳು -ಇಂಥವುಗಳಲ್ಲಿ ಲೇಖಕರ ಅಭಿರುಚಿ, ಪ್ರಕಾರ ಪ್ರಜ್ಞೆ, ಭಾಷೆಯ ಜೀವಂತಿಕೆ, ಗದ್ಯ ಬರೆಯುವ ವಿಚಿತ್ರ ಸಂಗೀತಜ್ಞತೆ -ಇವೆಲ್ಲ ಸೇರಿವೆಯೆಂಬ ಅನಿಸಿಕೆ ಲಂಕೇಶರ ಈ ಪುಟ್ಟ ವಯಸ್ಸಿನಲ್ಲೇ ಅನ್ನಿಸತೊಡಗಿತು. ಬರವಣಿಗೆಯಲ್ಲಿ ಇರುವ ಮಾಂತ್ರಿಕತೆ, ಬದ್ಧತೆ, ಶಕ್ತಿ ಮತ್ತು ಅದರ ಮೌಲ್ಯ -ಇವೆಲ್ಲವೂ ಅಸ್ಪಷ್ಟವಾಗಿ ಅವರ ಮನದಾಳದಲ್ಲಿ ಮೊಳಕೆಯೊಡೆಯುತ್ತಿತ್ತು. ಯಾವುದೇ ವಿದ್ವಾಂಸರ ಕುಟುಂಬದಿಂದ ಬಾರದ ಲಂಕೇಶರಿಗೆ ಬರವಣಿಗೆಯ ಅದ್ಭುತ ಲೋಕ ವಿಚಿತ್ರ ರೀತಿಯಲ್ಲಿ ಆವರಿಸತೊಡಗಿತ್ತು.

ಆದರೆ ಅಷ್ಟಾಗಿಯೂ, ಹಲವು ಲೇಖಕರ ಗ್ರಂಥ, ಓದುವ ಹವ್ಯಾಸ ಬೆಳೆದರೂ ಲಂಕೇಶ್ ಅವರಿಗೆ ಒಬ್ಬ ಸಾಹಿತಿಯಾಗುವ ಅಥವಾ ಲೇಖಕರಾಗಿ ಮುಂದುವರಿಯುವ ಯಾವ ದೂರಾಲೋಚನೆಗಳೂ ಇರಲಿಲ್ಲ. ಅವರ ತಂದೆಗೆ ತಮ್ಮ ಮಗ ತಹಶೀಲ್ದಾರ ಅಥವಾ ಡಿ.ಸಿ. ಆಗಬೇಕೆಂಬ ಆಸೆ. ಆದರೆ ಅಂದೂ ಡಾಕ್ಟರ್ ಆಗುವ ಯುವಕರ ಆಸೆಗೆ ಅದೇ ಬೆಲೆಯಿತ್ತು. ಲಂಕೇಶರು ತಾವು ಡಾಕ್ಟರ್ ಆಗುತ್ತೇನೆಂದು ತಂದೆ ಎದುರು ಹೇಳಿದರೂ ಅದು ಅವರ ಇಷ್ಟವಾಗಿರಲಿಲ್ಲ.

ಶಿವಮೊಗ್ಗೆಯಲ್ಲಿ ಇಂಟರ್ ಮೀಡಿಯಟ್ ಕಲಿಯುವಾಗಲೇ ಲಂಕೇಶರಿಗೆ ಸಾಹಿತಿಗಳ ಹತ್ತಿರದ ಪರಿಚಯ ಆರಂಭವಾದದ್ದು. ಇಂಟರ್ ಮೀಡಿಯಟ್ ಸೀನಿಯರ್ ಓದುತ್ತಿದ್ದಾಗ ಸಾಹಿತ್ಯ ಸಂಘಕ್ಕೆ ಚುನಾಯಿತರಾದದ್ದೇ ಇದಕ್ಕೆ ಕಾರಣ. ಹಳ್ಳಿಯ ಹುಡುಗರ ಎಂದಿನ ಸಂಕೋಚ ಮತ್ತು ಕೀಳರಿಮೆ ಲಂಕೇಶರಲ್ಲೂ ಅಪಾರವಾಗೇ ಇತ್ತು. ಪಟ್ಟಣದ ಎಲ್ಲವೂ ಅವರನ್ನು ಇನ್ನಷ್ಟು ಕೆಳಕ್ಕೆ ತಳ್ಳುತ್ತಿದ್ದವು. ಏನು ಮಾತಾಡಿದರೆ ಹೇಗೋ, ಯಾವ ರೀತಿ ನಡೆದುಕೊಳ್ಳಬೇಕೋ ಎಂಬ ಜಿಜ್ಞಾಸೆಯಲ್ಲೇ ಮುದುಡಿ ಹೋಗುತ್ತಿದ್ದ ಲಂಕೇಶರಿಗೆ ಸಾಹಿತ್ಯ ಸಂಘದ ಕಾರ್ಯದರ್ಶಿಯಾಗಿ ಆಯ್ಕೆಯಾದುದು ತಮ್ಮನ್ನು ಹೆಚ್ಚು ತೆರೆದುಕೊಳ್ಳಲು ಸಾಧ್ಯವಾಯಿತು.

ಸಾಹಿತ್ಯ ಸಂಘದ ಕಾರ್ಯದರ್ಶಿಯಾಗಿ ಅಂದಿನ ಖ್ಯಾತ ಸಾಹಿತಿಗಳನ್ನೆಲ್ಲ ಕರೆಸುವ ಸಾಹಸ ಮಾಡಿದ ಲಂಕೇಶರ ಮುಂದಿನ ಹಾದಿ ಆಗಲೇ ಅಸ್ಪಷ್ಟವಾಗಿ

ತೆರೆದುಕೊಳ್ಳತೊಡಗಿತ್ತು. ಆ ಕಾಲದ ಸಾಹಿತ್ಯಕ 'ಹೀರೋ' ಎಂದೇ ಹೆಸರು ಗಳಿಸಿದ್ದ ಅ.ನ. ಕೃಷ್ಣರಾಯರು, ಅವರ ಎದುರಾಳಿಯಂತೆ ಬಿಂಬಿತರಾಗಿದ್ದ ನಿರಂಜನ, ಹಲವು ಕ್ಷೇತ್ರಗಳಲ್ಲಿ ಆಗಲೇ ಹೆಸರು ಮಾಡುತ್ತಿದ್ದ ಶಿವರಾಮ ಕಾರಂತ ಲಂಕೇಶರ ಆಹ್ವಾನ ಮನ್ನಿಸಿ ಬಂದರು. ಅವರ ಭಾಷಣ, ಸಾಹಿತ್ಯಕ ಒಲವು-ನಿಲುವುಗಳು, ಅಂದಿನ ಸಾಹಿತ್ಯಕ ಚಳವಳಿ ಸಾಗುತ್ತಿದ್ದ ದಾರಿ -ಇವೆಲ್ಲ ಲಂಕೇಶರನ್ನು ಅಸ್ಪಷ್ಟವಾಗಿಯಾದರೂ ಅತ್ತ ಕಡೆ ಸೆಳೆಯಲು ಕಾರಣವಾಯಿತೆಂದೇ ಹೇಳಬೇಕು.

ಇಂಟರ್ ಮೀಡಿಯಟ್ ಮುಗಿದ ನಂತರ ಡಾಕ್ಟರ್ ಆಗುವ ಅದಮ್ಯ ಆಸೆ ಇಲ್ಲದಿದ್ದರೂ ಅದಕ್ಕಾಗಿ ಅರ್ಜಿ ಹಾಕಿ ಸಂದರ್ಶನಕ್ಕೂ ಹೋದ ಲಂಕೇಶರು ಅದು ಸಿಗದಿದ್ದಾಗ ಹೆಚ್ಚೇನೂ ಬೇಸರ ಪಡಲಿಲ್ಲ. ಆದರೆ ಏನು ಮಾಡುವುದು ಎಂಬುದೇ ಪ್ರಶ್ನೆಯಾಯಿತು. ಮೆಡಿಕಲ್ ಸಂದರ್ಶಕರಲ್ಲಿ ಒಬ್ಬರಾಗಿದ್ದ ಕೊಂಡಜ್ಜಿ ಬಸಪ್ಪನವರು, 'ನಿಮಗಿಂತ ಶೇ. ಒಂದು ಅಂಕ ಪಡೆದ ಒಬ್ಬರಿದ್ದಾರೆ. ಆದರೆ ನೀನು ಸೂಟಿಯಾಗಿದ್ದಿ... ಏನು ಮಾಡುವುದು?' ಎಂದು ಕೇಳಿದರಂತೆ. 'ಅವರಿಗೇ ಕೊಡಿ' ಎಂದು ಹೇಳಿ ಹೊರಬಂದರಂತೆ ಲಂಕೇಶ್. ಅಷ್ಟರಲ್ಲಾಗಲೇ ಕವಿ ಜಿ.ಎಸ್. ಶಿವರುದ್ರಪ್ಪನವರು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಆನರ್ಸ್ ಓದುವ, ಎಂ.ಎ. ಮಾಡುವ ಬಗ್ಗೆ ಲಂಕೇಶರಲ್ಲಿ ಅವ್ಯಕ್ತ ಆಸೆಯನ್ನು ತುಂಬಿದ್ದರು. ಲಂಕೇಶರ ಅಧ್ಯಾಪಕರಾಗಿದ್ದ ಜಿಎಸ್‌ಎಸ್ ಅದಾಗಲೇ ಲಂಕೇಶರ ಓದು-ಬರಹದ ಹವ್ಯಾಸ ನೋಡಿ, ಸಾಹಿತ್ಯ ವಿಮರ್ಶೆ, ಸಾಹಿತ್ಯ ರಚನೆಯ ಉತ್ಸಾಹ ತುಂಬಿದ್ದರಿಂದ ದೊಡ್ಡ ಸಾಹಿತಿ, ದೊಡ್ಡ ವಿಮರ್ಶಕನಾಗುವ ಬಯಕೆ ಲಂಕೇಶರಲ್ಲಿ ತುಂಬಿತ್ತು.

ಈ ಕಾರಣಗಳಿಂದ ಮೆಡಿಕಲ್ ತಪ್ಪಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಆನರ್ಸ್ ಸೇರಿಕೊಂಡರು ಲಂಕೇಶ್. ಬಹುಶಃ ಎಲ್ಲ ಹಳ್ಳಿಯ ಹುಡುಗರನ್ನು ಒಂದೇ ಏಟಿಗೆ ನರನಾಡಿಗಳನ್ನೆಲ್ಲ ಹಿಂಡಿ ಹಿಪ್ಪೆ ಮಾಡುವ ಶಕ್ತಿ ಬೆಂಗಳೂರು ನಗರಕ್ಕಿದೆ. ಕುಗ್ರಾಮದಿಂದ ಮೊದಲ ಬಾರಿಗೆ ಬರುವ ಹುಡುಗರು ಬೆಂಗಳೂರಿನ ವಾತಾವರಣದಲ್ಲಿ ಹೊಂದಿಕೊಳ್ಳಲು ಹಲವು ಕಾಲವೇ ಬೇಕು. ಪೂರ್ತಿ ಬೇರೆಯಾದ ಪರಿಸರವನ್ನೇ ಬೆಂಗಳೂರು ಹೊಸಬರ ಮುಂದೆ ತೆರೆದಿಟ್ಟು ಸವಾಲು ಹಾಕುತ್ತದೆ; ನಮ್ಮನ್ನು ನಾವೇ ಕಳೆದುಕೊಳ್ಳುವ, ಕಳೆದು ಹೋಗುವ ಅಪಾಯವನ್ನು ಸದಾ ಬೆಂಗಳೂರಿನಂಥ ನಗರ ಒಡ್ಡುತ್ತಲೇ ಇರುತ್ತದೆ. ಎಲ್ಲ ಹಳ್ಳಿ ಹುಡುಗರ ತಳಮಳವೂ ಇದೇ.

ಲಂಕೇಶರಿಗಾದದ್ದೂ ಅದೇ. ಇಂಗ್ಲಿಷ್ ಆನರ್ಸ್‌ಗೆ ಸೀಟು ಸಿಕ್ಕಿದರೂ ಹಾಸ್ಟೆಲ್‌ನಲ್ಲಿ ಜಾಗ ಸಿಗಲಿಲ್ಲ. ಚಾಮರಾಜಪೇಟೆಯಲ್ಲಿ ರೂಮು ಮಾಡಬೇಕಾಯಿತು. ಲಂಕೇಶರಲ್ಲಿ ಅನಾಥಪ್ರಜ್ಞೆ ಕಾಡಲು ಶುರುವಾದದ್ದು ಇಲ್ಲಿಯೇ. ಏನೇನೋ ದುಗುಡ

ದುಮ್ಮಾನಗಳು ಅವರನ್ನು ಮುತ್ತತೊಡಗಿದವು. ಅದಾಗಲೇ ಸುಮತೀಂದ್ರ ನಾಡಿಗ, ನಿಸಾರ್ ಅಹಮದ್ ಥರದ ಗೆಳೆಯರೇನೋ ಸಿಕ್ಕಿದ್ದರು. ಅಲ್ಲದೆ ಪ್ರಭಾಕರ್(ಕಾಮರೂಪಿ)ರಂಥವರೂ ಇವರೊಡನೆ ಸೇರಿ ಸಾಹಿತ್ಯದ ವಾತಾವರಣ ಇದ್ದರೂ ಅದೇಕೋ ಬೆಂಗಳೂರು ಲಂಕೇಶರ ಕೈಕಾಲುಗಳನ್ನು ಕಟ್ಟಿಹಾಕಿತ್ತು. ಆದರೆ ಅದೇ ಸಂದರ್ಭದಲ್ಲಿ ವೈಎನ್‌ಕೆ, ರಾಮಚಂದ್ರಶರ್ಮ, ಗೋಪಾಲಕೃಷ್ಣ ಅಡಿಗರಂಥವರ ಪರಿಚಯವಾಗಿ ನವ್ಯ ಸಾಹಿತ್ಯದ ಹೊಸ ಸಂವೇದನೆಯೊಂದು ಆರಂಭವಾಗಿತ್ತು.

ಆದರೆ ಬಿ.ಎ. ಆನರ್ಸ್ ಮುಗಿಸಿದ (೧೯೫೫) ಲಂಕೇಶರಿಗೆ ಬೆಂಗಳೂರು ಅಸಹನೀಯವಾಗತೊಡಗಿತ್ತು. ಅದಾಗಲೇ ಕನ್ನಡದ ಖ್ಯಾತ ಕವಿ ಜಿ.ಪಿ. ರಾಜರತ್ನಂ ಅಂಥವರ ಸಖ್ಯ ದೊರೆತು ವಿದ್ಯಾರ್ಥಿ ಜೀವನದ ಅನೇಕ ಕವಿತೆಗಳು ಆಗ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದಿಂದ ಪ್ರಕಟವಾಗುತ್ತಿದ್ದ 'ಪದ್ಯಾಂಜಲಿ'ಯಲ್ಲಿ ಪ್ರಕಟವಾಗುವಂತಾದವು. ಅಲ್ಲದೆ ಬೇಂದ್ರೆಯವರಿಗೆ ಅರವತ್ತು ವರ್ಷ ತುಂಬಿದ ನೆನಪಿಗಾಗಿ ಹೊರತಂದ 'ನಮ್ಮ ಬೇಂದ್ರೆಯವರು' ಪುಸ್ತಕದಲ್ಲೂ ಲೇಖನ ಪ್ರಕಟವಾಯಿತು. ಅದೇ ಕಾಲಕ್ಕೆ ಸರಿಯಾಗಿ 'ಚಿತ್ರಗುಪ್ತ' ಪತ್ರಿಕೆಯಲ್ಲಿ ಕೆಲವು ಲೇಖನಗಳು ಆಗಾಗ ಪ್ರಕಟವಾಗತೊಡಗಿದವು. ಕುವೆಂಪು ಅವರನ್ನು ಸುತ್ತುವರಿದಿರುವ ಕೆಲವರ ಬಗ್ಗೆ ತೀಕ್ಷ್ಣವಾಗಿ ಬರೆಯುತ್ತಿದ್ದ ಲಂಕೇಶರು ಸಾಹಿತ್ಯಲೋಕದಲ್ಲಿ ಬಹಳಷ್ಟು ಜನರಿಗೆ ಚಿರಪರಿಚಿತರಾದರು.

ಜಿ.ಎಸ್. ಶಿವರುದ್ರಪ್ಪನವರ ಸೂಚನೆಯಂತೆ ಇಂಗ್ಲಿಷ್ ಎಂ.ಎ. ಮಾಡಲು ಮೈಸೂರಿಗೆ ಬಂದ ಲಂಕೇಶರಿಗೆ ನಿಕಟ ಸಂಪರ್ಕ ಸಿಕ್ಕಿದ್ದು ಕವಿ ಗೋಪಾಲಕೃಷ್ಣ ಅಡಿಗರ ಜೊತೆ. ಅಲ್ಲದೆ ಕೆ. ಸದಾಶಿವರಂಥ ಕತೆಗಾರರು, ಸಿ.ಡಿ. ನರಸಿಂಹಯ್ಯ ಮೊದಲಾದವರ ಜತೆ ಲಂಕೇಶರ ಆಪ್ತತೆ ಬೆಳೆಯತೊಡಗಿತು. ಅಡಿಗರಂತೂ ಕಾವ್ಯ ಬಿಟ್ಟು ಬೇರೆ ಯಾವುದನ್ನೂ ಯೋಚಿಸುತ್ತಿದ್ದವರಲ್ಲ. ಆದರೆ ಲಂಕೇಶರಿಗೆ ಸಾಹಿತ್ಯದ ಜೊತೆ ಸಿನಿಮಾ, ಇನ್ನಿತರ ವಿಷಯಗಳೂ ಅಷ್ಟೇ ಆಸಕ್ತಿದಾಯಕ- ವಾಗಿದ್ದವು. ಎಂ.ಎ. ಮುಗಿಸುತ್ತಿದ್ದಂತೆಯೇ ಕೆಲಸ ಹುಡುಕುವುದು ಅಷ್ಟೇನೂ ಕಷ್ಟವಾಗಲಿಲ್ಲ. ಲಂಕೇಶ್ ಇಂಟರ್ ಮೀಡಿಯಟ್ ಓದಿದ ಸಹ್ಯಾದ್ರಿ ಕಾಲೇಜಿನಲ್ಲೇ ಅವರಿಗೆ ಅಧ್ಯಾಪಕ ಹುದ್ದೆ ದೊರೆಯಿತು.

ಉದ್ಯೋಗ ಪರ್ವ

ಐವತ್ತರ ದಶಕದಲ್ಲಿ ಇಂಗ್ಲಿಷ್ ಎಂ.ಎ. ಓದುವುದು ಒಂದು ರೀತಿಯ ಪ್ರತಿಷ್ಠೆಯ ವಿಷಯ ಎಂದೇ ಹೇಳಬೇಕು. ಹಾಗಾಗಿ ಉದ್ಯೋಗ ಪಡೆಯುವುದು ತುಂಬಾ ಕಷ್ಟದ

ಸಂಗತಿ ಏನಾಗಿರಲಿಲ್ಲ. ಆದರೂ ಆ ಕಾಲದಲ್ಲಿ ದೊಡ್ಡವರ ಪ್ರಭಾವ, ಕೆಲಸ ಪಡೆಯುವವರ ಹಿನ್ನೆಲೆ ಕೂಡ ಕೆಲಸ ಮಾಡುತ್ತಿದ್ದವು. ಲಂಕೇಶರಿಗೆ ಯಾವ ಪ್ರಭಾವ ಅಥವಾ ಯಾವ ಹಿನ್ನೆಲೆಯೂ ಇರಲಿಲ್ಲ. ಅದರ ಅಗತ್ಯ ಇಲ್ಲವೇ ಇಲ್ಲ ಎಂದೇ ಹೊರಟವರು ಲಂಕೇಶ್. ಅವರು ಓದುವ ಕಾಲದಲ್ಲಿ ಇಂಟರ್ ಮೀಡಿಯಟ್ ಕಾಲೇಜ್ ಆಗಿದ್ದುದು ಎಂ.ಎ. ಮುಗಿಸುವ ವೇಳೆಗೆ ಪದವಿ ಕಾಲೇಜಾಗಿತ್ತು. ಹಾಗಾಗಿ ತಾವು ಓದಿದ ಸಹ್ಯಾದ್ರಿ ಕಾಲೇಜಿನಲ್ಲಿಯೇ ಮೊದಲ ಉದ್ಯೋಗ ಲಂಕೇಶರಿಗೆ ದೊರೆಯಿತು.

ಅದಾಗಲೇ ಸಾಹಿತ್ಯದ ಬಗ್ಗೆ ತೀವ್ರವಾಗಿ ಕಾಡುತ್ತಿದ್ದ ಮನಸ್ಸು, ಹರಯದ ಉತ್ಸಾಹ, ಆದರ್ಶದ ಹುಚ್ಚು -ಎಲ್ಲವೂ ಸೇರಿಕೊಂಡು ಶಿವಮೊಗ್ಗೆಯ ಕಾಲೇಜಿನ ಅಧ್ಯಾಪಕ ವೃತ್ತಿಯ ಆರಂಭದ ದಿನಗಳು ಅವರಲ್ಲಿ ಕಹಿಯ ನೆನಪನ್ನೇ ಬಿತ್ತಿದವು. ಗಲಾಟೆ ಪ್ರವೃತ್ತಿಯ ವಿದ್ಯಾರ್ಥಿಗಳನ್ನು ನಿಗ್ರಹಿಸಲು ಹೋಗಿ ದೊಡ್ಡ ಗುಂಪಿನ ವಿರೋಧ ಕಟ್ಟಿಕೊಂಡು ಕೆಟ್ಟ ಹೆಸರು ಪಡೆಯಬೇಕಾಯಿತು. ಸ್ವಲ್ಪ ಸಂಯಮ ತೋರಿದ್ದರೆ ಅಥವಾ ತುಸು ನಿರ್ಲಕ್ಷ್ಯ ವಹಿಸಿದ್ದರೆ ಆ ಘಟನೆಯೇ ನಡೆಯುತ್ತಿರಲಿಲ್ಲ ಎಂದು ಲಂಕೇಶರೇ ಹೇಳಿಕೊಂಡಿದ್ದಾರೆ. ಆದರೆ ಅನಗತ್ಯವಾಗಿ ವಿದ್ಯಾರ್ಥಿಗಳನ್ನು ಎದುರು ಹಾಕಿಕೊಂಡು ಆರಂಭದ ವರ್ಷವೇ ಅವರು ಕೆಟ್ಟ ಹೆಸರು ಪಡೆಯಬೇಕಾಯಿತಂತೆ. ಆಗ ಪ್ರಿನ್ಸಿಪಾಲರಾಗಿದ್ದ ದೇ. ಜವರೇಗೌಡರ ದೆಸೆಯಿಂದ ಹೆಚ್ಚಿನ ದುರಂತವಾಗಲಿಲ್ಲ. ಆದರೆ ಲಂಕೇಶರೂ ಹೆಚ್ಚು ವರ್ಷ ಇಲ್ಲಿರಲಿಲ್ಲ. ೧೯೫೯ ರಿಂದ ೧೯೬೨ರ ವರೆಗೆ ಕೆಲಸ ಮಾಡಿದ ಲಂಕೇಶರಿಗೆ ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ವರ್ಗ ಆಯಿತು.

ಸೆಂಟ್ರಲ್ ಕಾಲೇಜು ಕೂಡ ಲಂಕೇಶರು ವಿದ್ಯೆ ಕಲಿತ ಕಾಲೇಜೇ. ಅಲ್ಲದೆ ಸಾಹಿತ್ಯಕವಾಗಿ ಹಲವು ಬಗೆಯ ಸಂವೇದನೆಗಳಿಗೆ ಕಾರಣವಾದ ಸೆಂಟ್ರಲ್ ಕಾಲೇಜು ಲಂಕೇಶರ ಒಳಗಿನ ಬರಹಗಾರನನ್ನು ಮತ್ತಷ್ಟು ಹುರುಪುಗೊಳಿಸಿದ ತಾಣವಾಯಿತು. ಲಂಕೇಶ್ ಬರಹಗಳ ಬಹುಮುಖ್ಯ ಘಟ್ಟ ಆರಂಭವಾದುದೇ ಈ ಕಾಲೇಜಿನಲ್ಲಿ ಅಧ್ಯಾಪಕವೃತ್ತಿ ಮಾಡುತ್ತಿದ್ದ ಮೂರು ವರ್ಷಗಳ ಅವಧಿಯಲ್ಲಿ. ಬರಹಗಳ ಆರಂಭ ಮಾತ್ರವಲ್ಲ, ಸಾಹಿತಿಯಾಗಿ ಬೇರೆ ಬೇರೆ ಮಾಧ್ಯಮಗಳತ್ತ ಗಮನ ಹರಿಸಿದ್ದು, ಬೇರೆ ಬೇರೆ ವಲಯದ ಜನರ ಸಂಪರ್ಕ ಪಡೆದು ಹೊಸ ರೀತಿಯ ಯೋಚನೆಗಳನ್ನು ರೂಪಿಸಿಕೊಂಡದ್ದು ಈ ಅವಧಿಯಲ್ಲಿ. ಅಂದರೆ ಈ ಮೂರು ವರ್ಷದ ಅವಧಿ ಲಂಕೇಶರ ಸಾಹಿತ್ಯಕ ಬದುಕಿನಲ್ಲಿ ಬಹುಮುಖ್ಯವಾದ ಹಂತ.

ಇದಾದ ನಂತರ ಒಂದು ವರ್ಷ (೧೯೬೫-೬೬) ಸರ್ಕಾರಿ ಫಸ್ಟ್‌ಗ್ರೇಡ್ ಕಾಲೇಜಿನ ಅಧ್ಯಾಪಕರಾಗಿ ಕೆಲಸ ಮಾಡಿದ ನಂತರ ಮುಂದಿನ ಹನ್ನೆರಡು ವರ್ಷಗಳ

ಕಾಲ ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾಗಿ ಲಂಕೇಶ್ ಕೆಲಸ ಮಾಡಿದರು. ೧೯೭೮ರಲ್ಲಿ ತಮ್ಮ ಕೆಲಸಕ್ಕೆ ರಾಜೀನಾಮೆ ನೀಡುವ ಹೊತ್ತಿಗೆ ಲಂಕೇಶ್ ತಮ್ಮ ಬದುಕಿನಲ್ಲಿ ಹಲವು ಹಂತಗಳನ್ನು ದಾಟಿದ್ದರು. ಅತ್ಯುತ್ತಮ ನಾಟಕಕಾರರಾಗಿದ್ದರು; ತಾವೇ ಗೆಳೆಯರ ಜೊತೆಗೂಡಿ ರಂಗತಂಡವನ್ನು ಕಟ್ಟಿದ್ದರು; ಸೋಷಲಿಸ್ಟ್ ಚಳುವಳಿಯಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದರು; ಕಾದಂಬರಿಕಾರರಾಗಿ, ಉತ್ತಮ ಕತೆಗಾರರಾಗಿ, ನವ್ಯಪಂಥದ ಪ್ರಮುಖ ಲೇಖಕರಲ್ಲೊಬ್ಬರಾಗಿ ನಾಡಿನಾದ್ಯಂತ ಖ್ಯಾತರಾಗಿದ್ದರು. ಅಲ್ಲದೆ ಮೂರು ಸಿನಿಮಾಗಳನ್ನು ನಿರ್ದೇಶಿಸಿದ್ದರು; ಪ್ರಥಮ ಚಿತ್ರಕ್ಕೇ ಅತ್ಯುತ್ತಮ ನಿರ್ದೇಶಕ ಎಂಬ ರಾಷ್ಟ್ರ ಪ್ರಶಸ್ತಿ ಕೂಡ ಬಂದಿತ್ತು.

ಒಟ್ಟಿನಲ್ಲಿ ಲಂಕೇಶ್ ಹಲವು ಮಾಧ್ಯಮಗಳತ್ತ ತಮ್ಮನ್ನು ತೊಡಗಿಸಿಕೊಂಡು ಸಫಲರಾಗಿದ್ದರು. ಆದರೆ ಆರ್ಥಿಕವಾಗಿ ಬಹಳ ತೊಂದರೆ ಅನುಭವಿಸಿದ್ದರು. ಅವೆಲ್ಲದರ ಮಧ್ಯೆ ಕೆಲಸಕ್ಕೆ ರಾಜೀನಾಮೆ ನೀಡಿ, ಇನ್ನಷ್ಟು ಹಣದ ಮುಗ್ಗಟ್ಟಿಗೆ ಸಿಲುಕಿದ್ದರು. ಅವರೇ ಅಂದುಕೊಂಡಂತೆ ಯಾವುದಾದರೂ ಕೆಲಸಕ್ಕೆ ಸೇರಿ ಅಲ್ಲಿಯೇ ಕೊಳೆಯುವುದು, ತಮ್ಮ ಶಕ್ತಿಯನ್ನೆಲ್ಲ ನಾಶಮಾಡಿಕೊಳ್ಳುವುದು ಸರಿ ಬರಲಿಲ್ಲ. ನಾಲ್ಕು ಗೋಡೆಗಳ ಮಧ್ಯೆ ತಮ್ಮನ್ನು ತಾವೇ ಬಂಧಿಸಿಕೊಂಡಂತಾಗುತ್ತದೆ. ಎಂಬುದು ಅವರ ವಾದ. ಬಹುಶಃ ಅತ್ಯಂತ ಕ್ರಿಯಾಶೀಲ ಮನುಷ್ಯನೊಬ್ಬನಿಗೆ ಹೀಗೆ ಅನ್ನಿಸುವುದರಲ್ಲಿ ಅರ್ಥವಿದೆ ಎಂದು ಕಾಣುತ್ತದೆ.

ರಾಜೀನಾಮೆ ನೀಡಿದ ನಂತರ ನಿರುದ್ಯೋಗಿಯಾಗಿದ್ದ ಲಂಕೇಶರಿಗೆ ಮತ್ತೆ ಸಿನಿಮಾ ಕ್ಷೇತ್ರಕ್ಕೆ ಬರುವ ಅವಕಾಶ ನೀಡಿದ್ದು ಮತ್ತೊಂದು ಚಿತ್ರ 'ಎಲ್ಲಿಂದಲೋ ಬಂದವರು.'

ಇಷ್ಟರಲ್ಲಾಗಲೇ ಸಿನಿಮಾ ಮಾಧ್ಯಮ ಕೂಡ ಬೇಸರವಾಗಿ ಲಂಕೇಶ್ ಮತ್ತೆ ಬರವಣಿಗೆಗೆ ಹಾತೊರೆದರು; ಅವರ ಈ ತಹತಹಕ್ಕೆ ಅವಕಾಶ ನೀಡಿದ್ದು ಪ್ರಜಾವಾಣಿ ಪತ್ರಿಕೆ. ಪ್ರತಿವಾರ ಲಂಕೇಶರ ಅಂಕಣವೊಂದು ಪ್ರಜಾವಾಣಿಯಲ್ಲಿ ಪ್ರಕಟವಾಗತೊಡಗಿ ಅದು ಅತ್ಯಂತ ಜನಪ್ರಿಯವಾಯಿತು. ಕೆಲವು ಊರುಗಳಲ್ಲಿ ಈ ಅಂಕಣ ಬಂದ ದಿನ ಪತ್ರಿಕೆಗಾಗಿ ಜನರ ಗದ್ದಲ ಏರ್ಪಟ್ಟ ಸುದ್ದಿಗಳೂ ಬಂದವು. ಲಂಕೇಶ್ ಜನಪ್ರಿಯ ಅಂಕಣಕಾರರಾದರು. ಆದರೆ ಹೆಚ್ಚು ದಿನ ಈ ಅಂಕಣ ಮುಂದುವರಿಯಲಿಲ್ಲ.

ಇದರಿಂದ ಕರ್ನಾಟಕಕ್ಕೆ ಹೊಸ ಪತ್ರಿಕೋದ್ಯಮದ ಆರಂಭವೇ ಆಯಿತೆನ್ನಬಹುದು. ೧೯೮೦ ಜುಲೈ ತಿಂಗಳಲ್ಲಿ 'ಲಂಕೇಶ್ ಪತ್ರಿಕೆ'ಯ ಉದಯವಾಯಿತು. ಅಲ್ಲಿಂದ ೨೦೦೦ನೇ ಇಸವಿ ಜನವರಿ ೨೫ರವರೆಗೆ, ಅಂದರೆ ಲಂಕೇಶರ ನಿಧನದವರೆಗೆ ಅವರಿಗೆ ತಾವೇ ನಿರ್ಮಿಸಿಕೊಂಡ ಸಂಪಾದಕ ಹುದ್ದೆ! ೧೯೭೮ರಲ್ಲಿ ಕೆಲಸಕ್ಕೆ ರಾಜೀನಾಮೆ ನೀಡುವ ಪ್ರಸಂಗವನ್ನು ಲಂಕೇಶರ ಮಾತುಗಳಲ್ಲೇ ಕೇಳಿ:

"...ಅಷ್ಟರಲ್ಲಿ ನನ್ನ ಬದುಕಿನ ಅಧ್ಯಾಯವೊಂದು ಮುಗಿಯುತ್ತಾ ಬಂದಿತ್ತು. ಸಿನಿಮಾಗಳ ಕೆಟ್ಟ ಒತ್ತಡ, ವೇಗದ ಬದುಕು, ಭ್ರಮೆಗಳು, ಹುಚ್ಚು ಕನಸುಗಳು -ಇವೆಲ್ಲವುಗಳ ಮಧ್ಯೆ ನನ್ನ ಕುದುರೆ ಜೂಜು ನಿಂತಿತ್ತು. ನನ್ನ ಅಕೌಂಟ್‌ನಲ್ಲಿದ್ದ ಸಿ.ಎಲ್., ಪಿ.ಎಲ್.ಗಳೆಲ್ಲ ಮುಗಿಯುತ್ತ ಬಂದಿದ್ದವು. ಜ್ವರ ಬಿಟ್ಟ ವ್ಯಕ್ತಿಯಂತಿದ್ದ ನಾನು ಮುಂದೇನು ಮಾಡುವುದೆಂದು ತೋಚದೆ ಇದ್ದೆ. 'ಅನುರೂಪ' ವಿಫಲವಾಗಿ ಅದರ ಸಾಲದ ಬಡ್ಡಿ ಬೆಳೆಯುತ್ತಲೇ ಇತ್ತು. 'ಖಂಡವಿದೆಕೋ' ಚಿತ್ರದಿಂದ ಸಾಕಷ್ಟು ಕೆಟ್ಟ ಹೆಸರು ಬಂದಿತ್ತು. ಕಾಲೇಜಿನಲ್ಲಿ ನನಗಾಗದವರು ಚುರುಕಾಗತೊಡಗಿದ್ದರು. 'ಸಂಬಳ ಪಡೆಯಲು ಮಾತ್ರ ಕಾಲೇಜಿಗೆ ಬರುತ್ತಿರುವ ಅಧ್ಯಾಪಕ' ಎಂದು ನನ್ನ ಮೇಲೆ ಕೆಲವರು ಕರಪತ್ರ ಹೊರಡಿಸಿದ್ದರು. ಆಗ ನನಗನ್ನಿಸಿತು. 'ಇದು ಹೀಗೇ ಮುಂದುವರಿಯಕೂಡದು, ನಾನು ಈಗಲಾದರೂ ಆಯ್ಕೆ ಮಾಡಿಕೊಳ್ಳಬೇಕು.' ಆಗ ಕೆಲವರು ಹಿತಚಿಂತಕರು, 'ನಿಮ್ಮ ವಿರುದ್ಧ ಅಪಪ್ರಚಾರ ಮಾಡುತ್ತಿರುವವರು ಬ್ರಾಹ್ಮಣರು ಮತ್ತು ಆರೆಸೆಸ್‌ನವರು. ಅವರ ವಿರುದ್ಧ ನಾವು ಪ್ರತಿಭಟನೆಯನ್ನು ಸಂಘಟಿಸಿ ಮೆರವಣಿಗೆ ತೆಗೆಯುತ್ತೇವೆ' ಅಂದರು. ನನಗೆ ಅವರ ಮಾತಿನಿಂದ ಶಾಕ್ ಆಯಿತು. 'ಅಲ್ಲಯ್ಯ, ನಾನು ಕಾಲೇಜಿಗೆ ಹೋಗಿ ಕ್ಲಾಸ್ ತೆಗೆದುಕೊಳ್ಳದೇ ಇರೋದು ನಿಜ. ಅದು ನನ್ನ ತಪ್ಪು. ತಿಂಗಳ ಹಿಂದೆಯೇ ನನ್ನ ರಜಾ ಮುಗಿದಿದೆ. ನಾನೀಗ ಮರ್ಯಾದೆಯಿಂದ ಸಂಬಳವಿಲ್ಲದ ರಜಾ ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ರಾಜೀನಾಮೆ ಕೊಟ್ಟು ಹೊರಬರಬೇಕು. ಆ ಎರಡನ್ನೂ ಮಾಡದವನ ಪರವಾಗಿ ನೀವು ನಿಂತರೆ, ನಿಮಗೆ ಅವಮಾನ ಕಟ್ಟಿಟ್ಟದ್ದು' ಎಂದು ಹೇಳಿ ರಾಜೀನಾಮೆ ಪತ್ರದೊಂದಿಗೆ ನಮ್ಮ ಇಲಾಖೆಯ ಮುಖ್ಯಸ್ಥ ಭರತರಾಜ್ ಸಿಂಗ್‌ರನ್ನು ಕಂಡೆ. ಅವರಿಗೆ ಆಶ್ಚರ್ಯವಾಯಿತು. 'ನಿಮ್ಮ ಆರ್ಥಿಕ ಸ್ಥಿತಿ ಹೇಗಿದೆ?' ಅಂದರು.

"ಕೆಟ್ಟದಾಗಿದೆ. 'ಪಲ್ಲವಿ'ಯಿಂದ ಬಂದ ಸಬ್ಸಿಡಿಯಿಂದ ಸ್ವಲ್ಪ ಸಾಲ ತೀರಿಸಿದೆ. 'ಅನುರೂಪ'ದ ಸಬ್ಸಿಡಿಯನ್ನು ಬ್ಯಾಂಕ್‌ನವರು ತೆಗೆದುಕೊಂಡರು. ಅದರ ಬಡ್ಡಿ ಹಾಗೇ ಇದೆ" ಅಂದೆ.

"ಹಾಗಾದರೆ ರಾಜೀನಾಮೆ ಕೊಡಬೇಡಿ" ಅಂದರು.

"ನಿಮ್ಮ ವಿಶ್ವಾಸಕ್ಕೆ ಥ್ಯಾಂಕ್ಸ್. ನನ್ನಿಂದ ಆಗ್ತಾ ಇಲ್ಲ. ಹೀಗೇ ಆದರೆ ಅಳುಕಿನಿಂದ ಕುಸಿದುಹೋಗ್ತೇನೆ. ದಯವಿಟ್ಟು ಕ್ಷಮಿಸಿ. ಈ ರಾಜೀನಾಮೆ ಪತ್ರ ಸ್ವೀಕರಿಸಿ."

"ಹಾಗಲ್ಲ. ಯೋಚನೆ ಮಾಡಿ, ನಿಮ್ಮ ಹೆಂಡತಿ ಮಕ್ಕಳಿಗೆ ಹೇಳಿದ್ದೀರಾ?"

"ಇಲ್ಲ" ಅಂದೆ.

"ಅವರನ್ನು ಕೇಳಿ ನೋಡಿ" ಅಂದರು.

ಅವರು ನಿರೀಕ್ಷಿಸಿದಂತೆ ನನ್ನ ಹೆಂಡತಿ ದೊಡ್ಡ ಗಲಾಟೆ ಶುರುಮಾಡಿದಳು; ನನ್ನ ಮಗಳು ಗೌರಿಗೆ ಆಗ ಹದಿನೇಳು ವರ್ಷ. ಅವಳೂ ಅಮ್ಮನ ಜೊತೆ ಸೇರಿಕೊಂಡು ಪ್ರತಿಭಟಿಸಿದಳು. ಅಲ್ಲಿಯವರೆಗೆ ಹೇಳಿಕೊಳ್ಳುವುದಕ್ಕಾದರೂ ಒಂದು ಉದ್ಯೋಗ ಇತ್ತು. ಅದೂ ವಿಶ್ವವಿದ್ಯಾಲಯದ ಅಧ್ಯಾಪಕನ ಕೆಲಸ. ಅದನ್ನೂ ಬಿಟ್ಟುಬಿಡುವುದು ಅವರಿಗೆ ವಿಚಿತ್ರವಾಗಿ ಕಂಡಿತ್ತು. ಆದರೆ ನಾನು, 'ನಿಮಗೇನೂ ತೊಂದರೆ ಆಗೊಲ್ಲ, ನನಗೆ ನೀವು ಒಂದು ತುತ್ತು ಅನ್ನ ಹಾಕಿದರಾಯಿತು' ಅಂದೆ. ನಾನು ನಿರ್ಧರಿಸಿಬಿಟ್ಟಿರುವುದು ಅವರಿಗೆ ಗೊತ್ತಿತ್ತು. ಇಂದಿರಾಳ ಅಂಗಡಿ ಅಷ್ಟೇನೂ ತೊಂದರೆ ಇಲ್ಲದೆ ನಡೆಯುತ್ತಿತ್ತು. ಆದ್ದರಿಂದ ನನ್ನ ಧ್ವನಿಯು ತಣ್ಣನೆಯ ಹಠ ನೋಡಿ ಅವರು ಸುಮ್ಮನಾದರು. ಅದು ೧೯೭೮. ಅಷ್ಟರಲ್ಲಾಗಲೇ ನನ್ನ ಪ್ರಾವಿಡೆಂಟ್ ಫಂಡ್ ಇತ್ಯಾದಿಯಿಂದ ನಾನು ಸಾಲ ತಗೆದುಕೊಂಡದ್ದರಿಂದ ನನ್ನ ಕೈಗೆ ಬಂದದ್ದು ಹದಿನೈದೋ ಇಪ್ಪತ್ತೋ ಸಾವಿರ. ಹತ್ತೊಂಬತ್ತು ವರ್ಷಗಳ ನನ್ನ ಅಧ್ಯಾಪಕ ಜೀವನ ಕೊನೆಯಾಗಿತ್ತು."

ಲಂಕೇಶರ ಜೀವನದಲ್ಲಿ ಎಲ್ಲವೂ ಆಕಸ್ಮಿಕ ತಿರುವುಗಳೇ. ವಿಶ್ವವಿದ್ಯಾನಿಲಯದ ಅಧ್ಯಾಪಕನ ವೃತ್ತಿ ಬಿಡುವುದೆಂದರೆ ಎಂಥವರಿಗಾದರೂ ಹುಚ್ಚು ಅನಿಸಬಹುದು. ಬೇರೆ ಉದ್ಯೋಗ ಇದ್ದಿದ್ದರೆ, ಆರ್ಥಿಕವಾಗಿ ಪರಿಸ್ಥಿತಿ ಉತ್ತಮವಾಗಿದ್ದರೆ ಅದು ಬೇರೆ ವಿಷಯ. ಆದರೆ ನಡು ನೀರಿನಲ್ಲಿ ನಿಂತ ವ್ಯಕ್ತಿಯೊಬ್ಬ ಚಿಕ್ಕ ಆಸರೆಯನ್ನೂ ತಿರಸ್ಕರಿಸಿದ್ದು ಲಂಕೇಶರ ಜೀವನದ ಹಲವು ವಿಚಿತ್ರಗಳಲ್ಲೊಂದು. ಅವರ ಬದುಕಿನ ಪ್ರಯೋಗಶಾಲೆ ಮತ್ತೊಂದು ಸಾಹಸಕ್ಕೆ ತನ್ನನ್ನು ಸಿದ್ಧಗೊಳಿಸುತ್ತಿತ್ತು.

ಭೃಂಗದ ಬೆನ್ನು ಹತ್ತಿ...

'ನನ್ನ ಜೀವದಲ್ಲಿ ಅಲ್ಲಾಡಿಸಿದ ವಿಷಯಗಳು ಮೂರು; ಕಾಮ, ಕಾವ್ಯ ಮತ್ತು ಜೂಜು.'

-ತಮ್ಮ ಕಥಾಸಂಕಲನವೊಂದರಲ್ಲಿ ಲಂಕೇಶರೇ ಬರೆದುಕೊಂಡ ಸಾಲುಗಳಿವು. ಲಂಕೇಶರ ವ್ಯಕ್ತಿತ್ವದ ಮುಖ್ಯ ಗುಣ ಎಂದರೆ ಯಾವುದೇ ವಿಷಯವಾಗಲಿ, ಅವರ ಆಸಕ್ತಿಗೆ ಗುರಿಯಾಯಿತೆಂದರೆ, ಅದನ್ನು ಆಮೂಲಾಗ್ರವಾಗಿ ಅನುಭವಿಸಬೇಕು ಅನ್ನುವುದು. ಕಾಮದ ಬಗ್ಗೆ ತಮ್ಮ ಕತೆಗಳಲ್ಲಿ, ಕವಿತೆಗಳಲ್ಲಿ, ಆತ್ಮಕಥನದಲ್ಲಿ ಸಾಕಷ್ಟು ಮುಕ್ತವಾಗಿಯೇ ಹೇಳಿಕೊಂಡಿದ್ದಾರೆ. ತಮ್ಮನ್ನು ಬಾಲ್ಯದಲ್ಲಿ ಕಾಡಿದ ಕಾಮನೆಗಳು;

ಯೌವನದಲ್ಲಿ ಅಸ್ಥಿರಗೊಳಿಸಿದ ವಾಂಛೆ; ಮದುವೆಯಾಗಿ, ಮಕ್ಕಳನ್ನು ಪಡೆದು ಗೃಹಸ್ಥನಾಗಿದ್ದಾಗಲೂ ಭುಗಿಲೆಬ್ಬಿಸಿದ ಪ್ರೇಮ ಪ್ರಕರಣಗಳು, ಅಸಹಜ ಸಂಬಂಧಗಳ ಬಗ್ಗೆ ನಿರ್ಭಿಡೆಯಿಂದ ಬರೆದಿದ್ದಾರೆ.

ಹಾಗೆಯೇ ಜೂಜು, ಅದರಲ್ಲೂ ಕುದುರೆ ಜೂಜಿನ ತಮ್ಮ ವ್ಯಾಮೋಹದ ಬಗ್ಗೆ ಕೂಡ ಪತ್ರಿಕೆಯ ಲೇಖನಗಳಲ್ಲಿ, ಆತ್ಮಕಥನದಲ್ಲಿ ಸವಿವರವಾಗಿ ತಿಳಿಸಿದ್ದಾರೆ. ಅಧ್ಯಾಪಕರಾಗಿದ್ದಾಗ ಅನಿರೀಕ್ಷಿತವಾಗಿ ಕುದುರೆ ಜೂಜಿನ ಚಟ ಹತ್ತಿದ್ದು; ಅದು ಬಿಡದ ವ್ಯಾಧಿಯಾಗಿ ಕೊನೆತನಕ ಲಂಕೇಶರನ್ನು ಆವರಿಸಿದ್ದು ಇತ್ಯಾದಿಗಳನ್ನು ವಿವರಿಸಿದ್ದಾರೆ. ಆದರೆ ಲಂಕೇಶರು ಕುದುರೆ ಜೂಜಿನ ಒಳಿತು ಕೆಡುಕನ್ನು ಬದಿಗಿಟ್ಟು, ಆ ಕ್ರೀಡೆಯ ಅಂತರಂಗ ಮತ್ತು ಬಹಿರಂಗದ ಸಂತಸಗಳನ್ನು ಚರ್ಚಿಸಬಲ್ಲವರಾಗಿದ್ದರು; ಬಡವರಿಗೆ ಕೈಗೆಟುಕದ ಈ ಜೂಜು ತನ್ನ ಸುತ್ತ ಕಟ್ಟಿಕೊಂಡ ವಿಶಾಲ ವಿಶ್ವವನ್ನು ವಿವರಿಸಬಲ್ಲವರಾಗಿದ್ದರು; ಹಾಗೆಯೇ ಈ ಜೂಜಿನ ಅತ್ಯಂತ ದುರಂತದ ವಿವರಗಳನ್ನೂ ತೆರೆದಿಡಬಲ್ಲವರಾಗಿದ್ದರು. ಸದಾ ಅನುಭವದ ದಾಹಕ್ಕೆ ತಹತಹಿಸುತ್ತಿದ್ದ ಲಂಕೇಶರ ಮನಸ್ಸು ಕುದುರೆ ಜೂಜಿನ ಹೊಸ ಪ್ರಪಂಚಕ್ಕೆ ಸೇರಿಕೊಂಡಿದ್ದು; ಅದರಿಂದ ಅನುಭವಿಸಿದ ನೋವು, ಅವಮಾನ, ಸಾಂಸಾರಿಕ ಸಂಕಷ್ಟಗಳು -ಇತ್ಯಾದಿ ವಿವರಗಳನ್ನು ಹಲವು ಸಂದರ್ಭಗಳಲ್ಲಿ ವಿವರಿಸಿದ್ದಾರೆ.

ಕಾಮ, ಜೂಜಿನಂತೆ ಅವರನ್ನು ಕೊನೆಯತನಕ ಕಾಡಿದ್ದು ಬರವಣಿಗೆ. ಬರೆಯದಿದ್ದರೆ ತಮ್ಮ ಸರ್ವನಾಶ -ಎನ್ನುವಂತೆ ಅನುದಿನವೂ ಹಲ್ಲು ಕಚ್ಚಿ ಬರೆಯುವ ಕಾಯಕ ಮಾಡಿದವರು ಲಂಕೇಶ್. 'ಬರಹದಲ್ಲಿ ಅವರದು ದೈತ್ಯಶಕ್ತಿ' ಎಂಬ ಮಾತೇ ಅವರ ಕಾಲದಲ್ಲಿ ಪ್ರಚಲಿತವಾಗಿತ್ತು. 'ನಿಜವಾದ ರಾಕ್ಷಸ' ಎಂದು ಅವರ ಮಿತ್ರರೇ ಮೆಚ್ಚುಗೆ, ಅಸೂಯೆಯಿಂದ ಉದ್ಧರಿಸಿದ್ದೂ ಇದೆ. ಬರವಣಿಗೆಯ ಮೇಲೆ ಅವರಿಗಿದ್ದ ತುಡಿತದ ತೀವ್ರತೆ ಅಸಾಧಾರಣವಾದದ್ದು. ಬಹುಶಃ ಅವರಿಗೆ ಅಪ್ರತಿಮ ಸುಖ ಸಿಕ್ಕಿದ್ದು ಬರವಣಿಗೆಯಿಂದಲೇ ಎಂಬುದರಲ್ಲಿ ಸಂದೇಹವೇ ಇಲ್ಲ. ಕಾವ್ಯ, ಕಾದಂಬರಿ, ಕತೆ, ನಾಟಕ, ಪತ್ರಿಕೆಯ ಬರವಣಿಗೆ, ಸಿನಿಮಾ ಸ್ಕ್ರಿಪ್ಟ್ -ಹೀಗೆ ಯಾವುದೇ ಬರಹವಾಗಲಿ, ಉಸಿರಾಡುವಷ್ಟೇ ಸ್ವಾಭಾವಿಕವಾಗಿ, ಸೈನಿಕನ ಶಿಸ್ತಿನಿಂದ ಬರೆಯುತ್ತಿದ್ದರು.

> '...ಪ್ರಯತ್ನಪೂರ್ವಕವಾಗಿ ಉದ್ದೇಶಪೂರ್ವಕವಾಗಿ ಕಷ್ಟಪಟ್ಟು ಇದೊಂದು ಜನತೆಯ ಸೇವೆ ಅಂತ ಬರೆದಿಲ್ಲ. ನಾನು ಇವತ್ತಿನವರೆಗೂ ಬರೆದಿರುವುದು ಸಂತೋಷದಿಂದ, ಹುಮ್ಮಸ್ಸಿನಿಂದ; ನನಗಾಗಿ ಮತ್ತು ನನ್ನ ಧನ್ಯತೆಗಾಗಿ. ಇಂಥದ್ದರಲ್ಲಿ ನೀವು ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ ಅಂತ ಯಾರಾದರೂ ಹೇಳಿದಾಗ ಆಶ್ಚರ್ಯ ಆಗುತ್ತದೆ...'

"ಕವಿಯಾದವನು ಬಹಳ ವಿಪರ್ಯಾಸದ ಗ್ರಹಿಕೆಯುಳ್ಳವನು. ನಾಲ್ಕಂತಸ್ತಿನ ಮನೆಯಲ್ಲಿ ಕುಳಿತಂತಹ ಒಬ್ಬ ವ್ಯಕ್ತಿ ಈ ಕವಿ ತನ್ನ ಮೇಲೆ ಕಾವ್ಯ ಬರೆಯಬಹುದು ಎಂದು ತಿಳಿದಿರುತ್ತಾನೆ; ಆದರೆ ಕವಿ ಮುಂದಕ್ಕೆ ಹೊರಟುಹೋಗುತ್ತಾನೆ. ಅತ್ಯಂತ ಶಕ್ತಿವಂತನಾದವನು ತನ್ನ ಮೇಲೆ ಕಾವ್ಯ ಬರೆಯಬಹುದು ಎಂದು ತಿಳಿದಿರುತ್ತಾನೆ; ಕವಿ ಮುಂದೆ ಹೋಗುತ್ತಾನೆ. ಅತ್ಯಂತ ಸುಂದರಿಯಾದವಳೂ ಈ ಕವಿ ತನ್ನ ಮೇಲೆ ಕಾವ್ಯ ಬರೆಯಬಹುದೆಂದು ತಿಳಿದಿರುತ್ತಾಳೆ; ಕವಿ ಅಲ್ಲಿಂದ ಮುಂದೆ ಹೋಗುತ್ತಾನೆ. ಇದೇ ಕವಿಗೆ ಒಬ್ಬ ಪೆಳವ ಒಬ್ಬ ಕಿವುಡಿಯನ್ನು ನೆಚ್ಚಿ ಒಂದು ಮೂಲೆಯಲ್ಲಿ ಕೂತಿರುವ ದೃಶ್ಯ ಜೀವನ ಪ್ರೀತಿಯ ಸಂಕೇತವಾಗಿ, ಜೀವಂತಿಕೆಯ ಕಾವ್ಯದ ವಸ್ತುವಾಗಿ ಕಾಣಿಸುತ್ತೆ. ಈ ದೃಷ್ಟಿಯಿಂದಲೇ ಬೇಂದ್ರೆಯಂಥ ವರಕವಿ ಕುವೆಂಪುರವರಂಥ ಕವಿ ಒಂದು ದೇಶದ ದೊಡ್ಡ ಸಮಾಜವಾದಿಗಳು. ಇಂಥ ಕವಿಗೆ ದೊಡ್ಡವರು ಚಿಕ್ಕವರು ಅಂತ ಇಲ್ಲ. ಅವನು ಹುಡುಕುತ್ತಾ ಹೋಗುತ್ತಾನೆ. ಎಲ್ಲಿ ಜೀವ ಇದೆ? ಎಲ್ಲಿ ಜೀವಸೆಲೆ ಇದೆ? ಯಾವುದು ಕಾವ್ಯಕ್ಕೆ ವಸ್ತು? ಎಲ್ಲಿ ಪ್ರೀತಿ ಇದೆ? ಹೆಳವ ಇರಬಹುದು, ಕುರುಡಿ ಇರಬಹುದು, ಕಿವುಡಿ ಇರಬಹುದು, ಅಲ್ಲಿ ಪ್ರೀತಿ ಇದೆ ಅಂತ, ಅಲ್ಲಿ ಕಾವ್ಯದ ವಸ್ತು ಇದೆ ಅಂತ ಹುಡುಕುವುದರಿಂದ ಮತ್ತು ಅದರ ಮೇಲೆ ಕಾವ್ಯ ಬರೆಯುವುದರಿಂದ ಒಬ್ಬ ಕವಿ ನಿಜವಾಗಿಯೂ ಸಮಾಜವಾದಿ. ಅವನಿಗೆ ದೊಡ್ಡದು ಚಿಕ್ಕದು ಅಂತ ಇಲ್ಲ. ಜೀವಂತವಾದದ್ದು ಮಾತ್ರ ಇದೆ..."

ಲಂಕೇಶರಿಗೆ ಅರವತ್ತು ವರ್ಷ ತುಂಬಿದ ಸಂದರ್ಭದಲ್ಲಿ ಮೈಸೂರಿನಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮಾಡಿದ ಭಾಷಣವಿದು. ಬರಹವನ್ನು ತೀವ್ರವಾಗಿ ಪ್ರೀತಿಸುವ, ತಮ್ಮ ಬದ್ಧತೆಯನ್ನು ಕಟಿಬದ್ಧರಾಗಿ ಪ್ರತಿಪಾದಿಸುವ, ಬದುಕನ್ನು ಪಾರದರ್ಶಕವಾಗಿ ನೋಡುವ ಲಂಕೇಶರು ತಮ್ಮ ಬರವಣಿಗೆಯ ಕಾಯಕವನ್ನು ಆರಂಭಿಸಿದ್ದು ವಿದ್ಯಾರ್ಥಿಯಾಗಿರುವಾಗಲೇ.

ಬಿ.ಎ. ಆನರ್ಸ್ ಓದುವಾಗಲೇ ಅವರು ಬರೆದ ಕವನಗಳನ್ನು ಸೆಂಟ್ರಲ್ ಕಾಲೇಜಿನ 'ಕರ್ನಾಟಕ ಸಂಘ'ದ 'ಪದ್ಯಾಂಜಲಿ'ಯಲ್ಲಿ ಪ್ರಕಟ ಮಾಡಿದವರು ಲಂಕೇಶರ ಗುರುಗಳಾದ ಜಿ.ಪಿ. ರಾಜರತ್ನಂ ಅವರು. ಅವರ ಪ್ರಥಮ ಕವಿತೆ 'ಇಂಚರ'ವನ್ನು ಬರೆದದ್ದು ೧೯೫೬ರಲ್ಲಿ. ಅದರ ಮೊದಲ ಸಾಲುಗಳು ಹೀಗಿವೆ:

ಟೊಂಗೆ ಟೊಂಗೆ ಟೊಂಗೆಗೊಬ್ಬ
ಪಕ್ಷಿಕುಲದ ಗಾಯಕ!
ಏನಿದೇನು ಧ್ವನಿಯ ಲೀಲೆ!
ಎಷ್ಟು ಮಧುರ ಮೋಹಕ!
ಇನಿತು ವಾಣಿ ತುಟಿಯ ಬಿರಿಸೆ ಭುವಿಯೆ ದಿವಿಯ ನಾಯಕ!

-ಅಂದಿನಿಂದ ೧೯೯೮ರವರೆಗೆ ಹಲವು ಕವನಗಳನ್ನು ಲಂಕೇಶರು ಬರೆದಿದ್ದಾರೆ. ನಲವತ್ತೈದು ವರ್ಷಗಳ ಕಾಲಾವಧಿಯಲ್ಲಿ ಪ್ರಕಟವಾದ ಎಂಬತ್ತೈದಕ್ಕೂ ಹೆಚ್ಚು ಕವನಗಳಲ್ಲಿ ನವ್ಯಪರಂಪರೆಯ ಪ್ರಾತಿನಿಧಿಕ ಕವನಗಳೇ ಹೆಚ್ಚು. ಇದಕ್ಕಿಂತ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ ನೀಲು ಕವನಗಳು ಸಾವಿರಾರು!

ತಮ್ಮ ಮೊದಲ 'ಬಿಚ್ಚು' ಕವನ ಸಂಕಲನದಲ್ಲೇ ಸಾಹಿತ್ಯಾಸಕ್ತರ ಗಮನ ಸೆಳೆದ ಲಂಕೇಶರು ೧೯೭೩ರಲ್ಲಿ 'ತಲೆಮಾರು' ಎಂಬ ಕವನ ಸಂಕಲನ ಹೊರತಂದರು. ಇವೆಲ್ಲ ಪದ್ಯಗಳನ್ನು ಒಳಗೊಂಡು, ೧೯೮೦ರ ನಂತರದ ಕವನಗಳು ಹಾಗೂ ವಿದ್ಯಾರ್ಥಿಯಾಗಿ ಬರೆದ ಕವನಗಳನ್ನು ಸೇರಿಸಿದ 'ಚಿತ್ರ ಸಮೂಹ' ಕವನ ಸಂಕಲನ ಬಂದುದು ೧೯೯೯ರಲ್ಲಿ. ಅಂದರೆ ಅವರ ಬದುಕಿನ ಅಂತಿಮ ವರ್ಷದಲ್ಲಿ. ಈ ಕವನ ಸಂಕಲನದ ಮುನ್ನುಡಿಯಲ್ಲಿ ಲಂಕೇಶರು ಕೆಲಮಾತುಗಳನ್ನು ಬರೆಯುತ್ತಾರೆ. ಅದು ಅವರ ವ್ಯಕ್ತಿತ್ವ, ಬರವಣಿಗೆಯ ಸಮಗ್ರ ಚಿತ್ರಣವನ್ನು ಕೊಡಬಲ್ಲದು:

> "...ಒಬ್ಬನ ವ್ಯಕ್ತಿತ್ವ ಕಾವ್ಯಕ್ಕೆ ಇಡಿಯಾಗಿ ಬೇಕು; ಅದು ಪ್ರಬಂಧ, ವರದಿ, ತಮಾಷೆ ಇತ್ಯಾದಿಯಲ್ಲಿ ಹರಿದು ಹಂಚಿಹೋಗಬಾರದು ಎನ್ನುವವರಿದ್ದಾರೆ. ಎಲಿಯಟ್ ಹಾಗೆ ನಂಬಿದ್ದ. ಆದರೆ ನನ್ನ ಬದುಕನ್ನು ಸಾಗಿಸಲು ನನ್ನ ಕಾಲಕ್ಕೆ ಸ್ಪಂದಿಸಿ ಎಲ್ಲ ರೀತಿಯದನ್ನೂ ಬರೆಯಬೇಕಾಯಿತು. ಅದರಿಂದ ನನ್ನ ಬರೆಯುವ ಸಂತೋಷ ಕಡಿಮೆಯಾಗಲಿಲ್ಲ. ಟೆನಿಸನ್, ಸ್ವಿನ್‌ಬರ್ಗ್ ತರಹದ ಪ್ರಸಿದ್ಧ ಕಾವ್ಯಜೀವಿಗಳೇ ಮಂಕಾಗಿದ್ದಾರೆ; ಗದ್ಯ, ಪದ್ಯ ಎಲ್ಲ ಬರೆದ ಪುಷ್ಕಿನ್ ಇವತ್ತಿಗೂ ಜೀವಂತವಾಗಿ ಅರ್ಥ ಹೊಮ್ಮಿಸುತ್ತಾನೆ. ಬರೆಯುವ ಪ್ರಾಮಾಣಿಕತೆ ಮುಖ್ಯವೇ ಹೊರತು ಪ್ರಕಾರಗಳಲ್ಲಿ ಪರಿಶುದ್ಧತೆ ಅಲ್ಲ ಅನ್ನಿಸುತ್ತದೆ.'

ಲಂಕೇಶರ ಕೊನೆಯ ಕವನ ಸಂಕಲನದಲ್ಲಿ ಕೆಲವೇ ಕೆಲವು 'ನೀಲು' ಪದ್ಯಗಳಿವೆ. ಕೆಲವೇ ಸಾಲಿನ, ಚುಟುಕದಂತಿರುವ ಈ ಪದ್ಯಗಳ ಸಂಕಲನವನ್ನು ಯಾರಾದರೂ ಹೊರತರುವ ಪ್ರಯತ್ನ ಮಾಡಿದರೆ, ಸಾಹಿತ್ಯಲೋಕಕ್ಕೆ ಅದು ದೊಡ್ಡ ಕೊಡುಗೆ ಆಗಬಲ್ಲದು. ಖ್ಯಾತ ಸಾಹಿತಿ ಚದುರಂಗರೇ ಒಂದು ಕಡೆ ಹೇಳುತ್ತಾರೆ: 'ಲಂಕೇಶ್ ಪತ್ರಿಕೆಯಲ್ಲಿ ನೀಲು ಎಂಬ ಹೆಸರಿನಲ್ಲಿ ನಿರಂತರವಾಗಿ ಬರುತ್ತಿರುವ ಚುಟುಕ ಕವನಗಳು ವಿಶಿಷ್ಟ ಬಗೆಯ ಕಾವ್ಯಪ್ರಕಾರವನ್ನು ಬೆಳೆಸುತ್ತಿರುವಂತೆ ಭಾಸವಾಗುತ್ತದೆ. ಅವು ಲಂಕೇಶರ ಸೃಜನಶೀಲತೆಯ ಕಾವು ಕುಂದದಂತೆ ಕಾಪಾಡುವ ಪರಿಕರಗಳಾಗಿಯೋ ಅಥವಾ ಲಂಕೇಶರ ಸೃಜನಶೀಲ ಶಕ್ತಿ ಹೊಸ ಹೊರಳುವಿಕೆಯನ್ನು ಪಡೆದುಕೊಳ್ಳುವ ಫಲಗಳೋ ಎಂದು ಹೇಳುವುದು ಕಷ್ಟ.

* * *

ತಮ್ಮ ೨೮ನೇ ವಯಸ್ಸಿನಲ್ಲಿ ಮೊದಲ ಕಥಾಸಂಕಲನ 'ಕೆರೆಯ ನೀನು ಕೆರೆಗೆ ಚೆಲ್ಲಿ' ಹೊರತಂದ ಲಂಕೇಶರು ಕನ್ನಡದ ಸಣ್ಣ ಕಥಾಲೋಕದಲ್ಲಿ ಹೊಸ ಸಂವೇದನೆಗೆ ಕಾರಣವಾಗಿರುವುದು ಈಗ ಇತಿಹಾಸ. ಈ ಸಂಕಲನದಿಂದ ತಮ್ಮ ಕೊನೆಯ 'ಉಲ್ಲಂಘನೆ ಮತ್ತು ಇತರ ಕತೆಗಳು'ವರೆಗೆ ಐವತ್ತಕ್ಕೂ ಹೆಚ್ಚು ಕತೆಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ ಲಂಕೇಶರು ತಮ್ಮ ಕತೆಗಳಿಗೆ ಕಾವ್ಯ ಹಾಗೂ ಸಂಕ್ಷಿಪ್ತತೆಯ ಮೆರುಗನ್ನು ನೀಡಿದರು. ಹೆಚ್ಚು ಮಾತು ಬೆಳೆಸದೆ, ಪದಗಳ 'ದುರ್ಬಳಕೆ' ಮಾಡದೆ, ಹೇಳಬೇಕಾದ್ದನ್ನು ಕಡಿಮೆ ಶಬ್ದಗಳಲ್ಲಿ ಹೆಚ್ಚು ಅರ್ಥಪೂರ್ಣವಾಗಿ ಹೇಳುವ ಕಲೆ ಲಂಕೇಶರಿಗೆ ಆರಂಭದ ಕತೆಗಳಿಂದಲೂ ಲಭಿಸಿದೆ. ತಮ್ಮ ಗದ್ಯದ ಈ ಗುಣವನ್ನು ಲಂಕೇಶ್ ರೂಢಿಸಿಕೊಂಡ ಬಗ್ಗೆ ಒಂದು ಚಿಕ್ಕ ಘಟನೆಯಿದೆ.

ಇಂಟರ್ ಮೀಡಿಯಟ್‌ನಲ್ಲಿ ಓದುತ್ತಿದ್ದಾಗ ಕಾಲೇಜಿನ 'ಸಾಹಿತ್ಯ ಸಂಘ'ದ ಕಾರ್ಯದರ್ಶಿಯಾಗಿ ಚುನಾಯಿತರಾದ ಲಂಕೇಶರು ಹಲವು ಸಾಹಿತಿಗಳಿಗೆ ಪತ್ರ ಬರೆದು ತಮ್ಮ ಸಂಘಕ್ಕೆ ಬಂದು ಮಾತನಾಡುವಂತೆ ಆಹ್ವಾನಿಸಿದರು. ಅ.ನ.ಕೃ. ಇವರ ಪತ್ರಕ್ಕೆ ಉತ್ತರ ಬರೆದು ಬರುವ ದಿನಾಂಕವನ್ನು ನಿಗದಿ ಮಾಡಿ ಟೆಲಿಗ್ರಾಂ ನೀಡಿದ್ದರು. ಅದೇ ಮೊದಲ ಬಾರಿಗೆ ಲಂಕೇಶರಿಗೆ ಟೆಲಿಗ್ರಾಂ ಏನೆಂದು ತಿಳಿದದ್ದು. ಅನಕೃ ಬರುವ ವೇಳೆ, ಟ್ರೇನು ವಿವರ, ಉಳಿದುಕೊಳ್ಳುವ ಜಾಗ, ಭಾಷಣದ ಸಮಯ ಇತ್ಯಾದಿ ವಿವರ ಬರೆದು ಮರು ಟೆಲಿಗ್ರಾಂ ನೀಡಲು ಹೋದರೆ ಅಲ್ಲಿನ ಗುಮಾಸ್ತ ಎಲ್ಲವನ್ನೂ ಓದಿ, 'Start Monday mail Waiting at station' ಇಷ್ಟೇ ಸಾಕೆಂದು ಹೇಳಿದನಂತೆ; ಹೌದಲ್ಲವೆ? ಉಳಿದದ್ದು ಅತಿಥಿಗಳು ಬಂದ ಮೇಲೆ ತಿಳಿಸಬಹುದಲ್ಲವೆ? ಎಂಬುದು ಲಂಕೇಶರನ್ನು ಗಾಢವಾಗಿ ತಟ್ಟಿತಂತೆ. ಆಗಲೇ ಅವರು ಹೆಚ್ಚು ಪದಗಳು ಅನಗತ್ಯ ಹಾಗೂ ದುಬಾರಿ ಎಂದು ಯೋಚಿಸತೊಡಗಿದರಂತೆ; ಅಂದಿನಿಂದಲೇ ಸಂಕ್ಷಿಪ್ತತೆಯ ಬಗ್ಗೆ, ಸಂಕ್ಷಿಪ್ತ ಕತೆ ಅಥವಾ ಕವನದಲ್ಲಿ ಲಯಬದ್ಧತೆಯನ್ನು ಸಾಧಿಸಿಯೂ ಹೇಳಬೇಕಾದ್ದನ್ನು ಹೇಳುವ ಅವಶ್ಯಕತೆಯ ಬಗ್ಗೆ ತಮಗೆ ಯೋಚನೆ ಶುರುವಾಯಿತು ಎಂದು ಲಂಕೇಶರು ಹೇಳುತ್ತಾರೆ.

ಲಂಕೇಶರ ಎರಡನೆ ಕಥಾಸಂಕಲನ 'ನಾನಲ್ಲ' (೧೯೭೦) ಖ್ಯಾತ ಕವಿ ಗೋಪಾಲಕೃಷ್ಣ ಅಡಿಗರ ಮುನ್ನುಡಿಯೊಂದಿಗೆ ಪ್ರಕಟವಾದಾಗ ನವ್ಯಸಾಹಿತ್ಯಲೋಕ ಬೆರಗಿನಿಂದ ನೋಡುವಂತಾಯಿತು. ಲಂಕೇಶರ ಗದ್ಯ ಬರಹದಲ್ಲಿ ಇರುವ ಕಾವ್ಯಗುಣ, ಅದಕ್ಕಿಂತ ಮುಖ್ಯವಾಗಿ ಎಲ್ಲ ಹಳೆಯ ಸಂಪ್ರದಾಯಗಳನ್ನು ಬದಿಗೊತ್ತಿ, ಹೊಸ ರೀತಿಯಲ್ಲಿ ಬರೆಯುವ ಲಂಕೇಶರ ಸೃಜನಶೀಲತೆಯನ್ನು ಅಡಿಗರು ತಮ್ಮ ಮುನ್ನುಡಿಯಲ್ಲಿ ಎಳೆಎಳೆಯಾಗಿ ಬಿಡಿಸಿದ್ದರು.

ಈ ಕಥಾಸಂಕಲನದಲ್ಲಿ ಬರುವ 'ರೊಟ್ಟಿ' ಕತೆಯನ್ನು '...ಕನ್ನಡ ಸಾಹಿತ್ಯದಲ್ಲೇ ಒಂದು ಅತ್ಯುತ್ತಮ ಸಣ್ಣಕತೆ ಎನ್ನಬೇಕು. ಈ ಕಥೆ ಲಂಕೇಶರ ಕಲೆಗಾರಿಕೆಯಲ್ಲಿ ಒಂದು ಹೊಸ ಮೈಲಿಗಲ್ಲು ಎಂದು ಹೇಳಬಹುದು...' ಎಂದು ಅಡಿಗರು ಬರೆದರು. ನಿಜ. 'ನಾನಲ್ಲ' ಕನ್ನಡ ಸಣ್ಣಕಥಾಲೋಕದಲ್ಲಿ ಒಂದು ಮೈಲಿಗಲ್ಲಾಗಿ ನಿಂತ ಕೃತಿ... ಇಂದಿಗೂ ಬಿಚ್ಚು ಕವನ ಸಕಂಲನದ 'ಅವ್ವ' ಕವನ ಹಾಗೂ 'ನಾನಲ್ಲ' ಕಥಾಸಂಕಲನದ 'ರೊಟ್ಟಿ' ಕನ್ನಡ ಸಾಹಿತ್ಯಲೋಕದಲ್ಲಿ ವಿಶಿಷ್ಟವಾಗಿಯೇ ನಿಲ್ಲುತ್ತವೆ.

ಮೂರು ವರ್ಷಗಳ ನಂತರ ಬಂದ 'ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ', ೧೯೯೦ರಲ್ಲಿ ಪ್ರಕಟವಾದ 'ಕಲ್ಲು ಕರಗುವ ಸಮಯ', ೧೯೯೬ರಲ್ಲಿ ಹೊರಬಂದ 'ಉಲ್ಲಂಘನೆ ಮತ್ತು ಇತರ ಕತೆಗಳು' ಲಂಕೇಶರ ಉಳಿದ ಕಥಾಸಂಕಲನಗಳು. ಇದರಲ್ಲಿ 'ಕಲ್ಲು ಕರಗುವ ಸಮಯ' ಕೃತಿ ರಾಜ್ಯದ, ರಾಷ್ಟ್ರದ ವಿವಿಧ ಪ್ರಶಸ್ತಿಗಳ ಗೌರವಕ್ಕೆ ಪಾತ್ರವಾಯಿತು. ಕರ್ನಾಟಕ ಸಾಹಿತ್ಯ ಅಕಾಡೆಮಿಯು ೧೯೮೭ರಲ್ಲಿ ಲಂಕೇಶರಿಗೆ ಗೌರವ ಪ್ರಶಸ್ತಿ ನೀಡಿದರೆ, ೧೯೯೪ರಲ್ಲಿ 'ಕಲ್ಲು ಕರಗುವ ಸಮಯ' ಕೃತಿಗೆ ಆ ವರ್ಷದ ಅತ್ಯುತ್ತಮ ಪುಸ್ತಕ ಪ್ರಶಸ್ತಿ ನೀಡಿ ಗೌರವಿಸಿತು. ಅದೇ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಬಂತು (೧೯೯೪). ಅಲ್ಲದೆ ಇದೇ ವರ್ಷದಲ್ಲಿ ಎರಡು ಪ್ರತಿಷ್ಠಿತ ಪ್ರಶಸ್ತಿಗಳು-ರಾಷ್ಟ್ರೀಯ ಭಾವೈಕ್ಯತಾ ಪ್ರಶಸ್ತಿ ಹಾಗೂ ಶಿವರಾಮ ಕಾರಂತ ಪ್ರತಿಷ್ಠಾನದ ಪ್ರಶಸ್ತಿಯ ಗೌರವವೂ ಲಂಕೇಶರಿಗೆ ದೊರಕಿತು. 'ಕಲ್ಲು ಕರಗುವ ಸಮಯ'ದ ಕತೆಗಳಲ್ಲಿ '...ಬದುಕಿನ ಸಾಫಲ್ಯ, ವೈಫಲ್ಯಗಳ ಧ್ಯಾನವೇ ಈ ಕಥೆಗಳ ಮೂಲಭಿತ್ತಿಯಾಗಿದೆ. ಈ ಧ್ಯಾನದ ಹಿಂದೆ ಪ್ರಬಲಶಕ್ತಿಗಳಾದ ಟಾಲ್‌ಸ್ಟಾಯ್ ಮತ್ತು ಗಾಂಧೀಜಿ ಇದ್ದಾರೆ. ಇಲ್ಲಿ ಕಥೆಗಾರರ ಕಲೆಯ ಎತ್ತರವನ್ನು ಟಾಲ್‌ಸ್ಟಾಯ್ ಕಾಯ್ದುಕೊಂಡರೆ, ಸಾಮಾಜಿಕ ತಿಳಿವಳಿಕೆಯನ್ನು ಗಾಂಧೀಜಿ ಅವರು ಕಾಯ್ದುಕೊಳ್ಳುತ್ತಾರೆ...' ಎಂದು ವಿಮರ್ಶಕರು ಗುರುತಿಸಿದ್ದಾರೆ.

ಲಂಕೇಶರ ಮೇಲೆ ಟಾಲ್‌ಸ್ಟಾಯ್ ಹೇಗೆ ಪ್ರಭಾವಿತರಾಗಿದ್ದರು ಎಂಬುದನ್ನು ಅವರೇ ಹೇಳಿಕೊಂಡಿರುವುದನ್ನು ಹಿಂದೆ ಹೇಳಲಾಗಿದೆ. ಹಾಗೇ ಅವರಿಗೆ ಗಾಂಧೀಜಿ ಸದಾ ಎಚ್ಚರಿಸುವ ಚೇತನವೂ ಆಗಿದ್ದರು. ಅವರ 'ಬಿಚ್ಚು' ಕವನದ ನಾಲ್ಕು ಸಾಲುಗಳನ್ನು ನೋಡಿ:

> ಬಿಚ್ಚಿದರೆ ಬಿಚ್ಚಬೇಕಯ್ಯ ಋಷಿಗಳ ಹಾಗೆ ಸೂಕ್ಷ್ಮವಾಗಿ
> ಚಕ್ರವರ್ತಿ ಚರಿತ್ರೆಯಲ್ಲಿ ಬಿಚ್ಚುವ ಹಾಗೆ ತೀವ್ರವಾಗಿ,
> ಪಂಡಿತನ ಹಾಗೆ ಗಂಭೀರವಾಗಿ,
> ಗಾಂಧೀಜಿಯ ಹಾಗೆ ಮೌನವಾಗಿ
> ಅಲ್ಲ, ನಾಯಿಯ ಹಾಗೆ ನಿಧಾನವಾಗಿ...

ಬಹುಶಃ ಗಾಂಧೀಜಿ ನೈತಿಕ ಪ್ರಜ್ಞೆ ಮತ್ತು ಚಲನಶೀಲತೆಯ ಭಾಗವೇ ಆಗಿ ಲಂಕೇಶರ ಮೇಲೆ ಪ್ರಭಾವ ಬೀರಿದ್ದರು. ಯಾಕೆಂದರೆ ಅವರ ಹಲವು ಬರವಣಿಗೆಗಳಲ್ಲಿ ಮಾತ್ರವಲ್ಲ, ಅವರ ಪತ್ರಿಕೋದ್ಯಮದಲ್ಲೂ ಸದಾ ಗಾಂಧೀಜಿ ಕಾಣಿಸಿಕೊಳ್ಳುತ್ತಿದ್ದರು.

* * *

ಖ್ಯಾತ ರಂಗವಿಮರ್ಶಕ ಕೆ. ಮರುಳಸಿದ್ಧಪ್ಪನವರು ಬರೆದ ಒಂದು ಮಾತನ್ನು ಇಲ್ಲಿ ನೆನಪಿಸಲೇಬೇಕಾಗುತ್ತದೆ. ಇದು ನಾಟಕಕಾರ ಲಂಕೇಶರನ್ನು, ಆಧುನಿಕ ಕನ್ನಡ ರಂಗಭೂಮಿಯ ಸುವರ್ಣ ದಿನಗಳನ್ನು ದಾಖಲಿಸುವ ಸಂಗತಿ ಕೂಡ.

> '...ಲಂಕೇಶರು ಸಾಮಾನ್ಯವಾಗಿ ಒಂದು ಹೊಸ ನೆಲೆಗೆ ತಲುಪುವುದಕ್ಕೆ ಮುಂಚೆ ಇಂಥ ಕೆಲವು crisisಗಳು ಏರ್ಪಡುತ್ತವೆ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಆಗ ಪ್ರದರ್ಶಿತವಾದ ಒಂದು ನಾಟಕವನ್ನು ನೋಡಿ ಅವರಿಗೆ ಎಷ್ಟು ಬೇಸರ ಮತ್ತು ಅತೃಪ್ತಿಯಾಯಿತೆಂದರೆ ಅವರು ಮಾರನೆಯ ದಿವಸವೇ 'ಟಿ. ಪ್ರಸನ್ನನ ಗೃಹಸ್ಥಾಶ್ರಮ' ನಾಟಕವನ್ನು ಬರೆದೆ ಎಂದು ಹೇಳಿದರು. ಇದು ಅವರ ವಿಶಿಷ್ಟವಾದ ಗುಣ. ಅವರಿಗೆ ಅತೃಪ್ತಿ ಮತ್ತು restlessness ಆದಾಗಲೆಲ್ಲ ಸೃಜನಶೀಲವಾಗಿ ಮತ್ತು active ಆಗಿ ಅದಕ್ಕೆ ಪ್ರತಿಕ್ರಿಯಿಸುತ್ತಾರೆ. ಇದರಿಂದ ಕನ್ನಡ ರಂಗಭೂಮಿಗೆ ದೊಡ್ಡ ಲಾಭವಾಯಿತು. ಅವರು ಒಂಬತ್ತು ಶ್ರೇಷ್ಠ ನಾಟಕಗಳನ್ನು ಕೊಟ್ಟಿರುವುದರ ಜೊತೆಗೆ ಮಾಡಿದ ಇನ್ನೊಂದು ಉತ್ತಮವಾದ ಕೆಲಸ ರಂಗಭೂಮಿಯ ದೃಷ್ಟಿಯಿಂದ ಕನ್ನಡದಲ್ಲಿ, ಅದರಲ್ಲೂ ವಿಶೇಷವಾಗಿ ಬೆಂಗಳೂರಿನಲ್ಲಿ ಆಧುನಿಕ ರಂಗಭೂಮಿಯ ಚಳವಳಿಯನ್ನು ಬೆಳೆಸಿದ್ದು...'

೧೯೬೨ ರಿಂದ ೧೯೭೦ರ ವರೆಗೆ ಒಂದಾದ ಮೇಲೊಂದರಂತೆ ಏಳು ಏಕಾಂಕ ನಾಟಕಗಳನ್ನು ಬರೆದ ಲಂಕೇಶರು ಆಧುನಿಕ ಕನ್ನಡ ರಂಗಭೂಮಿಯಲ್ಲಿ ಹೊಸಗಾಳಿ ಬೀಸುವಂತೆ ಮಾಡಿದರು. 'ಟಿ. ಪ್ರಸನ್ನನ ಗೃಹಸ್ಥಾಶ್ರಮ' ನಾಟಕದಿಂದ ಮೊದಲುಗೊಂಡು, 'ನನ್ನ ತಂಗಿಗೊಂದು ಗಂಡು ಕೊಡಿ', 'ಸಿದ್ಧತೆ', 'ಗಿಳಿಯು ಪಂಜರದೊಳಿಲ್ಲ', 'ಪೋಲೀಸರಿದ್ದಾರೆ ಎಚ್ಚರಿಕೆ', 'ತೆರೆಗಳು', 'ಕ್ರಾಂತಿ ಬಂತು ಕ್ರಾಂತಿ'. ಮೊದಲ ನಾಲ್ಕು ನಾಟಕಗಳು ಕುಟುಂಬ ಕೇಂದ್ರಿತ ಬದುಕಿನಲ್ಲಿ ವ್ಯಕ್ತಿಯ ಗೊಂದಲ, ದ್ವಂದ್ವ, ಅಸ್ವಸ್ಥತೆಯನ್ನು ಮೂಲವಾಗಿಟ್ಟುಕೊಂಡು ಬರೆದಂಥವು. ಆದರೆ ನಂತರದ ಮೂರು ನಾಟಕಗಳು ವ್ಯಕ್ತಿಯ ಖಾಸಗಿ ಬದುಕು ಅಮೂಲ್ಯವಾದುದು, ಅದನ್ನು ರಕ್ಷಿಸಬೇಕು ಎಂಬ ತಹತಹದ ನೆಲೆಯಲ್ಲಿ ರಚಿತವಾದಂಥವು.

ಲಂಕೇಶರು ಬರೀ ನಾಟಕ ಬರೆದು ಕೂತವರಲ್ಲ. ಅದನ್ನು ರಂಗಪ್ರಯೋಗಕ್ಕೂ ಅಳವಡಿಸಲು ಯತ್ನಿಸಿದವರು ಇವರು ನಾಟಕ ಬರೆಯುವ ಸಂದರ್ಭದಲ್ಲಿ ಆಧುನಿಕ ರಂಗಭೂಮಿ ತುಸು ಜಡಗೊಂಡಿತ್ತು. 'ಪ್ರತಿಮಾ ನಾಟಕರಂಗ' ಎಂಬ ತಂಡ ಕಟ್ಟಿ ಅದರ ಬೆನ್ನುಲುಬಾಗಿ ನಿಂತವರೇ ಲಂಕೇಶ್. ಖ್ಯಾತ ರಂಗಕರ್ಮಿ ಬಿ.ವಿ. ಕಾರಂತರನ್ನು ದೆಹಲಿಯಿಂದ ಕರೆಸಿ, ನಿರ್ದೇಶನ ಮಾಡಿಸಿ, ಒಂದು ರಂಗೋತ್ಸವವನ್ನೇ ನಡೆಸಿದ ಲಂಕೇಶ್, ಸ್ವತಃ ತಾವೇ ನಟಿಸಿದ್ದೂ ಇದೆ.

೧೯೭೧ರಲ್ಲಿ ಲಂಕೇಶ್ 'ಸಂಕ್ರಾಂತಿ' ಬರೆದಾಗ ಕನ್ನಡ ರಂಗಭೂಮಿಯಲ್ಲಿ ವಿಶಿಷ್ಟವಾದ ಮಿಂಚಿನ ಸಂಚಾರವಾಯಿತೆಂದು, ಲಂಕೇಶರ ಯೋಚನಾಲಹರಿ ಬೇರೆ ರೀತಿಯದೇ ಆಯಿತೆಂದು ಖ್ಯಾತ ಬರಹಗಾರ ಯು.ಆರ್. ಅನಂತಮೂರ್ತಿ ಗುರುತಿಸುತ್ತಾರೆ. ಕರ್ನಾಟಕದ ಮಟ್ಟಿಗೆ ಅತಿಮುಖ್ಯವಾದ ಹನ್ನೆರಡನೆಯ ಶತಮಾನದ ಬಸವಣ್ಣನ ಸಾಮಾಜಿಕ ಕ್ರಾಂತಿಯನ್ನು ಹಿನ್ನೆಲೆಯಾಗಿಟ್ಟುಕೊಂಡು ರಚಿತವಾದ 'ಸಂಕ್ರಾಂತಿ' ಇಂದಿಗೂ ಚರ್ಚಿತವಾಗುತ್ತಲೇ ಇರುವ ನಾಟಕ. ಬಹುಶಃ ಕಾರ್ನಾಡರ 'ತುಘಲಕ್' ಮತ್ತು ಲಂಕೇಶರ 'ಸಂಕ್ರಾಂತಿ' ಕನ್ನಡ ರಂಗಭೂಮಿಯ ಮಟ್ಟಿಗೆ ಸದಾ ಹೊಸ ಹೊಸ ಸಂವೇದನೆಗಳನ್ನು, ಪ್ರಶ್ನೆಗಳನ್ನು ಎತ್ತುತ್ತಲೇ ಇರುವ ಕೃತಿಗಳು. ಹಾಗೆ ಸಾಹಿತ್ಯಕವಾಗಿಯೂ ಅಮೂಲ್ಯವಾದ ಕೊಡುಗೆಗಳು.

'ಸಂಕ್ರಾಂತಿ'ಯ ನಂತರ ರಂಗಭೂಮಿಯ ಸಂಬಂಧವನ್ನು ಸಂಪೂರ್ಣವಾಗಿ ಕಡಿದುಕೊಂಡ ಲಂಕೇಶರು ಸಿನಿಮಾ, ಪತ್ರಿಕೋದ್ಯಮದತ್ತ ತಮ್ಮನ್ನು ತೊಡಗಿಸಿಕೊಂಡರು. ಇಪ್ಪತ್ತೆರಡು ವರ್ಷಗಳ ನಂತರ ಅಂದರೆ ೧೯೯೩ರಲ್ಲಿ ಅವರು ಬರೆದ 'ಗುಣಮುಖ' ಮತ್ತೆ ಅವರನ್ನು ರಂಗಭೂಮಿಗೆ ಕರೆತಂದರೂ, ರಂಗಭೂಮಿಯಾಗಲೇ ಆಧುನಿಕ ಮಾಧ್ಯಮಗಳ ದೆಸೆಯಿಂದ ಚೆದುರಿಹೋಗಿತ್ತು.

* * *

ಲಂಕೇಶರ ನಾಟಕಗಳನ್ನು ಚರ್ಚಿಸುವಾಗಲೇ ಅವರ ಬಹುಮುಖ್ಯ ಕೃತಿಯಾದ 'ಈಡಿಪಸ್ ಮತ್ತು ಅಂತಿಗೊನೆ' ಪ್ರಸ್ತಾಪ ಆಗಲೇಬೇಕು. ಇದು ಎರಡು ಕಾರಣಗಳಿಗಾಗಿ- ಒಂದು, ಗ್ರೀಕ್ ರುದ್ರನಾಟಕ ಎಂಬುದಾದರೆ, ಎರಡನೆಯದು ಕನ್ನಡದಲ್ಲಿ ಅದು ಸಮರ್ಥವಾಗಿ, ಅತ್ಯುತ್ತಮವಾಗಿ ಅನುವಾದಗೊಂಡ ರೀತಿಯಿಂದ. ಗ್ರೀಕ್ ನಾಟಕಗಳ ಅನುವಾದವೆಂದರೆ ಜೇನುಗೂಡಿಗೆ ಕೈಹಾಕಿದಂತೆ! ಅದುವರೆಗೆ ಹೊಸಗನ್ನಡವಲ್ಲಿ ಗ್ರೀಕ್ ನಾಟಕವೊಂದು ಅನುವಾದ ಆಗಿರಲಿಲ್ಲ. 'ಇದನ್ನು ಸರಿಗಟ್ಟುವ ಅನುವಾದಿತ ನಾಟಕಗಳು ಕನ್ನಡದಲ್ಲಿ ಇಲ್ಲ...' ಎಂಬ ಮಾತೂ ಇದೆ. ಅಲ್ಲದೆ ಈ ನಾಟಕಗಳ ಅನುವಾದದ ನಂತರ ಅದನ್ನೇ ಮಾದರಿಯಾಗಿಟ್ಟುಕೊಂಡು ಹಲವು ಅನುವಾದಿತ ನಾಟಕಗಳು ಕನ್ನಡದಲ್ಲಿ ಬಂದವು. ಶೇಕ್ಸ್‌ಪಿಯರ್ ಮತ್ತು ಗ್ರೀಕ್ ನಾಟಕಗಳ ಅತ್ಯುತ್ತಮ ಅನುವಾದಗಳು ಬರಲು ಕಾರಣವಾದುದು, ಲಂಕೇಶರ ಉತ್ತಮ ಅನುವಾದದ ಫಲವಾಗಿ ಅನ್ನುವವರೂ ಇದ್ದಾರೆ.

ಸಾಫೋಕ್ಲಿಸನ ಈ ರುದ್ರನಾಟಕದ ಅನುವಾದದ ಕುರಿತು, ರಂಗನಟ ಹಾಗೂ ಇಂಗ್ಲಿಷ್ ಪ್ರಾಧ್ಯಾಪಕ ಜಿ.ಕೆ. ಗೋವಿಂದರಾವ್ ಒಂದು ಮಾತು ಹೇಳಿದ್ದಾರೆ: 'ಲಂಕೇಶರು 'ಈಡಿಪಸ್' ನಾಟಕವನ್ನು ರಂಗಪ್ರಜ್ಞೆ, ರಂಗಭಾಷೆ ಮತ್ತು ಕಾವ್ಯಪ್ರಜ್ಞೆ ಈ ಮೂರನ್ನೂ ಒಳಗೊಳಿಸಿ ಅನುವಾದಿಸಿದ್ದಾರೆ. Sense of theatre and sense of poetry ಇವೆರಡೂ ಇದ್ದವರಿಗೆ ಮತ್ತು ಸಾಫೋಕ್ಲಿಸ್ ಬಗ್ಗೆ ಪ್ರೇಮ ಇದ್ದವರಿಗೆ ಮಾತ್ರ ಈ ಅನುವಾದಗಳ ಅನನ್ಯತೆ ಅರ್ಥವಾಗುತ್ತದೆ.'

ಈಡಿಪಸ್ ಮತ್ತು ಅಂತಿಗೊನೆ ರಂಗದ ಮೇಲೆ ಪ್ರಯೋಗವಾದಾಗಲೆಲ್ಲ ಅದು ನೋಡುಗನನ್ನು ಆವರಿಸುವ ಕ್ರಿಯೆಯಿಂದ ಹೊರಬರಲು ಕೆಲವು ದಿನಗಳೇ ಬೇಕಾಗುತ್ತಿದ್ದವು ಎಂದು ರಂಗನಟರೊಬ್ಬರು ಬರೆದದ್ದು, ಕೇವಲ ನಾಟಕ ಕಟ್ಟಿಕೊಡುವ ಅನುಭಾವದಿಂದಲ್ಲ, ಅದರ ಭಾಷೆಯ ಗಟ್ಟಿತನದಿಂದ. ಇವತ್ತಿಗೂ ಅನುವಾದಿತ ಈಡಿಪಸ್ ಮತ್ತು ಅಂತಿಗೊನೆ ಕನ್ನಡದ ಶ್ರೇಷ್ಠ ನಾಟಕವಾಗಿಯೇ ಉಳಿದಿವೆ.

* * *

ಲಂಕೇಶರಿಂದ ಅನುವಾದಗೊಂಡ ಮತ್ತೊಂದು ಅತ್ಯುತ್ತಮ ಕೃತಿಯೆಂದರೆ ಬೋದಿಲೇರನ 'ಪಾಪದ ಹೂವುಗಳು'. ತಮ್ಮ ಅತ್ಯಂತ ನೋವಿನ ಗಳಿಗೆಯಲ್ಲಿ ಬೋದಿಲೇರ್‌ನ ಅನುವಾದ ಮಾಡಿರುವುದಾಗಿ ಲಂಕೇಶರೇ ಹೇಳಿದ್ದಾರೆ. ತನ್ನ ಬದುಕಿನೊಳಗೇ 'ಬಂಡಾಯಗಾರನಾಗಿ' ಬದುಕಿದ ಬೋದಿಲೇರನ ಆತಂಕಗಳಿಗೂ ತಮ್ಮ ಆತಂಕಗಳಿಗೂ ಸಾಮ್ಯವಿರುವಂತೆ ಕಂಡುಕೊಳ್ಳುವ, ನೋವಿನ ಗಳಿಗೆಗಳನ್ನು ಅರ್ಥಮಾಡಿಕೊಳ್ಳುವ ಯತ್ನದಲ್ಲಿರುವ ಲಂಕೇಶರು, ಈ ಕೃತಿಯ ಮೂಲಕ ಕನ್ನಡಕ್ಕೆ ವಿಶಿಷ್ಟ ಚಿಂತನೆಯನ್ನು ನೀಡಿದ್ದಾರೆ ಎನ್ನುವುದು ವಿಮರ್ಶಕರ ಮಾತು.

ಬೋದಿಲೇರನ ಕಾವ್ಯ ಮತ್ತು ಲಂಕೇಶರ ಅನುವಾದದ ಕುರಿತು ಜಿ.ಕೆ. ಗೋವಿಂದರಾವ್ ಹೇಳುವ ಮಾತುಗಳು: 'Lankesh has excelled himself in that kind of prose. ಅದು ಲಂಕೇಶ್‌ಗೆ ಹೇಗೆ ಸಾಧ್ಯವಾಗುತ್ತದೆ. ಅಂದರೆ, here is a man, a writer, who is to struggle with two things. ಒಂದು ಬೋದಿಲೇರ್, ಇನ್ನೊಂದು ಸ್ವತಃ ಅವರೇ.

ಇವೆರಡರ, ಇವರಿಬ್ಬರ ಸಾಮ್ಯವನ್ನು ಹೇಳುವ ಗೋವಿಂದರಾವ್ ಬೋದಿಲೇರನ ಪದ್ಯವೊಂದನ್ನು ಲಂಕೇಶರ 'ನೀಲು' ಪದ್ಯದೊಂದಿಗೆ ಹೋಲಿಸುತ್ತಾರೆ.

ಬೋದಿಲೇರ್ ಪದ್ಯ:

> ರಸ್ತೆಯಲ್ಲಿ ಕಿವಿಗಡಚಿಕ್ಕುವ ಸದ್ದು ನನ್ನ ಸುತ್ತ. ಆಗ
> ಹೆಣ್ಣೊಂದು ಹಾದುಹೋಯಿತು. ಎತ್ತರಕ್ಕೆ ತೆಳುವಾಗಿ,
> ಕಪ್ಪು ಉಡುಪಿನಲ್ಲಿ ಗಂಭೀರವಾಗಿ ಶೋಕಿಸುತ್ತ,
> ಮೋಹಕ ಕೈನಿಂದ ಸೆರಗು ಹಿಡಿದುಕೊಂಡು. ಆ ಚುರುಕು
> ಅಡಿಗಳ ಘನವಂತೆಯ ಶಿಲೆಯಂಥ ತೊಡೆ ನನಗೆ
> ಕಾಣಿಸಿಕೊಂಡಿತು.

ನೀಲು ಪದ್ಯ:

ಸಂತೆಯಲ್ಲಿ ಕಂಡವನು
ನನ್ನ ಎದೆಯಲ್ಲಿ ಹತ್ತಿಸಿದ ಕಿಡಿ
ಇಪ್ಪತ್ತು ವರ್ಷಗಳ ತರುವಾಯ
ಕಾಳ್ಗಿಚ್ಚಿನಂತೆ ಸುಡುತ್ತದೆ ಬಲ್ಲೆಯ?

* * *

೧೯೭೦ರ ಮೊದಲ ವರ್ಷಗಳಲ್ಲೇ ಲಂಕೇಶ್ 'ಅಕ್ಷರ ಹೊಸ ಕಾವ್ಯ' ಎಂಬ ಕನ್ನಡಕ್ಕೆ ವಿನೂತನವಾದ ಆಂಥಾಲಜಿಯನ್ನು ತಂದರು. ೧೯೫೦ ರಿಂದ ೧೯೭೦ರ ವರೆಗಿನ ಕಾವ್ಯದಲ್ಲಿನ ಜೀವಂತಿಕೆ ಹುಡುಕುವ ಪ್ರಯತ್ನವಾಗಿ ಸಂಗ್ರಹಿಸಿದ ಆಂಥಾಲಜಿ ಅದು. ಮೈಕೇಲ್ ರಾಬರ್ಟ್ಸ್‌ನ 'ಫೇಬರ್ ಬುಕ್' ಅದಕ್ಕೆ ಮಾದರಿಯಾಗಿತ್ತೆಂದು ಅವರೇ ಹೇಳಿಕೊಳ್ಳುತ್ತಾರೆ. ಲಂಕೇಶರು ಇದು 'ನವ್ಯ'ದ ಪ್ರಾತಿನಿಧಿಕ ಧ್ವನಿ ಎಂದು ಹೇಳದಿದ್ದರೂ ಅದು 'ನವ್ಯ' ಪಂಥದ ಕವಿಗಳ ಧ್ವನಿಯಾಗಿತ್ತು ಮಾತ್ರವಲ್ಲ, ಕನ್ನಡ ಸಾಹಿತ್ಯದಲ್ಲಿ ಹೊಸ ಚೈತನ್ಯ ತಂದಿತ್ತು.

ಲಂಕೇಶರ ಕಾದಂಬರಿಗಳು ಮೂರು. ಬಿರುಕು, ಮುಸ್ಸಂಜೆಯ ಕಥಾಪ್ರಸಂಗ ಹಾಗೂ ಅಕ್ಕ. ೧೯೬೭ರಲ್ಲಿ ಬರೆದ 'ಬಿರುಕು' ಒಂದು ಮಹತ್ವದ ಪ್ರಯೋಗ ಎನ್ನಿಸಿದರೆ ೧೯೭೮ರಲ್ಲಿ ಬರೆದ 'ಮುಸ್ಸಂಜೆಯ ಕಥಾಪ್ರಸಂಗ' ಅದರ ಭಾಷೆ, ಪ್ರಯೋಗಗಳ ನಿರೂಪಣಾ ತಂತ್ರದಿಂದ ವಿಶಿಷ್ಟವೆನಿಸಿದೆ. ತನ್ನತನವನ್ನು ಉಳಿಸಿಕೊಳ್ಳಲು ಸಮಾಜದೊಂದಿಗೆ ನಡೆಸುವ ಹೋರಾಟ ಬಿರುಕು ಕಾದಂಬರಿಯ ವಸ್ತು. ಈ ಕಾದಂಬರಿಯೇ ಲಂಕೇಶರ ಮೊದಲ ಚಿತ್ರ 'ಪಲ್ಲವಿ'ಯ ಕತೆ ಕೂಡ. ಸಮಾಜ ಮತ್ತು ತನ್ನತನದ ನಡುವಿನ 'ಬಿರುಕು' ಹಾಗೂ ತನ್ನೊಳಗೇ ಇರುವ 'ಬಿರುಕು'- ಈ ಗೊಂದಲದ ಕಾದಂಬರಿ ಹೊಸ ಸಂವೇದನೆಗೆ, ಚರ್ಚೆಗೆ, ಚಿಂತನೆಗೆ ವಸ್ತುವಾಗಿತ್ತು.

'ಮುಸ್ಸಂಜೆಯ ಕಥಾಪ್ರಸಂಗ' ಹೆಚ್ಚು ಕಡಿಮೆ ಲಂಕೇಶರು ಕಂಡ ತಮ್ಮ ಊರಿನ ಕತೆ ಎಂದೇ ಹೇಳಬಹುದು. ಅಲ್ಲಿನ ಪಾತ್ರಗಳೂ ಕೂಡ ಲಂಕೇಶ್ ಕಂಡ ಜೀವಂತ ಪಾತ್ರಗಳೇ. ತಮ್ಮ ಮೊದಲ ಕಾದಂಬರಿಯನ್ನು ನವ್ಯದ ಪ್ರಯೋಗಶೀಲತೆಗೆ ಒಡ್ಡಿದ ಲಂಕೇಶರು, 'ಮುಸ್ಸಂಜೆ'ಯಲ್ಲಿ ನವೋದಯ ಹಾಗೂ ನವ್ಯ ಎರಡನ್ನೂ ಮೇಳೈಸಿದ್ದರು. ಲಂಕೇಶರಿಗೆ ಅಪಾರ ಜನಪ್ರಿಯತೆ ತಂದಿತ್ತ 'ಮುಸ್ಸಂಜೆ' ಸಾಹಿತ್ಯಕವಾಗಿಯೂ ಅತ್ಯಂತ ಗಮನಾರ್ಹ ಕೃತಿ.

೧೯೯೧ರಲ್ಲಿ ಬರೆದ 'ಅಕ್ಕ' ಕಾದಂಬರಿ ಹೊಸ ಬಗೆಯ ವಸ್ತುವಿನಿಂದ ಕೂಡಿದ್ದು. 'ಲಂಕೇಶ್ ಪತ್ರಿಕೆ'ಯಲ್ಲಿ ಮೊದಲು 'ಕ್ಯಾತನ ಪಡ್ಡೆ ದಿನಗಳು' ಎಂಬ ಕಾದಂಬರಿ ಪ್ರಕಟವಾಯಿತು. ಆದರೆ ಈ ಕಾದಂಬರಿ ಪೂರ್ಣವಾಗುವ ಮೊದಲೇ ಲಂಕೇಶ್ ಅದನ್ನು ನಿಲ್ಲಿಸಿದರು. ಅದನ್ನೇ ಕೊಂಚ ಬದಲಾಯಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿದ

ಲಂಕೇಶ್ ಅದಕ್ಕೆ 'ಅಕ್ಕ' ಎಂದು ಹೆಸರಿಟ್ಟರು. ಕೊಳಗೇರಿಯ ಹುಡುಗ, ಭ್ರಾಮಕ ಜಗತ್ತಿನ ಹುಡುಗಿಯರ ಸಿನಿಮಾ ಪ್ರಪಂಚ, ಅವರನ್ನು ಸುತ್ತುವರಿದಿರುವ ರಾಜಕಾರಣಿಗಳ, ದಲ್ಲಾಳಿಗಳ, ಗೂಂಡಾಗಳು ಹಾಗೂ ಬೇರೆ ನಿಗೂಢ ವ್ಯಕ್ತಿಗಳು -ಇವರ ಸುತ್ತ ನಡೆಯುವ ಕತೆ. ಬಹುಶಃ ಗ್ರಾಮೀಣ ಮತ್ತು ನಗರದ ಬದುಕು ಎರಡನ್ನೂ ಲಂಕೇಶರಷ್ಟು ಸಮರ್ಥವಾಗಿ ಹಿಡಿದಿಟ್ಟ ಬರಹಗಾರರೇ ಕಡಿಮೆ.

ನಮ್ಮ ಎದುರೇ ಇರುವ ಬಿರುಕು, ಮುಸ್ಸಂಜೆಯ ಕಥಾಪ್ರಸಂಗ, ಅಕ್ಕ ಕಾದಂಬರಿಗಳೇ ಅದಕ್ಕೆ ನಿದರ್ಶನ. ನಗರದ ಮಧ್ಯಮವರ್ಗದ ಬದುಕಿನ ಕತೆ 'ಬಿರುಕು' ಕಾದಂಬರಿಯಲ್ಲಿದ್ದರೆ, ಗ್ರಾಮೀಣ ಸೊಗಡಿನ ಕಾದಂಬರಿ 'ಮುಸ್ಸಂಜೆಯ ಕಥಾಪ್ರಸಂಗ'. ಆದರೆ ನಗರದ ಇನ್ನೊಂದು ಮುಖ ತೋರುವ 'ಅಕ್ಕ' ತೀರಾ ಭಿನ್ನ ವಸ್ತುವಿನ ಕಾದಂಬರಿ.

ಅಂದ ಹಾಗೆ ಲಂಕೇಶರ ಮೂರೂ ಕಾದಂಬರಿಗಳನ್ನೂ ದೃಶ್ಯ ಮಾಧ್ಯಮಕ್ಕೆ ಅಳವಡಿಸಲಾಗಿದೆ. 'ಬಿರುಕು' ಕಾದಂಬರಿಯನ್ನು ಲಂಕೇಶರೇ 'ಪಲ್ಲವಿ'ಯಾಗಿ ನಿರ್ಮಿಸಿದ್ದರು. 'ಮುಸ್ಸಂಜೆಯ ಕಥಾಪ್ರಸಂಗ'ವನ್ನು ಪ್ರಕಾಶ್ ಬೆಳವಾಡಿ ಈ ಟೀವಿ ಕನ್ನಡ ಚಾನಲ್‌ಗೆ ಧಾರಾವಾಹಿಯಾಗಿ ನಿರ್ದೇಶಿಸಿದರು. ಅಕ್ಕ ಕಾದಂಬರಿಯನ್ನು ಲಂಕೇಶರ ಮಗಳು ಕವಿತಾ ಲಂಕೇಶ್ 'ದೇವೀರಿ'ಯಾಗಿ ತೆರೆಗೆ ತಂದರು. ಈ 'ದೇವೀರಿ' ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿ ಗಳಿಸಿದ್ದು ಮಾತ್ರವಲ್ಲ, ಅಂತರರಾಷ್ಟ್ರೀಯ ಮನ್ನಣೆಗೂ ಪಾತ್ರವಾಯಿತು.

ಲಂಕೇಶರ ಕೊನೆಯ ಕಾದಂಬರಿ 'ಅಕ್ಕ' ಅವರ ಮಗಳ ಮೊದಲ ಸಿನಿಮಾ 'ದೇವೀರಿ'ಯಾಗಿ ಯಶಸ್ಸು, ಕೀರ್ತಿ ಪಡೆದದ್ದು ಇನ್ನೊಂದು ವಿಶೇಷ ಸಂಗತಿ ಎನ್ನಬಹುದು. ಅಂದಹಾಗೆ 'ದೇವೀರಿ' ಚಿತ್ರದ ಸಂಭಾಷಣೆ ಬರೆದವರೂ ಲಂಕೇಶರೇ. ಅದಕ್ಕೆ ರಾಜ್ಯಪ್ರಶಸ್ತಿಯೂ ಸಂದಿದೆ.

ಬೆಳ್ಳಿತೆರೆಯ ಆಕರ್ಷಣೆ

ಸಿನಿಮಾ ಲಂಕೇಶರ ತೀವ್ರ ಆಸಕ್ತಿಯನ್ನು ಕೆರಳಿಸಿದ ಇನ್ನೊಂದು ಕ್ಷೇತ್ರ. ಚಿಕ್ಕಂದಿನಿಂದ ಸಿನಿಮಾದ ಮಾಯೆ ಲಂಕೇಶರನ್ನು ಅಪಾರವಾಗಿ ಸೆಳೆದಿತ್ತು. ಹಳ್ಳಿಯಲ್ಲಿ ಬಾಲಕನಾಗಿದ್ದಾಗ ನೋಡುತ್ತಿದ್ದ ಟೆಂಟ್ ಸಿನಿಮಾ, ಶಿವಮೊಗ್ಗೆಯ ಚಿತ್ರಮಂದಿರಗಳಲ್ಲಿ ನೋಡುತ್ತಿದ್ದ ತಾರೆಯರ ಚಿತ್ರಗಳು; ಎಂ.ಎ. ಮಾಡುವಾಗ ನೋಡುತ್ತಿದ್ದ ವಿಶ್ವದ ಶ್ರೇಷ್ಠ ನಿರ್ದೇಶಕರ ಚಿತ್ರಗಳು -ಇವೆಲ್ಲ ಲಂಕೇಶರನ್ನು ಸಿನಿಮಾದತ್ತ ಆಕರ್ಷಿಸಲು ಕಾರಣವಾದವು. ಅದರಲ್ಲೂ ನಟಿಸುವ ಖಯಾಲಿ ಲಂಕೇಶರಿಗೆ ವಿಚಿತ್ರ ಚಟವಾಗಿ ಅಂಟಿಕೊಂಡಿತ್ತು. ಅಲ್ಲದೆ ನಟಿಸುವ ಮೊದಲು ತಾವೊಬ್ಬ ಉತ್ತಮ ನಟನೆಂಬ ಭ್ರಮೆ ಅವರಲ್ಲಿತ್ತಂತೆ.

ಕನ್ನಡದ ಮೊದಲ ಹೊಸ ಅಲೆಯ ಚಿತ್ರ 'ಸಂಸ್ಕಾರ'. ಪಟ್ಟಾಭಿರಾಮರೆಡ್ಡಿ ನಿರ್ದೇಶನ, ಗಿರೀಶ್ ಕಾರ್ನಾಡ್ ಅಭಿನಯ, ಅನಂತಮೂರ್ತಿಯವರ ಕತೆ -ಹೀಗೆ

ಹೊಸ ಮನಸ್ಸಿನ, ಹೊಸ ಯೋಚನೆಯ ಎಲ್ಲರೂ ಸೇರಿ ಆದದ್ದು ಸಂಸ್ಕಾರ. ಆ ಚಿತ್ರದ ಅತಿಮುಖ್ಯ ಪಾತ್ರವಾದ 'ನಾರಣಪ್ಪ'ನನ್ನು ತಮ್ಮ ಪ್ರಭಾವ ಬಳಸಿ ಪಡೆದುಕೊಂಡರಂತೆ. ಆ ಅಳುಕು ಕೊನೆಯವರೆಗೂ ತಮ್ಮಲ್ಲಿ ಉಳಿದಿತ್ತು ಎಂದು ಅವರೇ ಹೇಳಿಕೊಂಡಿದ್ದಾರೆ. ಅಗ್ರಹಾರದ ಬ್ರಾಹ್ಮಣರನ್ನು ಅಣಕಿಸಲು ಗ್ರಾಮಫೋನ್ ಹಾಕಿ ಗದ್ದಲ ಎಬ್ಬಿಸಿ, ಗಲಾಟೆ ಆದಾಗ ಮುಗುಳ್ನಗುವ ಒಂದು ದೃಶ್ಯ. ಆದರೆ ಅಷ್ಟೇ ಚಿಕ್ಕ ದೃಶ್ಯವನ್ನು ಮೊದಲು ಲಂಕೇಶರಿಗೆ ಮಾಡಲಾಗಲಿಲ್ಲವಂತೆ. ಅಂದು ಅವರಿಗೆ ತಾವು ನಟನೇ ಅಲ್ಲ ಅನ್ನಿಸಿಬಿಟ್ಟಿತ್ತು. ಆದರೆ 'ಸಂಸ್ಕಾರ'ದ ಆ ಬಹುಮುಖ್ಯ ಪಾತ್ರವನ್ನು ಕಳೆದುಕೊಳ್ಳಲು ಇಷ್ಟವಿಲ್ಲದೆ ಸಾಕಷ್ಟು ಪ್ರಯತ್ನಪಟ್ಟರಂತೆ. ಬೆಳಿಗ್ಗೆಯೆ ಎದ್ದು ಚಿಕ್ಕ ಸಂಭಾಷಣೆಯನ್ನು ಉರು ಹಚ್ಚುತ್ತಿದ್ದರಂತೆ; ನಟನೆಗೆ ಬೇಕಾದ ಅಭಿನಯ ಕಸರತ್ತನ್ನು ತಾಲೀಮು ಮಾಡುತ್ತಿದ್ದರಂತೆ.

ಅದೇನೇ ಇದ್ದರೂ ತೆರೆಯ ಮೇಲೆ 'ಸಂಸ್ಕಾರ' ಕನ್ನಡ ಚಿತ್ರರಂಗಕ್ಕೆ ವಿಶಿಷ್ಟ ತಿರುವು ನೀಡಿತು. ಬಂಡಾಯಗಾರನ ಇಮೇಜ್ ಪಡೆದಿದ್ದ ಲಂಕೇಶ್ ಸಿನಿಮಾದ ಮೂಲಕ ನಿಜವಾದ ಬಂಡಾಯಗಾರರಾದರು. ಬ್ರಾಹ್ಮಣರನ್ನು ಛೇಡಿಸುವ, ಸಂಪ್ರದಾಯವಾದಿಗಳನ್ನು ಅಣಕಿಸುವ, ಎಲ್ಲದರ ವಿರುದ್ಧ ಸಿಡಿದೇಳುವ ನಾರಣಪ್ಪನ ಪಾತ್ರ ಹಲವು ವಿಧದಲ್ಲಿ ಲಂಕೇಶರ ವ್ಯಕ್ತಿತ್ವವನ್ನೇ ಹೋಲುತ್ತಿದ್ದುದೂ, ಇದಕ್ಕೆ ಇನ್ನಷ್ಟು ಪುಷ್ಟಿ ಒದಗಿಸಿತ್ತು. ಲಂಕೇಶ್ ಸಿಗರೇಟು ಸೇದುವ ಶೈಲಿ, ನಡೆನುಡಿ ಬುದ್ಧಿಜೀವಿಗಳ ವಲಯದಲ್ಲಿ ವಿಶೇಷ ಗ್ಲಾಮರ್ ತಂದಿತ್ತು. ಸಂಸ್ಕಾರ ತಮ್ಮ ಬದುಕಿಗೆ ಹೊಸ ಆಸಕ್ತಿಗಳನ್ನು ತಂದ ಚಿತ್ರ ಎಂದು ಲಂಕೇಶರೇ ಹೇಳಿಕೊಂಡಿದ್ದಾರೆ.

ಬಹುಶಃ ಅಂದಿನಿಂದಲೂ ಲಂಕೇಶರಿಗೆ ಚಿತ್ರವೊಂದನ್ನು ತಾವೇ ನಿರ್ದೇಶಿಸುವ ತುಡಿತ ಬಂದಂತೆ ಕಾಣುತ್ತದೆ. ಶಿವಮೊಗ್ಗೆಯಲ್ಲಿ ತಮ್ಮ ಹೆಸರಲ್ಲಿದ್ದ ಮನೆಯನ್ನು ಮಾರಿ ೧೯೭೫ರಲ್ಲಿ 'ಪಲ್ಲವಿ' ಚಿತ್ರ ನಿರ್ಮಾಣಕ್ಕೆ ತೊಡಗಿದರು. ಯಾವುದೇ ಖ್ಯಾತನಾಮರ, ಯಾವುದೇ ಪ್ರಭಾವಿಗಳ ಬೆಂಬಲವಿಲ್ಲದೆ ನಿರ್ಮಾಣಗೊಂಡ ಚಿತ್ರ ಇದು. ಲಂಕೇಶರಿಗೆ ಬಹುಪ್ರಿಯವಾದ 'ಬಿರುಕು' ಕಾದಂಬರಿಯೇ ಕಥಾವಸ್ತು. ಅವರ ಶಿಷ್ಯ ಹಾಗೂ ಗೆಳೆಯ ಟಿ.ಎನ್. ಸೀತಾರಾಂ ಅದರ ನಾಯಕ. ಲಂಕೇಶರ ಪರಿಚಿತರಾದ ಹಲವು ಸಾಹಿತಿಗಳು, ರಂಗಭೂಮಿಯ ವ್ಯಕ್ತಿಗಳೇ ನಟನಟಿಯರು. ವಿಮಲಾನಾಯ್ಡು ಎಂಬ ತೆಳ್ಳನೆಯ ಹುಡುಗಿ ನಾಯಕಿ.

ಅದುವರೆಗಿನ ಕನ್ನಡದ ಹೊಸ ಅಲೆಯ ಚಿತ್ರಗಳು ಹೇಳಲಾಗದ ಹೊಸ ಕತೆ 'ಪಲ್ಲವಿ'ಯಲ್ಲಿತ್ತು. ಹೊಸ ಅಲೆ ಅಂದಾಕ್ಷಣ, ಗ್ರಾಮೀಣ ವಲಯದ ಕತೆಗಳು ಮಾತ್ರ ಎಂಬಂತೆ ಚಿತ್ರಿತವಾಗಿದ್ದ ಆ ಸಂದರ್ಭದಲ್ಲಿ ನಗರದ ಮಧ್ಯಮವರ್ಗದ 'ಪಲ್ಲವಿ' ವಿಶಿಷ್ಟ ಚಿತ್ರವಾಗಿ ಮೂಡಿಬಂದಿತ್ತು. ರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ 'ಪಲ್ಲವಿ'ಯದಾಯಿತು (೧೯೭೭). ಇದುವರೆಗೂ ಕನ್ನಡದ ಯಾವ ನಿರ್ದೇಶಕರಿಗೂ ರಾಷ್ಟ್ರಮಟ್ಟದಲ್ಲಿ ಈ ಪ್ರಶಸ್ತಿ ಬಾರದೇ ಇರುವುದು ವಿಶೇಷ. ಆ ಗೌರವಕ್ಕೆ ಪಾತ್ರರಾದ ಮೊದಲ ಹಾಗೂ ಏಕೈಕ ಕನ್ನಡಿಗ ಲಂಕೇಶ್ ಮಾತ್ರ.

ಪಲ್ಲವಿಗೆ ಅದೇ ವರ್ಷದ ಅಂದರೆ ೧೯೭೬-೭೭ರ ಸಾಲಿನ ಪ್ರಥಮ ಅತ್ಯುತ್ತಮ ರಾಜ್ಯ ಪ್ರಶಸ್ತಿಯೂ ಸಿಕ್ಕಿತು. ಅದರ ಸಂಗೀತ ನಿರ್ದೇಶಕರಿಗೆ ಅತ್ಯುತ್ತಮ ಸಂಗೀತ ನಿರ್ದೇಶಕ ಪ್ರಶಸ್ತಿ ಸಿಕ್ಕರೆ, ಇನ್ನೆರಡು ಪ್ರಶಸ್ತಿಗಳೂ ಪಲ್ಲವಿಗೆ ಸಂದಿತು. ಅತ್ಯುತ್ತಮ ಚಿತ್ರನಾಟಕ ಹಾಗೂ ಉತ್ತಮ ಸಂಭಾಷಣೆಯ ಗೌರವ ಲಂಕೇಶರ ಪಾಲಾಯಿತು.

ಮರುವರ್ಷವೇ ನಿರ್ಮಿಸಿದ 'ಅನುರೂಪ' ಚಿತ್ರ ಕೂಡ ಕಾಲೇಜಿನ ವ್ಯವಸ್ಥೆ-ಅವ್ಯವಸ್ಥೆಯನ್ನು ಬಿಂಬಿಸುವ ಚಿತ್ರ. ಕ್ರಾಂತಿ ಬೋಧಿಸುವ ಶಿಕ್ಷಣ ಕೊನೆಗೆ ತಾನೇ ಅದಕ್ಕೆ ಆಹುತಿಯಾಗುವ ಚಿತ್ರಕತೆಯ ಅನುರೂಪ ೭೭-೭೮ನೇ ಸಾಲಿನ ತೃತೀಯ ಅತ್ಯುತ್ತಮ ಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಇದರ 'ನೀನಿರುವುದೇ ನಿಜವಾದರೂ...' ಹಾಗೂ 'ಇಂಗ್ಲಿಷ್, ಮಾತಮೆಟಿಕ್ಸ್, ಫಿಸಿಕ್ಸ್, ಕೆಮಿಸ್ಟ್ರಿ... ಎಲ್ಲ ಬಿಟ್ಟು ನಮಗೆ ಪ್ರೇಮ ಕೊಡಿ' ಎಂಬ ಅಸಂಗತ ಹಾಡು ಆ ಕಾಲದಲ್ಲಿ ವಿಚಿತ್ರ ಜನಪ್ರಿಯತೆ ಪಡೆದಿತ್ತು.

ನಂತರದ ವರ್ಷದಲ್ಲಿ ನಿರ್ದೇಶಿಸಿದ 'ಖಂಡವಿದೆಕೋ ಮಾಂಸವಿದೆಕೋ' ಎಂಬ ಚಿತ್ರ ತೀರ ಕೆಟ್ಟದ್ದೂ ಅಲ್ಲದೆ, ಸೆನ್ಸಾರ್ ಅವಕೃಪೆಗೆ ಪಾತ್ರವಾಗಿ ಲಂಕೇಶ್‌ಗೆ ಸಾಕಷ್ಟು ಕೆಟ್ಟ ಹೆಸರು ತಂದಿತ್ತು. 'ಎಲ್ಲಿಂದಲೋ ಬಂದವರು' ಲಂಕೇಶರ ಕಟ್ಟಕಡೆಯ ಚಿತ್ರ. 'ಸಿನಿಮಾದ ತಾಂತ್ರಿಕತೆಯನ್ನು ತಿಳಿಯುವ ಸಂದರ್ಭದಲ್ಲೇ ಆ ಕ್ಷೇತ್ರದಿಂದ ದೂರವಾದೆ' ಎನ್ನುವ ಲಂಕೇಶ್ ಮತ್ತೆ ಮಗಳ ಚಿತ್ರಕ್ಕೆ ಸಂಭಾಷಣೆ ಬರೆದದ್ದು ಬಿಟ್ಟರೆ ಚಿತ್ರರಂಗದತ್ತ ಸುಳಿಯಲಿಲ್ಲ. ಎಲ್ಲಿಂದಲೋ ಬಂದವರು ಮತ್ತು ಅನುರೂಪದ ಸಂಭಾಷಣೆಗೆ ಕೂಡ ರಾಜ್ಯ ಸರ್ಕಾರದ ಪ್ರಶಸ್ತಿ ಲಭ್ಯವಾಯಿತು. ನಂತರ ಅವರ ಮಾಧ್ಯಮ ಬದಲಾಗಿ ಪತ್ರಿಕೋದ್ಯಮದತ್ತ ಹರಿಯಿತು.

ಪತ್ರಿಕಾರಂಗದ ಸೆಳೆತ

ಲಂಕೇಶರಿಗೆ ಪತ್ರಿಕಾರಂಗ ಮೊದಲಿನಿಂದಲೂ ಆತ್ಮೀಯವಾಗಿ ಸೆಳೆದ ಕ್ಷೇತ್ರ. ಬಿ.ಎ. ಆನರ್ಸ್ ಓದುವಾಗಲೇ 'ಚಿತ್ರಗುಪ್ತ' ಪತ್ರಿಕೆಗೆ ಆಗಾಗ ಲೇಖನಗಳನ್ನು ಬರೆಯುತ್ತಿದ್ದರು. ಆಗ ಅವರ ಲೇಖನಗಳೆಲ್ಲ ಬಹುತೇಕ ಸಾಹಿತ್ಯದ ರಾಜಕೀಯದ ಬಗ್ಗೆಯೇ ಹೆಚ್ಚಾಗಿರುತ್ತಿತ್ತು. ಸಾಹಿತ್ಯದ, ಸಾಹಿತಿಗಳ ಗುಂಪುಗಾರಿಕೆ ಅವರನ್ನು ಹೆಚ್ಚಾಗಿ ಕಾಡುತ್ತಿತ್ತು. ಅದಾದ ನಂತರ ೧೯೭೮ರಲ್ಲಿ 'ಪಾಂಚಾಲಿ' ಎಂಬ ದೀಪಾವಳಿ ಸಂಚಿಕೆಯನ್ನು ಸಿದ್ಧಪಡಿಸಿದರು. ನಿಜಕ್ಕೂ ಅತ್ಯುತ್ತಮವಾಗಿದ್ದ ಈ ಸಂಚಿಕೆಯಲ್ಲಿ ಕನ್ನಡದ ಹಲವು ಉದಯೋನ್ಮುಖ ಲೇಖಕರು ಬೆಳಕು ಕಂಡಿದ್ದರು. ಆದರೆ 'ಪಾಂಚಾಲಿ' ನಿರೀಕ್ಷಿತ ಯಶಸ್ಸು ಗಳಿಸಲಿಲ್ಲ. ಗೆಳೆಯ ಶ್ರೀಕೃಷ್ಣ ಆಲನಹಳ್ಳಿ ಲಂಕೇಶರಿಗೆ ಜೊತೆಯಾಗಿ ನಿಂತು ಇದರ ಕೆಲಸದಲ್ಲಿ ಸಹಾಯ ಮಾಡಿದ್ದರು. ನೆಲಮನೆ ಪ್ರಕಾಶನದ ದೇವೇಗೌಡರು ಉಸ್ತುವಾರಿ ನೋಡಿಕೊಂಡಿದ್ದರು.

೧೯೭೮ರಲ್ಲಿ ಕೆಲಸಕ್ಕೆ ರಾಜೀನಾಮೆ ಕೊಟ್ಟ ಮೇಲೆ ಬಿಡುವಾಗಿದ್ದ ಲಂಕೇಶರಿಗೆ ಹಲವು ಗೆಳೆಯರು ಸೇರಿ ಸಹಕಾರಿ ಪದ್ಧತಿಯಲ್ಲಿ ಒಂದು ಸಿನಿಮಾ ಮಾಡಲು ಕೇಳಿಕೊಂಡರು. ಅದೇ 'ಎಲ್ಲಿಂದಲೋ ಬಂದವರು'. ಅದರ ಮೂರು ಹಾಡುಗಳು ಎಷ್ಟು ಜನಪ್ರಿಯವಾದವೆಂದರೆ ವ್ಯಾಪಾರಿ ಚಿತ್ರಗಳ ಹಾಡಿಗೂ ಆ ಕಾಲದಲ್ಲಿ ಇದರಷ್ಟು ಜನಪ್ರಿಯತೆ ಸಿಕ್ಕಿರಲಿಕ್ಕಿಲ್ಲ. 'ಎಲ್ಲಿದ್ದೆ ಇಲ್ಲೀತಂಕ...' 'ಕೆಂಪಾದವೋ...' 'ಕರಿಯವ್ವ ಗುಡಿತಾವ...' ಎಂಬ ಮೂರು ಹಾಡುಗಳು ಕರ್ನಾಟಕದಾದ್ಯಂತ ಕೇಳುಗರ ಮನ ತಣಿಸಿದ್ದವು. ಈ ಸಿನಿಮಾ ಮುಗಿಸಿಕೊಟ್ಟ ನಂತರ ಲಂಕೇಶರಿಗೆ ಚಿತ್ರರಂಗ ನಿಜಕ್ಕೂ ಬೇಸರ ಹುಟ್ಟಿಸಿತ್ತು. ಅದೇಕೋ ಸಿನಿಮಾದ ಭಾಷೆ ಕಲಿಯುತ್ತಿದ್ದಾಗಲೇ ಅದರಿಂದ ದೂರ ಸರಿಯುವ ಮನಸ್ಸು ಮಾಡಿದ್ದರು. ಮತ್ತೆ ಬರವಣಿಗೆಯತ್ತ ತಮ್ಮನ್ನು ತೊಡಗಿಸಿಕೊಳ್ಳುವ ಮನಸ್ಸಾಯಿತು. ಪ್ರಜಾವಾಣಿಯ ಹರಿಕುಮಾರ್‌ಗೆ ಪತ್ರ ಬರೆದು ಕಾಲಂ(ಅಂಕಣ) ಬರೆಯುವುದಾಗಿ ಕೇಳಿಕೊಂಡರು. ಹರಿಕುಮಾರ್ ಒಪ್ಪಿದರು.

ಲಂಕೇಶ್‌ರ ಅಂಕಣ ತುಂಬಾ ಜನಪ್ರಿಯವಾಗಿತ್ತು. 'ಗುಂ' 'ಬಂ' ಮುಂತಾದವರೆಲ್ಲ ವ್ಯಂಗ್ಯ ಚಿತ್ರಕಾರರ ಪಾತ್ರಗಳಂತೆ ನಾಡಿನಾದ್ಯಂತ ಪರಿಚಿತರಾದರು. ಆದರೆ ಪ್ರಜಾವಾಣಿಯ ಗುರುಸ್ವಾಮಿಯವರು ಕೆಲವು ಕಾರಣಗಳಿಗಾಗಿ ಈ ಅಂಕಣವನ್ನು ಒಪ್ಪಲಿಲ್ಲ. ಜನಪ್ರಿಯವಾಗಿದ್ದ ಅಂಕಣ ನಿಂತುಹೋಯಿತು.

ಆಗಲೇ ಲಂಕೇಶರಿಗೆ ಪತ್ರಿಕೆ ಮಾಡುವ ಆಸೆ ಹುಟ್ಟಿದ್ದು. ೧೯೮೦ ಜುಲೈ ೬ರಂದು 'ಲಂಕೇಶ್ ಪತ್ರಿಕೆ' ವಿಭಿನ್ನ ರೀತಿಯಲ್ಲಿ ಹೊರಬಂದಿತ್ತು. ಎಂಟು ಪುಟಗಳ ೬೦ ಪೈಸೆಯ ಪತ್ರಿಕೆ ಕಂಡ ಯಶಸ್ಸು ಅಂತಿಂಥದಲ್ಲ. ವಾರಕ್ಕೊಮ್ಮೆ ಬರುವ ಕನ್ನಡ ಜಾಣ-ಜಾಣೆಯರ ಈ ಪತ್ರಿಕೆಗಾಗಿ ಜನ ಕಾಯತೊಡಗಿದರು. ೬೦ ಪೈಸೆಯಿಂದ ೭ ರೂಪಾಯಿಯವರೆಗೆ ಪತ್ರಿಕೆ ಹಲವು ಬದಲಾವಣೆಗಳನ್ನು ಕಂಡಿದೆ. ನೂರಾರು ಜನ ಲೇಖಕರು ಪತ್ರಿಕೆಯ ಮೂಲಕ ಬೆಳಕು ಕಂಡಿದ್ದಾರೆ. ರಾಜಕೀಯವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕ ಹೊಸ ಬದಲಾವಣೆಗಳಿಗೆ ತುಡಿಯುತ್ತಿದ್ದ ಪತ್ರಿಕೆ ಇಂದಿಗೂ ಅದರದೇ ಆದ ಓದುಗರ ವಲಯವನ್ನು ಹೊಂದಿದೆ. ೧೯೮೩ರಲ್ಲಾದ ರಾಜಕೀಯ ಬದಲಾವಣೆ ನಂತರ ಪತ್ರಿಕೆಯ ಯಶಸ್ಸು, ಪ್ರಭಾವ ಇಮ್ಮಡಿಗೊಂಡು ನಂತರ ಅದು ಎಲ್ಲ ಕ್ಷೇತ್ರಗಳನ್ನು ತಲುಪಿದ ವಿಶಿಷ್ಟ ವಾರಪತ್ರಿಕೆಯಾಗಿ ಬೆಳೆಯಿತು.

ಪತ್ರಿಕೆಯ ಯಶಸ್ಸಿನ ನಂತರ ಅದರ ಪ್ರಭಾವ, ಶಕ್ತಿಯ ನಿಜಪರಿಚಯವಾದ ನಂತರ, ಅಲ್ಲದೆ ಬದಲಾದ ಕರ್ನಾಟಕ ರಾಜಕೀಯದಲ್ಲಿ ವೇದಿಕೆ ಸಿದ್ಧಪಡಿಸುವ ಮನಸ್ಸಾಯಿತು. ಸರ್ಕಾರದ ಭ್ರಷ್ಟತೆಯ ವಿರುದ್ಧ ಪ್ರತಿಭಟನೆಯ ಮೂಲಕ ಆರಂಭವಾದ ಪ್ರಗತಿರಂಗ ಎಲ್ಲೆಡೆ ಸಂಘಟನೆಯ ರೂಪ ಪಡೆಯಿತಾದರೂ ರಾಜಕೀಯವಾಗಿ ಬೆಳೆಯುವಷ್ಟು ಬಲವಾಗಲಿಲ್ಲ. ಪತ್ರಿಕೆ ಮತ್ತು ಸಂಘಟನೆ ಒಂದಾಗಿ ಸಾಗುವಷ್ಟು ಬೆಳೆಯಲಾಗಲಿಲ್ಲ. ಕೇವಲ ಸಂಘಟನೆಯಾಗಿ ಪ್ರಬಲವಾದರೆ, ರಾಜಕೀಯವಾಗಿ

ಹಲವು ಮಿತಿಗಳನ್ನು ಎದುರಿಸಬೇಕಾಗುತ್ತದೆ. ಇದಕ್ಕೆ ಹಲವು ಕಾರಣಗಳಿವೆ. ನಮ್ಮ ರಾಜಕೀಯವನ್ನು ಹತೋಟಿಯಲ್ಲಿ ಇಡುವ ನೂರಾರು ಶಕ್ತಿಗಳು, ವ್ಯಕ್ತಿಗಳು, ಆರ್ಥಿಕ ಚೌಕಟ್ಟು, ಇವೆಲ್ಲ ಇದಕ್ಕೆ ಕಾರಣವಾಗುತ್ತದೆ. ಆದರೆ ಲಂಕೇಶ ಮತ್ತು ಪ್ರೊ.ಕೆ. ರಾಮದಾಸ್ ಕರ್ನಾಟಕದ ಉದ್ದಗಲಕ್ಕೆ ಸಾವಿರಾರು ಕಿ.ಮೀ. ಸಂಚರಿಸಿ ಸಂಘಟನೆಯ ಕೆಲಸ ಮಾಡಿದರು. ನೂರಾರು ಯುವಕರನ್ನು ಆಕರ್ಷಿಸಿದರು. ಆದರೆ 'ಪ್ರಗತಿರಂಗ' ಕೇವಲ ಸಂಘಟನೆಗೆ ಮಾತ್ರ ಸೀಮಿತವಾಯಿತು.

ಈ ನಡುವೆ ಅಂದರೆ ೧೯೯೩-೯೪ರ ಸಮಯದಲ್ಲಿ ರಕ್ತದೊತ್ತಡ ಮತ್ತು ಸಕ್ಕರೆ ಕಾಯಿಲೆ ತೀವ್ರವಾಗಿ ಮೊದಲ ಬಾರಿಗೆ ಲಂಕೇಶರ ಆತ್ಮಸ್ಥೈರ್ಯವನ್ನು ಅಲ್ಲಾಡಿಸಿತು. ೧೯೯೪ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದ ಸಂದರ್ಭದಲ್ಲಿ ಇದು ತೀವ್ರವಾಗಿ ಲಂಕೇಶ್ ಲಘು ಪಾರ್ಶ್ವವಾಯುವಿಗೆ ಗುರಿಯಾಗಬೇಕಾಯಿತು.

ಇದೇ ಕಾರಣದಿಂದ, ಅತಿಯಾದ ಸಕ್ಕರೆ ಕಾಯಿಲೆಯ ಪರಿಣಾಮವಾಗಿ ಕಣ್ಣುಗಳು ಕುರುಡಾಗುವಷ್ಟು ತೀವ್ರವಾಯಿತು. ಇದರಿಂದ ಅಪರೇಷನ್ ಮಾಡಿದರೂ ಕೊನೆಗೂ ಒಂದು ಕಣ್ಣು ಮತ್ತೆ ದೃಷ್ಟಿ ಪಡೆಯಲು ಸಾಧ್ಯವಾಗಲೇ ಇಲ್ಲ. ಕಾಯಿಲೆ ಏರಿಳಿತ ನಡೆಸುತ್ತಲೇ ಇತ್ತು. ಸತತ ಆರುವರ್ಷಗಳ ಕಾಲ ನರಳಿದ ಲಂಕೇಶರು ಪತ್ರಿಕೆಯ ಕೆಲಸವನ್ನು ಮಾತ್ರ ತಪ್ಪಿಸಲಿಲ್ಲ, ಟೀಕೆ ಟಿಪ್ಪಣಿ, ಮರೆಯುವ ಮುನ್ನ, ಕಣ್ಣಾಮುಚ್ಚಾಲೆ, ನೀಲು ಎಲ್ಲವೂ ಒಪ್ಪವಾಗಿ ಬರುತ್ತಿದ್ದವು. ೨೦೦೦ನೇ ಇಸವಿ ಜನವರಿ ೨೫ರಂದು ಮಧ್ಯರಾತ್ರಿ ಇದ್ದಕ್ಕಿದ್ದಂತೆ ಹೃದಯದ ಬಡಿತ ಹೆಚ್ಚಾಗಿ, ಚಡಪಡಿಸುತ್ತಿದ್ದ ಲಂಕೇಶರನ್ನು ಸಾವು ಸೆಳೆದೇ ಬಿಟ್ಟಿತ್ತು. ಪೂರ್ತಿ ಇಪ್ಪತ್ತು ವರ್ಷಗಳ ಕಾಲ ತಾವೇ ನಿಂತು ನಡೆಸಿದ ಪತ್ರಿಕೆಯ ಜವಬ್ದಾರಿ ಮಕ್ಕಳ ತಲೆಯನ್ನೇರಿತು. ಮಗಳು ಗೌರಿ ಲಂಕೇಶ್ ಸಂಪಾದಕಿಯಾಗಿ ಮಗ ಇಂದ್ರಜಿತ್ ಪ್ರಕಾಶಕರಾಗಿ, ಈಗ ಪತ್ರಿಕೆ ನಡೆಸುತ್ತಿದ್ದಾರೆ.

ವಿಕ್ಷಿಪ್ತತೆ, ನೇರನುಡಿ, ಹೋರಾಟಗಾರನ ಛಲ, ನಿಷ್ಠುರವಾದಕ್ಕೆ ಹೆಸರಾದ ಲಂಕೇಶರು ಒಂದು ಪರಂಪರೆಯನ್ನೇ ಸೃಷ್ಟಿಸಿ ಹೋದರು. ಪ್ರತಿಕಾರಂಗಕ್ಕೆ ಹೊಸ ಅರ್ಥ ಭಾಷೆ ತಂದು ಕೊಟ್ಟರು; ಮಡುಗಟ್ಟಿದ್ದ ಸಾಹಿತ್ಯಕ್ಷೇತ್ರದಲ್ಲಿ ಹೊಸ ನೀರು ಹರಿಯುವಂತೆ ಮಾಡಿದರು; ರಂಗಭೂಮಿಯ ಜಡತ್ವವನ್ನು ಹೊಗಲಾಡಿಸಿ ಲವಲವಿಕೆಯನ್ನು ತಂದರು; ಸದಾ ಒಂದಿಲ್ಲೊಂದು ಚಟುವಟಿಕೆಯಲ್ಲಿ ತೊಡಗಿಸಿಕೊಂಡು ವಿಶಿಷ್ಟ ಸಂವೇದನೆಗೆ ಕಾರಣರಾದರು; ಸಿನಿಮಾರಂಗದಲ್ಲಿ ಏಕಲವ್ಯನಂತೆ ನುಗ್ಗಿ ತಮ್ಮದೇ ಛಾಪನ್ನು ಒತ್ತಿದರು; ಹೀಗೆ ಬದುಕಿನ ಹಲವು ವರ್ಣರಂಜಿತ ಮುಖಗಳನ್ನು ತೋರಿಸುವ ಲಂಕೇಶ್ ಇಡೀ ಕನ್ನಡ ನಾಡಿಗೆ ಅಷ್ಟೇ ವರ್ಣರಂಜಿತವಾದ, ಅಮೂಲ್ಯವಾದ ಕೊಡುಗೆ ನೀಡಿದ್ದಾರೆ. ಅಲ್ಲದೆ ಅವರ ಪ್ರಭಾವ ಇನ್ನು ಹಲವು ವರ್ಷಗಳವರೆಗೆ ಮಾಸುವಂಥದಲ್ಲ. ೧೯೯೬ರಲ್ಲಿ ಲಂಕೇಶ್ ಬರೆದ ಈ 'ನೀಲು' ಪದ್ಯದ ಮೂಲಕ ಈ ಲೇಖನವನ್ನು ಮುಕ್ತಾಯಗೊಳಿಸಿದರೆ ಹೆಚ್ಚು ಸೂಕ್ತವೆನಿಸಹುದು.

ಗುರವೆ, ನಿನ್ನಿಂದ
ಸಕಲ ವಿದ್ಯೆಗಳ ಕಲಿತದ್ದು
ಸುಲಭವಾಯಿತು;
ತಿಲುಬುಗಟ್ಟಿದ ಅವುಗಳನ್ನು
ಕತ್ತುಗೆಯಲೆತ್ತಿಸಿ ಮುಪ್ಪಿನಲ್ಲಿ
ಸೋ[illegible]ಗಿದ್ದೇನೆ, ಕ್ಷಮಿಸು -ನೀಲು

ಲಂಕೇಶರ ಬದುಕಿನ ಘಟ್ಟಗಳು

ಜನನ: ೧೯೩೫, ಮಾರ್ಚ್-೮.

ತಂದೆ-ತಾಯಿ: ನಂದಿಬಸಪ್ಪ, ದೇವೀರಮ್ಮ.

ಊರು: ಶಿವಮೊಗ್ಗ ಸಮೀಪದ ಕೊನಗವಳ್ಳಿ.

ವಿದ್ಯಾಭ್ಯಾಸ: ಶಿವಮೊಗ್ಗೆಯ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ (೧೯೫೩-೫೫)ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಆನರ್ಸ್ (೧೯೫೫-೫೮) ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಎಂ.ಎ. ಇಂಗ್ಲಿಷ್ (೧೯೫೮-೫೯)

ಉದ್ಯೋಗ: ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿ ಅಧ್ಯಾಪಕ (೧೯೫೯-೬೨) ಸೆಂಟ್ರಲ್ ಕಾಲೇಜಿನಲ್ಲಿ ಅಧ್ಯಾಪಕ (೧೯೬೨-೬೫) ಸರ್ಕಾರಿ ಫಸ್ಟ್‌ಗ್ರೇಡ್ ಕಾಲೇಜಿನಲ್ಲಿ ಅಧ್ಯಾಪಕ (೧೯೬೫-೬೬) ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕ (೧೯೬೬-೭೮)

ಕಥಾಸಂಕಲನ:
ಕೆರೆಯ ನೀರನು ಕೆರೆಗೆ ಚೆಲ್ಲಿ (೧೯೬೩)
ನಾನಲ್ಲ (೧೯೭೦)
ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ (೧೯೭೩)
ಕಲ್ಲು ಕರಗುವ ಸಮಯ (೧೯೯೦)
ಉಲ್ಲಂಘನೆ ಮತ್ತು ಇತರ ಕತೆಗಳು (೧೯೯೬)

ಕಾದಂಬರಿಗಳು:
ಬಿರುಕು (೧೯೬೭)
ಮುಸ್ಸಂಜೆಯ ಕಥಾಪ್ರಸಂಗ (೧೯೭೮)
ಅಕ್ಕ (೧೯೯೧)

ಕವನಸಂಕಲನಗಳು:
ಬಿಚ್ಚು (೧೯೬೭)
ತಲೆಮಾರು (೧೯೭೩)
ಚಿತ್ರಸಮೂಹ (೧೯೯೯)

ನಾಟಕಗಳು:
ಏಳು ಏಕಾಂಕ ನಾಟಕಗಳು. (೧೯೬೩-೭೦)
ಟಿ.ಪ್ರಸನ್ನನ ಗೃಹಸ್ಥಾಶ್ರಮ,
ಸಿದ್ಧತೆ

ನನ್ನ ತಂಗಿಗೊಂದು ಗಂಡು ಕೊಡಿ.
ಗಿಳಿಯು ಪಂಜರದೊಳಿಲ್ಲ
ಪೋಲಿಸರಿದ್ದಾರೆ ಎಚ್ಚರಿಕೆ
ತೆರೆಗಳು
ಕ್ರಾಂತಿ ಬಂತು ಕ್ರಾಂತಿ

ಪೂರ್ಣ ಪ್ರಮಾಣದ ನಾಟಕಗಳು

ಸಂಕ್ರಾಂತಿ-(೧೯೭೧)
ಗುಣಮುಖ (೧೯೯೩)

ಅನುವಾದಗಳು: ಈಡಿಪಸ್ ಮತ್ತು ಅಂತಿಗೊನೆ (ನಾಟಕ) (೧೯೭೧)
ಪಾಪದ ಹೂಗಳು (ಕಾವ್ಯ ೧೯೭೪)

ಚಲನಚಿತ್ರಗಳು: ಪಲ್ಲವಿ (೧೯೭೫)
ಅನುರೂಪ (೧೯೭೬)
ಖಂಡವಿದೆಕೋ ಮಾಂಸವಿದೆಕೋ (೧೯೭೮)
ಎಲ್ಲಿಂದಲೋ ಬಂದವರು, (೧೯೮೦)

ಕತೆ ಸಂಭಾಷಣೆ: ದೇವೀರಿ

ಪ್ರಶಸ್ತಿಗಳು: ೧೯೭೭ರಲ್ಲಿ ಪಲ್ಲವಿ ಚಿತ್ರಕ್ಕೆ ಉತ್ತಮ ನಿರ್ದೇಶಕ-ರಾಷ್ಟ್ರಪ್ರಶಸ್ತಿ
೧೯೭೭ರಲ್ಲಿ ಪಲ್ಲವಿಗೆ ಅತ್ಯುತ್ತಮ ಚಿತ್ರ-ರಾಷ್ಟ್ರಪ್ರಶಸ್ತಿ
೧೯೭೮ರಲ್ಲಿ ಅನರೂಪ ಚಿತ್ರಕ್ಕೆ ಉತ್ತಮ ಚಿತ್ರ ರಾಜ್ಯಪ್ರಶಸ್ತಿ
೧೯೮೦-ಎಲ್ಲಿಂದಲೋ ಬಂದವರು ಚಿತ್ರದ ಚಿತ್ರಕತೆ,
ಸಂಭಾಷಣೆಗೆ ರಾಜ್ಯಪ್ರಶಸ್ತಿ
೧೯೮೭-ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.
೧೯೯೪- ಶಿವರಾಮ ಕಾರಂತ ಪ್ರತಿಷ್ಠಾನ ಪ್ರಶಸ್ತಿ
೧೯೯೪-ರಾಷ್ಟ್ರೀಯ ಭಾವೈಕ್ಯತಾ ಪ್ರಶಸ್ತಿ
ಕರ್ನಾಟಕ ಸಂಘ, ಶಿವಮೊಗ್ಗದ ಗೌರವ ಸದಸ್ಯತ್ವ

ಪತ್ರಿಕೋದ್ಯಮ: ೭೮- ೧೯,೧೯೭೯ ಪ್ರಜಾವಾಣಿ ಪತ್ರಿಕೆಯಲ್ಲಿ ಅಂಕಣ.
ಟೆಲಿಗ್ರಾಫ್, ಇಲ್ಲಸ್ಟ್ರೇಟೆಡ್ ವೀಕ್ಲಿ, ಇಂಡಿಯನ್ ಎಕ್ಸ್‌ಪ್ರೆಸ್
ಪತ್ರಿಕೆಗಳಲ್ಲಿ ಲೇಖನಗಳು.

೧೯೮೦- ಲಂಕೇಶ್ ಪತ್ರಿಕೆಯ ಆರಂಭ. ಸಂಪಾದಕ, ಮುದ್ರಕ, ಪ್ರಕಾಶಕ:
ಕರ್ನಾಟಕ ಪ್ರಗತಿರಂಗ ೧೯೮೭ರಲ್ಲಿ ಸಂಘಟನೆ.

ನಿಧನ: ೨೦೦೦, ಜನವರಿ ೨೫.

□□

ಜಿ.ಎಸ್.ಎಸ್. ಬದುಕು-ಬರಹ : ಒಂದು ಪರಿಚಯ



❒ ಡಾ. ಎಸ್. ಪ್ರಸಾದಸ್ವಾಮಿ

'ಜಿ.ಎಸ್.ಎಸ್.' ಎಂದೇ ಪರಿಚಿತರಾಗಿರುವ ಡಾ. ಜಿ.ಎಸ್. ಶಿವರುದ್ರಪ್ಪ ಕನ್ನಡದ ಮಹತ್ವದ ಲೇಖಕರು. ೭.೨.೧೯೨೬ರಲ್ಲಿ ಶಿವಮೊಗ್ಗ ಜಿಲ್ಲೆ ಶಿಕಾರಿಪುರದಲ್ಲಿ ಜನಿಸಿದ ಇವರು ಸದ್ಯ ಬೆಂಗಳೂರು ನಿವಾಸಿಯಾಗಿದ್ದಾರೆ. ಕುವೆಂಪು ಅವರ ಮಾರ್ಗದರ್ಶನದಲ್ಲಿ 'ಸೌಂದರ್ಯ ಸಮೀಕ್ಷೆ' ಎಂಬ ತಮ್ಮ ಪ್ರೌಢ ಪ್ರಬಂಧಕ್ಕೆ ಪಿಎಚ್.ಡಿ., ಪದವಿ ಪಡೆದದ್ದು ಇವರ ವಿಶೇಷ ಮತ್ತು ಹೆಗ್ಗಳಿಕೆ.

ಕುವೆಂಪು ನಂತರ ಗಾತ್ರ ಮತ್ತು ಸತ್ವ ಎರಡರಲ್ಲೂ ಮಹತ್ವದ ಸಾಹಿತ್ಯ ನೀಡಿದವರು ಜಿ.ಎಸ್.ಎಸ್. ಹದಿಮೂರು ಕವನ ಸಂಕಲನ, ಇಪ್ಪತ್ತಮೂರು ಗದ್ಯ ಕೃತಿ, ಮೂವತ್ತು ಸಂಪುಟಗಳ ಮಹತ್ವದ ಮೂರು ಸಂಪಾದನೆಗಳು ಅಲ್ಲದೆ ಬೆಂಗಳೂರು ವಿ.ವಿ. ಪ್ರಕಟಿಸಿದ ಬಹುತೇಕ ಸಾಹಿತ್ಯಕ್ಕೆ ಸಂಬಂಧಿಸಿದ ಮುಖ್ಯ ಕೃತಿಗಳಿಗೆ ಇವರೇ ಸಂಪಾದಕರು. ಕವಿ, ವಿಮರ್ಶಕ, ಸಂಪಾದಕ, ಪ್ರವಾಸಿ, ಮೀಮಾಂಸಕ, ಅಧ್ಯಾಪಕ, ಆಡಳಿತಗಾರ -ಹೀಗೆ ಬಹುಮುಖ ವ್ಯಕ್ತಿತ್ವದ ಜಿ.ಎಸ್.ಎಸ್. ನಮ್ಮ ಕಾಲದ ದ್ರೋಣರೆಂದೇ ಖ್ಯಾತರು; ಆದರೆ ಇವರು ಯಾವ ಏಕಲವ್ಯನನ್ನೂ ಶಿಕ್ಷಣದಿಂದ ವಂಚಿಸಿಲ್ಲ!

ಕ್ರೀಡಾ ಪರಿಭಾಷೆಯಲ್ಲಿ ಹೇಳಬಹುದಾದರೆ ಜಿ.ಎಸ್.ಎಸ್. ನಮ್ಮ ಕಾಲದ ಆಲ್‌ರೌಂಡರ್. 'ನಾಟಕ' ಪ್ರಕಾರವೊಂದನ್ನು ಬಿಟ್ಟರೆ ಬಹುಶಃ ಸಾಹಿತ್ಯದ ಇನ್ನುಳಿದ ಎಲ್ಲ ಪ್ರಕಾರಗಳಲ್ಲಿ ಇವರ ಸಾಧನೆ-ಕೃಷಿ ಗಮನಾರ್ಹ. ಸಾಮಗಾನ (೧೯೪೭), ಚೆಲವು-ಒಲವು (೧೯೫೧), ದೇವಶಿಲ್ಪ (೧೯೫೩), ದೀಪದ ಹೆಜ್ಜೆ (೧೯೫೬), ಕಾರ್ತೀಕ (೧೯೫೯), ಅನಾವರಣ (೧೯೬೧), ತೆರೆದ ದಾರಿ (೧೯೬೩), ಗೋಡೆ (೧೯೬೬), ನನ್ನ ನಿನ್ನ ನಡುವೆ, ಕಾಡಿನ ಕತ್ತಲಲ್ಲಿ (೧೯೭೨), ಪ್ರೀತಿ ಇಲ್ಲದ ಮೇಲೆ, ವ್ಯಕ್ತಿ ಮಧ್ಯ -ಇವು ಅವರ ಕವನ ಸಂಕಲನಗಳು. ೧೯೮೭ರಲ್ಲಿ ಈ ಎಲ್ಲ ಸಂಕಲನಗಳನ್ನು ಒಟ್ಟುಮಾಡಿ, ಆರಿಸಿ 'ಸಮಗ್ರ ಕಾವ್ಯ' ಕೃತಿಯನ್ನು ಹೊರತರಲಾಗಿದೆ.[1] ಬಂಗಾಳಿ ಭಕ್ತಿಗೀತೆಗಳ ಅನುವಾದ ಕೃತಿಯಾಗಿರುವ 'ತೀರ್ಥವಾಣಿ' ೧೯೫೩ರಲ್ಲಿ ಪ್ರಕಟವಾಗಿವೆ. ಇದು ಜಿ.ಎಸ್.ಎಸ್. ರವರಿಗಿರುವ ಆಸಕ್ತಿಯ ಭಿನ್ನ ನೆಲೆಯನ್ನು ಸೂಚಿಸುವಂತಿದೆ.

ವಿಳಾಸ : ಡಿ.ಹೆಚ್. ೪೨, ನ್ಯೂ ಕಾಲೋನಿ, ಭದ್ರಾವತಿ-೫೭೭೩೦೧

ಅಗಾಧ ಕಾವ್ಯ ಕೃಷಿಗೈದಂತೆ ಜಿ.ಎಸ್.ಎಸ್. ಗದ್ಯದಲ್ಲೂ ಗಾತ್ರ-ಸೂತ್ರಗಳಲ್ಲಿ ಮಹತ್ತಾದುದನ್ನು ಸೃಜಿಸಿದ್ದಾರೆ. ಕರ್ಮಯೋಗಿ, ಕಾವ್ಯಾರ್ಥ ಚಿಂತನ, ವಿಮರ್ಶೆಯ ಪೂರ್ವ-ಪಶ್ಚಿಮ, ಪರಿಶೀಲನೆ, ಸೌಂದರ್ಯ ಸಮೀಕ್ಷೆ, ಗತಿಬಿಂಬ, ನವೋದಯ, ಮಾಸ್ಕೊದಲ್ಲಿ ಇಪ್ಪತ್ತೆರಡು ದಿನ, ಮಹಾಕಾವ್ಯ ಸ್ವರೂಪ, ಪ್ರತಿಕ್ರಿಯೆ, ಅನುರಣನ, ಕನ್ನಡ ಕವಿಗಳ ಕಾವ್ಯಕಲ್ಪನೆ, ಗಂಗೆಯ ಶಿಖರಗಳಲ್ಲಿ ಮೊದಲಾದವು ಜಿ.ಎಸ್.ಎಸ್.ರ ಗದ್ಯ ಕೃತಿಗಳಾಗಿವೆ. ಚತುರಂಗ ಎಂಬುದು ಅವರ ಅಸಮಗ್ರ ಆತ್ಮಕತೆಯ ಕೃತಿಯಾಗಿದೆ.

ಜಿ.ಎಸ್.ಎಸ್. ರವರದು ಬಹುಮುಖಿ ಪ್ರತಿಭೆಯ ವಿಶಿಷ್ಟ ವ್ಯಕ್ತಿತ್ವ. ಸಾಹಿತಿಯಾಗಿ ಪ್ರಸಿದ್ಧರಾಗಿರುವ ಅವರು ಕನ್ನಡ ಸಾರಸ್ವತ ಲೋಕಕ್ಕೆ ಉತ್ತಮ ಉಪನ್ಯಾಸಕರಾಗಿಯೂ, ಕನ್ನಡ ಶೈಕ್ಷಣಿಕ ಪರಿಸರಕ್ಕೆ ಉತ್ತಮ ಆಡಳಿತಗಾರರಾಗಿಯೂ, ಕನ್ನಡ ಸಾಂಸ್ಕೃತಿಕ ಪರಿಸರಕ್ಕೆ ಕ.ಸಾ.ಪ. ಅಧ್ಯಕ್ಷರಾಗಿಯೂ ಸಲ್ಲಿಸಿರುವ ಸೇವೆ ಅನುಪಮವಾದದ್ದು. ಪ್ರೀತಿ ಪಾತ್ರ 'ಮೇಷ್ಟ್ರಾಗಿ' ಅವರು ಬಹು ಜನಪ್ರಿಯರು. ತಮ್ಮ ಅಪಾರ ಶಿಷ್ಯಸಮೂಹಕ್ಕೆ ಅವರೊಬ್ಬ ಮಾನವೀಯ-ಜಾತ್ಯತೀತ ನಿಲುವಿನ ಆದರ್ಶ ವ್ಯಕ್ತಿ. ಬೆಂಗಳೂರು ವಿ.ವಿ.ಯ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಅವರು ನಿರ್ವಹಿಸಿದ ಕರ್ತವ್ಯ ಸ್ಮರಣೀಯ. ಆ ಕಾಲದಲ್ಲಿ ಅವರು ಸಂಯೋಜಿಸಿದ ವಿಚಾರ ಸಂಕಿರಣಗಳು, ಸಂವಾದ ಗೋಷ್ಠಿಗಳು, ಸಾಹಿತ್ಯಿಕ ಸಭೆಗಳು ಉನ್ನತಮಟ್ಟದವು. ಆ ಸಂದರ್ಭದಲ್ಲಿ ಬೆಂಗಳೂರು ವಿ.ವಿ.ಯ ಪ್ರಸಾರಾಂಗದಿಂದ ಪ್ರಕಟವಾದ ಜಿ.ಎಸ್.ಎಸ್. ಸಂಪಾದಕತ್ವದ ಸಾಹಿತ್ಯ ಕೃತಿಗಳು ಅತ್ಯಂತ ವಿಶಿಷ್ಟ, ವಿನೂತನ, ವಿಶೇಷ ಎನಿಸುವಂಥವು. ನಂತರದ ಸಾಹಿತ್ಯಿಕ ವಾಗ್ವಾದಗಳಿಗೆ ದಿಕ್ಸೂಚಿಯಾದಂತವು.

ಹಾಗೆಯೇ ಜಿ.ಎಸ್.ಎಸ್. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ನಡೆಸಿದ ವಿಚಾರ ಸಂಕಿರಣಗಳು, ಸಾಹಿತ್ಯ ಗೋಷ್ಠಿಗಳು ಅತ್ಯಂತ ಮಹತ್ವದವುಗಳು. ಅವರ ಸಂಪಾದಕತ್ವದಲ್ಲಿ ಪ್ರಕಟಗೊಂಡಿರುವ ಅನೇಕ ಅಮೂಲ್ಯ ವಿಮರ್ಶಾ ಕೃತಿಗಳು ನಂತರದ ಪೀಳಿಗೆಯ ಸಾಹಿತ್ಯಾಭಿರುಚಿಗೆ ವಿಶಿಷ್ಟ ದೃಷ್ಟಿಕೋನ ತಂದುಕೊಟ್ಟಂತವು.

ಹೀಗೆ ಬಹುಮುಖಿ ಸಾಧನೆಗೈದ ಅವರ ಕೃಷಿ-ಸಾಧನೆ ಬಗ್ಗೆ; ಅವರ ವ್ಯಕ್ತಿತ್ವದ ಭಿನ್ನ ಪಾತಳಿಗಳ ಬಗ್ಗೆ ಕೆಲವು ಮಾತುಗಳು ಮುಂದಿವೆ. ಅವರ ಒಟ್ಟು ಕೃತಿಯ ವಿಮರ್ಶೆ, ತುಲನೆಗಿಂತಲೂ ಹೆಚ್ಚಾಗಿ ಈ ಲೇಖನದಲ್ಲಿ ಅವರ ಸಾಧನೆಯ ಕಿರುಪರಿಚಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

೧. ಕವಿಯಾಗಿ : ಜಿ.ಎಸ್.ಎಸ್.

ಕಳೆದ ನಲವತ್ತು ವರ್ಷಗಳಿಂದ ಕಾವ್ಯಕೃಷಿಯಲ್ಲಿರುವ ಜಿ.ಎಸ್.ಎಸ್. ನಗರಪ್ರಜ್ಞೆ, ಶಿಷ್ಟಭಾಷೆಗಳಿಂದ ಗಮನ ಸೆಳೆಯುತ್ತಾರೆ. ಬಹುತೇಕ ಕವಿತೆಗಳು ಪ್ರತಿಕ್ರಿಯಾ

ರಚನೆಗಳಾಗಿದ್ದರೂ ಅಲ್ಲಲ್ಲಿ ಸಹಜ ಲಯ, ಗೇಯತೆಗಳು ವಿಶಿಷ್ಟವೆನಿಸುತ್ತವೆ. ನವೋದಯದ ಎಲ್ಲ ಗುಣಲಕ್ಷಣಗಳೊಂದಿಗೆ ಆರಂಭವಾದ ಇವರ ಕಾವ್ಯ ಕ್ರಮೇಣ ಸಮಕಾಲೀನ ದನಿಯನ್ನು ಒಳಗೊಳ್ಳಲು ಯತ್ನಿಸಿರುವುದು ಗಮನಾರ್ಹವಾಗಿದೆ. 'ಸಮನ್ವಯ' ವಿಶೇಷಣದ ಕವಿಯಾಗಿ ಕಣವಿಯೊಂದಿಗೆ ಆಧುನಿಕ ಕನ್ನಡ ಕಾವ್ಯದ ಮುಖ್ಯ ಘಟ್ಟಗಳಲ್ಲಿ ಚರ್ಚೆಗೊಳಗಾಗಿರುವ ಇವರು ಇಷ್ಟು ದೀರ್ಘಕಾಲ ಕಾವ್ಯರಚನೆಯಲ್ಲಿ ತೊಡಗಿರುವುದು, ಸತತವಾಗಿ ಕಾವ್ಯರಚನೆ ಮಾಡಿರುವುದು ಆಶ್ಚರ್ಯವೆನಿಸುತ್ತದೆ. ಆರಂಭಿಕ ಹಂತದ ರಚನೆಗಳು ಮಾಮೂಲಿ ಎನಿಸಿದರೂ 'ಕಾವ್ಯಶಿಲ್ಪ'ದ ದೃಷ್ಟಿಯಿಂದ 'ದೀಪದ ಹೆಜ್ಜೆ' ಕವನ ಸಂಕಲನದ ನಂತರದ ರಚನೆಗಳು ಮುಖ್ಯವೆನಿಸುತ್ತವೆ. ಆದರೂ ಇಡೀ ಕಾವ್ಯದ ಭಾಷೆ ತೀರಾ ಜಡ, ತೀರಾ ಪಾರದರ್ಶಕ ಎನಿಸಿಬಿಡುತ್ತದೆ?

ಹಬ್ಬ, ಹರಿದಿನ, ಸಭೆ, ಸಮಾರಂಭ, ನೆನಪು ಇತ್ಯಾದಿಗಳಿಗೆ ನಿತ್ಯವೆಂಬಂತೆ ಹಾಗೂ ಖಾಯಂ ಎಂಬಂತೆ ಕಾವ್ಯ ರಚಿಸಿರುವುದು, ಆ ಬಗ್ಗೆ ಸಂಕಟ-ವಿಷಾದ ತೋರಿಸಿರುವುದೂ ಉಂಟು. (ಸಂಪಾದಕರಿಗೆ) 'ಕವಿತೆ', 'ಶ್ರೀಪಾದರಿಗೆ', 'ಎಚ್ಚರಿಕೆ', 'ಕನಸಿಂದ ನನಸಿಗೆ', 'ಮಬ್ಬಿನಿಂದ ಮಬ್ಬಿಗೆ' ಮೊದಲಾದ ಕೆಲ ಕವಿತೆಗಳನ್ನು ಬಿಟ್ಟರೆ ಉಳಿದ ಬಹುತೇಕ ರಚನೆಗಳು ಸಾಂಪ್ರದಾಯಿಕ-ನಿಯತಕಾಲಿಕ ರಚನೆಗಳೆನಿಸುತ್ತವೆ. ಚೆಲುವು, ಸ್ವಾತಂತ್ರ್ಯ, ವಿಜ್ಞಾನ, ರಾಜಕೀಯ ಮೊದಲಾದ ವಸ್ತುಗಳು ಕಾವ್ಯಕ್ಕೆ ಹಿನ್ನೆಲೆಯಾಗಿದ್ದರೂ ತೀವ್ರ ಬಡತನ, ನಿರುದ್ಯೋಗ, ಒಂಟಿತನ, ಕ್ಷೋಭೆ, ಬದಲಾದ ಬದುಕು -ಇವು ಕವಿಯನ್ನು ತೀವ್ರವಾಗಿ ಕಾಡಿದಂತೆ ಕಾಣದು.

ಆಶ್ಚರ್ಯವೆಂದರೆ ಕಣವಿ ಕೆ.ಎಸ್.ನ. ಹಾಗೂ ಜಿ.ಎಸ್.ಎಸ್.ರಲ್ಲಿ ಅನೇಕ ಸಾಮ್ಯತೆಗಳು ಪದೇ ಪದೇ ಕಾಣಬರುವುದು. ಒಂದೇ ಕಾಲದಲ್ಲಿ ಮತ್ತು ಸತತವಾಗಿ ಬರೆದಿರುವುದು ಈ ಮೂವರು ಕವಿಗಳ ವಿಶೇಷ. ಆದರೆ ಕಣವಿಯವರ ಭಾಷೆಯ ದೇಸೀ ನೆಲೆ, ಕೆ.ಎಸ್.ನ.ರ ಕವಿತೆಗಿರುವ ಕೌಟುಂಬಿಕ ಸುಕುಮಾರತೆ ಜಿ.ಎಸ್.ಎಸ್.ರಲ್ಲಿ ಕಾಣಬರದು. ಕೆ.ಎಸ್.ನ. ನವ್ಯವನ್ನು ಯಶಸ್ವಿಯಾಗಿ ಹಾದು ನೆಲೆನಿಂತರೂ ಜಿ.ಎಸ್.ಎಸ್. ಬಗ್ಗೆ ಅದೇ ಮಾತನ್ನು ಹೇಳಲು ಬರುವುದಿಲ್ಲ. ಕಾವ್ಯಲಯದ ಭಿನ್ನತೆಗಾಗಿ ಹುಡುಕಾಟ ಅಲ್ಲಲ್ಲಿ ಕಂಡುಬಂದರೂ ಆತ್ಮವಿಶ್ವಾಸ ಹಾಗೂ ಅಗತ್ಯದ ರಚನೆಗಳೇ ಬಹಳಷ್ಟು ಇರುವುದೂ ಸಹಜ.

'ನವ್ಯ' ಹಾಗೂ ನವ್ಯೋತ್ತರ ಕವಿತೆಗೆ ಪೂರಕವಾಗಿರುವ ಕವಿತೆಗಳು ಕವಿಯ ಸಹಜ ಜಾಯಮಾನಕ್ಕೆ ಭಿನ್ನವಾಗಿವೆ. "ಶಿಲ್ಪ" ಅಲ್ಲಲ್ಲಾ ಗಟ್ಟಿಯಾಗಿದೆ ಎನಿಸಿದರೂ, ಕವಿತೆ ಬೆಳೆದುಬರುವ ರೀತಿ ಸಹಜವೆನಿಸುವುದಿಲ್ಲ. 'ನಂಬುಗೆ'ಯೊಂದು ಕಾವ್ಯಭಿತ್ತಿಯ

ಹಿನ್ನೆಲೆಯಾಗಿ ಕಂಡುಬರುವಂತೆ ಭಾಸವಾದರೂ ಆ 'ನಂಬುಗೆ' ಆಯಾಮರಹಿತವೂ, ಕಾಲಬದ್ಧವೂ ಆದುದಾಗಿದೆ. ಬದಲು ಅಲ್ಲೆಲ್ಲೂ ಸಮುದಾಯಬದ್ಧವೂ, ಕ್ರಾಂತಿ ಎನಿಸುವಂಥದ್ದೂ, ಪ್ರಗತಿಪರ ನಿಲುವಿಗೆ ಬೆಂಬಲಿಸುವಂಥದ್ದೂ ಆದ ತುಡಿತ ಎದ್ದು ಕಾಣದು.

'ಕಾವ್ಯ'ದ ಮುಖ್ಯ ಲಕ್ಷಣ 'ವ್ಯಂಗ್ಯ'. ಅದು ಕಟು ವ್ಯಂಗ್ಯವಾಗಿರಬೇಕಿಲ್ಲ. ವ್ಯಂಗ್ಯ ರಹಿತ ಅಭಿವ್ಯಕ್ತಿಗೆ ಆಯಾಮ ಕಡಿಮೆ. ಅನಂತಮೂರ್ತಿ 'ವ್ಯಂಗ್ಯ'ಕ್ಕೆ ಅಂತಹ ಮಹತ್ವ ಕೊಡದಿದ್ದರೂ, ಲಂಕೇಶರು ಉತ್ತಮ ಕಾವ್ಯ ವ್ಯಂಗ್ಯದ ಪರಿಧಿಯಿಂದ ದೂರಾಗಿರದು ಎನ್ನುತ್ತಾರೆ. ಗ್ರೀಕ್, ಇಂಗ್ಲೀಷ್ ಕಾವ್ಯದ ಮಹತ್ವದ ರಚನೆಗಳು ವ್ಯಂಗ್ಯದಿಂದಲೇ ಮಹತ್ವಪೂರ್ಣ ರಚನೆಗಳಾಗಿರುವುದೂ ಗಮನಿಸಬೇಕಾದ ಅಂಶ. 'ಶ್ರೀಪಾದರಿಗೆ' 'ಅನಾವರಣವಾಯಿತಂತೆ' ಮೊದಲಾದ ಕವಿತೆಗಳಲ್ಲಿ ಜಿ.ಎಸ್.ಎಸ್. ಇದನ್ನು ಸಾಧಿಸುತ್ತಾರಾದರೂ ಉಳಿದವು ಆ ದಿಸೆಯಲ್ಲಿ ಸ್ಪಂದಿಸುವುದಿಲ್ಲ. ಅಲ್ಲಲ್ಲಿ ಜಿಎಸ್ಎಸ್ ವ್ಯಕ್ತಿ ಸಂಸ್ಕಾರದ ಹಿನ್ನೆಲೆಯಲ್ಲಿ ಬಲು ಮುಖ್ಯ ಎನಿಸುತ್ತಾರೆ. ಅದೇ ಕಾರಣಕ್ಕೆ ಜಾತಿ ಸಂಸ್ಕಾರ ಮತ್ತು ಆಚರಣೆಗಳ ಹೊದಿಕೆಯನ್ನೂ ನಿರಾಕರಿಸಿರುವುದು ಬಹುಮುಖ್ಯ ಸಂಗತಿ ಎನಿಸುತ್ತದೆ.

ಜಿ.ಎಸ್.ಎಸ್. ಕಾವ್ಯರಚನೆಯ ಕಾಲಮಾನವನ್ನು ಮೂರು ಘಟ್ಟಗಳಾಗಿ ಅಧ್ಯಯನ ಮಾಡಿದಲ್ಲಿ ಈ ಕೆಳಕಂಡ ಅಂಶಗಳನ್ನು ಗುರುತಿಸಬಹುದು:

೧) **ಮೊದಲ ಘಟ್ಟ:** ಈ ಹಂತದಲ್ಲಿ ಜಿ.ಎಸ್.ಎಸ್. ಪರಂಪರೆಯೊಂದಿಗೆ ತಮ್ಮನ್ನು ಗುರುತಿಸಿಕೊಂಡದ್ದು ವಿಶೇಷವಾಗಿ ಕಾಣಬರುತ್ತದೆ. ಅಲ್ಲದೆ ನವೋದಯ ಮತ್ತು ಆ ಮನೋಭಾವದ ಹಿನ್ನೆಲೆಯ ಪ್ರಭಾವ ಇಲ್ಲಿನ ವಿಶೇಷ ನೆಲೆಗಳೆನ್ನಬಹುದು. ಹಾಗಾಗಿ ಇದು ಸೌಂದರ್ಯ ಸ್ವರೂಪದ ಆರಾಧನೆಯ ಹಂತ ಎನ್ನಬಹುದು. ಅಲೌಕಿಕತೆ, ಕನಸು, ಆದರ್ಶ, ಕಾವ್ಯಾನಂದ, ಮಾರ್ದವತೆ, ಶಬ್ದ ಚಮತ್ಕಾರ, ಭಾವಗೀತತೆ, ಗೇಯತೆ ಇಲ್ಲಿನ ಮುಖ್ಯ ಭಿತ್ತಿಗಳು. ಅವರ ಅಲ್ಲಿ-ಇಲ್ಲಿ, ನೆಲದ ಕಲೆ, ಹಳೆಯ ಹಾಡು, ತೃಪ್ತಿ, ಶಾಕುಂತಲ, ಸಂಧ್ಯೆ ಮೊದಲಾದ ಕವಿತೆಗಳು ಈ ಮಾತಿಗೆ ನಿದರ್ಶನಗಳಾಗಿವೆ. ಹಾಗಾಗಿ ಸಾತ್ವಿಕತೆ ಇಲ್ಲಿನ ಮುಖ್ಯ ಗುಣ ಎಂದು ಕರೆಯಬಹುದು. ಚೆಲುವಿನ ಆರಾಧನೆ, ನೀತಿ-ಅನೀತಿಗಳ ಹಂಗು ತೊರೆದ ಇಂದ್ರಿಯ ಗಮ್ಯ ಅನುಭಾವಗಳ ಉತ್ಕಟ ಶೋಧನೆ ಇಲ್ಲದ ಸ್ಥಿತಿ ಇಲ್ಲಿ ಗಮನ ಸೆಳೆಯುತ್ತವೆ. 'ಜಡೆ' ಕವಿತೆಯನ್ನು ಈ ದಿಸೆಯಲ್ಲಿ ಗಮನಿಸಬಹುದು. ಸಾಧಾರಣತೆಯಿಂದ ವಿಸ್ಮಯದೆಡೆಗೆ ಸಾಗುವ ಒಂದು ಅನುಭವ ಇಲ್ಲಿದೆ. ಅಂದರೆ 'ಚೆಲುವು' ಮನಸ್ಸಿನ ಉನ್ನತೀಕರಣದ ಒಂದು ಅನುಭವ ಸಾಧನವಾಗಿದೆ ಇಲ್ಲಿ. ಇದರೊಡನೆ ಒಂದು ಕ್ಷಣದ ಅನುಭವವನ್ನು

ಹೇಳುವಂತಹ ಪ್ರತಿಕ್ರಿಯಾತ್ಮಕ ಸ್ವರೂಪದ ಕವಿತೆಗಳೂ ಉಂಟು. ಅಂದರೆ ಒಂದು ನಿರ್ದಿಷ್ಟ ಕಾಲಾವಧಿಯ ಮನಸ್ಥಿತಿಯ ಅಭಿವ್ಯಕ್ತಿ ಇವು. ಹಾಗಾಗಿ ಅನುಭವಕ್ಕಿಂತ ಅನುಭೂತಿ ಇಲ್ಲಿನ ಕವಿತೆಗಳ ಸ್ಥಾಯಿಯಾಗಿ ಭಾಸವಾಗುತ್ತದೆ.

೨) **ಎರಡನೆ ಘಟ್ಟ:** ಈ ಹಂತದಲ್ಲಿ ಕವಿ ಅರ್ಥಪೂರ್ಣ ಅನುಭವ ಮತ್ತು ಅಭಿವ್ಯಕ್ತಿಗೆ ಬದ್ಧರಾದ ಮನೋಸ್ಥಿತಿ ಕಂಡುಬರುತ್ತದೆ. ಪ್ರಗತಿಶೀಲತೆ, ನವ್ಯ, ನವ್ಯೋತ್ತರದ ಸಮೀಕರಣದ ಪ್ರಯತ್ನ ಇಲ್ಲಿ ಕಂಡುಬರುತ್ತದೆ. ಹಾಗಾಗಿ ಕ್ವಚಿತ್ತಾಗಿ ಎಂಬಂತೆ, ಆಯಾಚಿತ ಎಂಬಂತೆ ಎಡಪಂಥೀಯ (?) ಚಿಂತನೆಗಳು, ಮೌಲ್ಯಗಳು ಇಲ್ಲಿ 'ಕಾಡುವ ಭಾವ'ಗಳಾಗಿರುವುದನ್ನು ಗುರುತಿಸಬಹುದು. ದೀಪದ ಹೆಜ್ಜೆ, ಸಂಜೆ ದಾರಿ, ಮಬ್ಬಿನಿಂದ ಮಬ್ಬಿಗೆ, ಕನಸಿಂದ ಕನಸಿಗೆ ಮೊದಲಾದ ಕವಿತೆಗಳು ಈ ಕಾರಣಕ್ಕೆ ವಿಶಿಷ್ಟ ರಚನೆಗಳೆನಿಸುತ್ತವೆ. ಶಿಲ್ಪ ಮತ್ತು ಅಭಿವ್ಯಕ್ತಿಯ ದೃಷ್ಟಿಯಿಂದ ಇಲ್ಲಿನ ಕವಿತೆಗಳಲ್ಲಿ ತಾಳ್ಮೆಯುಕ್ತ ಚಿಂತನಾಪರತೆ ಮೂಡಿರುವುದನ್ನು ಗುರುತಿಸಬಹುದು. ಹಾಗಾಗಿ ಆಶಾವಾದ, ನೈತಿಕತೆ, ಸೊಗಸು, ವಿಷಮತೆ, ನಾಗರೀಕತೆ, ಚಾರಿತ್ರಿಕ ಪ್ರತಿಕ್ರಿಯೆ, ಸಮಕಾಲೀನತೆ ಈ ಕವಿತೆಗಳ ನೆಲೆಯಾಗಿವೆ. ಆದ್ದರಿಂದ ಈ ಹಂತವು ಅನುಭವಪೂರ್ಣತೆಯ ಘಟ್ಟವಾಗಿ ಕಂಡುಬರುತ್ತದೆ.

೩) **ಸಾಮಾಜಿಕ ನೆಲೆ:** ಈ ಹಂತದ ರಚನೆಗಳಿಗೆ ಭಿನ್ನ ಪಾತಳಿಯಿದೆ. ಹಾಗಾಗಿ ಸಮಕಾಲೀನ ಕವಿ-ಕವಿತೆಗಳು ಇಲ್ಲಿನ ಕವಿಯನ್ನು ಪ್ರಯತ್ನಪೂರ್ವಕವಾಗಿ ಅರಿವಿನ ವಿಸ್ತರಣೆಗೆ ಅಭಿವ್ಯಕ್ತಿ ಮಾಧ್ಯಮಕ್ಕೆ ತಳ್ಳಿವೆ. ನವೋದಯ ಪಂಥದ ಮುಖ್ಯ ತತ್ವಾಂಶಗಳು ಸತ್ಯಾಂಶಗಳಾಗಿ ಇಲ್ಲಿ ಮುಂದುವರೆದಿರುವುದನ್ನು ಗುರುತಿಸಬಹುದು. ನಿಸರ್ಗದ ಚೇತೋಹಾರಿ ಅನುಭವ ಇಲ್ಲಿ ಅನುಭಾವಿಕ ನೆಲೆಯತ್ತ ಸಾಗಿರುವುದನ್ನು ನೋಡಬಹುದು. ಆಶಾವಾದಿ ನೆಲೆಯ ಮಾರ್ದವತೆ ಕವಿತೆಯನ್ನು ಮಾನವತಾವಾದ ಹಾಗೂ ಉದಾರವಾದೀ ಕಾವ್ಯಭೂಮಿಕೆಯತ್ತ ನಿರ್ದೇಶಿಸಿರುವುದನ್ನು ಗಮನಿಸಬಹುದು. ಈ ಮಾತುಗಳ ಸ್ಪಷ್ಟೀಕರಣಕ್ಕೆ ಜಿ.ಎಸ್.ಎಸ್. ಕವಿತೆಗಳನ್ನು ಗಂಗಾಧರ ಚಿತ್ತಾಲ, ಕೆ.ಎಸ್.ನ. ಮತ್ತು ಕಣವಿ ಜೊತೆ ಹೋಲಿಸಿ ನೋಡಿದಲ್ಲಿ ನಿದರ್ಶನಗಳು ದೊರೆಯುತ್ತವೆ. 'ತೆರೆದ ದಾರಿ', 'ಗೋಡೆ', 'ಮುಂಬೈ ಜಾತಕ' ರಚನೆಗಳು ಅಂತವು. ಇಲ್ಲೆಲ್ಲಾ 'ವಿಷಾದ' ಎದ್ದುಕಾಣುವ ಗುಣ. ಹಾಗಾಗಿ ಮನುಷ್ಯ ಸಂಬಂಧಗಳು ಮತ್ತು ಸಂವಹನ ಸಮಸ್ಯೆ ಇಲ್ಲಿನ ಕವಿತೆಗಳಲ್ಲಿನ 'ಅಂತರ್ಮುಖತೆ'ಗೆ ಕಾರಣವಾಗಿವೆ. ಅದರ ಜೊತೆಗೆ ಸಾಮಾಜಿಕ ಕಹಿ, ಒಂಟಿತನ, ಬಿಕ್ಕಟ್ಟು ಇರುವ ಜೀವನ ದರ್ಶನ ಈ ಕವಿತೆಗಳ ಸ್ಥಾಯಿಯಾಗಿವೆ. ೧೯೫೦ರಲ್ಲಿ ರಚನೆಯಾದ ಕವಿತೆ "ಬೆಳಗು ಬಾ ಹಣತೆಯನು ನನ್ನೆದೆಯ ಗುಡಿಯಲ್ಲಿ" ಎಂಬ ನೆಲೆಯಲ್ಲಿ ಮುಕ್ತಾಯಗೊಂಡರೆ ಇದೇ ಕವಿತೆ ೧೯೭೦ರ ಹೊತ್ತಿಗೆ "ಹಣತೆ ಹಚ್ಚುತ್ತೇನೆ ನಾನೂ; ಈ ಕತ್ತಲನು ಗೆಲ್ಲು

ನಿಲ್ಲುತ್ತೇನೆಂಬ ಜಿದ್ದಿನಿಂದಲ್ಲ" ಎಂಬ ಭಿನ್ನತೆಯೊಂದಿಗೆ ಮುಕ್ತಾಯವಾಗುತ್ತದೆ. ಇಲ್ಲಿ ಕವಿ ಕಂಡುಕೊಂಡ ಅರ್ಥಪೂರ್ಣ ದಾರಿ ಸ್ಪಷ್ಟವಾಗಿದೆ. ಈ ಬದಲಾವಣೆ ಕವಿಯ ಮನೋವಿನ್ಯಾಸದಲ್ಲಿ ಆದ ಗ್ರಹಿಕೆಯನ್ನು ಸೂಚಿಸುವಂತಿದೆ. ಅಲ್ಲದೆ ನವೋದಯ ಹಂತ ನವ್ಯೋತ್ತರ ಘಟ್ಟದಲ್ಲಿ ಟಿಸಿಲೊಡೆದ ರೀತಿಯನ್ನೂ ಬಿಂಬಿಸಿದೆ. ಆರಂಭದಲ್ಲಿ ಕುವೆಂಪು ಪ್ರಭಾವ ದಟ್ಟವಾಗಿದ್ದ ರಚನೆಗಳು (ಸಚ್ಚಿದಾನಂದನ ಅನಂತರೂಪವನು, ನನ್ನ ಸಾಂತತೆಯಲ್ಲಿ ಸೆರೆಗೈದು ತೋರುತಿದೆ) ಕ್ರಮೇಣ ಚಿತ್ತಾಲ, ಲಂಕೇಶರ ಮನೋಧರ್ಮದತ್ತ ಸಾಗಿರುವುದನ್ನು ಗುರುತಿಸಬಹುದು. (ತಾಯಿಗೆ, ಅವ್ವ)

ಮೇಲಿನ ತಾತ್ವಿಕ ಅಂಶಗಳ ನಿರ್ವಚನೆಯಿಂದ ಒಟ್ಟಾರೆಯಾಗಿ ಜಿ.ಎಸ್.ಎಸ್. ಕವಿತೆಗಳ ಬಗ್ಗೆ ಹೀಗೆ ಹೇಳಬಹುದು: ಜಿ.ಎಸ್.ಎಸ್. ಕವಿತೆಗಳಲ್ಲಿ ಎದ್ದುಕಾಣುವ ಗುಣ 'ಪ್ರಸಾದ'. ಸಂವಹನ ಇಲ್ಲಿ ಕಲೆಯಾಗಿದೆ; ಏಕೆಂದರೆ ಹೇಳಲೇಬೇಕು ಎನ್ನುವುದು ಇಲ್ಲೆಲ್ಲ ಮುಖ್ಯ ನೆಲೆಯಾಗಿ ಕಂಡುಬರುತ್ತದೆ. ಇದು ಆ ಕಾಲದ ಸಾಮಾಜಿಕ ತುರ್ತು ಮತ್ತು ವೈಯಕ್ತಿಕ ನೆಲೆಯ ಅಭೀಪ್ಸೆಯೂ ಆಗಿದೆ. ಕುವೆಂಪು ನಂತರ ಅವೈದಿಕ ನೆಲೆಯೊಂದರ ಅನಾವರಣವು ಇಲ್ಲಿ ಗುರುತಿಸಲೇಬೇಕಾದ ಅನಿವಾರ್ಯ ಪ್ರಯತ್ನವೂ ಆಗಿದೆ. ಹಾಗಾಗಿ ಅನುಭವ, ಅನಿಸಿಕೆ ಭಾಷಿಕ ರೂಪ ಪಡೆದಿವೆ; ಇದು ಏಕಕಾಲದಲ್ಲಿ ಭಾವಗಳ ದಾಖಲೆ ಹಾಗೂ ಬಿಡುಗಡೆಯೂ ಆಗಿದೆ. ಅದೇ ಕಾರಣಕ್ಕೆ ಮೊದಮೊದಲ ಕವಿತೆಗಳ ಗೇಯತೆ, ಮೂರ್ತಬಂಧ ನಂತರದ ರಚನೆಗಳಲ್ಲಿ ಶಿಲ್ಪದಲ್ಲಿ ಸಾಕಾರಗೊಂಡಿರುವುದನ್ನು ಗಮನಿಸಬಹುದು. ಕವಿ ಗ್ರಹಿಸಿದ 'ಅರ್ಥ'ದ ಸಂವಹನಕ್ಕಾಗಿ ಪ್ರತೀಕ, ಸಂಕೇತ, ಉಪಮೆ, ರೂಪಕ, ಇಲ್ಲಿನ ಕವಿತೆಗಳಲ್ಲಿ ಮೈದಳೆದಿವೆ. ಹಾಗಾಗಿ ಕವಿತೆಗಳು ಮುಕ್ತ ಲಕ್ಷಣ ಒಳಗೊಂಡಂತೆ ಬದ್ಧತೆಯನ್ನು ಬಿಂಬಿಸಿವೆ. ಹಾಗೆಯೇ ಮೊದಲ ಹಂತದ ಕವಿತೆಗಳು ಜೀವಸಮೃದ್ಧ ಪ್ರಕೃತಿಯಿಂದ ನೆಲೆಗೊಂಡರೆ ನಂತರದ ರಚನೆಗಳು ಮಾನವ ಕೇಂದ್ರಿತ ಸಮಾಜದತ್ತ ನಡೆದಿರುವುದನ್ನು ಗಮನಿಸಬಹುದು. ಅಲ್ಲಿ ವಿಸ್ಮಯ, ಉತ್ಸುಕತೆ ಕವಿತೆಯ ನೆಲೆಯಾಗಿವೆ. ಜೊತೆಗೆ ಖಿನ್ನತೆ, ಸಾತ್ವಿಕ ಕ್ರೋಧ, ಹತಾಶೆ, ಅಸಹಾಯತೆ ಒಡಮೂಡಿವೆ. ಆದರೆ ಆಧುನಿಕ ಕವಿತೆ ಸಮುದಾಯದತ್ತ ತಿರುಗಿದೊಡನೆ 'ಒಳಗೇಯತೆ' ದಕ್ಕದಿರುವುದೂ ಗಮನಾರ್ಹ. ಇಲ್ಲೆಲ್ಲಾ ಉಕ್ತಿ, ಮಾತಿನ ವರಸೆ ಮೈದಾಳಿವೆ. ಅಂತೆಯೇ 'ಬಂಧ' ಹಿಂದೆ ಸರಿದಂತೆ ಕಂಡುಬಂದು ಅಲ್ಲಲ್ಲಿ ನಿಯತ ಛಂದ, ಬಹುಪಾಲು ಮುಕ್ತ ಛಂದ, ಅರ್ಥಾನುಸಾರಿ ಲಯ ಕಂಡುಬರುತ್ತದೆ. ಇಲ್ಲೆಲ್ಲಾ ಕವಿತೆ 'ಯಾರಿಗೋ ಹೇಳಲ್ಪಟ್ಟಂತಹ ಧಾಟಿ'ಯಲ್ಲಿ ಸಾಗಿದೆ.

ಆದರ್ಶವಾದ ಕರಗಿ; ವಾಸ್ತವವಾದಕ್ಕೆ ಅಭಿವ್ಯಕ್ತಿ ಹೆಜ್ಜೆಯಿಡತೊಡಗಿದ್ದನ್ನು ಮಬ್ಬಿನಿಂದ ಮಬ್ಬಿಗೆ ಕವಿತೆಯ ಹಿನ್ನೆಲೆಯಲ್ಲಿ ಗುರುತಿಸಬಹುದು. ಶಿಲ್ಪದ ದೃಷ್ಟಿಯಿಂದ

ಇದು ಜಿ.ಎಸ್.ಎಸ್.ರ ಮುಖ್ಯ ಕವಿತೆಗಳಲ್ಲೊಂದು. ಹಾಗೆಯೇ ನವೋದಯದ ತಾತ್ವಿಕತೆಗಿಂತ ಭಿನ್ನವೂ, ನಿಸರ್ಗದಿಂದ ವ್ಯಕ್ತಿ ಪ್ರಕೃತಿಯೆಡೆಗೆ ಸಾಗುವ ರಚನೆಯೂ ಆಗಿ 'ಜಡೆ' ಕವಿತೆ ಗಮನ ಸೆಳೆಯುತ್ತದೆ.

'ಸಂಜೆ ದಾರಿ', 'ಗಡಿಯಾರ' ಭಿನ್ನ ರಚನೆಗಳಾಗಿವೆ. ಕಾಲ, ಪ್ರಕೃತಿ ವ್ಯಾಪಾರ ಮೊದಲಾದ ನೆಲೆಯಿಂದ ಇಲ್ಲಿನ ಕವಿತೆ ಉದ್ವಿಗ್ನತೆ, ವಿಷಾದದ ಹಂತಕ್ಕೆ ದಾಟಿಸುತ್ತದೆ. ಕೇಂದ್ರ ಪ್ರತಿಮೆಯೊಂದು ಸ್ಪಷ್ಟ ರೂಪು ತಳೆಯುತ್ತದೆ. ಆಶ್ಚರ್ಯವೆನಿಸುವಂತೆ ಜಿ.ಎಸ್.ಎಸ್. 'ಅನಾವರಣವಾಯಿತಂತೆ' ಕವಿತೆ ರಚಿಸಿದ್ದಾರೆ. ಇಲ್ಲಿ ಅಪರೂಪದ ವ್ಯಂಗ್ಯ, ಸಮಕಾಲೀನತೆ, ಕಟಕಿ, ಸಾಮಾಜಿಕ ಬದ್ಧತೆ, ರಾಜಕೀಯ ನಿಲುವು ಸಾಂದ್ರವಾಗಿ ಮೇಳೈಸಿವೆ. ಹಾಗಾಗಿ 'ಬದುಕು' ವಿಚಿತ್ರವಾಗಿ ಕಾಡಲು ಶುರುವಾಗಿ 'ಪ್ರೀತಿ ಇಲ್ಲದವ ಕವಿಯಾಗಲಾರ' ಎಂಬ ತಾತ್ವಿಕ ಭೂಮಿಕೆ ಸಿದ್ಧಗೊಂಡಿದೆ.

ಎಪ್ಪತ್ತರ ದಶಕದ ನಂತರದ ಜಿ.ಎಸ್.ಎಸ್. ಕೊಂಚ ಭಿನ್ನ ಕವಿಯಾಗಿ ಕಾಣುತ್ತಾರೆ. 'ಒಂಟಿತನ'ದ ಜೊತೆ ವೈಯಕ್ತಿಕ ಸಂಬಂಧಗಳ ಲೋಕದಲ್ಲಿ ಉಂಟಾದ ಅಲ್ಲೋಲ-ಕಲ್ಲೋಲಗಳು ಇಲ್ಲಿ ಮುಖ್ಯಸ್ಥಾಯಿಯಾಗಿವೆ. ಆದರೆ ಇಲ್ಲಿನ ಕವಿತೆ ಕೇವಲ ಭಾವಗೀತೆಯಾಗಿ, ಸರಳ ಸಂವೇದನೆಯಾಗಿ ನಿಂತುಬಿಟ್ಟಿದೆಯೆ? ಎಂಬ ಪ್ರಶ್ನೆಯೂ ಏಳುತ್ತದೆ. ಹಾಗಾಗಿ ಬಹುತೇಕ ಕವಿಗಳಂತೆ ಈ ಕವಿ ಕೂಡ ಸಾಮಾಜಿಕ ವಾಸ್ತವ ಕುರಿತ ಕವಿತೆಯಲ್ಲಿ ಅಂಥ ಗಾಢ ಅನುಭವ ನೀಡದೆ ಹೋಗಿರುವುದನ್ನು ಗಮನಿಸಬಹುದು.

ಒಟ್ಟಾರೆ ಜಿ.ಎಸ್.ಎಸ್. ದೇವರು-ಧರ್ಮದ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡಿಲ್ಲ. ಬಹುಶಃ ಈ ಮನೋಭಾವ ಕಾಲಮಾನದ ಬದ್ಧತೆಯೂ ಇದ್ದಿರಬಹುದು. ಹಾಗಾಗಿ "ಎಲ್ಲೊ ಹುಡುಕಿದೆ..." ಎಂಬಂಥ ರಚನೆಗಳು ಮೂಡಿವೆ. ಜೊತೆಗೆ 'ಶ್ರೀಪಾದರಿಗೆ' ಎಂಬಂಥ ಅಪರೂಪದ ವ್ಯಂಗ್ಯವೂ ಉಂಟು. ಆದರೆ "ಸಿದ್ಧಗಂಗೆಯ ಶ್ರೀಚರಣಕ್ಕೆ" ಎಂಬಂಥ ಕವಿತೆಗಳು ಒಟ್ಟಾರೆಯಾಗಿ ಓದು-ವ್ಯವಸ್ಥೆ-ಕವಿ-ಕಾವ್ಯ-ಕಾಲ-ಸಮಾಜಕ್ಕೆ ಪ್ರಶ್ನೆಗಳಾಗಿಬಿಡುವ ಸಂಭವವೂ ಉಂಟು.

ಕವಿಯಾಗಿ ಜಿ.ಎಸ್.ಎಸ್. ವಿಸ್ತಾರ ಅಧ್ಯಯನಕ್ಕೆ ಅರ್ಹರು. ಆದರೆ ಸೂಕ್ಷ್ಮ ಅಧ್ಯಯನದ ಬದಲು ಸಾಂಸ್ಕೃತಿಕ ವಿಮರ್ಶೆ ಜಿ.ಎಸ್.ಎಸ್.ರನ್ನು ಕನ್ನಡ ಕಾವ್ಯ ವಾಹಿನಿಯ ಆಧುನಿಕ ಹಂತದ ಮುಖ್ಯ ಕವಿಯಾಗಿ ಗುರುತಿಸಬಲ್ಲುದು ಎನಿಸುತ್ತದೆ.

ಜಿ.ಎಸ್.ಎಸ್. ಗದ್ಯ: ಜಿ.ಎಸ್.ಎಸ್. ಸಾಹಿತ್ಯಾಸಕ್ತರಿಗೆ ಸಂತೋಷ ಕೊಡುವ ವಿಚಾರವೊಂದಿದೆ. ಅದೆಂದರೆ ಅವರ ಇಡೀ ಗದ್ಯ ಮೂರು ಸಂಪುಟಗಳಲ್ಲಿ

ಸಂಕಲಿತವಾಗಿದ್ದು; ಅವು ಪ್ರಕಟವಾಗಿವೆ. ಅವರ ಮೊದಲ ವಿಮರ್ಶಾಲೇಖನ ಪ್ರಕಟವಾಗಿರುವುದು ೧೯೫೫ರ ಸುಮಾರಿನಲ್ಲಿ. ಮೊನ್ನೆ ಮೊನ್ನೆ ಡಿ.ಆರ್. ನೆನಪಿನ ಲೇಖನವೊಂದನ್ನು ಬರೆದರು. ಅಂದರೆ ಸುಮಾರು ಐವತ್ತು ವರ್ಷಗಳ ದೀರ್ಘ ಅವಧಿಯ ಇತಿಹಾಸ ಅವರ ಗದ್ಯಕ್ಕಿದೆ.

ಸಮಗ್ರ ಗದ್ಯ-೧: ಇದು ಮೂವತ್ತೆರಡು ಲೇಖನಗಳುಳ್ಳ ಕೃತಿ. ಜಿ.ಎಸ್.ಎಸ್. ಹಳಗನ್ನಡ ಕಾವ್ಯಪರಂಪರೆಯೊಂದಿಗೆ ನಡೆಸಿದ ಸಾಹಿತ್ಯಿಕ ವಾಗ್ವಾದ ಇಲ್ಲಿದೆ. ಹಾಗಾಗಿ ಈ ಸಂಪುಟ ಪ್ರಾಚೀನ ಸಾಹಿತ್ಯ ಕುರಿತದ್ದಾಗಿದೆ. ಇದಕ್ಕೆ ಅವರು 'ಹಿಂದಣ ಹೆಜ್ಜೆ' ಎಂದೂ ಕರೆದಿದ್ದಾರೆ. ಪರಂಪರೆ ಹಾಗೂ ವರ್ತಮಾನಗಳ ಸಂಬಂಧದ ವಿಶಿಷ್ಟ ವ್ಯಾಖ್ಯಾನ ಈ ಮಾತಿನಲ್ಲಿ ಅಡಗಿದೆ. ಹೇಗೆ ನೋಡಿದರೂ ಈ ಕ್ರಿಯೆ 'ಕನ್ನಡ ಕಾವ್ಯ ಪರಂಪರೆಯನ್ನು ಕಂಡುಕೊಳ್ಳುವ ಪ್ರಯತ್ನ'ವಾಗಿದೆ. ಹಳಗನ್ನಡ ಸಾಹಿತ್ಯದ ವಿವೇಚನೆ, ಅದರ ಅನನ್ಯತೆ, ಸಾತತ್ಯದ ಗುರುತಿಸುವಿಕೆ ಇಲ್ಲಿದೆ.

ಆದಿಕವಿ ಪಂಪ, ವಚನಕಾರರು, ಹರಿಹರ, ರಾಘವಾಂಕ, ಲಕ್ಷ್ಮೀಶ, ಸರ್ವಜ್ಞ -ಮೊದಲಾದ ಲೇಖಕರನ್ನು ಜಿ.ಎಸ್.ಎಸ್. ಇಲ್ಲಿ ಭಿನ್ನ ನೆಲೆಯಲ್ಲಿ ಅರ್ಥೈಸಲು ಯತ್ನಿಸಿದ್ದಾರೆ. ಸಾಹಿತ್ಯದ ಪ್ರೇರಣೆ, ಕವಿ-ಸಹೃದಯ ಸಂಬಂಧ, ಸಾಮಾಜಿಕ ಚಿಂತನೆ, ಸಮಕಾಲೀನ ಪ್ರಜ್ಞೆ, ಅಭಿವ್ಯಕ್ತಿ ಸ್ವಾತಂತ್ರ್ಯ, ಪ್ರಾಮಾಣಿಕ ಸೃಜನಶೀಲತೆ ಮೊದಲಾದ ಪರಿಕಲ್ಪನೆಗಳ ನಿರ್ವಚನೆ ಈ ಲೇಖನಗಳಲ್ಲಿದೆ. ಹಾಗಾಗಿ ಇಲ್ಲಿನ ಗ್ರಹಿಕೆ ಆಯಾ ಲೇಖಕ ಮತ್ತು ಕೃತಿಯ ಸಾಂಸ್ಕೃತಿಕ ಮಹತ್ವವನ್ನು ಗುರುತಿಸಿದೆ. ಇಲ್ಲಿನ ವಿಮರ್ಶೆ ಮೆಲುದನಿಯಲ್ಲಿ ಸಾಗಿ, ಪ್ರತ್ಯೇಕ ನಿಲುವಿಗೆ ಬದ್ಧವಾಗುವಂತದ್ದು. "ನಮ್ಮ ಸಾಂಸ್ಕೃತಿಕ ಇತಿಹಾಸವೆಲ್ಲವೂ ಮಾನವನ ನೋವುಗಳನ್ನೂ, ತಾಕಲಾಟಗಳನ್ನೂ ಗಣನೆಗೆ ತೆಗೆದುಕೊಳ್ಳದೆ, ತತ್ಪರಿಣಾಮವಾದ ಸಾಧನೆಗಳನ್ನು ಮತ್ತು ಮೌಲ್ಯಗಳನ್ನು ಮಾತ್ರವೇ ವ್ಯಾಖ್ಯಾನಿಸುವ ಸ್ವರೂಪದ್ದಾಗಿರುವುದರಿಂದ ಅದು ಕೇವಲ ಸಂಸ್ಕೃತಿಯ ವೈಭವೀಕರಣವಾಗಿದೆಯೇನೋ ಎಂಬ ಅನುಮಾನ ನನಗೆ" ಎಂಬ ಅವರ ಮಾತುಗಳಿಗೆ ಆಳವಾದ ಅರ್ಥವಿದೆ.

ಜಿ.ಎಸ್.ಎಸ್. ಕಾವ್ಯನಿರ್ಮಿತಿ, ವಿಮರ್ಶೆ, ಮೀಮಾಂಸೆ ಈ ಮೂರರಲ್ಲೂ ಸಮಾನ ಆಸಕ್ತಿ ಉಳ್ಳವರು. ಹಾಗೆ ನೋಡಿದರೆ ಇವು ಪೂರಕ ಕ್ರಿಯೆಗಳು. ಹಾಗಾಗಿ ಕಾವ್ಯದ ಗುಣ, ಕಾವ್ಯತತ್ವದ ಅನ್ವೇಷಣೆ ಅವರಿಗೆ ತೀರಾ ಪ್ರಿಯವಾದ ಅಂಶಗಳು. ಪಂಪನ ಪುಷ್ಪೋದ್ಯಾನ ಮೊದಲಾದ ಲೇಖನಗಳು ಇದನ್ನು ಬಿಂಬಿಸುತ್ತವೆ.

ಸಮಗ್ರ ಗದ್ಯ : ಸಂಪುಟ-೨: ಈ ಸಂಪುಟ ಸಾಹಿತ್ಯ ತತ್ವ ಮತ್ತು ಸಮಕಾಲೀನ ಕನ್ನಡ ಸಾಹಿತ್ಯದ ಪರಿಶೀಲನೆ ಕುರಿತದ್ದು. ಇಲ್ಲಿನ ವಾಗ್ವಾದ ನಿರಂತರತೆಯನ್ನು,

ಉಪಯುಕ್ತತೆಯನ್ನು ಒಳಗೊಂಡಿದೆ. ಈ ಸಂಪುಟದಲ್ಲಿ ಎರಡು ಭಾಗಗಳಿವೆ. ಮೊದಲನೆ ಭಾಗವು ಸಾಹಿತ್ಯ ಮೀಮಾಂಸೆಯ ಸ್ವರೂಪ ಚರ್ಚಿಸಿದರೆ; ಎರಡನೆ ಭಾಗವು ಸಮಕಾಲೀನ ಕವಿ, ಕೃತಿಗಳ ಸಾಹಿತ್ಯಿಕ ನೆಲೆ-ಬೆಲೆಗಳನ್ನು ಕುರಿತು ಶೋಧಿಸಿದ್ದು. ದೇಸೀ ಮತ್ತು ಪಾಶ್ಚಾತ್ಯ ಚಿಂತನೆಗಳಿಂದ ಹದಗೊಂಡ ವಿಮರ್ಶಕ ಮನಸ್ಸೊಂದು ಇಲ್ಲಿ ಸೂಕ್ಷ್ಮವಾಗಿ ಕಾರ್ಯನಿರ್ವಹಿಸಿರುವುದನ್ನು ಗುರುತಿಸಬಹುದು. ಹಾಗಾಗಿಯೇ ಪಕ್ವತೆ ಮತ್ತು ಸರಳತೆಗಳಂತೆಯೇ, ಸ್ಪಷ್ಟತೆ ಮತ್ತು ವಸ್ತುನಿಷ್ಠತೆಯ ದೃಷ್ಟಿಕೋನ ಇಲ್ಲಿದೆ.

ಈ ಕೃತಿಯ ಮೊದಲ ಭಾಗದಲ್ಲಿ ಇಪ್ಪತ್ಮೂರು ಲೇಖನಗಳಿದ್ದು ಇವನ್ನು ಮೂರು ಮಾದರಿಗಳಾಗಿ ವಿಂಗಡಿಸಬಹುದು. (೧) ಕವಿ, ಸಹೃದಯ, ಹಾಡುಗಾರಿಕೆ, ಕಾಲಧರ್ಮ, ದಲಿತ ಸಾಹಿತ್ಯ, ಬಂಡಾಯ ಸಾಹಿತ್ಯ, ಉಪರಾಷ್ಟ್ರೀಯತೆ ಮೊದಲಾದ ಪರಿಕಲ್ಪನೆಗಳ ವಿಶ್ಲೇಷಣೆ. (೨) ಸಾಹಿತ್ಯ ಮತ್ತು ಸಮಕಾಲೀನ ಪ್ರಜ್ಞೆ, ಲೇಖಕ-ಅಭಿವ್ಯಕ್ತಿ ಸಾಹಿತ್ಯಿಕ ಗುಂಪುಗಾರಿಕೆ, ಉಪರಾಷ್ಟ್ರೀಯತೆ ಮತ್ತು ಕನ್ನಡ ಸಾಹಿತ್ಯ ಮೊದಲಾದ ಸಾಹಿತ್ಯ ತತ್ವಗಳ ವಿಶ್ಲೇಷಣೆ. (೩) ಕನ್ನಡ ಕವಿಗಳ ಭಾವಪ್ರಜ್ಞೆ, ಕಾವ್ಯಮೀಮಾಂಸೆಗೆ ಸಂಬಂಧಿಸಿದ ತೌಲನಿಕ ಆಯಾಮಗಳುಳ್ಳ ವಿವೇಚನೆ. ಈ ಮೂರೂ ಮಾದರಿ ಬರಹಗಳು ಕನ್ನಡ ವಿಮರ್ಶೆಯ ಅವಸ್ಥಾಂತರಗಳನ್ನು ತಿಳಿಸುತ್ತಲೇ ಏಕಮಾದರಿ ಗ್ರಹಿಕೆ ಮತ್ತು ಅಭಿವ್ಯಕ್ತಿಯನ್ನು ಬಿಂಬಿಸಿವೆ.

ಎರಡನೆ ಭಾಗವು ಇಪ್ಪತ್ತೆರಡು ಲೇಖನಗಳನ್ನು ಒಳಗೊಂಡಿದ್ದು ಅವು ಆಧುನಿಕ ಕನ್ನಡ ಸಾಹಿತ್ಯದ ಮುಖ್ಯ ಕವಿಗಳಾದ ಶ್ರೀ, ಪೈ, ಅಂಬಿಕಾತನಯದತ್ತ, ಪುತಿನ, ವಿನಾಯಕ, ಕುವೆಂಪು, ಕೆ.ಎಸ್.ನ., ಅಡಿಗ, ಕಣವಿ, ಮಾಸ್ತಿ ಮತ್ತು ಕಾರಂತರ ಕೃತಿಗಳ ಬಗೆಗಿನ ವಿಶ್ಲೇಷಣಾ ಸ್ವರೂಪದ ಲೇಖನಗಳಾಗಿವೆ. ಇಲ್ಲೆಲ್ಲಾ ಜಿ.ಎಸ್.ಎಸ್. ಕವಿಯ ಕಾಲಮಾನ ಹಾಗೂ ಕಾವ್ಯದ ಧ್ಯಾನ ಸ್ಥಿತಿಗೆ ವಿಶೇಷ ಒತ್ತು ನೀಡಿರುವುದನ್ನು ಗುರುತಿಸಬಹುದು.

ಸಮಗ್ರಗದ್ಯ : ಸಂಪುಟ–೩: ಈಗಾಗಲೇ ಪ್ರಕಟವಾಗಿದ್ದ ಐದು ಕೃತಿ ಮತ್ತು ಒಂದು ದೀರ್ಘ ಲೇಖನ ಇಲ್ಲಿವೆ. (೧) ಕನ್ನಡ ಸಾಹಿತ್ಯ ಸಮೀಕ್ಷೆ (೨) ಮಹಾಕಾವ್ಯ ಸ್ವರೂಪ (೩) ಕನ್ನಡ ಕವಿಗಳ ಕಾವ್ಯಕಲ್ಪನೆ (೪) ಹೊಸಗನ್ನಡ ಕವಿತೆಗಳಲ್ಲಿ ಕಾವ್ಯಚಿಂತನೆ (೫) ವಿಮರ್ಶೆಯ ಪೂರ್ವ-ಪಶ್ಚಿಮ (೬) ಕನ್ನಡ ಸಾಹಿತ್ಯ ಚಳುವಳಿಗಳು ಮತ್ತು ಸಾಹಿತ್ಯ ಪರಂಪರೆ.

ಕನ್ನಡ ಸಾಹಿತ್ಯ ಸಮೀಕ್ಷೆ 'ಸಾಹಿತ್ಯ ಚರಿತ್ರೆ'ಯ ಮಾದರಿಯಲ್ಲಿದೆ. ಕನ್ನಡ ಕವಿಗಳ ವಿಶ್ವದೃಷ್ಟಿ, ಕಾವ್ಯಸ್ವರೂಪ, ಭಾಷಿಕ ನೆಲೆ ಎಂಬ ತತ್ವಗಳನ್ನು ಆಧರಿಸಿದ್ದು ಇಲ್ಲಿನ ಬರಹ. ಇಲ್ಲಿ ಜಿ.ಎಸ್.ಎಸ್. ಕೆಲವು ಭಿನ್ನ ಅಂಶಗಳನ್ನು ಗುರುತಿಸಿದ್ದಾರೆ.

ವೀರಯುಗದಲ್ಲಿ ಕಾಣಬಾರದ 'ಕೆಚ್ಚು' ಭಕ್ತಿಯುಗದಲ್ಲಿ ಕಾಣಿಸಿಕೊಂಡ ಅಂಶ ಅವುಗಳಲ್ಲೊಂದು. ಹಾಗೆಯೇ ಜೈನಕವಿಗಳು ವೀರಕಾವ್ಯ ಬರೆದದ್ದರ ಹಿನ್ನೆಲೆಯಲ್ಲಿ ಧರ್ಮ ಮತ್ತು ಮಾನಸಿಕ ಸತ್ವಗಳ ಘರ್ಷಣೆ ಕಾರಣವಿರಬಹುದೇ ಎಂಬ ಅಂಶ. ಇವು ದ್ವಂದ್ವ ಹಾಗೂ ಸ್ವ-ವಿರೋಧದ ನೆಲೆಯವೇ? ಎಂಬ ಪ್ರಶ್ನೆ ಇಲ್ಲಿ ಮೂಡಿರುವುದು ಕಂಡುಬರುತ್ತದೆ.

'ಕನ್ನಡ ಕವಿಗಳ ಕಾವ್ಯ ಕಲ್ಪನೆ ಮತ್ತು ಹೊಸಗನ್ನಡ ಕವಿತೆಗಳಲ್ಲಿ ಕಾವ್ಯ ಚಿಂತನೆ' ಕೃತಿಗಳು ಕುಕವಿ ನಿಂದೆ, ಸತ್ಕವಿ ಪ್ರಶಂಸೆ, ಕಾವ್ಯ ಪ್ರಯೋಜನ ಮೊದಲಾದ ಅಂಶಗಳನ್ನು ಮೀಮಾಂಸೆ ಸ್ವರೂಪದಲ್ಲಿ ನಿರ್ವಚಿಸಿವೆ. ಹೀಗಾಗಿ ಇಲ್ಲಿ ರಾಜಶೇಖರನ ಪ್ರತಿಭಾ ವ್ಯಾಖ್ಯಾನ, ಪಂಪನ ಹೇಳಿಕೆ, ಬಸವಣ್ಣನ ವಚನ ಇವುಗಳ ವ್ಯಾಖ್ಯಾನ, ವಿಶ್ಲೇಷಣೆ ಗಮನ ಸೆಳೆಯುತ್ತವೆ. ಹಾಗೆ ನೋಡಿದರೆ ದೇಸೀ ಮಾನದಂಡಗಳ ಬಳಕೆಯ ಆರಂಭ ಇಲ್ಲಿ ಆಗಿರುವುದನ್ನು ಗುರುತಿಸಬಹುದು.

'ವಿಮರ್ಶೆಯ ಪೂರ್ವ-ಪಶ್ಚಿಮ' ವಿಮರ್ಶೆಯ ಸಾಧಕ-ಬಾಧಕಗಳ ಬಗ್ಗೆ ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಿರುವ ಕೃತಿ. ಇಲ್ಲಿನ ಅನುಭವ ತಂತ್ರ, ದರ್ಶನ ವಿಮರ್ಶೆ, ಕಾಣ್ಕೆ ಭಿನ್ನ ಚರ್ಚೆಗಳಿಗೆ ಆಸ್ಪದ ನೀಡುವಂಥವಾಗಿವೆ.

ಒಟ್ಟಾರೆ ಮೇಲಿನ ಕೃತಿಗಳು ನಿರರ್ಗಳ ಗದ್ಯದ ಪರಿಚಯ ಮಾಡಿಕೊಟ್ಟಂತೆ ಕನ್ನಡ ವಿಮರ್ಶೆಯ ಪರಿಧಿ ಹಿಗ್ಗಲೂ ಕಾರಣವಾದಂಥವು ಎನ್ನಬಹುದು. ಒಂದು ಬಗೆಯ ಶಾಸ್ತ್ರೀಯ ಅಧ್ಯಯನ ಧಾಳಾಗಿ ಕಂಡುಬರುವ ಕಾರಣ ತಟಕ್ಕನೆ ಸೆಳೆಯುವ ವಿಮರ್ಶಾ ಅಭಿಪ್ರಾಯಗಳ ಬದಲು ಕೃತಿ-ಕವಿಯ ತಾತ್ವಿಕ ನೆಲೆಯ ಅನ್ವೇಷಣೆಯೇ ಪ್ರಧಾನ ಅಂಶವಾಗಿ ಮೂಡಿಬಂದಿದೆ.

ಕಾವ್ಯಾರ್ಥ ಚಿಂತನ೯: ೧೯೮೩ರಲ್ಲಿ ಪ್ರಕಟವಾದ ಈ ಕೃತಿ ಭಿನ್ನ ಪ್ರತಿಕ್ರಿಯೆಗಳಿಗೆ ಒಳಗಾದಂಥದ್ದು. ಟಿಪ್ಪಣಿಗಳ ಮೊತ್ತ, ತರಗತಿ ಪಾಠದ ಸಾರಾಂಶ ಎಂಬ ಕಟುಟೀಕೆಯಿಂದ ಹಿಡಿದು, ತೀರಾ ಶುಷ್ಕ ಭಾಷೆ ಇಲ್ಲಿನ ಅಭಿವ್ಯಕ್ತಿ ಮಾಧ್ಯಮವಾಗಿದೆ ಎಂಬ ಮಾತೂ ಕೇಳಿಬಂದಿದೆ. ವಿದ್ಯಾರ್ಥಿಗಳಿಗೆ ಅರ್ಥೈಸಲು ಪುನರಾವರ್ತನೆ ಸೇರಿರುವುದನ್ನು, ಪುನರುಕ್ತಿ ತಲೆ ಹಾಕಿರುವುದನ್ನು ಸುಲಭವಾಗಿ ಗುರುತಿಸಬಹುದು.

ಅಷ್ಟಾಗಿಯೂ ಈ ಕೃತಿಯ ಮಹತ್ವ ಹೆಚ್ಚೇ ಆಗಿದೆ. ತೀ.ನಂ.ಶ್ರೀ. ನಂತರ ಈ ಬಗೆಯ ಕೃತಿ-ಆಲೋಚನೆ ಕನ್ನಡದಲ್ಲಿ ಇಲ್ಲವೆನ್ನಬಹುದು. ಹಾಗಾಗಿ ಭಾರತೀಯ ಕಾವ್ಯಮೀಮಾಂಸೆ ಮತ್ತದರ ಮುಂದಿನ ಅಂಶಗಳ ಚರ್ಚೆ ಇಲ್ಲಿದೆ. ಆದರೆ ಕನ್ನಡ ಕಾವ್ಯಮೀಮಾಂಸೆಯ ಮಟ್ಟಿಗೆ ಈ ಪ್ರಯತ್ನವೂ ದೂರವೇ ಆಗಿದೆ ಎನ್ನಬಹುದು. ಅದಕ್ಕೆ ಈ ಕೃತಿ ಮೂಡಿಬಂದ ಕಾಲ ಸಂದರ್ಭವೂ ಕಾರಣ ಎನ್ನಬಹುದು.

ತೌಲನಿಕ ಕಾವ್ಯಮೀಮಾಂಸೆಯ ಕೆಲವು ವಿಚಾರಗಳನ್ನು ಈ ಕೃತಿ ಚರ್ಚಿಸಿದೆ. ಪ್ರತಿಭೆ, ಸ್ಫೂರ್ತಿ, ವ್ಯುತ್ಪತ್ತಿ, ಉಪಮೆ- ರೂಪಕ-ಪ್ರತಿಮೆ, ರೀತಿ-ಶೈಲಿ, ಕವಿಸಮಯ, ವಾಸ್ತವವಾದ ಮತ್ತು ಸ್ವಭಾವೋಕ್ತಿ, ಭರತನ ರಸಸೂತ್ರ, ಮಾನಸಿಕ ದೂರ, ರಸಾನುಭವ, ಅಸಂಭಾವ್ಯತೆ, ಕಾವ್ಯಸ್ವರೂಪ, ವಿಮರ್ಶೆ ಈ ಮೊದಲಾದ ಹದಿಮೂರು ಅಧ್ಯಾಯಗಳಲ್ಲಿ ಇಲ್ಲಿನ ಬರಹ ವಿಸ್ತರಿಸಿದೆ. ಸಾಹಿತ್ಯಶಾಸ್ತ್ರ, ವಿಮರ್ಶೆ ದೃಷ್ಟಿಕೋನದಿಂದ ಇದು ಉತ್ತಮ ಕೃತಿ. ಜಿ.ಎಸ್.ಎಸ್. ಅಗಾಧ ಓದು-ವಿದ್ವತ್ತನ್ನು ಈ ಕೃತಿ ಪರಿಚಯಿಸುತ್ತದೆ. ಒಂದು ಬಗೆಯಲ್ಲಿ ಇದು 'ತೀನಂಶ್ರೀ'ಯವರ 'ಭಾರತೀಯ ಕಾವ್ಯಮೀಮಾಂಸೆ' ಕೃತಿಯ ಮುಂದುವರೆದ ಭಾಗ ಎಂದೂ ಹೇಳಬಹುದು.

ಆದರೆ ಮೇಲಿನ ಸಾಹಿತ್ಯಿಕ ಪರಿಕರ ಮತ್ತು ಪರಿಕಲ್ಪನೆಗಳೆಲ್ಲವೂ ಸಂಸ್ಕೃತ ಮತ್ತು ಪಾಶ್ಚಾತ್ಯ ಜ್ಞಾನದ ನೆಲೆಯಿಂದ ಮೂಡಿಬಂದವು ಎಂಬುದೇ ಈಗಿನ ಕಾಲದ ಓದುಗನ ಆಕ್ಷೇಪಣೆಯಾಗಿದೆ. ಏಕೆಂದರೆ ಕಾವ್ಯವೊಂದರ ರಚನೆ-ಆಸ್ವಾದನೆಗೆ ದೇಸೀ ಮಾನದಂಡಗಳಾದ ಸಂಸ್ಕೃತಿ, ಜಾನಪದ, ಲೋಕಜ್ಞಾನ ಇಲ್ಲಿ ನೆಲೆಯಾಗಿಲ್ಲ. ಅಲ್ಲದೆ ಅಭಿಜಾತ ಸಾಹಿತ್ಯದ ಮಾನದಂಡಗಳಷ್ಟೇ ಇಲ್ಲಿ ದಾಖಲಾಗಿದೆಯೇ ವಿನಃ ಮೌಖಿಕ ಜಾನಪದ ಕಾವ್ಯಗಳ ನಿರ್ವಚನೆಗೆ ಈ ಪ್ರಯತ್ನ ಯಾವ ಮಾದರಿಯನ್ನೂ ನೀಡುವುದಿಲ್ಲ. ಏನೇ ಆದರೂ ಈ ಅಪೇಕ್ಷೆ ನಮ್ಮ ಪೀಳಿಗೆಯದು ಮಾತ್ರ!

ಪ್ರವಾಸ ಕಥನಗಳು: ಜಿ.ಎಸ್.ಎಸ್. ಈವರೆಗೆ ನಾಲ್ಕು ಪ್ರವಾಸ ಕಥನಗಳನ್ನು ರಚಿಸಿದ್ದಾರೆ. ಅವು (೧) ಮಾಸ್ಕೊದಲ್ಲಿ ಇಪ್ಪತ್ತೆರಡು ದಿನ (೧೯೭೩), (೨) ಗಂಗೆಯ ಶಿಖರಗಳಲ್ಲಿ (೧೯೮೫), (೩) ಅಮೆರಿಕದಲ್ಲಿ ಕನ್ನಡಿಗ (೧೯೯೫), (೪) ಇಂಗ್ಲೆಂಡಿನಲ್ಲಿ ಚತುರ್ಮಾಸ (೧೯೯೭).

ಭಾರತ ಸರ್ಕಾರದ ಪ್ರತಿನಿಧಿಯಾಗಿ, ರಷ್ಯನ್ ಸರ್ಕಾರದ ಅತಿಥಿಯಾಗಿ ಜಿ.ಎಸ್.ಎಸ್. ರಷ್ಯಾ ಪ್ರವಾಸ ಕೈಗೊಂಡ ಅನುಭವ ದಾಖಲೆಯೇ 'ಮಾಸ್ಕೊದಲ್ಲಿ ಇಪ್ಪತ್ತೆರಡು ದಿನ'. ರಷ್ಯಾದ ಆಡಳಿತ, ಬದುಕು, ಜನ, ಕ್ರಾಂತಿ, ಪರಿಸರ, ಕರ್ತವ್ಯ ಪ್ರಜ್ಞೆ ಇವನ್ನೆಲ್ಲಾ ಜಿ.ಎಸ್.ಎಸ್. ಸೂಕ್ಷ್ಮವಾಗಿ ದಾಖಲಿಸಿದ್ದಾರೆ. ಜೊತೆಗೆ ಅಲ್ಲಿನ ಸಮತಾವಾದ; ನಮ್ಮ 'ಸ್ವಾತಂತ್ರ್ಯ', 'ಪ್ರಜಾಪ್ರಭುತ್ವ'ದ ಬಗ್ಗೆ ತುಲನೆಯ ಮಾತೂ ಇವೆ. ಇಲ್ಲಿನ ಬುದ್ಧಿಜೀವಿಗಳ ಬಗ್ಗೆ ಕೊಂಚ ಮುನಿಸೂ ಇದೆ. ಅಲ್ಲಿ 'ಟಾಲ್‌ಸ್ಟಾಯ್' ಊರಿಗೆ ಹೋದಾಗ ತಮ್ಮ ಗುರುಗಳಾದ ಕುವೆಂಪುವನ್ನು ಸ್ಮರಿಸಿದ್ದಾರೆ. ಕ್ವಚಿತ್ತಾಗಿ ಎಂಬಂತೆ ಟಾಲ್‌ಸ್ಟಾಯ್ ಮತ್ತು ಕುವೆಂಪುರ ಹೋಲಿಕೆಯನ್ನೂ ಮಾಡುತ್ತಾರೆ. ಹಲವರ ಸುಖಕ್ಕಿಂತಲೂ ಬಹುಜನರ ನೆಮ್ಮದಿ ಮುಖ್ಯ ಎಂಬ ನೆಲೆಯನ್ನು ಭಾರತದ ಬದುಕಿನ ಬಗ್ಗೆ ನಿರ್ವಚಿಸುತ್ತಾ ಜಿ.ಎಸ್.ಎಸ್. ಇಲ್ಲಿ ತಳೆದಿರುವ ನಿಲುವು ಧನಾತ್ಮಕವಾದುದು. ಸರಳ, ನೇರ ವರ್ಣನೆ ಈ ಕೃತಿಯ ಸೊಗಸು ಎನ್ನಬಹುದು.

'ಗಂಗೆಯ ಶಿಖರಗಳಲ್ಲಿ'[೧] ಕೃತಿಯಲ್ಲಿ ಅವರು ತಾವು ಕೈಗೊಂಡ ಗಂಗೋತ್ರಿ, ಕೇದಾರನಾಥ, ಬದರಿನಾಥ ಕ್ಷೇತ್ರಗಳ ಪ್ರವಾಸದ ಅನುಭವವನ್ನು ದಾಖಲಿಸಿದ್ದಾರೆ. ಪ್ರಕೃತಿ ಆಸ್ವಾದನೆ, ಸಾಮಾಜಿಕ ಗ್ರಹಿಕೆ, ಕುತೂಹಲ, ಸೌಂದರ್ಯಾರಾಧನೆ ಇಲ್ಲಿನ ಅನುಭವಗಳ ಹಿಂದಿನ ಗ್ರಹಿಕೆಗಳಾಗಿವೆ. ಅವೆಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ಹೇಳಿರುವ ಚಿತ್ರಕ ಶಕ್ತಿ, ಸ್ಥಳಗಳ ಬಗೆಗಿನ ಐತಿಹಾಸಿಕ ಮಾಹಿತಿ, ಅದಕ್ಕೆ ಹಿನ್ನೆಲೆಯಾಗಿ ಒದಗಿಬರುವ ಪೌರಾಣಿಕ ನೆನಪುಗಳು, ಅವುಗಳನ್ನು ವಿಶ್ಲೇಷಿಸುವ ವೈಜ್ಞಾನಿಕ ಮನೋಧರ್ಮ, ಜೊತೆಗಿರುವ ವಾಸ್ತವವಾದಿ ದೃಷ್ಟಿಕೋನಗಳಿಂದ ಜಿ.ಎಸ್.ಎಸ್. ಸೃಜನಶೀಲ ಕೃತಿಯ ಆನಂದವನ್ನು ಈ ಕೃತಿಯಲ್ಲಿ ನೀಡಿದ್ದಾರೆ ಎನ್ನಬಹುದು. ಹಾಗಾಗಿ ಈ ಪ್ರವಾಸ ಕೇವಲ ದೈವಿಕ-ಧಾರ್ಮಿಕ ಪ್ರವಾಸವಾಗದೆ ಕಲಾತ್ಮಕ-ಕುತೂಹಲಾತ್ಮಕ ನೆಲೆಗಳಲ್ಲಿ ಬಿಂಬಿತವಾಗಿದೆ.

'ಅಮೆರಿಕದಲ್ಲಿ ಕನ್ನಡಿಗ' ಅವರ ಮೂರನೇ ಪ್ರವಾಸ ಕಥನ. ಈಗಾಗಲೇ ಬಿಜಿಎಲ್ ಸ್ವಾಮಿ, ಗೊರೂರು, ಪ್ರಭುಶಂಕರ, ಅವರ ಕೃತಿಗಳು ನೀಡುವ ಅಮೆರಿಕದ ಚಿತ್ರಣಕ್ಕಿಂತ ಭಿನ್ನವಾದ ಅನುಭವವನ್ನು ಈ ಕೃತಿ ನೀಡುತ್ತದೆ. ಅಲ್ಲಿನ ನಿಸರ್ಗ, ನಾಗರೀಕತೆ, ಸೌಂದರ್ಯ, ಜಲಪಾತ, ಶ್ರೀಮಂತಿಕೆ ಇವುಗಳ ಜೊತೆ ಅಲ್ಲಿನ ಸಾಂಸ್ಕೃತಿಕ-ಸಾಮಾಜಿಕ-ನೆಲೆ-ಕಲೆ-ಇತಿಹಾಸ ಇವುಗಳ ಬಗೆಗಿನ ದೃಷ್ಟಿಕೋನ ಈ ಕೃತಿಯ ವಿಶಿಷ್ಟತೆಯಾಗಿದೆ.

ಅವರ ನಾಲ್ಕನೆ ಪ್ರವಾಸ ಕಥನ 'ಇಂಗ್ಲೆಂಡಿನಲ್ಲಿ ಚತುರ್ಮಾಸ'.[೧] ಒಂದು ಬಗೆಯ ನಿರ್ಭಾವುಕ ಅಭಿವ್ಯಕ್ತಿ ಈ ಕೃತಿಯ ವಿಶೇಷ. ಕಾರಣ ನಮ್ಮನ್ನಾಳಿದ ಆ ನೆಲದ ಬಗ್ಗೆ ಯಾವುದೇ ಭಾರತೀಯ ಪ್ರವಾಸಿಗೆ ಕಹಿ-ಪೂರ್ವಗ್ರಹಿಕೆಗಳಿಗೆ ಅವಕಾಶವುಂಟು. ಆದರೆ ಜಿ.ಎಸ್.ಎಸ್. ಅವನ್ನೆಲ್ಲಾ ಮೀರಿ ಅಲ್ಲಿನ ಪ್ರಕೃತಿ, ಕವಿ-ಕಾವ್ಯಲೋಕ, ಸಾಮಾಜಿಕ ಸ್ಥಿತಿಗತಿ, ಸಾಂಸ್ಕೃತಿಕ ಅನನ್ಯತೆ, ಐತಿಹಾಸಿಕ ಪ್ರಜ್ಞೆ ಹಾಗೂ ಕಲಾವಂತಿಕೆಗಳನ್ನು ಗುರುತಿಸಿದ್ದಾರೆ ಎನಿಸುತ್ತದೆ. ಒಂದು ಪ್ರವಾಸ ಕಥನದ ಸಾಧ್ಯತೆಗಿಂತಲೂ ಹೆಚ್ಚಿನ ಆಯಾಮವನ್ನು ಈ ಕೃತಿ ಒಳಗೊಂಡಿದೆ. ಸೊಗಸಾದ ಗದ್ಯ, ಭಾವುಕ ಆಸ್ವಾದನೆ, ಕುತೂಹಲದ ಸಮೀಕ್ಷೆಗಳು ಜ್ಞಾನ ವಿಸ್ತರಣೆಗೂ ನೆರವಾಗುವಂತಿವೆ. ವಿಶೇಷವಾಗಿ ಕೆಲವು ಕವಿ ಹಾಗೂ ಅವರ ಹುಟ್ಟೂರಿನ ಬಗ್ಗೆ ಬರೆಯುವಾಗ ಜಿ.ಎಸ್.ಎಸ್. ತೀರಾ ಆಪ್ತರೆನಿಸುತ್ತಾರೆ; ಹೃದಯದ ಆರ್ದ್ರತೆಗೆ ಕಾರಣರಾಗುತ್ತಾರೆ. ಲಘು ಹಾಸ್ಯ, ವಿವರಣೆ, ಕೊಂಚ ಉಪಮೆ, ಆಗಾಗ ರೂಪಕ -ಇವುಗಳ ಸಮ್ಮಿಶ್ರಣ ಶೈಲಿಯಿಂದಾಗಿ ಇಲ್ಲಿನ ಭಾಷೆ ಚೇತೋಹಾರಿಯಾಗಿದೆ. ಸಾಂಸ್ಕೃತಿಕ-ಸಾಮಾಜಿಕ-ಸಾಹಿತ್ಯಿಕ ಅಂಶಗಳಿಗಾಗಿ ಅವರ ನಾಲ್ಕು ಕೃತಿಗಳ ವಿಸ್ತೃತ ಅಧ್ಯಯನವೊಂದರಿಂದ ಜಿ.ಎಸ್.ಎಸ್.ರ ವ್ಯಕ್ತಿತ್ವದ ಹೊಸ ಆಯಾಮವೊಂದನ್ನು ತೆರೆದಿಡಲು ಸಾಧ್ಯವಾಗಬಹುದು.

ಚತುರಂಗ[1]: ಇದು ಜಿ.ಎಸ್.ಎಸ್.ರ ಅಸಮಗ್ರ ಆತ್ಮಕತೆ. ಎಳೆಯಂದಿನ ಬೆಳಕು, ಉದ್ಯೋಗ ಪರ್ವ, ಕಾವ್ಯಾಲಾಪ, ಬಿಡಿ ನೆನಪಿನ ದೀಪಗಳು ಎಂಬ ನಾಲ್ಕು ಭಾಗಗಳಲ್ಲಿ ಇದು ಬೆಳೆದಿದೆ. ಅವರ ಬಾಲ್ಯ, ಓದು, ಶಿಕ್ಷಣ, ನೌಕರಿ, ಸಂಸಾರ, ಸಾಹಿತ್ಯ ಈ ಮೊದಲಾದ ಘಟ್ಟಗಳ ಸೂಕ್ಷ್ಮ ಚಿತ್ರಣ ಇಲ್ಲಿದೆ. ಕುವೆಂಪು ಸಾಮಿಪ್ಯ, ಕನ್ನಡ ಆನರ್ಸ್ ಅಧ್ಯಯನ, ಉದ್ಯೋಗದ ಸಂದರ್ಶನಗಳು, ಅವರಿಗಾದ, ಮಾಡಿದ ಅನ್ಯಾಯಗಳು ಈ ಕೃತಿಯಲ್ಲಿ ಅನಾವರಣಗೊಂಡಿವೆ. ಹಾಗೆಯೇ ಅವರ 'ಕವಿತ್ವ'ದ ಆರಂಭದ ಹೆಜ್ಜೆಗಳೂ ಇಲ್ಲಿ ದಾಖಲಾಗಿವೆ. ಗಾತ್ರ ಚಿಕ್ಕದಾದರೂ, ಅಸಮಗ್ರ ಎನಿಸಿದರೂ ಈ ಕೃತಿ ಜಿ.ಎಸ್.ಎಸ್.ರ ಸಮಗ್ರ ವ್ಯಕ್ತಿತ್ವವನ್ನು ಸೂಕ್ಷ್ಮವಾಗಿ ಬಿಂಬಿಸುವಲ್ಲಿ ಯಶಸ್ವಿಯಾಗಿದೆ ಎನ್ನಬೇಕು. "ಬಚ್ಚಿಟ್ಟುಕೊಂಡು ಬದುಕುವುದು ನನಗಿಷ್ಟವಿಲ್ಲ; ಹಾಗಂತ ಎಲ್ಲವನ್ನು ಬಿಚ್ಚಿ ಹರಾಜಿಗಿಡುತ್ತೇನೆಂದು ಇದರರ್ಥವಲ್ಲ" ಎಂಬ ಮಾತುಗಳು ಗಮನಾರ್ಹ.

ಸೌಂದರ್ಯ ಸಮೀಕ್ಷೆ: ಜಿ.ಎಸ್.ಎಸ್. ತಮ್ಮ ಪಿಎಚ್.ಡಿ., ಪದವಿಗೆ ಸಂಶೋಧನೆಗಳಿಗೆ ಆಯ್ದುಕೊಂಡದ್ದು 'ಸೌಂದರ್ಯ ಸಮೀಕ್ಷೆ'ಯಂತಹ ತಾತ್ವಿಕ-ಶಾಸ್ತ್ರೀಯ ವಿಷಯವನ್ನು. ಅವರ ಮಾರ್ಗದರ್ಶಕರು ಕುವೆಂಪು. ಹಾಗೆಂದ ಮೇಲೆ ಸಾಹಿತ್ಯ ಕಲೆಗಳ ಸೌಂದರ್ಯದ ತಾತ್ವಿಕ ವಿಶ್ಲೇಷಣೆ ಸಹಜವಾಗಿಯೇ ಈ ಕೃತಿಯ ವೈಶಿಷ್ಟ್ಯತೆ ಎನ್ನಬಹುದು. 'ಸೌಂದರ್ಯ' ಮತ್ತದರ ಪರಿಕರ-ಆಸ್ವಾದನೆ ಮೊದಲು ತತ್ವಶಾಸ್ತ್ರಕ್ಕೆ ಸಂಬಂಧಪಟ್ಟದ್ದು; ಹಾಗಾಗಿಯೇ 'ಸತ್ಯಂ-ಶಿವಂ-ಸುಂದರಂ' ಎಂಬ ಮಾತಿದೆ. ಅಂತೆಯೇ ಭಾರತೀಯ ಕಾವ್ಯ ಪರಂಪರೆ ಇದನ್ನು ಭಿನ್ನವಾಗಿ ನಿರ್ವಚಿಸುತ್ತದೆ. ಜೀವನದ ಒಟ್ಟಂದದ ರಸಾನುಭವದ ಅನ್ವೇಷಣೆಗಳಾಗಿ ಕಲೆ, ಸಾಹಿತ್ಯ, ಸಂಗೀತ, ನೃತ್ಯ ರೂಪುತಳೆದಿವೆ. ಆದರೆ ಈ ಸೌಂದರ್ಯ ಗ್ರಹಿಕೆಯ ಮಾನದಂಡಗಳು ಮಾತ್ರ ಕಾಲ / ದೇಶಗಳಿಗೆ ಭಿನ್ನವಾದವು. ಭಾರತದ ಸಾಮಾಜಿಕ ರಚನೆಯು ಇದೇ ಮಾತನ್ನು ಅಪೇಕ್ಷಿಸುತ್ತದೆ.

ಕಾವ್ಯಾನುಭವ ಸೌಂದರ್ಯಾನುಭವವೇ? ಎಂಬ ಪ್ರಶ್ನೆಯೂ ಇಲ್ಲಿ ಮೂಡುತ್ತದೆ. ಹಾಗಿದ್ದಲ್ಲಿ ಸೌಂದರ್ಯದ ಸ್ವರೂಪ, ಅದರ ಚರ್ಚೆ, ಅದರ ಮೀಮಾಂಸೆ ಒಳಗೊಂಡ ಮೊಟ್ಟಮೊದಲ ಪ್ರಯತ್ನ 'ಸೌಂದರ್ಯ ಸಮೀಕ್ಷೆ'. ಕಾವ್ಯ-ಸಾಹಿತ್ಯ ಓದುಗನನ್ನು ಹೇಗೆ ಸೆಳೆಯಬಲ್ಲುದು ಎಂಬ ಹುಡುಕಾಟದ ಭಿನ್ನ ನೆಲೆಗಳು ಈ ಕೃತಿಯಲ್ಲಿವೆ. ವರ್ಣನೆ, ವಿಸ್ತರಣೆ ಅನುಭವದ ಮುಖ್ಯ ನೆಲೆಯಾದಾಗ ಮಾತ್ರ ಅಂತಹ ಹುಡುಕಾಟದ ಪ್ರಾತಿನಿಧಿಕತೆ ವಿಸ್ತರಿಸುತ್ತದೆ. ಕವಿ-ಕಾವ್ಯ-ಪ್ರತಿಭೆ-ಗ್ರಹಿಕೆ ಮೊದಲಾದ ಅಂಶಗಳ ಜೊತೆ ರಸ-ಧ್ವನಿ-ರೀತಿಗಳು ಸಮ್ಮಿಳಿತಗೊಂಡು ಕಾವ್ಯಾನುಭವವೆಂಬ ಹೊಸ ಲೋಕದತ್ತ ಸಾಗುವ ಪಯಣ ಆಕರ್ಷಕವೇ. ಈ ಬಗೆಯ ಪಯಣಕ್ಕೆ ಸಂಸ್ಕೃತ ಕಾವ್ಯ ಮೀಮಾಂಸೆಯಲ್ಲಿ ಅನೇಕ ತಾತ್ವಿಕ ಅವಸ್ಥೆಗಳಿವೆ. ಆದರೆ ಕನ್ನಡದ ಮಟ್ಟಿಗೆ ಇದು ಹೊಸ ಪ್ರಯತ್ನ. ಕಾವ್ಯ ಗ್ರಹಿಕೆ, ಭಾವ ವಿಸ್ತಾರ, ಸಹೃದಯತೆ ಇಲ್ಲಿ ಮುಖ್ಯ ನೆಲೆಗಳು.

ಹಾಗಾಗಿ 'ಸೌಂದರ್ಯ' ಕುರಿತ ವಾದ-ಚರ್ಚೆಗಳ ಸಂಗ್ರಹ ಇಲ್ಲಿದೆ. ಪಾಶ್ಚಿಮಾತ್ಯ ದೃಷ್ಟಿಕೋನಗಳನ್ನು ಗಮನಿಸಲಾಗಿದೆ. ಕಾವ್ಯಾನಂದದ ಪ್ರಮಾಣಗಳ ವಿಶ್ಲೇಷಣೆ ಇದೆ. ಅನುಭವದ ಸಾಧಾರಣೀಕರಣದ ಚರ್ಚೆಯಿದೆ. ಲೌಕಿಕ ಪರಿಸರ ಅಲೌಕಿಕವಾಗುವ ಆಶಯವಿದೆ. 'ಸೌಂದರ್ಯ' ವಸ್ತುವಿನದೋ, ಕಾಣುವ ನೋಟದ್ದೋ ಎಂಬ ಪ್ರಶ್ನೆಯಿದೆ. ಯಾವುದು ಸೌಂದರ್ಯ ಎಂಬ ತಾತ್ವಿಕ ಚರ್ಚೆಯಿದೆ; ಪ್ರಕೃತಿ ವ್ಯಾಪಾರದ ವೈಚಿತ್ರ್ಯವೆ? ವ್ಯಕ್ತಗ್ರಹಿಕೆಗಳೆ?

ಸೌಂದರ್ಯಕ್ಕಿರುವ ನಾಲ್ಕು ಬಗೆಯ ಮುಖ ಅಥವಾ ಆಯಾಮಗಳನ್ನು ಗುರುತಿಸಲಾಗಿದೆ. ಅವೇ ಇಂದ್ರಿಯ ಸೌಂದರ್ಯ, ಕಲ್ಪನಾ ಸೌಂದರ್ಯ, ತಾತ್ವಿಕ ಸೌಂದರ್ಯ, ಆತ್ಮ ಸೌಂದರ್ಯ -ಈ ಬಗೆಯ ವಿಶ್ಲೇಷಣೆ ಮತ್ತು ಗ್ರಹಿಕೆಗಳ ಹಿನ್ನೆಲೆಯಲ್ಲಿ 'ಐಡಿಯಾಲಿಸ್ಟ್' (ವಿಚಾರ ಮೂಲದ ವಾದ) ವಿಚಾರಗಳಿವೆ. ಹಾಗೆಯೇ 'ವಿಕೃತಿ' ಕುರಿತ ಚರ್ಚೆಯಿದೆ. ಸಹಜವಾಗಿಯೇ ಆಕರ್ಷಣೆ, ವಿಕರ್ಷಣೆಗಳ ಚಿತ್ರಣವಿದೆ. ಇವುಗಳನ್ನು ಆಸ್ವಾದಿಸಿ ಸ್ಥಿರೀಕರಿಸುವ ಮನುಷ್ಯ ಸ್ವಭಾವದ ವಿಶ್ಲೇಷಣೆಯಿದೆ. ಲಿಂಗ, ಚೇತನ, ಜಡ ಸ್ವಭಾವಗಳ ನೆಲೆಗಳನ್ನು ಚರ್ಚಿಸಲಾಗಿದೆ. ಪಾಶ್ಚಾತ್ಯ ಚಿಂತನೆಗಳಿಂದ ಮೂಡಿಬಂದ 'ಭವ್ಯತೆ' ಕುರಿತ ಅಂಶಗಳು, ಅದರ ಆಸ್ವಾದನೆಯ ಆನಂದ, ಅಲ್ಲಿನ ಸೌಂದರ್ಯಾತ್ಮಕ ಆಘಾತ; ಇವು ಲೌಕಿಕದೊಡನೆ ಬೆಸೆದುಕೊಳ್ಳುವ ಪರಿ ಇವುಗಳ ತುಲನೆ ಇದೆ.

ಒಟ್ಟಾರೆ ಕನ್ನಡ ಸಂಶೋಧನೆಯ ವಿಶಿಷ್ಟ ಕೃತಿ "ಸೌಂದರ್ಯ ಸಮೀಕ್ಷೆ". ಕಲೆ-ವಿಜ್ಞಾನ-ಸಮಾಜದ ಬಗೆಗೆ, ಅವುಗಳ ಸಾವಯವ ಸಂಬಂಧದ ಬಗ್ಗೆ ಅನೇಕ ಪ್ರಶ್ನೆಗಳಿರುವಾಗಲೂ ಕಾವ್ಯಾನಂದ, ಅಲೌಕಿಕಾನಂದ, ರಸಾನಂದದ ಅನ್ವೇಷಣೆ ಅಗತ್ಯವೆ ಎಂಬ ಪ್ರಶ್ನೆ ಅಪ್ರಸ್ತುತ. ಸಂಸ್ಕೃತಿ-ಸಮಾಜ-ಜನ-ಭಾಷೆ ಇವುಗಳನ್ನು ಮೀರಿದ ಅನುಭೂತಿ ಇದ್ದೇ ಇದೆ. ಆ ನೆಲೆಯಲ್ಲಿ ಈ ಕೃತಿಯ ಅಧ್ಯಯನ ಆಗಬೇಕಿದೆ.

ಗತಿಬಿಂಬ[7]: ಸಾಹಿತ್ಯವೆಂದರೇನು? ಎಂಬ ಆದಿಮ ಪ್ರಶ್ನೆಗೆ ಉತ್ತರಿಸುತ್ತಾ ಸಾಗುವ ಕೃತಿ ಇದು. ಇಲ್ಲಿ ಸಿಗುವ ಉತ್ತರ 'ಸಾಹಿತ್ಯ ಜೀವನದ ಗತಿಬಿಂಬ'. ಅದೇ ಹೆಸರಿನ ಲೇಖನ ಸೇರಿದಂತೆ ಒಟ್ಟು ಹನ್ನೊಂದು ಲೇಖನಗಳಿರುವ ವಿಮರ್ಶಾಕೃತಿ ಇದು. ಹೀಗಲ್ಲ ಎಂದು ಹೇಳುವ ಬದಲು ಇದು ಹೀಗಿದೆ ಎಂದು ತೋರಿಸುವ ಮನೋಧರ್ಮ ಇಲ್ಲಿ ಕಾಣಿಸುತ್ತದೆ. ಕವಿ-ಸಹೃದಯ, ಕವಿಯಲ್ಲಿ ವಿಶಿಷ್ಟತೆ, ಸಮಕಾಲೀನ ಪ್ರಜ್ಞೆ, ಸಾಹಿತ್ಯದಲ್ಲಿ ಪ್ರಾಮಾಣಿಕತೆ, ವಿಮರ್ಶೆ ಮತ್ತು ಕಾಲಾತೀತ ಸ್ಥಿತಿ, ಹೊಸ ಕಾವ್ಯದ ಹೊಯ್ದಾಟ, ಪ್ರೇರಣೆ-ಪರಂಪರೆ-ಪ್ರಯೋಗ, ಇಂದಿನ ಕವಿತೆ, ಕನ್ನಡ ಕಾದಂಬರಿಗಳ ಭಾಷೆ, ಶೈಲಿ, ಕಾವ್ಯ ಮೀಮಾಂಸೆ ಎಂಬ ಉಳಿದ ಲೇಖನಗಳಿವೆ.

ಸರಳ ಭಾಷೆ, ತಾತ್ವಿಕ ನಿರ್ವಚನೆ, ಗಾಢ ಅನುಭೂತಿ ಈ ಲೇಖನಗಳಲ್ಲಿವೆ. ಸಾಹಿತ್ಯಾಭ್ಯಾಸಿಗಳಿಗೂ, ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಪೂರಕಜ್ಞಾನವಾಗಬಲ್ಲ

ಜನಪ್ರಿಯ ಕೃತಿಯಿದು. ಜಿ.ಎಸ್.ಎಸ್.ಗಿರುವ ಕಾವ್ಯಮೀಮಾಂಸೆಯ ಬಗೆಗಿನ ಪ್ರೀತಿ ತೋರುವ ಆರಂಭಿಕ ಕೃತಿಯೂ ಇದಾಗಿದೆ.

ವಿಮರ್ಶೆಯ ದಾರಿ-೧: ಜಿ.ಎಸ್.ಎಸ್.ರ ಪ್ರಧಾನ ಸಂಪಾದಕತ್ವದಲ್ಲಿ ಬೆಂಗಳೂರು ವಿ.ವಿ. ಪ್ರಸಾರಾಂಗ ೧೯೭೭ರಲ್ಲಿ ಹೊರತಂದ ಈ ಕೃತಿ ಬಹು ಜನಪ್ರಿಯವಾದುದು. ಕನ್ನಡ ವಿಮರ್ಶೆ ನಡೆದು ಬಂದ ದಾರಿಯ ಸಂಕಲನಾ ರೂಪದ ಹದಿನಾಲ್ಕು ವಿಮರ್ಶಾ ಲೇಖನಗಳಿವೆ ಇದರಲ್ಲಿ. ಹೊಸಗನ್ನಡ ವಿಮರ್ಶೆಯ ಒಲವು-ನಿಲುವುಗಳನ್ನು, ದೃಷ್ಟಿ-ಧೋರಣೆಗಳನ್ನು ಈ ಸಂಕಲನ ಐತಿಹಾಸಿಕವಾಗಿ ಗುರುತಿಸಲು ಯತ್ನಿಸಿದೆ. ಹಾಗಾಗಿ ಇದು ಒಂದು ಪ್ರಾತಿನಿಧಿಕ ಸಂಕಲನವೂ ಹೌದು. ಕಾವ್ಯದ ಅನಾದರ, ಮೇಘ ಸಂದೇಶ, ಪಂಪನು ಬೆಳಗಿರುವ ಲೌಕಿಕದ ಒಂದು ಚಿತ್ರ, ಬಸವಣ್ಣನವರ ಕೆಲವು ವಚನ, ಕವನಗಳು, ಹರಿಹರನ ಪುಷ್ಪ ರಗಳೆ, ಜನ್ನನ 'ಯಶೋಧರ ಚರಿತೆ', ಹರಿದಾಸರ ಆಶುಕಾವ್ಯ ಸಂಪ್ರದಾಯ, ದ್ರೌಪದಿಯ ಶ್ರೀಮುಡಿ, ಕವಿ ಸರ್ವಜ್ಞ, ಹಸು ಪುಣ್ಯಕೋಟಿ ಮತ್ತು ಹುಲಿ ಅರ್ಭುತ, ಕೆರೆಗೆ ಹಾರ, ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು, ಕನ್ನಡ ಸಾಹಿತ್ಯ ಮತ್ತು ಗಾಂಧಿವಾದ, ಕುವೆಂಪು ಅವರ 'ಮಂಥರೆ' ಎಂಬ ಬಹು ಚರ್ಚಿತ ಲೇಖನಗಳೇ ಇಲ್ಲಿ ಸಂಕಲನಗೊಂಡಿರುವುದು.

ವಿಮರ್ಶೆಯ ದಾರಿ-೨: ಮೇಲಿನ ಕೃತಿಯ ಮುಂದುವರೆದ ಭಾಗವಿದು. ೧೯೮೦ರಲ್ಲಿ ಪ್ರಕಟವಾಗಿದೆ. ಪದವಿ ಪರೀಕ್ಷೆಗಳಲ್ಲಿ ಕನ್ನಡ ಐಚ್ಛಿಕ ವಿದ್ಯಾರ್ಥಿಗಳ ಅಧ್ಯಯನದ ಅನುಕೂಲದ ನೆಲೆಯಲ್ಲಿ ಸಿದ್ಧಗೊಂಡ ಕೃತಿಯಾದರೂ ಸಾಹಿತ್ಯಾಭ್ಯಾಸಿಗಳಿಗೆ ತೋರುಬೆರಳಾಗಿದೆ. ನಾಗಚಂದ್ರನ 'ರಾಮಚಂದ್ರ ಚರಿತ ಪುರಾಣಂ', ಮಧ್ಯಮ ವ್ಯಾಯೋಗ, ಶಾಕುಂತಲದ ಕರುಣ-ರೌದ್ರ, ಅಶ್ವತ್ಥಾಮನ್, ಕುಮಾರರಾಮನ ಸಾಂಗತ್ಯ, ಗದಾಯುದ್ಧದಲ್ಲಿ ಮಾನವ ಸ್ವಭಾವದ ಚಿತ್ರಣ, ಗದುಗಿನ ಭಾರತದ ಕೆಲವು ಪದ್ಯಗಳು, ಸೋಜಿಗದ ಹೊಳಲು, ಕನ್ನಡ ಕಾವ್ಯದಲ್ಲಿ ಪ್ರತಿಮೆ, ಐದು ವಚನಗಳು : ಒಂದು ವಿಶ್ಲೇಷಣೆ, ಗ್ರಾಮೀಣರ ಕವನ ಕಲೆ, ಪಂಪನ ಅಭಿವ್ಯಕ್ತಿ ಎಂಬ ಹನ್ನೆರಡು ಪ್ರಸಿದ್ಧ ಲೇಖನಗಳಿವೆ ಇಲ್ಲಿ.

ಮೇಲಿನ ಎರಡೂ ಕೃತಿಗಳ ಪ್ರಕಟಣೆಯ ಉದ್ದೇಶ ಸೀಮಿತವಾಗಿದ್ದರೂ, ಈ ಕೃತಿಗಳು ಬಹುಪಯೋಗಿ ಎಂಬುದು ಜನಜನಿತ. ಆಧುನಿಕ ಕನ್ನಡ ವಿಮರ್ಶೆಯ ದಿಕ್ಕು-ದೆಸೆಗಳನ್ನು ಸ್ಪಷ್ಟಪಡಿಸಿದವು ಇವು. ಮುಂದೆ ಬಂದ ನವ್ಯರ ಹರಿತ ವಿಮರ್ಶೆಗೆ ಇವು ನೀಡಿದ ಕಾಣ್ಕೆ ಮಹತ್ವಪೂರ್ಣವಾದುದು.

ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ: ಜಿ.ಎಸ್.ಎಸ್. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ, ೧೯೮೮ರಲ್ಲಿ ಪ್ರಕಟಗೊಂಡ ಉತ್ತಮ ಕೃತಿ ಇದಾಗಿದೆ. ಸ್ವಾತಂತ್ರ್ಯಪೂರ್ವ ಸಂದರ್ಭ, ಸ್ವಾತಂತ್ರ್ಯೋತ್ತರ ಸಂದರ್ಭ ಮತ್ತು

ದ್ರಾವಿಡ ಸಾಹಿತ್ಯದಲ್ಲಿ ರಾಷ್ಟ್ರೀಯತೆ ರೂಪುಗೊಂಡ ಪರಿಕಲ್ಪನೆಯನ್ನು ಒರೆಗೆ ಹಚ್ಚುವ ಹದಿನಾಲ್ಕು ಲೇಖನಗಳಿವೆ ಈ ಕೃತಿಯಲ್ಲಿ. ಸಾಹಿತ್ಯ-ರಾಷ್ಟ್ರ-ಉಪರಾಷ್ಟ್ರೀಯತೆ-ಅಭಿವ್ಯಕ್ತಿ -ಇವುಗಳ ಸೂಕ್ಷ್ಮ ನಿರ್ವಚನೆ ಇಲ್ಲಿದೆ. ಬೌದ್ಧಿಕ ಮತ್ತು ಸಾಹಿತ್ಯಿಕ ಚರ್ಚೆ ಈ ಲೇಖನಗಳ ವಿಶಿಷ್ಟತೆ. ಹಾಗಾಗಿ ಇದು ಅತ್ಯಂತ ಉಪಯುಕ್ತ ಮತ್ತು ಸಾಂದರ್ಭಿಕ ಕೃತಿಯಾಗಿದೆ.

ಸಾಹಿತ್ಯ ವಿಮರ್ಶೆ: ೧೯೮೯ರಲ್ಲಿ ಈ ಕೃತಿ ಪ್ರಕಟವಾಗಿದೆ. ೧೯೮೮ನೇ ಸಾಲಿನಲ್ಲಿ ವಿವಿಧ ನಿಯತಕಾಲಿಕೆಗಳಲ್ಲಿ ಪ್ರಕಟವಾದ ಉತ್ತಮ ಹದಿನೈದು ವಿಮರ್ಶಾಲೇಖನಗಳಿವೆ ಇಲ್ಲಿ. ಸಮಕಾಲೀನ ಸಾಹಿತ್ಯ ವಿಮರ್ಶೆಯ ಒಂದು ಘಟ್ಟದ ಪರಿಚಯ ಮಾಡಿಕೊಡುವಲ್ಲಿ ಈ ಲೇಖನಗಳು ಸಫಲವಾಗಿವೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಈ ನಾಲ್ಕು ಪಂಥಗಳ ಧೋರಣೆಗಳಿಗೆ ಅನುಗುಣವಾದ ಲೇಖನಗಳಿವು. ಹಾಗೆಯೇ ವೈಚಾರಿಕ ಸ್ವರೂಪದ ಲೇಖನಗಳೂ ಇದರಲ್ಲಿ ಸೇರಿವೆ. 'ಬಿಜಾಪುರದ ಸೂಫಿಗಳು' ಎಂಬ ಜಿ. ರಾಜಶೇಖರರ ಲೇಖನ, 'ಮತ್ಸ್ಯ ಕನ್ಯೆಯರು ನನಗಾಗಿ ಹಾಡುತ್ತಿಲ್ಲ' ಎಂಬ ಲಂಕೇಶರ ಲೇಖನ ಈ ಸಂಕಲನದ ಶ್ರೇಷ್ಠ ಬರಹಗಳಾಗಿವೆ. ಕನ್ನಡ ಸಾಹಿತ್ಯ ಚರಿತ್ರೆಯನ್ನು ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ ನಿರೂಪಿಸಿರುವ ಸಿ. ವೀರಣ್ಣನವರ ಲೇಖನವೂ ಇಲ್ಲಿದೆ.

ಒಟ್ಟಾರೆ ಜಿ.ಎಸ್.ಎಸ್. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ, ಅವರ ಸಾಹಿತ್ಯಿಕ ಮತ್ತು ಸೃಜನಶೀಲ ಆಸಕ್ತಿಗಳಿಂದಾಗಿ 'ಸಾಹಿತ್ಯಿಕ ಪರಿಸರ' ನಿರಂತರವಾಗಿ 'ಬೌದ್ಧಿಕ ಸಂಘರ್ಷಕ್ಕೆ, ಉನ್ನತ ವಾಗ್ವಾದಕ್ಕೆ' ಎಡೆ ನೀಡುವಂತೆ ಶ್ರಮಿಸಿದ್ದಾರೆ. ತಾವೂ ಬರೆಯುವುದರ ಜೊತೆ ಸಮಕಾಲೀನ ಲೇಖಕರನ್ನು ಹುರಿದುಂಬಿಸಿ ಉತ್ತಮ ಮಟ್ಟದ ಲೇಖನಗಳು ರೂಪುಗೊಳ್ಳುವಂತೆ ಮಾಡಿದ್ದಲ್ಲದೆ; ಆ ಲೇಖನಗಳು ಅತ್ಯಂತ ಶೀಘ್ರವಾಗಿ ಕೃತಿರೂಪದಲ್ಲಿ ಪ್ರಕಟವಾಗುವಂತೆಯೂ ನೋಡಿಕೊಂಡಿದ್ದಾರೆ. ಹೀಗಾಗಿ ಜಿ.ಎಸ್.ಎಸ್. ಎಪ್ಪತ್ತು-ಎಂಬತ್ತು-ತೊಂಬತ್ತರ ದಶಕದ ಸಾಹಿತ್ಯ ದ್ರೋಣರೇ ಆಗಿದ್ದಾರೆ ಎಂದರೆ ಅತಿಶಯೋಕ್ತಿ ಆಗಲಾರದು.

ಜಿ.ಎಸ್.ಎಸ್. ಸಾಹಿತ್ಯ ಮತ್ತು ವೈಚಾರಿಕತೆ:

ಸಾಹಿತ್ಯಕ್ಕೂ ವೈಚಾರಿಕತೆಗೂ ಎಲ್ಲಿಯ ಸಂಬಂಧ? ಆದರೂ ಆಧುನಿಕ ಓದುಗ-ವಿಮರ್ಶಕ ಈ ನಂಟನ್ನು ಬಹುದೂರದವರೆಗೆ ಎಳೆದು ತಂದಂತೆ ಕಾಣಿಸುತ್ತಿದೆ. ಸಾಹಿತ್ಯ ಅಮೂರ್ತ; ತಾತ್ವಿಕ ಕಲಾಪಂಥ; ವೈಚಾರಿಕತೆ (ಈಗಿನ ಅರ್ಥದಲ್ಲಿ ವೈಜ್ಞಾನಿಕ ಮನೋಧರ್ಮ) ಮೂರ್ತ; ಆಕೃತಿನಿಷ್ಠ, ಲೌಕಿಕ. ಆದರೂ ಸಮಕಾಲೀನ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಈ ಮಾತು ಅತಿಯಾಗಿಯೇ ಕೇಳಿಬರುತ್ತಿದೆ. ಹಾಗೆ ನೋಡಿದರೆ ಕನ್ನಡದಲ್ಲಿ ಸೃಜನ ಮತ್ತು ಸೃಜನೇತರ ಪ್ರಕಾರಗಳಲ್ಲಿ ಕುವೆಂಪು ಮತ್ತು ಲಂಕೇಶರನ್ನು ಮಾತ್ರ ವೈಚಾರಿಕತೆಯ ಮುಖ್ಯ ನೆಲೆಗಳಾಗಿ ಪರಿಭಾವಿಸಲಾಗುತ್ತಿದೆ.

ಈ ಇಬ್ಬರ ಕಾಲಮಾನವನ್ನೂ ಅರಗಿಸಿಕೊಂಡಂತೆ ಕಂಡುಬರುವ ಜಿ.ಎಸ್.ಎಸ್. ತಾವು ಆ ನೆಲೆಯತ್ತ ಸಾಗಲು ಯತ್ನಿಸಿದ್ದಾರೆ.

ಸುಮಾರು ಐವತ್ತು ವರ್ಷಗಳ ತಮ್ಮ ಸಾಹಿತ್ಯಿಕ ಕೃಷಿಯಲ್ಲಿ ಜಿ.ಎಸ್.ಎಸ್. ಎಲ್ಲ ಪಂಥಗಳಲ್ಲಿ ಕಂಡೂ ಕಾಣದಂತೆ ನಡೆದವರು. ಹಾಗಾಗಿ ಗದ್ಯ-ಪದ್ಯಗಳೆರಡೂ ಅವರ ಅಭಿವ್ಯಕ್ತಿಯ ಸಮಾನ ಮಾಧ್ಯಮಗಳಾಗಿವೆ. ಹಾಗಾಗಿ ಐತಿಹಾಸಿಕ, ಪೌರಾಣಿಕ, ಜಾನಪದೀಯ ಗ್ರಹಿಕೆಗಳು ಅವರಿಗೆ ಭೂಮಿಕೆಯಾದಂತೆ ಕಂಡುಬರುತ್ತದೆ. ಕಾವ್ಯಾನುಭವಕ್ಕೂ-ಲೋಕಾನುಭವಕ್ಕೂ ತೀರಾ ಅಂತರವಿದೆ ಎಂದೇನೂ ಜಿ.ಎಸ್.ಎಸ್. ಭಾವಿಸಿದಂತಿಲ್ಲ. ಸಾಹಿತ್ಯ ಅವರ ಭಾವಜೀವಿ ಸ್ವಭಾವಕ್ಕೆ ಆರ್ದ್ರತೆ, ಅಂತರ್ಮುಖತೆ, ವೈಚಾರಿಕತೆ, ಹೊಂದಾಣಿಕೆ ಮತ್ತು ಸಾಧನೆಗಳ ಅವಕಾಶ ಕಲ್ಪಿಸಿದೆ. ಸಾಮಾಜಿಕ ಪ್ರಜ್ಞೆ ನಿಧಾನಕ್ಕೆ ಅರಳಿ ಮೇಲುಗೈ ಆದಂತೆ ಕಂಡಿದೆ. ನಗರ ಬದುಕು ಹಿನ್ನೆಲೆಗೆ ಸರಿದು ರೈತ, ಶ್ರಮಿಕ ವೇದಿಕೆಗೆ ಬರುತ್ತಾರೆ. ಒಣವೇದಾಂತ ಹಿಂದೆ ಸರಿದು ಸಾಮಾಜಿಕ ನ್ಯಾಯದತ್ತ ಕಣ್ಣು ಹಾಯಿಸಿದ್ದಾರೆ. ಹಾಗಾಗಿ ಬರೆಯುತ್ತಾರೆ: 'ಮುಂದಕ್ಕೆ ಚಲಿಸುತ್ತಿದ್ದರೆ ಚರಿತ್ರೆ; ನಿಂತು ಮಡುಗಟ್ಟಿದರೆ ಪುರಾಣ!' ಚಲನೆ ಅವರನ್ನು ಕಾಡುತ್ತಿದೆ. ಪ್ರಕೃತಿ ಸೆಳೆಯುತ್ತದೆ. ಆದರೆ ಅದು ಮನುಷ್ಯ ಪ್ರಕೃತಿಯ ಅನಾವರಣಕ್ಕೂ ಕಾರಣವಾಗಿದೆ. ಹಾಗಾಗಿ ಅವರ ಕಾವ್ಯ ಸಂವೇದನೆ ನಿಶ್ಚಿತ ನಂಬಿಕೆ, ಧರ್ಮ, ಕಾಲಕ್ಕೆ ಬದ್ಧವಾಗದೆ ಮಾನವತೆಯ ಹುಡುಕಾಟಕ್ಕೆ ಮೊದಲಾಗಿದೆ. "ಪ್ರೀತಿ-ಕರುಣೆ-ಸ್ನೇಹ, ಮರುಕ ಇವೇ ನಮ್ಮ ದೇವರು" ಎನ್ನುತ್ತಾರೆ.

ಮುರಿದ ಮಾನವ ಸಂಬಂಧಗಳ ಬಗ್ಗೆ ಕಳಕಳಿ ಇದೆ. ಹಾಗಾಗಿ ಹಳೆಯ ಪ್ರತಿಮೆಗಳು ಹೊಸ ಅರ್ಥಕ್ಕಾಗಿ ಬಳಕೆಯಾಗಿವೆ. ಸೌಂದರ್ಯಾರಾಧನೆ ಆತ್ಮಶೋಧನೆಯೆಡೆಗೆ ನಡೆದಿದೆ. ಪ್ರಕೃತಿ-ವಿಕೃತಿಗಳ ತುಲನೆ ಆರಂಭವಾಗುತ್ತದೆ. ಕೆ.ಎಸ್.ನ.ರ ಕಾವ್ಯದಲ್ಲಿ ಕಂಡುಬರುವ ಸ್ಪಷ್ಟ ವೈಚಾರಿಕ ಆಕೃತಿಯೊಂದು ಜಿ.ಎಸ್.ಎಸ್. ಕಾವ್ಯದಲ್ಲಿ ರೂಪುಗೊಂಡಿಲ್ಲ ಎನ್ನುತ್ತಾರೆ ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ. ಹೇಗೆ ಸಾಧ್ಯ? ಈ ಮಾತಿನ ದೀರ್ಘ ಚರ್ಚೆಯ ಅಗತ್ಯವಿದೆ.

ಜಿ.ಎಸ್.ಎಸ್. ದೃಷ್ಟಿಕೋನದಲ್ಲಿ ವೈಚಾರಿಕತೆ ಇದು: "ಕಾಲದಿಂದ ಕಾಲಕ್ಕೆ ಜನಜೀವನದಲ್ಲಾದ ಧಾರ್ಮಿಕ, ರಾಜಕೀಯ, ಸಾಮಾಜಿಕ ಬದಲಾವಣೆಗಳಿಂದ ಆಯಾ ಕಾಲದಲ್ಲಿ ವೈಚಾರಿಕ ಕ್ರಾಂತಿಯುಂಟಾಗುತ್ತದೆ. ಅದರ ಪರಿಣಾಮವಾಗಿ ಹೊಸ ಮೌಲ್ಯಗಳು, ಹೊಸ ಜೀವನ ದೃಷ್ಟಿಗಳು ಕಾಣಿಸಿಕೊಳ್ಳುತ್ತವೆ. ಅಭಿವ್ಯಕ್ತಿ ಕ್ರಮವೂ ಕಾಲದಿಂದ ಕಾಲಕ್ಕೆ ಬೇರೆಯಾಗುತ್ತದೆ. ಹೀಗಾಗಿ ವಸ್ತುವಿನಲ್ಲಿ, ರೀತಿಯಲ್ಲಿ, ದೃಷ್ಟಿಯಲ್ಲಿ ಪ್ರಮುಖ ಬದಲಾವಣೆಗಳು ಅಂದುಂದಿನ ಕವಿಗಳಲ್ಲಿ ಕಂಡುಬಂದು ಸಾಹಿತ್ಯ ಪ್ರಗತಿಯನ್ನೂ ಅಂದಂದಿನ ಸಾಹಿತಿಗಳಿಗೆ ಇರುವ ಸಮಕಾಲೀನ ಪ್ರಜ್ಞೆಯನ್ನೂ ಪ್ರಕಟಿಸುತ್ತದೆ."[೧] ಇಲ್ಲಿ ನಿರ್ವಚಿಸಿರುವ ವೈಚಾರಿಕತೆ ಸಾಹಿತ್ಯಿಕ ಪರಿಕಲ್ಪನೆಯ

ಪರಿಧಿಯಲ್ಲಿ ರೂಪಿತವಾದದ್ದು. ಜಿ.ಎಸ್.ಎಸ್. ಭಾರತೀಯ ಮತ್ತು ಪಾಶ್ಚಾತ್ಯ ತತ್ವಗಳ ಹಿನ್ನೆಲೆಯಲ್ಲಿ, ವೈಚಾರಿಕತೆಯನ್ನು ರೂಪಿಸಲು ಯತ್ನಿಸಿಲ್ಲ. ಅದು ವ್ಯಕ್ತಿ ಸಂಸ್ಕೃತಿಯಿಂದ ಉತ್ಪನ್ನವಾದ ವೈಚಾರಿಕತೆ. ಹಾಗಾಗಿ ಅವರು ಪಂಪನನ್ನು ಗ್ರಹಿಸುವ ನೆಲೆಯೇ ಬೇರೆ. ವಚನಗಳ ಬಗ್ಗೆ ಬರೆಯುವಾಗಲೂ ಆ ಚಳುವಳಿಯ ಧಾರ್ಮಿಕ-ತಾತ್ವಿಕ ಆಯಾಮಗಳಿಂದ ದೂರವಿಟ್ಟು ನೋಡುವಲ್ಲಿ ಸಫಲರಾಗಿದ್ದಾರೆ. ಶ್ರೇಣೀಕೃತ ಸಮಾಜದ ಅನುಭವ ಅವರನ್ನು ದಿಗ್ಭ್ರಮೆಗೆ ಒಳಗಾಗುವಂತೆ ಮಾಡಿರುವುದರ ಜೊತೆ ಎದೆ ಕಲ್ಲಾಗಲು, ಹಾಗೇ ಆರ್ದ್ರವಾಗಲೂ ಪ್ರೇರೇಪಿಸಿದೆ. ಧರ್ಮ ಅವರಿಗೆ ಸಾಮಾಜಿಕ ಅಗತ್ಯ ಹಾಗೂ ಸಾಮಾಜಿಕ ಹೊಣೆಗಾರಿಕೆ ಉಳ್ಳದ್ದಾಗಿದೆ!

ಒಟ್ಟಾರೆ ಕಾವ್ಯ, ಸಾಹಿತ್ಯದ ಆಶಯ ಏನೇ ಇರಲಿ, ವಸ್ತು ಏನೇ ಇರಲಿ; ಅನುಭೂತಿ ಅದರ ಮೊದಲ ಸೆಲೆ. ವಿವೇಕ, ವೈಚಾರಿಕತೆ, ಜೀವನ ದೃಷ್ಟಿಗಳನ್ನು ಹದಗೊಳಿಸುವ ಸಾಹಿತ್ಯ ಶ್ರೇಷ್ಠವಾದುದು ಎನ್ನುತ್ತಾರೆ. ಕಾಲಸ್ಪಂದನೆ, ಪರಿವರ್ತನೆ, ಸಂವೇದನೆ -ಇವು ಕವಿ, ಓದುಗನ ಮುಖ್ಯ ನೆಲೆ ಎನ್ನುತ್ತಾರೆ.

ಹೀಗೆ ಜಿಎಸ್‌ಎಸ್‌ರ ವ್ಯಾಪಕ ಸಾಧನೆಯ ವಿವಿಧ ಹೆಜ್ಜೆ ಮತ್ತು ಸ್ವರೂಪವನ್ನು ಹಕ್ಕಿ ನೋಟದಲ್ಲಿ ಈ ಲೇಖನದಲ್ಲಿ ಗ್ರಹಿಸಲಾಗಿದೆ. ಅವರ ಸಮಗ್ರ ಅಧ್ಯಯನ ಅತ್ಯಂತ ಅಗತ್ಯ ಮತ್ತು ತುರ್ತಿನ ಕೆಲಸವಾಗಿದೆ. ಕುವೆಂಪು ಹೊಸಗನ್ನಡದ ಬೆಳಕು; ಲಂಕೇಶ್ ಹೊಸಕಾಲದ ಗಾಳಿ; ಜಿಎಸ್‌ಎಸ್ ಅವೆರಡನ್ನೂ ಒಳಗೊಂಡ ಸಮೃದ್ಧ ಸೆಲೆಯಾಗಿದ್ದಾರೆ.

ಆಕರ ಗ್ರಂಥಗಳು

೧. ಜಿಎಸ್‌ಎಸ್‌ರ ಕೃತಿಗಳು ೨) ಹಣತೆ : ಜಿಎಸ್‌ಎಸ್ ಅಭಿನಂದನ ಗ್ರಂಥ ೩) ಡಿ.ಆರ್. ನಾಗರಾಜರ ಕೃತಿಗಳು.

ಅಡಿಟಿಪ್ಪಣಿಗಳು

೧. ಸಮಗ್ರ ಕಾವ್ಯ : ಜಿ.ಎಸ್.ಎಸ್., ಸ್ನೇಹ ಪ್ರಕಾಶನ, ಬೆಂಗಳೂರು, ೧೯೮೭.

೨. ಸಮಗ್ರ ಗದ್ಯ : ಭಾಗ-೧, ಶಾರದಾ ಪ್ರಕಾಶನ, ಗಾಂಧಿನಗರ, ಬೆಂಗಳೂರು.

೩. ಸಮಗ್ರ ಗದ್ಯ : ಭಾಗ-೨, ಸ್ನೇಹ ಪ್ರಕಾಶನ, ವಿಜಯನಗರ, ಬೆಂಗಳೂರು.

೪. ಸಮಗ್ರ ಗದ್ಯ : ಭಾಗ-೩, ಕಾಮಧೇನು ಪ್ರಕಾಶನ, ಶೇಷಾದ್ರಿಪುರಂ, ಬೆಂಗಳೂರು-೩.

೫. ಶಾರದಾ ಪ್ರಕಾಶನ, ಬೆಂಗಳೂರು-೯.

೬. ಶಾರದಾ ಪ್ರಕಾಶನ, ಬೆಂಗಳೂರು-೫೩, ೧೯೮೫.


೭. ಶಾರದಾ ಪ್ರಕಾಶನ, ಬೆಂಗಳೂರು-೫೩, ೧೯೮೬.

೮. ಸುರುಚಿ ಪ್ರಕಾಶನ, ಮೈಸೂರು-೯.

೯. ಸಮಗ್ರ ಗದ್ಯ : ಭಾಗ-೨, ಸ್ನೇಹ ಪ್ರಕಾಶನ, ಬೆಂಗಳೂರು.

□□

ಡಾ॥ ಹಾ.ಮಾ. ನಾಯಕ



❐ ಎಸ್.ಎಸ್. ಲಕ್ಷ್ಮೀನಾರಾಯಣ ಭಟ್ಟ

"ನಮ್ಮಲ್ಲಿ ಹಿರಿಯತನವನ್ನು ಬಯಸುವವರು ನೂರು ಜನರಿದ್ದರೆ ಹುಟ್ಟಿನಿಂದ ಹಿರಿಯರಾಗಿರುವವರು ಕೆಲವೇ ಜನರು. ಡಾ. ಹಾಮಾನಾಯಕರು ಎರಡನೆಯ ವರ್ಗದ ಜನ. ಯಾರೂ ಹೇಳದೆ ಸಾಹಿತ್ಯ ಲೋಕದ ಯಜಮಾನಿಕೆ ಅವರ ಪಾಲಿಗೆ ಬಂದಿದೆ. ಅವರು ಸದ್ದಿಲ್ಲದೆ ಅದನ್ನು ನಿರ್ವಹಿಸುತ್ತಿದ್ದಾರೆ." ಕನ್ನಡದ ಪ್ರಸಿದ್ಧ ವಿಮರ್ಶಕರಾದ ಕೀರ್ತಿನಾಥ ಕುರ್ತಕೋಟಿ ಬರೆದಿರುವ ಮಾತು ಇದು. ಕನ್ನಡನಾಡು, ಭಾಷೆ, ಸಾಹಿತ್ಯಗಳ ಆಗುಹೋಗುಗಳ ಬಗ್ಗೆ ಸದಾ ಎಚ್ಚರ ಕಾಳಜಿಗಳಿಂದ ಕೂಡಿದ್ದು ತಮ್ಮ ಅಂಕಣ ಲೇಖನಗಳಲ್ಲಿ ಅವನ್ನು ಕುರಿತು ಬರೆಯುತ್ತಿದ್ದವರು ಹಾಮಾನಾ. ಅನೇಕರು ಅವರನ್ನು ಕನ್ನಡದ ನಾಯಕರೆಂದೇ ಕರೆದದ್ದುಂಟು.

ಕುವೆಂಪು, ಗೋಪಾಲಗೌಡ, ಅನಂತಮೂರ್ತಿ, ಜೆ.ಎಚ್. ಪಟೇಲ, ಶಿವರುದ್ರಪ್ಪ, ಲಂಕೇಶ್, ಕೆ.ವಿ. ಸುಬ್ಬಣ್ಣ, ನಾಡಿಗರಂಥ ಪ್ರತಿಭಾವಂತರಿಗೆ, ಕ್ರಿಯಾಶೀಲರಿಗೆ ಜನ್ಮಕೊಟ್ಟ ಜಿಲ್ಲೆ ಶಿವಮೊಗ್ಗ, ನಾಯಕರು ಹುಟ್ಟಿದ್ದೂ ಅದೇ ಜಿಲ್ಲೆಯ ಹಾರೋಗದ್ದೆ ಎಂಬ ಹಳ್ಳಿಯಲ್ಲಿ, ಹನ್ನೆರಡನೆಯ ಸೆಪ್ಟೆಂಬರ್ ೧೯೩೧ರಲ್ಲಿ. ತಂದೆ ಶ್ರೀನಿವಾಸ ನಾಯಕರು ಅಡಿಕೆ ಬೇಸಾಯ, ವ್ಯಾಪಾರ ಮಾಡಿಕೊಂಡಿದ್ದರು; ತಾಯಿ ರುಕ್ಮಿಣಿಯಮ್ಮ. ಹಳ್ಳಿಯಲ್ಲಿದ್ದರೂ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಕಳಕಳಿ. ಚಿಕ್ಕಂದಿನಿಂದ ತುಂಬ ಚೂಟಿಯಾಗಿದ್ದ ನಾಯಕನಿಗೆ ತಾಯಿಯೇ ಮೊದಲ ಗುರು. ಅವರಿಂದ ಆರಂಭದಲ್ಲಿ ಕೊಂಚ ಕಲಿತ ನಂತರ ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಹುಡುಗ ಅಜ್ಜಿಯ ಊರಾದ ನಾಲೂರಿಗೆ ಹೋದ. ಹೈಸ್ಕೂಲಿನ ಓದು ನಡೆದದ್ದು ತೀರ್ಥ ಹಳ್ಳಿಯಲ್ಲಿ. ಅಲ್ಲಿದ್ದಾಗ ಅವನ ಓದಿನ ಗೀಳು ತುಂಬ ಹೆಚ್ಚಿತು. ಅವನ ಪುಸ್ತಕದ ಆಸೆ ಕಂಡ ಶಾಲೆಯ ಲೈಬ್ರರಿ ಟೀಚರ್ ಕೇಳಿದಾಗೆಲ್ಲ ಹುಡುಗನಿಗೆ ಎರಡು ಮೂರು ಪುಸ್ತಕ ಹೆಚ್ಚಿಗೆ ಕೊಡುತ್ತಿದ್ದರು. ತೀರ್ಥಹಳ್ಳಿಗೆ ಹತ್ತಿರದಲ್ಲಿಯೇ ಇದ್ದ ಮೇಗರವಳ್ಳಿ ಪರಮೇಶ್ವರಭಟ್ಟರ ಮನೆ ಲೈಬ್ರರಿಯಿಂದಲೂ ಹುಡುಗ ಪುಸ್ತಕ ಕೊಂಡೊಯ್ಯುತ್ತಿದ್ದ. ಆ ದಿವಸಗಳಲ್ಲೇ ತಾನೂ ಕಥೆ ಕವಿತೆಗಳನ್ನು ರಚಿಸುವ ಪ್ರಯತ್ನ ಅವನು ಮಾಡಿದ್ದುಂಟು.

ವಿಳಾಸ : ನಂ. ೨೨೬೩, ೨೨ನೇ ಅಡ್ಡರಸ್ತೆ, ಬನಶಂಕರಿ ೨ನೇ ಹಂತ, ಬೆಂಗಳೂರು-೭೦

ಸಾಹಿತ್ಯಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅವನಿಗೆ ಎಷ್ಟು ಆಸಕ್ತಿಯಿತ್ತೆಂದರೆ 'ಮಿತ್ರ ಬಳಗ' ಎಂಬ ಗುಂಪೊಂದನ್ನು ಮಾಡಿಕೊಂಡು ಹತ್ತಿರದ ಊರಿಗೆ ಬಂದ ಕಾರಂತ ಮಾಸ್ತಿ ಬೇಂದ್ರೆ ವಿಸೀಯವರ ಉಪನ್ಯಾಸ ಕಾರ್ಯಕ್ರಮಗಳನ್ನು ಮಾಡಿಸುತ್ತಿದ್ದ. ನರಸಿಂಹ ಭಟ್ಟರೆಂಬ ಅಧ್ಯಾಪಕರೊಬ್ಬರು ಅವನಿಗೆ ಸಾಹಿತ್ಯದಲ್ಲಿ ವಿಶೇಷ ಪ್ರೀತಿ ಬೆಳೆಯಲು ಕಾರಣರಾದರು. ಮುಂದೆ ನಾಯಕರೇ ಇದನ್ನು ನೆನೆದಿದ್ದಾರೆ.

ನಾಯಕರ ಸಾಹಿತ್ಯದ ಸೆಳೆತ ಎಷ್ಟು ಪ್ರಬಲವಾಗಿತ್ತೆಂದರೆ ಹತ್ತೊಂಬತ್ತನೆಯ ವರ್ಷಕ್ಕೇ, ಹೈಸ್ಕೂಲು ದಾಟುವ ಮುಂಚೆಯೇ ಅವರು 'ಬಾಳ್ನೋಟಗಳು' ಎಂಬ ತಮ್ಮ ಮೊದಲ ಪುಸ್ತಕ ಪ್ರಕಟಿಸಿದರು. ಹೈಸ್ಕೂಲು ಮುಗಿದ ಮೇಲೆ ಶಿವಮೊಗ್ಗೆಯ ಇಂಟರ್‌ಮಿಡಿಯೆಟ್ (ಈಗಿನ ಸಹ್ಯಾದ್ರಿ) ಕಾಲೇಜಿಗೆ ಸೇರಿದರು. ಎರಡು ವರ್ಷ ಮುಗಿಯುವುದರೊಳಗೆ ಅವರ ಕುಟುಂಬ ಅನಿರೀಕ್ಷಿತವಾದ ಆರ್ಥಿಕ ಕಷ್ಟಗಳಿಗೆ ಸಿಕ್ಕಿಕೊಂಡಿತು. ನಾಯಕರ ಓದು ನಿಲ್ಲದಂತೆ ಆಗ ನೆರವಿಗೆ ಬಂದವರು ಕುಟುಂಬದ ಆಪ್ತರಾಗಿದ್ದ ಕಟ್ಪಾಡಿ ಗೋಪಾಲಕೃಷ್ಣ ಕಾಮತರು. ಈ ಸಹಾಯವನ್ನು ನಾಯಕರು ಮುಂದೆ ತಮ್ಮ ಬರೆಹದಲ್ಲೂ ಪ್ರೀತಿಯಿಂದ ಸ್ಮರಿಸಿದ್ದಾರೆ.

ಇಂಟರ್ ಮುಗಿಸಿ ಮೈಸೂರಿಗೆ ಬಂದು ಮಹಾರಾಜ ಕಾಲೇಜಿನಲ್ಲಿ ಕನ್ನಡ ಆನರ್ಸ್‌ಗೆ ಸೇರಿದ ನಾಯಕರಿಗೆ ಕೆ.ವಿ. ಸುಬ್ಬಣ್ಣ ಮತ್ತು ತರಾಸು ಸಹಪಾಠಿಗಳಾಗಿದ್ದರು. ಅಷ್ಟು ಹೊತ್ತಿಗೇ ಅವರು ವಿದ್ಯಾರ್ಥಿಗಳ ನಡುವೆ ಎದ್ದು ಕಾಣುವ ಯುವಕರಾಗಿದ್ದರು. "ಹೈಸ್ಕೂಲಿನಲ್ಲಿದ್ದಾಗಲೇ ಪುಸ್ತಕ ಬರೆದವನು, ಒಳ್ಳೆಯ ಮಾತುಗಾರ, ಬೇಂದ್ರೆ ಮಾಸ್ತಿ, ಕಾರಂತರಂಥ ಲೇಖಕರನ್ನೆಲ್ಲ ಪರಿಚಯ ಮಾಡಿಕೊಂಡಿದ್ದಾನೆ." -ಹೀಗೆ ಅವರ ಬಗ್ಗೆ ಉಳಿದ ವಿದ್ಯಾರ್ಥಿಗಳು ಮಾತಾಡಿಕೊಳ್ಳುವಂತಾಗಿತ್ತು. ಮೈಸೂರಿನಲ್ಲಿ ಹಾಮಾನಾ ತಮ್ಮ ಸಾಹಿತ್ಯಕ ಚಟುವಟಿಕೆಗಳನ್ನು ಇನ್ನಷ್ಟು ಹೆಚ್ಚಿಸಿಕೊಂಡರು. ಆ ದಿನಗಳಲ್ಲಿ ಇಂಗ್ಲಿಷ್ ಪ್ರೊಫೆಸರ್ ಆಗಿದ್ದು ಇನ್ನೇನು ನಿವೃತ್ತರಾಗಲಿದ್ದ ಪ್ರಸಿದ್ಧ ಕನ್ನಡ ವಿಮರ್ಶಕ ಎಸ್.ವಿ. ರಂಗಣ್ಣನವರಿಗೆ ನಾಯಕರು ಕೆ.ವಿ. ಸುಬ್ಬಣ್ಣನವರ ಜೊತೆಗೂಡಿ 'ಬಾಗಿನ' ಎಂಬ ಅಭಿನಂದನ ಗ್ರಂಥವನ್ನು ಸಿದ್ಧಪಡಿಸಿ ಸಮರ್ಪಿಸಿದರು. ಸ್ವಲ್ಪ ಕಾಲದಲ್ಲೇ ಶ್ರೀ ರಾಮಾಯಣ ದರ್ಶನಕ್ಕಾಗಿ ಕುವೆಂಪು ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂತು. ಅದಕ್ಕಾಗಿ ಕಾಲೇಜಿನಲ್ಲಿ ಅವರಿಗೆ ಅಭಿನಂದನ ಸಮಾರಂಭ ನಡೆಯಿತು. ಆ ದಿನ ಕುವೆಂಪು ಅವರನ್ನು ಕುರಿತು ವಿದ್ಯಾರ್ಥಿಗಳ ಪರವಾಗಿ ನಾಯಕರು ಮಾಡಿದ ಭಾಷಣವನ್ನು ಆಗ ವೈಸ್ ಛಾನ್ಸ್‌ಲರ್ ಆಗಿದ್ದ ವಿ.ಎಲ್. ಡಿಸೋಜಾ ಎಲ್ಲರೆದುರು ಬಹಳ ಪ್ರಶಂಸೆ ಮಾಡಿದರು. ಕೆಲವು ದಿನ ಕಳೆದ ಮೇಲೂ ಅಂದಿನ ಅವರ ಭಾಷಣ ಎಲ್ಲರ ಮೆಚ್ಚಿಕೆಯ ಮಾತಿಗೆ ಪಾತ್ರವಾಗಿತ್ತು. ಆನರ್ಸ್ ತರಗತಿಗೆ ಓದುತ್ತಿರುವಾಗಲೇ ನಾಯಕರು ಹೊನ್ನ ಶೆಟ್ಟಿ ಬಹುಮಾನವನ್ನೂ ಗಳಿಸಿದರು.

ಆನರ್ಸ್ ಆದ ಕೂಡಲೇ ನಾಯಕರಿಗೆ ತುಮಕೂರು ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರ ಕೆಲಸ ಸಿಕ್ಕಿತು. ಅಲ್ಲಿ ಕೆಲಸ ಮಾಡುತ್ತಿದ್ದಾಗ ಭಾಷಾಶಾಸ್ತ್ರದಲ್ಲಿ ಎಂ.ಎ. ಪದವಿಗೆ ಅಧ್ಯಯನ ನಡೆಸಲು ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿ ವೇತನವೂ ಲಭಿಸಿತು.

ಆ ದಿವಸಗಳಲ್ಲಿ ಭಾಷಾಶಾಸ್ತ್ರದ ಅಧ್ಯಯನ ಮಾಡುವವರಿಗೆ ಕಲ್ಕತ್ತಾ ವಿಶ್ವವಿದ್ಯಾಲಯ ಸೂಕ್ತ ಸ್ಥಳವಾಗಿತ್ತು. ಆ ಕ್ಷೇತ್ರದಲ್ಲಿ ವಿಶೇಷ ಕೆಲಸಮಾಡಿ ಅಂತಾರಾಷ್ಟ್ರೀಯ ಖ್ಯಾತಿ ಪಡೆದಿದ್ದ. ಡಾ. ಸುನೀತಕುಮಾರ ಚಟರ್ಜಿ ಮತ್ತು ಸುಕುಮಾರ ಸೇನ್ ಅಲ್ಲಿ ಪ್ರಾಧ್ಯಾಪಕರಾಗಿದ್ದರು. ನಾಯಕರು ತಮಗೆ ದೊರೆತ ಅವಕಾಶವನ್ನು ಬಳಸಿಕೊಂಡರು. ಭಾಷಾಶಾಸ್ತ್ರದಲ್ಲಿ ಎಂ.ಎ. ಮಾಡಲು ಕಲ್ಕತ್ತಕ್ಕೆ ತೆರಳಿದರು. ಆ ಇಬ್ಬರು ವಿದ್ವಾಂಸರ ವಿದ್ಯಾರ್ಥಿಯಾಗಿ ಎಂ.ಎ. ಪದವಿಗೆ ಶ್ರದ್ಧೆಯಿಂದ ಅಧ್ಯಯನ ನಡೆಸಿದ ನಾಯಕರು ವಿಶ್ವವಿದ್ಯಾಲಯಕ್ಕೇ ಪ್ರಥಮ ರ್‍ಯಾಂಕ್ ಪಡೆದು ಚಿನ್ನದ ಪದಕ ಮತ್ತು ಇತರ ನಗದು ಬಹುಮಾನಗಳನ್ನು ಗಳಿಸಿದರು. ಅಲ್ಲಿ ಅವರಿಗೆ ದೊರೆತ ಗುರುಗಳ ಮಾರ್ಗದರ್ಶನ ಎಷ್ಟು ಉಪಯುಕ್ತವಾಗಿತ್ತೆನ್ನುವುದನ್ನೂ ಮತ್ತು ಆ ಗುರುಗಳ ಎತ್ತರ ಯಾವ ನೆಲೆಯದಾಗಿತ್ತೆನ್ನುವುದನ್ನೂ ಸುನೀತಕುಮಾರ ಚಟರ್ಜಿಯವರನ್ನು ಕುರಿತು ಮುಂದೆ ನಾಯಕರು ಬರೆದ ಲೇಖನವೊಂದರಲ್ಲಿ ಕಾಣಬಹುದು. ಗುರುಗಳಲ್ಲಿ ಅವರಿಗಿದ್ದ ಭಕ್ತಿಗೌರವಗಳೂ ಲೇಖನದಲ್ಲಿ ಪ್ರತಿಫಲಿತವಾಗಿವೆ.

ಎಂ.ಎ. ಮುಗಿಸಿ ವಾಪಸ್ಸು ಬಂದ ನಾಯಕರು ಹಿಂದೆ ತಾವು ಶಿವಮೊಗ್ಗೆಯಲ್ಲಿ ಓದಿದ್ದ ಸಹ್ಯಾದ್ರಿ ಕಾಲೇಜಿನಲ್ಲಿಯೇ ಕನ್ನಡ ಅಧ್ಯಾಪಕರಾಗಿ ನೇಮಕಗೊಂಡರು. ಮುಂದೆ ಮಹಾರಾಜ ಕಾಲೇಜಿಗೆ ವರ್ಗವಾದದ್ದಲ್ಲದೆ ಸ್ವಲ್ಪ ಕಾಲದ ಮೇಲೆ ಸ್ನಾತಕೋತ್ತರ ಅಧ್ಯಯನ ಸಂಸ್ಥೆಯಾಗಿದ್ದ ಮಾನಸ ಗಂಗೋತ್ರಿಯಲ್ಲಿ ನೆಲೆಗೊಂಡರು.

ಉನ್ನತ ಶಿಕ್ಷಣ ಪಡೆಯಲು ಬೇಕಾದ ಎಲ್ಲ ಅರ್ಹತೆಗಳೂ ಇದ್ದ ನಾಯಕರಿಗೆ ಅಮೆರಿಕದ ಇಂಡಿಯಾನಾ ವಿಶ್ವವಿದ್ಯಾಲಯದ ಸ್ಕಾಲರ್‌ಷಿಪ್ ಮತ್ತು ಫುಲ್ ಬ್ರೈಟ್ ಪ್ರಯಾಣವೇತನ ಎರಡೂ ದೊರಕಿ ಡಾಕ್ಟರೇಟ್ ಅಧ್ಯಯನಕ್ಕಾಗಿ ಅವರು ಅಮೆರಿಕಕ್ಕೆ ತೆರಳಿದರು. ಅಲ್ಲಿದ್ದ ಎರಡು ವರ್ಷಗಳ ಅವಧಿಯಲ್ಲಿ ಫ್ರೆಡ್ ಹೌಸ್ ಹೋಲ್ಡರ್ ಎಂಬ ವಿದ್ವಾಂಸರ ಜೊತೆಗೂಡಿ ಭಾಷಾಶಾಸ್ತ್ರ ಹಾಗೂ ಮಾನವ ವಿಜ್ಞಾನಗಳಲ್ಲಿ ಅಭ್ಯಾಸ ನಡೆಸಿದರು. ತಮ್ಮ ಡಾಕ್ಟರೇಟ್ ಪದವಿಗಾಗಿ ಅವರು ಸಲ್ಲಿಸಿದ ಮಹಾಪ್ರಬಂಧ ಒಂದು ಗಟ್ಟಿ ಬರೆಹವಾಗಿದೆ. ದ್ರಾವಿಡ ಭಾಷಾಕ್ಷೇತ್ರದಲ್ಲಿ ಅಪೂರ್ವ ಸೇವೆ ಸಲ್ಲಿಸಿರುವ ಪ್ರೊ. ಟಿ. ಬರೋ ಅವರಂಥ ಮಹಾವಿದ್ವಾಂಸರು ನಾಯಕರ- Kannada Literary and Colloquial ಎಂಬ-ಮಹಾಪ್ರಬಂಧವನ್ನು ಕುರಿತು All students of Kannada

should Find This Work exeedingly useful......Dr. Nayak's work is a pioneer Study in The Field of Kannada ಎಂದು ಮೆಚ್ಚಿಕೆ ಸೂಚಿಸಿದ್ದಾರೆ. ಭಾರತದಿಂದ ಅಮೆರಿಕಕ್ಕೆ ಹೋದ ಹಲವರು ಸಸ್ಯಾಹಾರಿ ಭಾರತೀಯರು ಅಲ್ಲಿಗೆ ಹೋದ ಮೇಲೆ ಮಾಂಸಾಹಾರಿಗಳಾಗಿದ್ದುಂಟು. ಆದರೆ ಹಾಮಾನಾ ಅಲ್ಲಿಗೆ ಹೋದ ಮೇಲೆ ಪೂರ್ಣ ಸಸ್ಯಾಹಾರಿಯಾಗಿ ಪರಿವರ್ತನೆಗೊಂಡರು. ಊಟ, ತಿಂಡಿ, ನಡತೆ ಉಡುಪುಗಳ ವಿಷಯದಲ್ಲಿ ಅವರು ಸಂಪೂರ್ಣವಾಗಿ ಗಾಂಧೀ ಪ್ರಭಾವಕ್ಕೆ ಒಳಗಾದರು ಎನ್ನಬಹುದು. ಉದ್ದಕ್ಕೂ ಹೀಗೆ ಕಟ್ಟುನಿಟ್ಟಿನ ವಿದ್ಯಾರ್ಥಿ ಜೀವನ ನಡೆಸಿದ ಹಾಮಾನಾ ಅದರ ಪರಮಫಲಗಳನ್ನು ಬೊಗಸೆ ತುಂಬ ಪಡೆದರು.

ಅಮೆರಿಕದಲ್ಲೇ ಮುಂದುವರಿಯಲು ಹಲವಾರು ಅವಕಾಶಗಳು ದೊರೆತಿದ್ದರೂ ನಾಯಕರಲ್ಲಿದ್ದ ತಾಯ್ನಾಡಿನ ಪ್ರೀತಿ ಮತ್ತೆ ಮೈಸೂರಿಗೆ ಮರಳುವಂತೆ ಮಾಡಿತು. ಮಾನಸ ಗಂಗೋತ್ರಿಯಲ್ಲಿ ಭಾಷಾಶಾಸ್ತ್ರದ ರೀಡರ್ ಆಗಿ ಅವರ ನೇಮಕವಾಯಿತು. ಮೂರುವರ್ಷಗಳ ನಂತರ ಬಹಳ ಬೇಗನೆ ಕನ್ನಡದ (ಭಾಷಾಶಾಸ್ತ್ರದ) ಪ್ರಾಧ್ಯಾಪಕ ಹುದ್ದೆ ದೊರಕಿತು.

ಕೆಲವರಿಗೆ ಯೋಗ್ಯತೆ ಮಾತ್ರ ಇರುತ್ತದೆ, ಮತ್ತ ಕೆಲವರಿಗೆ ಅದೃಷ್ಟವಷ್ಟೇ ಇರುತ್ತದೆ. ನಾಯಕರು ಎರಡನ್ನೂ ಪಡೆದು ಬಂದ ಭಾಗ್ಯವಂತರು. ನಲವತ್ತನೆಯ ಪ್ರಾಯದಲ್ಲಿ ಅವರು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದಾಗ ಅನೇಕರು ಹುಬ್ಬೇರಿಸಿರಬೇಕು. ಕೆಲವರಲ್ಲಿ ಕೋಪ, ಅಸೂಯೆ ಹೊಗೆಯಾಡಿದ್ದರೂ ಅಸಹಜವಲ್ಲ. ಆದರೆ ತಾವು ದಾಟಿಕೊಂಡು ನಡೆದ ಅಧ್ಯಾಪಕರನ್ನು ಹಾಮಾನಾ ಪ್ರೀತಿ ಗೌರವಗಳಿಂದ ಗೆದ್ದುಕೊಂಡರು. ಯೂನಿವರ್ಸಿಟಿ ಮೆಟ್ಟಿಲನ್ನೇ ಹತ್ತದ ಗೊರೂರರಂಥ ಹಿರಿಯರ ಬಳಿ ಅವರು ಬಾಲಕರಂತೆ ತಗ್ಗಿ ನಡೆದದ್ದುಂಟು. ಸಾಹಿತ್ಯ ವಿಷಯದಲ್ಲಿ ತಮ್ಮ ವಿಚಾರಗಳಿಗೆ ತೀರ ವಿರುದ್ಧರಾದವರೆಂಮ ತಿಳಿದೂ ಜಿ.ಎಚ್. ನಾಯಕರಂಥ ಗಟ್ಟಿ ಅಧ್ಯಾಪಕರನ್ನು ತಮ್ಮ ವಿಭಾಗಕ್ಕೆ ತಾವೇ ಕರೆತಂದರು. ಅಡಿಗರು ಇಡೀ ಅಧ್ಯಯನ ಸಂಸ್ಥೆಯನ್ನು ನಿರ್ಭಿಡೆಯಿಂದ ಟೀಕಿಸುತ್ತಿದ್ದ ದಿನಗಳು ಅವು. ಒಮ್ಮೆ ಅವರು ಅಕಸ್ಮಾತ್ ಗಂಗೋತ್ರಿಗೆ ಬಂದಿದ್ದು ಅಧ್ಯಯನ ಸಂಸ್ಥೆಯ ಹೊರಾವರಣದಲ್ಲಿ ಪುಸ್ತಕಗಳನ್ನು ನೋಡುತ್ತ ನಿಂತಿದ್ದನ್ನು ತಿಳಿದ ನಾಯಕರು ಕೂಡಲೇ ಅವರಲ್ಲಿಗೆ ಧಾವಿಸಿ ಒಳಗೆ ಕರೆತಂದು ಸತ್ಕರಿಸಿದ ರೀತಿಗೆ ಅವರ ವಿದ್ಯಾರ್ಥಿಗಳೇ ಬೆರಳು ಕಚ್ಚಿದ್ದಿದೆ.

ತಮಗೆ ದೊರೆತ ಅಧಿಕಾರವನ್ನು ನಾಯಕರು ಅಚ್ಚರಿಗೊಳಿಸುವ ಕಾರ್ಯಕ್ಷಮತೆಯಿಂದ ಸಮರ್ಥಿಸಿಕೊಂಡರು. ಅವರ ನಿರ್ದೇಶನದಲ್ಲಿ ಅಧ್ಯಯನ ಸಂಸ್ಥೆ ಸುಮಾರು ಐನೂರು ಗ್ರಂಥಗಳನ್ನು ಹೊರತಂದಿತು ಎಂದರೆ ಅದು ಕೇವಲ

ಸತ್ಯಸಂಗತಿ! ಕನ್ನಡ ವಿಶ್ವಕೋಶದ ಒಂಬತ್ತು ಭಾರೀ ಸಂಪುಟಗಳು, ಎಪಿಗ್ರಾಫಿಯ ಕರ್ನಾಟಕದ ಐದು ಸಂಪುಟಗಳು, ಛಂದಶ್ಶಾಸ್ತ್ರ ಕುರಿತ ಎರಡು ಸಂಪುಟಗಳು ನಾಯಕರ ನಿರ್ದೇಶನಾವಧಿಯಲ್ಲಿ ಹೊರಬಂದ ಬೃಹತ್ ಗ್ರಂಥಗಳು. ಬಿ.ಎಂ.ಶ್ರೀ. ಕೈಲಾಸಂ, ಶ್ರೀಕಂಠಶಾಸ್ತ್ರಿ, ಎಂ.ಆರ್.ಶ್ರೀ. ಇವರ ಪೂರ್ಣ ಬರಹಗಳನ್ನು ಸಮಗ್ರ ಸಂಪುಟಗಳಲ್ಲಿ ಹೊರತಂದ ಶ್ರೇಯಸ್ಸೂ ಪೂರ್ತಿಯಾಗಿ ಅವರದ್ದೇ. ಇಂಥ ಯೋಜನೆಗಳನ್ನು ರೂಪಿಸಲು ವಿಶೇಷವಾದ ಕಲ್ಪನಾಶಕ್ತಿ ಬೇಕು; ಇವುಗಳ ಪ್ರಯೋಜನವನ್ನು ವಿಶ್ವವಿದ್ಯಾಲಯಕ್ಕೆ ಮನವರಿಕೆ ಮಾಡಿಕೊಟ್ಟು ಅದರ ಅಂಗೀಕಾರ ಪಡೆಯಲು ತಕ್ಕ ಮುತ್ಸದ್ದಿತನ ಬೇಕು; ಸಹೋದ್ಯೋಗಿ ವಿದ್ವಾಂಸರ ಮನಸ್ಸನ್ನು ಗೆದ್ದು ಅವರಿಂದ ದುಡಿಸಿಕೊಳ್ಳಬಲ್ಲ ಜಾಣ್ಮೆ ಬೇಕು; ವರ್ಷಗಟ್ಟಲೆ ಸಾಗುವ ಈ ಕಾರ್ಯ ಎಲ್ಲೂ ನಿಲ್ಲದಂತೆ ಹಂತ ಹಂತವಾಗಿ ಅದನ್ನು ಪೂರೈಸುವ ಶ್ರದ್ಧೆ, ವಿಚಕ್ಷಣೆ, ತಾಳ್ಮೆಬೇಕು. ನಾಯಕರು ಈ ಗುಣಗಳನ್ನೆಲ್ಲ ಧಾರಾಳವಾಗಿ ಪಡೆದಿದ್ದರು.

"ಡಾ. ನಾಯಕರ ವ್ಯಕ್ತಿತ್ವದ ಒಂದು ಅವಿಭಾಜ್ಯವಾದ ಅಂಗವಾಗಿದ್ದುದೆಂದರೆ ಅವರ ಶಿಸ್ತು ಮತ್ತು ಓರಣ. ಇವು ಕೇವಲ ಅವರ ವೈಯಕ್ತಿಕ ಗುಣಗಳಾಗಿರದೆ ಅವರ ಜೀವನದ ಮೂಲ ಸೂತ್ರಗಳಾಗಿದ್ದವು. ಈ ಶಿಸ್ತು ಅವರ ವೇಷಭೂಷಣಗಳಲ್ಲಿ ಬರವಣಿಗೆಯಲ್ಲಿ ಜೀವನ ಕ್ರಮದಲ್ಲಿ ಹೀಗೆ ಎಲ್ಲ ಕಡೆಗೂ ಕಾಣುತ್ತದೆ. ತಮ್ಮ ನಂಬಿಕೆಗೆ, ತಿಳುವಳಿಕೆಗೆ, ಜೀವನೋದ್ದೇಶಕ್ಕೆ ಅನುಸಾರವಾಗಿ ಜೀವನ ಕ್ರಮವನ್ನು ಅವರು ರೂಪಿಸಿಕೊಂಡಿದ್ದರು. ಇದರಿಂದಾಗಿ ಯಾವ ಸಮಸ್ಯೆಯನ್ನೂ ಅವರು ಮಾನವೀಯ ದೃಷ್ಟಿಕೋನದಿಂದ ಕಂಡು ಪರಿಹರಿಸಲು ಪ್ರಯತ್ನಿಸುತ್ತಿದ್ದರು. ಇದರಿಂದಾಗಿಯೇ ಎಂಥ ಯಶಸ್ಸು ದೊರೆತರೂ, ಉಪಕುಲಪತಿಯಂಥ ಪದವಿ ಕೈಗೆ ದೊರೆತಾಗಲೂ ಅವರ ವ್ಯಕ್ತಿತ್ವದಲ್ಲಿ ಬದಲಾವಣೆ ಬರಲಿಲ್ಲ... ಅಪಸ್ವರ, ಒಡಕುಮಾತು, ತಪ್ಪು ಹೆಜ್ಜೆ ಇವುಗಳಿಂದ ನಾಯಕರ ವ್ಯಕ್ತಿತ್ವ ಬಹಳ ದೂರದಲ್ಲಿತ್ತು" ನಾಯಕರಿಂದ ಸಾಕಷ್ಟು ದೂರದಲ್ಲಿದ್ದು ವಸ್ತುನಿಷ್ಠವಾಗಿ ಮಾತಾಡಬಲ್ಲವರಾಗಿದ್ದ ಕೀರ್ತಿನಾಥರೇ ಹೀಗೆ ಬರೆದಿದ್ದಾರೆ.

ನಾಯಕರು ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ದಿನಗಳಲ್ಲಿ ಸಂಸ್ಥೆ ಅತ್ಯಂತ ಶಿಸ್ತಿನಿಂದ ಕೆಲಸ ಮಾಡುತ್ತಿತ್ತು. ಅದು ಆರಂಭವಾಗುತ್ತಿದ್ದದ್ದು ಬೆಳಿಗ್ಗೆ ಹತ್ತೂವರೆ ಗಂಟೆಗೆ. ಆದರೆ ನಾಯಕರು ಒಂಬತ್ತು ಗಂಟೆಗೇ ಸಂಸ್ಥೆಗೆ ಬಂದು ತಮ್ಮ ಆಫೀಸಿನಲ್ಲಿ ಕೆಲಸದಲ್ಲಿ ತೊಡಗಿಬಿಡುತ್ತಿದ್ದರು. ಸಂಸ್ಥೆ ಮುಚ್ಚುತ್ತಿದ್ದದ್ದು ಸಂಜೆ ಐದೂವರೆಗೆ. ನಾಯಕರು ಆರು ಗಂಟೆಯ ನಂತರವಷ್ಟೇ ಅಲ್ಲಿಂದ ಹೊರಡುತ್ತಿದ್ದರು. ತಮ್ಮ ತರಗತಿಯನ್ನು ಅವರು ಎಂದೂ ಯಾವ ಕಾರಣಕ್ಕೂ ತೆಗೆದು ಕೊಳ್ಳದೆ ಇದ್ದವರಲ್ಲ. ಬೇರೆ ಅಧ್ಯಾಪಕರು ತೆಗೆದುಕೊಳ್ಳದಿರುವುದನ್ನೂ ಒಪ್ಪುತ್ತಿರಲಿಲ್ಲ. ಸಂಸ್ಥೆಯ ಮುಖ್ಯಸ್ಥರೇ ಹೀಗೆ ಕಟ್ಟುನಿಟ್ಟಾಗಿ ಕೆಲಸ ಮಾಡುವಾಗ ಸಹೋದ್ಯೋಗಿಗಳು ಸಹ ಕೆಲಸಕ್ಕೆ ತಪ್ಪುವಂತಿರಲಿಲ್ಲ.

ನಾಯಕರ ಕರ್ತವ್ಯದಕ್ಷತೆ, ಆಡಳಿತ ಸಂಬಂಧವಾದ ಸೂಕ್ಷ್ಮದೃಷ್ಟಿ ಎಂಥದೆನ್ನುವುದನ್ನು ಅವರನ್ನು ಆಪ್ತ ನೆಲೆಯಲ್ಲಿ ಕಂಡ ಡಾ. ತಾರಾನಾಥರು ನಿರೂಪಿಸಿದ ಪ್ರಸಂಗವೊಂದರಿಂದ ತಿಳಿಯಬಹುದು.

ಅವು ಹಾಮಾನಾ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ದಿನಗಳು. ಪಾಠ ಪ್ರವಚನ, ಆಫೀಸು ಕೆಲಸ ಹಾಗಿರಲಿ, ಸಂಸ್ಥೆಯ ಗೋಡೆ ಬಾಗಿಲು ಕಿಟಕಿ ಫ್ಯಾನುಗಳನ್ನು ಕೂಡ ಅವರು ಸೂಕ್ಷ್ಮವಾಗಿ ಗಮನಿಸಿ ಅವು ವ್ಯವಸ್ಥಿತ ರೀತಿಯಲ್ಲಿ ಇರುವಂತೆ ನೋಡಿಕೊಳ್ಳುತ್ತಿದ್ದರು. ಸಹೋದ್ಯೋಗಿಗಳು ತಮ್ಮ ರೂಮಿನ ದೀಪ ಆರಿಸದೆ, ಫ್ಯಾನು ನಿಲ್ಲಿಸದೆ, ಕಿಟಕಿ, ಬಾಗಿಲು ಹಾಕದೆ ಹೋಗುವುದನ್ನು ಅವರು ಇಷ್ಟಪಡುತ್ತಿರಲಿಲ್ಲ. ಒಮ್ಮೆ ಅವರು ಅಮೆರಿಕದ ಪೆನ್ಸಿಲ್ವೇನಿಯಾ ಪ್ರಾಂತ್ಯಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಕೆಲವು ವಾರ ಹೋಗಬೇಕಾಯಿತು. ಆಗ ಅಧ್ಯಯನ ಸಂಸ್ಥೆಯಲ್ಲಿ ಅಧೀಕ್ಷಕರಾಗಿದ್ದ ಶಿವಬಸಪ್ಪನವರಿಗೆ ಅಲ್ಲಿಂದ ಒಂದು ಪತ್ರ ಬಂತು. ಅದರ ಒಂದು ಭಾಗ ಹೀಗಿತ್ತು. "ನಾನು ಇಲ್ಲಿಗೆ ಹೊರಟಾಗ ನಮ್ಮ ಸಂಸ್ಥೆಯ ಎರಡನೆಯ ಮಹಡಿಯ ಮುಂಭಾಗದ ಕಿಟಕಿಯ ಕೊಂಡಿ ಕಳಚಿತ್ತಷ್ಟೆ? ಅದರ ರಿಪೇರಿಯ ನಿರ್ವಹಣೆ ನಿಮಗೆ ವಹಿಸಿದ್ದೆ. ಅದು ರಿಪೇರಿಯಾಗಿದೆಯೆ? ಆಗಿದ್ದರೆ ಸರಿ, ಆಗಿರದಿದ್ದರೆ ಕೂಡಲೇ ಮಾಡಿಸಿ. ಕಿಟಕಿಯ ರೆಕ್ಕೆ ಗಾಳಿಗೆ ಹೊಡೆದುಕೊಳ್ಳುತ್ತಿಲ್ಲ ತಾನೆ?"

ಸಂಸ್ಥೆಯ ಕೆಲಸದ ಭರದಲ್ಲಿ ನಾಯಕರು ಸ್ವಂತ ಕೆಲಸವನ್ನು ಅಲಕ್ಷಿಸಲಿಲ್ಲ. ಕನ್ನಡ ಪ್ರಭ, ಪ್ರಜಾಮತ, ಗ್ರಂಥಲೋಕ, ಪ್ರಜಾವಾಣಿಗಳಂಥ ಪತ್ರಿಕೆಗಳಲ್ಲಿ ಅಂಕಣಕಾರರಾಗಿ ಅವರು ಮಾಡಿರುವ ಕೆಲಸ ಅಮೂಲ್ಯವಾದದ್ದು. ಆ ಮೂಲಕ ಲಕ್ಷಾಂತರ ಜನಕ್ಕೆ ಕನ್ನಡದ ಹಲವು ಶ್ರೇಷ್ಠ ಕೃತಿಗಳನ್ನು, ಲೇಖಕರನ್ನು, ಕಲಾವಿದರನ್ನು, ಸಾಂಸ್ಕೃತಿಕ ಸಂಸ್ಥೆ, ಚಟುವಟಿಕೆಗಳನ್ನು ಆಕರ್ಷಕವಾಗಿ ಪರಿಚಯ ಮಾಡಿಕೊಟ್ಟರು; ಆ ಮೂಲಕ ಮುಂದೆ ನಮ್ಮ ನಾಡಿನ ಸಾಂಸ್ಕೃತಿಕ ಚರಿತ್ರೆ ಬರೆಯುವವರಿಗೆ ಅಗತ್ಯವಾದ ಸಾಮಗ್ರಿಗಳ ಗಣಿಗಳನ್ನೇ ತೆರೆದರು. ಅವರು ಬರೆದ ನಮ್ಮ ಮನೆಯ ದೀಪ, ಬಾಳ್ನೋಟಗಳು, ಜಾನಪದ ಸ್ವರೂಪ, ಮೊದಲಾದವು ಬಲ್ಲಿದರಿಗೂ ಪ್ರಿಯವಾಗುವ ಗ್ರಂಥಗಳು. ಚಂಡಿದಾಸನ ಪ್ರಣಯ ಪದಾವಳಿಯನ್ನು ಮತ್ತು ಅಮೃತ ಪ್ರೀತಂ ಅವರ ಕವನಗಳನ್ನು ನಾಯಕರು ಸೊಗಸಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಕನ್ನಡ ಇಂಗ್ಲಿಷ್‌ಗಳಲ್ಲಿ ಅವರು ಪ್ರಕಟಿಸಿರುವ ಪರಿಚಯ-ಸಂಶೋಧನೆ ವಿಮರ್ಶಾ ಲೇಖನಗಳ ಸಂಖ್ಯೆ ಐನೂರಕ್ಕೂ ಹೆಚ್ಚಿದ್ದರೆ ಅವರು ಬರೆದ, ಸಂಪಾದಿಸಿದ ಪುಸ್ತಕಗಳ ಸಂಖ್ಯೆ ಅರವತ್ತಕ್ಕೂ ಮೀರಿದೆ. ಅವರ ಮಾರ್ಗದರ್ಶನದಲ್ಲಿ ಹದಿನಾರು ಜನಕ್ಕೂಮೀರಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಇದು ಯಾರನ್ನೂ ತಲೆದೂಗಿಸಬಲ್ಲ ಸಾಧನೆ.

ನಾಯಕರ ಪ್ರಸಿದ್ಧ ಅಂಕಣ ಕೃತಿಗಳಲ್ಲಿ ಒಂದೆನಿಸಿಕೊಂಡ 'ಸಂಪ್ರತಿ'ಯನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ೧೯೮೮ರ ಅತ್ಯುತ್ತಮ ಕನ್ನಡ ಪುಸ್ತಕವೆಂದು ಘೋಷಿಸಿ ಅದಕ್ಕೆ ಪ್ರಶಸ್ತಿ ನೀಡಿತು. ಅದು ಹಾ.ಮಾ. ನಾಯಕರು ಹೊರತಂದ ಅಂಕಣ ಕೃತಿಗಳಲ್ಲಿ ಹನ್ನೊಂದನೆಯದು; ಪ್ರಜಾವಾಣಿ ಪತ್ರಿಕೆಯಲ್ಲಿ ಬರೆದ ಮೊದಲ ಎರಡು ವರ್ಷಗಳ ಅಂಕಣಲೇಖನಗಳ ಸಂಗ್ರಹ. ೧೯೬೨ರಲ್ಲಿ ಕನ್ನಡಪ್ರಭ ಪತ್ರಿಕೆಯಲ್ಲಿ ಆರಂಭಗೊಂಡ ನಾಯಕರ ಈ ಅಂಕಣಧಾರೆ ಗ್ರಂಥಲೋಕ. ಪ್ರಜಾಮತ, ಪ್ರಜಾವಾಣಿಗಳಲ್ಲಿ ಮೈದುಂಬಿಕೊಳ್ಳುತ್ತ ಒಂದು ಮಹಾನದಿಯಾಗಿ ಭೋರ್ಗರೆಯಿತು. ಅದು ಪ್ರಕಟವಾಗುವ ಪತ್ರಿಕೆಗಳ ಓದುಗರಿಗೆ ಅವರ ಅಂಕಣ ಇಲ್ಲದೆ ಭಾನುವಾರದ ಸಂಚಿಕೆ ಅಪೂರ್ಣ ಎಂಬ ಭಾವನೆ ಬರುವ ಮಟ್ಟಿಗೆ ಅದು ಜನಪ್ರಿಯವಾಗಿತ್ತು.

ಸಂಪ್ರತಿಗೆ ಐದು ವರ್ಷ ತುಂಬಿದ ಸಂದರ್ಭದಲ್ಲಿ ಹಾಮಾನಾ ಬರೆದಿರುವ ಅಂಕಣ (೭-೧-೧೯೯೦) ಗಮನಿಸಬೇಕಾದದ್ದು. ಅದರಲ್ಲಿ ತಮಗಿಂತ ಮುಂಚೆ ಬರೆದ ಅಂಕಣಕಾರರನ್ನು ಅವರು ಗೌರವದಿಂದ ಸ್ಮರಿಸಿದ್ದಾರೆ; ಅವರ ಬರೆಹದ ಗುಣಗಳನ್ನು ತಿಳಿಸಿದ್ದಾರೆ; ಪ್ರಕಾರದ ವಿಶಿಷ್ಟತೆಯನ್ನು ವಿವರಿಸಿದ್ದಾರೆ. ಜೊತೆಗೆ ಅದರ ಬಗ್ಗೆ ಕಟಕಿಯಾಡುವ ನಿಂದಕರಿಗೆ ಉತ್ತರವನ್ನು ಕೊಟ್ಟಿದ್ದಾರೆ. ನಾಯಕರ ಸ್ವಾಭಾವಿಕ ಸೌಜನ್ಯ, ದಿಟ್ಟತನ ಎರಡೂ ಅದರಲ್ಲಿ ಒಟ್ಟೊಟ್ಟಿಗೇ ಎದ್ದು ಕಾಣುತ್ತವೆ.

ಹಾ.ಮಾ. ನಾಯಕರು ಈವರೆಗಿನ ಅಂಕಣಕಾರರಲ್ಲೆಲ್ಲ ಹೆಚ್ಚು ಪ್ರಸಿದ್ಧರಾದವರು. ಅವರ ಅಂಕಣ ಕನ್ನಡಭಾಷೆ, ಸಾಹಿತ್ಯ, ಕಲೆ ಸಂಗೀತಗಳ ಮುಖ್ಯ ಕೃತಿಗಳನ್ನು ಘಟನೆಗಳನ್ನು, ವ್ಯಕ್ತಿ ವಿಷಯಗಳನ್ನು ಬಳಸಿ ಬೆಳೆದದ್ದು. ಆ ಬರೆಹಗಳ ಮೌಲಿಕತೆ ಆಕರ್ಷಕತೆಗಳ ಬಗ್ಗೆ ಯಾರೂ ಎರಡು ಹೇಳುವಂತಿಲ್ಲ. ನಮ್ಮ ನಾಡಿನ ಪ್ರಜ್ಞಾವಂತ ವಿಮರ್ಶಕರಲ್ಲಿ ಒಬ್ಬರೆನಿಸಿದ ಡಾ॥ ಜಿ.ಎಸ್. ಆಮೂರ 'ಸಂಪ್ರತಿ'ಯ ಬಗ್ಗೆ ಬರೆದ ಮಾತು ಇದು: "ವಿಶ್ವದ ಎಲ್ಲ ವಿಷಯಗಳ ಬಗೆಗೂ ರಾಜಕೀಯ ವ್ಯಕ್ತಿಗಳೇ ಅಧಿಕಾರವಾಣಿಯಿಂದ ಮಾತನಾಡುತ್ತಿರುವ ಇಂದಿನ ನಮ್ಮ ವಿಪರ್ಯಾಸ ಸಾಂಸ್ಕೃತಿಕ ಸಂದರ್ಭದಲ್ಲಿ ಭಾಷೆ ಸತ್ಯದ ಮುಖವನ್ನು ಮುಚ್ಚುವ ಹಿರಣ್ಮಯ ಪಾತ್ರೆಯಾಗಿಬಿಟ್ಟಿವೆ. ಇಂಥ ಅವಸ್ಥೆಯನ್ನು ಮೀರಿ ಒಬ್ಬ ವಿಚಾರವಂತ, ಪ್ರಚಲಿತ ವ್ಯಕ್ತಿ ವಿಷಯಗಳ ಬಗ್ಗೆ ಪರಿಶ್ರಮ ಮತ್ತು ಚಿಂತನೆಗಳಿಂದ ತಾನು ದೊರಕಿಸಿಕೊಂಡ ತಿಳಿವಳಿಕೆಯನ್ನು ಸಾಮಾನ್ಯ ಜನರೊಂದಿಗೆ ಹಂಚಿಕೊಂಡಾಗ ಅದಕ್ಕೆ ವಿಶೇಷ ಮಹತ್ವ ಬರುತ್ತದೆ. ಕೆಲವರಲ್ಲಿ ಈ ತಿಳಿವಳಿಕೆ ಇದ್ದರೂ ಅದನ್ನು ಇತರರಿಗೆ ಕೊಡಬೇಕೆನ್ನುವ ಲವಲವಿಕೆಯಾಗಲಿ ಮತ್ತು ಇಂಥ ಕಾರ್ಯಕ್ಕೆ ಬೇಕಾದ ಕಲೆಯಾಗಲಿ ಇರುವುದಿಲ್ಲ. ಹಾ.ಮಾ. ನಾಯಕರ ವ್ಯಕ್ತಿತ್ವದಲ್ಲಿ ಈ ಎರಡೂ ಗುಣಗಳು ಇರುವುದರಿಂದ ಅವರ ದನಿ ಆಕರ್ಷಕವಾಗಿದೆ. ವರ್ಷಮುದ್ದಕ್ಕೂ

ಪ್ರತಿವಾರ ತಪ್ಪದೆ ಈ ದನಿ ಕೇಳಿಬಂದರೂ ಅದು ಎಂದೂ ನೀರಸ ಅಥವಾ ನಿರರ್ಥಕ ಎನಿಸಿದ್ದಿಲ್ಲ, ಇದು ನಾಯಕರ ಶ್ರೇಷ್ಠ ಸಾಧನೆ." ಡಾ. ಶಂಕರಮೊಕಾಶಿ ಪುಣೇಕರರಂಥ ಬಹುಶ್ರುತ ವಿದ್ವಾಂಸರು ಸಂಪ್ರತಿಯ ಬಗ್ಗೆ ಬರೆಯುತ್ತ "ಇಂಗ್ಲೀಷೂ ಸೇರಿದಂತೆ ನನಗೆ ಗೊತ್ತಿರುವ ನಾಲ್ಕೈದು ಮುಖ್ಯ ಭಾರತೀಯ ಭಾಷೆಗಳ ಪ್ರತಿಕೋದ್ಯಮಗಳಲ್ಲಿ ಹಾ.ಮಾ. ನಾಯಕರ ಅಂಕಣಗಳಂತೆ ಸಾಂಸ್ಕೃತಿಕ ಮಹತ್ವ ಮತ್ತು ಸಾಹಿತ್ಯಕ ಸೌಂದರ್ಯವಿರುವ ಅಂಕಣಗಳನ್ನು ನಾನು ನೋಡಿಲ್ಲ. ವಿಷಯಗಳ ಆಯ್ಕೆ, ನಿರೂಪಣೆ, ಪ್ರತಿಪಾದನೆಗಳಲ್ಲಿ ಅವರು ಅದ್ವಿತೀಯರು" ಎಂದು ಪ್ರಶಂಸಿದ್ದಾರೆ.

ನಾಯಕರ ಅಂಕಣ ಲೇಖನಗಳ ವೈಶಿಷ್ಟ್ಯಗಳೆಂದರೆ ವಿಷಯದ ಬಹುಮುಖತೆ, ಸರಳತೆ, ತರ್ಕಶುದ್ಧವಾದ ನಿರ್ಭೀತ ನಿರೂಪಣೆ. ಅವುಗಳ ಎಷ್ಟೋ ಭಾಗಗಳು ಭಾವಮಯವಾಗಿದ್ದು ಕಾವ್ಯ ಸತ್ವದಿಂದ ಕೂಡಿರುತ್ತಿದ್ದುದೂ ಉಂಟು. ಇದರಿಂದಾಗಿ ಬರೆಹ ಹೃದ್ಯವಾಗಿರುತ್ತಿತ್ತು. ಇವುಗಳಿಂದ ಪ್ರಭಾವಿತರಾದ ಓದುಗರು ಮುಂದಿನ ಅಂಕಣ ಬರೆಹಕ್ಕೆ ಕಾಯತ್ತಿದ್ದುದುಂಟು. ಕನ್ನಡ ನಾಡು, ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ವಿದ್ಯಮಾನಗಳ ಕಾಳಜಿ ನಾಯಕರಿಗೆ ಮುಖ್ಯವಾಗಿದ್ದರೂ ಅಂಕಣ ಬರೆಹ ಅಷ್ಟಕ್ಕೇ ಸೀಮಿತವಾಗುತ್ತಿರಲಿಲ್ಲ. ತನ್ನ ವಸ್ತುಗಳಿಗಾಗಿ ಅದು ಕರ್ನಾಟಕವನ್ನು ದಾಟಿ, ಭಾರತವನ್ನೂ ಮೀರಿ ಅಂತಾರಾಷ್ಟ್ರೀಯ ವಿದ್ಯಮಾನಗಳಿಗೆ ಜಿಗಿಯುತ್ತಿದ್ದುದೂ ಇತ್ತು. ಆದರೆ ಅವುಗಳನ್ನು ನಿರೂಪಿಸುವಾಗ ಉದಾರಿ ಕನ್ನಡಿಗನೊಬ್ಬನ ಸಂಸ್ಕಾರ ಹಿನ್ನೆಲೆ ಅವುಗಳಿಗಿರುತ್ತಿತ್ತು. ಮಲಯಾಳದ ಮನೋರಮಾ ಪತ್ರಿಕೆ, ಲೆಂಟಿನ್ ಎಂಬ ನ್ಯಾಯಾಧೀಶ ಮಹಾರಾಷ್ಟ್ರದ ಔಷಧ ·ಹಗರಣಗಳ ಬಗ್ಗೆ ಕೊಟ್ಟ ತೀರ್ಪು, ಫ್ರಾಂಕ್‌ಫರ್ಟ್ ಬುಕ್‌ಫೇರ್ ಹೀಗೆ ಅಂಕಣ ಕೇವಲ ತದ್ದೇಶೀಯವಾಗಲೀ ತಕ್ಕಾಲೀನವಾಗಲೀ ಆಗದೆ ಅವುಗಳನ್ನು ಮಿೂರಿ ನಿಲ್ಲುತ್ತಿತ್ತು. ಇದರಿಂದ ಅದಕ್ಕೆ ದಕ್ಕುತ್ತಿದ್ದ ವೈವಿಧ್ಯತೆ, ಸಾರ್ವತ್ರಿಕತೆ ಗಮನಿಸುವಂಥದಾಗಿತ್ತು. ಕನ್ನಡದ ದುರ್ಬೀನಿನ ಮೂಲಕವೇ ಕನ್ನಡಿಗರಿಗೆ ವಿಶ್ವಸಂಸ್ಕೃತಿಯ ಕಾಮನ ಬಿಲ್ಲಿನ ದರ್ಶನವನ್ನು, ರಾಷ್ಟ್ರೀಯ ವಿದ್ಯಮಾನಗಳ ಹೊಳಹು ನೀಡುವ ಕೆಲಸವನ್ನು ಅದು ಮಾಡಿತು. ಕನ್ನಡ ಸಾಹಿತ್ಯದ ಹಿರಿಯರಾದ ಮಾಸ್ತಿ, ವೆಂಕಣ್ಣಯ್ಯ, ಡಿವಿಜಿ, ಕುವೆಂಪು, ತಿ.ತಾ. ಶರ್ಮ, ಕಸ್ತೂರಿ, ಮಾಳವಾಡರಂಥವರನ್ನೇ ಅಲ್ಲದೆ ಹಿಂದಿಯ ಮಹಾದೇವಿ ವರ್ಮಾ, ಅಸ್ಸಾಮಿಯ ಬೀರೇನ್ ಬಾಬು, ತಮಿಳಿನ ಅಖಿಲನ್, ತೆಲುಗಿನ ನಾರ್ಲ, ಮಲೆಯಾಳದ ತಗಳಿ, ಒರಿಸ್ಸಾದ ರಾವುತ್‌ರಾಯ್, ಬಂಗಾಳಿಯ ಸಮರೇಶ ಬಸು, ಸುನೀತಿಕುಮಾರ ಚಟರ್ಜಿ ಮೊದಲಾದವರನ್ನು ಕುರಿತು ನಾಯಕರು ಹೃದಯಂಗಮ ಲೇಖನಗಳನ್ನು ಅಂಕಣದಲ್ಲಿ ಬರೆದಿದ್ದಾರೆ.

ಅಂಕಣ ಕೇವಲ ಕಲಾವಿದರಿಗೆ, ಸಾಹಿತಿಗಳಿಗೆ ಅಥವಾ ಸಾಂಸ್ಕೃತಿಕ ವೀರರಿಗೆ ಮಾತ್ರ ಮೀಸಲಾಗಿರಲಿಲ್ಲ. ಹೊರಗಿನ ಜನಕ್ಕೆ ಅಷ್ಟಾಗಿ ಪರಿಚಿತರಲ್ಲದ, ತಮ್ಮ ವೃತ್ತಿಯನ್ನು ನಿಸ್ಪೃಹ ಭಾವದಿಂದ ಒಂದು ಕರ್ಮಯೋಗವೆಂಬಂತೆ ನಡೆಸಿ ಬಾಳಿದವರನ್ನು ಪ್ರಸ್ತಾಪಿಸಿ, ಮೌಲಿಕವಾದ ವಿಲಕ್ಷಣ ವ್ಯಕ್ತಿತ್ವಗಳ ದರ್ಶನ ಮಾಡಿಸಿ ಓದುಗರನ್ನು ಚಕಿತಗೊಳಿಸಿದೆ. ಡಾ. ಕೌಲಗುಡ್ಡರ ಬಗೆಗೆ ಬಂದ ಬರೆಹ ಇದಕ್ಕೆ ಸಾಕ್ಷಿ. ಆ ಅಂಕಣದ ಶೀರ್ಷಿಕೆ "ದಂತ ಕಥೆಯಾಗಿ ಹೋದ ವೈದ್ಯರು." ಕೌಲಗುಡ್ಡರು ಸ್ತ್ರೀರೋಗ ಮತ್ತು ಪ್ರಸೂತಿಶಾಸ್ತ್ರಗಳಲ್ಲಿ ಬಹಳ ಪರಿಣತರಾದ ಒಬ್ಬ ಸರ್ಕಾರಿ ವೈದ್ಯರು. ಅವರ ಬಗ್ಗೆ ಸುತ್ತಲ ಗ್ರಾಮಗಳಲ್ಲಿ ಹರಡಿದ ಕಥಾಪ್ರಾಯವಾದ ವಿಲಕ್ಷಣ ಸಂಗತಿಗಳನ್ನು ನಾಯಕರು ಆ ಅಂಕಣದಲ್ಲಿ ಬಿತ್ತರಿಸುತ್ತಾರೆ. ರಕ್ತ ಅಗತ್ಯವಾಗಿದ್ದ ರೋಗಿಗಳಿಗೆ ಅವರು ತಮ್ಮ ರಕ್ತವನ್ನೇ ಕೊಟ್ಟದ್ದು, ತಿನ್ನಲು ಇಲ್ಲದೆ ಹಸಿವಿನಿಂದ ಕಂಗಾಲಾದ ರೋಗಿಗಳಿಗೆ ಸ್ವಂತ ಹಣ ಖರ್ಚು ಮಾಡಿ ಹಣ್ಣು ಹಾಲು-ಆಹಾರ ಒದಗಿಸಿದ್ದು, ರಾತ್ರಿ ಹಗಲೆನ್ನದೆ ಕರೆ ಬಂದ ಕೂಡಲೆ ನಗು ಮುಖದಿಂದ ರೋಗಿಗಳ ಚಿಕಿತ್ಸೆಗೆ ಧಾವಿಸುತ್ತಿದ್ದದ್ದು-ಇವೆಲ್ಲ ಅಲ್ಲಿ ಬರುತ್ತದೆ. "ಹೇಳುವವರು ಕೇಳುವವರು ಇಲ್ಲದ ಕೊಳಕು ಮುದುಕಿಯೊಬ್ಬಳನ್ನು ಚಿಕಿತ್ಸಾಲಯಕ್ಕೆ ತಾವೇ ಎತ್ತಿಕೊಂಡು ಹೋದರು; ಚಿಕಿತ್ಸೆಯ ನಂತರ ಉಣ್ಣಲಿಲ್ಲದವಳಿಗೆ ತಾವೇ ಊಟದ ವ್ಯವಸ್ಥೆ ಮಾಡಿದರು. ಔಷಧಿ ಕೊಳ್ಳಲು ಸಾಧ್ಯವಿಲ್ಲದವರಿಗೆ ತಾವೇ ತರಿಸಿಕೊಟ್ಟರು. ಮಗುವನ್ನು ಬದುಕಿಸಲು ಸಾಧ್ಯವಾಗದೆ ಹೋದಾಗ ಆ ತಾಯಿಯ ಜೊತೆ ತಾವೂ ಕಣ್ಣೀರಿಟ್ಟರು. ರೋಗಿಗಳನ್ನು ಆಯುವಾಗ ದೊಡ್ಡವರು ಬಡವರು ಎನ್ನುವ ತಾರತಮ್ಯ ತೋರಿಸಲೇ ಇಲ್ಲ. ತಾಳ್ಮೆಯನ್ನು ಕಳೆದುಕೊಳ್ಳದೆ ಪ್ರತಿಯೊಬ್ಬ ರೋಗಿಯನ್ನೂ ವಿಚಾರಿಸಿಕೊಂಡರು. ಯಾರಿಂದಲೂ ಹಣ ಕೇಳಲಿಲ್ಲ. ಕೊಟ್ಟವರಿಂದಲೂ ತೆಗೆದುಕೊಳ್ಳುತ್ತಿರಲಿಲ್ಲ. ಕಾಲೇಜಿನ ಸಭೆ ಸಮಾರಂಭಗಳಲ್ಲಿ ಸಿಳ್ಳು ಹಾಕಿ ಗಲಾಟೆ ಮಾಡುವ ವಿದ್ಯಾರ್ಥಿಗಳಿಗೆ ಕೆನ್ನೆಗೆ ಬಾರಿಸುವಷ್ಟು ಧೈರ್ಯ ಅವರಿಗಿತ್ತು-ಇತ್ಯಾದಿ ಇತ್ಯಾದಿ." ಈ ಅಂಕಣವನ್ನು ಓದಿ ಕರ್ನಾಟಕದ ಯಾವ ಯಾವ ಭಾಗಗಳಿಂದಲೋ ನೂರಾರು ಜನ ಸಂಪಾದಕರಿಗೆ, ನಾಯಕರಿಗೆ ಪತ್ರ ಬರೆದರು. ಕೌಲಗುಡ್ಡರಿಂದ ಅನಿರೀಕ್ಷಿತ ಬಗೆಯಲ್ಲಿ ಉಪಕೃತರಾಗಿದ್ದು ಅವರ ಸಾವಿಗೆ ನೊಂದ ಜನ ತಮ್ಮ ಮೂಕ ವೇದನೆಗೆ ಈ ಅಂಕಣದಲ್ಲಿ ತಕ್ಕ ಅಭಿವ್ಯಕ್ತಿ ಕಂಡರು.

ಎಲ್ಲರಿಗೂ ತಿಳಿಯಬೇಕಾದ ಮಹತ್ವದ ವಿಷಯವೊಂದು ಜನಗಳ ಕಣ್ತಪ್ಪಿಸಿದಾಗ ನಾಯಕರು ಎಲ್ಲಿಂದಲೋ ಅದನ್ನು ಹುಡುಕಿ ತೆಗೆದು ಎಲ್ಲ ಜನಕ್ಕೆ ಅದು ತಿಳಿಯುವಂತೆ ಮಾಡುತ್ತಿದ್ದುದುಂಟು. ಕೇರಳ ವಿಶ್ವವಿದ್ಯಾಲಯದಲ್ಲಿ ಶ್ರೇಷ್ಠ ಕೃತಿಗಳಿಗೆ ಕೊಡುವ ಸಲುವಾಗಿಯೇ ಮಹಾರಾಣಿ ಸೇತೂಬಾಯಿ ಪ್ರಶಸ್ತಿ ಸ್ಥಾಪಿತವಾಗಿದೆ. ಇದೊಂದು

ಪ್ರತಿಷ್ಠಿತ ಪ್ರಶಸ್ತಿ. ೧೯೬೫ರಲ್ಲಿ ಅದು ಸಂಸ್ಕೃತ ವಿದ್ವಾಂಸರೂ ಲೇಖಕರೂ ಆದ ಕನ್ನಡಿಗ ಡಾ.ಕೆ. ಕೃಷ್ಣಮೂರ್ತಿಯವರ sanskrit criticism ಎಂಬ ಗ್ರಂಥಕ್ಕೆ ದೊರಕಿತು. ಸ್ಪರ್ಧೆಗೆ ಇದ್ದ ಇನ್ನೊಂದು ಗ್ರಂಥ ಅಖಿಲಭಾರತ ಪ್ರಸಿದ್ಧಿಯ ಸಂಸ್ಕೃತ ವಿದ್ವಾಂಸ ಡಾ. ವಿ. ರಾಘವನ್ ಅವರದು. ಅಂಥವರ ಕೃತಿಯನ್ನೂ ಮೀರಿಸಿ ಪ್ರಶಸ್ತಿ ಗಳಿಸುವುದೆಂದರೆ ಅದೊಂದು ಅಸಾಧಾರಣ ಸಂಗತಿ. ಆದರೆ ಇಷ್ಟು ಶ್ರೇಷ್ಠ ಪ್ರಶಸ್ತಿ ಘೋಷಣೆಯ ವಿಷಯ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಯಾವುದೋ ಒಂದು ಮೂಲೆಯಲ್ಲಿ ಸಣ್ಣ ಅಕ್ಷರಗಳಲ್ಲಿ ಪ್ರಕಟವಾಗಿತ್ತು. ಅದು ಯಾರ ಗಮನವನ್ನೂ ಸೆಳೆಯುವಂತಿರಲಿಲ್ಲ. ಹಾಮಾನಾ ಅದನ್ನು ಗಮನಿಸಿದರು, ಮಾತ್ರವಲ್ಲ ಕನ್ನಡಿಗ ವಿದ್ವಾಂಸನೊಬ್ಬ ಈ ಪ್ರತಿಷ್ಠಿತ ಪ್ರಶಸ್ತಿ ಪಡೆದ ವಿಷಯವನ್ನು ನಾಲ್ಕು ಕಾಲಮ್ಮುಗಳ ಒಂದು ಅಂಕಣದಲ್ಲಿ ಬರೆದು ಕನ್ನಡಗರಿಗೆಲ್ಲ ಆ ಪ್ರಶಸ್ತಿಯ ಮಹತ್ವವನ್ನೂ ಅದನ್ನು ಪಡೆದ ಕೃತಿಯ ಘನತೆ ಮಹತ್ವಗಳನ್ನೂ ಮನವರಿಕೆ ಮಾಡಿಕೊಟ್ಟರು. "ಈ ವಿಶಾಲ ಮನಸ್ಸು, ಅಹೇತುಕ ವಿಶ್ವಾಸ ಅವರ ಬಗ್ಗೆ ನನ್ನ ಗೌರವವನ್ನು ಹೆಚ್ಚಿಸಿದುವು." ಎಂದು ಕೃಷ್ಣಮೂರ್ತಿಯವರೇ ತಮ್ಮ ಲೇಖನವೊಂದರಲ್ಲಿ ಹಾಮಾನಾರಿಗೆ ಕೃತಜ್ಞತೆ ಸೂಚಿಸಿದ್ದಾರೆ.

ಚಿಕ್ಕ ವಯಸ್ಸಿನಲ್ಲಿಯೇ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ನಾಯಕರು ದೇಶ ವಿದೇಶ ತಿರುಗಿದ್ದಾರೆ. ಸಾಂಸ್ಕೃತಿಕ ನಿಯೋಗದ ಸದಸ್ಯರಾಗಿ ಮತ್ತು ಸಂದರ್ಶಕ ಪ್ರಾಧ್ಯಾಪಕರಾಗಿ, ರಷ್ಯಾ, ಪೆನ್ಸಿಲ್ವೇನಿಯಗಳಿಗೂ ಹೋಗಿಬಂದಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ, ಜ್ಞಾನಪೀಠ, ನ್ಯಾಷನಲ್ ಬುಕ್‌ಟ್ರಸ್ಟ್‌ಗಳಂಥ ರಾಷ್ಟ್ರ ಪ್ರಸಿದ್ಧ ಸಂಸ್ಥೆಗಳ ಸದಸ್ಯರಾಗಿ ದುಡಿದಿದ್ದಾರೆ.

ನಾಯಕರು ರಾಜ್ಯಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಕಾಲದಲ್ಲಿ ಜಾರಿಗೆ ತಂದ ಹಲವು ನಿಯಮಗಳು ಅವರ ಪ್ರಜ್ಞಾಶಾಲಿತ್ವಕ್ಕೆ ಸಾಕ್ಷಿ. ಅಲ್ಲಿಯವರೆಗೆ ರಾಜ್ಯಸಾಹಿತ್ಯ ಅಕಾಡೆಮಿಯ ಬಹುಮಾನಕ್ಕೆ ಸಾಹಿತಿಗಳೇ ಅರ್ಜಿ ಸಲ್ಲಿಸಿ ಪುಸ್ತಕ ಒಪ್ಪಿಸಬೇಕಾಗಿತ್ತು. ಸಾಹಿತಿಯ ಸ್ವಾಭಿಮಾನಕ್ಕೇ ಧಕ್ಕೆ ತರುವಂಥ ಈ ಕೆಟ್ಟ ಪದ್ದತಿಯನ್ನು ನಾಯಕರು ಕಿತ್ತುಹಾಕಿದರು. ಅಕಾಡೆಮಿಯೇ ವರ್ಷದ ಎಲ್ಲ ಪುಸ್ತಕಗಳನ್ನು ಕೊಂಡು ಪರಿಶೀಲಿಸುವ ಪದ್ಧತಿ ಬಳಕೆಗೆ ತಂದರು. ಅಕಾಡೆಮಿಯ ಕಣ್ಣುತಪ್ಪಿನಿಂದ ಪ್ರಮಾದವಾಗದಿರಲಿ ಅಂತ ಯಾರು ಬೇಕಾದರೂ ಒಂದು ಪತ್ರ ಬರೆದು 'ಇಂಥ ಪುಸ್ತಕ ಪ್ರಕಟವಾಗಿದೆ. ತರಿಸಿಕೊಳ್ಳಿ' ಅಂತ ಸೂಚಿಸಿದರೆ ಅದನ್ನು ತರಿಸುವಂಥ ಏರ್ಪಾಟು ಮಾಡಿದರು. ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿರುವವರ ಪುಸ್ತಕಗಳನ್ನು ಅವರ ಸದಸ್ಯಾವಧಿಯ ಕಾಲದಲ್ಲಿ ಬಹುಮಾನಕ್ಕೆ ಪರಿಗಣಿಸಬಾರದೆಂಬ ನಿಯಮ ತಂದರು. ಸದಸ್ಯರು ತಮ್ಮ ಪುಸ್ತಕಗಳಿಗೆ

ಬಹುಮಾನ ಕೊಟ್ಟುಕೊಂಡು ಅಕಾಡೆಮಿಯ ಮಾನ ಕಳೆಯಬಹುದಾದ ಘಟನೆಗಳಿಗೆ ಇದು ಮುಕ್ತಾಯ ಹಾಡಿತು. ಪ್ರತಿ ವರ್ಷ ಸಾಹಿತ್ಯ ಕಮ್ಮಟಗಳನ್ನು ನಡೆಸುವ ಏರ್ಪಾಟು ಆರಂಭವಾಯಿತು. ರಾಜ್ಯದ ಹೊರಗಿನ ನೋಂದಾಯಿತ ಕನ್ನಡ ಸಂಘಗಳು ಅಕಾಡೆಮಿಗಳಿಗೆ ಒಂದು ಅರ್ಜಿ ಹಾಕಿದಷ್ಟಕ್ಕೇ ಎರಡು ಸಹಸ್ರ ರೂಪಾಯಿಗಳ ಕನ್ನಡ ಪುಸ್ತಕಗಳನ್ನು ಪಡೆಯಬಹುದಾದ ಸೌಲಭ್ಯ ಜಾರಿಗೆ ಬಂತು. ಆವರೆಗೆ ವರ್ಷದ ಅತ್ಯುತ್ತಮ ಪುಸ್ತಕವೆಂದು ಒಂದು ಸಾಹಿತ್ಯ ಕೃತಿಗೆ ಮಾತ್ರ ಅಕಾಡೆಮಿ ಪ್ರಶಸ್ತಿ ನೀಡುತ್ತಿತ್ತು. ಇದು ಸಾಮಾನ್ಯವಾಗಿ ಸೃಜನಾತ್ಮಕ ಕೃತಿಗೇ ಸಿಗುತ್ತಿತ್ತು, ನಾಯಕರು ಎರಡು ಪ್ರಶಸ್ತಿಗಳನ್ನು ಏರ್ಪಡಿಸಿ ಒಂದು ಸೃಜನಾತ್ಮಕ ಕೃತಿಗೆ, ಮತ್ತೊಂದು ಶಾಸ್ತ್ರಗ್ರಂಥಕ್ಕೆ ಎಂದು ಗೊತ್ತು ಮಾಡಿದರು. ಎಷ್ಟೋ ಜನ ಹಿರಿಯ ವಿದ್ವಾಂಸರುಗಳಿಗೆ ಆಗುತ್ತಿದ್ದ ಅನ್ಯಾಯ ಇದರಿಂದ ತಪ್ಪಿತು. ಪ್ರಶಸ್ತಿ ಬಂದವರಿಗೆ ಪೋಸ್ಟಿನಲ್ಲಿ ಸಂಭಾವನೆಯ ಚೆಕ್ ಕಳಿಸುತ್ತಿದ್ದ ಅವಮಾನಕರ ಕ್ರಮವನ್ನು ಹಾಮಾನಾ ತಪ್ಪಿಸಿದರು. ಒಂದು ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಿ ಸಾಹಿತ್ಯಾಸಕ್ತರ ಸಮ್ಮುಖದಲ್ಲಿ ಬಹುಮಾನಿತರನ್ನು ಸನ್ಮಾನಿಸಿ, ಅವರ ಪುಸ್ತಕಗಳ ಪರಿಚಯ ಮಾಡಿಸಿ ಬಹುಮಾನ ನೀಡುವ ಸಭ್ಯ ನಡವಳಿಕೆಯನ್ನು ಅಕಾಡೆಮಿಯಲ್ಲಿ ಸ್ಥಾಪಿಸಿದ್ದು ಅವರೇ. ನಾಡಿನ ಗಡಿ ಪ್ರದೇಶಗಳಲ್ಲಿ ಹಿರಿಯ ಕವಿಗಳ ಭಾವಗೀತೆಗಳ ಗಾಯನ ಕಾರ್ಯಕ್ರಮಗಳನ್ನು ನಡೆಸಿ ಭಾಷೆ, ಸಾಹಿತ್ಯಗಳ ಬಗ್ಗೆ ಜನರ ಅಭಿಮಾನವನ್ನು ಪುಟಗೊಳಿಸುವ ಕಾರ್ಯಕ್ರಮ ಆರಂಭಿಸಿದ್ದೂ ನಾಯಕರೇ. ಈ ಕಾರ್ಯಕ್ರಮ ತುಂಬ ಜನ ಪ್ರೀತಿ ಗಳಿಸಿತ್ತು. ಆದರೆ ಅವರ ನಂತರ ಅಧ್ಯಕ್ಷರಾದ ನಿಸಾರ್ ಅಹಮದ್ ಅದನ್ನು ನಿಲ್ಲಿಸಿದರು. ಹಳೆಯದನ್ನು ನಿಲ್ಲಿಸುವುದೂ ಒಂದು ಹೊಸ ಕಾರ್ಯಕ್ರಮ ತಾನೆ!

ಹಾಮಾ ನಾಯಕರ ಎಲ್ಲ ಸಾಹಿತ್ಯಕ ಚಟುವಟಿಕೆಗಳ ಹಿಂದೆ ಎದ್ದು ಕಾಣುವುದು ಕನ್ನಡದ ಬಗ್ಗೆ ಅವರಿಗಿದ್ದ ನಿರ್ಮಲವಾದ ಪ್ರೀತಿ. ಕನ್ನಡದ ವಾತಾವರಣವನ್ನು ಗಟ್ಟಿಗೊಳಿಸಲು ಅವರು ಉದ್ದಕ್ಕೂ ದುಡಿದಿದ್ದಾರೆ. ಈ ಬಗೆಯ ಆಸೆ, ಆದರ್ಶ ಅನೇಕರಿಗೆ ಇರಬಹುದು. ಆದರೆ ಅದನ್ನು ಕಾರ್ಯಗತಗೊಳಿಸಲು ಬೇಕಾದ ಶ್ರಮವರಿಯದ ದುಡಿಮೆ, ತಾಳ್ಮೆ, ಎಂಥ ಪ್ರಬಲರನ್ನೂ ಎದುರು ಹಾಕಿಕೊಳ್ಳಲು ಹಿಂಜರಿಯದ ಕೆಚ್ಚು ಮಾತ್ರ ಎಲ್ಲೋ ಒಬ್ಬಿಬ್ಬರಿಗಿರುತ್ತದೆ. ನಾಯಕರು ಇಂಥ ಗುಣಗಳನ್ನು ಅಗಣಿತವಾಗಿ ಪಡೆದಿದ್ದರು.

ಅದು ತುರ್ತುಪರಿಸ್ಥಿತಿಯ ಕಾಲ. ಆ ದಿನಗಳಲ್ಲಿ ರಾಜ್ಯಸರ್ಕಾರ ಲೇಖಕ ಡಾಮ್ ಮೊರೇಸರನ್ನು ಕರೆಸಿ ಲಕ್ಷಾಂತರ ರೂ. ಖರ್ಚು ಮಾಡಿ ಒಂದು ಪುಸ್ತಕ ಬರೆಸಿತು. ಪುಸ್ತಕದ ಹೆಸರು 'ಜರ್ನಿ ಥ್ರೂ ಕರ್ನಾಟಕ', ಬಿಡುಗಡೆಯಾಗುವ ಮೊದಲೇ ಪುಸ್ತಕದ

ಒಂದು ಪ್ರತಿ ನಾಯಕರ ಕೈಗೆ ಬಂತು. ಓದಿ ನಾಯಕರು ಕಿಡಿಕಿಡಿಯಾದರು. ಇಲ್ಲಿಯ ಜನರ, ಭಾಷೆಯ, ಸಾಹಿತ್ಯದ ಗಂಧ ಕೂಡ ತಿಳಿಯದೆ ಬರೆದ ಪುಸ್ತಕ ಅದು. ಬೆಳುಗೊಳದ ಗೊಮ್ಮಟನಂಥ ಅದ್ಭುತ ಶಿಲ್ಪವನ್ನು ನೋಡಲೂ ನಿರಾಕರಿಸಿ ಇಲ್ಲಿಯ ಕಲೆ ಶಿಲ್ಪಗಳ ಬಗ್ಗೆ ಮಾಡಿದ ವಿಮರ್ಶೆ ಅದರಲ್ಲಿತ್ತು. ಈ ರಾಜ್ಯದಲ್ಲೇ ಹುಟ್ಟಿ, ಬಾಳಿ ಅದರ ಗಾಢಪರಿಚಯವಿರುವ ಎಷ್ಟೋ ಜನ ಹಿರಿಯ ಲೇಖಕರು ಕಣ್ಣೆದುರೇ ಇರುವಾಗ ತಮಗೆ ಬೇಕಾದವರೊಬ್ಬರನ್ನು ಎಲ್ಲಿಂದಲೋ ಕರೆಸಿ ಲಕ್ಷಾಂತರ ಸುರಿದು ಬರೆಸಿದ ಈ ಗ್ರಂಥ ಕನ್ನಡ ಜನಕ್ಕೇ ಮಾಡಿದ ಅಪಮಾನ ಎನಿಸಿತು ನಾಯಕರಿಗೆ. ಅದನ್ನು ಬರೆಸಿದ ರಾಜ್ಯದ ಮುಖ್ಯಮಂತ್ರಿ ಅರಸರನ್ನು ಉಗ್ರಮಾತುಗಳಲ್ಲಿ ಖಂಡಿಸಿ ಪತ್ರಿಕೆಗಳಿಗೆ ಹೇಳಿಕೆ ನೀಡಿದರು. ನಾಯಕರು ಆಗ ಅಧ್ಯಯನ ಸಂಸ್ಥೆಯ ಮುಖ್ಯಸ್ಥರು; ಉಪಕುಲಪತಿಯಾಗುವ ಸಾಧ್ಯತೆ ಇದ್ದವರು. ಸರ್ಕಾರವನ್ನು ಎದುರು ಹಾಕಿಕೊಂಡರೆ ಅದು ತಮ್ಮ ಬುಡಕ್ಕೇ ಬಿಸಿನೀರೆರೆಯಬಹುದು ಎಂದು ಗೊತ್ತಿದ್ದೂ ಅವರು ಅದಕ್ಕೆ ಹಿಂಜರಿಯಲಿಲ್ಲ. ಅವರ ಕನ್ನಡ ಪ್ರೇಮದ ಹಿಂದೆ ಇಂಥ ಕೆಚ್ಚು ಇತ್ತು.

ನಾಯಕರು ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾಗ ನಡೆದ ಒಂದು ಘಟನೆ. ಸರ್ಕಾರ ಆ ವಿಶ್ವವಿದ್ಯಾಲಯದ ಕಾಲೇಜೊಂದರಲ್ಲಿ ಆಟೊಮೊಬೈಲ್ ಇಂಜನಿಯರಿಂಗ್ ಶಿಕ್ಷಣ ಆರಂಭಿಸುವುದಾಗಿ ಪ್ರಕಟಿಸಿತು. ಇದು ವಿಶ್ವವಿದ್ಯಾಲಯದ ಅಕೆಡೆಮಿಕ್ ಕೌನ್ಸಿಲ್, ಸೆನೆಟ್ ಮತ್ತು ಸಿಂಡಿಕೇಟುಗಳು ತೆಗೆದುಕೊಳ್ಳಬೇಕಾದ ತೀರ್ಮಾನ. ಆದರೆ ಸರ್ಕಾರ ವಿಶ್ವವಿದ್ಯಾಲಯದ ಸ್ವಾಯತ್ತತೆಯನ್ನು ಅಲಕ್ಷಿಸಿ ತಾನೇ ಈ ತೀರ್ಮಾನ ಮಾಡಿತ್ತು. ಹಾಮಾನಾ ಕೂಡಲೇ ಇದನ್ನು ಅಲ್ಲಗಳೆದು ಅಕೆಡೆಮಿಕ್ ಕೌನ್ಸಿಲಿನ ಅಂಗೀಕಾರವಿಲ್ಲದೆ ಯಾವ ಹೊಸ ಶಿಕ್ಷಣಶಾಖೆಯೂ ತಮ್ಮ ವಿಶ್ವವಿದ್ಯಾನಿಲಯದಲ್ಲಿ ಆರಂಭವಾಗುವುದಿಲ್ಲವೆಂದು ಪತ್ರಿಕಾ ಹೇಳಿಕೆ ನೀಡಿದರು! ಈ ಸಂಬಂಧವಾಗಿ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಸರ್ಕಾರದ ಈ ಕ್ರಮ ವಿಶ್ವವಿದ್ಯಾನಿಲಯದ ನಿಯಮಗಳಿಗೆ ಸಂಪೂರ್ಣ ವಿರುದ್ಧವಾಗಿದೆಯೆಂದು ತಿಳಿಸಿದರು. ಇಷ್ಟಾದರೂ ಸರ್ಕಾರ ತನ್ನ ಅಧಿಕಾರವನ್ನು ಬಳಸಿ ಆ ಕೋರ್ಸನ್ನು ಆರಂಭಿಸುವ ಪಕ್ಷಕ್ಕೆ ಅದನ್ನು ವಿರೋಧಿಸಿ ತಾವು ಉಪಕುಲಪತಿ ಸ್ಥಾನಕ್ಕೆ ರಾಜಿನಾಮೆ ನೀಡುವುದಾಗಿ ತಿಳಿಸಿದ್ದಲ್ಲದೆ ಆ ಪತ್ರದ ಜೊತೆಗೇ ತಮ್ಮ ರಾಜೀನಾಮೆ ಪತ್ರವನ್ನು ಲಗತ್ತಿಸಿ ಕಳಿಸಿದರು. ಸರ್ಕಾರ ಈ ದಿಟ್ಟ ನಿಲುವನ್ನು ಎದುರಿಸಲಾಗದೆ ತೆಪ್ಪಗಾಯಿತು. ತನ್ನ ಕ್ರಮವನ್ನು ಕೈಬಿಟ್ಟಿತು. ಸರ್ಕಾರದ ಪತ್ರಿಕಾ ಪ್ರಕಟಣೆಯನ್ನು ಬಹಿರಂಗವಾಗಿ ಒಂದು ಪತ್ರಿಕಾ ಹೇಳಿಕೆಯ ಮೂಲಕವೇ ವಿರೋಧಿಸಬಲ್ಲ ಇಂಥ ಕೆಚ್ಚು, ಆತ್ಮಗೌರವ ಎಷ್ಟು ಜನ ಕುಲಪತಿಗಳಿಗಿದೆ? ನಾಯಕರ ಈ ನಿಲುವನ್ನು ಮೆಚ್ಚಿ ಡೆಕನ್ ಹೆರಾಲ್ಡ್ ಪತ್ರಿಕೆ ಒಂದು ಅಗ್ರಲೇಖನ ಬರೆದು ಅವರನ್ನು ಮಾದರಿ ವೈಸ್‌ಛಾನ್ಸಲರ್ ಎಂದು ಹೊಗಳಿತು.

ಇಂಥದೇ ಇನ್ನೊಂದು ಪ್ರಸಂಗ ನಡೆಯಿತು. ಆದರೆ ಈ ಸಲ ಅದು ಬಹಳ ಬುದ್ಧಿವಂತಿಕೆಯಿಂದ ರಚಿಸಿದ ವ್ಯೂಹವಾಗಿತ್ತು. ಆರ್ಥಿಕವಾಗಿ ಸಾಕಷ್ಟು ಬಲಾಢ್ಯವಾಗಿದ್ದ

ಸಂಸ್ಥೆಯೊಂದು ಬೀದರಿನಲ್ಲಿ ಮೆಡಿಕಲ್ ಕಾಲೇಜು ತೆರೆಯುವ ಒಂದು ಯೋಜನೆ ಹಾಕಿಕೊಂಡಿತು. ಕಾನೂನಿನ ಪ್ರಕಾರ ತನಗೆ ತಕ್ಕ ಅರ್ಹತೆ ಇಲ್ಲದಿದ್ದರೂ ಕಾಲೇಜು ಕೊಡಿಸಿಕೊಡಲು ಅದು ಸರ್ಕಾರದ ಮೇಲೆ ಒತ್ತಡ ತಂದಿತು. ಆದರೆ ಇಂಜನಿಯರಿಂಗ್ ಕಾಲೇಜಿನ ಸಂಬಂಧದಲ್ಲಿ ಸರ್ಕಾರಕ್ಕೆ ಸಾಕಷ್ಟು ಮುಖಭಂಗವಾಗಿತ್ತಷ್ಟೆ. ಆದ್ದರಿಂದ ಈಗ ಹೊಸತಂತ್ರ ಹೊಡಲಾಯಿತು. ನಿಯಮಗಳಿಗೆ ಅನುಗುಣವಾಗಿ ವಿಶ್ವವಿದ್ಯಾಲಯಕ್ಕೆ ಒಂದು ಅರ್ಜಿ ಕಳಿಸುವಂತೆ ಮಂತ್ರಿಗಳ ಕಡೆಯಿಂದ ಅದಕ್ಕೆ ಸೂಚನೆ ಸಿಕ್ಕಿತು. ಅರ್ಜಿಯಲ್ಲಿರುವ ಕೋರಿಕೆಯನ್ನು ಪರಿಶೀಲಿಸಲು ವಿಶ್ವವಿದ್ಯಾಲಯ ಒಂದು ಅಫಿಲಿಯೇಷನ್ ಸಮಿತಿಯನ್ನು ನೇಮಿಸಬೇಕಾಗುತ್ತದೆ. ಕಾಲೇಜು ತೆರೆಯಲು ಅಗತ್ಯವಾದ ಸೌಲಭ್ಯಗಳನ್ನೆಲ್ಲ ಸಂಸ್ಥೆ ರೂಪಿಸಿ ಕೊಂಡಿದ್ದರೆ ಈ ಸಮಿತಿ ಅದನ್ನೆಲ್ಲ ಪರಿಶೀಲಿಸಿ ಸಂಸ್ಥೆಗೆ ಕಾಲೇಜು ನೀಡುವಂತೆ ವಿಶ್ವವಿದ್ಯಾನಿಲಯಕ್ಕೆ ಶಿಫಾರಸು ಮಾಡುತ್ತದೆ. ಸೌಲಭ್ಯಗಳು ಸಾಲವು ಎಂದು ಸಮಿತಿ ವರದಿ ಮಾಡಿತೆನ್ನೋಣ, ಆಗ ವಿಶ್ವವಿದ್ಯಾಲಯ ಕಾಲೇಜಿಗೆ ಮಂಜೂರಾತಿ ಕೊಡದಿದ್ದರೂ ಸರ್ಕಾರ ಸಮಿತಿಯ ಶಿಫಾರಸನ್ನು ತಳ್ಳಿ ಹಾಕಿ ತಾನು ಅದನ್ನು ಮಂಜೂರಾತಿ ಮಾಡಬಹುದು. ಅಂಥ ಸಂದರ್ಭದಲ್ಲಿ ಸರಕಾರದ್ದೇ ಪರಮಾಧಿಕಾರ. ನಾಯಕರಿಗೆ ಈ ತಂತ್ರ ಅರ್ಥವಾಯಿತು. ವೈದ್ಯಕೀಯ ಕಾಲೇಜು ತೆರೆಯಬೇಕಾದರೆ ಸಂಸ್ಥೆಯ ವಶದಲ್ಲಿ ಐನೂರು ಹಾಸಿಗೆಗಳಿರುವ ಸುಸಜ್ಜಿತ ಆಸ್ಪತ್ರೆಯೊಂದು ಇರಬೇಕು ಎಂದು ವಿಶ್ವವಿದ್ಯಾನಿಲಯದ ನಿಯಮವಿತ್ತು . ಆದರೆ ಸಂಸ್ಥೆಯ ವಶದಲ್ಲಿ ಆಸ್ಪತ್ರೆಯೇ ಇರಲಿಲ್ಲ! ನಾಯಕರು ವಿಶ್ವವಿದ್ಯಾನಿಲಯದ ನಿಯಮವನ್ನು ಸೂಚಿಸಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲವೆಂದು ತಿಳಿಸಿಬಿಟ್ಟರು. ಆಗ ನಾಯಕರ ಮೇಲೆ ಒತ್ತಡ ಶುರುವಾಯಿತು. "ನೀವು ಕೇವಲ ಸಮಿತಿ ನೇಮಿಸಿ ಅಷ್ಟೆ. ಸೌಲಭ್ಯಗಳಿಲ್ಲದಿರುವುದರಿಂದ ಮಂಜೂರಾತಿ ಕೊಡಲು ಸಾಧ್ಯವಿಲ್ಲ ಅಂತಲೇ ಸಮಿತಿ ಹೇಳಲಿ, ಪರವಾಯಿಲ್ಲ-" ಅಂತ ಸಂಸ್ಥೆ ಅವರಿಗೆ ದುಂಬಾಲು ಬಿತ್ತು "ನೀವು ಹೀಗೆ ಮಾಡಿದರೆ ನಿಮಗೆ ಕೆಟ್ಟ ಹೆಸರೂ ಬರುವುದಿಲ್ಲ. ನಾವು ನಿಮಗೆ ನಮ್ಮ ಮರ್ಯಾದೆಯನ್ನು ಸಲ್ಲಿಸುತ್ತೇವೆ. ಅದನ್ನು ಯಾರಿಗೂ ಹೇಳುವುದಿಲ್ಲ" ಎಂದು ಸಂಸ್ಥೆಯ ಮುಖ್ಯ ಸದಸ್ಯರೊಬ್ಬರು ಮೂರು ಲಕ್ಷ ರೂಪಾಯಿಯ 'ಮರ್ಯದೆ'ಯನ್ನು ಆಮಿಷವಾಗಿ ಒಡ್ಡಿದರು! ಆದರೆ ನಾಯಕರು ನಾಯಕರೇ. ಅವರನ್ನು ಬೈದು ಕಳಿಸಿದರು. ಅಷ್ಟೇ ಅಲ್ಲ, ಮುಂದೆ ವಿಶ್ವವಿದ್ಯಾಲಯದ ಪ್ರಶ್ನಪತ್ರಿಕೆಯೊಂದು ಪರೀಕ್ಷೆಗೆ ಮುಂಚೆಯೇ ಬಹಿರಂಗವಾದಾಗ ಅದಕ್ಕೆ ಹೇಸಿ, ತಮಗೂ ಅದಕ್ಕೂ ಯಾವ ಸಂಬಂಧವಿಲ್ಲದಿದ್ದರೂ ಅದರ ಹೊಣೆಯನ್ನು ತಾವೇ ಹೊತ್ತು ಕುಲಪತಿ ಸ್ಥಾನಕ್ಕೇ ಹಠಾತ್ತಾಗಿ ರಾಜೀನಾಮೆ ನೀಡಿಬಿಟ್ಟರು.

ಜಾತಿಯನ್ನು ಆಧರಿಸಿ ನಡೆಯುವ ಯಾವುದೇ ಕಾರ್ಯ ವಿಚಾರಗಳು ನಾಯಕರಿಗೆ ಹಿಡಿಸುತ್ತಿರಲಿಲ್ಲ. ಮನುಷ್ಯರಲ್ಲಿ ನೋಡಬೇಕಾದದ್ದು ಅವರ ನಡತೆ ಗುಣ ಕಾರ್ಯಕ್ಷಮತೆ

ಮಾತ್ರ. ಜಾತಿಯ ನೆಲೆಯ ಮೇಲೆ ವ್ಯವಹರಿಸುವುದು ಸಲ್ಲದ್ದು ಎಂದು ಅವರ ನಿಲುವಾಗಿತ್ತು. ಆದರೆ ಅವರದೆನ್ನುವ ಒಕ್ಕಲಿಗ ಜಾತಿಗೆ ಸೇರಿದ ಜನರಿಗೆ ನಾಯಕರಂಥ ಗಣ್ಯವ್ಯಕ್ತಿ ತಮ್ಮ ಜಾತಿಯವರೆಂದು ವಿಶೇಷ ಅಭಿಮಾನ ಗೌರವ ಇದ್ದುವು. ಅಂಥದು ವ್ಯಕ್ತವಾದಾಗ ನಾಯಕರು ಅದನ್ನು ತಾಳಿಕೊಳ್ಳುತ್ತಿರಲಿಲ್ಲ. ಸಿಡಿಮಿಡಿಗೊಳ್ಳುತ್ತಿದ್ದರು. ಕುತೂಹಲದ ವಿಶೇಷವೆಂದರೆ ಅವರ ವಿಶೇಷ ಗೌರವ ಆದರಗಳಿಗೆ ಪಾತ್ರರಾಗಿದ್ದ ಮತ್ತು ಅವರಿಂದ ಉಪಕಾರ ಸಹಾಯ ಪಡೆದ ಸಾಹಿತಿಗಳೆಲ್ಲ ಬಹುಮಟ್ಟಿಗೆ ಬ್ರಾಹ್ಮಣರೇ ಆಗಿದ್ದರು! ಇದರಿಂದ ಅಸಮಾಧಾನಗೊಂಡ ಅವರ ಜಾತಿಯ ಜನ ನಾಯಕರನ್ನು 'ಬ್ರಾಹ್ಮಣಗೌಡ' ಎಂದು ಬೆನ್ನ ಹಿಂದೆ ಲೇವಡಿ ಮಾಡುತ್ತಿದ್ದರು. ಇದು ನಾಯಕರ ಕಿವಿಗೂ ತಾಗಿತ್ತು. ಆದರೆ ಅವರು ಅಂಥ ಟೀಕೆಗಳಿಂದ ಪ್ರಭಾವಿತರಾಗಲಿಲ್ಲ. ಒಮ್ಮೆ ಕುವೆಂಪು "ಆದಿ ಚುಂಚನಗಿರಿ ಮಠವು ಒಂದು ಜಾತಿಸಂಸ್ಥೆಯಲ್ಲ ವಿದ್ಯಾಕ್ಷೇತ್ರದಲ್ಲಿ ಮಹತ್ತರ ಸೇವೆ ಸಲ್ಲಿಸುತ್ತಿರುವ, ಸಂಕುಚಿತ ಸಂಕೋಲೆಗಳಿಂದ ಬಿಡಿಸಿಕೊಂಡು ನಡೆಯುತ್ತಿರುವ ಒಂದು ಸಂಸ್ಥೆ" ಎಂದು ಹೇಳಿರುವುದಾಗಿ ಪತ್ರಿಕೆಯಲ್ಲಿ ಪ್ರಕಟವಾಯಿತು. ಗುಲ್ಬರ್ಗಾದಲ್ಲಿದ್ದ ನಾಯಕರು ಇದನ್ನು ಓದಿ ತಬ್ಬಿಬ್ಬಾದರು. ಕೂಡಲೇ ಕುವೆಂಪು ಅವರಿಗೆ ಒಂದು ಪತ್ರ ಬರೆದರು. "ಈ ಮಠವು ವಿದ್ಯಾಸಂಸ್ಥೆಗಳನ್ನು ಆರಂಭಿಸಿರಬಹುದು, ನಡೆಸುತ್ತಿರಬಹುದು. ಆದರೆ ಇದು ಜಾತಿಸಂಸ್ಥೆಯಲ್ಲ ಎಂದು ಹೇಗೆ ಹೇಳುವಿರಿ? ಕೆಲವು ಜಾತಿಯ ಮಠಗಳು ತಮ್ಮ ಜಾತಿಯ ಪ್ರಯೋಜನಕ್ಕಾಗಿ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿವೆ. ಉಳಿದ ಜಾತಿಗಳು ಅವನ್ನು ಅನುಸರಿಸಲು ಹೊರಟಿವೆ. ಕೂಲಂಕಷವಾಗಿ ಹಿನ್ನೆಲೆಯನ್ನು ಅರಿಯದೆ ನೀವು ಹೀಗೆ ಹೇಳುವುದನ್ನು ಓದಿ ನಿಮ್ಮ ಅಭಿಮಾನಿಯಾದ ನನಗೆ ತುಂಬ ನೋವಾಗಿದೆ." ನಾಯಕರು ಕುವೆಂಪು ಅವರ ವಿದ್ಯಾರ್ಥಿ. ಅವರನ್ನು ಅದ್ವಿತೀಯ ಸಾಹಿತಿ ಎಂಬ ಆರಾಧನಾ ಭಾವನೆಯಿಂದ ಕಾಣುತ್ತಿದ್ದವರು. ಅಲ್ಲದೆ ಕುವೆಂಪು ಅವರನ್ನು ಯಾರೂ ವಿರೋಧಿಸುವ ವಾತಾವರಣ ಇಲ್ಲದ ಕಾಲ ಅದು. ಆದರೂ ನಾಯಕರಿಗೆ ತಮ್ಮ ನಿಲುವು ಸ್ಪಷ್ಟವಾಗಿತ್ತು. ಅದಕ್ಕೆ ವಿರೋಧವಾದುದನ್ನು ಯಾರೇ ಹೇಳಲಿ ಅದನ್ನು ಪ್ರಶ್ನಿಸುವ ಕೆಚ್ಚೂ ಇತ್ತು.

ಸಾಹಿತ್ಯಕ ಅಥವಾ ಸಾಂಸ್ಕೃತಿಕ ಕಾರ್ಯಗಳನ್ನು ತೂಗುವಾಗ ಹಾಮಾನಾ ದೃಷ್ಟಿ ವಿಚಾರಾತ್ಮಕವಾಗಿದ್ದು ನಿಚ್ಚಳವಾಗಿರುತ್ತಿತ್ತು; ಕಂದಾಚಾರದ ಸುಳ್ಳು ಮಡಿ ಮೈಲಿಗೆಗಳಿಗೆ ಒಳಗಾಗುತ್ತಿರಲಿಲ್ಲ. ೧೯೮೩ರಲ್ಲಿ ನನ್ನ ದೀಪಿಕಾ ಭಾವಗೀತೆಗಳ ಧ್ವನಿಸುರುಳಿಯನ್ನು ಬಿಡುಗಡೆ ಮಾಡಿದವರು ಅವರೇ. ಪುಸ್ತಕ ಎಂದರೆ ಮಡಿ, ಕ್ಯಾಸೆಟ್ ಎಂದರೆ ಮೈಲಿಗೆ ಎಂದು ರಾಮಚಂದ್ರ ಶರ್ಮರಂಥ ಆಧುನಿಕ ಸಾಹಿತಿಗಳೇ ಭಾವಿಸಿದ್ದ ಕಾಲ ಅದು. ಹಾಮಾನಾ ತಮ್ಮ ಭಾಷಣದಲ್ಲಿ ಈ ಮಾತನ್ನೆತ್ತಿಕೊಂಡು "ಗ್ರಂಥವು ಓದುವ ಪುಸ್ತಕವಾದರೆ ಕ್ಯಾಸೆಟ್ ಕೇಳುವ ಪುಸ್ತಕ. ಒಂದು ವಿಷಯ ಕಾಗದದ ಮೇಲೆ ಮುದ್ರಿತವಾದರೆ ಮಾತ್ರ ಶುದ್ಧ, ಟೇಪಿನ ಮೇಲೆ ಮುದ್ರಿತವಾದರೆ ಮೈಲಿಗೆ ಎಂಬ

ಭಾವನೆ ತಪ್ಪು, ಕಂದಾಚಾರದ್ದು. ಸಾಹಿತ್ಯ ಆಧುನಿಕ ಸೌಲಭ್ಯಗಳೆಲ್ಲವನ್ನೂ ಬಳಸುತ್ತ ಹೋಗಬೇಕು. ಮುಖ್ಯವಾದದ್ದು ಅದರಲ್ಲಿರುವ ಪಠ್ಯ. ಪುಸ್ತಕವೇ ಪವಿತ್ರ ಎನ್ನುವುದಾದರೆ ಅದಕ್ಕಿಂತ ಹಿಂದಿನ ಓಲೆಗರಿ ಇನ್ನೂ ಪವಿತ್ರ ತಾನೆ? ಅದರೆದುರು ಪುಸ್ತಕವೂ ಮೈಲಿಗೆ" ಎಂದು ಹಾಸ್ಯ ಮಾಡಿದ್ದಲ್ಲದೆ ದೀಪಿಕಾ ಧ್ವನಿಸುರುಳಿಯಲ್ಲಿರುವ ಭಾವಗೀತೆಗಳ ಉತ್ತಮ ಭಾಗಗಳನ್ನು ಎತ್ತಿ ತೋರಿಸಿದರು. ತಿಳಿಯಲು ಕಷ್ಟವಾದ ನವ್ಯಪದ್ಯವೊಂದೇ ಕವಿತೆ. ಸರಳವಾದ ಹಾಗೂ ಗೀತಸಹಚರಿಯಾದ ಭಾವಗೀತೆ ಕೂಡದು ಎಂಬ ಭಾವನೆ ಸಲ್ಲದ್ದು. ಕಾವ್ಯವೃಕ್ಷ ಸೊಂಪಾಗಿ, ಹರವಾಗಿ ಬೆಳೆಯಲು ಅದಕ್ಕೆ ಹಲವು ಶಾಖೆಗಳಿರಬೇಕು. ನವ್ಯಕವಿತೆ, ಭಾವಗೀತೆ, ಸುನೀತ, ಕಥನ ಕವನ, ನೀಳ್ಗವಿತೆ ಎಲ್ಲವೂ ಕಾವ್ಯವೃಕ್ಷದ ಹಲವು ಶಾಖೆಗಳು. ಒಂದೊಂದರ ಕೆಲಸ ಒಂದೊಂದು ರೀತಿ. ಎಲ್ಲವೂ ನಮಗೆ ಬೇಕು ಎಂದು ವಿವರಿಸಿದರಲ್ಲದೆ ಆ ಬಗ್ಗೆ ಅಂಕಣದಲ್ಲೂ ಬರೆದರು.

ತಮಗಿಂತ ಕಿರಿವಯಸ್ಸಿನ ಲೇಖಕರಿಗೆ ನಾಯಕರು ಸಾಮಯಿಕವಾದ ಹಿತವಚನ ಹೇಳಿ ಅವರಿಂದ ಇನ್ನಷ್ಟು ಕೆಲಸ ಮಾಡಿಸುತ್ತಿದ್ದುದುಂಟು. ಸ್ವತ: ನನಗೇ ಇದು ಅನುಭವಕ್ಕೆ ಬಂದಿದೆ. ಷೇಕ್ಸ್‌ಪಿಯರ್‌ನ ಸಾನೆಟ್ಟುಗಳಲ್ಲಿ ತುಂಬ ಉತ್ತಮವಾದುವೆಂದು ತೋರಿದ ಇಪ್ಪತ್ತನಾಲ್ಕು ಸಾನೆಟ್ಟುಗಳನ್ನು ನಾನು ಕನ್ನಡಕ್ಕೆ ಅನುವಾದಿಸಿ ಸುನೀತ ಎಂಬ ಪುಸ್ತಕವಾಗಿ ಪ್ರಕಟಿಸಿದೆ. ಅದರ ಬಿಡುಗಡೆಗೆ ಬಂದಿದ್ದ ಹಾಮಾನಾ ನನಗೊಂದು ಕಿವಿ ಮಾತು ಹೇಳಿದರು. ನೀವು ಅತ್ಯುತ್ತಮವೆಸಿದವನ್ನು ಆಯ್ದು ಷೇಕ್ಸ್‌ಪಿಯರ್‌ನ ಕೆಲವು ಸಾನೆಟ್ಟುಗಳನ್ನು ಮಾತ್ರ ಅನುವಾದಿಸಿದ್ದೀರಿ. ಇದು ಸರಿಯಲ್ಲ. ಷೇಕ್ಸ್‌ಪಿಯರ್‌ನಂಥ ಮಹಾ ಲೇಖಕ ಬರೆದ ಕವಿತೆಗಳು ಎಂದ ಮೇಲೆ ಕೆಲವು ಉತ್ತಮ, ಕೆಲವು ಗೌಣ ಎಂದು ವಿವೇಚಿಸುತ್ತ ಕೂರಬಾರದು. ಅವನ ಸಾನೆಟ್ಟುಗಳೆಲ್ಲವನ್ನೂ ವ್ಯಾಸಂಗ ದೃಷ್ಟಿಯಿಂದ ಓದಲು ಬಯಸುವವರಿರುತ್ತಾರೆ. ಉತ್ತಮ, ಗೌಣ ಎನ್ನುವ ವಿವೇಚನೆಯನ್ನು ನೀವು ಪುಸ್ತಕಕ್ಕೆ ಬರೆಯುವ ಮುನ್ನುಡಿಯಲ್ಲಿ ವಿಸ್ತಾರವಾಗಿಯೇ ಮಾಡಿ. ಆದರೆ ಅನುವಾದಿಸುವಾಗ ಎಲ್ಲವನ್ನೂ ಆಯ್ದುಕೊಳ್ಳಿ. ಕಡೆಯ ಪಕ್ಷ ನೂರು ಸಾನೆಟ್ಟುಗಳನ್ನಾದರೂ ಅನುವಾದಿಸಿ ಎಂದರು. ಈ ಮಾತನ್ನು ಗಮನದಲ್ಲಿಟ್ಟುಕೊಂಡು ಪುಸ್ತಕದ ಎರಡನೆಯ ಮುದ್ರಣ ತರುವಾಗ ಐವತ್ತು ಸಾನೆಟ್ ಅನುವಾದಿಸಿದೆ. ನಾಲ್ಕನೆಯ ಮುದ್ರಣ ಹೊರಬರುವಾಗ ನೂರು ಸಾನೆಟ್ ಅನುವಾದಿಸಿ ಅದಕ್ಕೆ 'ಷೇಕ್ಸ್‌ಪಿಯರ್ ಸಾನೆಟ್‌ಚಕ್ರ' ಎಂಬ ಹೆಸರು ಕೊಟ್ಟೆ. ಇದಕ್ಕೆ ಮೂಲಪ್ರೇರಣೆ ಅವರೇ.

ಹಾಮಾನಾ ಅವರ ಪುಸ್ತಕ ಪ್ರೇಮ ಅಮಿತವಾಗಿತ್ತು. ಸಾಹಿತಿಯಾದದ್ದರಿಂದಲೂ, ದೊಡ್ಡ ಅಧಿಕಾರದಲ್ಲಿ ಇದ್ದದ್ದರಿಂದಲೂ, ಅವರ ಸಾಹಿತ್ಯವಲಯವೇ ದೊಡ್ಡದಾದದ್ದರಿಂದಲೂ ಅವರಿಗೆ ಬಹಳ ಸಂಖ್ಯೆಯಲ್ಲಿ ಗೌರವಪ್ರತಿಗಳು ಬರುತ್ತಿದ್ದವು. ಹಾಗೆ ಬರದೆ ಹೋದ ನೂರಾರು ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಅವರು ಹಣಕೊಟ್ಟು ಕೊಳ್ಳುತ್ತಿದ್ದರು. ಅವರ ಮನೆಯಂತೆ ಪುಸ್ತಕಗಳು ತುಂಬಿದ ಮನೆಯನ್ನು

(ಬೇಂದ್ರೆಯವರದ್ದು ಬಿಟ್ಟರೆ) ನಾನು ಇನ್ನೊಂದು ನೋಡಿಲ್ಲ. ವ್ಯಾಸಂಗದ ಕೊಠಡಿ, ಮಲಗುವ ರೂಮುಗಳಲ್ಲಿ ಮಾತ್ರವಲ್ಲ, ಇತರ ಕೊಠಡಿಗಳಲ್ಲೂ ವ್ಯವಸ್ಥಿತವಾಗಿ ಜೋಡಿಸಿಟ್ಟ ಪುಸ್ತಕಗಳು. ಇದಲ್ಲದೆ ಲೈಬ್ರರಿಯಿಂದಲೂ ಅವರು ನಿರಂತರವಾಗಿ ಪುಸ್ತಕ ತರುತ್ತಿದ್ದುದುಂಟು. ಅವರ ಬಳಿ ಇದ್ದ ಪುಸ್ತಕಗಳ ಸಂಖ್ಯೆ ಹದಿನಾಲ್ಕು ಸಾವಿರಕ್ಕೂ ಮಿಕ್ಕಿತ್ತು! ಅವರ ಅಂಕಣ ಬರೆಹಗಳು ಅಷ್ಟೊಂದು ವಿಷಯಭರಿತವಾಗಿರುತ್ತಿದ್ದುದಕ್ಕೆ ಈ ಪುಸ್ತಕ ವ್ಯಾಸಂಗವೂ ಕಾರಣವಾಗಿತ್ತು. ತಮ್ಮ ನಂತರ ಈ ಪುಸ್ತಕಗಳ ಗತಿ ಏನು ಎಂಬ ಒಂದು ವಿಚಾರವೂ ಅವರ ತಲೆಯಲ್ಲಿತ್ತು. ಅಷ್ಟೆಲ್ಲ ಪುಸ್ತಕಗಳನ್ನು ಬಳಸುವ ಜನ ಅವರ ಕುಟುಂಬದಲ್ಲಿ ಯಾರೂ ಇರಲಿಲ್ಲ. ಕಾಲೇಜುಗಳಲ್ಲಾಗಲೀ ಯೂನಿವರ್ಸಿಟಿ ಲೈಬ್ರರಿಗಳಲ್ಲಾಗಲೀ ಅವುಗಳಿಗೆ ತಕ್ಕ ರಕ್ಷಣೆಯಿಲ್ಲವೆಂಬ ವಿಷಯ ಅವರಿಗೆ ಗೊತ್ತಿತ್ತು. ವಿದ್ಯಾರ್ಥಿಗಳಲ್ಲಿ ಅನೇಕರು ಪುಸ್ತಕದೊಳಗಿನ ಉತ್ತಮ ಲೇಖನಗಳ ಪುಟಗಳನ್ನು ಹರಿದು ಒಯ್ಯುತ್ತಿದ್ದುದು ಅವರಿಗೆ ತಿಳಿದಿತ್ತು. ಒಮ್ಮೆ ಈ ವಿಷಯವನ್ನು ಬಹಳ ಆತಂಕ ಭಾವದಿಂದಲೇ ನನ್ನೊಡನೆ ಪ್ರಸ್ತಾಪಿಸಿದ್ದರು. ಹಾಗೆಂದೇ ಇರಬೇಕು, ತಮ್ಮ ಸಮಗ್ರ ಪುಸ್ತಕ ಭಂಡಾರವನ್ನು ಕಡೆಯಲ್ಲಿ ಅವರು ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗಡೆಯವರ ವಶಕ್ಕೆ ಒಪ್ಪಿಸಿ ಬಿಟ್ಟರು. ಅಲ್ಲಿ ಅವು ಕ್ಷೇಮವಾಗಿರಬಲ್ಲವು, ಉಪಯುಕ್ತವಾಗಿ ಬಳಕೆಯಾಗಬಲ್ಲವು ಎಂದು ಅವರ ನಂಬಿಕೆಯಾಗಿತ್ತು.

ನಾಯಕರ ದಿಟ್ಟ ನಿಲುವು ನಿರ್ದಾಕ್ಷಿಣ್ಯ ಪ್ರವೃತ್ತಿಗಳೇ ಕಾರಣವಾಗಿ ಅವರನ್ನು ದ್ವೇಷಿಸುವವರೂ ಇದ್ದರು: ತನಗೆ ಆಗದ ಪ್ರಖ್ಯಾತ ಲೇಖಕರನ್ನೆಲ್ಲ ಸುಳ್ಳೇ ವಿಕಾರವಾಗಿ ಚಿತ್ರಿಸಿ, ಮನರಂಜನೆ ನಡೆಸಿ ದುಡ್ಡೆಬ್ಬಿಸುವ ಹಗರಣಕಾರನೊಬ್ಬ ಒಮ್ಮೆ ನಾಯಕರ ಬಗ್ಗೆಯೂ ಹಸಿಸುಳ್ಳುಗಳಿಂದ ಕೂಡಿದ ಒಂದು ಲೇಖನ ಬರೆದು ತನ್ನ ಪತ್ರಿಕೆಯಲ್ಲಿ ಪ್ರಕಟಿಸಿದ. ನಾಯಕರು ಉಪಕುಲಪತಿಗಳಾಗಬಹುದಾಗಿದ್ದ ಸಂದರ್ಭದಲ್ಲಿ ಪ್ರಕಟವಾದ ಲೇಖನ ಅದು. ಉದ್ದೇಶ ಸ್ಪಷ್ಟವಾಗಿತ್ತು. ತಮ್ಮ ಬಗ್ಗೆ ಎಂಥ ವಿಮರ್ಶೆಯನ್ನೂ ನಗುತ್ತ ತಾಳಿಕೊಳ್ಳುವ ನಾಯಕರು ಬರೆಹ ನೋಡಿ ಉರಿದೆದ್ದರು. ಮೊಕದ್ದಮೆ ಹೂಡಿ ಆ ಲೇಖಕನನ್ನು ಕೋರ್ಟಿಗೆಳೆದರು. ಕೇಸು ವರ್ಷಗಟ್ಟಲೆ ನಡೆಯಿತು. ಕೊನೆಗಳಿಗೆಯಲ್ಲಿ ಲೇಖಕ ಸಂಧಾನ ಮಾಡಿಕೊಳ್ಳಲು ಬಂದ. ನಾಯಕರು ಒಪ್ಪಲಿಲ್ಲ. ಕಡೆಗೂ ಆತ ನ್ಯಾಯಾಧೀಶರ ಎದುರಿನಲ್ಲಿ ಮತ್ತು ತನ್ನ ಪತ್ರಿಕೆಯಲ್ಲಿ ತಾನು ಬರೆದದ್ದು ನಿಜವಲ್ಲವೆಂದು ಒಪ್ಪಿಕೊಂಡು ನಾಯಕರ ಕ್ಷಮಾಯಾಚನೆ ಮಾಡಬೇಕಾಯಿತು. ಹಾಮಾನಾ ಬೀದರ್ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದಾಗ ಅವರ ಸಂದರ್ಶನ ನಡೆಸಿದ ಕನ್ನಡದ ಹೆಸರಾದ ಲೇಖಕನೊಬ್ಬ ತನ್ನ ಎಂಟೊಂಬತ್ತು ಪುಟಗಳ ದೀರ್ಘ ಲೇಖನದಲ್ಲಿ ಅವರ ಬರವಣಿಗೆಯ ಬಗ್ಗೆ ಒಂದೇ ಒಂದು ಚಕಾರ ಬರೆಯಲಿಲ್ಲ. ಅಸಹನೆಯೆನ್ನುವುದು ಎಷ್ಟು ದೂರ ಹೋಗಬಹುದು ಎನ್ನಲು ಇದಕ್ಕಿಂತ ಬೇರೆ ನಿದರ್ಶನ ಬೇಕಿಲ್ಲ? ಆದರೆ ನಾಯಕರು ಅದಕ್ಕೆ ಒಮ್ಮೆಯೂ ಆಕ್ಷೇಪಿಸಲಿಲ್ಲ. ನಾನು ಇದರ ಪ್ರಸ್ತಾಪ ಮಾಡಿದಾಗ "ಯಾರ ತೇಗಿನಲ್ಲೇ ಆಗಲಿ ಅವರು ತಿಂದದ್ದರ ವಾಸನೆಯಲ್ಲದೆ ಬೇರೆ ಏನಿರಲು ಸಾಧ್ಯ? ಅವರವರ ಸಂಸ್ಕಾರ ಬಿಡಿ" ಎಂದು ಮಾತು ಮುಗಿಸಿಬಿಟ್ಟರು.

ಅಧಿಕಾರ, ಜನಪ್ರಿಯತೆ, ಮಾನಸಮನ್ನಣೆಗಳು ಎಷ್ಟೇ ಬಂದರೂ ನಾಯಕರು ಎಂದೂ ಬಿಗಿ ಮಾತಾಡಿದವರಲ್ಲ. ತಮ್ಮ ಬಗ್ಗೆ ಹೇಳಿಕೊಳ್ಳಲೇಬೇಕಾಗಿ ಬಂದಾಗ ಅವರು ತೀರ ವಿನಯದಿಂದ ಮಾತಾಡುತ್ತಿದ್ದರು. ಬೀದರ್ ಸಾಹಿತ್ಯ ಸಮ್ಮೇಳನಕ್ಕೆ ಮುಂಚೆ ರಾಮಚಂದ್ರಶರ್ಮರು ಅವರನ್ನು ಕುರಿತು 'ಸಂದರ್ಶನ' ಬರೆದರು. ಸಾಹಿತ್ಯ ಕ್ಷೇತ್ರದಲ್ಲಿ ನಿಮ್ಮ ಪಾತ್ರ ಎಂಥದು ಎಂದು ಭಾವಿಸುತ್ತೀರಿ? ಎಂಬ ಪ್ರಶ್ನೆಗೆ ಅವರು ಕೊಟ್ಟ ಉತ್ತರ ಇದು.

"ನಾನೇನು ದೊಡ್ಡ ಸೃಜನಶೀಲ ಲೇಖಕನಲ್ಲ, ದೊಡ್ಡ ವಿದ್ವಾಂಸ ಎನ್ನುವ ಭ್ರಾಂತಿಯೂ ಇಲ್ಲ. ಸಾಹಿತ್ಯಕ್ಕೆ ಸಂಬಂಧಪಟ್ಟ ಹಾಗೆ ಮೂರು ಗುಂಪಿನ ಜನರಿದ್ದಾರೆ; ಸೃಜನಶೀಲರು, ವಿದ್ವಾಂಸರು ಮತ್ತು ಕನ್ನಡದ ಕೆಲಸ ಮಾಡುವವರು. ಆ ಮೂರನೇ ಗುಂಪಿನಲ್ಲಿ ನಾನು. ನನಗೇನಾದರೂ ಸ್ಥಾನವಿದ್ದರೆ ಆ ಕ್ಷೇತ್ರದಲ್ಲಿ. ನಮ್ಮ ಜನ ತುಂಬ ಉದಾರಿಗಳು. ಸ್ವಲ್ಪ ಕೆಲಸ ಮಾಡಿದವರನ್ನೂ ಗೌರವಿಸುತ್ತಾರೆ."

ಎಂಥ ಮಾತು! ಕೇಳಿದವರನ್ನೇ ತಬ್ಬಿಬ್ಬು ಮಾಡುವ ಉತ್ತರ. ಅದಕ್ಕೇ ಅವರನ್ನು ಬಲ್ಲವರು ಹೇಳುವುದು. "ನಾಯಕರು ನಿಜವಾಗಿಯೂ ನಾಯಕರೇ. ಅದು ಅವರಿಗೆ ವಂಶದಿಂದ ಬಂದ ಹೆಸರಷ್ಟೇ ಅಲ್ಲ, ಅನ್ವರ್ಥನಾಮವೂ ಹೌದು".

ಕೆಲವು ಗೌರವಗಳು – ಪ್ರಶಸ್ತಿಗಳು

೧೯೫೮	ಕಲ್ಕತ್ತ ವಿಶ್ವವಿದ್ಯಾನಿಲಯದ ಚಿನ್ನದ ಪದ ಮತ್ತು ಬಹುಮಾ
೧೯೬೨	ಅಮೆರಿಕಾದ ಗೃಹ ಇಲಾಖೆಯ ವಿದ್ಯಾರ್ಥಿವೇತನ : ಫುಲ್‌ಬ್ರೈಟ್ ಪ್ರಯಾಣವೇತಣ.
೧೯೭೧	ಬೆಳಗಾವಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ
೧೯೭೨	ಕಾಸರಗೋಡು ಕನ್ನಡಿಗರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ
೧೯೭೨	ಶ್ರೀ ನಿಡುಮಾಮಿಡಿ ಜಗದ್ಗುರುಗಳಿಂದ 'ಹೊಂಗನ್ನಡಿಗ' ಬಿರುದು ಮತ್ತು ಚಿನ್ನದ ಪದಕ
೧೯೭೩	ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷತೆ
೧೯೭೪	ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ೪೮ನೇ ಅಧಿವೇಶನದಲ್ಲಿ (ಮಂಡ್ಯ) ಜಾನಪದ ಗೋಷ್ಠಿ ಅಧ್ಯಕ್ಷತೆ
೧೯೭೮	ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ೫೦ನೇ ಅಧಿವೇಶನದಲ್ಲಿ (ದೆಹಲಿ) ಸಾಹಿತ್ಯಗೋಷ್ಠಿ ಅಧ್ಯಕ್ಷತೆ
೧೯೭೮	ಅಖಿಲ ಭಾರತ ಪ್ರಗತಿಪಂಥದ ಮೂರನೆಯ ಸಮ್ಮೇಳನದ (ಮಹಾಲಿಂಗಪುರ) ಅಧ್ಯಕ್ಷತೆ
೧೯೭೯	ಹಿರಿಯೂರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ
೧೯೭೯-೮೪	ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷತೆ
೧೯೮೦	೧೯೭೫ರ ಮೈಸೂರು ವಿಶ್ವವಿದ್ಯಾನಿಲಯ ಸುವರ್ಣ ಮಹೋತ್ಸವ ಪ್ರಶಸ್ತಿ ('ಸಲ್ಲಾಪ' ಕೃತಿಗೆ)

೧೯೮೨	ಕರ್ನಾಟಕ ರಾಜ್ಯ ಪ್ರಶಸ್ತಿ
	ಧರ್ಮಸ್ಥಳ ಸಾಹಿತ್ಯ ಸಮ್ಮೇಳನದ ಸುವರ್ಣ ಮಹೋತ್ಸವದ ಅಧಿವೇಶನದ ಅಧ್ಯಕ್ಷತೆ
೧೯೮೫	೫೭ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ (ಬೀದರ್) ಅಧ್ಯಕ್ಷತೆ; ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
೧೯೮೭	೧೪ನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷತೆ (ದಾವಣಗೆರೆ)
೧೯೮೯	ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ('ಸಂಪ್ರತಿ' ಕೃತಿಗೆ)
	ಐ.ಬಿ.ಎಚ್. ಎಜುಕೇಷನ್ ಟ್ರಸ್ಟ್ ಪ್ರಶಸ್ತಿ ('ಸಂಪ್ರತಿ' ಕೃತಿಗೆ)
	ವರ್ಧಮಾನ ಪ್ರಶಸ್ತಿ ('ಪ್ರಣಯ ಪದಾವಳಿ' ಕೃತಿಗೆ)
೧೯೮೯-೯೦	ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಉಪಾಧ್ಯಕ್ಷ
೧೯೯೦	ಕೊಡಗು ಜಿಲ್ಲಾ ಮೂರನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ
೧೯೯೨	ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ

ನಾಯಕರು ನಿಜವಾಗಿ ನಾಯಕರೆ!

ಹೆತ್ತವರು ಗೊತ್ತಿದ್ದೆ ಹೆಸರಿಟ್ಟರೆಂಬ ಥರ
ಅಚ್ಚರಿ ಕವಿಸುವಂತೆ ಬೆಳೆದ ಹಿರಿ ವ್ಯಕ್ತಿತ್ವ,
ಕನ್ನಡದ ಕೋಟೆ ಕೊತ್ತಳ ಫೌಜು ನೆಲ ಜಲವ
ಹೋರಾಡಿ ಕಾಯ್ದುಕೊಳ್ಳುವ ಧೀರ ದೃಢ ಸತ್ವ.
ನಾಯಕರು ನಿಜವಾಗಿ ನಾಯಕರೆ, ಗುರಿ ನಿಟ್ಟು
ವ್ಯೂಹರಚನೆಯ ಗುಟ್ಟು ಪರಿಪೂರ್ಣ ಎಲ್ಲ ಸಲ;
ತೊಡೆ ತಟ್ಟಿ ಎದುರಾದ ಕುಳವ ಕ್ಷಣಾರ್ಧದಲ್ಲಿ
ಚಿತ್ತುಮಾಡುವ ಚತುರ; ಒಂದೆ ಗುರಿ, ಒಂದೆ ಶರ
ಜಾತಿಕೋಟಿಗಳ ಹಾವಳಿ ಎಲ್ಲ ದಿಕ್ಕಲ್ಲಿ,
ಇಲ್ಲ ನೀವಿರುವಲ್ಲಿ, ನೀವೊ ಗಟ್ಟಿಗರ ಕುಲ;
ಕನ್ನಡದ ಶಿಖರಗಳ ಮೇಲೆ ಬೆಳಕನ್ನಿಟ್ಟು
ಮೂಲೆ ಮೂಲೆಗೂ ಅದನು ಕಾಣಿಸುವ ತೀವ್ರ ಛಲ.
ಕನ್ನಡವ ಹಳಿದರೋ ಕಿಡಿಯಾಡುವುದು ಕಣ್ಣು,
ಮಾತೆಲ್ಲ ಸ್ಫೋಟಿಸುವ ಗುಂಡು.
ಸಹ್ಯಾದ್ರಿ ನೆತ್ತಿಯಲಿ ಒಟ್ಟಾಗಿ ಕವಿದು ಘೀಳಿಡುವಂತೆ
ಕರಿಮುಗಿಲ ಹಿಂಡು.

❐ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

❐❐

ಯು.ಆರ್. ಅನಂತಮೂರ್ತಿ
(ಜೀವನ ಸಾಧನೆ ಮತ್ತು ಕೃತಿ ಪರಿಚಯ)



□ ಸತ್ಯನಾರಾಯಣರಾವ್ ಅಣತಿ

ನಮ್ಮ ಶಿವಮೊಗ್ಗ ಸೀಮೆಯವರಾದ ಸಾಹಿತಿ ಡಾ.ಯು.ಆರ್. ಅನಂತಮೂರ್ತಿ ಅವರದು ನಮ್ಮ ಕಾಲದ ಕನ್ನಡ ಶಿಖರ ಸದೃಶ ಸೃಜನಶೀಲ ಚೈತನ್ಯಗಳಲ್ಲೊಂದು. ೧೯೫೦ರಿಂದ ನಮ್ಮ ಸಂಸ್ಕೃತಿ ಸಂದರ್ಭದ ಸಮಯ ಪಾಲಕರು ಚಾಲಕರು ಆಗಿದ್ದಾರೆ.

ಸಣ್ಣಕಥೆ, ಕಾದಂಬರಿ, ಕಾವ್ಯ ಮತ್ತು ಸಂಸ್ಕೃತಿ ಅಧ್ಯಯನ ಲೇಖನಗಳು (ವಿಮರ್ಶೆ) ಇವರ ಪ್ರಮುಖ ಅಭಿವ್ಯಕ್ತಿಪ್ರಕಾರಗಳು. ಒಂದು ನಾಟಕವನ್ನೂ ರಚಿಸಿದ್ದಾರೆ. ಮೋಡಿಮಾಡುವಂಥ ಮಾತುಗಾರರು. ಇವರ ಸೃಜನಶೀಲ ಮನೋಧರ್ಮ ರೂಪಗೊಂಡದ್ದು- ಕರ್ನಾಟಕ ಮಲೆನಾಡು ಪ್ರಾಂತ್ಯ, ಸಹ್ಯಾದ್ರಿ ತಪ್ಪಲಿನಲ್ಲಿ, ಗ್ರಾಮೀಣ ಪ್ರದೇಶವಾದ ತೀರ್ಥಹಳ್ಳಿ ಪ್ರದೇಶದಲ್ಲಿ. ಮೇಳಿಗೆ, ಹುಟ್ಟೂರು. ಅಗ್ರಹಾರ ಬ್ರಾಹ್ಮಣ ಕುಂಟುಂಬದವರು. ಅವರು ಬೆಳೆದ ವಾತಾವರಣ: "ತೀರ್ಥಹಳ್ಳಿಯಲ್ಲಿ ನಾನು ಬೆಳೆದ ವಾತಾವರಣ ತೀರ ಸಾಹಿತ್ಯಕವಾದದ್ದೆಂದೇ ಹೇಳಬೇಕು. ಸೋಷಿಲಿಷ್ಟ್ ಗೋಪಾಲಗೌಡರು ಹೊಸ ಹೊಸ ತತ್ವಗಳನ್ನು ಕುರಿತು ಹೇಳುವುದರ ಜೊತೆಗೇ ಸಾಹಿತ್ಯದಿಂದ ತಂದ ಉದಾಹರಣೆಗಳನ್ನು ನಡು ನಡುವೆ ಸೇರಿಸುತ್ತಿದ್ದರು. ನಾರಣಪ್ಪ, ಲಕ್ಷ್ಮೀಶ, ಬೇಂದ್ರೆ, ಕುವೆಂಪು, ಅಡಿಗರ ಕಾವ್ಯ ಅವರ ನಾಲಿಗೆಯ ತುದಿಯಲ್ಲಿತ್ತು. ಸಂಪ್ರದಾಯ ಲೋಕದಿಂದ ನಾನು ಅವರ ಲೋಕದತ್ತ ಚಲಿಸಿದೆ." ಈ ರೀತಿ ಚಲನೆಗೆ ಅವರನ್ನು ಸಿದ್ಧಪಡಿಸಿದ್ದ ಅವರ ಬಾಲ್ಯ ಜೀವನದ ಬದುಕಿನ ಸಂದರ್ಭವೂ ಬಹು ಮುಖ್ಯ ಪಾತ್ರ ವಹಿಸಿದೆ.

ಅನಂತಮೂರ್ತಿಯವರ ಬಾಲ್ಯ ಅನುಭವಗಳ ಬಲು ದೊಡ್ಡ ಕಣಜ. ಅಂದು ಅವರ ಭಾವಕೋಶವನ್ನು ತುಂಬಿದ್ದು ಸೃಜನಶೀಲತೆಯನ್ನು ಸಮೃದ್ಧಗೊಳಿಸುತ್ತಿದೆ. ಬಾಲ್ಯದ ನೆನಪುಗಳು ಅವರ ಪ್ರಜ್ಞಾವಲಯವನ್ನು ವಿಸ್ತರಿಸುತ್ತಾ ಬಂದಿದೆ. ಪ್ರಾಥಮಿಕ ವಿದ್ಯಾಭ್ಯಾಸ ಮೇಳಿಗೆ, ಬೇಗುವಳ್ಳಿ, ಕೋಣಂದೂರು, ತೀರ್ಥಹಳ್ಳಿಯಲ್ಲಿ ನಡೆಯಿತು. ಹತ್ತು ವರ್ಷದ (೧೯೪೨) ಹುಡಗನನ್ನು ಸ್ವಾತಂತ್ರ್ಯ ಹೋರಾಟದ ಪ್ರಭಾತ್ ಫೇರಿಯಲ್ಲಿ ಭಾಗವಹಿಸಿದ ಕಾರಣಕ್ಕಾಗಿ, ತೀರ್ಥಹಳ್ಳಿಯಿಂದ ರಾತ್ರೋ ರಾತ್ರಿ ಸ್ಥಳಾಂತರಿಸಿ

ವಿಳಾಸ : ನಿವೃತ್ತ ಉಪನ್ಯಾಸಕರು, "ರಚನ", ಶರಾವತಿ ನಗರ, ಹೊಸಮನೆ ಚರ್ಚ್ ಪಕ್ಕ, ಶಿವಮೊಗ್ಗ-೫೭೭೨೦೧

ಕೋಣಂದೂರು ಶಾಲೆಗೆ ಸೇರಿಸಿದರು. ಹಾಲಂದೂರಿನ ನೆಂಟರಮನೆಯಲ್ಲಿದ್ದುಕೊಂಡು ಕೋಣಂದೂರಿನ ಶಾಲೆಗೆ ಹೋಗಿಬರುತ್ತಿದ್ದರು. ಆ ಕಾಲದಲ್ಲಿ ಅವರ ಮನಸ್ಸು ವಿಸ್ತಾರಗೊಂಡಿತು. ಗೆಳೆಯ ಗೆಳತಿಯರು, ಹಲವು ಪೋಲಿ ಗೆಳೆಯರ ಸಹವಾಸದಲ್ಲಿ, ಗುಟ್ಟಿನಲ್ಲಿ ಬೀಡಿ ಸೇದುವುದು ಇತ್ತೆಂದು ಹೇಳಿಕೊಂಡಿದ್ದಾರೆ. ಅವರ ಸ್ಮೃತಿಯ ಉಗ್ರಾಣದಲ್ಲಿ ರೂಪಕಗಳ ಸಾಮ್ರಾಜ್ಯವೇ ಇದೆ: ದಟ್ಟ ಕಾಡು, ಹುಲಿಯ ಘರ್ಜನೆ, ಹುಲಿಯಿಂದ ರಕ್ಷಣೆಪಡೆಯಲು ಅಜ್ಜ ಹೇಳುತ್ತಿದ್ದ ಮಂತ್ರ. ಆಗಾಗ ಬರುತ್ತಿದ್ದ ಪ್ಲೇಗು ಮಾರಿಗೆ ಬಲಿಯಾಗುತ್ತಿದ್ದ ಜನ. ಪ್ಲೇಗಿಗೆ ಇನ್ಯಾಕ್ಯುಲೇಶನ್ ಮಾಡಲು ಬರುತ್ತಿದ್ದ ಡಾಕ್ಟರ್, ಅಗ್ರಹಾರದ ಹೊರಗಿದ್ದ ಹರಿಜನಕೇರಿಗೆ ಹೋಗುತ್ತಿರಲಿಲ್ಲ. ಅಲ್ಲಿಯ ಜನ ಪ್ಲೇಗಿನಿಂದ ಸತ್ತಾಗ- ಗಾಂಧೀಜೀ ಮಾತು ಕೇಳಿ ದೇವಾಲಯ ಪ್ರವೇಶಿಸಿದ್ದಕ್ಕೆ ಶಿಕ್ಷೆ ಯಾಗುತ್ತಿದೆ ಎಂದುವಾದಿಸುತ್ತಿದ್ದ ಅಗ್ರಹಾರದ ಬ್ರಾಹ್ಮಣರು, ಮಠದ ಪರಿಸರ, ಪೂಜಾ ವಿಧಿಗಳು, ಹಬ್ಬ ಹರಿದಿನದ ಆಚರಣೆಗಳು, ಹರಿಕಥೆ, ಪಾರಮಾರ್ಥಿಕ ಚರ್ಚೆ, ನೆರೆಹೊರೆಯವರಲ್ಲಿ ಕೆಲವರ ಸರಳವಾದ ಧಾರ್ಮಿಕ ಜೀವನ. ಜಾತಿಯ ಹೆಮ್ಮೆಯಿಂದ ಉಸಿರುಕಟ್ಟಿಸುವ ವಾತಾವರಣ. ತಮ್ಮವರಲ್ಲದವರ ಬಗ್ಗೆ ಇದ್ದ ತಿರಸ್ಕಾರ ದೃಷ್ಟಿ, ಬಡ ಗೇಣಿದಾರರ ಜೊತೆ ಮಠದವರು ನಡೆಸುತ್ತಿದ್ದ ಕೊನೆಯಿಲ್ಲದ ವ್ಯಾಜ್ಯಗಳು. ಇವೆಲ್ಲ ಅವರು ಹುಟ್ಟಿ ಬೆಳೆದ ಸಂಪ್ರದಾಯಸ್ಥ ಸಮಾಜದ ನಡುವಳಿಕೆಗಳು, ಅನಂತಮೂರ್ತಿಯವರಲ್ಲಿ ಪ್ರಶ್ನೆಗಳನ್ನು, ಜಿಜ್ಞಾಸೆಯನ್ನು ಹುಟ್ಟಿಸಿದ್ದಲ್ಲದೆ, ನಾಚಿಕೆ, ತಿರಸ್ಕಾರಕ್ಕೂ ಕಾರಣವಾಗಿ ಅವರ ಅನೇಕ ಕಥೆಗಳಲ್ಲಿ ಕಾಣಿಸಿಕೊಂಡಿವೆ.

ಅವರಮ್ಮ ಹೇಳುತ್ತಿದ್ದ ಕಥೆಗಳು, ಅಜ್ಜಿ ಹೇಳುತ್ತಿದ್ದ ಕಥೆಗಳು, ಅಬ್ಬಕ್ಕ ಹೇಳುತ್ತಿದ್ದ ಅದ್ಭುತ ರಮ್ಯ ಕಥೆಗಳು, ಸಪ್ನಲೋಕ ಮತ್ತು ವಾಸ್ತವ ಜಗತ್ತಿನ ಬಾಗಿಲನ್ನು ತೆರೆದು, ಒಂದು ಕಲ್ಪನಾ ಪ್ರಪಂಚವನ್ನು ಎಳೆಯರಾಗಿದ್ದ ಅನಂತಮೂರ್ತಿಯವರ ಮನೋಭೂಮಿಕೆಯಲ್ಲಿ ನೆಲೆಗೊಳಿಸಿವೆ. ಕತೆ ಹೇಳುತ್ತಿದ್ದ ಅಬ್ಬಕ್ಕನ ವ್ಯಕ್ತಿತ್ವವೇ ಇವರಿಗೊಂದು ನಿಗೂಢವಾಗಿತ್ತು: ಕೆಲವೊಮ್ಮೆ ಗಣ ಮೈ ಮೇಲೆಬಂದು ಉಗ್ರ ದೇವತೆಯಂತೆ ಉನ್ಮತ್ತಳಾಗಿ ಕುಣಿಯುತ್ತಿದ್ದಳು. ಜನ ಅವಳ ಕಾಲಿಗೆ ಬಿದ್ದು ಮಾರ್ಗದರ್ಶನ ಪಡೆಯುತ್ತಿದ್ದರು. ಕಚ್ಚೆ ಹರುಕ ಗಂಡಂದಿರು, ಅವಿಧೇಯ ಸೊಸೆಯರು, ಅಡ್ಡದಾರಿ ಹಿಡಿದ ಮಕ್ಕಳು, ಮನೆಗೆ ಹಿಂದಿರುಗದ ದನಕರುಗಳು -ಇಂಥ ಸಮಸ್ಯೆಗಳಿಗೆ ಅಬ್ಬಕ್ಕ ಪರಿಹಾರ ಸೂಚಿಸುತ್ತಿದ್ದಳು. ಇಂಥ ಅಬ್ಬಕ್ಕ ಇವರ ಕಥಾಲೋಕದಲ್ಲಿ ಬೇರೆ ಬೇರೆ ರೂಪಗಳಲ್ಲಿದ್ದಾಳೆ.

ಮಗುವಾಗಿದ್ದಾಗ ಅನಂತಮೂರ್ತಿಯವರ ಕಣ್ಣಿನಲ್ಲಿ ನೀರುತರಿಸಿದ್ದ ಚಂದ... ಪದ್ಯ "ಧರಣಿಮಂಡಲ ಮಧ್ಯದೊಳಗೆ" ಇಲ್ಲಿ "ಪುಣ್ಯಕೋಟಿ ಎನ್ನುವ ಹಸು ತನ್ನ ಪ್ರೀತಿಯ ಕರುವನ್ನು ಬೀಳ್ಕೊಟ್ಟು ಹುಲಿಗೆ ತನ್ನ ಇಡೀ ದೇಹವನ್ನು ಅರ್ಪಿಸುವ ಸಂದರ್ಭ

ಬಂದಾಗ ನನ್ನ ತಂದೆ ಅತ್ತಿದ್ದರು. ನನ್ನ ತಂದೆ ಹೀಗೆ ಅತ್ತಿದ್ದನ್ನು ನಾನು ಎಂದೂ ನೋಡಿದ್ದಿಲ್ಲ" ಎಂದು ಹೇಳಿಕೊಂಡಿದ್ದಾರೆ. ಈ ಕಥೆಯ ಪರಿಣಾಮ ಗೊತ್ತಿರುವ ಓದುಗನಿಗೆ ಹುಲಿಯ ಹೆಂಗರಳು ಕಥೆಯ ಗ್ರಹಿಕೆ ಥಟ್ಟನೆ ಹೊಳೆದುಬಿಡಬಹುದು. ಮತ್ತು ಅವರ ತಾಯಿ ಹೇಳಿದ್ದ ಹುಲಿಯ ಕಥೆಯೇ ತಾಯಿ ಕಥೆಗೆ ಬೀಜವಾಗಿದೆ. ಕಾಡು ಅನಂತಮೂರ್ತಿಯವರಿಗೆ ನಿಜವೂ, ನಿಗೂಢವೂ ಹೌದು. ಹುಲಿಗಳಿದ್ದವು. ಐದು ಹೆಡೆ ಸರ್ಪವಿತ್ತು, ಅದರ ಶಿಳ್ಳನ್ನು ಕೇಳಿದವರಿದ್ದರು. ಹುತ್ತ ಬೆಳೆದು ತಪಸ್ಸಿಗೆ ಕುಳಿತ ಪುರಾಣದ ಚಿರಂಜೀವಿಗಳಿದ್ದರು, ರಾಮ, ಪಾಂಡವರು ಅಲ್ಲಿ ಅಲೆದಾಡಿದ್ದರು. ಕಾಡಿನ ಗಿಡದ ಎಲೆ ಸೀತೆಗೆ ದೀಪದ ಬತ್ತಿಯಾಗಿತ್ತು. ಇಂಥ ಕಥೆಗಳೆಲ್ಲ ಅವರಿಗೆ ಭ್ರಮೆ ವಾಸ್ತವಗಳ ಮಿಶ್ರಣವಾಗಿದ್ದುದು ಮಾತ್ರವಲ್ಲ, ದುಃಖವೂ ಹರ್ಷೋನ್ಮಾದವೂ ಅಲ್ಲಿಂದಲೇ ಬಂದದ್ದಾಗಿದೆ - ಇವತ್ತಿಗೂ ವಿಚಾರಶೀಲ ಸಂದೇಹವಾದಿ ಮನಸ್ಸಿಗೆ ಆ ನೆನಪುಗಳು ಕಾಡುತ್ತಲೇ ಇವೆ.

ಅವರ ಹೈಸ್ಕೂಲ್‌ವರೆಗಿನ ಮುಗ್ಧ ಮನಸ್ಸಿನ ಮೇಲೆ ಪರಿಣಾಮ ಬೀರಿದ ಅಧ್ಯಾತ್ಮಿಕ ವ್ಯಕ್ತಿಗಳು, ಅಧ್ಯಾಪಕರು, ಸಾರ್ವಜನಿಕರು ಅವರ ಕಥಾ ಲೋಕದಲ್ಲಿ ಆದರ್ಶ ಪಾತ್ರಗಳಾಗಿ ರೂಪ ಪಡೆದಿದ್ದಾರೆ. ಅಂಥವರಲ್ಲಿ ದೂರ್ವಾಸಪುರದ ಸಂಸ್ಕೃತ ಪಾಠಶಾಲೆಯ ಅಧ್ಯಾಪಕ ಸದಾಶಿವಭಟ್ಟರು ಒಬ್ಬರು: ಅವರು ದಿನಕ್ಕೆ ಒಂದು ಸಾರಿ ಭಿಕ್ಷೆ ಬೇಡಿ ಊಟಮಾಡುತ್ತಿದ್ದರು. ವರ್ಷಕ್ಕೆ ಒಮ್ಮೆ ಒಂದು ಜೊತೆ ವಸ್ತ್ರವನ್ನು ಮಾತ್ರ ಬೇಡಿಪಡೆದು ಉಡುತ್ತಿದ್ದರು. ದೇವಾಲಯದ ಪುಟ್ಟ ಗೂಡಿನಲ್ಲಿ ಉರಿಯುತ್ತಿದ್ದ ಹಣತೆಯ ಬೆಳಕಿನಲ್ಲಿ ತಾನಾಗಿ ಆರುವವರೆಗೂ ನಿಂತು ಓದುತ್ತಿದ್ದರು. ಅಂಥವರು ಅವರಲ್ಲಿದ್ದ ಅಂಗವಸ್ತ್ರವನ್ನು ಬೇಡಿದವನಿಗೆ ಇಲ್ಲಾ ಎನ್ನ ಬಾರದು ಎಂದು ಕೊಟ್ಟು ಇಡೀ ಚಳಿಗಾಲವನ್ನು ಬರಿಮೈಲಿ ಕಳೆದ ವ್ರತನಿಷ್ಠರು. ಕಠೋರ ಬ್ರಹ್ಮಚಾರಿ. ಶಾಕುಂತಲದ ಶೃಂಗಾರಮಯವಾದ ಭಾಗವನ್ನು ಪಾಠಮಾಡುತ್ತಿದ್ದಾಗ ಅವರಿಗೆ ಏನು ಅನ್ನಿಸುತ್ತಿತ್ತು ಎನ್ನುವುದು ಅನಂತಮೂರ್ತಿಯವರಿಗೆ ಆಗ ಸೋಜಿಗದ ಸಂಗತಿಯಾಗಿತ್ತು. ಅಂಥವರಿಗೆ ಕರೆ ಬಂದಿದೆ ಅನ್ನಿಸಿತು. ಅಶ್ವತ್ಥದ ಒಂದು ಎಲೆಯನ್ನು ಹಿಡಿದು ಕಣ್ಣು ಮುಚ್ಚಿ ಪ್ರಾರ್ಥಿಸಿ ಕೆಳಗೆ ಬೀಳಲು ಬಿಟ್ಟರು. ಅಂಗಾತ ಬಿದ್ದರೆ ಎಲ್ಲವನ್ನು ತ್ಯಜಿಸಿ ಹೊರಟು ಹೋಗುವುದು ಎಂದುಕೊಂಡು ಕಣ್ಣು ಬಿಟ್ಟು ನೋಡಿದರು. ಎಲೆ ಅಂಗಾತ ಬಿದ್ದಿತ್ತು. ಅಪ್ಪಣೆ ಕೊಟ್ಟಿತು ಅಂತ ತಿಳಿದು, ಊರಬಿಟ್ಟು ಹೊರಟುಬಿಟ್ಟರು, ಮತ್ತೆ ಕಾಣಿಸಿಕೊಂಡದ್ದು "ಕ್ಲಿಪ್ ಜಾಯಿಂಟ್" ಕಥೆಯಲ್ಲಿ "ಸುಬ್ಬಣ್ಣ ಕಕ್ಕ ಆಗಿ", ಮಠದಲ್ಲಿ ಸಂಸ್ಕೃತ ಪಾಠ ಹೇಳಿದ್ದ ಅಡ್ಡೆ ಸುಬ್ಬಣ್ಣಾಚಾರ್ಯರು, ಆರ್ಯ ಸಮಾಜಿಸ್ಟ್ ಆಗಿದ್ದ ಜ್ಞಾನೇಂದ್ರ ಪ್ರಭುಗಳು, ಕ್ರಿಶ್ಚಿಯನ್ನರಾಗಿದ್ದವರು ಹಿಂದೂ ಧರ್ಮಕ್ಕೆ ಪರಿವರ್ತಿತರಾಗಿ

ನ್ನ ಮತಾಂತರ ಎಂಬ ಪುಸ್ತಕ ಬರೆದವರು. ಇವರೆಲ್ಲ ಅನಂತಮೂರ್ತಿ ಭಾವಕೋಶದಲ್ಲಿ ಮನೆಮಾಡಿಕೊಂಡಿರುವರು. ಕಥೆಗಳಲ್ಲಿ ಪಾತ್ರ ಚಿತ್ರಗಳೂ ಆಗಿರುವರು.

ತೀರ್ಥಹಳ್ಳಿಯ ಒಬ್ಬ ಡಾಕ್ಟರು, ಜಾರ್ಜ್‌ಬರ್ನಾಡ್‌ಷಾ ಮತ್ತು ನಿರೀಶ್ವರವಾದಿ ಇಂಗರ್‌ಸಾಲ್‌ರನ್ನು ಮೂರ್ತಿಯವರಿಗೆ ಪರಿಚಯಿಸಿದವರು. ಅಗ್ರಹಾರದ ಗೊಂದಲ ವಾತಾವರಣದಲ್ಲಿ ಮಹಾತ್ಮಗಾಂಧಿ ಕೆಲವರಿಗೆ ಸಂತನಂತೆ ಕಾಣುತ್ತಿದ್ದರು. ಮತ್ತೆ ಕೆಲವರಿಗೆ ಹರಿಜನರನ್ನು ದೇವಾಲಯದೊಳಗೆ ಪ್ರವೇಶಿಸುವಂತೆ ಮಾಡಿ ವರ್ಣ ಸಂಕರಕ್ಕೆ ಕಾರಣನಾದ ಕಾಪುರುಷನಂತೆಯೂ ಕಾಣುತ್ತಿದ್ದುದು ಅನುಭವಕ್ಕೆ ಬಂದಿದೆ. ಇವರ ತಂದೆ ಭೂಮಾಲೀಕರ ಹಿತಕ್ಕಾಗಿ ಕೆಲಸ ಮಾಡುತ್ತಲೂ ಇದ್ದರು. ಬಡವರಿಗಾಗಿ ಮಿಡಿಯುತ್ತಾ, ಹರಿಜನ ಪತ್ರಿಕೆಯನ್ನು ತರಿಸಿ ಹಳ್ಳಿಯವರಿಗೆ ಓದಿ ಹೇಳುತ್ತಿದ್ದರು. ಈ ರೀತಿಯ ವಿರೋಧಾಭಾಸಗಳ ನಡುವೆ ಬೆಳೆದರು.

ಶಿಕ್ಷಣ, ಸಾಹಿತ್ಯದ ಓದು ಅನಂತಮೂರ್ತಿಯವರಿಗೆ ಎಳೆ ವಯಸ್ಸಿನಲ್ಲಿ ಒಟ್ಟೊಟ್ಟಿಗೆ ಆಗುತ್ತಿತ್ತು. ಸಿಕ್ಕ ಪುಸ್ತಕಗಳನ್ನೆಲ್ಲಾ ಓದುವ ಗೀಳಿತ್ತು. ತೀರ್ಥಹಳ್ಳಿ ಹೈಸ್ಕೂಲ್ ಲೈಬ್ರರಿ ಇವರಿಗೆ ಕಥಾ ಪ್ರಪಂಚವನ್ನು ತೆರೆದು ತೋರಿಸಿತು. ಶರತ್‌ಚಂದ್ರ ಗಳಗನಾಥ, ವೆಂಕಟಾಚಾರ್ಯ, ಕಾರಂತ, ಅ.ನ.ಕೃ, ಮೊದಲಾದವರನ್ನು ಓದಿಕೊಂಡರು. ಚೋಮನದುಡಿ ಅವರ ಮನಸ್ಸಿನಮೇಲೆ ಅತ್ಯಂತ ಗಾಢವಾದ ಪ್ರಭಾವ ಬೀರಿದ ಕೃತಿ. ಅದನ್ನು ಓದಿದಾಗ ಅವರಿಗೆ ಹರಿಜನರ ಮೇಲೆ ಅದುವರೆಗೂ ಇದ್ದ ಅಭಿಪ್ರಾಯ ಬದಲಾಯಿತು. ಕಲಿಯುಗ ಪತ್ರಿಕೆ ಓದಿ ಲೈಂಗಿಕ ಶಿಕ್ಷಣ ಪಡೆದರು. ತೀರ್ಥಹಳ್ಳಿಯಲ್ಲಿ ಕೇಳಿದ ಆಲ್ ಇಂಡಿಯಾ ಕಿಸಾನ್ ಸಭಾದ ಕಾರ್ಯದರ್ಶಿ "ರಮಾನಂದ ಮಿಶ್ರ" ಅವರ ಭಾಷಣ ಸಮಾಜವಾದವನ್ನು ಮೊದಲು ಪರಿಚಯಮಾಡಿಕೊಟ್ಟಿತು.

ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗಲೆ ಅನಂತಮೂರ್ತಿ ಅಗ್ರಹಾರದ ಸ್ನೇಹಿತರೊಂದಿಗೆ "ತರಂಗಿಣಿ" ಎಂಬ ಕೈಬರಹ ಪತ್ರಿಕೆಯನ್ನು ಪ್ರಕಟಿಸುತ್ತಿದ್ದರು. ಅದರಲ್ಲಿ ಅವರು ಆ ವಯಸ್ಸಿನಲ್ಲಿ ಬರೆದ ಕಥೆಯೊಂದು ಪ್ರಕಟವಾಗಿತ್ತು. ಕಥೆಯನ್ನು ಹಿರಿಯರಿಗೆ ಗೊತ್ತಾಗಬಾರದೆಂದು ಕ್ಲಿಷ್ಟ ರೂಪಕದಲ್ಲಿ ಬರೆದಿದ್ದರು. ಕಾರಣ ಅದೊಂದು ಪ್ರಣಯ ಪ್ರಸಂಗದ ಕಥೆಯಾಗಿತ್ತು. ಹಳ್ಳಿಗೆ ಪ್ಲೇಗ್ ಮಾರಿ ಬಡಿದು ಹರಿಜನರು ಸಾಯುತ್ತಿದ್ದಾಗ, ಕೇರಿಯ ಸುಂದರ ಹುಡುಗಿಯೊಬ್ಬಳು ಕೇರಿಯನ್ನು ತೊರೆದು ಓಡಿಹೋಗಿದ್ದಳು. ಇದರ ರಹಸ್ಯ ಲೇಖಕರಿಗೆ ಮಾತ್ರ ಗೊತ್ತಿತ್ತು. ಸೈನ್ಯದಲ್ಲಿ ಕೆಲಸಮಾಡಿ ಊರಿಗೆ ಮರಳಿದ್ದ ಅಗ್ರಹಾರದ ಯುವಕನೊಬ್ಬ ಅವಳೊಂದಿಗೆ ಗುಪ್ತ ಸಂಬಂಧವನ್ನು ಇಟ್ಟುಕೊಂಡಿದ್ದ, ಮತ್ಸ್ಯಗಂಧಿಯಂತೆ ಕಾಣುತ್ತಿದ್ದ ಈ ಕಪ್ಪು ಸುಂದರಿ ಎಲ್ಲರಂತೆ ತನ್ನ ಪಾಡೆಂದು

ಸಾಯಲು ಒಲ್ಲದೆ ಓಡಿಹೋಗಿದ್ದಕ್ಕೆ ಕಾರಣ ಅವಳು ಸ್ಪರ್ಶಿತಳಾಗಿದ್ದು ಮತ್ತು ಆ ಸ್ಪರ್ಶದಿಂದ ಅವಳು ಜಾಗ್ರತಗೊಂಡಿದ್ದಳು, ಎಂದು ಭಾವಿಸಿ ಕತೆ ಹೆಣದಿದ್ರು, ನಂತರದಲ್ಲಿ ಮೂವತ್ತುವಯಸ್ಸಿನ ಅನಂತಮೂರ್ತಿ ಇಂಗ್ಲೆಂಡಿನಲ್ಲಿ ಸ್ನಾತಕೋತರ ಪದವಿಗೆ ಓದುತ್ತಿದ್ದಾಗ "ಸೆವಂತ್ ಸೀಲ್" ಸಿನಿಮಾ ನೋಡಿದರು. ಅದನ್ನು ಆಗ ಅವರು ಅರ್ಥಮಾಡಿಕೊಂಡಂತೆ: ಐರೋಪ್ಯನೊಬ್ಬ ತನ್ನ ಮಧ್ಯ ಯುಗವನ್ನು ಪುಸ್ತಕಗಳ ಮುಖಾಂತರ ತಿಳಿದುಕೊಳ್ಳಬೇಕಾಗುತ್ತದೆ. "ಐರೋಪ್ಯರ ಇತಿಹಾಸಕಾಲ ಸರಳ ರೇಖಾತ್ಮಕವಾಗಿ ಬೆಳದದ್ದು. ಆದರೆ ಭಾರತೀಯನಾದವನಿಗೆ ಎಲ್ಲ ಕಾಲವೂ ಒಂದೇ ಕಾಲದಲ್ಲಿ ಸಹಬಾಳ್ವೆ ಮಾಡುತ್ತದೆ ಎಂದು ಹೊಳೆದದ್ದೇ; ಮೇಲೆ ಹೇಳಿದ ಹೈಸ್ಕೂಲ್ ದಿನಗಳಲ್ಲಿ ಬರೆದಿದ್ದ ಕಥೆಯನ್ನು ಸಂಸ್ಕಾರ ಕಾದಂಬರಿ ಮಾಡಿ ಬರೆದರು. ಸವೆನ್ತ್ ಸೀಲ್ ನ ಜಿಪ್ಸಿ ಮಾಲೇರ ಪುಟ್ಟನಾಗಿ ಬಂದು ಕಾದಂಬರಿಯನ್ನು ಬರೆದೆ" ಎಂಬುದನ್ನು ದಾಖಲಿಸಿದ್ದಾರೆ. ಮಲೆನಾಡು ಗ್ರಾಮೀಣ ಬದುಕಿನ ಅನುಭವವನ್ನು ಬಾಲ್ಯದಲ್ಲಿ ದಟ್ಟವಾಗಿ ಮೈಗೂಡಿಸಿಕೊಂಡ ಅನಂತಮೂರ್ತಿಯವರು ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಶಿವಮೊಗ್ಗೆಗೆ ಬಂದರು. ನಂತರ ಮೈಸೂರಿನ ಕಡೆಗೆ ಪ್ರಯಾಣ ಬೆಳಸಿವರು. ಶಿವಮೊಗ್ಗೆಯ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಕಾಗೋಡು ರೈತ ಚಳುವಳಿ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಗೋಪಾಲಗೌಡರ ಸಮೀಪಕ್ಕೆ ಬಂದರು. ಡಾ. ರಾಮಮನೋಹರ ಲೋಹಿಯಾ, ಜಯಪ್ರಕಾಶ್ ನಾರಾಯಣ್ ಅವರುಗಳ ವಿಚಾರಧಾರೆಗೆ ತೆರೆದುಕೊಂಡರು. ಸಮಾಜವಾದಿ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿದ್ದರು. ರೈತ ಸಮಸ್ಯೆ ಬಗ್ಗೆ ಒಂದು ಚಿಕ್ಕ ಪುಸ್ತಕವನ್ನು ಬರೆದು ಪ್ರಕಟಿಸಿ ಒಂದಾಣೆ ಬೆಲೆಗೆ ಶಿವಮೊಗ್ಗೆಯ ಬೀದಿಗಳಲ್ಲಿ ಮಾರಿದ್ದರು. ಸಮಾನವಾದ ಸಾಹಿತ್ಯ ಆಸಕ್ತಿಯಿಂದ ಶಾಂತವೇರಿ ಗೋಪಾಲಗೌಡರು ಅನಂತಮೂರ್ತಿಯವರಿಗೆ ಪ್ರಿಯರಾಗಿದ್ದರು. ಕುಮಾರವ್ಯಾಸ, ಲಕ್ಷ್ಮೀಶ, ಬೇಂದ್ರೆ, ಕುವೆಂಪು, ಅಡಿಗ, ಇವರೆಲ್ಲರ ಕಾವ್ಯದಲ್ಲಿ ಗೌಡರಿಗೆ ಅಪಾರವಾದ ಆಸಕ್ತಿ ಇತ್ತು. ಕಾವ್ಯವನ್ನು ಭಾವಪೂರ್ಣವಾಗಿ ಪಠಿಸುತ್ತಿದ್ದರು, ಹಾಡುತ್ತಿದ್ದರು. ಬೇಂದ್ರೆಯವರ ಅನ್ನದೇವರು, ಕುರುಡು ಕಾಂಚಾಣ, ಕುವೆಂಪುರವರ ನೀನಂದು ಕನಕ ರಥವನು ತಂದು ಕವಿತೆಗಳ ಅನುಭವವನ್ನು ಪಡೆದರು. ಸಮಾಜವಾದಿ ರಾಜಕಾರಣವನ್ನು ಪರಿಚಯಿಸಿಕೊಂಡರು.

೧೯೫೦ರ ಹೊತ್ತಿಗೆ ಮೈಸೂರಿಗೆ ಬಂದರು. ಬಿ.ಎ. ಆನರ್ಸ್ ವಿದ್ಯಾರ್ಥಿಯಾದರು. ಉಪನ್ಯಾಸಕರ ಪಾಠ, ಸಹಪಾಠಿಗಳೊಂದಿಗೆ ಚರ್ಚೆ, ವಾದ-ವಾಗ್ವಾದಗಳಲ್ಲಿ ತೊಡಗಿಕೊಂಡರು. ಕೆ.ವಿ. ಸುಬ್ಬಣ್ಣನವರ ಸ್ನೇಹದಲ್ಲಿ ಹಸಿವು ಕಾಡದ ದಿನಗಳನ್ನು ಕಳೆದರು. ಕಂಪನಿ ನಾಟಕಗಳನ್ನು ನೋಡುತ್ತಾ ಬುದ್ಧಿವಂತ ಸುಬ್ಬಣ್ಣನವರನ್ನು

ಮಾರ್ಗದರ್ಶಿಯೆಂದು ತಿಳಿದು ಅನುಸರಿಸಿದರು. ವಿಸ್ತಾರಗೊಳ್ಳುತ್ತಿದ್ದ ಅನುಭವ ಲೋಕದಿಂದ ಸಾಹಿತ್ಯ- ಸಂಸ್ಕೃತಿ- ಕಥನದ ಕಡೆಗೆ ಹೆಜ್ಜೆ ಹಾಕಲು ಆರಂಭಿಸಿದರು. ಗೋಪಾಲಕೃಷ್ಣ ಅಡಿಗ, ಸದಾಶಿವ, ಬಿಳಿಗಿರಿ ಇವರುಗಳ ಒಡನಾಟದಲ್ಲಿದ್ದರು. ನಿರಂಜನರ ಸ್ನೇಹವು ಒದಗಿತ್ತು. ರೋಮ್ಯಾಂಟಿಕ್ ಕವಿಗಳನ್ನು ಕುರಿತು ಒಂದಿಷ್ಟು ಬರೆದಿದ್ದರು. ಪ್ರಗತಿಶೀಲರ ಕಡೆಗೆ ಒಲವಿತ್ತು. ಬರೆಯುವ ಹವಣಿಕೆಯಲ್ಲಿ ಪ್ರಗತಿಶೀಲ ಲೇಖಕರಂತೆ ವೇಶ್ಯೆಯರು ವಾಸಮಾಡುತ್ತಿದ್ದ ಮೈಸೂರಿನ ಗಲ್ಲಿಗಳಲ್ಲಿ ಓಡಾಡಿಯೂ ಆಗಿತ್ತು. ಆ ಸಂದರ್ಭದಲ್ಲಿ ಅನಿರೀಕ್ಷಿತ ಒಂದು ಕಾವ್ಯಾನುಭವ ಅವರನ್ನು ನವ್ಯದ ಕಡೆಗೆ ತಿರುಗಿಸಿತು. ಅನಂತಮೂರ್ತಿಯವರು ದ್ವೇಶಿಸುವೆ ಎಂದುಕೊಂಡಿದ್ದ ಎಲಿಯಟ್‌ನ ಪ್ರಿಲ್ಯೂಡ್ಸ್ ಪದ್ಯವನ್ನು ಒಂದು ದಿನ ಓದುತ್ತಿದ್ದಾಗ ಈ ಸಾಲುಗಳು:

Winter evening settles down

With smell of streak in passage ways six O' clock

ಅವರ ಎಲ್ಲ ಧೋರಣೆಗಳನ್ನು ಬದಿಗೆ ಹಾಕಿ ಹಿಡಿದುಬಿಟ್ಟವು. ನವ್ಯದ ಕಡೆಗೆ ತಿರುಗಿಬಟ್ಟರು. ಅಡಿಗರು ಕನ್ನಡಿಯಾದರು.

* * *

ಸ್ವಾತಂತ್ರ್ಯ ಬರುವ ಹೊತ್ತಿಗಾಗಲೇ ಕನ್ನಡದಲ್ಲಿ ನವೋದಯ, ಪ್ರಗತಿಶೀಲ ಮನೋಧರ್ಮ ಕಥೆ ಕಾದಂಬರಿಗಳಲ್ಲಿ ಗಟ್ಟಿಯಾಗಿ ನೆಲೆಯೂರಿದ್ದವು. ಮಾಸ್ತಿ, ಕುವೆಂಪು, ಆನಂದ, ಕಾರಂತ, ಅನಕೃ, ತರಾಸು, ಕಟ್ಟಿಮನಿ, ಚದುರಂಗ, ನಿರಂಜನ ಮುಂತಾದವರ ಕಥೆಗಳು-ಕಾದಂಬರಿಗಳು ಪ್ರಚಲಿತವಾಗಿದ್ದವು. ಗಾಂಧಿ ಯುಗದ ಆದರ್ಶಗಳು ನಿರೂಪಿತವಾಗಿದ್ದವು. ಸುಮಾರು ಐವತ್ತರ ಹೊತ್ತಿಗೆ ವಾಸ್ತವವನ್ನು ಕಂಡರಿಸುವ ಕಥನ ಕಲೆ ಆರಂಭವಾಯಿತು. ಪ್ರತಿಮಾ ವಿಧಾನ ಅಡಿಗರ ಕಾವ್ಯಗಳಲ್ಲಿ ಗರಿಗೆದರಿಕೊಳ್ಳುತ್ತಿತ್ತು. ಪರಂಪರೆಗೆ ಎದುರಾದ ಆಧುನಿಕತೆ ಸಂಘರ್ಷದಲ್ಲಿ ಉಪಕ್ರಮಿಸಿತು. ಅಡಿಗರ ಸುತ್ತ ತರುಣ ಪೀಳಿಗೆಯ ಲೇಖಕರಾದ ಸದಾಶಿವ, ಅನಂತಮೂರ್ತಿ, ಶಾಂತಿನಾಥದೇಸಾಯಿ, ಚಿತ್ತಾಲ, ಲಂಕೇಶ್, ತೇಜಸ್ವಿ ಮೊದಲಾದವರು ಕಥನ ಕಲೆಯಲ್ಲಿ ತೊಡಗಿಕೊಂಡಿದ್ದರು. ಸಂಕ್ರಮಣ ಕಾಲದ ಕಥೆ-ಕಾದಂಬರಿಗಳು ಕನ್ನಡದ ಕಣಜವನ್ನು ತುಂಬುತ್ತಿದ್ದವು.

ವಸಾಹತುಶಾಹಿ ಆಲೋಚನಕ್ರಮ ಇನ್ನೂ ದಟ್ಟವಾಗಿದ್ದ ಕಾಲ. ಸೆಕ್ಯುಲರಿಸಂ ಮತ್ತು ಸಮಾನತೆಯ ಪರಿಕಲ್ಪನೆ ಸಾಕಾರಗೊಳ್ಳಲು ಉಪಕ್ರಮಿಸಿತ್ತು. ಗ್ರಾಮೀಣ ಪ್ರದೇಶದ ಯುವಕರು ವಿದ್ಯಾಭ್ಯಾಸಕ್ಕಾಗಿ, ನೌಕರಿಗಾಗಿ, ಹೊಸಹೊಸ ಉದ್ಯಮಕ್ಕಾಗಿ ನಗರ ಪಟ್ಟಣಗಳತ್ತ ವಲಸೆ ಹೊರಟಿದ್ದರು. ಕೈಗಾರಿಕೆಗಳು ಬೆಳೆಯುತ್ತಿದ್ದವು. ಆಧುನಿಕ

ಜೀವನ ಕ್ರಮವೊಂದು ರೂಪುಗೊಳ್ಳುತ್ತಿತ್ತು. ಪ್ರಗತಿಪರ ಚಿಂತನೆ ನಮ್ಮ ಸಮಾಜವನ್ನು ಚಲನಶೀಲವಾಗಿಸಲು ಹವಣಿಸುತ್ತಿತ್ತು. ವ್ಯಕ್ತಿ ಮತ್ತು ಸಮಾಜದ ನಡುವೆ ಸಂಘರ್ಷವೇರ್ಪಟ್ಟಿತ್ತು. ಕೌಟುಂಬಿಕ ವಿಘಟನೆ ಆರಂಭವಾಗಿತ್ತು. ಆಧುನಿಕ ವೈಜ್ಞಾನಿಕ ಮನೋಭಾವ ಯುವಕರಲ್ಲಿ ಬೆಳೆಯುತ್ತಿತ್ತು. ಆದರೆ ನೆಹರೂ ರಾಜಕಾರಣದ ಪ್ರಗತಿಯ ಪರಿಕಲ್ಪನೆ ನಿರಾಶಾದಾಯಕವಾಗಿತ್ತು. ಪರಂಪರೆಯೊಂದಿಗೆ ಪ್ರಗತಿಪರ ಆಲೋಚನೆಗಳ ಸಂಘರ್ಷವೇರ್ಪಟ್ಟು ಆಧುನಿಕ ಚಿಂತನೆಗಳು ಹರಳುಗಟ್ಟುತ್ತಿದ್ದ ಕಾಲವಾಗಿತ್ತು.

ಇಂಥ ಸಂದರ್ಭದಲ್ಲಿ ನವ್ಯ ಮನೋಧರ್ಮ ಕಾವ್ಯ, ಕಥೆ, ಕಾದಂಬರಿ, ನಾಟಕ ರೂಪಗಳಲ್ಲಿ ವೈದುಂಬಿಕೊಳ್ಳುತ್ತಿತ್ತು. ಕಥೆಗಾರರಾಗಿ ಅನಂತಮೂರ್ತಿಯವರು ಮುಂಚೂಣಿಯಲ್ಲಿದ್ದರು. ಮಲೆನಾಡು ಪ್ರಾಂತ್ಯದ ಪರಂಪರಾನುಗತ ಬದುಕಿನ ದ್ರವ್ಯದೊಂದಿಗೆ ರೂಢಿಸಿಕೊಳ್ಳುತ್ತಿದ್ದ ಕಥನ ಕಲೆಯಿಂದ ವಿಸ್ತಾರವಾದ ಜಗತ್ತಿಗೆ ಜಿಗಿಯಲು ಸಿದ್ಧವಾದರು. ವಿಸ್ತಾರವಾದ ಅನುಭವ, ಓದಿನ ಹರವು, ಆಧುನಿಕ ಸಂವೇದನೆಗೆ ತಕ್ಕಂತೆ ಭಾಷೆಯನ್ನು ದುಡಿಸಿಕೊಳ್ಳುವ ಕಲೆಗಾರಿಕೆ, ಗ್ರಾಮೀಣ ಬದುಕಿನಿಂದ ಪಡೆದ ರೂಪಕ ಸಾಮ್ರಾಜ್ಯ; ಪರಂಪರೆ ಮತ್ತು ಆಧುನಿಕತೆಯನ್ನು ಮುಖಾಮುಖಿಯಾಗಿಸುವ ಸಾಮರ್ಥ್ಯ, ಕಾಲದೊಂದಿಗೆ ಹೊಸ ಹೊಸತಾಗುವ ಅಭಿವ್ಯಕ್ತಿ ಮಾರ್ಗ, ಪ್ರಾಮಾಣಿಕತೆ ಮತ್ತು ಗಂಭೀರವಾದ ಆಲೋಚನೆ, ಈ ಎಲ್ಲವೂ ಒಟ್ಟುಗೂಡಿ ಸೃಷ್ಟಿಯಾಗುತ್ತಿದ್ದ ಅನಂತಮೂರ್ತಿಯವರ ಕಥೆಗಳು; ಓದುಗರಿಗೆ ಆಕರ್ಷಣೀಯವಾಗಿಯೂ, ವಾಗ್ವಾದಕ್ಕೆ ಗ್ರಾಸವಾಗಿಯೂ, ಪ್ರೀತಿ- ದ್ವೇಷ ವಿಮರ್ಶೆಗೆ ವಸ್ತುವಾಗಿ ಸೃಷ್ಟಿಯಾಗುತ್ತಲೇ ಇವೆ.

ಐವತ್ತು ವರ್ಷಗಳಲ್ಲಿ ಐದು ಕಥಾ ಸಂಕಲನಗಳು, ಇತ್ತೀಚಿನ ಒಂದು ಬಿಡಿ ಕಥೆಯೂ ಸೇರಿ ಒಟ್ಟು ಇಪ್ಪತ್ತೇಳು ಕಥೆಗಳು, ಐದು ಕಾದಂಬರಿಗಳು, ಮೂರು ಕವನ ಸಂಕಲನಗಳು, ಒಂದು ನಾಟಕ, ಐದು ಸಂಸ್ಕೃತಿ-ಸಾಹಿತ್ಯ ವಿಮರ್ಶಾ ಲೇಖನಗಳ ಸಂಗ್ರಹ, ಒಂದು ಭಾಷಾಂತರ ಮತ್ತು ಒಂದು ಸಂಪಾದಿತ ಕೃತಿ ಪ್ರಕಟವಾಗಿವೆ.

ಅನಂತಮೂರ್ತಿಯವರ ನೆನಪಿನ ಬುತ್ತಿ ಬಿಚ್ಚಿಕೊಂಡಂತೆಲ್ಲಾ ಅವರ ಕಥನ ಕಲೆ ಪ್ರಜ್ವಲಿಸುತ್ತಾ ಬಂದಿದೆ. ಅವರ ಕಥನ ಶಕ್ತಿಯನ್ನು ಕುರಿತು ಕೀರ್ತಿನಾಥ ಕುರ್ತಕೋಟಿಯವರು: "ಅವರ ಪ್ರತಿಭೆಯೆಂದರೆ ಬೇಡಿದ ವರವನ್ನು ನೀಡುವ ಕಾಮರೂಪಿಯಾದ ಅಪ್ಸರೆ" ಎಂದು ಶ್ಲಾಘಿಸಿದ್ದಾರೆ. ಈ ಅಪ್ಸರೆಯ ವರದಿಂದ ಮೊದಲ ಕಥಾ ಸಂಕಲನವಾದ ಎಂದೆಂದೂ ಮುಗಿಯದ ಕಥೆ (೧೯೫೫) ಪ್ರಕಟಗೊಂಡು ಮುಂದುವರಿಯುತ್ತಾ ಇದೆ.

"ಎಂದೆಂದೂ ಮುಗಿಯದ ಕಥೆ"ಯಲ್ಲಿ ಅಜ್ಜಿ ಕಥೆ ಹೇಳುವುದು ಮೊಮ್ಮಕ್ಕಳು ಕೇಳಿಸಿಕೊಳ್ಳುವ ಪರಿಪಾಠವನ್ನು ಈ ಕಥೆಯ ಮೂಲಕ ಲೋಕ ಪ್ರತಿಮೆಯಾಗಿಸಿದ್ದಾರೆ. ಲೋಕದಲ್ಲಿನ ಮನುಷ್ಯ, ಪ್ರಾಣಿ, ಸಸ್ಯಪ್ರಪಂಚವನ್ನು ವಿಸ್ತಾರವಾಗಿ ಒಳಗೊಳ್ಳುವ ವಿಶ್ವ ವ್ಯಾಪಾರ ಕಥೆಯಲ್ಲಿ ಅಂತರ್ಗತವಾಗಿದೆ. ಅಜ್ಜನಿಗೆ ಅನ್ನ ಕೊಟ್ಟ ಭೂಮಿಯೇ ಮೊಮ್ಮಗನಿಗೂ ದಯಪಾಲಿಸುತ್ತಾ ಜೀವದ ಆಟ ನಡೆಯುತ್ತಿದೆ. ಅದೇದಾಳ, "ಅದೇ ಹಾಸು, ಅದೇ ಕಾಯಿಗಳು, ಮುದುಕನ ಅಜ್ಜಿ, ಮತ್ತೆ ಆ ಮುದುಕ, ಆಮೇಲೆ ಅವನ ಮಗ, ಈಗ ಮೊಮ್ಮಗ ಎಲ್ಲರೂ ಅವುಗಳಲ್ಲೇ ತಮ್ಮ ಪ್ರಯೋಗದ ಆಟ ಆಡಿದ್ದಾರೆ. ಜೀವನ ಪ್ರವಾಹ ನಿರ್ರ್ಗಳವಾಗಿ ಹರಿಯುತ್ತಿದೆ. ಇದು ಎಂದೆಂದೂ ಮುಗಿಯುವುದಿಲ್ಲ. ಎಲ್ಲಾದರೂ ಮುಗಿದರೆ?.... ಅವನ ಅಜ್ಜಿ ಹೇಳಿರಲಿಲ್ಲವೇ ಏನಾಗುತ್ತೆ ಅಂತ?... ಆಗ ಬೆಳಕಾಗಲ್ಲ- ಕತ್ತಲಾಗಲ್ಲ- ಮರದಲ್ಲಿ ಹಣ್ಣಾಗಲ್ಲ- ಗಿಡದಲ್ಲಿ ಹೂವಾಗಲ್ಲ...". ಹೀಗೆ ಬದುಕಿನ ಆಟವನ್ನು, ಅದರ ನಿರಂತರತೆಯನ್ನು ಸೂಚಿಸುವ ಈ ಕಥೆ ಅನಂತಮೂರ್ತಿಯವರ ಕಥಾ ಜಗತ್ತಿಗೆ ಪ್ರಸ್ತಾವನೆ ಇದ್ದಂತಿದೆ. ಇಂಥ ಮುಗಿಯದ ಜೀವನ ಆಟವನ್ನು, ಬೇರೆ ಬೇರೆ ಮಗ್ಗಲುಗಳಿಂದ ಕಾಣುವ ಕಾಣಿಸುವ ಅವರ ಕಥಾ ಜಗತ್ತು ಕೂಡ "ಎಂದೆಂದೂ ಮುಗಿಯದ ಕಥೆ"ಯೇ ಆಗಿರುವುದು.

ಅನಂತಮೂರ್ತಿಯವರ ಸೃಜನಶೀಲ ಮನಸ್ಸಿನ ಮುಖ್ಯ ಕಾಳಜಿಗಳೆಂದರೆ: ಮನುಷ್ಯನ ಭಾವಪೂರ್ಣ ಜೀವನದ ಸುಖ-ದುಃಖ ಸಂದರ್ಭಗಳು, ಕಾಮ-ಪ್ರೇಮ-ವಾತ್ಸಲ್ಯಗಳ ನಡುವಿನ ಕ್ರೌರ್ಯ, ತುಮುಲದಿಂದ ಉಂಟಾಗುವ ಏರುಪೇರುಗಳು, ಪ್ರಕೃತಿ ಮತ್ತು ಮನುಷ್ಯರ ನಡುವಿನ ಸಂಬಂಧ ಅದರಿಂದ ಉಂಟಾಗುವ ಒಳಿತು ಕೆಡುಕುಗಳು. ಪರಂಪರೆ ಮತ್ತು ಆಧುನಿಕತೆಯ ಸಂಘರ್ಷ, ಮತ್ತು ಪ್ರಗತಿಯ ಮುಖಾಮುಖಿ, ಇವುಗಳಿಂದ ಉಂಟಾಗುವ ಪರಿಣಾಮ ಅದರ ವಿಶ್ಲೇಷಣೆ. ಸಾಮಾಜಿಕ- ರಾಜಕೀಯ ಸಂಘರ್ಷಣೆಯಿಂದ ಉಂಟಾಗುವ ಸಂಕಟ ಸ್ಥಿತಿ. ಇವುಗಳ ನಿರ್ವಹಣೆಯಲ್ಲಿ ಬುದ್ಧಿ, ಚಿಂತನೆ ಮತ್ತು ಕುಶಲತೆ ಅವರನ್ನು ಅತ್ಯಂತಯಶಸ್ವಿ ಕಥೆಗಾರರನ್ನಾಗಿಸಿದೆ.

ಎಂದೆಂದೂ ಮುಗಿಯದ ಕಥೆ ಸಂಕಲನದ ಪ್ರಧಾನ ಎರಡು ಕಥೆಗಳು "ತಾಯಿ" ಮತ್ತು "ಹುಲಿಯ ಹೆಂಗರಳು". ಸಂಕಲನದ ಮುನ್ನುಡಿಯಲ್ಲಿ ಗೋಪಾಲಕೃಷ್ಣ ಅಡಿಗರು: ಈ ಎರಡೂ ಕಥೆಗಳು ತಂತ್ರದ ದೃಷ್ಟಿಯಿಂದ- ಇವು ಅತ್ಯುತ್ತಮ ಕಥೆಗಳು ಎನ್ನಬಹುದು. ಅವು ಈ ಸಂಕಲನದಲ್ಲಿ ಮಾತ್ರವಲ್ಲ ನಮ್ಮ ಕಥಾಲೋಕದಲ್ಲೇ ಎರಡು "ಉಜ್ವಲ ರತ್ನಗಳು" ಎಂದು ಹೇಳಿದ್ದಾರೆ. ತಾಯಿ ಕಥೆಯಲ್ಲಿ ಒಬ್ಬ ತಾಯಿ ಇನ್ನೊಬ್ಬ ತಾಯಿಯ ಮಗುವನ್ನು ಕತ್ತಲಿನಲ್ಲಿ ಹೊರಕ್ಕೆ ತಳ್ಳಿ ಬಾಗಿಲು ಹಾಕಿಕೊಳ್ಳುವುದು, ಆ ಮಗು ಹುಲಿಗೆ

ತುತ್ತಾಗಲು ಬಿಟ್ಟ ಕ್ರೌರ್ಯ. ಈ ಕ್ರೂರ ನಡವಳಿಕೆಯ ಕಥೆಯನ್ನು ತಾಯಿ ಅಬ್ಬಕ್ಕ ತನ್ನ ಮಗ ಶೀನುವಿಗೆ ಹೇಳುತ್ತಾ ನಿದ್ದೆ ಮಾಡಿಸುತ್ತಿರುವುದು. ಗಂಡ ಸತ್ತಮೇಲೆ ಕೂಡಿಕೆ ಮಾಡಿಕೊಂಡ ಅಬ್ಬಕ್ಕನನ್ನು ಹಿರಿಯ ಮಗ ಬಿಟ್ಟು ಹೋಗುವುದು-ತಾಯಿ ಮಕ್ಕಳ ಸಂಬಂಧ, ನೂತನ ದಾಂಪತ್ಯದ ಸುಖ ಚಿತ್ರಣಗಳಿವೆ. ಮಗನನ್ನು ಕಳೆದುಕೊಂಡ ತಾಯಿಯ ಕಥೆ ಅವಳ ಕಾಮ ಜೀವನದ ಕಥೆಯೂ ಆಗಿಬಿಡುತ್ತದೆ. ಹುಲಿಯ ಹೆಂಗರಳು ಕಥೆಯಲ್ಲಿ ಸಿದ್ದನ ಹೆಂಡತಿ ಶೀನಶೆಟ್ಟಿಯೊಂದಿಗೆ ಅನೈತಿಕ ಸಂಬಂಧ ಹೊಂದಿರುವುದು. ರೋಸಿಹೋಗಿ ಸಿದ್ದ ಹೆಂಡತಿಯನ್ನು ಕೊಂದು, ಶತ್ರು ಶೀನಶೆಟ್ಟಿಯನ್ನು ಮುಗಿಸಿಬಿಡಲು ಮುಂದಾಗುತ್ತಾನೆ. ನದಿಯ ದಡಕ್ಕೆ ಬಂದಾಗ, ತುಂಬಿ ಭೋರ್ಗರೆದು ಹರಿಯುತ್ತಿರುವ ತುಂಗೆಯಲ್ಲಿ ತೇಲಿ ಹೋಗುತ್ತಿರುವ ವ್ಯಕ್ತಿಯನ್ನು ಉಳಿಸಲು ಸಿದ್ದ ಪ್ರವಾಹದಲ್ಲಿ ಹುಟ್ಟು ಹಿಡಿದು, ದೋಣಿಯನ್ನು ನಿಯಂತ್ರಿಸುತ್ತ, ಸೆಣಸುತ್ತ ಬಂಡೆಯ ಸಮೀಪಕ್ಕೆ ಬಂದಾಗ, ತನ್ನ ಶತ್ರುವೇ ಆದ ಶೀನಪ್ಪಶೆಟ್ಟಿಯೇ ಆ ತೇಲಿಹೋಗುತ್ತಿದ್ದ ಬಡಪಾಯಿ ಎಂಬುದು ತಿಳಿದಾಗ, ಕೊಲ್ಲಬೇಕೆಂದಿದ್ದ ಶತ್ರುವನ್ನು ಕಾಪಾಡಬೇಕಾದ ಸನ್ನಿವೇಶ. ಕೊಲ್ಲಲು ಹಿಡಿದು ಬಂದಿದ್ದ ಕತ್ತಿಯೂ ಪ್ರವಾಹದಲ್ಲಿ ಬಿದ್ದು ಹೋಗಿದೆ. ಸಿದ್ದನ ಸಿಟ್ಟು, ಸೇಡು ಕರುಣೆಯಾಗಿ ಮಾರ್ಪಡುವ ಸನ್ನಿವೇಶ, ಅವನ ಮನಸ್ಸಿನ ತುಮುಲ ಸಂಕೇತಗಳ ಮೂಲಕ ಮಾರ್ಮಿಕವಾಗಿ ಮೂಡಿಬಂದಿದೆ. ಹುಲಿಯ ಹೆಂಗರಳು ಸಿದ್ದನ ಅಂತಃಕರಣಕ್ಕೆ ಹಿಡಿದ ರೂಪಕವಾಗಿದೆ. ಭಾವಾಭಿನಯದಿಂದ ಚಿತ್ರಿತವಾಗಿರುವ ಪಾತ್ರ ಮತ್ತು ಸನ್ನಿವೇಶಗಳು ಓದುಗರನ್ನು ಹಿಡಿದು ನಿಲ್ಲಿಸುತ್ತವೆ. ಇವೆರಡೂ ಅನಂತಮೂರ್ತಿಯವರ ಆರಂಭದ ಅತ್ಯುತ್ತಮ ಕಥೆಗಳು. ಅಡಿಗರು ನುಡಿದಂತೆ ನಮ್ಮ ಕಥಾಲೋಕದಲ್ಲೇ ಎರಡು ಉಜ್ವಲ ರತ್ನಗಳು ಆಗಿರುವುದು ಆ ಕಾಲದಲ್ಲಿ ಮಾತ್ರ, ಏಕೆಂದರೆ ಮುಂದೆ, ಇದೇ ಲೇಖಕರೆ ಇದಕ್ಕೆ ಇಮ್ಮಡಿಯಾಗಿ ಪ್ರಜ್ವಲಿಸುವ ಕಥೆ "ಸೂರ್ಯನ ಕುದುರೆ"ಯನ್ನು ಬರೆದಿದ್ದಾರೆ.

ಮನುಷ್ಯನ ಭಾವಪೂರ್ಣ ಜೀವನಾನುಭವದ ಕಥೆಗಳಲ್ಲಿ ನವಿಲುಗಳು ಒಂದು. ನಿರೂಪಕನ ಅಮ್ಮ ಕಾಯಿಲೆಯಿಂದ ಒಣಗಿದ ಗಂಜಿ ಬಟ್ಟಲು. ಔಷಧಿ ಶೀಷೆಗಳ ಮಧ್ಯೆ ಸದಾ ಮಲಗಿರುವಳು. ಅಪ್ಪಯ್ಯ ಜಾನಕಮ್ಮನ ಜೊತೆ ಲೋಲುಪನಾಗಿರುವಂಥವನು. ಒಂದು ದಿವಸ, ಅಪ್ಪ ಜಾನಕಮ್ಮನ ಮನೇಲಿ ಬೆತ್ತಲೆ ಸ್ನಾನ ಮಾಡುತ್ತಿದ್ದದ್ದನ್ನು ಜಾನಕಮ್ಮ ಅಪ್ಪನ ಬೆನ್ನಿಗೆ ಸೀಗೆ ತಿಕ್ಕತಾ ಇದ್ದದ್ದನ್ನು ನೋಡಿದ್ದ. ಜಾನಕಮ್ಮ ರವೆ ಉಂಡೆ, ಕೋಡಬಳೆ ಕೊಟ್ಟು "ಅಪ್ಪಯ್ಯಸ್ನಾನ ಮಾಡ್ತಿದ್ರು ಅಂತ ಅಮ್ಮನಿಗೆ ಹೇಳಬೇಡ- ಅವರಿಗೆ ಜ್ವರ ಜಾಸ್ತಿ ಆಗುತ್ತೆ." ಅಂತ ಹೇಳಿದ್ದು. ಈಗ ಅಮ್ಮನ ಶ್ರಾದ್ಧಕ್ಕೆ ಹಳ್ಳಿಗೆ ಬಂದವನಿಗೆ ನೆನಪಾಗುವುದು. ನವಿಲುಕಲ್ಲು ಗುಡ್ಡದಕಡೆ

ಬಂದವನಿಗೆ ಅಪ್ಪ-ಮಗ ಇಬ್ಬರ ಕಾಮುಕ ಜೀವನದ ಸುರುಳಿ ಬಿಚ್ಚಿಕೊಳ್ಳುತ್ತದೆ. ತಾನೂ ಈಗ ಪವಿತ್ರವಾಗಿ ಉಳಿದಿಲ್ಲಾ ಎನ್ನುವ ಯಾತನೆ ನಿಜ ಎಂಬುದಾಗಿ ಹೇಳಿಕೊಳ್ಳುವ ನಿರೂಪಕನ ಭಾವ ತುಮುಲ ಸ್ಥಿತಿಯ ಸನ್ನಿವೇಶ ಕಾವ್ಯಾತ್ಮಕವಾಗಿದೆ. ಕಾರ್ತಿಕ ಕಥೆಯಲ್ಲೂ ಭೂತವನ್ನು ಬಗೆಯುತ್ತಾ ಹೊರಟವನಿಗೆ ಆಧ್ಯಾತ್ಮಿಕ ಅಗತ್ಯವಾದರೂ ಏಕೆ? ಎಂದು ಏಳುವ ಪ್ರಶ್ನೆಯ ಹಿಂದಿರುವ ಭಾವ ತೀವ್ರತೆಯನ್ನು ಕಾಣಿಸುವ ಅನಂತಮೂರ್ತಿಯವರಿಗೆ, ಕಾಮುಕ ಜೀವನದ ಸುತ್ತ ಮುತ್ತಲಿನ ಭಾವ ಲಹರಿ, ಇಕ್ಕಟ್ಟು, ಸಂಕಟದ ವಿವಿಧ ಮುಖಗಳನ್ನು ಇತರ ಕಥೆ, ಕಾದಂಬರಿಗಳಲ್ಲೂ ತೋರಿಸಿದ್ದಾರೆ. ಪ್ರಜ್ಞಾ ಪ್ರವಾಹದ ಕಥೆಯ ಧಾಟಿ ನವ್ಯ ಕಥನದ ರೀತಿಯಾಗಿದೆ. ಒಂದು ಹಿನ್ನುಡಿ ಕಥೆಯಲ್ಲಿ ಮಗ ಬರೆದು ಬಿಟ್ಟು ಹೋದ ಪುಸ್ತಕವನ್ನು ನಿರೂಪಕನಿಗೆ ತಾಯಿ ಕೊಡುತ್ತಾಳೆ. ನಿರೂಪಕನಿಗೆ ಒಂದು ಸಂಕೀರ್ಣ ಜೀವನದ ದರ್ಶನವಾಗುತ್ತದೆ. "ಕವಿ ಪೂರ್ಣಿಮೆ" ಕಾವ್ಯಮಯವಾದ ಕಥೆ. ಮತ್ತು "ಪಂಜರದ ಗಿಣಿ" ಕಥೆಯೂ ತಾಲೀಮಿನ ಕಥೆಗಳಾಗಿವೆ.

"ಸಣ್ಣ ಕಥೆ ಇಲ್ಲಿ ಪ್ರಬುದ್ಧ ಅವಸ್ಥೆಯನ್ನು ಪಡೆದಿದೆ" ಈ ಮಾತು ರಾಜೀವ ತಾರಾನಾಥರು ಪ್ರಶ್ನೆ ಸಂಕಲನದ ಮುನ್ನುಡಿಯಲ್ಲಿ ಬರೆದಿದ್ದು. ಪ್ರಕೃತಿ ಯಂಥ ಕಥೆಯನ್ನು ಬರೆದ ಅನಂತಮೂರ್ತಿಯವರು ಸಾಧನೆಯ ಪ್ರಮುಖ ಘಟ್ಟಗಳಲ್ಲಿ ಒಂದು. ಇಲ್ಲಿಂದ ಮೂರ್ತಿಯವರ ಕಥೆಗಳಲ್ಲಿ ಭಾವತೀವ್ರತೆಯ ಬದುಕಿನೊಂದಿಗೆ, ವೈಚಾರಿಕತೆ, ಪರಂಪರೆ ಆಧುನಿಕತೆಯ ಸಂಘರ್ಷವೂ ಕೂಡಿಕೊಳ್ಳುತ್ತಾ ಹೋಗುತ್ತದೆ. ವ್ಯಕ್ತಿ ನಿಸರ್ಗದೊಡನೆ ಸೆಣಸುವ ಸಂದರ್ಭವೂ ಕಾಣಸಿಗುತ್ತವೆ. ಸುಮಾರು ಅರವತ್ತರ ದಶಕದ ನಂತರದ ಕಥೆಗಳು ಈ ರೀತಿಯದಾಗಿವೆ. ಪ್ರಶ್ನೆ ಸಂಕಲನದ ಕಾರ್ತೀಕ ಕಥೆಯಲ್ಲಿ ಸೂಚಿಸಿರುವಂತೆ ಅನಂತಮೂರ್ತಿಯವರಿಗೆ "ಬರೆಯುವುದೆಂದರೆ ಹುಡುಕುವುದು. ಒಂದನ್ನೊಂದಕ್ಕೆ ತಾಳಿಸಿ, ಮೇಳಿಸಿ, ತಡಕಾಡಿ ಹುಡುಕುವುದು. ಸೂರಿನಿಂದ ಕೆಳಗೆ ಇಳಿದ ಒಂದು ಬೆಳಕಿನ ಕೋಲಿನಲ್ಲಿ ಜೀವನದ ಸುಖ ದುಃಖವನ್ನೆಲ್ಲ, ಅನಂತತೆಯನ್ನೆಲ್ಲ ಕಾಣುವುದು, ಕಾಣಿಸುವುದು."

"ಪ್ರಕೃತಿ" ಕಥೆಯಲ್ಲಿ "ಪ್ರಾಚೀನ ಕರ್ಮಭೂಮಿ" ನಂಬಿಕೆಯ ಸಂಕಪ್ಪಯ್ಯ ಅಡಿಕೆ ಬದಲು ಕಿತ್ತಳೆ ಬೆಳೆದು ಬದುಕು ರೂಪಿಸಲು ಛಲ ತೊಟ್ಟವನು. "ಕೊಂಪೆಯಲ್ಲಿ ಕೊಳೆಯೋಕೆ" ಇಷ್ಟವಿಲ್ಲದೆ ಶಿವಮೊಗ್ಗೆಯಲ್ಲಿ ಹೋಟೆಲು ನಡೆಸಲು ಆಸಕ್ತಿ ಮಗ ನಾರಾಯಣನಿಗೆ. ಇದಕ್ಕೆ ಅವರಮ್ಮನ ಕುಮ್ಮಕ್ಕು. "ಕೊಂಪೆವಾಸ ಶಾಪ" ಎಂಬ ಅನುಭವದಿಂದ. ತಂದೆ ಮಗನ ನಡುವೆ ಪರಂಪರೆ ಮತ್ತು ಆಧುನಿಕತೆಯ ಸಂಘರ್ಷ ಉಂಟಾಗುತ್ತದೆ. ಕೊಳೆಯೋ ಸ್ಥಿತಿಯಿಂದ ಬದಲಾವಣೆಗೆ ಹಾತೊರೆಯುತ್ತಿರುವ

ಯುವಕ, ಹುಲಿಯಂತೆ ಧೈರ್ಯ, ಸಾಹಸದಿಂದ ಬೆಳೆ ಬದಲಾಯಿಸಲು ಹೊರಟ ತಂದೆ. ನಡುವೆ ಮಗನ ಪರವಾದ ತಾಯಿ, ಸೋದರಮಾವ ಬದಲಾವಣೆಯನ್ನು ಬಯಸುವವರು. ಸಂಕ್ರಮಣಕಾಲದ ರೂಪಕವಾಗಿ ಪ್ರಕೃತಿಯ ಸಾಧನೆ ಬಹಳ ದೊಡ್ಡದು. ಪ್ರಸ್ತ ಕಥೆಯಲ್ಲಿ "ಈ ಹಾಳು ಜುಟ್ಟನ್ನು ಕತ್ತರಿಸಿ ಹಾಕಿ ಸಂಪೂರ್ಣ ಕ್ರಾಪು ಬಿಡಿ, ಆ ಹಾಳು ಬ್ರಾಹ್ಮಣಾರ್ಥ, ಸಂಭಾವನೆ ಬಿಟ್ಟು ಹೋಟೇಲಿಡಿ" ಎಂದು ಗಂಡನ್ನ ತಾಕೀತು ಮಾಡುವ ನೇತ್ರಾವತಿ. ಪುಂಡರೀಕನಿಗಾದರೋ ಇಕ್ಕಟ್ಟಿನ ಸ್ಥಿತಿ. ಅಮ್ಮನಿಗೆ ಒಂದು ಚೂರು ಇರಲಿ ಎಂದು ಜುಟ್ಟು ಕ್ರಾಪು ಎರಡನ್ನು ಹೊಂದಿರುವ ಸಂದಿಗ್ಧದಲ್ಲಿ, ಪರಂಪರೆ ಮತ್ತು ಆಧುನಿಕತೆಯ ಸಂಘರ್ಷವನ್ನು ನಿಭಾಯಿಸುವ ರೀತಿಯಾಗಿದೆ. ಪ್ರಶ್ನೆ ಕಥೆಯ ನಾಯಕ ರಂಗನಾಥನಿಗೆ "ಈ ಅಜ್ಜಮುತ್ತಜ್ಜರ ಭೂತ ನಮ್ಮನ್ನ ಕಾಡಬೇಕೆ-ನೀನಿರೋದು ಬಾಳಿ ಬದುಕುವ ಮನೆಯಲ್ಲ, ಪ್ರೇತಭೂಮಿ" ಅಂತ ಶಾರದೆಯನ್ನು ಬಿಟ್ಟು ಹೋಗಲಾರದೆ ರಂಗನಾಥನನ್ನು ಹಳ್ಳಿಗೆ ಬಂದು ಜಮೀನು ಮಾಡಿಕೊಂಡು ಇರು ಅಂತ ವತ್ತಾಯಿಸುತ್ತಾಳೆ. ಮಾವಯ್ಯನಿಗೆ "ಸುಖಕ್ಕಿಂತ ಶ್ರೇಯಸ್ಸುದೊಡ್ಡದ್ದು. ನಮ್ಮ ಧರ್ಮ ನಾವು ಬಿಡಬಾರದು. ಸುಖ ಬೇಕೆಂದು ಅಲ್ಲವೆ ಒಬ್ಬರು ಇನ್ನೊಬ್ಬರನ್ನು ಆಶ್ರಯಿಸುವುದು?" ಅಂತ ಹೇಳಿ ಶಾರದಳನ್ನು ಬಿಟ್ಟುಕೊಡಲಾರ. ಶಾರದೆಗೆ ರಂಗನಾಥನೂ ಬೇಕು ಮಾವಯ್ಯನ್ನು ಬಿಟ್ಟಿರಲಾರಳು. ಕಥೇಲಿ ಒಂದು ಹುಲಿ ಬರುತ್ತೆ. ರಂಗನಾಥನಿಗೆ ಮಾವಯ್ಯ ಶಾರದೆಯನ್ನು ಹಿಡಿದಿರುವ ಹುಲಿ, ಅವಳನ್ನು ಬಿಡಿಸಿಕೊಂಡು ಮೈಸೂರಿಗೆ ಕರೆದುಕೊಂಡು ಹೋಗಬೇಕು ಮಾವಯ್ಯನಿಗೆ ರಂಗನಾಥ ಶಾರದೆಯನ್ನು ಹೊತ್ತು ಕೊಂಡು ಹೋಗಬಹುದಾದ ಹುಲಿ. ಇಕ್ಕಟ್ಟಿನಲ್ಲಿ ಶಾರದ. ಇದಕ್ಕೆ ಪರಿಹಾರ ಪ್ರಶ್ನೆಗಳು ಮಾತ್ರ. ಹಳತು ಹೊಸತರ ಸಂಘರ್ಷದ ನಡುವೆ, ಮಾವಯ್ಯನ ಪ್ರಣಯ, ಅದರ ಫಲವಾದ ಲಚ್ಚಿಯೊಡನೆ ರಂಗನಾಥನ ಕಾಮ ಚೇಷ್ಟೆ, ಎಲ್ಲವೂ ಧ್ವನಿಪೂರ್ಣ "ಪ್ರಶ್ನೆ" ಆಗಿದೆ.

ಆಧುನಿಕ ಇಂಡಿಯಾದ ಸಾಂಸ್ಕೃತಿಕ ಸಂದಿಗ್ಧವನ್ನು "ಕ್ಲಿಪ್ ಜಾಯಿಂಟ್" ಕಥೆಯಲ್ಲಿ ನಿರೂಪಿಸಲಾಗಿದೆ. ಇಂಡಿಯಾ ಮತ್ತು ಪಶ್ಚಿಮ ಎರಡು ಸಂಸ್ಕೃತಿಗಳ ಮುಖಾಮುಖಿಯಲ್ಲಿ ಎರಡು ಸಂಸ್ಕೃತಿಯ ಪಾತ್ರಗಳ ಚಡಪಡಿಕೆಯನ್ನು ಕಾಣಿಸಲಾಗಿದೆ. ಸಂತತ್ವಕ್ಕೆ ತುಡಿಯುವ ಸ್ಟೂಅರ್ಟ್, ಮನುಷ್ಯನ ಸುಖ-ಭೋಗದ ಕಡೆಗೆ ತುಡಿಯುವ ಕೇಶವ. ಸ್ಟೂಅರ್ಟ್‌ಗೆ ಯಥೇಚ್ಛೆಯಾಗಿ "ತಿಂದು-ಉಂಡು ಮಲಗಿ ಸಂಭೋಗಿಸುವ ಬದುಕಿದೆ. ಆದರೆ ಇನ್ನಾವ ಥ್ರಿಲ್ಲೂ ಇಲ್ಲ. ಭವಿಷ್ಯವಿಲ್ಲ, ಹೊಸ ಅನುಭವವಿಲ್ಲ. ಆದ್ದರಿಂದಲೇ ಫಾರ್‌ಸ್ಟರ್, ಲಾರೆನ್ಸ್, ಗ್ರೀನ್, ಡರೆಲ್, ಅವರೆಲ್ಲಾ ಬೇರೆ ಬೇರೆ ದೇಶಗಳ ಬಗ್ಗೆ ಬರಿತಾರೆ. ಕೇಶವನಿಗಾದರೋ ಜೀವನ ಬಡತನದ ವಿರುದ್ಧ

ಹೋರಾಡೋದರಲ್ಲೇ ವ್ಯಯವಾಯಿತು. ಕಾಮದ ಅನುಭವವಿಲ್ಲದೆ ಮುರುಟುತ್ತಿದೆ. ಅದಕ್ಕಾಗಿ ಸ್ವಾರ್ಥದ ಜಾಲದಿಂದ ಬಿಡಿಸಿಕೊಳ್ಳಲು ಇಂಗ್ಲೆಂಡಿಗೆ ಬಂದಿದ್ದಾನೆ. ಆದರೆ ಕೇಶವನಿಗೆ ಗೊತ್ತು, ತಾನು ಕಾಲು ಹೂತವನಾದರೂ ಭಾರತದ ನೆಲದಲ್ಲಿ ಜಿಗಿದವರು ಇದ್ದಾರೆಂದು. ಸಮಸ್ತ ಲೋಕವನ್ನೂ ಪ್ರೇಮದಿಂದ ನೋಡಿ ಮೂಕರಾದವರೂ ಇದ್ದಾರೆಂದು "ಸ್ಟೂಅರ್ಟ್ ಬೆಳೆದ ಭೂಮಿಯಲ್ಲಿ ಸಂತರು ಹುಟ್ಟುವುದಿಲ್ಲ- ಸಭ್ಯರು ಮಾನವ ಹಿತೈಷಿಗಳು ಹುಟ್ಟುತ್ತಾರೆಂಬುದು ಅವನಿಗೂ ಗೊತ್ತು." ಆದರೂ ಇಬ್ಬರೂ ತಮ್ಮದೇ ಆದ ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನದಂತಾಗಿ ಚಡಪಡಿಸುತ್ತಿರುವ ಸ್ಥಿತಿ ಪ್ರಾಯಶಃ ಯಾವ ಸಾಮಾಜಿಕ ಸ್ಥಿತಿಯಲ್ಲೂ ಮನುಷ್ಯನಿಗೆ ಸುಖವಿಲ್ಲ. ಚಡಪಡಿಸುತ್ತಿರುವುದು ಮನುಷ್ಯನ ಅನಾದಿ ಅನಂತ ಅವಶ್ಯಕತೆಯಿರಬಹುದು. ರೂತ್ ಮತ್ತು ರಸುಲ್ ಕಥೆಯಲ್ಲೂ "ಇಂಡಿಯಾದ ಅರ್ಥೋಡಾಕ್ಸಿಯನ್ನು" ನಾಶ ಮಾಡಬಹುದೆಂಬ ಆಧುನಿಕ ಸ್ವೇಚ್ಛಾಚಾರದಲ್ಲಿ "ಹುಡುಗರಿಗೆ ಮಾದರಿಯಾಗೋಣ" ಅಂದುಕೊಳ್ಳುವ ಸಂದರ್ಭದಲ್ಲಿ ಸಾಂಸ್ಕೃತಿಕ ಇಕ್ಕಟ್ಟು ನಿರ್ಮಾಣವಾಗುವುದನ್ನು ಕಾಣಬಹುದು.

"ಅಕ್ಕಯ್ಯ" ಕಥೆಯ ಶ್ರೀನಿವಾಸ ಗೆಳೆಯನಿಗೆ ಅಕ್ಕಯ್ಯನ ಕಥೆಯನ್ನು ನಿರೂಪಿಸುವುದರ ಉದ್ದೇಶ್ಯ ಪಾಶ್ಚಾಶ್ಯ ದೃಷ್ಟಿಕೋನದಿಂದ ಇಂಡಿಯಾದ ಬದುಕನ್ನು ನೋಡಬೇಡ ಅಂತ ಹೇಳೋದಕ್ಕೋಸ್ಕರ. ಮೊದಲು ಮಾರ್ಕ್ಸಿಸ್ಟ್ ಪ್ರಗತಿಶೀಲನವಾದದ್ದು, ಆಮೇಲೆ ಲಿಬರಲ್ ಆದದ್ದು, ಆಮೇಲೆ ಆಧುನಿಕನಾದದ್ದು, ಈಗ ಮಾಡರ್ನಿಸ್ಟ್ ಆಗಿರುವ ಶ್ರೀನಿವಾಸ ಈಗ ಹಿಂದಕ್ಕೂ ಹೋಗಲಾರದೆ, ಅಕ್ಕಯ್ಯನ ಪಾರಂಪರಿಕ ಪ್ರಪಂಚ ಸುಳ್ಳೂ ಅಂತ ಸಾಧಿಸೋ ನಿಯೋ ಕಲೋನಿಯಲಿಸ್ಟ್ ಬದ್ಮಾಶ್ ಕೂಡ ಆಗಲಾರದ ಸ್ಥಿತಿಯಲ್ಲಿ ಅಕ್ಕಯ್ಯನ ಅಥೆಂಟಿಕ್ ಆದ ಪ್ರಪಂಚವೇ ಹೆಚ್ಚು ವಾಸ್ತವವೆಂದು ಕಾಣಿಸಿರುವ ಅನಂತಮೂರ್ತಿಯವರ ಉದ್ದೇಶ್ಯ ಪೋಸ್ಟ್ ಮಾಡರ್ನ್ ಸಂದರ್ಭದಲ್ಲಿ ಆಧುನೀಕರಣಕ್ಕೆ ಪರ್ಯಾಯವನ್ನು ಸೂಚಿಸುವಂತಿದೆ. "ಜರತ್ಕಾರು" ಕಥೆಯಲ್ಲಿ ಕಾಮುಕ ವಿಲಾಸಿ ತಿಮ್ಮಪ್ಪ "ದೇವರು ಪ್ರಾಯಶಃ ಇಲ್ಲವಾದ್ದರಿಂದ ಯಾವದಕ್ಕೂ ಅರ್ಥವಿಲ್ಲ ಎಂಬ ಭಾವನೆ" ಹೊಂದಿದ್ದವನು. ಕುಡಿತ ಸೂಳೆಗಾರಿಕೆಯಲ್ಲಿ ಮುಳುಗಿ ಬೇಜವಾಬ್ದಾರಿ ಮನುಷ್ಯನಾಗಿದ್ದವನು. ಮನೆಯಲ್ಲಿ ಅವನಿಗೆ ನೆರವಾಗುತ್ತಿದ್ದ ಕಮಲಳನ್ನು ಭೋಗಿಸಿದ್ದರ ಫಲವಾಗಿ ತಾಯಿಯಾಗುವವಳಿದ್ದಾಳೆ. ಆ ಸಂದರ್ಭದಲ್ಲಿ ಸಾಯುತ್ತಿರುವ ತಾಯಿಗೆ ಸಂಪ್ರದಾಯದ ಬಟ್ಟೆ ತೊಟ್ಟು ಗಂಗಾಜಲವನ್ನು ಕುಡಿಸುವ ತಿಮ್ಮಪ್ಪ, ಸ್ವೇಚ್ಛೆಯಿಂದ ಮರಳಿ, ಕುಟುಂಬ ವ್ಯವಸ್ಥೆಯನ್ನು ಒಪ್ಪಿಕೊಳ್ಳುತ್ತಾನೆ. ಕಥೆ ಆತ್ಮಾವಲೋಕನದ ಕಡೆಗೆ ನಡೆಯುವ ಕ್ರಿಯೆಯಾಗಿದೆ. ಅನಂತಮೂರ್ತಿಯವರ

ಇವತ್ತಿನ ಚಿಂತನೆಯ ಕಡೆಗೆ ತೋರುಬೆರಳಾಗಿದೆ. ಇಂಥ ಮನೋಭೂಮಿಕೆಯಲ್ಲಿರುವ ಮೂರ್ತಿಯವರು ರಚಿಸಿದ ಸೂರ್ಯನ ಕುದುರೆ ಕಥೆ ಮಹತ್ವದ್ದಾಗಿದ್ದು, ನವ್ಯೋತ್ತರ ಸಂದರ್ಭದ ಬಹು ಮುಖ್ಯ ಸಾಧನೆಯಾಗಿದೆ. ಆಧುನೀಕರಣದ (ಜಾಗತೀಕರಣವೂ ಸೇರಿದಂತೆ) ವಿಮರ್ಶೆಯ ಕಥೆಯಾಗಿದೆ. ವಿಕೃತವಾಗಿ ಕಾಣುವ ಆಧುನಿಕತೆಗೆ ಮುಖಾಮುಖಿಯಾಗುವ ದೇಶೀ ವ್ಯಕ್ತಿತ್ವ, ದೇಶೀಯವಾದ ಬದುಕು ಮತ್ತು ಆಧುನಿಕ ಅಭಿವೃದ್ಧಿ ನಡುವಣ ತೌಲನಿಕ ದರ್ಶನ ಸೂರ್ಯನ ಕುದುರೆಯಲ್ಲಿ ರೋಮಾಂಚನಕಾರಿಯಾಗಿದೆ.

ಅನಂತುವಿನ ಬಾಲ್ಯದ ಗೆಳೆಯ ಹಡೆ ವೆಂಕಟ ಮಾರ್ಕ್ಸ್ ಹೇಳುವ "ಗ್ರಾಮ ಮೌಢ್ಯ"ಕ್ಕೆ ನಿದರ್ಶನದಂತಿದ್ದಾನೆ. ಅವನ ಮಗ ಶುದ್ಧ ಪುಂಡ ಓದುಲ್ಲ, ಪಾಸಾಗಲಿಲ್ಲ. ಆದರೆ ನಗರಕ್ಕೆ ಹೋಗಿ ಇಂಜಿನಿಯರ್ ಆಗೋ ಎಂಥಾದಾದರೂ ನೌಕರಿ ಹಿಡಿದು ಬದುಕುಮಾಡುವ ಹಂಬಲದಲ್ಲಿದ್ದಾನೆ. ತಾಯಿ ರುಕ್ಕುವಿನ ಕುಮ್ಮಕ್ಕೂ ಇದೆ. ಮದುವೆಗೆ ಬಂದ ಹೆಣ್ಣು ಮಕ್ಕಳು, ತಾಯಿ ಕಟ್ಟಿಕೊಡುವ ದೊನ್ನೆ ಮಾರಿ ಕಾರ್ಪಣ್ಯದ ಬದುಕು ನಡೆಸುತ್ತಿದ್ದಾರೆ. ಅನಂತುವಿನ ದೃಷ್ಟಿಯಲ್ಲಿ ವೆಂಕಟ ಸ್ವಂತ ಮಗನನ್ನು ಜವಾಬ್ದಾರಿಯಿಂದ ಬೆಳೆಸಲಾರದ ಪಲಾಯನವಾದಿ, ಬೋಳೆಶಂಕರ, ನಾಮರ್ದ. ಆದರೆ ಫೋಜಿಲ್ಲದ ನಿಸರ್ಗ ಸಹಜ ಬದುಕು ನಡೆಸುತ್ತಾ ಎಲ್ಲಾ ರಾದ್ಧಾಂತಗಳ ನಡುವೆಯೂ ನಿರ್ಲಿಪ್ತ ನಿಂತಿರುವ, ಯಾವ ಬದಲಾವಣೆಗೂ ಇಷ್ಟವಿಲ್ಲದ ಹಕ್ಕಿಗಳಂತೆ ಬದುಕುತ್ತಿರುವ ವ್ಯಕ್ತಿ. ಅಭ್ಯಂಜನ ಮಾಡಿಸಿ, ಸೊಕ್ಕಿಳಿಸಿ, ಚಂದ್ರನನ್ನು ತೋರಿಸುವ ಕಲೆಯಲ್ಲಿ ನಿಷ್ಣಾತ ಬದುಕು ಮೊಳೆಯದೆ, ಕೊಳೆಯದೇ ಇದ್ದರೂ ತಾನು ನಗುತ್ತಾ, ಸುತ್ತಲಿನವರನ್ನು ನಗಿಸುತ್ತಾ, ನಾಲ್ಕು ಜನಕ್ಕೆ ಉಪಕಾರಿಯಾಗಿರುವವನು. ನವಿಲು ಗುಡ್ಡದ ಗುಹೆಯಲ್ಲಿ ಹೋಗಿ ಒಬ್ಬನೆ ಇರಬೇಕೆಂಬ ಕನಸು ಕಾಣುವವನು. ಇದನ್ನೆಲ್ಲ ಕಾಣಿಸುವ, ಕಥೆಯ ನಿರೂಪಣೆಯಲ್ಲಿ ವಿರೋಧಾತ್ಮಕ ಸಂಘರ್ಷ ಏರ್ಪಡುತ್ತದೆ. ಅನಂತುವಿಗೆ ಈಗ ಸಂತನಾಗಿ ಕಾಣಿಸುವ ಹಡೆ ವೆಂಕಟನಲ್ಲಿ ಪಶ್ಚಿಮದ ಆಧುನಿಕ ಜೀವನ ಮಾದರಿಗೆ ಪರ್ಯಾಯವಾದ ದೇಶೀಯ ನಿರ್ಮಲ ನೆಮ್ಮದಿಯ ಬದುಕೊಂದನ್ನು ಸೂರ್ಯನ ಕುದುರೆ ತೋರಿಸುತ್ತದೆ.

ಈ ಸಂಕಲನದ ನಂತರ ಒಂದು ಬಿಡಿ ಕತೆ "ಬೇಟೆ, ಬಳೆ ಮತ್ತು ಓತಿಕೇತ" ಐದು ದಶಕದ ಕಥೆಗಳು (ಸಮಗ್ರ ಕಥಾ ಸಂಕಲನ ೨೦೦೧) ಪುಸ್ತಕದಲ್ಲಿ ಪ್ರಕಟವಾಗಿದೆ. ಮಲೆನಾಡುಹಳ್ಳಿಯಲ್ಲಿ ಇದ್ದುಕೊಂಡು ಅಂತರ ರಾಷ್ಟ್ರೀಯ ಖ್ಯಾತಿ ಪಡೆದ ಚಿತ್ರ ಕಲಾವಿದ. ಅವನ ಕಲೆಗಾರಿಕೆಯನ್ನು ಕುರಿತು ಇಂಗ್ಲಿಷ್‌ನಲ್ಲಿ ಪುಸ್ತಕ ಬರೆಯಲು ಮಲ್ಟಿನ್ಯಾಷನಲ್ ಸಂಸ್ಥೆಯೊಂದರಿಂದ ಸ್ಕಾಲರ್‌ಶಿಪ್ ಪಡೆದು ಬಂದಿರುವ ಮೈಸೂರಿನ

ಉಪನ್ಯಾಸಕ, ಭಗ್ನ ಪ್ರಣಯಿ ಕೃಷ್ಣ ಸ್ವಾಮಿ. ಕ್ರಿಸ್ತನಿಗೂ, ಬುದ್ಧನಿಗೂ ಹಿಂದಿನ ಋಗ್ವೇದ ಕಾಲದ್ದೆನ್ನ ಬಹುದಾದ, ಕಾಡಿನಲ್ಲಿ ಬಂಡೆ ಅಂಚಿನಮೇಲಿನ ಒಂದು ಓಡುವ ಜಿಂಕೆ, ಅದರ ಹಿಂದೆ ಈಟಿ ಹಿಡಿದು ಬೆನ್ನಟ್ಟುತ್ತಿರುವ ಮನುಷ್ಯನ ಚಿತ್ರ ಸೋಮನಾಥನ ಚಿತ್ರಕಲೆಗೆ ಮೂಲ ಪ್ರೇರಣೆ. ಇದನ್ನು ನೋಡುತ್ತಾ ನಿಂತಿದ್ದ ಕೃಷ್ಣಸ್ವಾಮಿಗೆ ಚಿತ್ರದ ಮೇಲೆ ಚಲಿಸುತ್ತಿರುವ ಮಣಿ ಕಣ್ಣಿನ ಪ್ರಾಗೇತಿಹಾಸ ಕಾಲದ ಪಳಯುಳಿಕೆಯಂತಿರುವ ಓತಿಕೇತ ಒಂದು ಗೋಚರಿಸುತ್ತೆ. ಅದರ ನಡಿಗೆಯನ್ನೇ ಗಮನಿಸುತ್ತಿದ್ದವನಿಗೆ ಬಂಡೆಯಂಚಿನಲ್ಲಿ ಫಳ್ ಎಂದು ಹೊಳೆದದ್ದು "ಪರಮಾರ್ಥವಿರದೆ ಒಂದು ಸಾಮಾನ್ಯ ಪದಾರ್ಥ" ಬಳೆಚೂರು ಸಿಕ್ಕಿಬಿಡುತ್ತದೆ. ಅದನ್ನು ಜೇಬಿನಲ್ಲಿಟ್ಟುಕೊಂಡು ತಡವರಿಸುತ್ತಾ ಸಿಗಬಹುದಾದ ಆನಂದದಲ್ಲಿರುವಂಥವನು. ಅಪ್ರಿಯಳಾದ ಹೆಂಡತಿಯನ್ನು ಹಳ್ಳಿಯಲ್ಲೇ ಬಿಟ್ಟು ಬಂದವನು. ಹೆಸರಿಗೆ ಮಾತ್ರ ಕೃಷ್ಣನಾಗಿದ್ದು ಪ್ರಣಯ ಪುಕ್ಕ. ನಾಗರೀಕತೆಯ ಉಪಾಸಕ, ವಿಚಾರವಾದಿ, ಇವನಿಗೆ ಸೋಮನಾಥ "ದಿವ್ಯದ ಕಳ್ಳ, ಲೌಕಿಕ ಮಳ್ಳ, ಕಚ್ಚೆ ಹರುಕ ಋಷಿ. ಇವರಿಬ್ಬರ ಸುತ್ತ ಮಲ್ಟೀನ್ಯಾಶನಲ್ ಕಳ್ಳರು ಬೀಸಿರುವ ಬಲೆ ದಿವ್ಯಾಪಹರಣಕ್ಕಾಗಿ", ಭಗ್ನ ಪ್ರಣಯಿ ಕೃಷ್ಣಸ್ವಾಮಿಯ ವಿದ್ಯಾರ್ಥಿನಿಯಾಗಿದ್ದ ಹಸೀನ ಆಗಬಾರದ್ದೆಲ್ಲಾ ಆಗಿ ಅಂತರರಾಷ್ಟ್ರೀಯ ಕ್ರುಕ್, ಪ್ರಸಿದ್ಧ ಫಿಕ್ಸರ್ ಆದವಳು. ಬಾಂಬೆ ಬ್ಲಾಸ್ಟ್ ನಲ್ಲಿ ಸತ್ತನಂತರ ಅವಳ ಮಗಳು ಜ್ಯೋತಿ, ಫ್ರಾನ್ಸಿನ ಬಲತಂದೆ ಪಾಲುದಾರರಾಗಿದ್ದ ಕಂಪನಿಯ ಮೂಲಕ ಕೃಷ್ಣಸ್ವಾಮಿಗೆ ಸ್ಕಾಲರ್‌ಷಿಪ್ ಕೊಡಿಸಿರುವವಳು ಬನವಾಸಿಯ ಮಲ್ಟೀನ್ಯಾಷನಲ್ ಪಿ.ಆರ್.ಓ ಸೆಬೆಸ್ಟಿಯನ್ ಕೂಡಿ ಹೆಣೆದಿರುವ ಅಂತರರಾಷ್ಟ್ರೀಯ ಕಳ್ಳ ಜಾಲದಲ್ಲಿ ನಮ್ಮ ಲೌಕಿಕ, ಅಲೌಕಿಕ ದಿವ್ಯವನ್ನು ಅಪಹರಿಸುವ ಜಾಲವೊಂದು ಅನಾವರಣಗೊಳ್ಳುತ್ತದೆ. ಸೋಮನಾಥನು ಚಿತ್ರಕ್ಕಾಗಿ ಕದ್ದಿರುವ "ದಿವ್ಯ"ವನ್ನು ಮಲ್ಟಿನ್ಯಾಷನಲ್ ಕಳ್ಳರು ಅಪಹರಿಸಬಹುದಾದ "ದಿವ್ಯ" ಕೃಷ್ಣಸ್ವಾಮಿಗೆ ಒಡ್ಡಿದ "ದಿವ್ಯ". ಇಷ್ಟನ್ನೂ ಕಾಣಿಸುವ ಪತ್ತೆದಾರಿ ಧಾಟಿಯ ಕಥೆ. ಅನಂತಮೂರ್ತಿಯವರ ಸೃಜನಶೀಲತೆಯ ಮತ್ತೊಂದು ಆಯಾಮವನ್ನು ಕಾಣಿಸುತ್ತದೆ. ಹದಿನೈದರ ತನಕ ರಾಜಣ್ಣ, ಆಮೇಲೆ ಹೈಸ್ಕೂಲ್ ಸೇರಿದಮೇಲೆ ಖೋಜಣ್ಣ ಆದ ಖೋಜರಾಜ ಕಥೆಯನಾಯಕನನ್ನು ಮತ್ತೆ ಸಾಕ್ಷಾತ್ ಕೃಷ್ಣನ ಹೆಸರನ್ನು ಇಟ್ಟುಕೊಂಡ ಪ್ರಣಯ- ಪುಕ್ಕ. ಕೃಷ್ಣಸ್ವಾಮಿಯಲ್ಲಿ ಕಾಣಿಸಿದ್ದಾರೆ. ಮತ್ತು ಜಾಗತೀಕರಣದಿಂದ ಮಲ್ಟೀನ್ಯಾಶನಲ್ ಕಂಪನಿಗಳು ಉಂಟುಮಾಡಬಹುದಾದ ಹಾನಿಯನ್ನು ಪರಿಣಾಮಕಾರಿಯಾಗಿ ವಿಶ್ಲೇಷಿಸುವ ಈ ಕಥೆಯಲ್ಲಿ ದಿವ್ಯಾಪಹರಣದ ಜಾಲವನ್ನು "ಬೇಟೆ ಬಳೆ ಮತ್ತು ಓತಿಕೇತ", ರೂಪಕದಲ್ಲಿ ಸಮರ್ಥವಾಗಿ ಹಿಡಿದುಕೊಡಲಾಗಿದೆ.

ಈ ಎಲ್ಲ ಕಥೆಗಳಿಗಿಂತ ಭಿನ್ನ ಗ್ರಹಿಕೆಯ ಎರಡು ಕಥೆಗಳು: "ಮೌನಿ" ಮತ್ತು "ಘಟಶ್ರಾದ್ಧ". ಶ್ರೀಮಠದ ಕೃಪೆಯಲ್ಲಿ ಗೇಣಿದಾರರಾಗಿರುವ ಕುಪ್ಪಣ್ಣ ಭಟ್ಟ, ಅಪ್ಪಣ್ಣ

ಭಟ್ಟ ಇಬ್ಬರ ನಡುವಿನ ವ್ಯವಹಾರಿಕ ಪೈಪೋಟಿಯಿಂದ ಉಂಟಾಗುವ ಅನರ್ಥವನ್ನು ದರ್ಶನ ಮಾಡಿಸುವ ಕಥೆ ಮೌನಿ. ತಾನು ತಾನೇ ಆಗಿ ಬದುಕುವ ಛಲ ಕುಪ್ಪಣ್ಣ ಭಟ್ಟನಿಗೆ, ಏಕಾಂಗ ವೀರನ ವ್ಯವಹಾರವೆಲ್ಲ ಕುಸಿದು, ಸಂಸಾರ ದಿಕ್ಕಾಪಾಲಾಗುತ್ತದೆ. ಶ್ರೀ ಮಠ ಕೊಡಮಾಡಿದ್ದ ಗೇಣಿ ಜಮೀನನ್ನು, ಗೇಣಿಕೊಡದ ಕಾರಣದಿಂದಾಗಿ ಕಸಿದುಕೊಂಡು ಅಪ್ಪಣ್ಣ ಭಟ್ಟನಿಗೆ ವಹಿಸಿಕೊಡುತ್ತದೆ. ಅಪ್ಪಣ್ಣ ಭಟ್ಟ ವ್ಯವಹಾರ ಚತುರ, ಸಮಯಸಾಧಕ, ಮಠಕ್ಕೂ, ಬೇಕಾದವನು, ಜನಕ್ಕೂ ಬೇಕಾದವನು. ಶ್ರೀಮಠದ ಕೃಪೆಗೆ ಪಾತ್ರನಾಗಿ ಕುಪ್ಪಣ್ಣ ಭಟ್ಟ ಓಡೋಡಿ ಬಂದು ಪಿಂಡ ಹಾಕುವಾಗ ಪಿತೃಗಳನ್ನು ಹೆಸರು ಹಿಡಿದು ಕರೆಯುವೋಪಾದಿಯಲ್ಲಿ ಮಂತ್ರವನ್ನು ಉಚ್ಚರಿಸುವಂತೆಯೇ ಭಟ್ಟರೇ, ಭಟ್ಟರೇ ಎಂದರು. ಮನೆ ಮಾರು, ಗಂಟು ತೋಟ ಎಲ್ಲವನ್ನು ಬಿಟ್ಟುಕೊಡುವುದಾಗಿ ಹೇಳಿದರು. ಇಕೊಳ್ಳಿ ಬೀಗದ ಕೈ ಮಾರಾಯರೆ, ಇಕ್ಕೊಳ್ಳಿ ಎಂದು ಅಪ್ಪಣ್ಣ ಬಟ್ಟರು ಮೂಗಿನಿಂದ ಸಿಂಬಳ ತೆಗೆದು ಅತ್ತರು. ಪ್ರಾಣ ವಿಸರ್ಜನೆಗೆ ಧ್ಯಾನಿಸುವಂತೆ ಕುಕ್ಕುರು ಕೂತ ಕುಪ್ಪಣ್ಣಭಟ್ಟನಲ್ಲಿದ್ದ ಜಮೀನನ್ನೆಲ್ಲ ವಹಿಸಿಕೊಳ್ಳುತ್ತಾನೆ. ಕುಪ್ಪಣ್ಣನ ಮನೆಮಾರು ಸಾಮಾನುಸರಂಜಾಮನ್ನೆಲ್ಲ ಸಾಲಗಾರರು ತುಂಬಿಸಿಕೊಂಡು ಹೋಗುತ್ತಾರೆ. ಕುಪ್ಪಣ್ಣ ಮತ್ತೊಂದು ಲೋಕದಲ್ಲಿ ಸ್ಥಾನಗಳಿಸಲು ಸಿದ್ಧವಾಗುತ್ತಾನೆ. ಸುದ್ದಿ ಕೇಳಿದ ಅಪ್ಪಣ್ಣ ಭಟ್ಟರು ಇದಕ್ಕೂ ಮಾತಾಡಲಿಲ್ಲ. ಮೌನಿಯ ವಸ್ತ್ರಾವೃತ ಆಕೃತಿ ಕಣ್ಣಿನಲ್ಲಿ ಊರಿದಂತಾಗಿ ಅಪ್ಪಣ್ಣ ಭಟ್ಟರ ಸಲೀಸು ಬಾಯಿ ಸ್ತಬ್ಧವಾಯಿತು. ಕಣ್ಣು ಒಣಗಿತ್ತು. ತಲೆಯಮೇಲೆ ತಾವೂ ಒಂದು ವಸ್ತ್ರ ಹೊದ್ದು ಜಗಲಿಯ ಮೇಲೆ ಕುಕ್ಕರಕಾಲಿನಲ್ಲಿ ಕೂತರು. ಅಭಿಮಾನ ಛಲ; ಸ್ವಾರ್ಥ, ಅಸೂಯೆ ಇವುಗಳ ಸ್ಪರ್ಧೆಯಲ್ಲಿ ಅಪ್ಪಣ್ಣಭಟ್ಟರು ಗೆದ್ದರೂ, ತಲೆ ಬಾಗುವುದು ಸಾವಿಗೆ. ಇಬ್ಬರೂ ವ್ಯವಹಾರಿಕ ಪೈಪೋಟಿಯಲ್ಲಿ ಸೋತು, ಗೆದ್ದರೂ ತಲುಪುವುದು "ಮೌನ"ಕ್ಕೇ. ವ್ಯಕ್ತಿಗಳ ಸೋಲು, ಗೆಲುವು ಎಲ್ಲವನ್ನೂ ಇಲ್ಲವಾಗಿಸುವುದು ಸಾವು. ಶ್ರೀಮಠದ ವ್ಯವಹಾರದ ಸುತ್ತ ನಡೆಯುವ ಭಟ್ಟರಿಬ್ಬರ ಲೌಕಿಕ ಜಟಾಪಟಿ, ವ್ಯಾವಹಾರಿಕವಾಗುತ್ತಿರುವ ನಮ್ಮ ಧಾರ್ಮಿಕ ಜೀವನದ ವ್ಯಂಗ್ಯವನ್ನು ದರ್ಶನಮಾಡಿಸುತ್ತದೆ. ಫಳ ಫಳ ಹೊಳೆಯುವ ಭಾಷೆಯಲ್ಲಿ ಕಟ್ಟಿಕೊಟ್ಟಿರುವ ಮೌನಿ, ಅನಂತಮೂರ್ತಿಯವರ ಬಹುದೊಡ್ಡ ಸಾಧನೆಗಳಲ್ಲೊಂದು.

ಘಟಶ್ರಾದ್ಧ ಕಥೆಯಲ್ಲಿ ಪರಂಪರೆಯ ನಂಬಿಕೆಯನ್ನೆಲ್ಲ ಅಲ್ಲಾಡಿಸುವ ವಿಧವೆ ಯಮುನಕ್ಕನ ಅಕ್ರಮ ಪ್ರಣಯದಿಂದ ಗರ್ಭಿಣಿಯಾಗಿ ಆದರಿಂದ ಉಂಟಾಗುವ ಸಮಾಜಿಕ ಸಾಂಸ್ಕೃತಿಕ ತಲ್ಲಣಗಳನ್ನು ಎಳೆಯನಾದ ನಾಣಿಯ ಮೂಲಕ ಪರಿಭಾವಿಸುವ ಕ್ರಮ ಆಕರ್ಷಕವಾಗಿದೆ. ಪಾರಂಪರಿಕರ ದೃಷ್ಟಿಯಿಂದ ಭ್ರಷ್ಟ ಎನ್ನಿಸುವ ಯಮುನಕ್ಕನ ಪ್ರಣಯವನ್ನು, ಅದರ ಪರಿಣಾಮವನ್ನು ನಾಣಿ ಸ್ವೀಕರಿಸುವ ಮನೋಸ್ಥಿತಿಯಲ್ಲಿ

ಯಮುನಕ್ಕನ ಪರವಾದ ಅನುಕಂಪೆ ವ್ಯಕ್ತವಾಗುತ್ತದೆ. ಈ ಪ್ರಣಯದ ಬಗ್ಗೆ ಕ್ರೂರ ದೃಷ್ಟಿ ಹರಿಸುವ ಸಾಮಾಜಿಕ ಸಂದರ್ಭದಲ್ಲಿ, ಈ ಪ್ರಣಯ ಪ್ರಕೃತಿ ಸಹಜವಾದದ್ದೂ ಎಂಬ ಅಭಿಪ್ರಾಯದ ಕಡೆಗೆ ವಾಲುವ ಕಥನ ಕ್ರಮ ಯಶಸ್ವೀ ಭಾಗವಾಗಿದೆ. ನಂತರದಲ್ಲಿ ಅನಂತಮೂರ್ತಿಯವರು ಬರೆದ ಸಂಸ್ಕಾರ ಕಾದಂಬರಿಯ ಪ್ರಾಣೇಶಾಚಾರ್ಯರಿಗೂ ಆಗುವುದು ಹೀಗೆಯೇ. ಅದ್ದರಿಂದ ಘಟಶ್ರಾದ್ಧ ಕಥೆ ಸಂಸ್ಕಾರ ಕಾದಂಬರಿಗೆ ಪೂರ್ವಸಿದ್ಧತೆ ಎಂಬ ಅಭಿಪ್ರಾಯ ಅಸಮಂಜಸವೇನಲ್ಲ. ಘಟಶ್ರಾದ್ಧ ಚಲನಚಿತ್ರವಾಗಿಯೂ ಯಶಸ್ಸು ಗಳಿಸಿದೆ.

* * *

ಅನಂತಮೂರ್ತಿಯವರ ಮೊದಲ ಕಾದಂಬರಿ ಸಂಸ್ಕಾರ ೧೯೬೫ರಲ್ಲಿ ಪ್ರಕಟವಾಯಿತು. ಸಂಸ್ಕಾರ ಪರಂಪರೆಯೊಂದಿಗಿನ ಜಗಳದ ಕಥೆ. ಅನೂಚಾನವಾದ ಜೀವನದ ಮೌಲ್ಯಗಳನ್ನು, ಆಚರಣೆಯ ಬದುಕನ್ನು ಪ್ರಶ್ನಿಸುವ ದಾರ್ಷ್ಟ್ಯವನ್ನು ಲೇಖಕರು ತೋರಿಸಿದ್ದಾರೆ. ಈ ಕಾದಂಬರಿ ವೈದಿಕರನ್ನು ರೊಚ್ಚಿಗೆಬ್ಬಿಸಿತು. ವಿರೋಧಿಗಳಲ್ಲಿ ಹೊಟ್ಟೆಕಿಚ್ಚು ಹುಟ್ಟಿಸಿತು. ನವ್ಯದ ಪತಾಕೆಯನ್ನು ಕಾದಂಬರಿ ಕ್ಷೇತ್ರದಲ್ಲಿ ಹಾರಿಸಿತು. ಚಲನಚಿತ್ರವೂ ಆಗಿ ವಿವಾದಕ್ಕೆ ಎಡೆಮಾಡಿಕೊಟ್ಟದ್ದು ಇತಿಹಾಸ.

ಓದುಗನಿಗೆ ಮೊದಲು ಎದುರಾಗುವ ಚಿತ್ರಣ, ಅಗ್ರಹಾರದಲ್ಲಿ ಪ್ಲೇಗ್ ರೋಗ, ಸಾವಿನ ಭೀಕರತೆ. ಕೀಳು ಜಾತಿ ಹೆಣ್ಣು ಚಂದ್ರಿಯ ಸಂಗ ಮಾಡಿ, ಮದ್ಯ ಕುಡಿದು, ಮಾಂಸ ತಿಂದು, ಮುಸ್ಲಿಂಗೆಳೆಯರ ಸಂಪರ್ಕದಲ್ಲಿ ವೈದಿಕ ಕರ್ಮ ಭ್ರಷ್ಟ ನಾರಣಪ್ಪ ಪ್ಲೇಗ್‌ನಿಂದ ಸತ್ತಿದ್ದಾನೆ. ಅವನ ಸಂಸ್ಕಾರ ಮಾಡುವುದು ಹೇಗೆ? ಮಕ್ಕಳಿಲ್ಲದವನ ಸಂಸ್ಕಾರ ಮಾಡುವವರು ಯಾರು? ಅಗ್ರಹಾರದ ಬ್ರಾಹ್ಮಣರಲ್ಲಿ ಜಿಜ್ಞಾಸೆ. ಪರಿಹಾರ ಹುಡುಕುವ ಜವಾಬ್ದಾರಿಯನ್ನು ಶಾಸ್ತ್ರಜ್ಞನಾದ ಪ್ರಾಣೇಶಾಚಾರ್ಯರಿಗೆ ವಹಿಸುತ್ತಾರೆ. ಧರ್ಮ ಶಾಸ್ತ್ರಗಳನ್ನು ತಿರುವಿಹಾಕಿದರೂ ಪರಿಹಾರ ಕಾಣಲಿಲ್ಲ. ಮಾರುತಿಯ ಪ್ರಸಾದ ಕೇಳಲು ಊರ ಮುಂದಿನ ಮಾರುತಿಗುಡಿಗೆ ಬರುತ್ತಾರೆ. ಪ್ರಸಾದ ದೊರೆಯದೆ ಹಿಂದಿರುಗುತ್ತಿದ್ದಾಗ, ಕಾಡು, ಕತ್ತಲಲ್ಲಿ ಚಂದ್ರಿಯ ಜೊತೆ ಅನಿರೀಕ್ಷಿತ ಸಮಾಗಮವಾಗಿಬಿಡುತ್ತದೆ. ರೋಗಿಷ್ಟ ಹೆಂಡತಿಯಿಂದಾಗಿ ಕಟ್ಟಿ ಹಾಕಿದ್ದ ಕಾಮ ತೃಷ್ಣೆಯನ್ನು ಇಂಗಿಸಿಕೊಳ್ಳುವ ಸಂಗವಾಗುತ್ತದೆ. ಆಚಾರ್ಯರ ನೀತಿ, ನಿಯಮ ನಿಷ್ಠೆ ಧೂಳಿಪಟವಾಗಿಬಿಡುತ್ತದೆ. ರೂಢಿಗತವಾಗಿದ್ದ ನಂಬಿಕೆಯ ಬದುಕನ್ನು ಬಿಟ್ಟು ಸಹಜ ಮನುಷ್ಯತ್ವಕ್ಕೆ ತಿರುಗಿಬಿಡುತ್ತಾರೆ. ಶವ ಸಂಸ್ಕಾರಕ್ಕೆ ಪರಿಹಾರ ಹೇಳುವ ಅಧಿಕಾರ ಕಳೆದುಕೊಂಡುಬಿಡುತ್ತಾರೆ. ಆಚಾರ್ಯರ ಹೆಂಡತಿ ಸಾಯುತ್ತಾಳೆ. ಆಚಾರ್ಯರು

ಅಗ್ರಹಾರ ತ್ಯಜಿಸಿ ಹೊರಟುಬಿಡುತ್ತಾರೆ. ಕೋಳಿ ಪಂದ್ಯ ನೋಡಿ, ದೊಂಬರಾಟದ ಚಲುವೆಯ ಹಾವ ಭಾವ ಆಕರ್ಷಣೆಗೆ ಮರುಳಾಗಿ, ಪುಟ್ಟ ಪರಿಚಯಿಸಿದ ಪದ್ಮಾವತಿಯನ್ನು ಸಂಧಿಸಿ, ಆಚಾರ್ಯರು ಅಗ್ರಹಾರಕ್ಕೆ ಹಿಂದಿರುಗಲು ನಿರ್ಧರಿಸುವ ಹೊತ್ತಿಗೆ, ವೈದಿಕ ಬ್ರಾಹ್ಮಣ ಸಂಸ್ಕಾರಗೊಂಡು ಮನುಷ್ಯನಾಗುತ್ತಾನೆ. ಕಲಾತ್ಮಕ ದೃಶ್ಯಗಳು, ಸನ್ನಿವೇಶಕ್ಕೆ ತಕ್ಕ ವಿಡಂಬನೆ, ಹಾಸ್ಯ, ಅನುಕಂಪ ಎಲ್ಲವೂ ಮೇಳೈಸಿರುವ ನಿರೂಪಣಾ ಕ್ರಮದಲ್ಲಿ ಆಧುನಿಕ ಪುರಾಣ ಒಂದು ಓದುಗನಿಗೆ ಲಭ್ಯವಾಗುತ್ತದೆ.

ನಂತರದ ಕಾದಂಬರಿ "ಭಾರತೀಪುರ" ೧೯೭೩ರಲ್ಲಿ ಪ್ರಕಟವಾಯಿತು. "ಬದಲಾವಣೆಯೇ ಬದುಕಿನ ಧರ್ಮ" (ಪುಟ ೨೪) ಎಂದು ಸಾರಲು ಹೊರಟದ್ದು. ಜಗನ್ನಾಥ ಫ್ಯೂಡಲ್ ವ್ಯವಸ್ಥೆಯ ನಡವಳಿಕೆಯನ್ನು ಪಲ್ಲಟಗೊಳಿಸುವುದರ ಮೂಲಕ ಸಾಂಸ್ಕೃತಿಕ ಚಲನಶೀಲತೆಯನ್ನು ತರಲು ಉದ್ಯುಕ್ತನಾಗುವನು. ಸಹಸ್ರ ವರ್ಷಗಳಿಂದ ತನ್ನ ಮನೆಯಲ್ಲಿ ನಂಬಿಕೆ ಶ್ರದ್ಧೆಯಿಂದ ಪೂಜಿಸುತ್ತಿದ್ದ ಸಾಲಿಗ್ರಾಮ ಶಿಲೆಯನ್ನು ಹೊಲೆಯರು ಮುಟ್ಟುವಂತೆ ಪ್ರೇರೇಪಿಸುತ್ತಾನೆ. ಹಿಂಜರಿಯುವ ಹೊಲೆಯರನ್ನು ಗೋಗರದು, ಕೊನೆಗೆ ಅಧಿಕಾರ ಚಲಾಯಿಸುತ್ತಾನೆ. ಮುಟ್ಟಿದಂತೆ ಮಾಡಿ ಓಡಿಹೋಗುತ್ತಾರೆ. ಇನ್ನೊಂದು ನಾಟಕೀಯ ಪ್ರಸಂಗ: ಜಾತ್ರೆಯ ದಿನ ಹರಿಜನರನ್ನು ದೇವಾಲಯದೊಳಕ್ಕೆ ಪ್ರವೇಶಿಸುವಂತೆ ಪ್ರೇರೇಪಿಸುವುದು. ಅದದ್ದೇನು ? ಭೂತರಾಯನ ಅವತಾರವೇ ಆದ ಪುರೋಹಿತರ ಮಗ ಗಣೇಶ ಹಿಂದಿನ ರಾತ್ರಿಯೇ ಆವೇಶದಲ್ಲಿ ದೇವಾಲಯದ ಗರ್ಭಗುಡಿಯನ್ನು ಹೊಕ್ಕು ಮೂಲ ಲಿಂಗವನ್ನು ಆಗೆದು ಕಿತ್ತು ಹೊತ್ತು ಹೊಳೆಗೆ ಹೋಗಿ ಪಾಪನಾಶಿನೀ ಹೊಂಡದಲ್ಲಿ ಎಸೆದುಬಿಡುತ್ತಾನೆ. ಜಗನ್ನಾಥನ ಕ್ರಾಂತಿಕಾರಿ ಮನೋಭಾವಕ್ಕಿಂತ, ಗಣೇಶನ ಕ್ರಿಯೆ ತೇಜೋಮಯವಾಗಿ ಪ್ರಾಮಾಣಿಕವೆನ್ನಿಸುವಂತಿದೆ.

"ರಾಜಕೀಯ ಕಾದಂಬರಿಯಾಗಿ ಭಾರತೀಪುರ ಉದಾತ್ತ ಕ್ರಾಂತಿಕಾರಿ ಪರಿಕಲ್ಪನೆಯ ಶೋಧ ನಡೆಸುತ್ತದೆ. ಕಾದಂಬರಿ ಸ್ವಾತಂತ್ರ್ಯೋತ್ತರ ಕಾಲದ ಇಂಡಿಯಾದ ಜೀವನ ಪಲ್ಲಟದ ವಿವರಗಳಿಂದ ತುಂಬಿದೆ- ಮೂಲತಃ ಬುದ್ಧಿಜೀವಿ ಜೀವನ ಮಿತಿಗಳ ವಿಮರ್ಶಾ ಬರಹ" ಎಂಬ ಡಿ.ಆರ್. ನಾಗರಾಜ್ ಅವರ ಮಾತುಗಳು ಕಾದಂಬರಿಯ ಇತಿ-ಮಿತಿಗಳನ್ನು ಸೂಚಿಸುತ್ತದೆ. ಅನಂತಮೂರ್ತಿಯವರು ಬರೆದಿರುವ ಒಂದು ನಾಟಕ "ಅವಾಹನೆ"ಯ ಯುವ ನಾಯಕನೂ ಭಾರತೀಪುರ ಕಾದಂಬರಿಯ ಜಗನ್ನಾಥನಂತೆ ವಠಾರ ಜಗತ್ತಿನ ಪಾರಂಪರಿಕೆ ನಂಬಿಕೆ ನಡವಳಿಕೆಗಳಿಂದ ಬಿಡಿಸಿಕೊಳ್ಳಲು ನಡೆಸುವ ಹೋರಾಟದ ಚಿತ್ರಣ. ಗಣೇಶ ಚೌತಿಯ ದಿನದ ಹಿನ್ನೆಲೆಯಲ್ಲಿ ನಡೆಯುವ ಕ್ರಿಯೆಗಳು, ಆಧುನಿಕ ವೈಚಾರಿಕ ಮನೋಧರ್ಮದ ನವ್ಯ ನಾಟಕವನ್ನಾಗಿಸಿದೆ.

ಪಾರ್ಶ್ವವಾಯು ಪೀಡಿತನಾಗಿರುವ ರಾಜಕಾರಣಿ ಕೃಷ್ಣಪ್ಪನ ರಾಜಕೀಯ ಏಳು ಬೀಳುಗಳನ್ನು ಅವಸ್ಥೆ ಕಾದಂಬರಿಯಲ್ಲಿ ವಿಶ್ಲೇಷಿಸಲಾಗಿದೆ. ಮೂರ್ತಿಯವರ ಮೂರನೇ ಕಾದಂಬರಿ ೧೯೭೭ರಲ್ಲಿ ಬರೆದದ್ದು. ಚಲನಚಿತ್ರವೂ ಆಗಿ ಕೋರ್ಟಿನ ತಡೆಯಾಜ್ಞೆ ತೆರವಾದ ಮೇಲೆ ಪ್ರದರ್ಶನಗೊಂಡಿತು. ಎರಡೂ ಮಾಧ್ಯಮಗಳಲ್ಲಿ ಸಾಕಷ್ಟು ವಿವಾದವನ್ನು ಹುಟ್ಟುಹಾಕಿದ ಕಾದಂಬರಿ.

ಕೊಳೆಯುವುದೇ ಜಾಯಮಾನವಾದ ನಿತ್ಯ ಜೀವನ ಕ್ಷೇತ್ರದಲ್ಲಿ ಪೂರ್ಣ ಶುದ್ಧಿ ಹುಡುಕುವುದೆ? ಎಂಬ ಪ್ರಶ್ನೆ ಕೃಷ್ಣನನ್ನು ಬಾಧಿಸುತ್ತದೆ. ಬಜೆಟ್, ಕಾಮಗಾರಿ, ನೌಕರಿ, ಲಂಚ, ಭಡ್ತಿ, ವರ್ಗ, ಇತ್ಯಾದಿಗಳಲ್ಲಿ ಮುಳುಗಿಸುವ ರಾಜಕೀಯದಿಂದ ಮೇಲೇಳಲು ಸದಾ ಪ್ರಯತ್ನಿಸುತ್ತಾನೆ- ಕ್ರಾಂತಿಯ ಕನಸು ಕಾಣುತ್ತಾನೆ. ಇಂತಹ ಕೃಷ್ಣಪ್ಪನ ರಾಜಕೀಯ ಚಟುವಟಿಕೆ ನಡುವಿನ ರಸಿಕ ಜೀವನೋತ್ಸಾಹ, ಸಾಹಿತ್ಯ, ಸಂಸ್ಕೃತಿಯ ಆಸಕ್ತಿ; ಬಾಲ್ಯದ ಯೌವ್ವನದ ರೋಚಕ ಅನುಭವಗಳ ನಡುವೆ ಕ್ರಾಂತಿಯ ಮೂಲಕ ಸುಧಾರಣೆಗೆ ಹಾತೊರೆಯುವ ಕನಸು. ರೈತ ಸಂಘಟನೆ- ಉಳುವವನೇ ಒಡೆಯನಾಗಬೇಕೆಂಬ ಸಿದ್ಧಾಂತದ ಅನುಷ್ಠಾನಕ್ಕೆ ಪ್ರಯತ್ನಿಸುತ್ತಾನೆ. ಕ್ಷುದ್ರ ರಾಜಕೀಯದ ಕಿರುಕುಳ, ಮುಖ್ಯಮಂತ್ರಿ ಪದವಿ ತಪ್ಪಿ ಹೋಗಬಹುದಾದ ಪ್ರಸಂಗ. ಈ ಹಂತಗಳನ್ನೆಲ್ಲ ದಾಟಿ ನನಗೆ ಪ್ರೇಮ ಮುಖ್ಯ ಅದನ್ನು ಕಳಕೊಂಡು ಎಂಥ ಕ್ರಾಂತಿ ಮಾಡೋಕೆ ಸಾಧ್ಯ? ಮಾಡಿ ಏನು ಪ್ರಯೋಜನ? ಎನ್ನುವ ವಿವೇಕಕ್ಕೆ ಬಂದು ನಿಲ್ಲುವ ಅವಸ್ಥೆ, ನಮ್ಮ ರಾಜಕೀಯ ಸಂಸ್ಕೃತಿಯ ಇತಿಮಿತಿಗಳನ್ನು ತಳಮಟ್ಟ ಶೋಧಿಸುವ ಹಂಬಲವುಳ್ಳ ಕೃತಿ (ಎನ್. ರಾಮಚಂದ್ರ ಉಡುಪ). ಹಿಂದುಳಿದ ಜಾತಿಗಳಿಂದ ಮೇಲೆದ್ದು ಬಂದ ಉತ್ಸಾಹಿ ಪ್ರಾಮಾಣಿಕ ರಾಜಕೀಯ ನಾಯಕನೊಬ್ಬನು ಭ್ರಷ್ಟ ರಾಜಕಾರಣದ ಬಲೆಯಲ್ಲಿ ಸಿಲುಕಿ ಸೋಲುವ ಕಥೆ; ರೈತ ಚಳುವಳಿಯ ರಾಜಕಾರಣದ ಸೋಲಿನ ಕಥೆ (ಕೆ.ವಿ. ಸುಬ್ಬಣ್ಣ). ಬರ ಕಥೆಯಲ್ಲೂ ಪ್ರಕೃತಿ ವಿಕೋಪದಿಂದ ಉಂಟಾದ ಸಂಕಟ ಪರಿಸ್ಥಿತಿಯಲ್ಲೂ ಸ್ವಾರ್ಥ ರಾಜಕಾರಣದಿಂದ ಉಂಟಾಗುವ ಸಾಮಾಜಿಕ ವಿಷಮತೆ, ಮತೀಯ ಗಲಭೆಯೂ ಸೇರಿಕೊಂಡು ಸಹನೆ, ಕರುಣೆಯಂಥ ಮಾನವೀಯ ಮೌಲ್ಯಗಳನ್ನು ಮೀರಿಸಿದ ಅಮಾನವೀಯ ಕ್ರೂರ ನಡವಳಿಕೆಯ ಸಂದರ್ಭ ನಿರ್ಮಾಣವಾಗುತ್ತದೆ. ಜನಪರ ಹಿತೈಷಿಯಾಗಿದ್ದ ಸತೀಶನಂಥ ಅಧಿಕಾರಿ, ರಾಜಕೀಯ, ಸಾಮಾಜಿಕ ಒತ್ತಡದಿಂದ ಕಠೋರ ಅಧಿಕಾರವನ್ನು ಚಲಾಯಿಸುವ ಪರಿಸ್ಥಿತಿಗೆ ದೂಡಲ್ಪಡುತ್ತಾನೆ.

ಸಂಸ್ಕಾರದಲ್ಲಿ ಹೊಸ ಮೌಲ್ಯಗಳ ಶೋಧವನ್ನು, ಭಾರತೀಪುರದಲ್ಲಿ ಜಗನ್ನಾಥನ ವಿಫಲ ಕ್ರಾಂತಿಯನ್ನು, ಅವಸ್ಥೆಯಲ್ಲಿ ರಾಜಕೀಯ ಹಾಗೂ ನೈತಿಕತೆಯ ಹೊಯ್ದಾಟವನ್ನು

ಕಾಣಿಸುವ ಈ ಮೂರು ಕಾದಂಬರಿಗಳನ್ನು ಕೆ.ವಿ. ಸುಬ್ಬಣ್ಣನವರು ಅನಂತಮೂರ್ತಿಯವರ "ಕಾದಂಬರಿ ತ್ರಿವಳಿ"ಗಳೆಂದು ವಿಶ್ಲೇಷಿಸಿದ್ದಾರೆ. ಸ್ವಾಂತ್ರ್ಯಾನಂತರದ ಮೂವತ್ತು ವರ್ಷಗಳಲ್ಲಿ ಕಾಲಾನುಕ್ರಮವಾಗಿ, ಜಾತಿವ್ಯವಸ್ಥೆಯ ಬೇರು ಸಡಿಲವಾಗಿ ಅಲ್ಲಾಡತೊಡಗುವುದು; ಅಲ್ಲಿಂದ ಸಾಮಾಜಿಕ ಚಲನೆ, ವ್ಯವಹಾರ ಕ್ರಿಯೆಗಳು; ಅನಂತರ ಸಾಮಾಜಿಕ ಕ್ರಿಯೆಗೆ ಅಗತ್ಯವಾಗಿ ರಾಜಕೀಯ ಚಟುವಟಿಕೆ. ಹಳ್ಳಿಯಿಂದ ತಾಲ್ಲೂಕು, ಜಿಲ್ಲೆ ಪಟ್ಟಣದಿಂದ ರಾಜಧಾನಿಯವರೆಗೆ ತಾಕುವ ಕ್ರಿಯೆಗಳು ಅನುಕ್ರಮವಾಗಿವೆ. ಈ ರೀತಿಯ ಸಾತತ್ಯ ಈ ಕಾದಂಬರಿಗಳಲ್ಲಿ ಇರುವುದರಿಂದ ಒಟ್ಟಾರೆಯಾಗಿ "ತ್ರಿವಳಿ"ಗಳೆಂದು ವಿಶ್ಲೇಷಿಸಲು ಸಾಧ್ಯವಾಗಿದೆ.

"ಭವ" ಮತ್ತು "ದಿವ್ಯ" ಕಾದಂಬರಿಗಳು ಅನಂತಮೂರ್ತಿಯವರ ಮತ್ತೊಂದು ಹುಡುಕಾಟದ ಮಜಲುಗಳಾಗಿವೆ. ಭವದಲ್ಲಿ ಅನಿರೀಕ್ಷಿತವಾಗಿ ಅಪರಿಚಿತ ದಿನಕರನನ್ನು ರೈಲು ಪ್ರಯಾಣದಲ್ಲಿ ವಿಶ್ವನಾಥ ಶಾಸ್ತ್ರಿ ಭೇಟಿಯಾಗುವನು. ದಿನಕರನ ಕೊರಳ ತಾಯಿತದಲ್ಲಿ ಬಹುದೂರದ ಸಂಜ್ಞೆಯ ಗುರುತು ಹೊಳೆಯುತ್ತದೆ. ತಂದೆ ಮಗನ ಭೇಟಿಯಲ್ಲಿ ಉಂಟಾಗಬಹುದಾದ ಕರುಣೆ, ಪ್ರೀತಿ, ಭಯ, ಭರವಸೆ ಇತ್ಯಾದಿ ಭಾವಗಳ ತಾಡನದಲ್ಲಿ ಶಾಸ್ತ್ರಿಗಳು ಗಲಿಬಿಲಿಗೊಳ್ಳುತ್ತಾರೆ. ತಾನು ಕೊಂದಿದ್ದ ಮೊದಲ ಹೆಂಡತಿ ಸರೋಜಳ ಮಗನೇ ದಿನಕರ ಅನ್ನಿಸಿಬಿಡುತ್ತದೆ. ಹೌದೇ? ಅಲ್ಲವೇ? ಪ್ರಶ್ನೆಗಳು ಕಾಡುತ್ತವೆ. ಅದೃಶ್ಯನಾದ ಮಲೆಯಾಳಿ ಮಾಂತ್ರಿಕ ಕರುಣಾಕರ ಪಂಡಿತ ಮತ್ತು ಹೆಂಡತಿ ಸರೋಜಳ ಸಂಬಂಧ ನೆನಪಾಗುತ್ತದೆ. ಪ್ರೀತಿ ಅಂತಃಕರಣ ಕುಡಿಯೊಡೆಯುತ್ತದೆ. ಸರೋಜ ಹರಿದ್ವಾರದಲ್ಲಿ ತ್ರಿಪಾಠಿಗಳ ಆಶ್ರಯದಲ್ಲಿ ಬದುಕಿದ್ದು, ದಿನಕರನನ್ನು ಪೋಷಿಸಿದ್ದು ಇತ್ಯಾದಿ ವಿವರಗಳ ಮೂಲಕ ಶಾಸ್ತ್ರಿಗಳ ಭವದ ಬದುಕು ಬಿಚ್ಚಿಕೊಳ್ಳುತ್ತದೆ. ಶಾಸ್ತ್ರಿಗಳ ಎರಡನೇ ಹೆಂಡತಿ ಸೀತಮ್ಮ ದಿನಕರನ ಅಸ್ತಿತ್ವದ ಸಮಸ್ಯೆಯನ್ನು ಅರಿತುಕೊಳ್ಳುವುದು: ಇಡೀ ದೇಶವೆಲ್ಲ ಈ ಮಾಣಿಯನ್ನು ಭಾರಿ ತಿಳುವಳಿಕಸ್ಥ ಅಂತ ಗೌರವಿಸುತ್ತದೆ. ಆದರೆ ಈ ಮಾಣಿಗೆ ತನ್ನ ತಾಯಿ ಯಾರು ತಿಳಿಯದು, ತಂದೆ ಯಾರು ತಿಳಿಯದು, ತನ್ನ ಊರು ಯಾವುದು ತಿಳಿಯದು. ಅದಕ್ಕೇ ದೇವರನ್ನೇ ತಾಯಿ ತಂದೆ ಅಂತ ತಿಳಿಯಲಿಕ್ಕೇ ಏನೋ ಈ ವೇಷದಲ್ಲಿ ಅಲೀತಿದೆ. ನೆಲೆಯಿಲ್ಲದೆ ಲೋಲುಪನಾಗಿ ಗ್ಲಾಮರ್ ಜಗತ್ತಿನ ಸಂಬಂಧಗಳಲ್ಲಿ ಅಲೆದು ಆಯಾಸಗೊಂಡ ದಿನಕರ "ದೇವರೇ ತಾಯಿ ತಂದೆ" ಅಂದುಕೊಳ್ಳುವಂತಾಗುವುದರಲ್ಲಿ ಭವದ ಗುಟ್ಟು ಅಡಗಿದೆಯೇ? ಅನಂತಮೂರ್ತಿಯವರು ಇದುವರೆಗೂ ಪ್ರಶ್ನಿಸುತ್ತಿದ್ದ ನಂಬಿಕೆಯ ಪ್ರಪಂಚವನ್ನು ಈಗ ಒಪ್ಪಿಕೊಳ್ಳಲು ಹೊರಟಿದ್ದಾರೆಯೇ? ತಮ್ಮ ಸೃಜನಶೀಲತೆಯ ತಿರುವಿನ ಸಂದರ್ಭದಲ್ಲಿ ತಡಕಾಡುತ್ತಿರುವುದಾದರೂ ಯಾತಕ್ಕಾಗಿ?

ಡಿ.ಆರ್. ನಾಗರಾಜ್‌ರವರು "ಬಹುಮುಖಿ ಕಥನದನಿಗಳಲ್ಲಿ ಈ ಕಾದಂಬರಿಯನ್ನು ಬರೆಯಲಾಗಿದೆ. ಒಮ್ಮೆ ಉತ್ಕಟಕೌತುಕದ ಕಥೆಯಾಗಿ, ಒಮ್ಮೆ ಅಂತರಂಗದ ವಿಶ್ಲೇಷಣೆಯಾಗಿ- ಈ ಪುಟ್ಟ ಕೃತಿಯಲ್ಲಿ ಒಂದು ಎಪಿಕ್ ಕಾದಂಬರಿಯ ತಂತ್ರ ತುಂಬಿದೆ" ಎನ್ನುವ ಮಾತನ್ನು ವಿಮರ್ಶಕರು ಇನ್ನಷ್ಟು ಪರಿಶೀಲಿಸಬೇಕಾದ ಪ್ರಮೇಯವಂತೂ ಇದ್ದೇ ಇದೆ.

ಸಧ್ಯ ವಿಮರ್ಶಕರ ಪರಿವೀಕ್ಷಣೆಗೆ ಒಳಗಾಗುತ್ತಿರುವ ಮೂರ್ತಿಯವರ ಐದನೇ ಕಾದಂಬರಿ ದಿವ್ಯ (೨೦೦೧) "ಅತ್ಯಂತ ಧ್ಯಾನ ಸ್ಥಿತಿಯಲ್ಲಿ ಬರೆದಿದ್ದು. ಇದೊಂದು ಹಳೆಯ ಲೋಕದ ಹೊಸ ಸೃಷ್ಟಿ. ಯಾಕೆಂದರೆ ಈ ಕಾದಂಬರಿಯಲ್ಲಿ ಕಾಣಿಸಿರುವ ಪಾತ್ರ, ಸನ್ನಿವೇಶ ಎಲ್ಲವೂ ಅವರ ಹಿಂದಿನ ಕಥನಗಳಲ್ಲಿ ಕಾಣಿಸಿಕೊಂಡ ಸ್ಥಳ, ಪಾತ್ರ ಸಮುಚ್ಛಯವೇ- ಈ ಕಾದಂಬರಿಯಲ್ಲಿ ಇನ್ನೊಂದು ರೂಪದಲ್ಲಿ ಕಾಣಿಸಿಕೊಂಡಿದೆ" (ಬ್ಲರ್ಬ್). "ಇಷ್ಟರವರೆಗೆವ್ಯಕ್ತವಾದದ್ದನ್ನೆಲ್ಲ ಬೆನ್ನಿಗಿಟ್ಟುಕೊಂಡೇ ಆಗೋಚರವಾದ್ದಕ್ಕೆ, ಅವ್ಯಕ್ತಕ್ಕೆ ಕೈ ಚಾಚುವುದು ಆಗಿದೆ."

ಪುಣ್ಯ ಸ್ಥಳ ಯಾತ್ರಾ ಸ್ಥಳವೂ ಆಗಿರುವ ದಯಿನೆಯಲ್ಲಿ ಅಕ್ಕು ತನ್ನ ಸತ್ತ ಸವತಿ ಮಕ್ಕಳಾದ ಗೌರಿ ಗಂಗೆ, ಹೆಣ್ಣು ಮಕ್ಕಳನ್ನು ತನ್ನಲ್ಲಿ ಹುಟ್ಟಿದ ಮಕ್ಕಳಷ್ಟೇ ಅಕ್ಕರೆಯಿಂದ ಸಾಕಿ ದೊಡ್ಡವರನ್ನಾಗಿ ಮಾಡಿದ್ದಾಳೆ. ತಮ್ಮನಾದ ಪರಮ ಭಾಗವತ "ಕೇಶವ"ನು ಪಾರಂಪರಾಗತ ಪುರೋಹಿತ ವೃತ್ತಿ ಮಾಡಿಕೊಂಡಿದ್ದಾನೆ. ಮತ್ತು ದೇವನಹಳ್ಳಿಯ ಸಿರಿವಂತ ಮಂಜಯ್ಯನವರ ಮನೆ ಭೂವರಾಹನಿಗೆ ನಿತ್ಯ ಪೂಜೆ ಮಾಡಿಕೊಂಡಿದ್ದಾನೆ. ಇವರ ಮನೆಗೆ ಪ್ರಾಚೀನ ಕಾಲದ ಋಷಿಗಳಂತೆ ಬಂದು ಗೌರಿಯನ್ನು ಕಾರಣಕನ್ಯೆ ಮಂಗಳಗೌರಿಯಂತೆ ಕಾಣುವ, ಅಕ್ಕುವನ್ನು ತಾಯಿತನದ ಕರುಣಾಮೂರ್ತಿಯಂತೆ ಭಾವಿಸುವ ಕೃಷ್ಣಶಾಸ್ತ್ರಿಗಳು. ದಯಿನೆ ಮನೆಗೆ ಒಂದರ್ಧ ಮೈಲಿ ದೂರದಲ್ಲಿ ದೇವನಹಳ್ಳಿ ಸನಾತನಿ, ಧರ್ಮನಿಷ್ಠ, ನೆಹರೂ ಅವರ ಆಧುನಿಕತೆಯನ್ನೆಲ್ಲ ಮೈಗೂಡಿಸಿಕೊಂಡ ಶ್ರೀಮಂತ ರಾಜಕಾರಣಿ ಮಂಜಯ್ಯನವರ ಮನೆ. ಮಂಜಯ್ಯನವರಿಗೆ ನಿಧನಳಾಗಿರುವ ಮಡದಿಯಿಂದ ಪಡೆದ ಇಬ್ಬರು ಮಕ್ಕಳು. ಹಿರಿಯಮಗ ಘನಶ್ಯಾಮ ಇಂಗ್ಲೆಂಡ್‌ನಲ್ಲಿ ಓದುತ್ತಿರುವನು. ವಿಧವೆ ಮಗಳು ವಿಮಲ ಮದ್ರಾಸಿನಲ್ಲಿ ಲಾ ಓದಿ ಬಂದಿರುವವಳು. ಡ್ರೈವರ್ ಮೈಕಲ್‌ನೊಂದಿಗೆ ಪ್ರಣಯದಿಂದಾಗಿ ತಾಯಿಯಾಗಿ, ಲೋಕಾಪವಾದಕ್ಕೆ ಹೆದರಿ, ಮಗುವನ್ನು ಸಾಕಲು ಗೋಪ್ಯವಾಗಿ ಅಕ್ಕುವಿನ ಮನೆಗೆ ಮುಟ್ಟಿಸುತ್ತಾಳೆ. ಮಂಗಳೂರಿನಲ್ಲಿ ಮಂಜಯ್ಯನವರು ಇಟ್ಟುಕೊಂಡ ಮೀನಾಕ್ಷಿ ಮಗಳು ವಿನೋದಿನಿ. ಸ್ಥಳ ಪುರಾಣಿ ಕರಿಯ ಕೇಶವನ ಮನೆಯ ಕೊಟ್ಟಿಗೆ ಕೆಲಸದಾಳು. ಗೌರಿಗೆ ಥೇಟ್ ನೀಲಮೇಘಶಾಮ ಕೃಷ್ಣ ನಂತಿರುವನು. ತನ್ನ ಗುಡಿಸಿಲ ಗೋಡೆ ಮೇಲೆ

ದೇವಿಯಂತಿರುವ ಗೌರಿಯ ಚಿತ್ರ ಬಿಡಿಸಿದ್ದಾನೆ. ಅವನ ತಾಯಿ ಆ ಚಿತ್ರವನ್ನು ಪೂಜಿಸುತ್ತಾಳೆ. ಜಲಜ ಅಡಿಕೆಮರ ಹತ್ತುವ ಶೀನಪ್ಪನ ಮಗಳು. ದಯಿನೆಮನೆಗೆ ಕೇಶವನಿಂದ ಶಾಸ್ತ್ರ ಕೇಳಲು ಪಂಚಾಂಗ ನೋಡಿಸಲು, ಅಕ್ಕು ಕೊಡುವ ಮಕ್ಕಳ ಮದ್ದಿಗೆ ಕಷ್ಟ ಸುಖ ತೋಡಿಕೊಳ್ಳಲು ಬಂದು ಹೋಗುವ ಶೂದ್ರರು. ತೀರ್ಥಹಳ್ಳಿ ಜಮೀನ್ದಾರ ಗಣಪಯ್ಯ, ಮಗಳು ಬಾಲ ವಿಧವೆ ಸರಸ್ವತಿಯನ್ನು ಪ್ರೀತಿಸುವ ಸ್ಕೂಲ್ ಮಾಸ್ಟರ್ ದಾವಣಗೆರೆಯ ಮೋಚಿ ಜಾತಿಯ ದುರುಗ. ಸೋಶಿಲಿಸ್ಟ್ ಪುಟ್ಟೇಗೌಡ. ಹಳ್ಳಿಯ ಗರ್ಭದಲ್ಲಿ ಕ್ರೌರ್ಯ, ದಾರಿದ್ರ್ಯ, ಸಣ್ಣತನಗಳು ಮನೆಮಾಡಿಕೊಂಡಿವೆ. ಜೊತೆಗೆ ದಿವ್ಯ ದರ್ಶನ ಮಾಡಿಸಬಲ್ಲ ಸಾಂಸ್ಕೃತಿಕ ಸಂದರ್ಭವೂ ಅಂತರ್ಗತವಾಗಿದೆ. ಈ ದಿವ್ಯವನ್ನು ಹುಡುಕುವ ಪರಿಕ್ರಮದಲ್ಲಿ ಅನಂತಮೂರ್ತಿಯವರು ಇದುವರೆಗಿನ ತಮ್ಮೆಲ್ಲ ಆಧುನಿಕತೆಯ ಪರಿವೇಶದಿಂದ ಹೊರಗೆ ಬಂದು ನಮ್ಮ ಸಂಸ್ಕೃತಿ ಮೂಲ ರೂಪಗಳನ್ನು ಕಂಡುಕೊಳ್ಳುವ ಹವಣಿಕೆ ಇದೆ. ಕಾದಂಬರಿಯಲ್ಲಿ ಕಾಣಿಸಿರುವ ವಿನೋದಿನಿ-ಮಿಗುಲಿಯರ ಪ್ರಣಯ, ಕರಿಯ-ಜಲಜರ ಪ್ರಣಯ, ದಲಿತ ಮೇಸ್ಟ್ರು ದುರುಗ-ಸರಸ್ವತಿಯರ ಪ್ರಣಯ; ಈ ಎಲ್ಲಾ ಪ್ರೇಮ ಪ್ರಕರಣಗಳೂ ಹೊಸ ಶೋಧನೆಯತ್ತ ದುಡಿಯುತ್ತವೆ. ಸಾಹುಕಾರ ಮಂಜಯ್ಯನವರ ಪ್ರಣಯ ಪ್ರಸಂಗಗಳು ವೈಭವೀಕರಣಗೊಂಡಿವೆ.

ಪ್ರಣಯದ ಪರಿಣಾಮವಾಗಿ ಕರಿಯ ದುರುಗರ ಕೊಲೆಯಾಗುತ್ತದೆ. ಮಂಜಯ್ಯನ ಮಗ ಘನಶ್ಯಾಮ ಲಂಡನ್ನಿನಿಂದ ವಿದ್ಯಾಭ್ಯಾಸ ಮುಗಿಸಿಕೊಂಡು ಹುಟ್ಟೂರು ದೇವನಹಳ್ಳಿಗೆ ಹಿಂದಿರುಗುತ್ತಾನೆ. ಅಪ್ಪನ ಸಾವಿನ ನಂತರ ರಾಜಕೀಯದ ಉತ್ತರಾಧಿಕಾರಿಯಾಗುತ್ತಾನೆ. ಪೂಜಿಸಿಕೊಳ್ಳುತ್ತಿದ್ದ ಮನೆ ದೇವರು ಭೂವರಾಹ ವಿಗ್ರಹವನ್ನು ಗೋಡೆಯ ಚಂದದ ಗೊಂಬೆಯಾಗಿಸುತ್ತಾನೆ. ಅತ್ಯಾಧುನಿಕ ಅಭಿವೃದ್ಧಿಯ ಸವಲತ್ತುಗಳಿಂದ ಹಳ್ಳಿಯನ್ನು ಜಾತೀಯತೆ, ನಿರಕ್ಷರತೆ, ಬಡತನದಿಂದ ಪಾರುಮಾಡಲು ಅಭಿವೃದ್ಧಿಯೋಜನೆಗಳನ್ನು ಹಾಕಿಕೊಳ್ಳುತ್ತಾನೆ. ಸಮಾಜವಾದಿ ಪುಟ್ಟೇಗೌಡ ಐರೋಪ್ಯ ಮಾದರಿಯ ಅಭಿವೃದ್ಧಿಯನ್ನು ತಿರಸ್ಕರಿಸಿ, ಜಯಪ್ರಕಾಶರ ಸರ್ವೋದಯ ಮಾದರಿಯ ಅಭಿವೃದ್ಧಿ ಯೋಜನೆಗಳನ್ನು ಪ್ರತಿಪಾದಿಸುತ್ತಾನೆ. ಗಾಂಧಿ ಪ್ರಣೀತ ಹಿಂದ್ ಸ್ವರಾಜ್ಯದ ಕಡೆಗೆ ಚಲನೆ ಕಂಡುಬರುತ್ತದೆ. ಘನಶ್ಯಾಮನನ್ನು ವರಿಸಲು ಸಿದ್ಧಳಾಗುವ ಗೌರಿ, ಕರಿಯನು ಕೊಟ್ಟಿದ್ದ ಹುಲಿಯುಗುರನ್ನು ಕಟ್ಟಿಕೊಂಡು ದೇವಿಯಂತೆ ಕಾಣಿಸುತ್ತಾಳೆ. ದಿವ್ಯ ಹಿಡಿದಂತೆ ಇವರಿಬ್ಬರ ಪಾಣಿ ಗ್ರಹಣ. ಸಾತ್ವಿಕಳಾದ ವಿನೋದಿನಿ-ಮಿಗುಲಿಯರ ಅಂತರ್‌ಜಾತಿ ಪ್ರಣಯ ಮಂಜಯ್ಯನವರ ಕುಟುಂಬದ ಭಾಗವಾಗಿ ಪರಿಣಮಿಸುತ್ತದೆ. ಹಡೆದು ತಾಯಿಯಾಗದಿದ್ದರೂ ತಾಯ್ತನವನ್ನು ಮೆರೆಯುವ ಅಕ್ಕು. ಭೂವರಾಹನನ್ನು

ಪೂಜಿಸುತ್ತಿದ್ದ ಕೇಶವ ಘನಶಾಮನು ಸ್ಥಾಪಿಸುವ ಟ್ರಸ್ಟ್‌ನ ಕಾರ್ಯದರ್ಶಿಯಾಗುತ್ತಾನೆ. ಇತ್ಯಾದಿ ಸನ್ನಿವೇಶಗಳು ಅನಂತಮೂರ್ತಿಯವರ ಇವತ್ತಿನ ನಿಜಸ್ಥಿತಿಯನ್ನು ಪ್ರಾಚೀನದ ಉತ್ಖನನದಿಂದ ಪಡೆಯಬಹುದಾದ ಸಾಂಸ್ಕೃತಿಕ ದಿವ್ಯವನ್ನು ಕಾಣಿಸುವಂಥದ್ದೇ ಆಗಿದೆ. ಅಡಿಗರು ಬರೆದಿರುವಂತೆ: ಇನ್ನಾದರೂ ಪೂರ್ವಮೀಮಾಂಸೆ, ಕರ್ಮಕಾಂಡಗಳನ್ನು ಬಗೆಯಬೇಕು. ಹಾಗೆ ಬಗೆಯುವಿಕೆಯ ಕ್ರಿಯೆಯಲ್ಲಿ ಅನಂತಮೂರ್ತಿಯವರ ಮಾದರಿಗೆ ಅನುಗುಣವಾದ ರಚನಾ ಕೌಶಲ್ಯವೂ ಓದುಗನಿಗೆ ದೊರಕುತ್ತದೆ.

ಒಂದು ಸಂದರ್ಶನದಲ್ಲಿ: "ನನ್ನ "ದಿವ್ಯ" ಕಾದಂಬರಿಯಲ್ಲಿ ಒಬ್ಬಳು "ಗೌರಿ", ಅಂತ ಬರ್ತಾಳೆ, ಅವಳು ಕೇವಲ ಕನ್ನಡದ ಮಟ್ಟಿಗೆ ಇರುವ ಕೃತಿಗಳನ್ನು ಓದಿಕೊಂಡವಳು. ಅವಳಿಗೇನು ಇಂಗ್ಲೀಷ್ ಗಿಂಗ್ಲೀಷ್ ಬರ್‍ತಿರಲಿಲ್ಲ. ಕನ್ನಡದಲ್ಲಿ ಓದಿಕೊಂಡೇ ತನ್ನ ಜಗತ್ತನ್ನು ಮೀರುವ ಶಕ್ತಿ ತನಗಿದೆ ಅನ್ನುವುದು ಅವಳಿಗೆ ಗೊತ್ತಾಯಿತು. ಸಂಪ್ರದಾಯಸ್ಥ ಮನೆಯಲ್ಲಿದ್ದು ಅದನ್ನು ಮೀರಿ ಬೆಳೆಯಲು ಯತ್ನಿಸಿದಳು. ಅವಳು ನನ್ನನ್ನು ಬಹಳ ಹಿಡಿದುಬಿಟ್ಟಿದ್ದಾಳೆ. ಏಕೆಂದರೆ ನನ್ನ ಹಿಂದಿನ ಎಲ್ಲ ಕೃತಿಗಳಲ್ಲಿ ಈ ರೀತಿ ಮೀರುವ ವ್ಯಕ್ತಿಗಳೆಲ್ಲ ತುಂಬ ಕನ್ನಡೇತರವಾದ ಇನ್‌ಫ್ಲ್ಯೂಯನ್ಸನ್ನು ಪಡೆದವರಾಗಿದ್ದಾರೆ. ಕನ್ನಡದ ಒಳಗೇ ಇದ್ದು ಅದು ಬರಕ್ಕಾಗುತ್ತಾ- ಮೌನಿಯಲ್ಲಿ ಕೂಡ ಅಂಥದೇ ಪ್ರಯತ್ನ ಮಾಡಿದ್ದೆ. ಇಂಥದ್ದನ್ನು ನನಗೆ ಮಾಡೋದಕ್ಕೆ ಸಾಧ್ಯವಾಗುವಾಗ ನಾನು ಪಡೆದ ಯುರೋಪು ಹಿಂದೆ ಸರಿದಿರುತ್ತೆ." ಯುರೋಪು ಹಿಂದೆ ಸರಿದು ದೇಶಿಯವಾಗುವ ಪ್ರಕ್ರಿಯೆ ಇಂದಿನ ಇಕ್ಕಟ್ಟಿನ ಸಾಂಸ್ಕೃತಿಕ ಸಂದರ್ಭದಲ್ಲಿ ಮಹತ್ವಪೂರ್ಣವಾದ ಅವಶ್ಯಕತೆಯಾಗಿದೆ. ಯಾಕೆಂದರೆ ಜಾಗತೀಕರಣದಿಂದ ಉಂಟಾಗಲಿರುವ ದುಷ್ಪರಿಣಾಮಗಳನ್ನು ತಡೆಯಬೇಕಾಗಿರುವುದರಿಂದ. ಅದು ಸಾಧ್ಯವಾಗುವುದು ಪರ್ಯಾಯ ಮಾರ್ಗದಿಂದ. ಆ ಮಾರ್ಗ ದೇಶಿಯ ಜ್ಞಾನ ಸಂಪತ್ತನ್ನು ಆಧುನಿಕ ಸಂಸ್ಕೃತೀಕರಣಕ್ಕೆ ಮತ್ತೆ ಹೊಂದಿಸುವ ವಿವೇಕದಿಂದ. "ದಿವ್ಯ" ಎಂದರೆ "ದೇಶಿ" ಎಂದೂ ಪರಿಭಾವಿಸುವುದರಿಂದ ವಸುಧಾ-ವಲಯ-ವಿಲೀನ-ವಿಶದ-ವಿಷಯ ವಿಶೇಷಂ ಪ್ರಕ್ರಿಯೆಗೆ ಮತ್ತೆ ತೊಡಗಿಸಿಕೊಳ್ಳುವುದರ ಮೂಲಕ ನಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯವಾಗುವುದರಿಂದ. ದೇಶೀಯ ಜ್ಞಾನದ ಸೂರ್ಯನ ಕುದುರೆಯ ಹಡೆ ವೆಂಕಟ ಅನಂತುವಿಗೆ ಸಂತನಂತೆ ಕಂಡಿದ್ದಾನೆ. ಇದುವರೆವಿಗು ಇವನನ್ನು ಕುರಿತು ಬರೆಯಲಿಲ್ಲವಲ್ಲಾ ಎಂಬ ವಿಷಾದ ಅನಂತುವಿಗೆ ಇತ್ತು. ಈ ರೀತಿಯ ವಿಷಾದದಿಂದ ತಿರುವು ಪಡೆದ ಅನಂತಮೂರ್ತಿಯವರ ಚಿಂತನೆ ದಿವ್ಯದಲ್ಲಿ ಸಾಕಾರವಾಗಿದೆ. ಈ ರೀತಿಯ ತಿರುವು ನಮ್ಮ ರುಚಿ-ಅಭಿರುಚಿಗಳನ್ನು ದೇಶಿ ಮೂಲಕ ವಿಶ್ವಾತ್ಮಕವಾಗಿಸುವ ಪ್ರಕ್ರಿಯೆಯಾಗಿ ಕಂಡುಬರುತ್ತದೆ.

ಆರಂಭದ ಕಥೆಗಳಲ್ಲಿ ತಾಯಿ, ಹುಲಿಯ ಹೆಂಗರಳು ಇತ್ಯಾದಿಗಳಲ್ಲಿ ಗ್ರಾಮೀಣ ಬದುಕಿನ ಭಾವುಕವಾದ ಅನುಭವಗಳನ್ನು ಏಕಾಗ್ರತೆಯಲ್ಲಿ ಚಿತ್ರಿಸಿದ್ದಾರೆ. ಪ್ರಕೃತಿ ಕಾರ್ತೀಕ, ಪ್ರಸ್ತ, ಇತ್ಯಾದಿ ಕಥೆಗಳಲ್ಲಿ ಆಧುನೀಕರಣದತ್ತ ಪಟ್ಟಣಾಭಿಮುಖವಾದ ಯುವ ತಲೆಮಾರಿನ ಸಂದಿಗ್ಧ ಸ್ಥಿತಿಯನ್ನು ಕಾಣಿಸುತ್ತಾರೆ. ಮುಂದಕ್ಕೆ ಪರಂಪರೆ ಜೊತೆಯ ಜಗಳದ ಮುಖಗಳು. ಆಧುನಿಕ ಮೌಲ್ಯಗಳ ಶೋಧದತ್ತ ಸಂಸ್ಕಾರ ಕಾದಂಬರಿಯಲ್ಲಿ ಪರಂಪರೆ ಆಧುನಿಕತೆಯ ಮುಖಾಮುಖಿ ಕ್ಲಿಪ್ ಜಾಯಿಂಟ್ ನಂಥ ಕಥೆಯಲ್ಲಿ. ಭಾರತೀಪುರ ಕಾದಂಬರಿಯಲ್ಲೂ, ಅದೇ ಸಂದರ್ಭದಲ್ಲಿ ರಾಜಕೀಯವೂ ತೊಡರಿಕೊಂಡು ಪರಿಶುದ್ಧಿತೆಯ ಶೋಧ ಅವಸ್ಥೆಯಲ್ಲಿ ಇವೆಲ್ಲ ಪರಂಪರೆಗೆ ಪರ್ಯಾಯವಾಗಿ ಆಧುನಿಕ ವಿಚಾರಶೀಲತೆ ಮುಖಾಮುಖಿಯಾಗುವುದು. ಮಾನವೀಯವಾದವುಗಳ ಶೋಧವಾಗಿವೆ. ಇದೆಲ್ಲ ನವ್ಯ ಸಂವೇದನೆಯ ಸಂದರ್ಭದ ಯೂರೋಪಿನ ಆಧುನಿಕತೆಯ ವಿಚಾರಗಳಿಂದ ಪ್ರೇರಿತವಾದವುಗಳು. ಸೂರ್ಯನ ಕುದುರೆಯಿಂದ ನವ್ಯೋತ್ತರ ಚಿಂತನೆಗಳು ಯೂರೋಪ್ ವಿಚಾರಗಳಿಗೆ ಬದಲಾಗಿ ಕನ್ನಡದ್ದೇ ಆದ ಜ್ಞಾನ ಶಿಸ್ತಿನಿಂದ ಪ್ರೇರಿತವಾದವುಗಳು. ಇವತ್ತಿನ ಜಾಗತೀಕರಣಕ್ಕೂ ಪರ್ಯಾಯವನ್ನೂ ಹುಡುಕುವ ಪ್ರಕ್ರಿಯೆಯಾಗಿದೆ. ಒಂದು ರೀತಿಯ ಪರಿಕ್ರಮಣ ಅನಂತಮೂರ್ತಿಯವರ ಬರಹದಲ್ಲಿ ಕಾಣುತ್ತದೆ. ಏಕೆಂದರೆ ಅವರು ಹಟವಾದಿಯಲ್ಲ. ನಾನು ಹೇಳುತ್ತಿರುವುದೇ ಅಂತಿಮ ಸತ್ಯವೆಂದು ತಿಳಿದವರಲ್ಲ. ಹುಡುಕಾಟದಲ್ಲಿ ತೊಡಗಿರುವವರು. ಕಾಲಕಾಲಕ್ಕೆ ಸತ್ಯವೆಂದು ತೋರಿದ್ದನ್ನು ಕಾಣಿಸುವಂಥವರು. ಮತ್ತು ತಾವು ಹುಟ್ಟಿ ಬೆಳೆದ ಬ್ರಾಹ್ಮಣ ಸಮಾಜದ ಅನುಭವ ದ್ರವ್ಯವನ್ನು ಮತ್ತೆ ಮತ್ತೆ ಶೋಧಕ್ಕೆ ಒಡ್ಡುತ್ತಾರೆ. ಮತ್ತು ಅವರನ್ನು ಬೇರುಗಳಿಂದ ದೂರ ಒಯ್ದ ಆಧುನಿಕ ಶಿಕ್ಷಣದ ಕಾರಣದಿಂದಾಗಿ, ಗಳಿಸಿದ ವಿಚಾರಗಳ ವಿವೇಕದಿಂದ ಪರಂಪರೆಯನ್ನು ವಿಮರ್ಶೆಗೆ ಒಡ್ಡುತ್ತಾರೆ. ಹಾಗೂ ತಾನು ಕಂಡ ಸಮಾಜದಲ್ಲಿನ ಪ್ರೀತಿ, ಪ್ರಣಯ, ನಂಬಿಕೆ, ಆಚಾರ, ವಿಚಾರ, ಈರ್ಷೆ, ಅಸೂಯೆ, ಸಂಘರ್ಷ, ಕಷ್ಟ ಸುಖಗಳಾದಿಯಾಗಿ ಬದುಕಿನ ಬಹುಮುಖಗಳನ್ನು ವಿಮರ್ಶೆಗೆ ಒಡ್ಡಿ ಕಲಾತ್ಮಕವಾಗಿ ಕಟ್ಟಿಕೊಡುವ ಕೌಶಲ್ಯದಿಂದ ಇಂದಿಗೂ ಪ್ರಯೋಗಶೀಲರಾಗಿದ್ದಾರೆ. ವಿಶಿಷ್ಟರೀತಿಯ ಲೇಖಕರಾಗಿದ್ದಾರೆ. ಕುವೆಂಪು, ಮಾಸ್ತಿ, ಕಾರಂತ, ಬೇಂದ್ರೆ, ಅಡಿಗ ಮೊದಲಾದ ಪೂರ್ವ ಸೂರಿಗಳ ಪರಂಪರೆಯನ್ನು ಮುಂದುವರೆಸಿದ ಗತಿಶೀಲ ಚಿಂತಕರಾಗಿ ಅನಂತಮೂರ್ತಿಯವರು ಇಂದಿನ ಸಂಸ್ಕೃತಿ ನೇತಾರರಲ್ಲಿ ಒಬ್ಬರಾಗಿದ್ದಾರೆ.

* * *

ಈ ವರೆಗೆ ಅನಂತಮೂರ್ತಿಯವರ ಐದು ವಿಮರ್ಶಾ ಲೇಖನಗಳ ಸಂಗ್ರಹಗಳು ಪ್ರಕಟವಾಗಿವೆ. ಪಂರಪರೆಯ ಪರಿವೀಕ್ಷಣೆ, ಆಳವೂ ವಿಸ್ತಾರವೂ ಆದ ಅಧ್ಯಯನ,

ಆಧುನಿಕವಾದ ಚಿಂತನ ಕ್ರಮ, ಚಿಕಿತ್ಸಕ ಬುದ್ಧಿ, ಸಾಂದರ್ಭಿಕ ಪ್ರಸ್ತುತತೆಯ ಪರಿಜ್ಞಾನ, ಗಾಢವಾಗಿ ತೊಡಗಿಕೊಂಡು ವಾದ ವಾಗ್ವಾದಗಳಿಗೆ ತೆರೆದುಕೊಂಡ ಮನಸ್ಸು ಎಲ್ಲವೂ ಒಟ್ಟಾಗಿ ದುಡಿಯುವ ಅನನ್ಯರೀತಿಯ ಸಂಸ್ಕೃತಿ ಸಂವಾದವನ್ನು ಲೇಖನಗಳಲ್ಲಿ ಒದಗಿಸಿಕೊಟ್ಟಿದ್ದಾರೆ: ಪ್ರಜ್ಞೆ ಮತ್ತು ಪರಿಸರ, ಸನ್ನಿವೇಶ, ಸಮಕ್ಷಮ, ಪೂರ್ವಾಪರ, ಮತ್ತು ಬೆತ್ತಲೆ ಪೂಜೆ ಯಾಕೆ ಕೂಡದು? ಸಂಕಲನಗಳಲ್ಲಿ. ಪೂರ್ವಾಪರದ ಪ್ರಸ್ತಾವನೆಯಲ್ಲಿ "ನನಗೆ ಸಾಧ್ಯವಾದ ಆಳದಲ್ಲಿ ನಿಂತು ಈ ಲೇಖನಗಳನ್ನು ಬರೆದಿದ್ದೇನೆ ಎಂಬ ನಂಬಿಕೆ ನನಗಿದೆ. ಯಾವ ವಿಷಯವನ್ನೇ ಆಗಲಿ ಅದು ಸದ್ಯದ ರಾಜಕೀಯ ಘಟನೆಯೇ ಇರಲಿ, ಸಾಂಸ್ಕೃತಿಕ ಸಮಸ್ಯೆಯಿರಲಿ, ಸಾಹಿತ್ಯಕ್ಕೆ ಸಂಬಂಧಪಟ್ಟಿರಲಿ, ಜನ ರೋಚಕವಾಗದಂತೆ, ಸಾಪ್ತಾಹಿಕ, ಪಾಕ್ಷಿಕ, ಮಾಸಿಕಗಳ ವೃತ್ತಿ ನಿರತ ಕಣ್ಣಿನಿಂದ ಕಾಣುವ ಪ್ರಲೋಭನೆತೊರೆದು ಚಿಂತಿಸಬೇಕೆಂಬುದು ನನ್ನ ಪ್ರಯತ್ನವಾಗಿದೆ. ಲೇಖಕ ಎಷ್ಟು ಭಾವ ಜೀವಿಯೋ ಅಷ್ಟೇ ಚಿಂತನಶೀಲ. ಎಲ್ಲ ವಿಷಯಗಳಲ್ಲೂ ಇವೆರಡು ಒಟ್ಟೊಟ್ಟಿಗೆ ಒಂದಕ್ಕೊಂದು ಹೊರತಲ್ಲವೆಂಬಂತೆ ವ್ಯಕ್ತವಾಗುವುದು ಅನಿವಾರ್ಯವೆಂದು ನಾನು ತಿಳಿದಿದ್ದೇನೆ. ಆದ್ದರಿಂದಲೇ ಇಲ್ಲಿನ ಕೆಲವು ಲೇಖನಗಳಲ್ಲಿ ಕಥೆಗೂ, ವೈಚಾರಿಕ ಪ್ರಬಂಧಕ್ಕೂ, ಕಾವ್ಯಕ್ಕೂ ಇರುವ ಭೇದಗಳು ಅಳಿಸಿಹೋಗಿವೆ. ಅಂಥವನ್ನು "ವಿಶೇಷ ಬಗೆಯ "ಆಖ್ಯಾನ"ಗಳೆಂದು ಓದಿಕೊಳ್ಳಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ. ಈ ದಶಕದಲ್ಲಿ ನಾನು ನನ್ನ ಶಕ್ತ್ಯಾನುಸಾರ ಬರೆಯಬಹುದಾಗಿದ್ದ ಕಥೆ, ಕವನ, ಪ್ರಬಂಧಗಳನ್ನೆಲ್ಲ ಇಲ್ಲಿ ಬರೆದು ಬಿಟ್ಟಿದ್ದೇನೆ." ಅನಂತಮೂರ್ತಿಯವರ ಈ ಮಾತುಗಳನ್ನು ಹೆಚ್ಚಿನ ಎಲ್ಲ ಲೇಖನಗಳಿಗೂ ಅನ್ವಯಗೊಳಿಸಿಕೊಳ್ಳಬಹುದು. ಎಂದು ನಾನು ಭಾವಿಸಿದ್ದೇನೆ.

ಐವತ್ತು- ಅರವತ್ತರ ದಶಕಗಳು ನವ್ಯ ಸಾಹಿತ್ಯದ ಏರುಗಡೆಯ ಕಾಲಘಟ್ಟ. ಸಾಹಿತ್ಯ ವಿಮರ್ಶೆಯನ್ನು ಬಹುಮುಖ್ಯ ಅಧ್ಯಯನ ಶಿಸ್ತಾಗಿ ಪರಿಗಣಿಸಿದ ಕಾಲ. ಅನಂತಮೂರ್ತಿಯವರಿಗೆ ಸಾಹಿತ್ಯ ಸೃಷ್ಟಿಯಷ್ಟೇ, ಸಾಹಿತ್ಯದ ಓದು, ವಿಚಾರ ವಿಮರ್ಶೆ ಎಲ್ಲವೂ ಗಂಭೀರವಾದ ಸಾಂಸ್ಕೃತಿಕ ಚಟುವಟಿಕೆಗಳು. ಹಗುರವಾದ ಧಾಟಿ ಅವರದ್ದಲ್ಲವೇ ಅಲ್ಲ.

ಡಾ. ಜಿ.ಎಸ್. ಶಿವರುದ್ರಪ್ಪನವರು ಆಧುನಿಕ ಕನ್ನಡ ವಿಮರ್ಶೆಯ ಸಂದರ್ಭವನ್ನು ಕುರಿತು ಆಡಿರುವ ಮಾತುಗಳು ಮಹತ್ವದ್ದಾಗಿದೆ. "ಕೇವಲ ಅಭಿರುಚಿ ನಿರ್ಮಾಣಕ್ಕಷ್ಟೇ ತನ್ನನ್ನು ಮೀಸಲು ಮಾಡಿಕೊಂಡು ಬಹುಮಟ್ಟಿಗೆ ಪರಿಚಯಾತ್ಮಕವಾಗಿಯೂ ಪ್ರಶಂಸಾಪರವೂ ಆಗಿ ಕೂತಿದ್ದ ಕನ್ನಡ ವಿಮರ್ಶೆ ನಿರ್ದಿಷ್ಟ ತತ್ವಗಳಿಂದ ಕೂಡಿದ ಒಂದು ಶಾಸ್ತ್ರೀಯ ಪದ್ಧತಿಯ ಮಟ್ಟಕ್ಕೆ ಏರಿದ್ದೇ ತೀರ ಈಚೆಗೆ. ನವ್ಯ ಕಾವ್ಯದ ಪ್ರಮುಖ ಕೊಡುಗೆ ಎಂದರೆ ಕವಿಗಳಲ್ಲಿ ಹಾಗೂ ಓದುಗರಲ್ಲಿ ವಿಮರ್ಶಕ ಪ್ರಜ್ಞೆಯನ್ನು

ಜಾಗೃತಗೊಳಿಸಿದ್ದು. ಕನ್ನಡದಲ್ಲಿ ಹೊರಬಂದ ಮೊಟ್ಟಮೊದಲ ಸಮರ್ಥ ವಿಶ್ಲೇಷಣೆಯೆಂದರೆ ಅಡಿಗರ ಭೂತ ಕವನವನ್ನು ಕುರಿತು ಯು.ಆರ್. ಅನಂತಮೂರ್ತಿ ಅವರು ಮಾಡಿದ ವಿಶ್ಲೇಷಣೆ." ನವ್ಯ ಕಾವ್ಯ ಸಂದರ್ಭದ ಅನಂತಮೂರ್ತಿ ಅವರ ಕಾವ್ಯಾಧ್ಯಯನಕ್ಕೆ ಕಳಶವಿಟ್ಟ ಮಾತುಗಳು.

ಅಡಿಗರ ಭೂಮಿಗೀತ ಕವನ ಸಂಕಲನಕ್ಕೆ ಬರೆದಿರುವ ಮುನ್ನುಡಿಯಲ್ಲಿ: "ನಾನಿಲ್ಲಿ ವಿಮರ್ಶೆಗೆ ಆರಿಸಿಕೊಳ್ಳುವುದು ಎರಡು ವಿಷಯ. ಭಾಷೆಯಲ್ಲಿ ಭಾವಾಭಿನಯ ಕವಿ ಹೇಗೆ ಸಾಧಿಸುತ್ತಾರೆ ಎಂಬುದು. ಕವನಗಳ ಒಟ್ಟು ರಚನೆಯಲ್ಲಿ "ಸಾವಯವ ಶಿಲ್ಪದ ಸಮಗ್ರೀಕರಣ"ವನ್ನು ಹೇಗೆ ತರಲು ಪ್ರಯತ್ನಿಸುತ್ತಾರೆ ಎಂಬುದು ಎರಡನೆಯದು. ಮೊದಲನೆಯದನ್ನು ಪರಿಶೀಲಿಸುವಾಗ ಕವನದ ಕೆಲವೊಂದು ಸಾರ್ಥಕ ಅಂಗಗಳ ಸೌಂದರ್ಯವನ್ನು ತೋರಿಸಬಹುದು. ಹಾಗೆಯೇ ಎರಡನೇ ಗುಣದ ವಿಮರ್ಶೆ ಕವಿಯ ಒಟ್ಟು ಅನುಭವವನ್ನು ಅರಿಯಲು, ಅದಕ್ಕೆ ಬೆಲೆ ಕಟ್ಟಲು ಸಹಾಯಮಾಡುತ್ತದೆ. ಆದರೆ ವಿಮರ್ಶೆಯಲ್ಲಿ ತಾರತಮ್ಯ ವಿವೇಚನೆ ಸಾಧ್ಯವಾಗುವುದು ಎರಡೂ ಗುಣಗಳನ್ನು ಒಟ್ಟಿಗೆ ಅಭ್ಯಾಸ ಮಾಡಿದಾಗ." ಈ ರೀತಿಯ ಕಾವ್ಯ ವಿಮರ್ಶೆಯನ್ನು ಕಲಿಸಿಕೊಟ್ಟರು. ಅಲ್ಲದೆ ಅಡಿಗರ ಶ್ರೀರಾಮನವಮಿಯ ದಿವಸ ಕವಿತೆಯನ್ನು ಕುರಿತು ಪದ್ಯ ಬರೆಯುವ ಬಗೆ ಎಂದು ಪಾಠ ಮಾಡಿದ ಲೇಖನದಲ್ಲಿ ತರಗತಿಯಲ್ಲಿ ಒಂದು ಪದ್ಯವನ್ನು ಹೇಗೆ ಕಲಿಸಬಹುದು ಎಂಬುದನ್ನು ಪ್ರಾತ್ಯಕ್ಷಿಕೆಯ ಮೂಲಕ ತೋರಿಸಿಕೊಟ್ಟಿದ್ದಾರೆ.

ಭೂಮಿಗೀತ ಸಂಕಲನದ ಮುನ್ನುಡಿಯನ್ನು "ಆಧುನಿಕ ಸಾಹಿತ್ಯ ವಿಮರ್ಶೆಯ ಒಂದು ಕ್ಲಾಸಿಕ್" ಎಂಬುದಾಗಿ ಟಿ.ಪಿ. ಅಶೋಕ್ ಪರಿಗಣಿಸಿರುವುದು ಅತಿಶಯೋಕ್ತಿಯೇನಲ್ಲ. ಚನ್ನಯ್ಯ, ಗಂಗಾಧರ ಚಿತ್ತಾಲ, ಶ್ರೀಕೃಷ್ಣ ಆಲನಹಳ್ಳಿ ಇವರುಗಳ ಕವನ ಸಂಗ್ರಹಗಳಿಗೆ ಬರೆದಿರುವ ಮುನ್ನುಡಿ ನವ್ಯ ಸಂದರ್ಭದ ಒಳ್ಳೆಯ ದಾಖಲೆಗಳಾಗಿವೆ. ಡಾ. ಲಕ್ಷ್ಮೀನಾರಾಯಣ ಭಟ್ಟರ ಏಟ್ಸನ ಅನುವಾದ ಸಂಗ್ರಹಕ್ಕೆ ಬರೆದಿರುವ ಮುನ್ನುಡಿಯಲ್ಲಿ, ಭಟ್ಟರ ಭಾಷಾಂತರ ಸಾಹಸ, ಗಳಿಸಿದ ಸಿದ್ಧಿಯನ್ನು ಪಾಂಡಿತ್ಯಪೂರ್ಣವಾಗಿ ಗುರುತಿಸಿದ್ದಾರೆ. ಐರ್ಲ್ಯಾಂಡ್ ಕವಿಗೆ "ಈ ಲೋಕ ದೈವೀಕತೆಯಿಂದ ತೊಯ್ದದ್ದಾಗಿ ಕಾಣಲು ಬೇಕಾದ ಮನಃಸ್ಥಿತಿ ಆಧುನಿಕ ಕ್ರಿಶ್ಚಿಯನ್ ನಾಗರೀಕತೆಯಲ್ಲಿ ಅವನಿಗೆ ಸಿಗದಿದ್ದರಿಂದ ಲೌಕಿಕವಾದ್ದಕ್ಕೂ ಪವಿತ್ರ ಅಲೌಕಿಕಕ್ಕೂ ಇರುವ ಅಂತರವನ್ನೇ ತೊಡೆದು ಹಾಕುವ "ಬೈಜಾಂಟಿಯಂ" ಭಾರತೀಯ ನಾಗರೀಕತೆಗೆ ಮರುಳಾದ ರೀತಿಯನ್ನು ಕವಿಯ ಸಾಂಸ್ಕೃತಿಕ ಸಂದಿಗ್ಧತೆಯನ್ನು" ಮಂಡಿಸಿರುವ ಕ್ರಮದಲ್ಲಿ ವಿಮರ್ಶೆಯ ಪ್ರೌಢಿಮೆ ಎದ್ದು ಕಾಣುತ್ತದೆ. ಸ್ವತಃ ಚೀನಿ ದಾರ್ಶನಿಕ ಲಾವತ್ಸು ಕವಿತೆಗಳನ್ನು ದವ್‌ದ ಜಿಂಗ್ (ಪಥಧರ್ಮ ಸೂತ್ರ) ಎಂಬುದಾಗಿ ಮೂಲಕ್ಕೆ ಹತ್ತಿರವಾಗುವಂತ

ಇಂಗ್ಲೀಷ್ ಮೂಲಕ ಭಾಷಾಂತರಿಸಿ ಕನ್ನಡಕ್ಕೆ ತಂದುಕೊಟ್ಟಿದ್ದಾರೆ. ವಚನ ಗದ್ಯದ ಧಾಟಿಯಲ್ಲಿದೆ. ಎಸ್. ಮಂಜುನಾಥನ ಸುಮ್ಮನಿರುವ ಸುಮ್ಮಾನಕ್ಕೆ ಭಿನ್ನ ರೀತಿಯಲ್ಲಿ ಮಾಡಿತೋರಿಸುವುದೇ ಈ ಭಾಷಾಂತರದ ಉದ್ದೇಶವಾಗಿದೆ. ಕನ್ನಡ ಸಮಕಾಲೀನ ಕವಿ-ಕಾವ್ಯದ ಬಗ್ಗೆ ಎಷ್ಟು ಆಸಕ್ತಿ ವಹಿಸುತ್ತಾರೋ ಅಷ್ಟೇ ನಿಷ್ಠೆಯಿಂದ ಐರ್‌ಲ್ಯಾಂಡಿನ ಕವಿಯನ್ನು, ಚೀನದ ದಾರ್ಶನಿಕನನ್ನು ನಮ್ಮದಾಗಿಸಿಕೊಡುವಾಗ ಅನಂತಮೂರ್ತಿಯವರಿಗೆ ಕಾಲ ದೇಶಗಳು ಏಕಕಾಲದಲ್ಲಿ ಸಂಭವಿಸಿಬಿಡುತ್ತವೆ.

'ಸನ್ನಿವೇಶ' ಸಂಕಲನದ ಲೇಖನಗಳಲ್ಲಿ ಸಾಹಿತ್ಯಿಕ ಲೇಖನಗಳ ಜೊತೆಯಲ್ಲಿ "ಅಕ್ಷರ ಜ್ಞಾನ ಮತ್ತು ಪ್ರಜ್ಞೆ", "ಜಾತಿ ವಿನಾಶ", ಶಾಂತವೇರಿ ಗೋಪಾಲಗೌಡ ಹೀಗೆ ಸಾಮಾಜಿಕ ಮತ್ತು ವ್ಯಕ್ತಿ ವಿಶೇಷಗಳು ಸೇರಿಕೊಂಡಿವೆ. ಸಾಮಾಜಿಕ, ರಾಜಕೀಯ, ಸಾಹಿತ್ಯಿಕ ಚಿಂತನೆಗಳು ಒಟ್ಟಾಗಿ ಒಂದು ಸಾಂಸ್ಕೃತಿಕ ಸಂದರ್ಭದ ವಿಶ್ಲೇಷಣೆ ನಡೆದಿದೆ. ಈ ರೀತಿಯ ಬಹು ಮುಖೀ ಆಲೋಚನ ಕ್ರಮ ಅವರ ಲೇಖನಗಳ ವೈಶಿಷ್ಟ್ಯವೂ ಆಗಿದೆ. "ಸಮಕ್ಷಮ" ಪುಸ್ತಕದಲ್ಲಿ ಬರೆದಿರುವ ಮೊದಲ ಮಾತು; ನಮ್ಮ ನಿತ್ಯದ ರಾಜಕೀಯ ಜೀವನವನ್ನು ವೈಚಾರಿಕತೆಯಲ್ಲಿ ತೋಯಿಸಿ ಅರ್ಥಮಾಡಿಕೊಳ್ಳಬೇಕೆಂಬ ಹಂಬಲನನ್ನದು. ಹಾಗೆ ಮಾಡದಿದ್ದಲ್ಲಿ "ನಮ್ಮ ಸಾಂಸ್ಕೃತಿಕ ಜೀವನ ಅರ್ಥಹೀನವಾಗುತ್ತದೆಂದು ನಾನು ತಿಳಿದಿರುವೆ. ವ್ಯಕ್ತಿ ಚಿತ್ರ, ಸಂದರ್ಶನ, ಸಾಹಿತ್ಯ ವಿಮರ್ಶೆ, ರಾಜಕೀಯ ವಿಚಾರಧಾರೆ, ಸಿನಿಮಾ-ಹೀಗೆ ಒಡೆದುಕೊಂಡಂತೆ ಕಾಣಬಹುದಾದ ಈ ಪುಸ್ತಕದ ಲೇಖನಗಳಲ್ಲಿ ಸಾಹಿತ್ಯ ಸೃಷ್ಟಿಯ ಶ್ರೇಷ್ಠತೆಯನ್ನೂ, ಸಮುದಾಯ ಜೀವನದ ಆರೋಗ್ಯವನ್ನೂ ಅನ್ಯೋನ್ಯವೆಂದೂ ಕಾಣುವ ಪ್ರಯತ್ನವಿದೆಯೆಂದು ನಾನು ತಿಳಿದಿದ್ದೇನೆ." ಈ ರೀತಿಯ ತಿಳುವಳಿಕೆಗೆ ಅನುಗುಣವಾಗಿ ಪ್ರತ್ಯೇಕವಲ್ಲದ ಹಾಗೆ ಸಾಹಿತ್ಯ, ಸಂಸ್ಕೃತಿ, ರಾಜಕೀಯ, ಸಾಮಾಜಿಕ ಸಮಸ್ಯೆಗಳ ಬಗ್ಗೆ ವಿಶ್ಲೇಷಣೆ ನಡೆಸಿದ್ದಾರೆ. ಸಾಮಾಜಿಕ ಕ್ರಾಂತಿ ಮತ್ತು ಕನ್ನಡ ಸಾಹಿತ್ಯ ಜಾತಿವಿನಾಶ ಮತ್ತು ಹಾವನೂರು ವರದಿ, ತುರ್ತುಪರಿಸ್ಥಿತಿ, ಕಾಂಗ್ರೆಸ್ ಸೋಲು-ಜನತಾ ಭವಿಷ್ಯ, ಬೂಸಾ ಪ್ರಕರಣ ಇತ್ಯಾದಿ ಲೇಖನಗಳಲ್ಲಿ ಮೇಲೆ ಉದ್ಧರಿಸಿದ ತಿಳುವಳಿಕೆಗೆ ಅನುಗುಣವಾಗಿ ವಿಚಾರ ಮಂಡನೆ, ಚರ್ಚೆ, ವಿಮರ್ಶೆಯನ್ನು ಒಂದರೊಳಗೊಂದೆಂಬಂತೆ ಬೆಸದಿದ್ದಾರೆ.

ಕುವೆಂಪು, ಮಾಸ್ತಿ, ಕಾರಂತ, ಬೇಂದ್ರೆ ಮುಂತಾದವರನ್ನು ಕುರಿತು ಅವರು ನಡೆಸಿದ ಅಧ್ಯಯನದಲ್ಲಿ ತಾವು ಕಲಿತದ್ದೇನು, ನಮ್ಮ ಜನ ಕಲಿಯಬಹುದಾದ್ದೇನು ಎಂಬುದನ್ನು ಮಂಡಿಸುವ ಲೇಖನಗಳು ವಿಶೇಷ ರೀತಿಯಾಗಿವೆ. "ಕುವೆಂಪು ವೈಚಾರಿಕತೆಯಲ್ಲಿ ಮಾಸ್ತಿಗಿಂತ ನಮಗೆ ಹತ್ತಿರವಾದವರು. ಇವರಲ್ಲಿ ಕಾಣುವ

ಸಂಪ್ರದಾಯಶೀಲತೆಯ ವಿರೋಧ ಆಧ್ಯಾತ್ಮಿಕ ಕಾರಣಗಳಿಂದಾಗಿಯೂ ಹುಟ್ಟಿಕೊಂಡಿದ್ದು. ಇವರ ರಾಮಾಯಣ ದರ್ಶನಂ ಶೇಕ್ಸ್‌ಪಿಯರ್ ಮಿಲ್ಟನ್ ಮತ್ತು ಭಾರತದ ಎಲ್ಲ ಆಧ್ಯಾತ್ಮಿಕ ಚಿಂತನೆಯ ಸಾರವನ್ನು ಸ್ವೀಕರಿಸಿ ಹುಟ್ಟಿದೆ. ಅವರ ಕಾವ್ಯದಲ್ಲಿ ಕಾಣುವ ಸ್ವ-ನಿಷ್ಠವಾದ ಭವ್ಯತೆ ಆರಾಧನೆ ನನಗೇನು ಅಷ್ಟು ಮೆಚ್ಚುಗೆಯ ಸಂಗತಿಯಲ್ಲ. ಆದರೆ ಅವರು ಬರೆದ ಎರಡು ಕಾದಂಬರಿಗಳು ಪ್ರಪಂಚ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಗಳೆಂದು ನಾನು ತಿಳಿದಿದ್ದೇನೆ. ಕಾನೂರು ಹೆಗ್ಗಡತಿ ಮಲೆಗಳಲ್ಲಿ ಮದುಮಗಳು ಕಾದಂಬರಿಗಳು ನಿತ್ಯ ಜೀವನದ ದಟ್ಟ ವಿವರಗಳನ್ನು ಒಳಗೊಂಡ ಆಯಾಕಾಲದ ಅಪೂರ್ವ ದಾಖಲೆಗಳೂ ಆಗಿವೆ. ದೈನಿಕ ಜೀವನದ ಇಷ್ಟೊಂದು ವಿವರಗಳನ್ನು ಇಷ್ಟು ದಟ್ಟವಾಗಿ ಮಲೆಗಳಲ್ಲಿ ಮದುಮಗಳುವಿನಲ್ಲಿ ಕಾಣಿಸುವಂತೆ ಮಾಡಿದ ಇನ್ನೊಬ್ಬ ಕಾದಂಬರಿಕಾರನೆಂದರೆ ನನ್ನ ಪಾಲಿಗೆ ಜೇಮ್ಸ್ ಜಾಯ್ಸ್" ಎಂಬುದಾಗಿ ವಿಶ್ಲೇಷಿಸಿದ್ದಾರೆ. ಕಾರಂತರನ್ನು ಕುರಿತು ಬರೆಯುತ್ತಾ: ಸುಖ ದುಃಖದಲ್ಲಿ ಬದುಕು ಹದವಾಗುವ ಬಗೆಯನ್ನು ಕಾರಂತರ ಕಾದಂಬರಿಗಳಲ್ಲಿ ತೋರಿಸಿದ್ದಾರೆ, ಹೀಗೆ ಗುರುತಿಸುವುದರ ಮೂಲಕ ನಮ್ಮ ಅರಿವನ್ನು ಹಿಗ್ಗಿಸಿದ್ದಾರೆ. ಬೇಂದ್ರೆ ಕಾವ್ಯದಲ್ಲಿ "ಸೃಜನಶೀಲತೆಯ ಸ್ವರೂಪ, ಅದರ ಬಿಗಿ, ಅದರ ಕಷ್ಟ, ಅದು ತರುವ ಏಕಾಗ್ರತೆಯ ಸುಖ, ಪ್ರೇಮಕ್ಕೂ ಅದಕ್ಕೂ ಇರುವ ನಂಟು, ಅದರ ಮಣ್ಣು ಮಾತ್ರ ಗರ್ಭೀಕರಿಸಿಕೊಳ್ಳಬಲ್ಲ ಅಕಾಶ, ಈ ಮಣ್ಣನ್ನು ಹದದಲ್ಲಿಡುವ ಸಮೃದ್ಧ ಅನುಭವದ ಜನಜೀವನ -ಇವೆಲ್ಲವನ್ನೂ ತೀವ್ರವಾಗಿ ಅನುಭವಿಸಿದ್ದ ನಮ್ಮ ಕಾಲದ ದೊಡ್ಡ ಕವಿಯೆಂದರೆ ಬೇಂದ್ರೆ ಯುಗದ ಕವಿ" ಎಂದು ಅವರ ಕಾವ್ಯಶಕ್ತಿ, ಕಟ್ಟಿಕೊಡುವ ಅನುಭವ ದ್ರವ್ಯ ಎರಡರ ಮಹತ್ವವನ್ನೂ ಮನಗಾಣಿಸಿದ್ದಾರೆ. "ಮಾಸ್ತಿ" ಅನಂತಮೂರ್ತಿಯವರಿಗೆ "ಪ್ರಾಯಕ್ಕೆ ಬರುತ್ತಿರುವ ಮಕ್ಕಳಿಗೆ ಯಾವನಾದರೂ ಒಬ್ಬ ಕನ್ನಡ ಲೇಖಕನನ್ನು ಓದಲು ಕೊಡಬೇಕೆಂದು ಅನ್ನಿಸುವುದಾದರೆ ಅದು ಮಾಸ್ತಿ" ಎಂದು ನನ್ನ ಭಾವನೆ. ಈ ರೀತಿಯ ಗ್ರಹಿಕೆಗಳು ಅವರ ಅಧ್ಯಯನದ ಫಲಗಳಾಗಿವೆ.

ಲೇಖನಗಳ ಶಿಸ್ತನ್ನು ಅವರೆಂದೂ ಪಾಲಿಸಿಲ್ಲ. "ಬೆತ್ತಲೆ ಪೂಜೆ ಯಾಕೆ ಕೂಡದು?" ಸಂಕಲನದ ಮೊದಲ ಮಾತಿನಲ್ಲಿ: "ನಮ್ಮ ಧರ್ಮ, ನಮ್ಮ ರಾಜಕೀಯ, ನಮ್ಮ ಸಾಹಿತ್ಯ -ಈ ಎಲ್ಲವೂ ಒಂದಕ್ಕೊಂದು ಸಂಬಂಧವಿರುವ ವಿಷಯಗಳೆಂದು ನಾನು ತಿಳಿದಿರುವುದರಿಂದ ಇಲ್ಲಿನ ಎಲ್ಲ ಲೇಖನಗಳಲ್ಲೂ ಈ ಸಂಬಂಧಗಳು ಬೇರೆ ಬೇರೆ ಮಗ್ಗಲುಗಳು ಪ್ರತ್ಯಕ್ಷವಾಗುತ್ತಾ ಹೋಗುತ್ತವೆ. ನಾನು ನನ್ನ ಕಾಲವನ್ನು ಪರಿಭಾವಿಸುವ ಕ್ರಮವನ್ನೇ ಈ ಬರವಣಿಗೆಗಳಲ್ಲಿ ಹಿಡಿದಿಡಲು ಪ್ರಯತ್ನಿಸಿದ್ದೇನೆ. ನಾನು ಒಟ್ಟಿನಲ್ಲಿ ನಮ್ಮ ರಾಷ್ಟ್ರೀಯ ಪರಿಕಲ್ಪನೆ ಹೇಗಿರಬೇಕೆಂಬ ಚೌಕಟ್ಟಿನಲ್ಲಿ ನೋಡಿದ್ದೇನೆ."

ಹೀಗೆ ಮಾಡುವುದರ ಮೂಲಕ ಇಂಡಿಯಾದ ಆಧುನಿಕ ಸಂಸ್ಕೃತಿ ಚಿಂತನೆಯನ್ನು ನಮಗೆ ಕೊಡಮಾಡಿದ್ದಾರೆ.

ಬೆತ್ತಲೆ ಪೂಜೆಯಂತಹ ಸಾಂಸ್ಕೃತಿಕ ಆಚರಣೆಯ ಬಗ್ಗೆ, ಪ್ರಗತಿಶೀಲರ ವಿರೋಧವನ್ನು ಕೇಂದ್ರವಾಗಿಟ್ಟುಕೊಂಡು ಪರಂಪರೆ-ನಂಬಿಕೆ-ಆಚರಣೆಯನ್ನು ಆಧುನಿಕ ಸಂದರ್ಭದ ವೈಚಾರಿಕತೆಯೊಂದಿಗೆ ವಿಶ್ಲೇಷಿಸುತ್ತಾರೆ. ತಮ್ಮದೇ ಕಾದಂಬರಿಗಳಾದ ಸಂಸ್ಕಾರ, ಭಾರತೀಪುರ ಕಾದಂಬರಿಗಳಲ್ಲಿ ಕಾಣಿಸಿರುವ ವಿಚಾರವಾದಿ ನಿಲುವುಗಳು ಮತ್ತು ರಾಮಾನುಜನ್ ಅವರ ಅಣ್ಣಯ್ಯನ ಮನಃಶಾಸ್ತ್ರ, ತೇಜಸ್ವಿ ಅವರ ಚಿದಂಬರ ರಹಸ್ಯ, ಕುವೆಂಪು ಅವರ ಕಾನೂರು ಹೆಗ್ಗಡತಿ ಚದುರಂಗರ ವೈಶಾಖ, ಲಂಕೇಶರ ಮುಸ್ಸಂಜೆ ಕಥಾ ಪ್ರಸಂಗ ಮೊದಲಾದ ಕೃತಿಗಳ ಜೊತೆಗೆ ಅನುಸಂಧಾನ ನಡೆಸಿದ್ದಾರೆ. ಜೊತೆಗೆ ವೈಚಾರಿಕತೆಯನ್ನು ಬೆಳೆಸಿದ ಮಾರ್ಕ್ಸ್, ಗಾಂಧಿ, ಸ್ತ್ರೀವಾದಿ ಚಿಂತನೆ, ಮತ್ತು ಮಹಾಕಾವ್ಯಗಳ ಅಧ್ಯಯನಗಳೆಲ್ಲವನ್ನು, ವೈಚಾರಿಕ ಪ್ರಪಂಚವನ್ನು ಒಟ್ಟೊಟ್ಟಿಗೆ ವಿಶ್ಲೇಷಿಸಿದ್ದಾರೆ. ಅವರು ಎತ್ತುವ ಧಾರ್ಮಿಕ ನಂಬಿಕೆಗಳ ಪ್ರಶ್ನೆಗಳು ಹಲವರಲ್ಲಿ ಆಚರಣೆಯನ್ನು ಸಮರ್ಥಿಸುತ್ತಿದ್ದಾರೆಂಬ ಗುಮಾನಿ ಹುಟ್ಟಿಸಿರಬಹುದು. ಹಾಗಂತು ಆಗಿಲ್ಲ ಎಂಬುದು ನನ್ನ ಭಾವನೆ. ಆದರೆ ಚರ್ಚೆಗಾಗಿ ಅವರು ಬಳಸಿಕೊಳ್ಳುವ ಸಾಹಿತ್ಯ ಕೃತಿಗಳು, ಮಾನವಶಾಸ್ತ್ರ, ಸಮಾಜಶಾಸ್ತ್ರ, ಧರ್ಮ-ನಂಬಿಕೆ-ದೇವರು, ವೈಜ್ಞಾನಿಕ ವಿಚಾರಗಳು, ಒಟ್ಟೂ ಸೇರಿ ಒಂದು ಪ್ರೌಢ ವಿಶ್ಲೇಷಣಾತ್ಮಕ ಸಂಸ್ಕೃತಿ ಚಿಂತನೆಯಾಗಿದೆ. ಈ ಲೇಖನ ಮಾತ್ರವಲ್ಲ ಅವರ ಇಂಥ ಲೇಖನಗಳಲ್ಲಿನ ವಾದಗಳನ್ನು ಒಪ್ಪಬಹುದು ಅಥವಾ ಬಿಡಬಹುದು ಆದರೆ ಅಧ್ಯಯನ ಮಾಡದೇ ಇರುವುದಕ್ಕಂತೂ ಸಾಧ್ಯವಿಲ್ಲ.

ಮತ್ತು "ನನ್ನ ಲೇಖನೋದ್ಯೋಗ", "ನನ್ನನ್ನು ಬೆಳೆಸಿದ ಕರ್ನಾಟಕ", ಅವರು ಪ್ರೀತಿಸುವ ಸಾಹಿತಿ ಮಿತ್ರರು ವ್ಯಕ್ತಿ ಚಿತ್ರಣಗಳು, ಸಂದರ್ಶನಗಳು ರಾಜಕೀಯ, ಸಾಮಾಜಿಕ, ಸಂಸ್ಕೃತಿ ಕುರಿತಾದ ಲೇಖನಗಳನ್ನೊಳಗೊಂಡ ಈ ಸಂಗ್ರಹ ಲೇಖಕರಿಗೆ ಪ್ರಿಯವಾಗಿರುವುದು ಮಾತ್ರವಲ್ಲ, ಪ್ರಜ್ಞಾವಂತ ಓದುಗರೆಲ್ಲರಿಗೂ ಪ್ರಿಯವಾದುದಾಗಿದೆ. ಅವರ ಪೂರ್ವಾಪರ ಪ್ರಜ್ಞೆ, ಸಮೂಹ ನಿಷ್ಠೆ, ಸಮತ್ವ ನಿಷ್ಠೆ ಪೂರ್ವ ಪಶ್ಚಿಮ ಸಾಹಿತ್ಯ ಸಂಸ್ಕೃತಿಗಳ ಅಧ್ಯಯನದಿಂದ, ತನ್ನ ಕಾಲಮಾನದ ಬಹು ಮುಖಿ ಗ್ರಹಿಕೆಗಳನ್ನು ಆಧುನಿಕ ಸಂವೇದನೆಯೊಂದಿಗೆ ಸಮಾಹಿತಗೊಳಿಸುವ ಅನಂತಮೂರ್ತಿಯವರ ಚಲನಶೀಲ ಚಿಂತನೆಗಳು ಹರಳುಗಟ್ಟಿರುವ ಈ ಸಂಕಲನದ ಲೇಖನಗಳು ಪ್ರಬುದ್ಧವಾಗಿವೆ.

* * *

ಕಾವ್ಯ ಯಾವಾಗಲೂ ಸಾಹಿತ್ಯ ಚಟುವಟಿಕೆಯ ಕೇಂದ್ರದಲ್ಲಿ ಇರುವಂಥದ್ದು. ಎಲ್ಲ ಲೇಖಕರು ಒಳಮನಸ್ಸಿನಲ್ಲಿ ಕವಿಗಳೆ ಆಗಿರುತ್ತಾರೆ. ಅನಂತಮೂರ್ತಿಯವರು

ಕವಿಗಳೂ ಆಗಿದ್ದಾರೆ. "ಕಾವ್ಯ ನನ್ನ ಭಾವವನ್ನೂ ವಿಚಾರವನ್ನೂ ಸದಾ ನಿರ್ದೇಶಿಸುತ್ತಿದ್ದು. ತನ್ನ ಶುದ್ಧ ರೂಪದಲ್ಲಿ ನನ್ನಿಂದ ಆಗೀಗ ಬರೆಸಿಕೊಳ್ಳುವುದಿದೆ" ಎನ್ನುವ ಅನಂತಮೂರ್ತಿಯವರು ಮೂರು ಕವನ ಸಂಕಲನಗಳನ್ನು ನೀಡಿದ್ದಾರೆ. "ಹದಿನೈದು ಪದ್ಯಗಳು" ೧೯೭೫ರಲ್ಲಿ "ಅಜ್ಜನ ಹೆಗಲ ಸುಕ್ಕುಗಳು", ೧೯೮೯ರಲ್ಲಿ "ಮಿಥುನ", ೧೯೯೨ರಲ್ಲಿ ಪ್ರಕಟಗೊಳಿಸಿದ್ದಾರೆ. ಅವರಿಗೆ ಕವಿತೆ "ಕೆಲವು ಕಾಲ ಹಿಡಿದಿಟ್ಟು, ಬಿಟ್ಟು ಮತ್ತೆ ಬರಬಹುದಾದ್ದು." ಪ್ರಕೃತಿ, ಸೂರ್ಯನ ಕುದುರೆ ಮೊದಲಾದ ಕಥೆಗಳಲ್ಲಿ ಕಾವ್ಯಮಯವಾದ ಭಾಗಗಳಿವೆ. "ಸೂರ್ಯನ ಕುದುರೆ "ಕಥೆ" ಅಡಿಗರ ವರ್ಧಮಾನ ಕವಿತೆಯ ಕಥಾರೂಪದ ಹಾಗೆ ತೋರುತ್ತದೆ" ಎಂದು ಟಿ.ಪಿ. ಅಶೋಕ್ ತೋರಿಸಿಕೊಟ್ಟಿದ್ದಾರೆ. ಕನ್ನಡ ಕಾವ್ಯ ಕಾವು ಕಳೆದುಕೊಳ್ಳುತ್ತಿದೆ ಎಂದುಕೊಳ್ಳುತ್ತಿರುವ ಸಂದರ್ಭದಲ್ಲಿ ಅನಂತಮೂರ್ತಿಯವರ "ಅಜ್ಜನ ಹೆಗಲ ಸುಕ್ಕುಗಳು" ಮತ್ತು "ಮಿಥುನ" ಸಂಗ್ರಹಗಳು ಬಂದವು. ಒಂದು ರೀತಿಯ ತುರ್ತು, ತೀವ್ರತೆಯಲ್ಲಿ ಬರೆಸಿಕೊಂಡ ಕವಿತೆಗಳಾಗಿವೆ.

ಮಿಥುನ ಸಂಕಲನದ ಈಚಿನ ನಮ್ಮ ಕವಿತೆಯಲ್ಲಿ "ಚಹರೆ ಇರದ ಕವಿತೆಗೆ / ನವ್ಯೋತ್ತರ ವ್ಯಥೆಗೆ" ಎಂಬ ವಿಷಾದದಿಂದ ಮತ್ತೊಂದು ರೀತಿಯ ಕವಿತೆಗಳನ್ನು ಬರೆದಿದ್ದಾರೆ. ನಮಗಿರುವ ಕಾವ್ಯ ಕಲ್ಪನೆಯನ್ನು ಮುರಿದು ವಿಸ್ತರಿಸಿದ್ದಾರೆ. ಅಡಿಗರು ಹೇಳುವ ಅಸಲು ಕಸುಬನ್ನು ಕಾಣಿಸುವ ಹವಣಿಸಿದ್ದಾರೆ. ರಾಮಾನುಜನ್ ಕವಿತೆ ಓದಿ:

> ಕಗ್ಗುಂಟು ತೊಡೆಯಾದ ಭಾವ ಆದರೆ ಉದ್ರೇಕ,
> ಹಬ್ಬುಗಂಟಾಗದ ಬುದ್ಧಿ, ಆದರೆ ಶ್ರದ್ಧೆ,
> ಮಿತಿಗಳನು ಮೀರುವ ಆಸೆ, ಆದರೆ ಮಿತಿಯಲ್ಲಿರುವ ವ್ರತ
> ಒಳಗಿನ ತಳಮಳಕ್ಕೆ ಸಮುದ್ರದ ಭಾಷೆ, ಕೃತಕವೆನಿಸದಂತೆ
> ಸಹಜವಾಗಿ ಸಿಗಬೇಕು, ಆಡಿದ್ದು ಆಗಬೇಕು
> ಅಡಿಗರಂತೆ ತುಡಿಯುವುದಕ್ಕೆ, ಕರಗದಂತೆ ನುಡಿಯುವುದಕ್ಕೆ.

ಅಡಿಗರಂತೆ, ತುಡಿಯುವುದಕ್ಕೆ, ಕರಗದಂತೆ ನುಡಿಯುವುದಕ್ಕೆ, "ಶುದ್ಧ ರಚನೆಗಳಲ್ಲದ" ಕಾವ್ಯವನ್ನು ಅನಂತಮೂರ್ತಿಯವರು ಕೊಟ್ಟಿದ್ದಾರೆ. "ಈ ಎಲ್ಲಾ ರಚನೆಗಳು ಶುದ್ಧವಾದ ಕವಿತೆಗಳು ಎನ್ನುವುದು ನನ್ನ ಮಟ್ಟಿಗೆ ಅಷ್ಟು ಪ್ರಸ್ತುತವಲ್ಲ. ನನ್ನನ್ನು ಆಳುವ ಎಲ್ಲ ಭಾವನೆ ಎಲ್ಲ ವಿಚಾರಗಳು ನನ್ನ ಶಕ್ತ್ಯಾನುಸಾರ ಮೂಡಿದಷ್ಟು ಇಲ್ಲಿ ಮಾತು ಪಡೆದಿವೆ. ಹಾಗಾಗಿ ಕಥೆಯಾಗಬಹುದಾದದ್ದು, ವೈಚಾರಿಕ ಪ್ರಬಂಧವಾಗಬಹುದಾದದ್ದು, ಸಂಸ್ಕೃತಿ ಚಿಂತನೆ ಎಲ್ಲವೂ ಕವಿತೆಯ ಮೈಪಡೆದಿವೆ." ವಿಚಾರವಂತ ಮನಸ್ಸು ಭಾವುಕವಾಗಿಯೂ ಮಿಡಿಯುತ್ತಿರುವುದನ್ನು ಕಾಣಬಹುದು.

ಬದುಕಿನ ಸ್ಥಿತಿಗತಿಗಳನ್ನು, ರಾಜಕೀಯ ಸಮಾಜಿಕ ಬದಲಾವಣೆಗಳ ಮೂಲಕ ಪರಿಶೀಲಿಸುವುದು ಅನಂತಮೂರ್ತಿಯವರ ಪರಿಪಾಠ. ರಾಮನೋ, ಕೃಷ್ಣನೋ ಕವಿತೆಯಲ್ಲಿ ಅಂತದೊಂದು ಪರಿಶೀಲನೆ ಮಾಡಿದ್ದಾರೆ.

ಅಡಿಗರ ರಾಮ
ದಂಡವಾದರೂ ದಂಡ ಇರತಕ್ಕದೆಂದು
ಅವಡುಕಚ್ಚಿ ಕೋಧಂಡ ಹಿಡಿದವನು
ಸಾಗರದ ಪ್ರಿನ್ಸಿಪಾಲರಾಗಿ ಅವರಿಗೆ
ಅಡಿಕೆ ಮಂಡಿಗಳ ಕ್ಷುದ್ರ ಓಣಿ ಬೀದಿಗಳಲ್ಲು
ಕತ್ತರಿಸಿದಷ್ಟೂ ಬೆಳೆವ ಬೆಳೆದು ಕತ್ತಿಗೆ ಬರುವ
ಅನಾದಿ ರಾವಣನ ಹತ್ತು ತಲೆ ಕಂಡರೆ
ಉದಯರವಿಯ ವಿಕಾಸವಾದಿ ಆಧುನಿಕ ವಾಲ್ಮೀಕಿಗೆ
ಕನಸಲ್ಲಿ ರಾವಣ ಸೀತೆಯನ್ನು ಮಾತೆಯಾಗಿ ಪಡೆದ

ಜಾನಪದ ರಾಮಾಯಣದಲ್ಲಿ- ಸೀತೆಯೇ ಬೇರೆ ರೀತಿಯವಳು...

ನವರಸಭರಿತ
ಕೃಷ್ಣ ಕಥೆ ಬರೆದ ಚೇರು ಶೇರಿ
ನಂಬೂದರಿಯಾದರೆ
ಅವನ ಸಮಕಾಲೀನ
ನೂರಾರು ವರ್ಷಗಳ ಪುಣ್ಯ ಪುರುಷ
ಎಲ್ಲರ ಬಾಯಲ್ಲೂ ರಾಮಾಯಣ ನಿಲ್ಲಿಸಿದ ಎಡುತಚ್ಚನ್
ಜಾತಿಯಲ್ಲಿ ದೇವರ ದೀಪಕ್ಕೆ ಎಣ್ಣೆ ಎರೆಯುವ ಗಾಣಿಗ

"ಭಕ್ತಿ-ವಿಭಕ್ತಿ" ಕವಿತೆಯಲ್ಲಿ "ದೇವಭಾಷೆಯ- ಭಟ್ಟ ತಿರಿಯ ವಾಕ್ ಸಿದ್ಧಿಗೆ ಸೋತದ್ದು ಮುರಾರಿಯ ಮನಸ್ಸಾದರೆ/ ದೀನ ಕವಿ ಪುಂತಾನಮ್ ದೇಸಿ ಸೊಗಸಿಗೆ ಹೃದಯವನ್ನೇ ತೆತ್ತ ಗೊಲ್ಲ ಗೋವಿಂದ"ನಾಗಿದ್ದಾನೆ.

ಪರಂಪರೆಯನ್ನು ತಲೆಮಾರು ಹೊತ್ತು ನಡೆವ ರೀತಿಯನ್ನು ಅಜ್ಜನ ಹೆಗಲ ಸುಕ್ಕುಗಳು ಕವಿತೆಯಲ್ಲಿ,

ಅಜ್ಜನದು ತನ್ನ ಅಜ್ಜನ ಹೆಗಲಮೇಲೆ
ಹೀಗೆ ನನ್ನ ಹಾಗೆ
ಇಲ್ಲಿ ಬೆಳಕಾಗಿ, ಅಲ್ಲಿ ನೆರಳಾಗಿ
ಗುಡ್ಡ ಹತ್ತಿ ಇಳಿಸಿ ಪ್ರಿಯವಾಗಿ
ತುಳಿದ ಪಾದದ ಸಹಿತ ತಾನೂ ಸವೆದು
ಹೊರಲು ಬಯಸುವ ನನ್ನ
ಹೆಗಲ ಸುಕ್ಕುಗಳು

ಉಂಟಾಗುವುದನ್ನು ಹೇಳುತ್ತಾರೆ "ಶ್ರೀತುಳಸಿಯಲ್ಲಿ" ಕೃಷ್ಣನಿಗಿಂತಲೂ ಭಾರವಾಗಿಬಿಟ್ಟ ಹಳೆಯ ಕಥೆಯನ್ನು "ನಮ್ಮ ಹಳ್ಳಿಯಲ್ಲಿ ಈಗಲೂ ಹರೆಯದ ವಂಚಿತೆಯನ್ನು ಸಮಾಧಾನಪಡಿಸಲೆಂದೂ / ತುಡುಗ ಮೂಳಿಯನ್ನು ಹಾದಿಗೆ ತರಲೆಂದೋ/ ಹೂಬತ್ತಿ ಹೊಸೆಯುತ್ತ ಅಜ್ಜಿಯರು ರಾಗವಾಗಿ ಹಾಡುವುದುಂಟು". ಇಂಥ ಕವಿತೆಗಳಲ್ಲಿ ಸೊಗಸಾದ ಗದ್ಯ ರಚನೆಯಲ್ಲಿ ಅನುಭವಗಳನ್ನು ಓದುಗನಿಗೆ ಮುಟ್ಟಿಸುವ ರೀತಿ ಅನನ್ಯವಾದುದ್ದಾಗಿದೆ. ಗುರುರಾಯ ಕವಿತೆಯಲ್ಲಿ ರಾಜಕೀಯ ಸಾಮಾಜಿಕ ಸ್ಥಿತ್ಯಂತರವನ್ನು ಗಾಂಧಿ, ರಾಯ್, ಮೊದಲಾದವರ ರಾಜಕೀಯ ಸುಧಾರಣವಾದದೊಂದಿಗೆ ವಿಶ್ಲೇಷಿಸುತ್ತಾರೆ.

ಸ್ಪರ್ಶದುಲ್ಲಾಸಕ್ಕೆ ಅಲೆಯಮೇಲಲೆ ಎದ್ದು
ಮೆದುವಾಗೆತ್ತಿ, ಓಲೈಸಿ, ಒಯ್ಯುವ
ಜಲದ ಗಮಕದ
ಎರಡು ಸೀಳಿನ ಮಧ್ಯೆ ಅನಾಯಾಸ

ಈ ಕಾವ್ಯ ಪಂಕ್ತಿಗಳು ರಿಲ್ಕ್ ಕಾಣಿಸಿದ ಹಂಸ ಕವಿತೆಯಲ್ಲಿ ಕಾವ್ಯ ಸ್ಪರ್ಷವನ್ನು ಮಾಡಿಸುತ್ತಾರೆ. ಕುವೆಂಪು, ಬೇಂದ್ರೆ, ನರಸಿಂಹಸ್ವಾಮಿ, ಮಾಸ್ತಿ, ಅಡಿಗ, ಪುತಿನ, ಪೂರ್ವಸೂರಿಗಳ ಕಾವ್ಯ ಶಕ್ತಿ ಮತ್ತು ವಿಶಿಷ್ಟತೆಯನ್ನು ಗುರುತಿಸಿ ಗೌರವಿಸುತ್ತಾ ರಾಮಾನುಜನ್ ಕಾವ್ಯವೆಂದರೆ.

ನಿಮ್ಮಂತೆ ಸರಳವಾಗಿ ಸಹಜವಾಗಿ ಸತ್ಯವಾಗಿ
ನಾವು ಬರೆಯಬೇಕೆಂದರೆ ಗುರು
ನಿಮ್ಮಂತೆ ಬರೆಯಬಾರದು
ನಿಮ್ಮಂತೆ ಬರೆಯಬಾರದು
ಇರಬೇಕು

ಎಂದು ಗುರುಸ್ಥಾನದಲ್ಲಿ ಕೂರಿಸಿ ಗೌರವಿಸುತ್ತಾರೆ. ಸಿಟ್ಟು ಮತ್ತು ಸೋಲು ರಿಲ್ಕ ಕಂಡ (ಕಾಣದ) ಬೆಕ್ಕು, ಸೂಳೆ ತಲೆ ಹಿಡುಕ, ಆಧುನಿಕ, ಸಭ್ಯ, ಮಯೂರ, ಕುಮಾರ ಗಂಧರ್ವ, ಮೊದಲಾದ ಕವಿತೆಗಳಲ್ಲಿ ರಾಜಕೀಯ, ಸಾಮಾಜಿಕ, ಸಂಸ್ಕೃತಿ ಚಿಂತನೆಗಳು ಕಾವ್ಯ ರೂಪ ಪಡೆದಿವೆ. ಸಂಕೀರ್ಣವಸ್ತು- ವಿಚಾರವನ್ನು ಗದ್ಯಲಯದಲ್ಲಿ ನಡೆಸುವ ಕಲೆಗಾರಿಕೆಗೆ ಬೆರಗಾಗುತ್ತೇವೆ. ಮತ್ತೆ ಮತ್ತೆ ಮುಟ್ಟಿ ನೋಡುವಂತೆ ಓದಿಸಿಕೊಳ್ಳುವ ಇಂಥ ಕವಿತೆಗಳು ಸೊರಗುತ್ತಿರುವ ಕಾವ್ಯ ಸಂದರ್ಭವನ್ನು ಚೇತೋಹಾರಿಯಾಗುವಂತೆ ಮಾಡುವ ಮಾಂತ್ರಿಕತೆಯನ್ನು ಹೊಂದಿವೆ.

ಹದಿನೈದು ಪದ್ಯಗಳು ಸಂಕಲನದ ಕವಿತೆ: ಮತ್ತೆ ಮಳೆ ಹೊಯ್ಯುತ್ತಿದೆ ಪದ್ಯದ ಈ ಸಾಲುಗಳಲ್ಲಿ

ಮತ್ತೆ ಮಳೆ ಹುಯ್ಯಲಿದೆ...
ಎಲ್ಲ ನೆನಪಾಗಲಿದೆ,
ಸುಖ ದುಃಖ.... ಬಯಕೆ ಭಯ....
ಒಂದೆ... ಎರಡೆ.....

ಹೀಗೆ ನೆನಪಿನ ಗಣಿಯಿಂದ ಬದುಕನ್ನು ಮತ್ತೆ ಮತ್ತೆ ಬಗೆದು ವರ್ತಮಾನಕ್ಕೆ ಹೊಂದಿಸಿ ಕೊಡುತ್ತಿರುವ ಅನಂತಮೂರ್ತಿಯವರ ಗತಿಶೀಲ ಚಿಂತನೆ ಘನೋದ್ದೇಶದಿಂದ ಕೂಡಿದ್ದಾಗಿದ್ದು. ನಮ್ಮ ಸಂಸ್ಕೃತಿ ಸಂದರ್ಭದ ಅಮೂಲ್ಯ ಸಂಪತ್ತಾಗಿದೆ.

ಗ್ರಂಥಋಣ

೧. ಯು.ಆರ್. ಅನಂತಮೂರ್ತಿ (ಒಂದು ಅಧ್ಯಯನ) ಲೇ: ಟಿ.ಪಿ. ಅಶೋಕ್

೨. ಯು.ಆರ್. ಅನಂತಮೂರ್ತಿ (ಜೀವನ ಹಾಗು ಕೃತಿಗಳ ಸಮೂಹ ಶೋಧ) ಸಂಪಾದಕರು: ಮುರಳೀಧರ ಉಪಾಧ್ಯ ಹಿರಿಯಡಕ

೩. ಯು.ಆರ್. ಅನಂತಮೂರ್ತಿವರ ಕೃತಿಗಳು ಮತ್ತು ಲೇಖನಗಳು

ಅನುಬಂಧ-೧

ಹಿತ್ತಲ ಹಿಗ್ಗು
ಸೊಪ್ಪುಗುಡ್ಡೆ ಸಂಸ್ಕೃತಿ ಮಂದಿರದ
ಅವರಣದಲ್ಲಿ ಹಿತ್ತಲ ಹಿಗ್ಗು
ಬೆಳ್ಳಿ ಚಂದ್ರ ಸೀಳು ತೆಂಗು ಗರಿಗಳ
ತೂರಿ ತೂಗುವ ತಾಯಿ ಬೆಳಕು

ನಮ್ಮ ಅನಂತಮೂರ್ತಿಯವರಿಗೆ
ಅಭಿನಂದನೆ ಜ್ಞಾನ ಪೀಠಕ್ಕೆ ವಂದನೆ
ಸಲ್ಲಿಸಲು ಶಾಮಿಯಾನದ ಕೆಳಗೆ
ಸಹಸ್ರ ಮಿನುಗು ಕಣ್ಣಿನ ಲಾಂದ್ರ
ತುಳುಕುವ ಪ್ರೀತಿ

ತೌರ ತಣಿವಿನ ನೆನಪು:
ಲಂಗೋಟಿಯ ಗೆಳೆಯರು
ಕುಮಾರವ್ಯಾಸ ರಸೆಲ್ ಕಲಿಸಿದವರು
ಒಡನಾಟಪಡ್ಡೆ ಮೆಲುಕು
ಉಳುವವನೆ ಭೂ ಒಡೆಯ ಘೋಷಣೆಯ
ಕಾವು ಕಚಗುಳಿ ಬುದ್ಧಿ

ಪೂರ್ವದ ಪ್ರೀತಿ ಕುಡಿಯೊಡೆದ
ಸೊಡರುಗಳು: ರಾಮ ಕೃಷ್ಣ ಗಾಂಧಿ
ಪೂರ್ವಾಪರ ಕಿರಿಯಣ್ಣನ
ಎದೆ ಗುಲಾಬಿ ಮಾತು

ಹಚ್ಚಿ ಹರಳೆಣ್ಣೆ ತೊಡೆಯಲ್ಲಿ
ಭವದ ಕರುಳಿನ ನೀಳ ನೆರಳು
ಪುಟಗೊಳಿಸಿ ದಿವ್ಯಾಗ್ನಿ
ದ್ವಂದ್ವ ದಾಟುವ ನಿಜದ ಹೊರಳು

-ಸತ್ಯನಾರಾಯಣರಾವ್ ಅಣತಿ

(ತೀರ್ಥಹಳ್ಳಿ ಅಭಿನಂದನಾ ಸಮಾರಂಭದಲ್ಲಿ ಮೂಡಿದ ಭಾವಗಳು)

ಅನುಬಂಧ-೨

ಕೃತಿಗಳು-ಪ್ರಶಸ್ತಿಗಳು-ಇತರ ಗೌರವಗಳು

ಜನನ

ಡಿಸೆಂಬರ್ ೨೧, ೧೯೩೨
ಮೇಳಿಗೆ, ತೀರ್ಥಹಳ್ಳಿ ತಾಲ್ಲೂಕ್

ಕಥಾ ಸಂಕಲನಗಳು:

೧.	ಎಂದೆಂದೂ ಮುಗಿಯದ ಕಥೆ	೧೯೫೫
೨.	ಪ್ರಶ್ನೆ	೧೯೬೩
೩.	ಮೌನಿ	೧೯೭೨
೪.	ಆಕಾಶ ಮತ್ತು ಬೆಕ್ಕು	೧೯೮೧
೫.	ಸೂರ್ಯನ ಕುದುರೆ	೧೯೯೫
	ಒಂದು ಬಿಡಿ ಕಥೆ	
	ಬೇಟೆ, ಬಳೆ ಮತ್ತು ಓತಿಕೇತ	
೬.	ಐದು ದಶಕದ ಕಥೆಗಳು (ಸಮಗ್ರ ಕಥಾ ಸಂಕಲನ)	೨೦೦೧

ಕಾದಂಬರಿಗಳು:

೧.	ಸಂಸ್ಕಾರ	೧೯೬೫
೨.	ಭಾರತಿಪುರ	೧೯೭೩
೩.	ಅವಸ್ಥೆ	೧೯೭೮
೪.	ಭವ	೨೦೦೧
೫.	ದಿವ್ಯ	೨೦೦೧

ನಾಟಕ:

೧. ಅವಾಹನೆ ೧೯೬೮

ಕಾವ್ಯ:

೧. ಹದಿನೈದು ಪದ್ಯಗಳು ೧೯೭೦

೨. ಅಜ್ಜನ ಹೆಗಲ ಸುಕ್ಕುಗಳು ೧೯೮೯

೩. ಮಿಥುನ ೧೯೯೨

ವಿಮರ್ಶೆ:

೧. ಪ್ರಜ್ಞೆ ಮತ್ತು ಪರಿಸರ ೧೯೭೧

೨. ಸನ್ನಿವೇಶ ೧೯೭೪

೩. ಸಮಕ್ಷಮ ೧೯೮೦

೪. ಪೂರ್ವಾಪರ ೧೯೯೦

೫. ಬೆತ್ತಲೆ ಪೂಜೆ ಯಾಕೆ ಕೂಡದು ೧೯೯೬

ಅನುವಾದ:

೧. ದಾವ್‌ದ ಜಿಂಗ್ ೧೯೯೪

ಸಂಪಾದಿತ:

೧. ಕನ್ನಡ ಕಾವ್ಯ ಸಂಕಲನ ೧೯೭೨

೨. ರುಜುವಾತು (ಸಾಂಸ್ಕೃತಿಕ, ಸಾಹಿತ್ಯ ಸಂವಾದಗಳಿಗೆ) ೧೯೮೧
ಮೀಸಲಾದ ತ್ರೈಮಾಸಿಕ) ಈಗ ಪ್ರಕಟವಾಗುತ್ತಿಲ್ಲ.

ಭಾಷಾಂತರಗೊಂಡ ಅನಂತಮೂರ್ತಿಯವರ ಕೃತಿಗಳು:

೧. ಸಂಸ್ಕಾರ (ಇಂಗ್ಲೀಷ್) ಎ.ಕೆ. ರಾಮಾನುಜನ್ ೧೯೭೯
(ರಶಿಯನ್, ಫ್ರೆಂಚ್, ಹಂಗೇರಿಯನ್, ಜರ್ಮನಿ, ಹಿಂದಿ,
ಬಂಗಾಳಿ, ಮಲೆಯಾಳಂ, ಮರಾಠಿ, ಗುಜರಾತಿ, ಉರ್ದು)

೨. ಅವಸ್ಥೆ (ಇಂಗ್ಲೀಷ್) ಡಾ. ಶಾಂತಿನಾಥ ದೇಸಾಯಿ ೧೯೮೯

೩. ಭವ (ಇಂಗ್ಲೀಷ್) ಜೂಡಿತ್ ಕ್ರೋಲ್ ಮತ್ತು ಅನಂತಮೂರ್ತಿ ೧೯೯೮

ಅನಂತಮೂರ್ತಿ ಕುರಿತು ಪುಸ್ತಕಗಳು:

೧. ಯು. ಆರ್. ಅನಂತಮೂರ್ತಿ (ಒಂದು ಅಧ್ಯಯನ) ೧೯೯೫
ಲೇ: ಟಿ.ಪಿ. ಅಶೋಕ
ಪ್ರ. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ,
ಎಂ.ಜಿ.ಎಂ. ಕಾಲೇಜ್, ಉಡುಪಿ.

೨. ಯು.ಆರ್. ಅನಂತಮೂರ್ತಿ ೨೦೦೦
(ಜೀವನ ಹಾಗೂ ಕೃತಿಗಳ ಸಮೂಹ ಶೋಧ)
ಸಂಪಾದಕ: ಮುರಳೀಧರ ಉಪಾಧ್ಯ ಹಿರಿಯಡಕ
ಪ್ರಕಾಶಕರು: ಕರ್ನಾಟಕ ಸಂಘ, ಪುತ್ತೂರು- ೫೭೪೨೦೨.

೩. ಅನಂತಮೂರ್ತಿಯವರ ಸಾಹಿತ್ಯದ ಒಲವು ನಿಲುವುಗಳು ೨೦೦೨
ಲೇಖಕ: ಮಾಧವ ಕುಲಕರ್ಣಿ
ತನು-ಮನ ಪ್ರಕಾಶನ, ಮೈಸೂರು-೨೩.

೪. ನಮ್ಮ ಹೆಮ್ಮೆಯ ಸಾಹಿತಿ- ಯು.ಆರ್. ಅನಂತಮೂರ್ತಿ ೨೦೦೨
ಲೇ. ಮಾನಸ, ತನುಮನ ಪ್ರಕಾಶನ, 'ತೃಪ್ತಿ', ಜಿ-ಬ್ಲಾಕ್,
೩ನೇ ತಿರುವು, ರಾಮಕೃಷ್ಣನಗರ, ಮೈಸೂರು-೫೭೦೦೨೩.

ಪ್ರಶಸ್ತಿಗಳು:

೧. ಇಂಗ್ಲೀಷ್ ಎಂ.ಎ. ಸುವರ್ಣಪದಕ ೧೯೫೬

೨. ಸಂಸ್ಕಾರ ಕಾದಂಬರಿಗೆ:
ಕರ್ನಾಟಕ ಫಿಲ್ಮ್ ಡೆವೆಲೆಪ್ಮೆಂಟ್ ಕಾರ್ಪೊರೇಶನ್ ಪ್ರಶಸ್ತಿ ೧೯೮೮

೩. ಘಟಶ್ರಾದ್ಧ ಕಥೆಗೆ
ಕರ್ನಾಟಕ ಫಿಲ್ಮ್ ಡೆವೆಲೆಪ್ಮೆಂಟ್ ಕಾರ್ಪೊರೇಶನ್ ಪ್ರಶಸ್ತಿ ೧೯೭೮

೪. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ೧೯೮೩

೫. ಕರ್ನಾಟಕ ಸರ್ಕಾರದ ಪ್ರಶಸ್ತಿ ೧೯೮೪

೬. ಕರ್ನಾಟಕ ಅಕಾಡೆಮಿ ಸಾಹಿತ್ಯ ಪ್ರಶಸ್ತಿ ೧೯೮೪

೭. ಉಡುಪಿ ಅಧಮಾರು ಮಠದ ಶ್ರೀ ವಿಬುಧೇಶ ತೀರ್ಥ ೧೯೮೮
ಸ್ವಾಮೀಜಿ ಅವರಿಂದ "ಸಮಾಜ ಭೂಷಣ" ಪ್ರಶಸ್ತಿ ೧೯೮೮

೮. 'ಬರ' ಕಥೆಗೆ ಕರ್ನಾಟಕ ಫಿಲಂ ಡೆವಲಪ್‌ಮೆಂಟ್
ಕಾರ್ಪೊರೇಷನ್ ಅತ್ಯುತ್ತಮ ಕಥಾ ಪ್ರಶಸ್ತಿ ೧೯೯೪

೯. ಹಾರ್ಮೋನಿ ಅವಾರ್ಡ್ ೧೯೯೦

೧೦. ಮಾಸ್ತಿ ಪ್ರಶಸ್ತಿ ೧೯೯೪

೧೧. ಕಲ್ಕತ್ತದ ರವೀಂದ್ರ ಭಾರತಿ ವಿಶ್ವವಿದ್ಯಾನಿಲಯ

೧೨. ಗೌರವ ಡಿ.ಲಿಟ್ ಪ್ರಶಸ್ತಿ ೧೯೯೫

೧೩. ಹಿಮಾಚಲ ಪ್ರದೇಶ ಸರ್ಕಾರದ ಶಿಖರ ಸನ್ಮಾನ್ ೧೯೯೫

೧೪. ಭಾರತ ಸರ್ಕಾರದ ಪದ್ಮಭೂಷಣ ಪ್ರಶಸ್ತಿ ೧೯೯೮

೧೫. ೧. ಅಧ್ಯಕ್ಷರು: ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ ೧೯೯೨-೯೩
೨. ಅಧ್ಯಕ್ಷರು: ಕೇಂದ್ರ ಸಾಹಿತ್ಯ ಅಕಾಡೆಮಿ ೧೯೯೩-೯೮
೩. ಅಧ್ಯಕ್ಷರು: ೧೯೬೯ನೇ ಅಖಿಲ ಭಾರತ ೧೫-೨೦೨
ಕನ್ನಡ ಸಾಹಿತ್ಯ ಸಮ್ಮೇಳನ, ತುಮಕೂರು

□□

ಶ್ರೀ ಕೆ.ವಿ. ಸುಬ್ಬಣ್ಣ
ಬದುಕು-ಬರಹಗಳಲ್ಲಿ ಪರ್ಯಾಯ ಅನ್ವೇಷಣೆ

❒ ಎಸ್.ಆರ್. ವಿಜಯಶಂಕರ

ಕೆಲವರು ತಾವು ಇರುವ ಜಾಗದಲ್ಲೆ ಇದ್ದುಕೊಂಡು ತಮ್ಮ ಕೆಲಸವನ್ನು ತಮ್ಮಷ್ಟಕ್ಕೆ ತಾವೇ ಮಾಡುತ್ತಿರುತ್ತಾರೆ. ಅವರು ಮಾಡುವ ಕೆಲಸದ ಅಂತಃಸತ್ವದಿಂದಲೂ, ಕ್ರಿಯಾ ಪ್ರಾಮುಖ್ಯದಿಂದಲೂ ಅವರು ಇತರರ ಗಮನವನ್ನೂ ಆಸಕ್ತಿಯನ್ನೂ ಸೆಳೆಯುತ್ತಾರೆ. ಅದರಿಂದಾಗಿ ಅಂತಹವರು ಮಾಡುವ ಕೆಲಸ ಅದು ಇರುವಲ್ಲಿ ಇರುವಂತೆ ಆ ಕಾಲದ ಮುಖ್ಯ ಪ್ರವಾಹವಾಗಿ ಮಾರ್ಪಡುತ್ತದೆ. ನಮ್ಮ ಕಾಲದಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹೆಗ್ಗೋಡು ಎಂಬ ಪುಟ್ಟ ಹಳ್ಳಿಯಲ್ಲಿ ನೀನಾಸಂ ಸಂಸ್ಥೆಯನ್ನು ಕಟ್ಟಿ ಬೆಳೆಸಿದ ಶ್ರೀ ಕೆ.ವಿ. ಸುಬ್ಬಣ್ಣ ಅಂತಹವರು. ನಮ್ಮ ಪುರಾಣಗಳಲ್ಲಿ ಕೆಲವರು ಋಷಿ ಮುನಿಗಳು ಇರುವ ಜಾಗವೇ ಜ್ಞಾನ ಕೇಂದ್ರವಾಗುತ್ತಿತ್ತು. ಸಾಂಸ್ಕೃತಿಕ ಮುಖ್ಯ ಸ್ಥಳವಾಗುತ್ತಿತ್ತು. ಅಂತಹವರು ಎಂದೂ ರಾಜಾಶ್ರಯವನ್ನು ಹುಡುಕಿ ಹೋದದ್ದೇ ಇಲ್ಲ. ನಾಡ ಹಿತಕ್ಕಾಗಿ ರಾಜರೇ ಅಂತಹವರನ್ನು ಹುಡುಕಿ ಬರುತ್ತಿದ್ದರು.

ನೀನಾಸಂನಿಂದ ಸುಬ್ಬಣ್ಣನವರಿಗೂ, ಹಾಗೆಯೇ ಸುಬ್ಬಣ್ಣನವರಿಂದ ನೀನಾಸಂಗೂ ಹೆಸರು ಬಂದಿದೆ. ಕನ್ನಡ ಬರಹಗಾರರಾಗಿ, ಚಿಂತಕರಾಗಿ ಸುಬ್ಬಣ್ಣನವರಿಗೆ ನೀನಾಸಂ ಹೊರತಾಗಿಯೂ ದೊಡ್ಡ ಗೌರವದ ಸ್ಥಾನಮಾನವಿದೆ. ಅದೇ ರೀತಿ ನೀನಾಸಂ ಕೂಡಾ ಸುಬ್ಬಣ್ಣ ಇಲ್ಲದೆ ತನ್ನ ಸ್ವತಂತ್ರ ಅಸ್ತಿತ್ವ ಸ್ಥಾನಮಾನ ಹೊಂದಿದೆ. ಹೀಗೆ ಪರಸ್ಪರ ಪೂರಕವಾಗಿದ್ದೂ, ಪರಸ್ಪರ ಸ್ವತಂತ್ರವೂ ಪ್ರತ್ಯೇಕವೂ ಆಗಿರುವ ರೀತಿಯೇ ಸುಬ್ಬಣ್ಣನವರ ವ್ಯಕ್ತಿತ್ವ ಮತ್ತು ಚಿಂತನಾಕ್ರಮದ ಮೇಲೆ ಬೆಳಕು ಚೆಲ್ಲುತ್ತದೆ.

ಶ್ರೀ.ಕೆ.ವಿ. ಸುಬ್ಬಣ್ಣ ಕೃಷಿಕರು. ಅಡಿಕೆ ಬೇಸಾಯ ಜೀವನ ವೃತ್ತಿ. ಆರ್ಥಿಕ ಸಂಪತ್ತಿನ ದೃಷ್ಟಿಯಿಂದ ಉತ್ತಮ ರೀತಿಯ ಸ್ಥಿತಿವಂತರು. ೧೯೫೦ರ ದಶಕದ ಆದಿಯಲ್ಲಿ ಮೈಸೂರಿನ ಪ್ರಖ್ಯಾತ ಮಹಾರಾಜ ಕಾಲೇಜಿನಲ್ಲಿ ಓದಿ ಕನ್ನಡ ಸಾಹಿತ್ಯದಲ್ಲಿ ಬಿ.ಎ. (ಆನರ್ಸ್) ಮಾಡಿ, ಮೈಸೂರಿನಲ್ಲೇ ಸ್ನಾತಕೋತ್ತರ ಪದವಿ ಪಡೆದರು. ಸ್ವತಃ ಸಂಸ್ಕೃತ ವಿದ್ವಾಂಸರು. ಇಂಗ್ಲಿಷ್ ಭಾಷೆ, ಸಾಹಿತ್ಯ ಅಧ್ಯಯನ ಮಾಡಿ, ಜಗತ್ತಿನ ಶ್ರೇಷ್ಠ ಕಲೆ, ಸಾಹಿತ್ಯ ಅಧ್ಯಯನ ಅನುವಾದಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. 'ಹೂ ಚೆಲ್ಲಿದ

ವಿಳಾಸ : ಸಿ-೨/೧೦೩, ಓಂಕಾರ್ ಅಪಾರ್ಟ್‌ಮೆಂಟ್, ಲನೇ ಮೈನ್, ಮಲ್ಲೇಶ್ವರಂ, ಬೆಂಗಳೂರು-೫೬೦೦೦೩

ಹಾದಿಯಲ್ಲಿ' ಎಂಬ ಒಂದು ಸ್ವತಂತ್ರ ಕವನ ಸಂಕಲನವನ್ನು ಸುಬ್ಬಣ್ಣ ಬಹಳ ಹಿಂದೆ ಪ್ರಕಟಿಸಿದರು. ಆದರೆ ಆ ಬಳಿಕ ಅವರು ಕವಿಯಾಗಿ ಮುಂದುವರಿಯಲಿಲ್ಲ.

ಆಸಕ್ತಿ ಜೊತೆ ತಮ್ಮ ಶಕ್ತಿಯನ್ನೂ ತಾವೇ ಗುರುತಿಸಿಕೊಳ್ಳುತ್ತಾ, ನಾಟಕ, ಅವುಗಳ ರೂಪಾಂತರ, ಭಾಷಾಂತರ, ಸಿನಿಮಾ, ಅಲ್ಲಿನ ಅನುವಾದಗಳು, ಸ್ವತಂತ್ರ ಕೃತಿಗಳು, ವೈಚಾರಿಕ ಲೇಖನ, ವಿಮರ್ಶೆ, ಸಮಾಜವಾದಿ ಚಿಂತನೆ, ಅವಕ್ಕೆ...; ಅನುಕೂಲವಾಗುವಂತೆ ಅನೇಕಾನೇಕ ಅನುವಾದಗಳು ಹೀಗೆ ನಿರಂತರವಾಗಿ ಸಾಂಸ್ಕೃತಿಕ ಚಿಂತನೆ, ವಿಕೇಂದ್ರೀಕರಣದ ಪ್ರತಿಪಾದನೆ ಇವುಗಳ ಮೂಲಕ ತಾನು ಇರುವ ಜಾಗದಲ್ಲೆ ಬದುಕನ್ನು ಸುಂದರಗೊಳಿಸಿ, ಅಲ್ಲೆ ಇತರರ ಜೊತೆ ಸಮೃದ್ಧವಾಗಿ ಬದುಕುವುದರಲ್ಲಿ ತೊಡಗಿಸಿಕೊಂಡರು. ತಾನು ಇರುವ ಒಂದು ಹಳ್ಳಿಯಲ್ಲೇ ಕ್ರಿಯಾಶೀಲನಾಗಿ, ಉತ್ಕಟವಾಗಿ ಬದುಕುವ ಕ್ರಮದಲ್ಲೇ ತನ್ನ ಬದುಕನ್ನು ತನ್ನ ಸುತ್ತಲಿನ ಇತರರ ಬದುಕಿನ ಸೌಂದರ್ಯವನ್ನು ಹೆಚ್ಚು ಮಾಡಿದರು. ಅವರ ಆಸಕ್ತಿಯ ಬೀಸುಕೂಡಾ ಹಾಗೆಯೇ. ಧನಂಜಯನ 'ದಶರೂಪಕ'ದಿಂದ ಸ್ಟಾನಿಸ್ಲಾವಸ್ಕಿಯ 'ರಂಗದಲ್ಲಿ ಅಂತರಂಗ'ದವರೆಗೆ ಜಗತ್ತಿನ ಎಲ್ಲಾ ಶ್ರೇಷ್ಠ ವಿಚಾರಗಳ ಬಗ್ಗೆ ಆಸಕ್ತಿ ಅನುವಾದ. ಇಷ್ಟಾಗಿಯೂ ಅವರೇ "ಶ್ರೇಷ್ಠತೆಯ ವ್ಯಸನ" ಎಂಬ ತಮ್ಮ ಬರಹ, ಭಾಷಣದ ಮೂಲಕ ನವ್ಯ ಸಾಹಿತ್ಯದ ನಂತರದ ಬಹುಮುಖ್ಯವಾದ ಹೊಸ ಚಿತನೆಯನ್ನು ಪ್ರೇರೇಪಿಸಿದ್ದು. ಅವರ ಶ್ರೇಷ್ಠತೆಯ ವ್ಯಸನ ಎಂಬ ಲೇಖನ ಭಾರತದ ವಸಾಹತುಶಾಹಿ ಚಿಂತನೆಯಿಂದ ಬಿಡುಗಡೆಯಾಗುತ್ತಿರುವ ಸಂಕೇತ. ನಮ್ಮ ಪರ್ಯಾಯ ಚಿಂತನೆಯ ಬೀಜ ಪ್ರತಿಷ್ಠಾಪನೆ. ಸುಬ್ಬಣ್ಣನವರೇ ಕೇಂದ್ರದಲ್ಲಿದ್ದು ಬೆಳೆಸಿದ ಕನ್ನಡದ ನವ್ಯ ಸಾಹಿತ್ಯದ ಕೊನೆಯ ಮಂಗಳ ಹಾಡು. ಹೀಗೆ ತಮ್ಮನ್ನು ತಾವೇ ಮೀರಿ ಬೆಳೆಯುವ ಶಕ್ತಿ ಇರುವುದರಿಂದಲೇ ಸುಬ್ಬಣ್ಣ ದೊಡ್ಡವರು.

ಸಂಸ್ಕೃತದ ನಾಟ್ಯ ಶಾಸ್ತ್ರ ಗ್ರಂಥಗಳಲ್ಲಿ ಒಂದು ಮುಖ್ಯ ಕೃತಿ ಧನಂಜಯನ ದಶರೂಪಕ ಕನ್ನಡ ಅನುವಾದವನ್ನು ಸುಬ್ಬಣ್ಣ ೧೯೫೪ರಲ್ಲಿ ಪ್ರಕಟಿಸಿದರು. ಆಗ ಅವರಿಗೆ ಕೇವಲ ೨೬ ವರ್ಷಗಳು: ೧೯೫೦ರ ದಶಕದಲ್ಲಿ ಮಲೆನಾಡ ಹಳ್ಳಿಗಳಿಗೆ ಕನಸಿಸಂತಿದ್ದ ಮೈಸೂರಿಗೆ ಹೋಗಿ ಅಲ್ಲಿ ಸ್ನಾತಕೋತ್ತರ ಪದವಿ ಪಡೆದು, ನಗರದ ಆಕರ್ಷಣೆಯಲ್ಲಿ ಅಲ್ಲೇ ನೆಲೆಯೂರದೆ ಪುನಃ ಹಳ್ಳಿಗೇ ಹಿಂತಿರುಗಿದವರು. ಇಂತಹದೇ ಮಲೆನಾಡ ಹಳ್ಳಿಗಳಿಂದ ನಗರಗಳಿಗೆ ಓದಲು ಹೋದ ಅನೇಕಾನೇಕರು ಪಟ್ಟಣಗಳಲ್ಲೇ ನೆಲೆ ನಿಂತರು ಎಂಬುದನ್ನು ನೆನಪಿಸಿಕೊಂಡರೆ, ಸುಬ್ಬಣ್ಣನವರ ನಿರ್ಣಯ ಕೇವಲ ಆಕಸ್ಮಿಕ ಅಥವಾ ಅನಿವಾರ್ಯವಾದ್ದು ಆಗಿದ್ದಿರಲಾರದು ಎಂಬುದು ಮೇಲು ನೋಟಕ್ಕೆ ಗೋಚರಕ್ಕೆ ಬರುತ್ತದೆ. ದಶರೂಪಕ ಅನುವಾದದ ಕೆಲಸವನ್ನು ಅವರು ಪ್ರಾರಂಭಿಸಿದ್ದು ಅದರ ಪ್ರಕಟಣೆಗೆ ಮೂರು ವರುಷಗಳ ಮೊದಲು.

೧೯೫೮ರಷ್ಟು ಹಿಂದೆ ಪ್ರಕಟಿಸಿದ "ದಶರೂಪಕ" ಅನುವಾದದ ಮೊದಲಲ್ಲಿ ಸುಬ್ಬಣ್ಣ ಮಾಡಿಕೊಂಡ ಪುಟ್ಟ ಅರಿಕೆ ಒಂದು ರೀತಿಯಲ್ಲಿ ಅವರ ಮುಂದಿನ ಎಲ್ಲಾ ಚಿಂತನೆ ಸಾಧನೆಗಳ ಮೆನಿಫೆಸ್ಟೋದಂತೆ ಇದೆ. ಆ ಅರಿಕೆಯೇನೂ ಅವರು ಮುಂದಿನ ಬದುಕಿನ ನಕಾಶೆಯನ್ನು ಯೋಚಿಸಿ ಮಾಡಿದ ಯಾವ ಯೋಜನೆಯೂ ಅಲ್ಲ. ಅದು ಸುಬ್ಬಣ್ಣನವರ ಮೂಲ ಸತ್ವ. ಎಚ್ಚರದ ಪ್ರತೀಕ. ಈಗ ೨೦೦೨ ನೇ ಇಸವಿಯ ಕೊನೆಯಲ್ಲಿ ನಿಂತು ನೋಡಿದಾಗ ಸುಬ್ಬಣ್ಣನವರ ಸಾಧನೆಯ ಹಿಂದಿನ ಸಾತತ್ಯ ಗೋಚರಿಸುತ್ತದೆ. ಮಾತು, ಕೃತಿಗಳು ಅವರಲ್ಲಿ ಬೇರೆ ಬೇರೆಯಿಲ್ಲ. ಅನೇಕ ಸಲ ಅವರ ಮಾತೇ ಸಹಜ ಕೃತಿಯಾಗುವ ಹಾಗೆ ಅವರ ಬರಹಗಳು ಇರುತ್ತವೆ. ಇನ್ನು ಅವರ ಬಹಿರಂಗದ ಕೃತಿಯಾದ ನೀನಾಸಂ ಮೂಲಕ ಸಾಧಿಸಿದ ಕೆಲಸ, ಕಾರ್ಯ, ಸಂಘಟನೆಗಳು ಅವರ ಮಾತು ಸಹಜವಾಗಿ ಕೃತಿಯಾದುದನ್ನೆ ಸಾಬೀತು ಪಡಿಸುತ್ತವೆ.

೧೯೫೮ರ ಧನಂಜಯನ 'ದಶರೂಪಕ'ದ ಅನುವಾದದ ಮೊದಲ ಆವೃತ್ತಿಯ ಅರಿಕೆಯ ಈ ಮಾತುಗಳನ್ನು ಗಮನಿಸಿ:

ಸ್ವಪರಂಪರೆಯನ್ನವಲಂಬಿಸದ ಬೆಳವಣಿಗೆ ಸಹಜವಾಗದು, ಸುಪುಷ್ಟವಾಗದು. ಅಂತೆಯೇ, ಲಲಿತ ಕಲಾಶಾಸ್ತ್ರದ ನಮ್ಮ ಪೂರ್ವ ಪರಂಪರೆಯನ್ನು ತಿಳಿದಲ್ಲದೆ ನಮಗೆ ಇಂದು ಅಗತ್ಯವಾದ ನೂತನ ಕಲಾಶಾಸ್ತ್ರ, ಸಹಜ ಅರಳಿದಂತೆ, ಹುಟ್ಟಿ ಬೆಳೆಯಲಾರದು. ನಾಟ್ಯ ಕಲೆಯ ವಿಷಯವನ್ನು ತೆಗೆದುಕೊಂಡರೂ ಅಷ್ಟೇ ನಮ್ಮಲ್ಲಿ ಈ ಶತಮಾನದ ನೂತನ ನಾಟ್ಯ ಶಾಸ್ತ್ರದ ಪರಂಪರೆ ಸ್ಪಷ್ಟ ತಿಳಿಯಬೇಕು. ಅದಕ್ಕೆ ಮುಖ್ಯವಾಗಿ, ಸಂಸ್ಕೃತದಲ್ಲಿರುವ ನಾಟ್ಯ ವಿಷಯಕ ಗ್ರಂಥಗಳೆಲ್ಲವೂ ಪ್ರಾದೇಶಿಕ ಭಾಷೆಗಳಲ್ಲಿ ಅನುವಾದವಾಗಬೇಕು.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಸುಬ್ಬಣ್ಣ ಗ್ರಹಿಸುವ ಸ್ವಾತಂತ್ರ್ಯೋತ್ತರದ ಅಗತ್ಯ. ಅದು ನೂತನ ಕಲಾಶಾಸ್ತ್ರ. ಅದು ಸಹಜ ಅರಳಿದಂತೆ ಹುಟ್ಟಿ ಬೆಳೆಯಬೇಕು. ನಮ್ಮ ದೀರ್ಘವಾದ ವಸಾಹತುಶಾಹಿ ಆಡಳಿತ ನಮ್ಮ ಮೂಲ ಶಕ್ತಿಯ ಸಹಜ ಬೆಳವಣಿಗೆಯನ್ನು ಮೊಟಕುಗೊಳಿಸಿದೆ. ಅದಕ್ಕೆ ಪೂರ್ವ ಪರಂಪರೆಯ ತಿಳುವಳಿಕೆ ಬೇಕು. ಅದೇ ರೀತಿ ಈ ಶತಮಾನದ ನೂತನ ನಾಟ್ಯ ಶಾಸ್ತ್ರ ಹುಟ್ಟಿ ಬೆಳೆಯ ಬೇಕಾದರೂ ಭಾರತೀಯ ನಾಟ್ಯ ಶಾಸ್ತ್ರ ಪರಂಪರೆಯು ಸ್ಪಷ್ಟ ತಿಳಿಯಬೇಕು. ಹೊಸ ಬೆಳವಣಿಗೆಯ ನೂತನ ಹುಟ್ಟಿನ ಮೊದಲ ಅವಶ್ಯಕತೆಗಳಲ್ಲಿ ಪೂರ್ವ ಪರಂಪರೆಯ ತಿಳುವಳಿಕೆಯೂ ಒಂದು.

ಪರ್ಯಾಯ ಚಿಂತನೆಯ ಮೂಲಕ ಭಾರತದಲ್ಲಿ ಶತಮಾನಗಳ ತುಳಿತದಿಂದ ಮೊಟಕಾಗಿ ಕಮರಿ ಹೋಗಿದ್ದ ಮೂಲ ಶಕ್ತಿಯನ್ನು ಅಗೆದು ಶೋಧಿಸಿ ಅದನ್ನು ಹೊಸ ವಿಗ್ರಹವಾಗಿ ಪುನರ್ ರೂಪಿಸುವ ಕೆಲಸದಲ್ಲಿ ಜಗತ್ತಿನ ಎಲ್ಲಾ ಮೂಲೆಗಳಿಂದಲೂ

ಅತ್ಯುತ್ತಮವಾದ್ದನ್ನು ಸುಬ್ಬಣ್ಣ ಕನ್ನಡಕ್ಕೆ ಅನುವಾದಿಸಿದರು. ಅಕ್ಷರ ಪ್ರಕಾಶನದ ಅಕ್ಷರ ಚಿಂತನ ಮಾಲೆಯಂತಹ ಕೃತಿಗಳ ಮೂಲಕ ಇಂತಹ ಕೆಲಸಗಳನ್ನು ಇನ್ನೂ ವಿಸ್ತರಿಸಿಕೊಂಡರು. ಆ ಮೂಲಕ ತಮ್ಮ ಹಾಗೂ ಕನ್ನಡದ ಧಾರಣ ಶಕ್ತಿಯನ್ನೂ, ಚಿಂತನೆಯ ಪ್ರಖರತೆಯನ್ನೂ, ಮಾಹಿತಿಯ ಆಕರಗಳನ್ನೂ ವಿಸ್ತರಿಸಿಕೊಂಡರು. ಆದರೆ ಎಲ್ಲೂ ಅವರು ಗೊಡ್ಡು ಪಂಡಿತರಂತೆ ಹಳತು ಮಾತ್ರ ಎಲ್ಲಾ ಕಡೆ ಸಾಧು ಎನ್ನಲಿಲ್ಲ.

ಪುರಾಣ ಮಿತ್ಯೇವ ನ ಸಾಧು ಸರ್ವಂ ನ ಚಾಪಿ ಕಾವ್ಯಂ ನವ ಮಿತ್ಯವದ್ಯಂ

ಎಂಬ ಕಾಳಿದಾಸನ ವಿವೇಕವನ್ನು ನೆನಪಿಸುವಂತಹ ಕ್ರಿಯೆ ಸುಬ್ಬಣ್ಣನವರದ್ದು. ಸುಬ್ಬಣ್ಣನವರಿಗೆ ಕಾಳಿದಾಸ ಬಹು ಪ್ರಿಯನಾದ ಕವಿ, ನಾಟಕಕಾರ. ನಮ್ಮ ಪೂರ್ವ ಪರಂಪರೆಯಲ್ಲಿ ಕಳಚಿದ ಕೊಂಡಿಯನ್ನು ಪುನರ್ ಸ್ಥಾಪಿಸುವುದಕ್ಕೆ ಕಾಳಿದಾಸನ ಕೃತಿಗಳು ಸುಬ್ಬಣ್ಣನವರಿಗೆ ಒಂದು ಪ್ರಮಾಣ. ನಮ್ಮ ಲಲಿತ ಕಲಾ ಶಾಸ್ತ್ರದ ಪೂರ್ವ ಪರಂಪರೆಯ ತಿಳುವಳಿಕೆಯಲ್ಲಿ ಅದರ ಸಹಜ ಅಭಿವ್ಯಕ್ತಿಯಲ್ಲಿ ಭಾರತದ ಮೂಲ ವಿವೇಕದ ಸಹಜ ಶಕ್ತಿಯನ್ನು ಸುಬ್ಬಣ್ಣ ಕಾಳಿದಾಸನಿಂದ ಆವಾಹಿಸಿಕೊಳ್ಳುತ್ತಾರೆ.

ಈ ಶತಮಾನದ ನೂತನ ನಾಟ್ಯಶಾಸ್ತ್ರದ ಹುಟ್ಟು ಬೆಳವಣಿಗೆಯನ್ನು ಉದ್ದೀಪಿಸುತ್ತಾ ಸುಬ್ಬಣ್ಣ ಅನೇಕ ಕೆಲಸ ಕಾರ್ಯಗಳನ್ನು ಮಾಡಿದರು. ಪ್ರಪಂಚದ ಮೂಲೆ ಮೂಲೆಗಳಿಂದ ಹೊಸ ನಾಟಕಗಳನ್ನು ಕನ್ನಡಕ್ಕೆ ತರುವುದು ನಡೆಯಿತು. ನೀನಾಸಂ ಮೂಲಕ ಅದು ನಾಡಿನ ನಾಲ್ಕು ಕಡೆ ಹಬ್ಬಿತು. ಅನೇಕ ಸಂಸ್ಕೃತ ನಾಟಕಗಳು ಹೊಸದಾಗಿ ಕನ್ನಡಕ್ಕೆ ಬಂದವು. ಅವನ್ನು ರಂಗದ ಮೇಲೆ ನೀನಾಸಂ ಆಡಿ, ತಿರುಗಾಟದಲ್ಲೂ ಪ್ರಸ್ತುತ ಪಡಿಸಿ ಕರ್ನಾಟಕದಾದ್ಯಂತ ಈ ಹೊಸ ಅಲೆ ವಿಸ್ತರಿಸಿತು. ರಾಷ್ಟ್ರದ ಮುಖ್ಯ ಸಾಂಸ್ಕೃತಿಕ ಕೇಂದ್ರಗಳೂ ಕನ್ನಡದ ನೀನಾಸಂನ ಈ ಬೆಳವಣಿಗೆಯನ್ನು ಗಮನಿಸಿದವು. ಶ್ರೀರಂಗರ ಮೂಲಕ ಸುಬ್ಬಣ್ಣ ಭರತನ ನಾಟ್ಯ ಶಾಸ್ತ್ರವನ್ನು ಸಮಗ್ರವಾಗಿ ಕನ್ನಡಕ್ಕೆ ಅನುವಾದಿಸಿ ಅದನ್ನು ಅಕ್ಷರ ಪ್ರಕಾಶನದಿಂದ ಪ್ರಕಟಿಸಿದರು. ವಿಶ್ವವಿದ್ಯಾನಿಲಯಗಳು ಸರಕಾರದ ಸಂಸ್ಕೃತಿ ಇಲಾಖೆ ಮಾಡಬೇಕಾದಂತಹ ಬೃಹತ್ ಕೆಲಸ ಅದು. ಯಾರನ್ನೂ ಏನಕ್ಕೂ ಕೇಳದೆ ಆಗಬೇಕಾದ ಮುಖ್ಯ ಕೆಲಸಗಳನ್ನು ಸುಬ್ಬಣ್ಣ ಮಾಡುತ್ತಾ ಹೋದರು. ೧೯೫೩ರಲ್ಲಿ ಗೋರ್ಕಿಯ ಕಥೆಗಳನ್ನು, ರಷ್ಯಾದ ಅತಿ ಮುಖ್ಯನಾದ ಗೋರ್ಕಿಯನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ ಸುಬ್ಬಣ್ಣನವರೇ ನಮ್ಮ ಪೂರ್ವ ಪರಂಪರೆಯನ್ನು ತಿಳಿಯುವ ಈ ಕೆಲಸಗಳನ್ನು ಮಾಡಿದರು ಎಂಬುದು ನೆನಪಿಡಬೇಕಾದ ವಿಚಾರ.

ಸ್ವಪರಂಪರೆಯ ಶೋಧ ಸುಬ್ಬಣ್ಣನವರ ಸಹಜ ಬೆಳವಣಿಗೆಯ ಒಂದು ಹಂತ ಲೋಕ ಶಾಕುಂತಲ ಕೃತಿ. ಕಾಳಿದಾಸನ ಅಭಿಜ್ಞಾನ ಶಾಕುಂತಲಂ ನಾಟಕದ ಈ

ರೂಪಾಂತರ ೧೯೮೮ರಲ್ಲಿ ಹೊರ ಬಂತು. (ಮೂಲತಃ ಅದು ೧೯೮೨ರಲ್ಲಿ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದ ವಿದ್ಯಾರ್ಥಿಗಳಿಗಾಗಿ ಮಾಡಿದ ನಾಟಕ) ನೀನಾಸಂ ತಿರುಗಾಟದಲ್ಲಿ ಈ ನಾಟಕ ರಾಜ್ಯದ ಮೂಲೆ ಮೂಲೆಗಳಲ್ಲಿ ಹೊಸ ಸ್ಪಂದನ ಉಂಟು ಮಾಡಿತು. ಯಕ್ಷಗಾನದ ಹದವಾದ ಬಳಕೆ ಕೆ.ಜಿ. ಕೃಷ್ಣಮೂರ್ತಿ, ಸುಶೀಲ ದುಷ್ಯಂತ ಶಕುಂತಲೆಯರಾಗಿ ನೀಡಿದ ಸಹಜ ಅಭಿನಯ, ಸುಬ್ಬಣ್ಣನವರ ಶಕ್ತಿಯುತ ರೂಪಾಂತರದ ಕನ್ನಡ, ನಮ್ಮ ಸಾಂಸ್ಕೃತಿಕ ಚರಿತ್ರೆಯ ಮಹತ್ವದ ಒಂದು ಮೈಲಿಗಲ್ಲು. ಲೋಕ ಶಾಕುಂತಲಕ್ಕೆ ಸುಬ್ಬಣ್ಣ ಬರೆದ ಬಹಳ ಮುಖ್ಯವಾದ ಒಂದು ಟಿಪ್ಪಣಿ ನಮ್ಮ ಕಾಲದ ತಾತ್ವಿಕ ನೆಲೆಗಳಿಗೆ ಸ್ಪಷ್ಟ ರೂಪ ನೀಡಿತು.

ಅಲ್ಲಿ ಸುಬ್ಬಣ್ಣ ಹೇಳುವ ಆರ್ಯ-ಅರಣ್ಯಕ ಸಂಸ್ಕೃತಿ ಒಂದು ಸಾಧ್ಯತೆ. ಆದರೆ ಮುಖ್ಯವಾದ್ದು ಸುಬ್ಬಣ್ಣ ಸಾಂಸ್ಕೃತಿಕವಾಗಿ ನೀಡಿದ ತಾತ್ವಿಕ ತಳಹದಿ. ಅದು ಸ್ಮೃತಿ-ವಿಸ್ಮೃತಿಗಳಿಗೆ ಸಂಬಂಧಿಸಿದ್ದು. ವಿಸ್ಮರಣೆ-ಪುನಃಸ್ಮರಣೆಗಳಿಗೆ ರಾಜಕೀಯ ಉಪಾಧಿಯ ನೆಲೆಯಲ್ಲೂ ಅವರು ಒಂದು ಒಳನೋಟ ನೀಡುತ್ತಾರೆ.

ಹಸ್ತಿನಾವತಿ ಪುರಾಣ ಸಂಸ್ಕೃತಿಯ ಹೆಸರಿನಲ್ಲಿ ಅದನ್ನು ಸೂಚಿಸುವುದರ ಜೊತೆಗೆ ಕಾಳಿದಾಸ ಸೂಚಿಸುವ ಇತರ ವಿಚಾರಗಳು ಸುಬ್ಬಣ್ಣನವರ ಮುಖ್ಯ ಪ್ರೇರಣೆಯಾಗಿದೆ. ಸುಬ್ಬಣ್ಣನವರ ಸಾಹಿತ್ಯ ಮೀಮಾಂಸೆಯ ತಳಹದಿಯೂ ಅಲ್ಲಿ ಅಡಗಿದೆ. ಅಭಿಜ್ಞಾನ ಶಾಕುಂತಲಂನಲ್ಲಿ ಕಾಳಿದಾಸ ಮುಖ್ಯವಾಗಿ ಮಾನವ ಸಂಸ್ಕೃತಿಯ ಸ್ವರ್ಣಯುಗವೆಂದು ಭಾವನೆ ಹುಟ್ಟಿಸಿದ್ದ ಗುಪ್ತಯುಗವನ್ನೂ, ಅದರ ಹಿನ್ನೆಲೆಯಲ್ಲಿ ಗಂಡು ಹೆಣ್ಣಿನ ಆಕರ್ಷಣೆ ಸ್ಮರಣೆ ವಿಸ್ಮರಣೆಗಳನ್ನು ಶೋಧಿಸಿ ನೋಡುವವನ ಮೂಲಕ ಗ್ರಹಿಕೆಗೆ ಬರುವ ರೀತಿ, ಇಂದಿನ ತನ್ನ ಕಾಲ ಸುಬ್ಬಣ್ಣನವರ ಇವತ್ತಿನ ಬದುಕಿನಲ್ಲಿ ಕೂಡ ಸಂಸ್ಕೃತಿ ವಿವರ್ಧನಕ್ಕೆ ಅಗತ್ಯವಾಗಿ ನಾಯಕ ನಿರ್ಮಾಣ, ಅಧಿಕಾರ ಕೇಂದ್ರೀಕರಣ, ಭೌತಿಕ ಸಮೃದ್ಧಿಗಳನ್ನು ಸಾಧಿಸಿಕೊಳ್ಳಲಿಕ್ಕೆ ಹೆಣಗುತ್ತಿದ್ದೇವೆ. ಅದರ ಸತ್ಫಲಗಳ ಜೊತೆಗೇ, ಸ್ವಾತಂತ್ರ್ಯಹರಣ, ಸರ್ವಾಧಿಕಾರ, ಹಿಂಸೆ, ಶೋಷಣೆ, ದಮನ ಮುಂತಾದ ದುಷ್ಫಲಗಳೂ ಹುಟ್ಟಿಕೊಂಡು ಬಿಡುತ್ತಿವೆಯಲ್ಲ? ಮಾನವೀಯತೆಯನ್ನು ಉತ್ಕರ್ಷಗೊಳಿಸುವ ಪ್ರಕ್ರಿಯೆಯಲ್ಲೇ ಮಾನವೀಯತೆಯನ್ನೇ ಮೂಲತಃ ನಾಶಗೊಳಿಸಿ ಬಿಡುವ ಕಾಲಕೂಟವೂ ಹೇಗೋ ಬೆರೆತುಕೊಂಡು ಬಿಡುತ್ತದೆಯಲ್ಲ. ಇದು ಯಾಕೆ ಹೀಗೆ ಎಂಬುದನ್ನು ಪರಿಭಾವಿಸಲು ಕಾಳಿದಾಸ ಸುಬ್ಬಣ್ಣನವರಿಗೆ ಪ್ರೇರಣೆಯಾಗುತ್ತಾನೆ.

ಕಾಳಿದಾಸನ ಮೂಲಕವೂ ಇಂದಿನ ಜಗತ್ತನ್ನು ಪರಿಭಾವಿಸಬಲ್ಲ ಸುಬ್ಬಣ್ಣನವರಿಗೆ ಸ್ವ ಪರಂಪರೆಯನ್ನು ಯಾವ ಯಾವ ರೀತಿ ಅವಲಂಬಿಸಬಹುದು. ಎಂಬುದನ್ನು ಸ್ಪಷ್ಟ ಪಡಿಸಿಕೊಟ್ಟದ್ದು ಕಾಳಿದಾಸನ ಅಧ್ಯಯನವೇ ಇರಬೇಕು. ಸ್ಮೃತಿ ಹಾಗೂ ವಿಸ್ಮೃತಿಗಳ

ಅರಿವು ಒಂದು ತಾತ್ವಿಕ ನಿಲುವಾಗಿಯೂ ಸುಬ್ಬಣ್ಣನವರಲ್ಲಿ ಮುಂದುವರಿಯುತ್ತದೆ. ಭಾರತದ ಸಮಾಜಗಳು ಹಿಂದಿನಿಂದ ಚರಿತ್ರೆಯನ್ನು ಅಷ್ಟಾಗಿ ಗಮನಿಸದೆ ಸ್ಮೃತಿಯನ್ನು ಅವಲಂಬಿಸಿಕೊಂಡು ಬಂದಂಥವು ಎಂದು ಸುಬ್ಬಣ್ಣ ತಿಳಿಯುತ್ತಾರೆ. ಸ್ಮೃತಿಯಲ್ಲಿ ಚರಿತ್ರೆಯ ವಿವರಗಳು ಇರುವುದಿಲ್ಲ. ಆದರೆ ಅದರ ಮೂಲ ಸತ್ವವಿರುತ್ತದೆ. ಅದು ಹೇಗೋ ಒಂದು ರೀತಿ ಬದುಕಿನ, ಸಂಸ್ಕೃತಿಯ, ಜ್ಞಾನ ತಲೆಮಾರುಗಳಿಂದ ಹರಿಯುವ ಕ್ರಮದ ಭಾಗವಾಗಿ ನಮ್ಮೊಳಗೆ ಇಳಿದಿರುತ್ತದೆ.

ಆಕ್ರಮಣದಿಂದ ಅಥವಾ ವಸಾಹಾತುಶಾಹಿ ಆಡಳಿತದಿಂದ ಅಥವಾ ಇಂಗ್ಲಿಷ್ ವಿದ್ಯಾಭ್ಯಾಸ, ಕೈಗಾರಿಕೀಕರಣ, ಕೇಂದ್ರೀಕರಣ ಇತ್ಯಾದಿ, ಇತ್ಯಾದಿ ಅನೇಕ ಕಾರಣಗಳಿಂದ ವಿಸ್ಮೃತಿಗೆ ಸಂದ ಮೂಲ ಸತ್ವವನ್ನು ಇಂದು ನಾವು ಕಾಣುವುದು ಹೇಗೆ? ಪೂರ್ವ ಪರಂಪರೆಯ ತಿಳುವಳಿಕೆಯನ್ನು ಹೊಂದುವಾಗ ಗೊಡ್ಡಾಗದೇ ಇರುವುದು ಹೇಗೆ? ಇತ್ಯಾದಿ ಎಚ್ಚರವೂ ಸುಬ್ಬಣ್ಣನವರಿಗೆ ಮುಖ್ಯವಾದುದೇ ಆಗಿದೆ. ಸುಬ್ಬಣ್ಣನವರ ದೃಷ್ಟಿಕೋನದ ಆಳ ವಿಸ್ತಾರಗಳ ಬಗ್ಗೆ ಎಚ್ಚರ ಹಾಗೂ ಪರಿಪಕ್ವತೆ ನಮ್ಮ ಸಾಂಸ್ಕೃತಿಕ ಚರಿತ್ರೆಯ ಮುಖ್ಯ ಮೈಲಿಗಲ್ಲುಗಳಲ್ಲಿ ಒಂದೆಂದು ನಾನಂತೂ ನಿಶ್ಚಯವಾಗಿ ನಂಬಿದ್ದೇನೆ. ಸುಬ್ಬಣ್ಣ ೧೯೫೩ರಲ್ಲಿ ರಷ್ಯಾ ದೇಶದ ಗಾರ್ಕಿಯ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅದೇ ಸುಬ್ಬಣ್ಣ ೧೯೫೮ರಲ್ಲಿ ದಶರೂಪಕವನ್ನು ಅನುವಾದಿಸಿದರು. ಅವರೇ ಪುನಃ ೧೯೭೦ರಲ್ಲಿ ರಾಮ ಮನೋಹರ ಲೋಹಿಯಾ ಅವರ ರಾಜಕೀಯದ ಮಧ್ಯೆ ಬಿಡುವು ಕನ್ನಡಕ್ಕೆ ತಂದರು. ಸ್ತಾನಿಸ್ಲಾವಸ್ಕಿ ಪುಸ್ತಕ ಅನುವಾದಿಸಿದರು. ೧೯೮೦ ದಶಕದಲ್ಲಿ ಜಗತ್ತಿನ ಅನೇಕ ಸಿನಿಮಾ ವಿಚಾರಗಳನ್ನು ತಂದರು. ಪುಸ್ತಕಗಳನ್ನು ಅನುವಾದಿಸಿದರು. ಮತ್ತೆ ಪುನಃ ರ್ಛೀಸ್ ಬುದ್ಧಿಸಂ ಪರಿಚಯ, ಕಾಳಿದಾಸನ ಅನುವಾದಗಳು, ಗಾಂಧೀಜಿಯ ಅನುವಾದ.

ಇಂತಹ ಅನುವಾದಗಳೂ ಸುಬ್ಬಣ್ಣನವರ ಹುಡುಕಾಟದ ಒಂದು ಭಾಗವೇ. ಜಗತ್ತಿನಲ್ಲಿ ಮುಖ್ಯವಾದದ್ದನ್ನೆಲ್ಲಾ ತಂದು ಕೂಡಿಡುವ ಮನೋಭಾವ ಅದಲ್ಲ ಅಥವಾ ಪ್ರಪಂಚದಲ್ಲಿರುವ ಗಹನವಾದ್ದೆಲ್ಲಾ ಕನ್ನಡದಲ್ಲಿ ಬರಲಿ ಎಂಬ ಕೇವಲ ಕನ್ನಡ ಅಭಿಮಾನವೂ ಅಲ್ಲ. ಈ ಜಗತ್ತು ಎಷ್ಟು ವಿಶಾಲವಾಗಿದ್ದರೂ ತನ್ನ ಪುಟ್ಟ ಬೆರಳುಗಳಿಂದ ಎಷ್ಟು ಬಾಚಿಕೊಳ್ಳಬಲ್ಲನೋ ಅಷ್ಟೇ ನನ್ನದು ಎಂಬ ಎಚ್ಚರ ಅವರಿಗಿದೆ. ತನ್ನ ಬದುಕನ್ನು ತಾನಿರುವ ತಾಣದಲ್ಲಿ ಹಸನು ಮಾಡಿಕೊಳ್ಳಲು ಮತ್ತು ತನ್ನ ಸುತ್ತಲೂ ಇರುವವರೊಡನೆ ಅಂತಹ ವಿಚಾರಗಳನ್ನು ಹಂಚಿಕೊಳ್ಳಲು ಮಾಡುವ ಪ್ರಯತ್ನಗಳೇ ಇಂತಹ ಅನುವಾದಗಳು. ಸಂಸ್ಕೃತದಲ್ಲಿರುವ ನಾಟ್ಯ ವಿಷಯಕ ಗ್ರಂಥಗಳು ಹೇಗೆ ಪ್ರಾದೇಶಿಕ ಭಾಷೆಗಳಿಗೆ ಅನುವಾದವಾಗಬೇಕೆಂದು ಅವರು ಬಯಸುತ್ತಾರೋ ಅದೇ ರೀತಿ, ನೂತನ

ಬದುಕಿಗೆ ಜಗತ್ತಿನ ಅನೇಕ ವಿಚಾರಗಳ ಅನುವಾದಬೇಕು. ಆ ತಿಳುವಳಿಕೆಯಿಂದ ಹೊಸದಾದ ಹುಟ್ಟು ನೂತನ ಬೆಳಕಲ್ಲಿ ಗೋಚರಿಸಿ ಬೆಳೆಯಬೇಕು. ಇನ್ನೊಂದು ರೀತಿಯಲ್ಲಿ ಈ ಅನುವಾದಗಳು ಅವರ ಅನ್ವೇಷಣೆಯ ಒಂದು ಮುಖ. ವಿಮರ್ಶಕ ಟಿ.ಪಿ. ಅಶೋಕ ಗುರುತಿಸಿರುವಂತೆ ಈ ಬಹುಮುಖ ಆಸಕ್ತಿ ಸುಬ್ಬಣ್ಣನವರಲ್ಲಿ ಈ ಜಗತ್ತಿನಲ್ಲಿ ಸುಂದರವಾದದ್ದೆಲ್ಲ ತನ್ನ ಕಿಸೆಯಲ್ಲಿರಬೇಕು ಎನ್ನುವ ಗ್ರಾಹಕ ದುರಾಸೆಯಲ್ಲ. ಬದಲಾಗಿ ಅದು ಹಲವು ಸಾಧ್ಯತೆಗಳನ್ನು ವಿನಯದಿಂದ ನೋಡಿ ಲೋಕವನ್ನು ಇಡಿಯಾಗಿ ಗ್ರಹಿಸುವ ತವಕ.

ಸ್ವಪರಂಪರೆಯ ಕ್ರಿಯಾತ್ಮಕ ಗ್ರಹಿಕೆಗೆ, ಇಂಡಿಯಾದ ಸೃಜನಶೀಲ ಮರುಹುಟ್ಟಿಗೆ, ಪಾಶ್ಚಾತ್ಯರ ಮಾದರಿಗಳನ್ನು ಬಿಟ್ಟು ಹುಡುಕ ಹೊರಟಿರುವ ಪರ್ಯಾಯ ಸಾಧ್ಯತೆಗಳ ಆವಿಭಾರ್ವಕ್ಕೆ ಈ ರೀತಿಯ ಎಲ್ಲಾ ಅನುವಾದಗಳ ಹುಡುಕಾಟ ಅನಿವಾರ್ಯ ಎಂಬುದು ಸುಬ್ಬಣ್ಣನವರ ನಂಬಿಕೆಗಳಲ್ಲಿ ಒಂದು.

ಸುಬ್ಬಣ್ಣನವರ ಈ ಶೋಧನೆ ಅವರ ಗೋಕುಲ ನಿರ್ಗಮನದ ಲೇಖನದಲ್ಲಿ ಒಂದು ಪ್ರಮುಖ ಘಟ್ಟವನ್ನು ತಲುಪುತ್ತದೆ. ಇಂಡಿಯಾಕ್ಕೆ ಚರಿತ್ರೆಯೆಂಬುದೇ ರೂಪುಗೊಳ್ಳಲಿಲ್ಲ ಎಂದು ಹೇಳಿದ ಕಾರ್ಲ್ ಮಾರ್ಕ್ಸ್‌ನ ತಾತ್ವಿಕ ನೆಲೆಗಳನ್ನು ವಿಶ್ಲೇಷಿಸುತ್ತಾ ಸುಬ್ಬಣ್ಣ ರೆನೆಸಾನ್ಸ್‌ನ ಹಿಂದಿನ ಪಾಶ್ಚಾತ್ಯ ಸಮಾಜಗಳಲ್ಲಿ ಒಂದು ಜನಾಂಗದ ಭೂತಕಾಲದ ಬೇರುಗಳೆಲ್ಲವೂ ಚರಿತ್ರೆಯಲ್ಲಿ ಸಂಚಯನಗೊಂಡು ಬರುತ್ತವೆಂಬ ನಂಬಿಕೆ ಇರಲಿಲ್ಲವೇನೋ ಎಂಬ ಅನುಮಾನ ವ್ಯಕ್ತ ಪಡಿಸುತ್ತಾರೆ. ಗೋಕುಲ ನಿರ್ಗಮನದ ಅನುಭವದಿಂದಲೆ ಅವರಿಗೆ ಇಂಡಿಯಾದಲ್ಲಿ ಚರಿತ್ರೆ ಮುಖ್ಯವಾಗಿರಲಿಲ್ಲ ಎಂಬ ತಿಳುವಳಿಕೆ ಗಾಢವಾಗಿ ಸ್ಮೃತಿ ಬಗೆಗಿನ ಅರಿವು ಹೆಚ್ಚಾಗುತ್ತದೆ.

ಈ ಶತಮಾನದ ನೂತನ ನಾಟ್ಯ ಶಾಸ್ತ್ರದ ಹುಟ್ಟು ಬೆಳವಣಿಗೆಯ ಹುಡುಕಾಟದಲ್ಲಿ ಪ್ರಾರಂಭವಾದ ಚಿಂತನೆ ಹೆಚ್ಚು ಸ್ಪಷ್ಟವಾಗುತ್ತಾ ಹೋದಂತೆ, ಭಾರತ ಪಾಶ್ಚಿಮಾತ್ಯ ಪ್ರಭಾವದಲ್ಲಿ ಸೃಷ್ಟಿಸಲು ಪ್ರಯತ್ನಿಸಿದ ಚರಿತ್ರೆ ಸ್ಪಷ್ಟಗೊಳ್ಳುತ್ತಾ ಹೋಗುತ್ತದೆ. ಗೋಕುಲ ನಿರ್ಗಮನದಲ್ಲಿ ಈ ಬಗ್ಗೆ ಸುಬ್ಬಣ್ಣನವರ ಸ್ಪಷ್ಟ ಚಿಂತನೆಗಳಿವೆ. ಹೊಸತಾಗಿ ರೂಪುಗೊಂಡ ಭಾರತದ ಚರಿತ್ರೆಯನ್ನು ತನ್ನ ಹುಡುಕಾಟದ ಬೆಳಕಿನಲ್ಲಿ ಸುಬ್ಬಣ್ಣ ಗ್ರಹಿಸುವುದು ಹೀಗೆ:

ಪಾಶ್ಚಾತ್ಯ ಶಿಕ್ಷಣ ಪದ್ಧತಿಯ ಪ್ರಭಾವದಿಂದ ನಮ್ಮಲ್ಲಿ ಹೊಸದಾಗಿ ರೂಪುಗೊಂಡ ಚರಿತ್ರೆಯು ಬಹುಶಃ ಮೂರು ವರ್ಗದ ಮುದ್ರೆಗಳನ್ನು ಸೃಷ್ಟಿಸಿತು. ಒಂದು, ಬ್ರಹ್ಮ ಸಮಾಜ, ಕೇಶವಚಂದ್ರ ಸೇನ ಮುಂತಾದವರಲ್ಲಿ ಹುಟ್ಟಿ ಅಂತಿಮವಾಗಿ ನೀರದ ಚೌಧರಿಯಂಥವರಲ್ಲಿ ಫಲಗೊಂಡ ಭಾರತ ದ್ವೇಷ. ಎರಡು, ಪ್ರಾಯಶಃ

ಮಹಾರಾಷ್ಟ್ರದಲ್ಲಿ ಹುಟ್ಟಿ ಆ ಮೇಲೆ ಸನಾತನವಾದಿ ಹಿಂದೂ ಸಂಘಟನೆಗಳಲ್ಲಿ ಫಲಗೊಂಡ ಮತಾಂಧತೆ, ರಾಷ್ಟ್ರಾಂಧತೆ. ಮೂರು, ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳಲ್ಲಿ, ನಾಣ್ಯಶಾಸನ, ತಾಮ್ರಪಟ, ಪುಸ್ತಕಗಳ ಗೋರಿಯಲ್ಲಿ ಹುದುಗಿಕೊಂಡ ವಿದ್ವಾಂಸರೆನಿಸಿಕೊಂಡ ಅಪ್ರಸ್ತುತ ಕಲೇವರಗಳು ಉತ್ಪಾದಿಸಿದ ತಟಸ್ಥ, ನಿರ್ಲಿಪ್ತ, ನಿರುಪಯುಕ್ತ ಶಬ್ದ ಪಾಂಡಿತ್ಯ.

ಜನರ ಬದುಕಿನಲ್ಲಿ ಬೆರೆತುಗೊಳ್ಳಲಾರದ, ಬದುಕಿನಿಂದ ದೂರ ಸರಿಯುವ ಪಾಂಡಿತ್ಯದ ಬಗೆಗಿನ ಅಸಹನೆ ಮತ್ತು ಜಿಗುಪ್ಸೆ ಎರಡೂ ಸುಬ್ಬಣ್ಣನವರ ಮೇಲಿನ ಮಾತುಗಳಲ್ಲಿ ಗೋಚರಿಸುತ್ತದೆ. ಸ್ವಪರಂಪರೆಯ ಹುಡುಕಾಟ ಮತಾಂಧತೆ, ರಾಷ್ಟ್ರಾಂಧತೆ ಆಗಬಾರದು ಎಂಬ ಎಚ್ಚರ ಸಹ ಅವರಲ್ಲಿದೆ. ಅದೇ ರೀತಿ ಅದು ಭಾರತ ದ್ವೇಷವಾಗಿ ಪರಿಣಮಿಸಿ, ಪಾಶ್ಚಾತ್ಯ ಅನುಕರಣೆಯ ಕುರುಡು ಸಂಭ್ರಮವೂ ಆಗ ಕೂಡದೆಂಬ ಸ್ಪಷ್ಟತೆಯೂ ಇದೆ.

ಈ ಹುಡುಕಾಟ ಸುಬ್ಬಣ್ಣನವರ ನಿರಂತರ ಅನ್ವೇಷಣೆ. ಅದು ಪುನರಪಿ ಅನೇಕ ಕಡೆ ತಲೆ ಎತ್ತಿ, ಅವರೊಡನೆ ಬೆಳೆದು ತಿಳುವಳಿಕೆಯ ಒಂದು ಹದಕ್ಕೆ ಬಂದಿದೆ. ಕಾಳಿದಾಸನಿಂದ ಭಾರತದ ವಿಶಾಲ ಪರಂಪರೆಯ ಒಂದು ಬೀಸನ್ನು ಪಡೆದು ನಮ್ಮ ಪರಂಪರೆಯ ಸಮಾನ ನೆಲೆಗಳನ್ನು ಶೋಧಿಸಿದಂತೆ ಕನ್ನಡದ ಸಂದರ್ಭದಲ್ಲೂ ಸುಬ್ಬಣ್ಣ ತಮ್ಮ ಅನ್ವೇಷಣೆಯನ್ನು ಮುಂದುವರಿಸಿದರು. ಕರ್ನಾಟಕ ಮಾತೆಯನ್ನು ಕುವೆಂಪು ಅವರು ಭಾರತ ಜನನಿಯ ತನುಜಾತೆಯಾಗಿ ಕಾಣುವುದು ಸುಬ್ಬಣ್ಣನವರಿಗೆ ಒಂದು ಮುಖ್ಯವಾದ ನಿಲುವಾಗಿ ಕಾಣುತ್ತದೆ. ಸುಬ್ಬಣ್ಣನವರು ಈ ಅನ್ವೇಷಣೆಯನ್ನು ಕನ್ನಡದ ಸಂದರ್ಭದಲ್ಲೂ ಮುಂದುವರಿಸುತ್ತಾರೆ. ಅಂತಿಮವಾಗಿ ತಾನು ಬದುಕುವ ನೆಲೆಯಲ್ಲಿ ಅದು ಗೋಚರಿಸಬೇಕು. ಸುಬ್ಬಣ್ಣ ಕನ್ನಡ ಕವಿರಾಜ ಮಾರ್ಗ ಕೃತಿಯಲ್ಲಿ ತೋರಿಸಿಕೊಟ್ಟ ಹಾಗೆ ವಸುಧಾವಲಯ ವಿಲೀನ ವಿಶೇಷಂ ಎಂದಾಗ ವಸುಧೆ ಮತ್ತು ವಲಯ ಎಂಬ ಎರಡು ಅಸ್ತಿತ್ವವನ್ನು ಗುರುತಿಸಿಯೂ ಅದು ಒಂದು ರೀತಿಯಲ್ಲಿ ವಸುಧಾವಲಯದಲ್ಲಿ ವಿಲೀನವಾಗಿದ್ದೂ, ಇನ್ನೊಂದು ಅರ್ಥದಲ್ಲಿ ಅದು ತನ್ನೊಳಗೆ ವಸುಧಾವಲಯವನ್ನು ವಿಲೀನಗೊಳಿಸಿಕೊಂಡ ಕ್ರಮ.

ಕನ್ನಡ ಸಾಹಿತ್ಯ ಸಂದರ್ಭದ ಸುಬ್ಬಣ್ಣನವರ ಅನ್ವೇಷಣೆ ಪಂಪನಿಂದಲೇ ಪ್ರಾರಂಭವಾಗುತ್ತದೆ ಎನ್ನಬಹುದು. ಈ ಶತಮಾನದ ನೂತನ ತಿಳುವಳಿಕೆ ಹುಟ್ಟಿ ಬೆಳೆಯಲು ಎಲ್ಲಾ ಕಡೆ ಹುಡುಕಿದ ಪ್ರಯತ್ನಗಳಲ್ಲಿ ಇದೂ ಒಂದು. ಅರ್ಜುನನೊಡನೆ ಅರಿಕೇಸರಿಯನ್ನು ಸಮೀಕರಿಸಿ ಬರೆಯುವ ಪಂಪನನ್ನು ಆ ಒಂದು ಕಳಪೆ ಕೆಲಸದಿಂದ ವಿನಾಯಿತಿಗೊಳಿಸಿ ಹೊಗಳುವ ಕನ್ನಡದ ವಿದ್ವತ್ ಪರಂಪರೆಯ ಬರಹಗಳು

ಸುಬ್ಬಣ್ಣನವರ ಈ ಹೊಸ ಹುಡುಕುವಿಕೆಯಲ್ಲಿ ಅನೇಕ ಗೊಂದಲ ಸಂಶಯಗಳನ್ನು ಉಂಟು ಮಾಡುತ್ತದೆ. ತಗಳ್ಚಿ ಹೇಳುವ ಸಮಸ್ತೋಕ್ತಿ ಎಂಬ ಅಲಂಕಾರವನ್ನು ಪಂಪನು ಇಡೀ ಕಥಾನಕಕ್ಕೆ ಅನ್ವಯಿಸುವಂತೆ ಉಪಯೋಗಿಸಿಕೊಂಡಿದ್ದಾನೆ ಎನ್ನುವ ಮುಳಿಯ ತಿಮ್ಮಪ್ಪನವರ ಬರಹ ಸುಬ್ಬಣ್ಣನವರಿಗೆ ಆಪ್ತವಾಗುತ್ತದೆ. ಇತ್ತೀಚೆಗೆ ಪ್ರಕಟವಾದ ಕವಿರಾಜ ಮಾರ್ಗ ಮತ್ತು ಕನ್ನಢ ಜಗತ್ತು ಕೃತಿಯ ಮೊದಲಿಗೆ ಸುಬ್ಬಣ್ಣ ೧೯೩೨ರ ಹೊತ್ತಿಗೆ ಮುಳಿಯ ತಿಮ್ಮಪ್ಪಯ್ಯನವರು ಬರೆದ ನಾಡೋಜ ಪಂಪ ಕೃತಿಗೆ ತಾನು ಋಣಿ ಎಂದು ಹೇಳಿಕೊಂಡಿದ್ದಾರೆ.

ಈ ಶತಮಾನದ ಪರ್ಯಾಯ ಚಿಂತನೆಯ ಅವಶ್ಯಕತೆಗೆ ಸಾಹಿತ್ಯ ಸಂದರ್ಭದಲ್ಲಿ ಮುಳಿಯ ತಿಮ್ಮಪ್ಪಯ್ಯನವರಂಥವರ ನಿಲುವಿನ ಹಿಂದಿನ ಪ್ರೇರಣೆಗಳನ್ನು ಗ್ರಹಿಸುವುದೂ ಮುಖ್ಯ ಎಂದು ಸುಬ್ಬಣ್ಣನವರ ತಿಳಿವಳಿಕೆ ಪಾಶ್ಚಾತ್ಯ ಸಾಹಿತ್ಯದಿಂದ ಅಷ್ಟಾಗಿ ಪ್ರಭಾವಿತರಾಗದಿದ್ದ ಮುಳಿಯರಂಥವರಿಗೆ ಪಂಪನ ತಂತ್ರವು ಅಸಂಬದ್ಧವೆನಿಸಲಿಲ್ಲ. ಬದಲು ಕಾವ್ಯ ಸಹಜ (ಕಾವ್ಯಧರ್ಮಿ)ವಾಗಿಯೇ ಕಂಡಿತು. ಆದರೆ ಪಾಶ್ಚಾತ್ಯ ಸಾಹಿತ್ಯದ ರಿಯಾಲಿಸಂ (ವಾಸ್ತವವಾದ) ಎಂಬ ಮೌಲಿಕ ಕಲ್ಪನೆಗೆ ಸಂಪೂರ್ಣ ಮಾರು ಹೋಗಿದ್ದ ಆಗಿನ ವಿದ್ಯಾವಂತ ವಿಮರ್ಶಕರಿಗೆ ಪಂಪನ ಈ ತಂತ್ರವನ್ನು (ಅರ್ಜುನನು ಇದ್ದಕ್ಕಿದ್ದಂತೆ ನರಸಿಂಗ ಜಾಕಬ್ಬೆಯವರ ಮಗನಾಗಿ ಬಿಡುವ ಅಸಹಜ ಅಸಂಭಾವ್ಯತೆಯನ್ನು) ಸ್ವೀಕರಿಸುವುದು ಅಸಾಧ್ಯವಾಯಿತು. ಪಂಪನಾದರೂ ರಾಜಭಕ್ತಿಯ ಭರದಲ್ಲಿ ಈ ತಂತ್ರವನ್ನು ಪ್ರಾರಂಭಿಸಿಕೊಂಡು ಮುಂದೆ ಪಾಪ, ಎಡವಿ ಬಿಟ್ಟ ಎಂದೇ ಅವರು ನಂಬಿದರು -ಎಂಬ ಮಾತುಗಳನ್ನು ಸುಬ್ಬಣ್ಣ ಹೇಳುವಾಗ ಹೊಸ ಚಿಂತನೆಯಲ್ಲಿ ಬೇರೆಯಾಗುವ ಅವರ ವಿವೇಕ ನಮ್ಮ ಯೋಚನಾಕ್ರಮಗಳನ್ನು ನಾವೇ ಪರೀಕ್ಷಿಸಿಕೊಂಡು ಸ್ವಪರಂಪರೆಯ ಶಕ್ತಿಯನ್ನು ಗುರುತಿಸಿಕೊಳ್ಳುವುದರ ಜೊತೆಗೆ ಪಾಶ್ಚಾತ್ಯ ಸಾಹಿತ್ಯದ ರಿಯಾಲಿಸಂನ ಪ್ರೇರಣೆಗಳಿಂದ ಬೇರೆಯಾಗಿ ನೋಡಬೇಕಾದ ಅವಶ್ಯಕತೆಗಳನ್ನೂ ಒತ್ತಿ ಹೇಳುತ್ತದೆ.

ನಮಗೆ ಇಂದು ಅಗತ್ಯವಾದ ನೂತನ ಕಲಾಶಾಸ್ತ್ರದ ಹುಡುಕುವಿಕೆಯಲ್ಲಿ ವಾಸ್ತವ ಶೈಲಿಯ ಮಿತಿಯನ್ನು ಅರಿಯುವುದೂ ಅನ್ವೇಷಣೆಯ ಒಂದು ಭಾಗವೆ. ಪಾಶ್ಚಾತ್ಯ ಕಲ್ಪನೆಗಳ ಪ್ರೇರಣೆಗಳಿಂದ ಬಿಡಿಸಿಕೊಂಡು ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವುದು ಮತ್ತು ಆ ಮೂಲಕ ಭಾರತದ ಪರ್ಯಾಯ ಚಿಂತನೆಗಳನ್ನು ತನ್ನ ಕಾರ್ಯಕ್ಷೇತ್ರದಲ್ಲಿ ಕ್ರೋಢೀಕರಿಸಿಕೊಳ್ಳುವುದು ಈ ದೃಷ್ಟಿಯಿಂದ ಸುಬ್ಬಣ್ಣನವರಿಗೆ ಬಹಳ ಮುಖ್ಯವಾದ ಒಂದು ತಾತ್ವಿಕ ನೆಲೆ. ಕುವೆಂಪುಗೆ ಪುಟ್ಟ ಕನ್ನಡಿ ಎಂಬ ಸುಬ್ಬಣ್ಣನವರ ಮುಖ್ಯವಾದೊಂದು ಕೃತಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದೆ. ಕುವೆಂಪು ತೀರಿಕೊಂಡ

ಸಂದರ್ಭದಲ್ಲಿ ಅವರ ಶಿಷ್ಯರಾಗಿದ್ದ ಕೆ.ವಿ. ಸುಬ್ಬಣ್ಣ ಪ್ರತಿದಿನ ಕೆಲವು ವಾರಗಳ ಕಾಲ ದಾಖಲಿಸಿದ ಚಿಂತನೆ ಈ ವಿಮರ್ಶಾ ಕೃತಿ. ಕುವೆಂಪು ಸಂದರ್ಭದಲ್ಲೂ ರಿಯಲಿಸಂ ಸುಬ್ಬಣ್ಣನವರನ್ನು ಮತ್ತೆ ಮತ್ತೆ ಕಾಡಿದೆ.

ಕುವೆಂಪು ಅವರಿಗೂ ರಿಯಲಿಸಂ ಅನ್ನು ಮೀರುವ ಅನಿವಾರ್ಯವಿತ್ತು ಎನ್ನುವ ಸುಬ್ಬಣ್ಣ ತಮ್ಮ ಶೋಧನೆ ಹಾಗೂ ಅರಿವನ್ನು ಮಾಗಿಸಿಕೊಳ್ಳುವ ಪ್ರಯತ್ನದಲ್ಲಿ ಆ ಕಾಲದ ವಿರೋಧಾಭಾಸಗಳನ್ನು ಗುರುತಿಸುತ್ತಾರೆ.

ಪಾಶ್ಚಾತ್ಯ ಪ್ರಭಾವದಿಂದ ವಿಪರೀತ ಬೆಳೆದ ರಿಯಲಿಸಮ್ ಬಹುದೊಡ್ಡ ಕಾಲ್ಪನಿಕ ಭೂತವಾಗಿ ಎಲ್ಲೆಲ್ಲೂ ಕಾಡಿದೆ. ರಿಯಲಿಸಂನ ಕಲ್ಪನೆಯೇ ತುಂಬ ಕಷ್ಟ ಕೊಡುವಂತಹದ್ದು. ಕುವೆಂಪು ಅವರ ಕಾನೂರು ಹೆಗ್ಗಡತಿ ಕಾದಂಬರಿಯ ಹೂವಯ್ಯನ ಪಾತ್ರ ನಿಜವೆನ್ನಿಸದೆ ಹೋಗಿದೆ. ಅತಿಶಯ ಉದಾತ್ತತೆಯ ಆತನ ಪಾತ್ರದಲ್ಲಿ ಮೂರ್ತ ಸಂಗತಿಗಳ ಮೂಲಕ ಸಮರ್ಥಿತವಾಗದೆ ಕಾದಂಬರಿ ದುರ್ಬಲವಾಗಿದೆ ಇತ್ಯಾದಿಯಾಗಿ ಕನ್ನಡ ವಿಮರ್ಶಕರು ಬರೆದಿದ್ದಾರೆ.

ಆದರೆ, ೧೯೮೭ರಷ್ಟು ಹಿಂದೆಯೆ. 'ಆಧುನಿಕ ಕನ್ನಡ ಸಾಹಿತ್ಯಕ್ಕೆ ಹೀಗೆ ಬನ್ನಿ' ಎಂಬ ಅವರ ಪ್ರಕಟಿತ ಭಾಷಣದಲ್ಲಿ ಕೆ.ವಿ. ಸುಬ್ಬಣ್ಣ ಒಮ್ಮೆ ರಿಯಲಿಸಂನ ವ್ಯಸನದಿಂದ ಬಿಡಿಸಿಕೊಂಡುಬಿಟ್ಟೆವೆಂದರೆ ಹೂವಯ್ಯ ಸಮಸ್ಯೆಯಾಗುವುದಿಲ್ಲ ಎಂದು ಹೇಳಿದರು. ಕಾನೂರು ಹೆಗ್ಗಡತಿಯು ಬಹುಮಟ್ಟಿಗೆ ವಾಸ್ತವ ಶೈಲಿಯಲ್ಲಿಯೇ ಇದೆ. ಆದರೆ ಅದರ ನಾಯಕ ಪಾತ್ರನಾದ ಹೂವಯ್ಯನ ಚಿತ್ರಣವು ಅಂಥ ನಿಷ್ಠುರ ವಾಸ್ತವ ಶೈಲಿಯದಲ್ಲ. ಇದನ್ನು ಒಮ್ಮೆ ಗ್ರಹಿಸಿದರೆ ಮುಂದೆ ಓದುಗರಿಗೆ ತೊಂದರೆಯಾಗದು ಎಂದು ಸುಬ್ಬಣ್ಣ ಹೇಳಿದರು. ಕುವೆಂಪುಗೆ ಪುಟ್ಟ ಕನ್ನಡಿ ಒಂದು ರೀತಿಯಲ್ಲಿ ಇದರ ಮುಂದುವರಿದ ಭಾಗ. ಕುವೆಂಪು ಅವರ ರಾಮಾಯಣ ದರ್ಶನಂ ಕೂಡಾ ಹೇಗೆ ಹಿಂದಿನ ಕಥೆಯೇ ಆಗಿದೆ -ಎಂಬುದನ್ನು ಸುಬ್ಬಣ್ಣ ಇಲ್ಲಿ ಕುವೆಂಪು ಅವರ ಎರಡು ಕಾದಂಬರಿಗಳ ಜೊತೆ ಸಮೀಕರಿಸಿಕೊಂಡು ಹೇಳಲು ಪ್ರಯತ್ನಿಸಿದ್ದಾರೆ. ಇದು ಸುಬ್ಬಣ್ಣನವರು ಸಾಹಿತ್ಯ ಸಂದರ್ಭದಲ್ಲಿ ಸ್ವತಂತ್ರ ಭಾರತದ ನೂತನ ಚಿಂತನೆಯ ಹುಡುಕಾಟದಲ್ಲಿ ಎದುರಿಸಿದ ಸಮಸ್ಯೆಗಳನ್ನು ಚಿಂತಿಸಿ ಪಡೆದುಕೊಂಡ ತಾತ್ವಿಕ ತಳಹದಿಗಳು ಎಂದೇ ನಾವೂ ಪರಿಗಣಿಸಬೇಕು.

ರಿಯಲಿಸಂನ ಮುಖ್ಯವಾದ ತಾತ್ವಿಕ ಆಧಾರಗಳಲ್ಲಿ ಒಂದು ಇಂದ್ರಿಯ ಗ್ರಾಹ್ಯವಾದ್ದರಲ್ಲಿ ಮಾತ್ರ ನಂಬಿಕೆ. ಇನ್ನೊಂದು ವ್ಯಕ್ತಿ ವಿಶಿಷ್ಟತೆಯಲ್ಲಿ ಅತಿಯಾದ ವಿಶ್ವಾಸ. ವ್ಯಕ್ತಿಯೆಂಬುದು ಒಂದು ಸ್ವತಂತ್ರ ಘಟಕ ಎಂಬಂತಹ ಗ್ರಹಿಕೆ ಅದು ವ್ಯಕ್ತಿಯು

ಸ್ವತಂತ್ರನಿರುವುದರಿಂದ ಅವನ ಕ್ರಿಯೆಗಳೂ ಸ್ವತಂತ್ರ ಮತ್ತು ಆ ಕಾರಣ ಅವನ ಕ್ರಿಯೆಗಳೆಲ್ಲವೂ ಆತನ ಮಿತಿಯಲ್ಲೇ ತಾರ್ಕಿಕವಾಗಿ ಕಾರ್ಯ ಕಾರಣವೆಂಬ ನ್ಯಾಯಕ್ಕೆ ಬದ್ಧವಾಗಿ ಘಟಿಸಿಕೊಂಡು ಹೋಗುತ್ತವೆ ಅನ್ನುವುದು ರಿಯಲಿಸಂನ ಅನುಮತಿ. ಇದರ ಹಿನ್ನೆಲೆಯಲ್ಲೆ ಪಾತ್ರ ಕಲ್ಪನೆ ಪಾಶ್ಚಾತ್ಯ ವಿಮರ್ಶೆಗೆ ಬಹಳ ಮುಖ್ಯವಾಯಿತು. ಈ ಹಿನ್ನೆಲೆಯಲ್ಲಿ ಕೆ.ವಿ. ಸುಬ್ಬಣ್ಣ ಅವರು ಹೇಳುತ್ತಾರೆ:

ನಮ್ಮ ಪರಂಪರೆಯ ಕಾವ್ಯ ಶಾಸ್ತ್ರದಲ್ಲಿ, ವಿಮರ್ಶೆಯಲ್ಲಿ ಈ ಬಗೆಯ ಪಾತ್ರದ ಕಲ್ಪನೆಯಿಲ್ಲ ಯಾತಕ್ಕೆಂದರೆ, ಪಾರಂಪರಿಕವಾದ ನಮ್ಮ ಗ್ರಹಿಕೆಯು ವ್ಯಕ್ತಿಯನ್ನು ಅಷ್ಟು ಸ್ವತಂತ್ರವಾದ ಘಟಕ ಎಂದು ಪರಿಗಣಿಸುವುದಿಲ್ಲ. ಘಟಕದಲ್ಲಿನ ಉಪಘಟಕ ಅವನು. ಆದ್ದರಿಂದ ಅವನ ಕ್ರಿಯೆಗಳು ತನ್ನದೇ ಸ್ವಂತದ ಕಾರ್ಯಕಾರಣ ನ್ಯಾಯಕ್ಕೆ ಬದ್ಧವಾಗದೆ, ಎಷ್ಟೋ ಸಲ ಸಮುದಾಯದ ಕಾರ್ಯಕಾರಣ ನ್ಯಾಯಕ್ಕೆ ಬದ್ಧವಾಗಿರಬಹುದು.

ಈ ಹಿನ್ನೆಲೆಯಲ್ಲಿ ಹೂವಯ್ಯನನ್ನು ಪಾಶ್ಚಾತ್ಯ ಕಲ್ಪನೆಯ ಪಾತ್ರವಾಗಿ ನೋಡುವುದಕ್ಕಿಂತ ಕೊಂಚ ಭಿನ್ನವಾಗಿ, ಆಳದಲ್ಲಿ ಅವನು ಒಂದು ವಿಶಿಷ್ಟ ಜನಪದ ಜೀವನ ಸನ್ನಿವೇಶದ ಪರಿಣಾಮ ಅಥವಾ ಫಲವಾಗಿ ಗ್ರಹಿಸಬೇಕೆಂಬುದು ಸುಬ್ಬಣ್ಣನವರ ವಾದ.

ಈ ತಿಳುವಳಿಕೆ ತನ್ನ ಜನ ಸಮುದಾಯದ ಒಡನಾಟದಲ್ಲಿ ಮಾಗಿದ ಸುಬ್ಬಣ್ಣನವರ ಜೀವಾನಾನುಭವದ ಪ್ರತಿಫಲನ ಎಂದು ಬೇಕಾದರೂ ಗ್ರಹಿಸಬಹುದು. ಬೆಂಗಳೂರಿನ ಅಭಿನವ ಪ್ರಕಾಶನದವರು ಪ್ರಕಟಿಸಿದ ಕೆ.ವಿ. ಸುಬ್ಬಣ್ಣ ಅವರ ನಮ್ಮ ತವಕ ತಲ್ಲಣಗಳು ಎಂಬ ಲೇಖನಗಳ ಸಂಗ್ರಹದಲ್ಲಿ ನೀನಾಸಂ ಹಿನ್ನೆಲೆಯ ಸೆಲೆ ಎಂಬ ಮುಖ್ಯವಾದೊಂದು ಲೇಖನ ಇದೆ. ನಾಟಕವೂ ಒಂದು ಸಮುದಾಯದ ಅಂಗವಾಗಿ ಬೆಳೆಯುವ ಪರಿಯನ್ನು ಸೂಚಿಸುತ್ತಾ ನಮ್ಮ ರಂಗ ಚಟುವಟಿಕೆಗಳು ನಿಂತು ಹೋಗದಂತೆ ರಕ್ಷಿಸಿಕೊಳ್ಳಲಿಕ್ಕಾಗಿ ನಾವು, ರಂಗ ಚಟುವಟಿಕೆಗಿಂತ ಹಲವು ಹತ್ತು ಪಾಲು ಹೆಚ್ಚಾಗಿ, ಇನ್ನಿತರ ಉಪದ್ವ್ಯಾಪಗಳಲ್ಲಿ ತೊಡಗಿಕೊಳ್ಳ ಬೇಕಾಯ್ತು. ಇವೆಲ್ಲವೂ ಇಂಥ ಸಮುದಾಯ ರಂಗ ಭೂಮಿಯ ಲಕ್ಷಣಗಳು ಎನ್ನುವ ಸುಬ್ಬಣ್ಣ, ಸಮುದಾಯದ ಶಿಶುವಾಗಿ ಒಂದು ಪಾತ್ರ ಹುಟ್ಟಿ ಬರುವ ಹಿನ್ನೆಲೆಯನ್ನು ಅರಿತವರು. ಈ ಅರಿವು ಸುಬ್ಬಣ್ಣನವರ ನಿತ್ಯ ಜೀವನದಲ್ಲೂ ನಿಜ. ಯಾವ ಸಂಕೋಚವೂ ಇಲ್ಲದೆ ಅನೇಕ ಸಲ ಅವರು ತಮ್ಮ ಸಮುದಾಯದ ಅವಶ್ಯಕತೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಇಂತಹ ಒಬ್ಬ ಹುಡುಗ ಹೇಗೆ? ನಿನಗೆ ಪರಿಚಯವಿಲ್ಲದಿದ್ದರೆ ಸ್ವಲ್ಪ ವಿಚಾರಿಸಿ ಹೇಳುತ್ತೀಯಾ? ನಮ್ಮ ಊರಿನ ಒಂದು ಹುಡುಗಿ ಜೊತೆ ಮದುವೆಗೆ ಮಾತು ಕತೆ ನಡೆದಿದೆ. ಹುಡುಗಿ ತಂದೆ ಸ್ವಲ್ಪ ವಿಚಾರಿಸಿ ತಿಳಿಸುವಂತೆ ಹೇಳಿದ್ದಾರೆ ಎಂದು ಸುಬ್ಬಣ್ಣ ನನ್ನಲ್ಲೂ ಕೇಳಿದ್ದಿದೆ. ತಾನು

ಬದುಕುವ ಸುತ್ತಲಿನ ಜನರ ಇಂತಹ ಅವಶ್ಯಕತೆಗಳನ್ನು ಸುಬ್ಬಣ್ಣ ಎಂದೂ ಸಣ್ಣ ವಿಚಾರವೆಂದು ಪರಿಗಣಿಸಿದ್ದೇ ಇಲ್ಲ. ಬದುಕು ಕಲೆ ಸಂಸ್ಕೃತಿಗಳಲ್ಲಿ ಅರಳಿಕೊಳ್ಳುವಂತೆ, ತನ್ನ ಸಮುದಾಯದ ನಡುವೆ ನಿತ್ಯ ವ್ಯವಹಾರಗಳಲ್ಲೂ ತೊಡಗಿಸಿಕೊಳ್ಳಬೇಕು. ಸಾಹಿತ್ಯದಷ್ಟೇ ಗಂಭೀರವಾಗಿ ಅವರು ಬೆಳೆಯುವ ಅಡಿಕೆ ಬಗ್ಗೆ ಬರೆಯುತ್ತಾರೆ.

ಪಾಶ್ಚಾತ್ಯ ಕಲ್ಪನೆಯ ರಿಯಾಲಿಸಂನಿಂದ ಬಿಡುಗಡೆಗೊಳ್ಳಬೇಕಾದ್ದು ನೂತನ ನಾಟ್ಯ ಶಾಸ್ತ್ರದ ಸಾಹಿತ್ಯ ಮೀಮಾಂಸೆಯ ಬೆಳವಣಿಗೆಗೆ ಅನಿವಾರ್ಯ. ತಮ್ಮ ಅನ್ವೇಷಣೆಯ ಬೆಳಕಿನಲ್ಲಿ ಅವರು ಹೊಸ ಮೀಮಾಂಸೆಯ ಸಾಧ್ಯತೆಗಳನ್ನು ಹೊಳೆಯಿಸುತ್ತಾ ಹೋದರು. ಅದರ ಸ್ಪಷ್ಟ ಸೂಚನೆ ಪಂಪನ ಕವಿತೆ: ಅನುಸಂಧಾನಕ್ಕೆ ಮಾರ್ಗ ಎಂಬ ಸುಬ್ಬಣ್ಣನವರ ಬರಹದಲ್ಲೆ ಪ್ರಾರಂಭವಾಗಿದೆ ಎಂದು ಸೂಚಿಸಿ ಆಗಿದೆ. ಸ್ವಪರಂಪರೆಯ ಶೋಧನೆಯಲ್ಲಿ ತೊಡಗಿದ್ದ ಸುಬ್ಬಣ್ಣ ಹೇಳುತ್ತಾರೆ.

ಧರ್ಮ, ರಾಜ್ಯ, ವ್ಯವಸ್ಥೆ, ಸಂಸ್ಕೃತಿ, ನಾಗರೀಕತೆ, ಸಮಾಜ, ಸಮುದಾಯ, ಸ್ವಾತಂತ್ರ್ಯ ಸಮಾನತೆ ಇತ್ಯಾದಿ, ಇತ್ಯಾದಿ ಹೊಸ ಹೆಸರುಗಳಲ್ಲಿ ಇವತ್ತು ನಮ್ಮ ಧೀಮಂತರು ಚಿಂತಿಸುವ ಅಂಥ ಮೂಲಭೂತ ವಿಷಯಗಳ ಬಗ್ಗೆ ಗಾಢವಾಗಿ ಚಿಂತಿಸಿದವರು ಪಂಪ. ಸಾಮಾನ್ಯವಾಗಿ ಜಗತ್ತಿನ ನಾವು ಬಲ್ಲ ಕಾವ್ಯ ಸಂಪ್ರದಾಯಗಳಲ್ಲಿ ಎಲ್ಲೂ ಕಾಣದ ವಿಶಿಷ್ಟ ಕಾವ್ಯ ತಂತ್ರದ ಮೂಲಕ, ಜಗತ್ತಿನ ಅಭಿವ್ಯಕ್ತಿ ಪರಂಪರೆಗೆ ಹೊಸ ಕೊಡುಗೆ ಇತ್ತವನು ಅವನು.

ಇಷ್ಟು ತನ್ಮಯತೆಯಿಂದ ಪಂಪನನ್ನು ಸ್ವೀಕರಿಸುವ ಸುಬ್ಬಣ್ಣನವರಿಗೆ ನಮ್ಮ ಪೂರ್ವ ಪರಂಪರೆಯನ್ನು ತಿಳಿಯುವುದರೊಡನೆ ಅಲ್ಲಿರಬೇಕಾದ ಎಚ್ಚರ ಬಹಳ ಸ್ಪಷ್ಟವಾಗಿದೆ. ನೀನಾಸಂ ಹಿನ್ನೆಲೆಯ ಸೆಲೆ ಎಂಬ ಲೇಖನದಲ್ಲಿ ಈ ಎಚ್ಚರ ಮತ್ತೊಮ್ಮೆ ತನಗೆ ತಾನೇ ಸ್ಪಷ್ಟಗೊಳಿಸಲೆಂಬಂತೆ ಮೂಡಿ ಬಂದಿದೆ. ಸುಬ್ಬಣ್ಣ ಹೇಳುತ್ತಾರೆ:

ನಮ್ಮ ಹಳೆಯ ಸಮಾಜಗಳನ್ನು ಈಗ ಮತ್ತೆ ಪುನರುತ್ಥಾನಗೊಳಿಸಿಕೊಳ್ಳುತ್ತೇವೆ ಅನ್ನುವುದು ಪ್ರತಿಗಾಮಿ ಮಾತ್ರವಲ್ಲ, ಸ್ವಯಂ ಸರ್ವನಾಶಕ್ಕೆ ಖಚಿತವಾದ ದಾರಿ. ಅದು ಅಸಾಧ್ಯ ಕೂಡಾ. ನಾನೇನಿದ್ದರೂ ನಮ್ಮ ಹಳೆ ಸಮುದಾಯಗಳ ಬದುಕಿನಲ್ಲಿ ಕಾಣುವ ಸಾಧ್ಯತೆಗಳನ್ನು ಶೋಧಿಸುತ್ತಿದ್ದೇನೆ. ಆ ನಮ್ಮ ಪೂರ್ವಜರು ಯಾವುದನ್ನು ಸಾಧ್ಯ ಮಾಡಿಕೊಳ್ಳದೇ ಸತ್ತು ಹೋದರೋ ಅಂಥ ಸಾಧ್ಯತೆಗಳನ್ನು ನಾವು ನಮ್ಮಲ್ಲಿ ಹೊಸದಾಗಿ ಪ್ರಯೋಗಿಸಿ ರೂಢಿಗೊಳಿಸಿಕೊಳ್ಳಲಿಕ್ಕೆ ಆದೀತೇ ಅಂತ ತವಕ ಪಡುತ್ತಿದ್ದೇನೆ.

ಹೊಸದಾಗಿ ರೂಢಿಸಿಕೊಳ್ಳುವ ಪ್ರಯತ್ನದಲ್ಲಿ ನಾಟಕ, ತನ್ನ ಚಿಂತನೆ ನೀನಾಸಂ ನಂತಹ ಸಂಸ್ಥೆಗಳ ಮೂಲಕ ಒಂದು ನೂತನ ಹುಟ್ಟಿಗೆ ನಿರಂತರ ಪ್ರಯೋಗ, ಚಿಂತನೆ

ನಡೆಸುತ್ತಾ ಹೋದರು. ಹೊಸ ಮೀಮಾಂಸೆಯ ವಿಮರ್ಶಾ ಪರಿಕರ, ಮಾನದಂಡಗಳ ಹುಟ್ಟು ಇಂತಹ ನಿರಂತರ ಶೋಧನೆಯ ಒಂದು ಅಂಶವಾಗಿ ಹುಟ್ಟಿ ಬಂದಿತು.

ಈ ಹೊಸ ವಿಮರ್ಶಾ ಪರಿಕರಗಳ ಅವಶ್ಯಕತೆ ಸಿನಿಮಾದ ಬಗ್ಗೆ ಬರೆಯುವುದು ಸುಬ್ಬಣ್ಣನವರಿಗೆ ಅನಿವಾರ್ಯವಾಯಿತು. ೧೯೭೦ರ ದಶಕದಲ್ಲಿ ಪ್ರಾರಂಭವಾದ ಸುಬ್ಬಣ್ಣನವರ ಸಿನಿಮಾ ಪ್ರಪಂಚದ ಅನೇಕ ಅಭಿಜಾತ ಕೃತಿಗಳನ್ನು ಅಮೂಲಾಗ್ರವಾಗಿ ಪರಿಚಯಿಸಿತು. ಅನೇಕಾನೇಕ ಚಲನಚಿತ್ರ ಅಧ್ಯಯನ ಶಿಬಿರಗಳ ಮೂಲಕ ಹೆಗ್ಗೋಡಿನ ಹೊರಗೂ ಸಿನಿಮಾ ತಿಳುವಳಿಕೆಯ ಶಿಬಿರಗಳು ನಡೆದವು. ಸಿನಿಮಾ ವಿಮರ್ಶೆ, ಬರಹಗಳಲ್ಲಿ ಹೊಸ ರೀತಿಯ ಹುಟ್ಟು ಪಡೆದ ಬರಹಗಳು ಆ ಬಳಿಕ ಸಾಹಿತ್ಯ ವಿಮರ್ಶೆಗೂ ಹೊಸ ಆಯಾಮವನ್ನು ಸೇರಿಸಿ ನೂತನ ಸಾಂಸ್ಕೃತಿಕ ವಿಮರ್ಶೆಯ ಭಾಗವಾಗಿ ಕನ್ನಡದಲ್ಲಿ ಬೆಳೆಯಿತು.

ಅನಂತಮೂರ್ತಿಯವರ ಕಾದಂಬರಿ ತ್ರಿವಳಿ ಎಂಬ ಲೇಖನದಲ್ಲಿ ಸ್ಪಷ್ಟ ರೂಪ ಪಡೆದ ಈ ಹೊಸ ವಿಮರ್ಶೆಯ ಕ್ರಮ ಸುಬ್ಬಣ್ಣನವರ 'ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು' ಕೃತಿಯಲ್ಲಿ ಹೊಸ ಮೀಮಾಂಸೆಯ ಸ್ಪಷ್ಟ ಪರಿಣತಿ, ಮಾನದಂಡ ಹಾಗೂ ಹೊಸ ಶಾಸ್ತ್ರದ ಸ್ಪಷ್ಟತೆಯನ್ನೂ ನಿಶ್ಚಿತ ಹಿಡಿತಕ್ಕೆ ಸಿಕ್ಕಿದ ಹೊಸ ವಿಚಾರಗಳನ್ನು ವ್ಯವಸ್ಥಿತವಾಗಿ ಸ್ಥಾಪಿಸಿಕೊಳ್ಳುತ್ತದೆ. ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಬಹುಮುಖ್ಯವಾದ ಈ ಕೃತಿಯಲ್ಲಿ ತನ್ನ ಕನ್ನಡ ಜಗತ್ತನ್ನು ಪ್ರತಿಷ್ಠಾಪಿಸಿಕೊಳ್ಳುವ, ವಿನಯ, ಆರ್ದ್ರತೆ, ಮತ್ತು ಸ್ಪಷ್ಟವಾದ ಆತ್ಮವಿಶ್ವಾಸದ ಮಾತುಗಳು ತನ್ನ ಬೊಗಸೆಯೊಳಗಿನ ಆಪ್ತ ಜಗತ್ತು ಮತ್ತು ಆದರಾಚೆಗಿನ ತಿಳುವಳಿಕೆಯ ಎತ್ತರ ಎರಡನ್ನು ಸೂಚಿಸುತ್ತದೆ. ವಸಾಹತುಶಾಹಿ ಅನುಭವದಿಂದ ಹುಟ್ಟಿದ ಪೂರ್ವಗ್ರಹಗಳು, ಜಾಗತೀಕರಣದ ಮೋಹ, ಅಸ್ಪಷ್ಟತೆ ಯಾವುದೂ ಇಲ್ಲದೆ ತನ್ನ ನೆಲವನ್ನು ತಾನು ಗ್ರಹಿಸಿ ದುರಹಂಕಾರವಿಲ್ಲದ, ಆರೋಗ್ಯ ಪೂರ್ಣ ಆತ್ಮ ವಿಶ್ವಾಸದಲ್ಲಿ ಹೇಳಿಕೊಳ್ಳುವ ಮಾತುಗಳಿವು:

ಕರ್ಣಾಟಕವೆಂದು ಈಗ ನಾವು ಗುರುತಿಸುವ ಈ ನಾಡು, ಭಾರತದ ಒಟ್ಟು ಭೂಭಾಗದಲ್ಲಿ ಅತ್ಯಂತ ಪ್ರಾಚೀನವೂ ಬಹು ಸ್ಥಿರವೂ ಆದ ದಖನ್ ಪ್ರಸ್ಥಭೂಮಿಯ ಭದ್ರ ಪೀಠದ ಮೇಲೆ ದೃಢವಾಗಿ ನಿಂತಿದೆ. ಪೃಥಿವ್ಯಾ ಮಾನದಂಡ ಇವ ನಗಾಧಿರಾಜಃ ಅಂತೆಲ್ಲ ಕಾಳಿದಾಸನು ಬಣ್ಣಿಸುವ ಜಗತ್ತಿನ ಉನ್ನತೋನ್ನತ ಪರ್ವತವಾದ ಹಿಮಾಲಯವು ನಮ್ಮ ಪ್ರಸ್ಥಭೂಮಿಗೆ ಹೋಲಿಸಿದರೆ ಇನ್ನೂ ಪ್ರಾಯ ಬಂದಿಲ್ಲದ ಹಸುಳೆ. ಹಿಮಾಲಯದಲ್ಲಿ ಗ್ರಾನೈಟ್ ಶಿಲೆಯು ಸಿಕ್ಕುವುದಿಲ್ಲ. ಗ್ರಾನೈಟ್ ಬೆಳೆದು ಹರಳು

ಗಟ್ಟಿಸಿಕೊಳ್ಳಲಿಕ್ಕೆ ಬೇಕಾಗುವ ಎಷ್ಟೋ ಕೋಟಿ ಕೋಟಿ ವರ್ಷಗಳ ಪ್ರೌಢಿಮೆಗೆ ಅದಿನ್ನೂ ಕಾಯಬೇಕು (ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು).

ಮೇಲಿನ ಮಾತುಗಳು ಸುಬ್ಬಣ್ಣ ಇಂದು ಪ್ರತಿನಿಧಿಸುವ ನೂತನ ಮೀಮಾಂಸೆಗೆ ಒಂದು ಸಣ್ಣ ಉದಾಹರಣೆ. ಆಧುನಿಕ ವಿಮರ್ಶೆಯಂತೆ ಅವರು ಒಂದು ಪ್ರಕಾರವನ್ನು ಇನ್ನೊಂದು ಪ್ರಕಾರಕ್ಕೆ ಹೋಲಿಸಬಲ್ಲರು. ನವ್ಯ ವಿಮರ್ಶೆಯಲ್ಲಿ ಅದು ಸಾಮಾನ್ಯವಿತ್ತು. ವಚನಗಳನ್ನು ಕಾದಂಬರಿಯೊಡನೆ ಹೋಲಿಸುವುದೂ ನಡೆಯಿತು. ಆ ವಿಮರ್ಶೆಯ ಮೂಲ ವಿವೇಕವನ್ನು ಸುಬ್ಬಣ್ಣ ಉಳಿಸಿಕೊಂಡಿದ್ದಾರೆ. ಭೂಗರ್ಭ ಶಾಸ್ತ್ರದ ಮಾಹಿತಿಯೊಡನೆ ಕಾಳಿದಾಸನ ವಿಶೇಷಣ, ಪ್ರಯೋಗಗಳನ್ನು ತಳುಕುಹಾಕಿ ನೋಡಬಲ್ಲರು. ಹಾಗೆಂದು ಅವರು ಕೇವಲ ಪಠ್ಯದ ಒಳಗೆ ಭಾಷೆಯಲ್ಲಿ ದಕ್ಕಿದ್ದು ಮಾತ್ರ ಸತ್ಯ ಎಂದು ಒಪ್ಪುವುದಿಲ್ಲ. ಹೊರಗಿನ ತಿಳುವಳಿಕೆ ಉಪಯುಕ್ತವಾದಲ್ಲೆಲ್ಲಾ ತನ್ನ ಕಾಲದ ಅರಿವನ್ನು ಹಿಗ್ಗಿಸಲು ಅವನ್ನೆಲ್ಲಾ ಬಳಸಿಕೊಂಡು ಅರ್ಥೈಸಿಕೊಳ್ಳಬಲ್ಲರು.

ಕವಿರಾಜ ಮಾರ್ಗವೂ ಹೀಗೆ ಸುಬ್ಬಣ್ಣನವರಿಗೆ ಒಂದು ಪ್ರೇರಣೆ. ತನ್ನ ಕಾಲವನ್ನು ತಿಳಿಯಲು ಒಂದು ಆಕರ. ಅದೇ ಕವಿರಾಜಮಾರ್ಗ ಪೂರ್ವ ಪರಂಪರೆಯಿಂದ ಪಡೆಯಬಹುದಾದ ವಿವೇಕವನ್ನು ಹೀರಲು, ಆ ಮೂಲಕ ಸ್ವಪರಂಪರೆಯಿಂದ ಆರೋಗ್ಯ ಪೂರ್ಣ ಪ್ರೇರಣೆ ಪಡೆಯಲು ಒಂದು ನಿಕಷವಾಗಿಯೂ ಉಪಾಧಿಯಾಗಿಯೂ ಒದಗಿ ಬರುತ್ತದೆ. ಇಂದು ತಾವು ಬೆಳೆಸಿಕೊಳ್ಳಬೇಕಾದ ಸಮಗ್ರ ವಿವೇಕಕ್ಕೆ ಒಂದು ದಿಕ್‌ಸೂಚಿಯೂ ಅಲ್ಲಿ ಕಂಡಂತಾಗುತ್ತದೆ. ಇದು ಹೊಸದಾಗಿ ನೋಡುವ ಕ್ರಮವೂ ಹೌದು.

೧೯೮೦ರ ದಶಕದಲ್ಲಿ ಕವಿರಾಜಮಾರ್ಗದ ಓದು ಪ್ರಸ್ತುತ ಕಾಲದ ಅರಿವನ್ನು ಸ್ಪಷ್ಟಗೊಳಿಸಿ ಒಂದು ವಿಶಾಲ ಪರಿಪ್ರೇಕ್ಷ್ಯದಲ್ಲಿ ಕನ್ನಡ ಸಂದರ್ಭವನ್ನು ಅರ್ಥೈಸಿಕೊಳ್ಳಲು ಹೇಗೆ ಒದಗಿ ಬಂತು ಎಂಬುದನ್ನು ವಿವರಿಸುತ್ತಾ, ಜೆ.ಪಿ. ಚಳುವಳಿ ಬಳಿಕ ಕನ್ನಡದಲ್ಲಿ ಬೆಳೆದು ಬಂದ ಕಾವೇರಿ, ಕನ್ನಡ ಚಳವಳಿಗಳ ಸಂದರ್ಭದಲ್ಲಿ ಜಿ. ರಾಜಶೇಖರ, ಡಿ.ಆರ್. ನಾಗರಾಜ ಮೊದಲಾದವರ ವಿಚಾರಗಳನ್ನು ನೆನಪಿಸಿಕೊಳ್ಳುತ್ತಾ ಸುಬ್ಬಣ್ಣ ಹೇಳುತ್ತಾರೆ: ಕವಿರಾಜಮಾರ್ಗದ ಸಂದರ್ಭವು ಈ ಎರಡೂ (ಮೇಲೆ ಹೇಳಿದ ಕನ್ನಡ ಚಳುವಳಿಗಳ) ಸಂದರ್ಭಕ್ಕಿಂತ ಎಷ್ಟೋ ಪಾಲು ಹೆಚ್ಚು ತೀವ್ರ ಆತಂಕಗಳಿದ್ದ ಕಾಲವಾಗಿತ್ತು ಎಂಬುದು ಮತ್ತು ಅಂಥ ಕಾಲದಲ್ಲಿನ ಆ ಗ್ರಂಥದ ವಿವೇಕವು ಮೇಲಿನ ಎರಡೂ ಕಾಲದಲ್ಲಿಯೂ ಕಾಣದ ಅಪರೂಪವಾದ ವಿವೇಕವಾಗಿತ್ತು.

ನಮ್ಮ ಸಮುದಾಯದ ವಿವೇಕದ ಸಹಜ ಬೆಳವಣಿಗೆಗೂ, ಚೈತನದ ಮೂಲ ಶಕ್ತಿಗೂ ಅದರ ಸಹಜ ಶಕ್ತಿಯ ಮೈಗೂಡುವಿಕೆಯಲ್ಲಿ ಬೆಳೆಯದಂತೆ ಏಟುಕೊಟ್ಟಿದು

ನಮ್ಮ ವಸಾಹತುಶಾಹಿ ಅವಸ್ಥೆ. ಇಡೀ ದೇಶದ ಚೈತನ್ಯ ವಸಾಹತು ಅನುಭವದಲ್ಲಿ ಕುಗ್ಗಿ ಕಮರಿ ಹೋಗಿತ್ತು. ಇದರಿಂದ ಹೊರ ಬರುವುದು ಅನಿವಾರ್ಯ. ಆಗ ಮಾತ್ರ ತಮ್ಮ ಸಹಜ ಶಕ್ತಿಯನ್ನು ಕ್ರೋಢೀಕರಿಸಿಕೊಳ್ಳುವುದು, ನಮಗೆ ಬೇಕಾದ್ದನ್ನು ನಾವೇ ರೂಢಿಸಿಕೊಂಡು ಬಾಳುವುದು, ಆ ಮೂಲಕ ಹೊಸ ನೆಲೆಗಳನ್ನು ಕಾಣುವುದು ಸಾಧ್ಯವೆಂದು ಸುಬ್ಬಣ್ಣ ನಂಬುತ್ತಾರೆ. ಅವರ ನೀನಾಸಂ ಪ್ರಯೋಗವೂ ಇಂತಹದೇ ಒಂದು ಪ್ರಯತ್ನ.

ವಸಾಹತುಶಾಹಿ ಇರಲಿ ಇನ್ನಾವುದೇ ಇರಲಿ ಪೂರ್ವ ಗ್ರಹದ ಛಾಯೆಗಳನ್ನು ಬಿಟ್ಟು ಚಿಂತಿಸುವುದು ಅಷ್ಟು ಸುಲಭವಲ್ಲ. ತಮ್ಮ ವ್ಯಕ್ತಿತ್ವದ ಸಹಜ ಭಾಗವಾಗಿ ಸುಬ್ಬಣ್ಣ ಅದನ್ನು ಬೆಳೆಸಿಕೊಂಡರು ನಾನು ಹತ್ತಿರದಿಂದ ನೋಡಿದ ಒಂದು ಉದಾಹರಣೆಯಿಂದ ಇದನ್ನು ಹೇಳಬಹುದು.

ಬಿ.ವಿ. ಕಾರಂತರ ಬರ್ನಮ್‌ವನ ಪ್ರದರ್ಶನಗೊಂಡ ಹೊಸತರಲ್ಲಿ ಈಗ ಸುಮಾರು ಇಪ್ಪತ್ತು ವರ್ಷಗಳ ಹಿಂದೆ, ಉಡುಪಿಯಲ್ಲಿ ರಥಬೀದಿ ಗೆಳೆಯರು ಬರ್ನಮ್‌ವನ ಪ್ರಯೋಗದ ಬಗ್ಗೆ ಚರ್ಚೆ ಇಟ್ಟುಕೊಂಡಿದ್ದರು.

ಆ ಸಭೆಯಲ್ಲಿ ಸುಬ್ಬಣ್ಣನವರು ಪ್ರಶ್ನೋತ್ತರವನ್ನು ನಡೆಸಿಕೊಡುತ್ತಿದ್ದರು. ಶೇಕ್ಸ್‌ಪಿಯರ್‌ನ ಮ್ಯಾಕ್‌ಬೆತ್‌ನ ಭಾರತದ ಪುನರ್ಜನ್ಮ ಎಂಬುದೇ ಬರ್ನಮ್ ವನದ ಬಗ್ಗೆ ಸುಬ್ಬಣ್ಣನವರ ನಿಲುವು ಎಂದು ನನ್ನ ನೆನಪು. ಅದು ಭಾರತದ ಒಂದು ಸೃಜನಶೀಲ ರಂಗಕೃತಿ ಎಂಬುದು ಅವರ ವಾದ.

ಸಭೆಯಲ್ಲಿದ್ದ ಯಾರೋ ಒಬ್ಬರು, ಇಂಗ್ಲೆಂಡಿನ ಒಬ್ಬ ಪ್ರೊಫೆಸರ್ ಬರ್ನಮ್ ವನವನ್ನು ಮೆಚ್ಚಿಕೊಳ್ಳಲಿಲ್ಲವಂತೆ ಎಂದು ಹೇಳಿದರು. ಸುಬ್ಬಣ್ಣನವರ ತಕ್ಷಣದ ಉತ್ತರ: ಇರಲಿಬಿಡಿ, ನಮ್ಮ ಯೂನಿವರ್ಸಿಟಿಗಳಲ್ಲೂ ಎಷ್ಟೋ ದಡ್ಡ ಪ್ರೊಫೆಸರ್‌-ಗಳಿರುವುದಿಲ್ಲವೇ? ಹಾಗೆಯೇ ಅವನೂ ಒಬ್ಬ. ಅರ್ಥವಾಗಿಲ್ಲ ಏನು ಮಾಡ್ಲಿಕಾಗುತ್ತೆ ಬಿಡಿ.

ಬಿಳಿ ಪ್ರೊಫೆಸರ್ ಒಬ್ಬ ಹೇಳಿದ ಎಂಬ ಒಂದೇ ಕಾರಣಕ್ಕೆ ಶೇಕ್ಸ್‌ಪಿಯರ್ ಬಗ್ಗೆ ಅವನು ಹೇಳಿದ್ದೆಲ್ಲಾ ಸರಿ ಎಂದು ತಿಳಿಯಬೇಕಾಗಿಲ್ಲ ಎಂಬುದು ಸುಬ್ಬಣ್ಣನವರ ನೆಲೆ. ಕಾರಂತರ ಬರ್ನಮ್ ವನವನ್ನು ಒಬ್ಬ ಬಿಳಿಯ ಪ್ರೊಫೆಸರ್ ಒಪ್ಪಿಕೊಂಡಿಲ್ಲ ಎಂದಾದ ಬಳಿಕ ಅದು ಹೇಗೆ ಶ್ರೇಷ್ಠ ಕೃತಿಯಾಗಲು ಸಾಧ್ಯ ಎಂಬುದು ಪ್ರಶ್ನೆ ಕೇಳಿದವನ ಗ್ರಹಿಕೆ. ನೂರಾರು ವರ್ಷಗಳ ವಸಾಹತುಶಾಹಿ ಆಡಳಿತದಲ್ಲಿ ಜರ್ಝರಿತಗೊಂಡ ನಮ್ಮ ದೇಶದ ಮನಸ್ಸು ಚೇತರಿಸಿಕೊಳ್ಳಲು ಸುಬ್ಬಣ್ಣನವರ ಸ್ಪಷ್ಟ ಚಿಂತನೆ.

ವಿಕೇಂದ್ರೀಕರಣದ ನಂಬಿಕೆಯಲ್ಲಿ ಕಟ್ಟಿದ ನೀನಾಸಮ್ ನಂತಹ ಸಂಸ್ಥೆಗಳು ಹೊಸದಾರಿಗಳನ್ನು ಸೂಚಿಸಬಲ್ಲವು. ಈ ಹುಡುಕಾಟದಲ್ಲಿ ಸುಬ್ಬಣ್ಣ ಎಲ್ಲೆಲ್ಲಿಂದ ಏನೇನು ಸಿಗಬಹುದೋ ಅದನ್ನೆಲ್ಲಾ ಅರಸುತ್ತಾರೆ. ಯಶಸ್ಸನ್ನು ನಿರಾಕರಿಸಿ ತಪಸ್ಸನ್ನು ಸ್ವೀಕರಿಸುವಂತಹ ದಿವಂಗತ ಜಿ.ಬಿ. ಜೋಶಿಯವರಿಂದಲೂ ಕಲಿಯುತ್ತಾರೆ. ನೀನಾಸಮ್‌ನವರೇ ಆದ ತಮ್ಮ ರಾಮಪ್ಪನಿಂದಲೂ ಕಲಿಯುತ್ತಾರೆ. ತಂದೆಗೆ ತಾನು ಸಿಗರೇಟು ಸೇದುವುದನ್ನು ಪರೋಕ್ಷವಾಗಿ ಸೂಚಿಸಲು ರಂಗಸ್ಥಳದಲ್ಲಿ ನಟಿಸುವಾಗ ಯಾರೂ ಹೇಳದೆ ಸಿಗರೇಟು ಸೇದಿದ. ಹೊರ ಪ್ರಪಂಚಕ್ಕೆ ತಿಳಿದಿರುವ ನೀನಾಸಮ್‌ನ ಒಬ್ಬ ನಟನನ್ನೂ ಗಮನಿಸಿ ತನ್ನ ಸಮುದಾಯವನ್ನು ಅರಿತು ಕೊಳ್ಳುತ್ತಾರೆ.

೧೯೫೬ರಲ್ಲಿ ಪ್ರಕಟಿಸಿದ ಧನಂಜಯನ 'ದಶರೂಪಕ'ದ ಅನುವಾದಕನ ಅರಿಕೆಯಲ್ಲಿ ಕೆ.ವಿ. ಸುಬ್ಬಣ್ಣ ಹೆಗ್ಗೋಡಿನ ಪರಿಸರದ ತನ್ನ ವಾಸಕ್ಕೆ ಸಂಬಂಧಪಟ್ಟ ಒಂದು ಮಾತು ಹೇಳುತ್ತಾರೆ: ಗ್ರಂಥ ಭಂಡಾರ ಹಾಗೂ ಮುದ್ರಣಾಲಯಗಳಿಂದ ನಾನು ತುಂಬಾ ದೂರವಾಗಿ ಇದ್ದೇನಾದಕಾರಣ ಈ ಗ್ರಂಥ ನಾನು ಯೋಚಿಸಿಕೊಂಡಷ್ಟು ಸಮರ್ಪಕವಾಗಲಿಲ್ಲ. ಸುಬ್ಬಣ್ಣ ತನ್ನ ವಾಸದ ಪರಿಸರದಲ್ಲೇ ನಿರ್ಮಿಸಿಕೊಂಡ ಪುಟ್ಟದೊಂದು ಸಂಘಟನೆ ಭಾರತದೇಶ ಕೇಂದ್ರೀಕರಣದತ್ತ ಸಾಗಿದ ವ್ಯವಸ್ಥೆಯಲ್ಲಿ ಉಂಟಾದ ಇಂತಹ ಎಲ್ಲಾ ಏರುಪೇರುಗಳಿಗೂ ಒಂದು ಪರ್ಯಾಯ ಸಾಧ್ಯತೆಯನ್ನು ಸೂಚಿಸುತ್ತದೆ. ನೀನಾಸಮ್ ಮೂಲಕ ಇಂದು ಹೆಗ್ಗೋಡಿನಂತಹ ಒಂದು ಮಲೆನಾಡಿನ ಹಳ್ಳಿಯಲ್ಲಿ ಅತ್ಯುತ್ತಮವಾದ ಗ್ರಂಥಾಲಯ, ರಂಗಮಂದಿರ, ಆಧುನಿಕ ರಂಗ ತಂತ್ರದ ತಿಳುವಳಿಕೆ, ಸಿನಿಮಾಗಳು, ಸಾಹಿತ್ಯ ಇತ್ಯಾದಿ ವಿಚಾರಗಳ ಅಧ್ಯಯನ ಆಸಕ್ತರು ಎಲ್ಲವೂ ಇದೆ. ಸುಬ್ಬಣ್ಣ ನೀನಾಸಮ್ ಮೂಲಕ ಹೆಗ್ಗೋಡಿನಲ್ಲಿ ಒಂದು ಅನೌಪಚಾರಿಕ ವಿಶ್ವವಿದ್ಯಾನಿಲಯವನ್ನೇ ನಿರ್ಮಿಸಿದ್ದಾರೆ. ಬೆಂಗಳೂರಲ್ಲಂತೂ ಕೆಲವರು ಅದನ್ನು ವೀಳ್ಯದೆಲೆ ಯೂನಿವರ್ಸಿಟಿ ಎಂದು ಅರ್ಧ ಪ್ರೀತಿಯಿಂದ ಇನ್ನರ್ಧ ಅಸಹನೆಯಿಂದ ಹೇಳುವವರೂ ಇದ್ದಾರೆ. ಅದು ಸಾಂಸ್ಕೃತಿಕ ವಿಕೇಂದ್ರೀಕರಣದ ಶಕ್ತಿಯ ಸಂಕೇತವೂ ಸಾಧ್ಯತೆಗಳ ಸೂಚನೆಯೂ ಹೌದು. ಆದರೆ ಸುಬ್ಬಣ್ಣನವರ ಆಶಯ ತಾವು ವಾಸಿಸುವ ಹಳ್ಳಿಯನ್ನು ಸಾಂಸ್ಕೃತಿಕ ಮಹತ್ವವುಳ್ಳದ್ದನ್ನಾಗಿ ಮಾಡುವುದು. ಆಮೂಲಕ ಅಲ್ಲಿ ವಾಸಿಸುವ ಜನ ತಮ್ಮ ಅಂತರಂಗದ ಬದುಕನ್ನು ಸಮುದಾಯದ ಜೀವನವನ್ನೂ ಶ್ರೀಮಂತಗೊಳಿಸಿಕೊಳ್ಳುವುದು. ತಮ್ಮ ಹಳ್ಳಿಯನ್ನು ರಾಜ್ಯದ ಅಥವಾ ರಾಷ್ಟ್ರದ ಸಾಂಸ್ಕೃತಿಕ ಕೇಂದ್ರವಾಗಿ ಮಾಡುವುದು ಅವರ ಉದ್ದೇಶವಲ್ಲ. ಬಹುಶಃ ಜನ ವಾಸಿಸುವ ಪ್ರತಿಯೊಂದು ತಾಣವೂ ಅಲ್ಲಿನವರ ಅರಿವಿನ ವಿಸ್ತಾರದಲ್ಲಿ ಸಾಂಸ್ಕೃತಿಕವಾಗಿ ಮಹತ್ವದ್ದಾಗಬೇಕೆಂಬುದೇ ಸುಬ್ಬಣ್ಣನವರ ಪ್ರಯತ್ನ, ಚಿಂತನೆಗಳ ಹಿಂದಿನ ಪ್ರೇರಣೆ

ಇರಬಹುದು ಎಂದು ನನಗೆ ಅನೇಕ ಸಲ ಅನಿಸಿದೆ. ಅದನ್ನು ಬೇಕಾದರೆ ಸುಬ್ಬಣ್ಣನವರ ಚಿಂತನೆಯ ಹಿಂದಿನ ತಾತ್ವಿಕ ನೆಲೆಗಳಿಂದಲೂ ವಿಶ್ಲೇಷಿಸಬಹುದು.

ಒಂದಂತೂ ನಿಜ. ಹೆಗ್ಗೋಡು ಎಂದಾಗ ಗೊತ್ತಾಗದವರು ಅನೇಕರಿರಬಹುದು. ಆದರೆ, ಅದರ ಜೊತೆ, ನೀನಾಸಮ್ ಸೇರಿದಾಗ ತಿಳಿಯದ ಸಾಹಿತ್ಯ, ನಾಟಕಾಸಕ್ತರು ಅಪರೂಪ. ನೀಲಕಂಠೇಶ್ವರ ನಾಟ್ಯ ಸೇವಾ ಸಂಘ ಕೆ.ವಿ.ಸುಬ್ಬಣ್ಣನವರ ಒಡನಾಟದಲ್ಲಿ ನೀನಾಸಮ್ ಎಂದು ನವೀಕರಣಗೊಂಡು ಭಾರತದ ಸಾಂಸ್ಕೃತಿಕ ನಕ್ಷೆಯಲ್ಲಿ ಒಂದು ವಿಶಿಷ್ಟಸ್ಥಾನ ಪಡೆದಿದೆ. ಹಗಲೆಲ್ಲಾ ಗದ್ದೆ ತೋಟಗಳಲ್ಲಿ ಕೆಲಸ ಮಾಡಿದ ಗ್ರಾಮಸ್ಥರು ಅಡಿಕೆ ಮೆಲ್ಲುತ್ತಾ ಸಂಜೆ ಅಲ್ಲಿ ಸೇರುತ್ತಾರೆ. ತಮ್ಮ ಆಸಕ್ತಿಯ ವಿಚಾರ ಮಾತಾಡುತ್ತಾರೆ. ವಿದೇಶಗಳ ಸಿನಿಮಾ ನೋಡುತ್ತಾರೆ. ನಾಟಕ ಆಡುತ್ತಾರೆ. ಸಂಗೀತ ಕೇಳುತ್ತಾರೆ. ಅಲ್ಲಿಗೆ ಎಲ್ಲೆಲ್ಲಿಂದಲೋ ಬರುವ ನಮ್ಮ ಕಾಲದ ಶ್ರೇಷ್ಠ ವಿದ್ವಾಂಸರ ಮಾತುಗಳನ್ನು ಆಲಿಸುತ್ತಾರೆ. ತಮ್ಮ ದಿನ ನಿತ್ಯದ ಕೃಷಿ ಕಾರ್ಯಗಳಲ್ಲಿ ತೊಡಗಿ, ಉಳಿದ ವಿರಾಮದಲ್ಲಿ ತಮ್ಮ ಸಾಂಸ್ಕೃತಿಕ ಬದುಕನ್ನು ಶ್ರೀಮಂತಗೊಳಿಸುತ್ತಾ ತಮ್ಮ ಚಿಂತನೆಯನ್ನು ಹರಿತಗೊಳಿಸುತ್ತಾ ಬದುಕುವ ಇಲ್ಲಿಯ ಜನ ಇಲ್ಲಿನ ಜೀವನ ನೋಡಿದಾಗ ಸಾಂಸ್ಕೃತಿಕ ವಿಕೇಂದ್ರಿಕರಣದ ಒಂದು ಆದರ್ಶಮಾದರಿ ಇಲ್ಲಿದೆ ಅನಿಸದಿರದು.

ಅಲ್ಲಿ ಸುಬ್ಬಣ್ಣ ಏನು ಅಂದರೆ-ಏನೂ ಅಲ್ಲ ಹಾಗೂ ಎಲ್ಲವೂ ಹೌದು. ರಂಗ ಮಂದಿರದಲ್ಲಿ ಬೈಸಿಕಲ್ ಥೀವ್ಸ್ ಸಿನಿಮಾ ಪ್ರದರ್ಶನಕ್ಕೆ ಪ್ರವೇಶಧನ ಎಷ್ಟು ಇಡಬೇಕು ಎಂಬುದನ್ನು ಅಲ್ಲಿಯ ಕಮಿಟಿ ಚರ್ಚಿಸಿ ಸುಬ್ಬಣ್ಣನವರ ಸಲಹೆಗಳನ್ನು ಮಾರ್ಪಡಿಸಿದ್ದು ನನಗೆ ಗೊತ್ತಿದೆ. ನೀನಾಸಮ್‌ನ ಇತರರು ಹೇಳುವುದನ್ನು ಬಹು ಸಮಾಧಾನದಿಂದ ಸುಬ್ಬಣ್ಣ ಕೇಳುತ್ತಿರುತ್ತಾರೆ. ಎಲ್ಲೂ ತಮ್ಮ ಅಭಿಪ್ರಾಯವನ್ನು ಅವರು ಹೇರುವುದಿಲ್ಲ. ಡೆಮಾಕ್ರಸಿಯ ಶಕ್ತಿ ಮಿತಿಗಳೆರಡನ್ನೂ ಒಟ್ಟಿಗೆ ಪಡೆದೇ ಬದುಕುವುದು ಅವರಿಗೆ ಸಹಜವಾದೊಂದು ವಿಧಾನ. ಯಾವ ಮನುಷ್ಯನೂ ತನಗಿಂತ ನಿಕೃಷ್ಟನಲ್ಲ, ತನಗಿಂತಮೇಲೂ ಅಲ್ಲ ಮನುಷ್ಯರೆಲ್ಲರೂ ಸಮಾನರೆಂಬ ದೃಢನಂಬಿಕೆ ಸುಬ್ಬಣ್ಣನವರದ್ದು. ವಸಾಹಾತುಶಾಹಿಯ ಧಾಳಿಯನ್ನು ಡೆಮಾಕ್ರಸಿಯ ಆತ್ಮಗೌರವ ನೆಲೆಗಳಲ್ಲಿ ನಮ್ಮ ಸಾಂಸ್ಕೃತಿಕ ಬದುಕಿನ ನೈಜ ಸೆಳೆತಗಳಲ್ಲಿ ಎದುರಿಸುವುದನ್ನು ಸುಬ್ಬಣ್ಣ ನಮಗೆ ತೋರಿಸಿ ಕೊಡುತ್ತಾರೆ.

ಬದುಕೇ ಬರಹದಂತೆ ತಾನು ರಚಿಸಿದ ಕೃತಿಯಾಗಿ ಬಾಳುತ್ತಿರುವ ಅಪರೂಪದ ವ್ಯಕ್ತಿ ಸುಬ್ಬಣ್ಣ. ಕನ್ನಡದಲ್ಲಿ ಕಾರಂತರು ಹೀಗೆ ಬದುಕಿದವರು. ಅವರ ಸಮಗ್ರ ಬದುಕೇ ಒಂದು ಕೃತಿ ಬರವಣಿಗೆ ಅದರ ಕೆಲವು ಅಧ್ಯಾಯಗಳಷ್ಟೆ. ಸುಬ್ಬಣ್ಣನವರ ಬರಹಗಳೂ ಹೀಗೆಯೇ ಒಂದು ರೀತಿಯಲ್ಲಿ ಕಾರಂತರು ಜಂಗಮ, ಸುಬ್ಬಣ್ಣ ಸ್ಥಾವರ. ಅದನ್ನು

ಮೀರಲು ತಿರುಗಾಟ. ರಾಜಕೀಯವನ್ನೊಳಗೊಂಡ ಇನ್ನೊಂದು ಉನ್ನತ ಸ್ತರದಲ್ಲಿ ಬದುಕನ್ನು ಈ ರೀತಿ ಕೃತಿಯಾಗಿಸಿದವರು ಗಾಂಧೀಜಿ. ಇವರಿಬ್ಬರ ಪ್ರಭಾವವೂ ಸುಬ್ಬಣ್ಣನವರ ಮೇಲಾಗಿದೆ. ಶಿವರಾಮ ಕಾರಂತ ರಂಗಮಂದಿರವನ್ನು ಸ್ಥಾಪಿಸಿದ್ದು ಸುಬ್ಬಣ್ಣನವರ ಪರ್ಯಾಯ ಚಿಂತನೆಯ ಅನ್ವೇಷಣೆಯ ಒಂದು ಹಂತ. ಗಾಂಧೀಜಿಯವರ ಸ್ವರಾಜ್ಯದ ಹಾದಿ ಹೆಜ್ಜೆಗಳು ಎಂಬ ಸುಬ್ಬಣ್ಣನವರ ಅನುವಾದ ಅವರ ಅನ್ವೇಷಣೆಯ ಮುಂದುವರಿದ ಇನ್ನೊಂದು ಭಾಗವೇ ಆಗಿದೆ. ಬದುಕೇ ಕೃತಿಯಾಗುವ ಅಂಶ ಬುದ್ಧ ಮೊದಲಾದ ಧರ್ಮ ಸಂಸ್ಥಾಪಕರಲ್ಲೂ ಒಂದು ಮುಖ್ಯ ವಾಹಿನಿಯಾಗಿ ಹರಿಯುವುದನ್ನು ಕಾಣಬಹುದು. ಬೌದ್ಧಧರ್ಮದ ಇನ್ನೊಂದು ಅಂಶ 'ಝೆನ್' ಸುಬ್ಬಣ್ಣನವರ ಮತ್ತೊಂದು ಆಸಕ್ತಿ.

ಸುಬ್ಬಣ್ಣನವರದ್ದು ಸಮಾಜವಾದೀ ದೃಷ್ಟಿಕೋನ, ನಿಜ. ಆದರೆ ಸಂಘಟನಾ ಕುಶಲತೆಗಳ ಅವಶ್ಯವಾದ ಜನರನ್ನು ಹೊಂದಾಣಿಸಿಕೊಂಡು ಹೋಗಬೇಕಾದ ಅವಶ್ಯಕತೆ ಎಲ್ಲೂ, ಎಂದೂ ಅವರ ಕಲಾನುಭವದ ತೀವ್ರತೆಗೆ ತೊಂದರೆ ಮಾಡುವುದಿಲ್ಲ. ಅನೇಕ ಸಲ ಸಮೂಹದ ಚಿಂತನೆ ಅವರ ಬರವಣಿಗೆಯಲ್ಲಿ ವೈಯಕ್ತಿಕ ತುರ್ತಾಗಿ ಮೂಡಿಬರುತ್ತದೆ. (ಜಪಾನಿನ ವಸಾಹತು ಒಂದು ಪತ್ರ, ಭೂ ಸುಧಾರಣೆಯ ಸಮಾಧಿ, ಅಡಿಕೆಯ ಮಾನ ಇತ್ಯಾದಿ) ಹಾಗೆಯೇ ಕಲೆಯ ಉನ್ನತ ಕ್ಷಣಗಳನ್ನೂ ಅವರು ಗುರುತಿಸುವ ಕ್ರಮ ಅಷ್ಟೇ ಮುಖ್ಯ. (ಮೇರಿ ಸೀಟನ್, ಕುಮಾರ ಗಂಧರ್ವರ ಬಗ್ಗೆ ಬರೆದ ಲೇಖನಗಳು) ವಿಮರ್ಶಕ ಟಿ.ಪಿ. ಅಶೋಕ ಹೇಳುವಂತೆ:

ಎಲ್ಲ ಮನುಷ್ಯರು ಸಮಾನರಾದರೂ ಮನುಷ್ಯ ಮನುಷ್ಯರ ನಡುವಿನ ಭೇದ ಭಾವಗಳು ಅವರನ್ನು ಅಲುಗಾಡಿಸಿವೆ. ಹಾಗೆಯೇ ಮನುಷ್ಯರ ಬಹುಮುಖ ಸಾಧ್ಯತೆಗಳೂ ಅವರನ್ನು ವಿಸ್ಮಿತಗೊಳಿಸಿವೆ. ವ್ಯಕ್ತಿ ವೈಶಿಷ್ಟ್ಯಗಳನ್ನು ಗುರುತಿಸುತ್ತಾ, ವ್ಯಕ್ತಿ ಪ್ರತಿಭೆಗಳನ್ನು ಗೌರವಿಸುತ್ತಾ ಸುಬ್ಬಣ್ಣ ಮನುಷ್ಯ ಸಮಷ್ಟಿಯನ್ನು ಎಂದೂ ಮರೆಯುವುದಿಲ್ಲ. ಅದೇ ರೀತಿ ಮನುಷ್ಯರನ್ನು ಕೇವಲ ಗುಂಪುಗಳಾಗಿ, ವರ್ಗಗಳಾಗಿ, ನಿರಾಕಾರ ವಸ್ತು ಗಾತ್ರವಾಗಿಯೂ ನೋಡುವುದಿಲ್ಲ. ಈ ಹದವೇ ಸುಬ್ಬಣ್ಣನವರ ಲೋಕ ದೃಷ್ಟಿಯ ನಿರ್ಣಯಾತ್ಮಕ ಅಂಶವಾಗಿದೆ.

ಸುಬ್ಬಣ್ಣ ತಮ್ಮ ನಿರಂತರ ಚಿಂತನೆಯ ಮೂಲಕ ಹೆಗ್ಗೋಡಿನ ಸುತ್ತಲಿನ ಜನರನ್ನು ಕೂಡಿಕೊಂಡು ಬೆಳೆಸಿದ ನೀನಾಸಮ್ ಮೂಲಕ ತನ್ನ ಹೆಗ್ಗೋಡಿನ ಪರಿಸರದಲ್ಲೇ ಪರ್ಯಾಯ ಸಾಂಸ್ಕೃತಿಕ ಕಲ್ಪನೆ ಕಟ್ಟಿರುವ ವಿಚಾರ ಮುಖ್ಯವಾದ್ದು. ಹೀಗೆ ತನ್ನ ಪರಿಸರದಲ್ಲೇ ಸಕಲ ವಿಶ್ವದ ಸಾಧ್ಯತೆಗಳನ್ನು ಅಂಥ ವಿಶ್ವದ ಭಾಗವಾಗಿ ತಾನು ಬದುಕುವ ಪರಿಸರವನ್ನೂ ಕಾಣುವ ಈ ಮನೋಭಾವ ಮೂಲತಃ ಡೆಮಾಕ್ರಟಿಕ್, ಮಾನವೀಯ ಜೀವಪರ ನಿಲುವುಗಳುಳ್ಳದ್ದು ಎಂದು ಬೇರೆ ಹೇಳಬೇಕಾಗಿಲ್ಲ.

ವಸಾಹಾತುಶಾಹಿ ಪರಿಣಾಮವನ್ನು ನಮ್ಮ ಚಿಂತನೆಗಳಲ್ಲೂ ಅರಿವಿನ ನೆಲೆಗಳಲ್ಲೂ ತೊಡೆದು ಹಾಕುವುದು ನಮ್ಮ ಹೊಸ ಶೋಧನೆಯ ಮುಖ್ಯ ಅವಶ್ಯಕತೆಗಳಲ್ಲೊಂದು. ಪರ್ಯಾಯ ಚಿಂತನೆಯೂ ಈ ಅರಿವಿನ ಶೋಧದ ಒಂದು ಮುಖ. ಸುಬ್ಬಣ್ಣ ತಮ್ಮ ಬದುಕಿನ ಆಯ್ಕೆಗಳಲ್ಲಿ, ತಮ್ಮ ಪರಿಸರದ ಸಂಘಟನೆಗಳಲ್ಲಿ ಬರಹ ಚಿಂತನೆಗಳಲ್ಲಿ-ಬದುಕೇ ಕೃತಿಯಾದ ತಮ್ಮ ಜೀವನಾಭಿವ್ಯಕ್ತಿಯಲ್ಲಿ ಈ ಅನ್ವೇಷಣೆಯನ್ನು ಮಾಡುತ್ತಿರುವವರು. ಈ ಹಾದಿಯಲ್ಲಿ ಮ್ಯಾಗ್‌ಸೆಸೆ, ಕಾಳಿದಾಸ ಸಂಮಾನ ಮೊದಲಾದ ಅನೇಕಾನೇಕ ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬಂದಿವೆ. ಪದ್ಮಭೂಷಣ ಮೊದಲಾದ ಇನ್ನೂ ಅನೇಕ ಪ್ರಶಸ್ತಿಗಳನ್ನು ಅವರು ನಯವಾಗಿ ತಿರಸ್ಕರಿಸಿದ್ದಾರೆ.

ಸುಬ್ಬಣ್ಣನವರ ಇಂತಹ ಅನ್ವೇಷಣೆ, ಭಾರತ ಸ್ವಾತಂತ್ರ್ಯಾನಂತರ ತನ್ನನ್ನು ತಾನು ತಿಳಿದು ಅರಿತುಕೊಳ್ಳಲು ಮಾಡುವ ಪ್ರಾರಂಭದ ಸೂಚನೆಗಳು. ಪ್ರತಿಯೊಂದು ದೇಶವೂ ತನ್ನ ಆತ್ಮವನ್ನು ತಾನು ತಿಳಿದುಕೊಂಡೇ ತನ್ನ ಮೈಮನಗಳನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಉದ್ದೇಶ ಎಷ್ಟೇ ಒಳ್ಳೆಯದಿದ್ದರೂ ವಿಚಾರಗಳು ಎಷ್ಟು ಮಹತ್ವದ್ದಾದರೂ ಪರರಿಂದ ಈ ಕೆಲಸ ಆಗದು. ದೇಶದೊಳಗಿನ ಜನರೇ ಈ ಅರಿವನ್ನು ಮೈಗೂಡಿಸಿಕೊಳ್ಳಬೇಕು. ಇಂಡಿಯಾ ದೇಶ ತನ್ನ ಆತ್ಮವನ್ನು ತಾನು ತಿಳಿದುಕೊಂಡು ತನ್ನ ಮೈಮನಗಳನ್ನು ಬೆಳೆಸಿಕೊಳ್ಳಲು ಗಾಂಧೀಜಿಯಂತಹವರಲ್ಲಿ ಪ್ರಾರಂಭಿಸಿದ ಹೆಚ್ಚು ವ್ಯಾಪಕವಾದ ಪ್ರಯತ್ನಗಳನ್ನು ವಿಭಿನ್ನ ನೆಲೆಗಳಲ್ಲಿ ಸುಬ್ಬಣ್ಣನಂತಹವರ ಮೂಲಕ ಮುಂದುವರಿಸುತ್ತಿದೆ. ಸಾಬರಮತಿ ಆಶ್ರಮದ ಪ್ರಯೋಗ ದೇಶಕ್ಕೊಂದು ಮಾದರಿಯಂತೆ ನಿರ್ಮಾಣಗೊಂಡುದಾದರೆ, ಹೆಗ್ಗೋಡಿನಲ್ಲಿ ನೀನಾಸಮ್ ಸಹಜವಾಗಿ ಅರಳಿದ ಒಂದು ಕ್ರಿಯೆ. ಸುಬ್ಬಣ್ಣನವರಿಗೆ ಇದು ತನ್ನ ಬದುಕಿನ ಒಂದು ಭಾಗ. ಇಂಡಿಯಾಕ್ಕೆ ಸುಬ್ಬಣ್ಣ ತನ್ನ ಇಂತಹ ಹುಡುಕಾಟದ ಒಂದು ಭಾಗ. ಇದು ನಮ್ಮ ಕಾಲದಲ್ಲಿ ಕನ್ನಡದಲ್ಲಿ ನಡೆಯುತ್ತಿರುವುದರಿಂದ ನಮಗೂ ಈ ಅನ್ವೇಷಣೆಯಲ್ಲಿ ಭಾಗವಹಿಸಲು ಸ್ಪಷ್ಟ ಹೊಳಹುಗಳು ದೊರೆತಿವೆ.

ಕೆ.ವಿ.ಸುಬ್ಬಣ್ಣ ಅವರ ಕೃತಿಗಳು

೧. ಕೈಲಾಸಂ ದರ್ಶನ (೧೯೫೧) (ಸಂಪಾದಿತ), ವಿಮರ್ಶಾತ್ಮಕ ಲೇಖನಗಳ ಸಂಗ್ರಹ, ನೀಲಕಂಠೇಶ್ವರ ನಾಟ್ಯಸೇವಾ ಸಂಘ, ಹೆಗ್ಗೋಡು.
೨. ನಾವು ತಿನ್ನುವ ಅಡಿಕೆ (೧೯೫೨) ಅಕ್ಷರ ಪ್ರಕಾಶನ ಹೆಗ್ಗೋಡು.
೩. ಜೇನು ಸಾಕುವ ಬಗೆ (೧೯೫೨) ವಯಸ್ಕರ ಶಿಕ್ಷಣ ಸಮಿತಿ, ಮೈಸೂರು (ಎರಡು ಪುಸ್ತಕಗಳು)
೪. ಗೋರ್ಕಿಯ ಕಥೆಗಳು, (೧೯೫೩), (ಅನು:) ಮೊದಲ ಪ್ರಕಾಶಕರು: ಜನಶಕ್ತಿ ಪ್ರಕಾಶನ, ಬೆಂಗಳೂರು, ಮುಂದೆ ಅಕ್ಷರ ಪ್ರಕಾಶನದಿಂದ ಮರುಮುದ್ರಣ.
೫. ಬಾಗಿನ (೧೯೫೪) (ಸಂ. ಹಾ.ಮಾ. ನಾಯಕರೊಂದಿಗೆ) ಎಸ್.ವಿ. ರಂಗಣ್ಣನವರ ಸಂಭಾವನಾ ಗ್ರಂಥ, ಮಹಾರಾಜಾ ಕಾಲೇಜು, ಮೈಸೂರು.

೬. ಅಭಿಸಾರ (೧೯೫೭), (ರೇಡಿಯೋ ನಾಟಕಗಳ ಸಂಕಲನ) ನೀಲಕಂಠೇಶ್ವರ ನಾಟ್ಯ ಸೇವಾ ಸಂಘ.

೭. ಹೂವು ಚೆಲ್ಲಿದ ಹಾದಿಯಲ್ಲಿ, (೧೯೫೭) ಕವಿತೆಗಳು, ಅಕ್ಷರ ಪ್ರಕಾಶನ, ಹೆಗ್ಗೋಡು.

೮. ದಶರೂಪಕ (೧೯೫೮) (ಧನಂಜಯನ ದಶರೂಪಕದ ಅನುವಾದ- ಸಂಸ್ಕೃತದಿಂದ ೧೯೯೨ರಲ್ಲಿ ಮರುಮುದ್ರಣ ಅಕ್ಷರ ಪ್ರಕಾಶನ, ಹೆಗ್ಗೋಡು).

೯. ಅವರು ನೀಡಿದ ದೀಪ (೧೯೫೮) (ಜಾನಪದ ಸಾಹಿತ್ಯ ಪರಿಚಯ), ಅಕ್ಷರ ಪ್ರಕಾಶನ, ಹೆಗ್ಗೋಡು.

೧೦. ರಾಜಕೀಯದ ಮಧ್ಯೆ ಬಿಡುವು (೧೯೭೦) (ಲೋಹಿಯಾ ಪುಸ್ತಕದ ಅನುವಾದ) ಅಕ್ಷರ ಪ್ರಕಾಶನ, ಹೆಗ್ಗೋಡು.

೧೧. ಕಾಡಿನಲ್ಲಿ ಕಥೆ (೧೯೭೧) (ಮಕ್ಕಳ ನಾಟಕ), ಅಕ್ಷರ ಪ್ರಕಾಶನ, ಹೆಗ್ಗೋಡು.

೧೨. ಚಲನಚಿತ್ರದ ಮಹಾನೌಕೆ (೧೯೭೪) (ಐಸೆನಸ್ಟೈನ್‌ನ ಬ್ಯಾಟಲ್‌ಶಿಪ್ ಪೊಟೆಂಕಿನ್ ಚಿತ್ರ ಲೇಖನದ ಅನುವಾದ) ಅಕ್ಷರ ಪ್ರಕಾಶನ, ಹೆಗ್ಗೋಡು.

೧೩. ಅಂಚೆಮನೆ (೧೯೭೪) (ಮಕ್ಕಳ ನಾಟಕ-ರವೀಂದ್ರನಾಥ ಟಾಗೋರ್ ನಾಟಕದ ರೂಪಾಂತರ) ಅಕ್ಷರ ಪ್ರಕಾಶನ, ಹೆಗ್ಗೋಡು.

೧೪. ಭಗವದಜ್ಜುಕೀಯ ಮತ್ತು ಸೂಳೆ ಸನ್ಯಾಸಿ(೧೯೭೭) (ಸಂಸ್ಕೃತ ನಾಟಕದ ಅನುವಾದ ರೂಪಾಂತರ) ಅಕ್ಷರ ಪ್ರಕಾಶನ, ಹೆಗ್ಗೋಡು.

೧೫. ಬೈಸಿಕಲ್ ಥೀವ್ಸ್ (೧೯೭೯) ಡಿಸಿಕಾನ ಚಿತ್ರಲೇಖನದ ಅನು; ಅಕ್ಷರ ಪ್ರಕಾಶನ.

೧೬. ನಾಟಕ ಮತ್ತು ಸಿನೆಮಾ (ಪ್ರಬಂಧ) ಅಕ್ಷರ ಪ್ರಕಾಶನ, ಹೆಗ್ಗೋಡು.

೧೭. ಅಭಿವೃದ್ಧಿಗಾಗಿ ಸಿನೆಮಾ (೧೯೭೯) (ಪ್ರಬಂಧ), ಅಕ್ಷರ ಪ್ರಕಾಶನ, ಹೆಗ್ಗೋಡು.

೧೮. ರಶೋಮನ್ (೧೯೮೦) (ಕುರೋಸೋವನ ಚಿತ್ರಲೇಖನದ ಅನುವಾದ).

೧೯. ಸಿನಿಮಾದ ದೂರ ಚಿತ್ರ ಸಮೀಪ ಚಿತ್ರಗಳು (೧೯೮೦) (ಪರಿಚಯ ಸಹಲೇಖನ ಅಕ್ಷರ ಪ್ರಕಾಶನ)

೨೦. ಸಿನಿಮಾದ ಯಂತ್ರ ಭಾಷೆ (೧೯೮೧) (ಪರಿಚಯ ಸಹಲೇಖನ ಅಕ್ಷರ ಪ್ರಕಾಶನ, ಹೆಗ್ಗೋಡು).

೨೧. ಪಥೇರ ಪಾಂಚಾಲಿ (೧೯೮೦) (ಚಿತ್ರ ಲೇಖನದ ಅನುವಾದ) ಅಕ್ಷರ ಪ್ರಕಾಶನ.

೨೨. ಮಾರ್ಕ್ಸ್ ಮತ್ತು ಗಾಂಧಿ (೧೯೮೦) (ಮಧುದಂಡವತೆ ಅವರ ಕೃತಿಯ ಅನುವಾದ. ಸಹ ಅನುವಾಕರು ಕೆ.ವಿ. ಅಕ್ಷರ) ಅಕ್ಷರ ಪ್ರಕಾಶನ.

೨೩. ಬೆಟ್ಟಕ್ಕೆ ಚಳಿಯಾದರೆ (೧೯೮೧) (ಮಕ್ಕಳ ನಾಟಕ) (ಸಹ ಲೇಖಕರು ಕೆ.ವಿ. ಅಕ್ಷರ)

೨೪. ರಂಗದಲ್ಲಿ ಅಂತರಂಗ (೧೯೮೨) (ಸ್ತಾನಿಸ್ಲಾವಸ್ಕಿ ಪುಸ್ತಕ ಅನುವಾದ) ಅಕ್ಷರ ಪ್ರಕಾಶನ, ಹೆಗ್ಗೋಡು.

೨೫. ರಂಗಮಾಧ್ಯಮ-ಚಿತ್ರಮಾಧ್ಯಮ (೧೯೮೩) (ವಿಮರ್ಶೆ) ಅಕ್ಷರ ಪ್ರಕಾಶನ.

೨೬. ಜಯಂಟ್ ಮಾಮಾ (೧೯೮೪) (ಮಕ್ಕಳ ನಾಟಕ) (ಆಸ್ಕರ ವೈಲ್ಡನ...ಎಂಬ ಕಥೆಯನ್ನು ಆಧರಿಸಿದ್ದು) ಅಕ್ಷರ ಪ್ರಕಾಶನ, ಹೆಗ್ಗೋಡು.

೨೭. ಝೆನ್ (೧೯೮೫) (ಝೆನ್ ಬುದ್ಧಿಸಂ ಪರಿಚಯ) ಅಕ್ಷರ ಪ್ರಕಾಶನ, ಹೆಗ್ಗೋಡು.

೨೮. ನನ್ನ ಪ್ರೀತಿಯ ಹಿರೋಶಿಮಾ (೧೯೮೫) (ಅಲೆನ್‌ರೆನೈನ ಚಿತ್ರ ಲೇಖನದ ಅನುವಾದ) ಅಕ್ಷರ ಪ್ರಕಾಶನ, ಹೆಗ್ಗೋಡು.

೨೯. ತಾಯಿ (೧೯೮೨) (ಬ್ರೆಕ್ಟ್ ನಾಟಕದ ಅನುವಾದ ರೂಪಾಂತರ) ಅಕ್ಷರ ಪ್ರಕಾಶನ, ಹೆಗ್ಗೋಡು.

೩೦. ಸೆಜುವಾನ್ ನಗರದ ಸಾಧ್ವಿ (೧೯೮೮) (ಬ್ರೆಕ್ಟ್ ನಾಟಕದ ಅನುವಾದ ರೂಪಾಂತರ) ಅಕ್ಷರ ಪ್ರಕಾಶನ, ಹೆಗ್ಗೋಡು.

೩೧. ಲೋಕಶಾಕುಂತಲ (೧೯೮೮) (ಕಾಳಿದಾಸ ಅಭಿಜ್ಞಾನ ಶಾಕುಂತಲಮ್ ನಾಟಕದ ರೂಪಾಂತರ) ಅಕ್ಷರ ಪ್ರಕಾಶನ, ಹೆಗ್ಗೋಡು.

೩೨. ವೊಯ್‌ಜೆಕ್ (೧೯೯೨) ಬುಕ್ನರನ ಜರ್ಮನ್ ನಾಟಕದ ಅನುವಾದ. ಅಕ್ಷರ ಪ್ರಕಾಶನ, ಹೆಗ್ಗೋಡು.

೩೩. ವಿದಿಶೆಯ ವಿದೂಷಕ (೧೯೯೨) (ಕಾಳಿದಾಸನ ಮಾಲವಿಕಾಗ್ನಿ ಮಿತ್ರ ನಾಟಕದ ರೂಪಾಂತರ) ಅಕ್ಷರ ಪ್ರಕಾಶನ, ಹೆಗ್ಗೋಡು.

೩೪. ಸಾಹೇಬರು ಬರುತ್ತಾರೆ (೧೯೮೬) (ಗೋಗೋಲನ ದಿ ಇನ್ಸ್‌ಪೆಕ್ಟರ್ ಜನರಲ್ ನಾಟಕದ ರೂಪಾಂತರ) ಸಹ ಲೇಖಕರು ಕೆ.ವಿ. ಅಕ್ಷರ, ಅಕ್ಷರ ಪ್ರಕಾಶನ.

೩೫. ಅಥೆನ್ಸಿನ ಅರ್ಥವಂತ (೧೯೯೪) ಶೇಕ್ಸ್‌ಪಿಯರ್‌ನ ಟೈಮೊನ್ ಆಫ್ ಅಥೆನ್ಸ್ ನಾಟಕದ ಅನುವಾದ. ಅಕ್ಷರ ಪ್ರಕಾಶನ, ಹೆಗ್ಗೋಡು.

೩೬. ಕುವೆಂಪುಗೆ ಪುಟ್ಟ ಕನ್ನಡಿ, ಕರ್ನಾಟಕ ಸಾಹಿತ್ಯ ಅಕಾಡೆಮಿ.

೩೭. ಕೆ.ವಿ. ಸುಬ್ಬಣ್ಣನವರ ಆಯ್ದ ಬರಹಗಳು, ಸಂ: ಟಿ.ಪಿ. ಅಶೋಕ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೮. ನಮ್ಮ ತವಕ ತಲ್ಲಣಗಳು (ಸಂಸ್ಕೃತಿ ಚಿಂತನೆ ಬರಹಗಳು) (೧೯೯೮) ಅಭಿನವ ಪ್ರಕಾಶನ, ಬೆಂಗಳೂರು.

೩೯. ಸ್ವರಾಜ್ಯದ ಹಾದಿ ಹೆಜ್ಜೆಗಳು (ಗಾಂಧಿ ಬರಹಗಳ ಅನುವಾದ), ಕರ್ನಾಟಕ ಸಂಘ, ಪುತ್ತೂರು.

೪೦. ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು; ಅಕ್ಷರ ಪ್ರಕಾಶನ, ಹೆಗ್ಗೋಡು.

ಸುಬ್ಬಣ್ಣನವರು ನಿರ್ದೇಶಿಸಿದ ನಾಟಕಗಳು:

೧. ೧೯೪೮ ರಕ್ತಾಕ್ಷಿ
೨. ೧೯೫೩ ಷಾಜಹಾನ್
೩. ಚೋಮನದುಡಿ
೪. ಮೇಘಧೂತ
೫. ಬೆಟ್ಟಕ್ಕೆ ಚಳಿಯಾದರೆ
೬. ಜಯಂಟ್ ಮಾಮಾ
೭. ಹೆಡ್ಡಾಯಣ
೮. ಊರು ಭಂಗ
೯. ಯಾರೋ ಅಂದರು
೧೦. ಲೋಕಶಾಕುಂತಲ
೧೧. ಹ್ಯಾಮ್ಲೆಟ್
೧೨. ಜಂಝಾವಾತ
೧೩. ಸಿರಿಸಂಪಿಗೆ

ಸುಬ್ಬಣ್ಣನವರ ಅಪ್ರಕಟಿತ ನಾಟಕಗಳು:

ಚಾಣುಕ್ಯ ಪ್ರಪಂಚ ವಿಶಾಖದತ್ತನ ಮುದ್ರಾರಾಕ್ಷಸ, ಆಧಾರಿತ

ಮಿಸ್ ಸದಾರಮೆಬೆಳ್ಳಾವೆ ನರಸಿಂಹ ಶಾಸ್ತ್ರಿಗಳ ಸದಾರಮಾ ನಾಟಕ ಆಧರಿಸಿ

ಮಾಮಾಮೂಷಿ ಮೊಲಿಯೆರ್‌ನ ಬೂರ್ಜ್ವಾಮ್ಯಾನ್ ಅನುವಾದ

ಕೆಂಪು ಕಣಗಿಲೆ ರವೀಂದ್ರನಾಥ ಠಾಗೂರರ ರಕ್ತ ಕರಬೀರ ಅನುವಾದ

ಊರುಭಂಗ ಭಾಸನ ಊರುಭಂಗ ಆಧರಿಸಿ.

ನೀನಾಸಂ ತಿರುಗಾಟ ತಂಡ ಪ್ರದರ್ಶಿಸಿದ ನಾಟಕಗಳು:

೧. ಸಾಂಬಶಿವ ಪ್ರಹಸನ
೨. ಮಣ್ಣಿನ ಬಂಡಿ
೩. ವಿಗಡವಿಕ್ರಮ ಚರಿತ
೪. ಲೋಕಶಾಕುಂತಲ
೫. ನೀಲಿ ಕುದುರೆ
೬. ತುಕ್ರನ ಕನಸು
೭. ಮಿಸ್ ಸದಾರಮೆ
೮. ಈ ಕೆಳಗಿನವರು
೯. ಮ್ಯಾಕ್‌ಬೆತ್
೧೦. ಮೂರು ಕಾಸಿನ ಸಂಗೀತ ನಾಟಕ
೧೧. ಸೆಝುವಾನ್ ನಗರದ ಸಾಧ್ವಿ
೧೨. ಹಬ್ಬದ ಹನ್ನೆರಡನೇ ರಾತ್ರಿ
೧೩. ಭಾಸಭಾರತ
೧೪. ತಲೆದಂಡ
೧೫. ಅಥೆನ್ಸಿನ ಅರ್ಥವಂತ
೧೬. ಸಂಗ್ಯಾಬಾಳ್ಯ
೧೭. ಆಲಿಬಾಬಾ ಮತ್ತು ನಲವತ್ತು ಕಳ್ಳರು
೧೮. ಬೆಪ್ಪುತಕಡಿ ಬೋಳೇಶಂಕರ
೧೯. ಚಾಣಕ್ಯ ಪ್ರಪಂಚ
೨೦. ಲಿಯರ್ ಮಹಾರಾಜ
೨೧. ಹೂಹುಡುಗಿ
೨೨. ಸ್ವಪ್ನ ನಾಟಕ
೨೩. ಗೋಕುಲ ನಿರ್ಗಮನ
೨೪. ಕಿರಗೂರಿನ ಗಯ್ಯಾಳಿಗಳು
೨೫. ತುಘಲಕ್
೨೬. ಸಾಹೇಬರು ಬರುತ್ತಾರೆ.
೨೭. ದಾಂಧೂಂ ಸುಂಟರಗಾಳಿ
೨೮. ನಾಯಿಮರಿ ಕಥೆ
೨೯. ಆಷಾಢದಲ್ಲಿ ಒಂದು ದಿನ
೩೦. ಪುಂಟಿಲಾ
೩೧. ಆ ಊರು ಈ ಊರು
೩೨. ಕನಕಾಗಮನ
೩೩. ತದ್ರೂಪಿ
೩೪. ಚಿದಂಬರ ರಹಸ್ಯ
೩೫. ಪಂಜರ ಶಾಲೆ
೩೬. ಷಾಜಹಾನ್
೩೭. ಪ್ರತಿಮಾ ನಾಟಕ
೩೮. ಮಾಮಾಮೂಷಿ
೩೯. ಅಗ್ನಿ ಮತ್ತು ಮಳೆ
೪೦. ಮೀಡಿಯಾ
೪೧. ಅಪಲ್ಟೆ
೪೨. ಹೊಸ ಸಂಸಾರ
೪೩. ಮಹಾತ್ಮ
೪೪. ಸಹ್ಯಾದ್ರಿಯ ಕಾಂಡ

೪೫. ಜತೆಗಿರುವನು ಚಂದಿರ
೪೬. ಚಿರೇ ಬಂದಿವಾಡೆ
೪೭. ಅಂತಿಗೊನೆ
೪೮. ಸಕ್ಕರೆ ಗೊಂಬೆ
೪೯. ಕೆಂಪು ಕಣಗಿಲೆ
೫೦. ಜುಜುಬಿ ದೇವರ ಜುಗಾರಿಯಾಟ
೫೧. ಹದ್ದು ಮೀರಿದ ಹಾದಿ

ಕೆ.ವಿ. ಸುಬ್ಬಣ್ಣ ಅವರು ಒಪ್ಪಿಕೊಂಡ ಪ್ರಶಸ್ತಿಗಳು

ಸೋವಿಯತ್ ರಶ್ಯಾ ಪ್ರಶಸ್ತಿ-ಗಾರ್ಕಿಕತೆಗಳ ಅನುವಾದಕ್ಕೆ

ಮ್ಯಾಗ್‌ಸೆಸೆ ಪ್ರಶಸ್ತಿ-ಅಂತರಾಷ್ಟ್ರೀಯ

ಕಾಳಿದಾಸ ಸಂಮಾನ

ಕರ್ನಾಟಕ ಸಂಘ ಶಿವಮೊಗ್ಗ - ಗೌರವ ಸದಸ್ಯತ್ವ ೨೩.೧೧.೦೧

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ - 'ಕವಿರಾಜ ಮಾರ್ಗ' ಮತ್ತು 'ಕನ್ನಡ ಜಗತ್ತು' ಕೃತಿಗೆ

ರಂಗಧಾಮ - ಅಭಿನಂದನ ಗ್ರಂಥ (ಸಂ) ಶ್ರೀ ಟಿ. ಮಹಾಬಲೇಶ್ವರ ಭಟ್ಟ

ಮೊದಲು ಪದ್ಮಭೂಷಣ ಪ್ರಶಸ್ತಿಗೆ ಹೆಸರು ಸೂಚಿಸುವ ಸೂಚನೆ ಬಂದಾಗ, ನಿರಾಕರಿಸಿದ್ದ ಸುಬ್ಬಣ್ಣ, ಇತ್ತೀಚೆಗೆ ಪದ್ಮಶ್ರೀ ಪ್ರಶಸ್ತಿ ಪ್ರಕಟವಾದಾಗ, ತಿರಸ್ಕರಿಸುವುದೂ ಒಂದು ಅಹಂಕಾರವಾಗುತ್ತದೆ ಎಂಬ ಕಾರಣಕ್ಕೆ ತಟಸ್ಥರಾಗುಳಿದರು. ಆದರೆ, ಪ್ರಶಸ್ತಿ ಸ್ವೀಕಾರಕ್ಕೆ ದಿಲ್ಲಿಗೆ ಹೋಗಲಿಲ್ಲ. ಎಂದಿನ ಪದ್ಧತಿಯಂತೆ ತಾ. ೧೬.೭.೨೦೦೫, ಶನಿವಾರ ರಾತ್ರಿ ಊಟದ ನಂತರ ಅಕ್ಷರ ಅವರೊಡನೆ ಮಾತಾಡುತ್ತಿದ್ದು, ಅವರು ಮಹಡಿಗೆ ಹೋದನಂತರ, ನೀರೊಲೆಯಲ್ಲಿ ನಿಗಿನಿಗಿಸುತ್ತಿದ್ದ ಕೆಂಡದ ಮುಂದೆ ಕೈ ಕಾಸುತ್ತ ಕುಳಿತವರು, ಕೂಗಿಕೊಂಡಂತಾಗಿ, ಮನೆಯವರು ಧಾವಿಸಿ ಹಿಡಿದುಕೊಳ್ಳುವಷ್ಟರಲ್ಲಿ ಜೀವನ ನಾಟಕದ ಪಾತ್ರ ಮುಗಿಸಿದ್ದರು.

□□

ಸಾಂಸ್ಕೃತಿಕ ಕ್ಷೇತ್ರ ಯಾತ್ರಿ ಶಂಬಾ



❑ ಡಾ. ನಾಗಮಣಿ ಎಸ್.

ಕನ್ನಡ ನಾಡು-ನುಡಿಯ ಸಂಶೋಧನೆ ಹಾಗೂ ಭಾರತೀಯ ಸಂಸ್ಕೃತಿಯ ಮೂಲದ ಬಗೆಗಿನ ಚಿಂತನೆಗೆ ತಮ್ಮ ಬದುಕಿನ ಬಹುಭಾಗವನ್ನು ವಿನಿಯೋಗಿಸಿದ ಡಾ. ಶಂಕರ ಬಾಳದೀಕ್ಷಿತ ಜೋಶಿಯವರು ಶಂಬಾ ಜೋಶಿ ಎಂದೇ ಹೆಸರಾದವರು. ಶಂಬಾ ಅವರು ನಮ್ಮ ನಾಡಿನ ಶ್ರೇಷ್ಠ ಜ್ಞಾನೋಪಾಸಕ, ಸತ್ಯದ ಆರಾಧಕ, ನಿರ್ಭೀತ ಲೇಖಕರೆನಿಸಿದ್ದವರು ಪವಾಡಗಳನ್ನು ಪವಾಡ ಪುರುಷರನ್ನು ನಂಬದ ನಿಷ್ಠಾವಂತ ವಿಚಾರವಾದಿ. ಬೇರೊಂದು ಮಾತಿನಲ್ಲಿ ಹೇಳುವುದಾದರೆ ಸತ್ಯದ ಪ್ರಯೋಗ ಶಾಲೆಯ ಧೀಮಂತ ವಿಜ್ಞಾನಿ. ಒಂದು ಕಾಲದಲ್ಲಿನ ಅವರ ಇಡಿಯ ಜೀವಿತ ಸಾಮಾನ್ಯನ ಅವಸ್ಥೆಯಲ್ಲಿ ಉಳಿದುಬಿಡಬಹುದಾಗಿತ್ತು. ಆದರೆ ಶಂಬಾ ಅವರೇ ಹೇಳುವಂತೆ "ಏನೋ ಸಂಸ್ಕಾರ ಬಲದಿಂದ ಚೇತರಿಸಿಕೊಂಡ ನನ್ನೊಳಗಿನ, ಜ್ಞಾನದ, ಹಸಿವಿನ, ಚಿದಗ್ನಿಯ ಒಂದು ಕಿಡಿಯಿಂದಾಗಿ ನನ್ನ ಬದುಕು ಬಂಗಾರವಾಗುವ ಮಾರ್ಗ ಕಂಡಿತು." ಇದು ಅವರ ಬದುಕಿನ ತತ್ವವೇ ಆಗಿದೆ.

ಧಾರವಾಡದ ಸಾಧನಕೇರಿ ಒಂದು ಸಾಹಿತ್ಯಿಕ ತಪೋಭೂಮಿ. ಏಕೆಂದರೆ ೩೦ರ ದಶಕದಲ್ಲಿ ಗೆಳೆಯರ ಗುಂಪಿನ ಅನೇಕ ಸಾಹಿತಿಗಳು ಇಲ್ಲಿ ವಾಸವಾಗಿದ್ದರು. ನಂತರದಲ್ಲಿ ಕೆಲವರು ಬೇರೆ ಬೇರೆ ಕಡೆಗೆ ಹೊರಟುಹೋದರೂ ಆಲೂರು ವೆಂಕಟರಾಯರು, ದ.ರಾ. ಬೇಂದ್ರೆ ಹಾಗೂ ಶಂಬಾ ಜೋಶಿ ಸಾಧನಕೇರಿಯಲ್ಲಿಯೇ ನೆಲೆ ನಿಂತವರು. ಅದರಲ್ಲೂ ಶಂಭಾ ಜೋಶಿ ಹಾಗೂ ದ.ರಾ. ಬೇಂದ್ರೆಯವರು ಹುಟ್ಟಿದ್ದು ೧೮೯೬ರ ಜನವರಿ ತಿಂಗಳಿನಲ್ಲಿ ಅವರಿಬ್ಬರಲ್ಲೂ ಅನೇಕ ಸ್ವಾಮನ್ಯಗಳ ನಡುವೆ ವಿಭಿನ್ನ ನೆಲೆಗಳನ್ನು ಗುರುತಿಸಬಹುದು. ಇಬ್ಬರು ಸಾಧನೆಯ ಸೀಮೆ ದಾಟಿದ್ದು ಸಾಧನಕೇರಿಯಲ್ಲಿ. ಮರಾಠಿ ಪರಿಸರದಲ್ಲಿ ಬೆಳೆದು, ಎರಡು ಭಾಷೆಯಲ್ಲಿ ವಿದ್ವತ್ತನ್ನು ಪಡೆದು ಕನ್ನಡಕ್ಕಾಗಿ ತುಡಿದವರು-ದುಡಿದವರು. ವಿಭಿನ್ನ ದಿಕ್ಕಿನಲ್ಲಿ ಏರಿದ ಎತ್ತರವು ಒಂದೇ. ಸಾಹಿತ್ಯ ವೃಕ್ಷದ ಒಂದು ಕೊಂಬೆ ಭಾವನೆಯ ಬಾನೆತ್ತರಕ್ಕೇರಿ ವಿಹರಿಸಿದರೆ, ಇನ್ನೊಂದು ಬೇರಿನ ಆಳಕ್ಕಿಳಿದು ಸಾಂಸ್ಕೃತಿಕ ಯಾನ ನಡೆಸಿತು. ಹೀಗೆ ವರಕವಿ ಬೇಂದ್ರೆ-ಜ್ಞಾನೋಪಾಸಕ ಶಂಬಾ ಕನ್ನಡದ ಪ್ರತಿಭೆಯ ಎರಡು ಮುಖಗಳು.

ವಿಳಾಸ : ಮಾತೃಶ್ರೀ ಮಹಡಿ, ಕೋಟೆರಸ್ತೆ ಶಿವಮೊಗ್ಗ-೫೭೭೨೦೧

ಆದರೆ ಶಂಬಾ ಜೋಶಿಯವರು ಸಾಧನಕೇರಿಯ ತಪೋಭೂಮಿಗೆ ಬಂದದ್ದು ಇನ್ನೊಂದು ತಪೋಭೂಮಿಯಿಂದ ಎಂದರೆ ಗುರ್ಲಹೊಸೂರಿನಿಂದ. ಈಗಿನ ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಮಲಪ್ರಭಾ ನದಿಯ ದಂಡೆಯಲ್ಲಿದ್ದ ಒಂದು ಗ್ರಾಮ ಗುರ್ಲ ಹೊಸೂರು. ಶಂಬಾ ಅವರದು ಶ್ರೋತ್ರೀಯ ವಂಶ, ತಂದೆ ಬಾಳದೀಕ್ಷಿತ, ತಾಯಿ ಉಮಾಬಾಯಿ, ಜೋಶಿ ಮನೆತನದ ಹೆಸರು. ಶಂಬಾ ಅವರಿಗಿಟ್ಟ ಹೆಸರು ಶಂಕರ. ಶಂಬಾ ಅವರ ಮನೆಯಲ್ಲಿ ವೈದಿಕ ವಾತಾವರಣವಿತ್ತು. ವೇದದ ನಾದ, ಲಯ, ಪದಗಳ ರಿಂಗಣ ಗುಣಿತ ಅವರ ಮನಸ್ಸಿನ ಮೇಲೆ ಅಚ್ಚೊತ್ತಿದ್ದು ಸಹಜವೇ ಆಗಿತ್ತು. ತಾಯಿ ಉಮಾಬಾಯಿ ಕಿರ್ಲೊಸ್ಕರ್ ನಾಟಕ ಕಂಪನಿಯ ರಂಗ ತಾಲೀಮುಗಳನ್ನು ಕಂಡವರು. ಅಲ್ಲಿನ ಹಾಡು, ಸಂಭಾಷಣೆಗಳನ್ನು ಕಣ್ಣಿಗೆ ಕಟ್ಟುವಂತೆ ಹೇಳುತ್ತಿದ್ದರು. ಹೀಗಾಗಿ ಒಂದೆಡೆ ತಂದೆಯಿಂದ ಬಂದ ವೇದಜ್ಞಾನ, ತಾಯಿಯಿಂದ ಸಂದ ಸಾಹಿತ್ಯ ಜ್ಞಾನ. ಇಷ್ಟೆಲ್ಲಕ್ಕೆ ಪೋಷಕವಾಗಿ ಗುರ್ಲ ಹೊಸೂರಿನ ವಾತಾವರಣ ಶಂಬಾ ಅವರನ್ನು ಬೆಳೆಸಿದವು.

ಅವರು ಹುಟ್ಟಿದ ಗುರ್ಲ ಹೊಸೂರು ಹಿಂದೊಮ್ಮೆ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕಲಾಪಗಳ ತವರೂರೆನಿಸಿತ್ತು. ಕೈವಲ್ಯಾಶ್ರಮದ ಬೋಕೆ ಸ್ವಾಮಿಗಳು ಇರುವವರೆಗೆ ಈ ಊರು ಪುಣ್ಯಕ್ಷೇತ್ರವೆನಿಸಿತ್ತು. ತಮ್ಮ ಗುರುಗಳ ಸಾನಿಧ್ಯದಲ್ಲಿ ಇರಬೇಕೆಂಬ ಹಂಬಲದಿಂದ ಅನೇಕರು ಅಲ್ಲಿಗೆ ಬಂದು ನೆಲೆಸಿದರು. ಅವರಲ್ಲಿ ೨ನೇ ಬಾಜಿರಾಯನ ಸೇನಾಧಿಪತಿ ಬಾಪು ಗೋಖಲೆ, ಸಿರಸಂಗಿ ದೇಸಾಯಿ, ಯಂತ್ರಯೋಗಿ ಕಿರ್ಲೋಸ್ಕರರು ಬೆಳೆದದ್ದು ಅದೇ ಊರಿನಲ್ಲಿ. ಇಂತಹ ದೈವಿ ಪ್ರೇರಣೆಯ ಸಿದ್ಧಪುರುಷರ ಕ್ಷೇತ್ರದಲ್ಲಿ ಶಂಬಾ ತಮ್ಮ ಬಾಲ್ಯವನ್ನು ಕಳೆದರು. ಬೋಕೆ ಮಠದ ಸ್ವಾಮಿಗಳ ಶಿಷ್ಯರಾದ ಶ್ರೀಕರವೇಂದ್ರ ವಾಚೇಂದ್ರಪ್ಪ ಹಾಗೂ ವೆಂಕಣ್ಣಾಚಾರ್ಯರು ಶಂಬಾ ಅವರಲ್ಲಿ ಚಿಕ್ಕಂದಿನಲ್ಲಿ ಆತ್ಮವಿಶ್ವಾಸ ಹುಟ್ಟಿಸಿದವರು. ಅವರಿಬ್ಬರ ಹಾಡು, ಭಜನೆಗಳಿಗೆ ಮನಸೋತವರು ಹಾಗೂ ಪ್ರೇರಣೆಗೆ ಒಳಗಾದವರು ಶಂಬಾ.

ಶಂಬಾ ಅವರು ಏಳು ವರ್ಷದವರಿರುವಾಗಲೇ ಅವರ ತಂದೆ ಪ್ಲೇಗ್ ಬೇನೆಗೆ ಆಹುತಿಯಾದರು. ಒಡಹುಟ್ಟಿದ ೧೩ ಮಕ್ಕಳಲ್ಲಿ ಉಳಿದವರು ಮೂರು ಮಂದಿ ಮಾತ್ರ. ತಂದೆಯ ಮರಣದ ನಂತರ ಬಡತನದಿಂದಾಗಿ ಶಂಬಾ ಅವರ ಶಿಕ್ಷಣ ಬಹಳ ಕುಂಟುತ್ತಲೇ ಸಾಗಬೇಕಾಯಿತು. ೧೯೧೧ರ ಸುಮಾರಿಗೆ ಶಾಲೆಗೆ ಬಂದ ಬಾಳಾಜಿ ಕೃಷ್ಣ ಹಳಪೇಟೆ ಎಂಬ ಮುಖ್ಯಾಧ್ಯಾಪಕರು ಶಂಬಾ ಅವರಲ್ಲಿದ್ದ ಜಿಜ್ಞಾಸೆಯನ್ನು ಗುರುತಿಸಿದರು. ಹೆಚ್ಚಿನ ಓದಿಗಾಗಿ ಸ್ಫೂರ್ತಿ ನೀಡಿದರು. ಮುಂದೆ ೧೯೧೪ರಲ್ಲಿ ಮಲಪ್ರಭೆಗೆ ಮಹಾಪುರ ಬಂದಾಗ ಗುರ್ಲಹೊಸೂರು ಜಲಾವೃತವಾಯಿತು. ಶಂಬಾ

ಅವರಿಗೆ ನೆಲೆ ಇಲ್ಲದಂತಾಯಿತು. ಆಗ ಮನೆಯವರೆಲ್ಲ ಅಜ್ಜಿ ಮನೆ ಇದ್ದ ಪುಣೆಗೆ ಹೋಗಬೇಕಾಯಿತು. ಅಜ್ಜಿ ಜೋಗಳೇಕರ ಮನೆತನದಾಕೆ ಸುಸಂಸ್ಕೃತರು, ಸ್ಥಿತಿವಂತರು ಆಗಿದ್ದರು. ಪುಣೆಗೆ ಹೋದಾಗ ಅಣ್ಣ ಭಾನು ದೀಕ್ಷಿತ ಜೋಶಿ ಅಲ್ಲಿನ ವಾತಾವರಣಕ್ಕೆ ಹೊಂದಿಕೊಂಡು ಬದುಕುವ ದಾರಿ ಕಂಡುಕೊಂಡರು. ಆದರೆ ಶಂಬಾ ಅವರ ಮನಸ್ಸಿಗೆ ಒಗ್ಗಲಿಲ್ಲ. ಈ ನಡುವೆ ಪುಣೆಯಲ್ಲಿದ್ದಾಗಲೇ ಲೋಕಮಾನ್ಯ ತಿಲಕರ ದರ್ಶನ, ಸಾಮೀಪ್ಯ ಲಭ್ಯವಾಯಿತು. ಇದರಿಂದಾಗಿ ಹುಟ್ಟುವಾಗಲೇ ಒಲಿದು ಬಂದಿರಬಹುದಾದ ಸಂಶೋಧನೆಯ ಗೀಳಿನೊಂದಿಗೆ, ತಾವಾಗಿ ಮೈದುಂಬಿಸಿಕೊಂಡ ದೇಶಭಕ್ತಿಯ ಸಂಸ್ಕಾರವನ್ನು ಪಡೆದರು. ಮುಂದೆ ಇದೇ ಅವರು 'ಟಿಳಕ ಕಥಾಮೃತ ಸಾರ' ಬರೆಯಲು ಪರ್ಯಾಯವಾಗಿ ಪ್ರಚೋದನೆ ನೀಡಿತು.

ಹೀಗೆ ಪುಣೆಯಲ್ಲಿ ಇರುವಾಗಲೇ ಪ್ರಾಯದ ಯುವಕ ಶಂಬಾ ಅವರಿಗೆ ಒಂದೆಡೆ ಜ್ಞಾನದ ಜಿಜ್ಞಾಸೆಯು, ದೇಶ ಸೇವೆಯ ಗುಂಗು ಅಂಟಿಕೊಂಡವು. ಆದರೆ ಇನ್ನೊಂದೆಡೆ 'ಹೊಟ್ಟೆಯ ಪಾಡಿಗೆ ಏನು' ಎಂಬ ಚಿಂತೆಯೂ ಕಾಡತೊಡಗಿತು. ಎಷ್ಟು ದಿನವೆಂದು ಪರರನ್ನು ಆಶ್ರಯಿಸಿ ಬದುಕಲು ಸಾಧ್ಯ? ಕೊನೆಗೆ ಶಿಕ್ಷಕರಾಗಬೇಕು, ಸ್ವಾವಲಂಬನೆಯ ಜೀವನ ನಡೆಸಬೇಕು ಎಂದು ನಿರ್ಧರಿಸಿದ ಶಂಬಾ ೧೯೧೬ರಲ್ಲಿ ಧಾರವಾಡದ 'ಸರ್ಕಾರಿ ಟ್ರೈನಿಂಗ್ ಕಾಲೇಜ್'ನಲ್ಲಿ ಪ್ರವೇಶ ಪಡೆದರು. ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದ ಅವರು ೧೯೧೯ರಲ್ಲಿ 'ಟ್ರೈನ್ಡ್ ಕನ್ನಡ ಶಿಕ್ಷಕ' ಎನಿಸಿದರು. ಆ ಕಾಲದ ಉತ್ತಮ ಶಿಕ್ಷಕರೆನಿಸಿದ್ದ ಮ.ಪ್ರ. ಪೂಜಾರ ಹಾಗೂ ಮೂರ್ತಾಚಾರ್ಯರ ಪ್ರಭಾವದಿಂದ ವ್ಯಾಕರಣದಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿದರು. ಆಗ ದೇಶಭಕ್ತರೆಂದು ಹೆಸರಾದ ಬುರ್ಲಿ ಬಿಂದುಮಾಧವ, ಕೇಶವಶರ್ಮ ಗಲಗಲಿ ಅಂಥವರು ಸಹಪಾಠಿಗಳು ಮತ್ತು ಸ್ನೇಹಿತರಾಗಿದ್ದರು. "ಟ್ರೈನಿಂಗ್ ಕಾಲೇಜಿನಲ್ಲಿ ನನ್ನ ಸಂಗಡಿಗರಲ್ಲಿ ದೇಶಾಭಿಮಾನ ತುಂಬುವುದು ನನ್ನ ಒಂದು ಹುಚ್ಚು ಆಗಿದ್ದಿತು" ಎಂದು ಶಂಬಾ ಹೇಳಿದ್ದಾರೆ.

ಅವರು ೧೯೨೦ರಲ್ಲಿ ಮೊದಲು ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯಲ್ಲಿ. ಆಗ ದೇಶದ ತುಂಬಾ ಸ್ವಾತಂತ್ರ್ಯದ ಹಂಬಲ ಹೊತ್ತ ವಾತಾವರಣವಿತ್ತು. ಶಿಕ್ಷಕ ವೃತ್ತಿಯಲ್ಲಿದ್ದ ಶಂಬಾ ಸ್ವಾತಂತ್ರ್ಯ ಸಮರದ ಬಗ್ಗೆ ಬಹಳ ಕಾಳಜಿಯನ್ನು ಹೊಂದಿದ್ದರು. ಹೆಚ್ಚಿನ ವ್ಯಾಸಂಗವಿಲ್ಲದೇ ದೇಶಸೇವೆ ಅಸಾಧ್ಯ ಎಂದು ಅರಿತ ತುಂಬಾ ಇಂಗ್ಲೀಷ್ ಮತ್ತು ಸಂಸ್ಕೃತ ಭಾಷಾಭ್ಯಾಸದ ಕಡೆ ಗಮನ ಹರಿಸಿದರು. ತಮ್ಮ ೨೪ನೇ ವಯಸ್ಸಿನಲ್ಲಿ ಅವರು ಎ.ಬಿ.ಸಿ.ಡಿ.ಯಿಂದ ಇಂಗ್ಲೀಷ್ ಕಲಿಕೆಯನ್ನು ಆರಂಭಿಸಿದರು. ಯಾವ ಗುರುವಿನ ನೆರವಿಲ್ಲದೇ, ತನ್ನರಿವೇ ತನಗೆ ಗುರು ಎಂಬಂತೆ ಇಂಗ್ಲೀಷ್ ಮತ್ತು ಸಂಸ್ಕೃತಗಳ ಆಳವಾದ ಅಭ್ಯಾಸ ಮಾಡಿದರು. ಆ ಭಾಷೆಗಳಲ್ಲಿ

ಬಹುಬೇಗ ಪ್ರಭುತ್ವ ಪಡೆದುಕೊಂಡರು. ಅದೇ ಸಮಯದಲ್ಲಿ ಲೋಕಮಾನ್ಯ ತಿಲಕರ ಮರಣ ಶಂಬಾ ಅವರನ್ನು ದುಃಖದ ಮಡವಿನಲ್ಲಿ ಮುಳುಗಿಸಿತು. ಈ ನೋವಿನಿಂದ ಮೇಲೇಳುವಂತೆ ಚಿಕ್ಕೋಡಿಗೆ ಗಾಂಧೀಜಿಯವರ ಆಗಮನವಾಯಿತು. ತಿಲಕರ ರಾಷ್ಟ್ರೀಯ ಹೋರಾಟದ ಹಂಬಲದೊಂದಿಗೆ ಗಾಂಧೀಜಿಯವರ ರಾಮರಾಜ್ಯದ ಕನಸು ಅವರನ್ನು ಸ್ವಯಂ ಸೇವಕರಾಗುವಂತೆ ಪ್ರೇರೇಪಿಸಿತು. ಈ ಭಾವನಾತ್ಮಕತೆಯಿಂದ ಗಾಂಧೀಜಿಯವರೊಡನೆ ಬೆಳಗಾವಿ, ಧಾರವಾಡದವರೆಗೆ ಪ್ರಯಾಣ ಮಾಡಿದರು.

ಶಂಬಾ ಅವರ ಈ ದೇಶಸೇವೆಯ ಕನಸು ಸರ್ಕಾರದ ಕೆಂಗಣ್ಣಿಗೆ ಗುರಿಯಾಯಿತು. ಅವರನ್ನು ಚಿಕ್ಕೋಡಿಯಿಂದ ಉರಗಗೋಳಕ್ಕೆ ಶಿಕ್ಷೆಯ ವರ್ಗಾವಣೆಗೆ ಒಳಪಡಿಸಲಾಯಿತು. ತಾಲೂಕು ಸ್ಥಳವು ಅಲ್ಲದ ಆ ಪುಟ್ಟ ಹಳ್ಳಿಯಲ್ಲಿ ಕನ್ನಡ ಸಾಹಿತ್ಯಾಭ್ಯಾಸದತ್ತ ಅವರ ಮನಸ್ಸು ಹರಿಯಿತು. ರನ್ನ, ಪಂಪ, ಜನ್ನ, ನಾಗಚಂದ್ರ, ಕುಮಾರವ್ಯಾಸ ಮೊದಲಾದ ಕವಿಗಳ ಮಹಾಕಾವ್ಯಗಳ ಚಿಂತನೆ. ಅವುಗಳಲ್ಲಿದ್ದ ಗಾದೆ, ನಾಣ್ಣುಡಿ, ಪಡೆನುಡಿಗಳ ಸೊಗಸಿನ ಪರಿಶೀಲನೆ ನಡೆಯಿತು. ಗೋವಿಂದ ವೆಂಕಟೇಶ ಚುಳಕಿ ಅವರ ಸ್ನೇಹ ಇದಕ್ಕೆ ಮತ್ತಷ್ಟು ಇಂಬು ಕೊಟ್ಟಿತು. ಹಾಗೂ ಇದೇ ಸಮಯದಲ್ಲಿ ಕನ್ನಡ ಸಂಸ್ಕೃತಿ ಇತಿಹಾಸ ಭಾಷೆಯ ಅಧ್ಯಯನದ ಜೊತೆಗೆ ಅರವಿಂದ, ವಿವೇಕಾನಂದರ ಕೃತಿಗಳ ಪ್ರಭಾವವೂ, ಇವರ ಮೇಲೆ ಆಗಿತ್ತು. ಅರವಿಂದರ ತತ್ವಜ್ಞಾನದ ಸ್ಫೂರ್ತಿ ಪಡೆದ ಶಂಬಾ ಅವರು ಅರವಿಂದರ ಜೀವನವನ್ನು ಕುರಿತು "ಮಹರ್ಷಿ ಅರವಿಂದ ಘೋಷ್ ಇವರ ಸಂಕ್ಷಿಪ್ತ ಚರಿತ್ರವು" ಎಂಬ ಕೃತಿಯನ್ನು ಮೊದಲು ರಚನೆ ಮಾಡಿದರು.

ಏನೇ ಆದರೂ ತಮ್ಮ ಬಾಳಿನ ಗುರಿಯ ಬಗ್ಗೆ ವಿಚಾರ ಮೇಲಿಂದ ಮೇಲೆ ಕಾಡತೊಡಗಿತು. ಸರ್ಕಾರದ ವಶೀಲಿ ತಿಳಿದು ಬದುಕುವುದಕ್ಕೆ ಕಷ್ಟವಾಯಿತು. ಒಂದೆಡೆ ರಾಷ್ಟ್ರಪ್ರೇಮ ಮತ್ತೊಂದೆಡೆ ಬದುಕಿನ ದಾರಿ. ಈ ಎರಡರಲ್ಲಿ ಗಾಂಧೀಜಿಯವರ "ಸತ್ಯದ ಪ್ರಯೋಗಕ್ಕಾಗಿ ನಾನು ಬಾಳುವೆ" ಎಂಬ ಮಾತು ಅವರ ಮನದಾಳದಲ್ಲಿ ನಿಂತಿತು. ಈ ನಿರ್ಧಾರದಲ್ಲಿ ನಾಗಪುರ ಕಾಂಗ್ರೆಸ್ಸಿನ ಸಂದೇಶವನ್ನು ಹರಡಲು ನೌಕರಿ ತೊರೆದು ಹೊರಟ ಸ್ನೇಹಿತರಾದ ಬುರ್ಲಿ ಬಿಂದು ಮಾಧವ ಅವರ ಬಿರುಗಾಳಿಯಂಥ ಸಂಚಾರವೂ ಕಾರಣವಾಯಿತು. "ನಾಡಿಗಾಗಿ ಏನಾದರೂ ಮಾಡಬೇಕು, ನಿಜವರಿತು ಬಾಳಬೇಕು" ಎಂದು ತೀರ್ಮಾನಿಸಿದರು. ಆಗ ಶಂಬಾ ತಮ್ಮ ನೌಕರಿಗೆ ರಾಜೀನಾಮೆ ನೀಡಿದರು. ನೆಲೆಯೂರಿ ನಿಲ್ಲಲು ಧಾರವಾಡವನ್ನು ಆಯ್ಕೆ ಮಾಡಿಕೊಂಡರು.

ಆದಾಯಕ್ಕೊಂದು ಮಾರ್ಗವಿಲ್ಲದಿದ್ದರೂ ಅಧ್ಯಯನಕ್ಕೆ, ರಾಷ್ಟ್ರೀಯ ಸೇವೆಗೆ ಇಲ್ಲಿ ತೆರೆದ ಅವಕಾಶ ದೊರೆಯಿತು. ಈ ಮಧ್ಯೆ ಶಂಬಾ ಪಾರ್ವತಿಬಾಯಿ ಅವರೊಡನೆ ವೈವಾಹಿಕ ಜೀವನಕ್ಕೂ ಕಾಲಿಟ್ಟರು. ಸಾಧನಕೇರಿಯಲ್ಲಿ ಅಕ್ಕನ ಮನೆಯಲ್ಲಿ ವಾಸ

ಮದುವೆಯಾಗಿ ಅನೇಕ ತಿಂಗಳು ಕಳೆದಿದ್ದರೂ ತಮ್ಮದೇ ಸಂಸಾರ ಹೂಡಲು ಸಾಧ್ಯವಾಗಿರಲಿಲ್ಲ. ನಂತರ ಪತ್ನಿಯ ಮನೋಸ್ಥೈರ್ಯದಿಂದ ಸ್ವಂತ ಮನೆಯೊಂದನ್ನು ತಮ್ಮ ಕೈಯಾರೆ ಕಟ್ಟಿಕೊಂಡಿದ್ದನ್ನು, ಬದುಕಿನ ಅತ್ಯಂತ ಕಷ್ಟದಲ್ಲಿ ತಮ್ಮ ಬಾಳಸಂಗಾತಿ ಉದ್ದಕ್ಕೂ ಸಹಕರಿಸಿಕೊಂಡು ಬಂದಿದ್ದನ್ನು ಶಂಬಾ ಕೃತಜ್ಞತೆಯಿಂದ ಸ್ಮರಿಸಿರುತ್ತಾರೆ. ಪತಿಯು ಮಾಡುವ ಸಂಶೋಧನೆಯ ಬಗೆಗೆ ಪಾರ್ವತಿ ದೇವಿಯವರಿಗೆ ತುಂಬು ಗೌರವ. ಆ ವಿಷಯದಲ್ಲಿ ಅವರು ಕೊನೆಯವರೆಗೂ ಸಹಕಾರ ನೀಡಿದರು. ಆಗಾಗ್ಗೆ ಶಂಬಾ ಕರುಳ ಬೇನೆಯಿಂದ ನಲುಗಿದಾಗಲೂ ಪತ್ನಿಯ ಸೇವೆ ನಿಸ್ವಾರ್ಥವಾಗಿದೆ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುದವೀಡು ಕೃಷ್ಣರಾಯರು ಸೆರೆಯಲ್ಲಿ ಇದ್ದುದರಿಂದ ಅವರು ನಡೆಸುತ್ತಿದ್ದ 'ಕರ್ನಾಟಕ ವೃತ್ತ' ಮತ್ತು 'ಧನಂಜಯ' ಪತ್ರಿಕೆಗಳಿಗೆ ಸೇರಿಕೊಂಡು ಲೇಖನ ವ್ಯವಸಾಯದಲ್ಲಿ ತೊಡಗಿದ್ದರು. ಅತ್ಯಂತ ಉತ್ಸಾಹದಿಂದ ಖಾದಿ, ಅಸ್ಪೃಶ್ಯೋದ್ಧಾರ ಮುಂತಾದ ವಿಷಯಗಳನ್ನು ಕುರಿತು ವಿವಿಧ ಲೇಖನಗಳನ್ನು ಬರೆದರು. ದಿವಾಕರ ರಂಗರಾಯರು ಸೆರೆಮನೆಯಲ್ಲಿದ್ದಾಗ 'ಕರ್ಮವೀರ' ನಡೆಸುವ ಹೊಣೆ ಹೊತ್ತಿದ್ದ ಆಲೂರು ವೆಂಕಟರಾಯರ ನೆರವಿಗಾಗಿ ಕೆಲಸ ಮಾಡಿದರು. ಕೆಲಕಾಲ 'ಕರ್ಮವೀರ'ದ ಸಂಪಾದಕರಾಗಿಯೂ ದುಡಿದರು. ಹಾಗೂ 'ಜಯ ಕರ್ನಾಟಕ' ಮತ್ತು 'ಜಯಂತಿ' ನಿಯತಕಾಲಿಕಗಳಲ್ಲೂ ಬರೆದರು. ೧೯೨೪ರ ಸಮಯದಲ್ಲಿ ಬೆಳಗಾವಿಯಲ್ಲಿ ನಡೆದ ಮೊದಲ ಕರ್ನಾಟಕ ಏಕೀಕರಣದ ಕೂಗಿಗೆ ಓಗೊಟ್ಟು ಕಾರ್ಯದರ್ಶಿಯಾಗಿ ಶ್ರಮಿಸಿದರು. ಈ ಸಮಾಜ ಸೇವೆ, ಕ್ರಾಂತಿ ವಿಚಾರಗಳಲ್ಲಿ ತೊಡಗಿರುವಾಗಲೇ ಕನ್ನಡ ನಾಡು-ನುಡಿಯ ಬಗ್ಗೆ ಶಂಬಾ ಅವರಿಗೆ ಅದಮ್ಯ ಕುತೂಹಲ ಇತ್ತು. ಅದಕ್ಕಾಗಿ ವಿಪುಲವಾದ ಅಧ್ಯಯನದ ಸಿದ್ಧತೆ ನಡೆಯುತ್ತಿತ್ತು. ಆದರೆ ಈ ಅಲೆದಾಟದ ನಡುವೆಯೂ ಜೀವನ ನಿರ್ವಹಣೆಯ ಚಿಂತೆ ಕಾಡುತ್ತಲೇ ಇತ್ತು.

೧೯೨೬ ರಿಂದ ೨೭ರ ಅವಧಿಯಲ್ಲಿ ತಾತ್ಕಾಲಿಕವಾಗಿ ಕರ್ನಾಟಕ ಹೈಸ್ಕೂಲ್‌ನಲ್ಲಿ ಶಿಕ್ಷಕ ವೃತ್ತಿ ಕೈಗೊಂಡರು. ಮುಂದೆ ೧೯೨೮ ರಿಂದ ೧೯೪೭ರ ನಿವೃತ್ತಿಯವರೆಗೂ 'ವಿಕ್ಟೋರಿಯ ಹೈಸ್ಕೂಲ್'ನಲ್ಲಿ ಕನ್ನಡ ಶಿಕ್ಷಕರಾಗಿ ನೇಮಕಗೊಂಡು ಜೀವನ ನಿರ್ವಹಣೆಗೆ ಒಂದು ಸ್ಥಿರ ನೆಲೆಯನ್ನು ಕಂಡುಕೊಂಡರು. ಮುಲ್ಕಿ ಪರೀಕ್ಷೆ ಪಾಸಾದ ಶಿಕ್ಷಕ ಶಂಬಾ ಅವರಿಗೆ ಆ ವೃತ್ತಿ ಅತ್ಯಂತ ಪ್ರಿಯವಾದದ್ದಾಗಿತ್ತು.

೧೯೩೦ ರಿಂದ ಶಂಬಾ ಅವರ ಬಾಳದಾರಿ ಬದಲಾಗಿರುವುದು ಗೋಚರವಾಗುತ್ತದೆ. ಅವರ ಮನಸ್ಸು ಸಂಶೋಧನೆ, ಗ್ರಂಥ ರಚನೆಯ ಕಡೆಗೆ ತೀವ್ರವಾಗಿ ಹರಿದಿದೆ. ಈ ಮೊದಲು ಶಂಬಾ ಕನ್ನಡದ ಆಳವಾದ ಅಭ್ಯಾಸದ ಮೂಲಕ ಒಳ್ಳೆಯ ತಳಹದಿ ನಿರ್ಮಿಸಿಕೊಂಡಿದ್ದರೂ ಗ್ರಂಥ ರಚನ ಕಾರ್ಯಕ್ಕೆ ಕೈಹಾಕಿರಲಿಲ್ಲ. (ಮಹರ್ಷಿ

ಅರವಿಂದ ಘೋಷ್ ಇವರ ಸಂಕ್ಷಿಪ್ತ ಚರಿತ್ರವು (೧೯೨೧) ಕೃತಿಯನ್ನು ಹೊರತುಪಡಿಸಿ) ಕನ್ನಡ ಸಂಸ್ಕೃತಿ ಕುರಿತ ಮೊಟ್ಟಮೊದಲ ಕೃತಿ 'ಕಣ್ಮರೆಯಾದ ಕನ್ನಡ' ರಚನೆಗೆ ತಕ್ಕ ಕಾಲದ ಹಿನ್ನೆಲೆಯು ಆಗ ಇತ್ತು. ಕಳೆದ ಶತಮಾನದ ಮೊದಲ ದಶಕಗಳಲ್ಲಿ ಬೆಳಗಾವಿ, ಗೋಕಾಕ, ಧಾರವಾಡ ಮೊದಲಾದ ಪ್ರದೇಶಗಳಲ್ಲಿ ಮರಾಠಿಯ ಒಲವಿನಲ್ಲಿ ಕನ್ನಡವು ನಲುಗುತ್ತಿದ್ದ ಸ್ಥಿತಿ ಇತ್ತು. ಹಾಗೆಯೇ ಕನ್ನಡ ನಾಡಿನಾದ್ಯಂತ ಸಂಸ್ಕೃತ-ಇಂಗ್ಲಿಷ್ ಭಾಷೆಗಳು ಕನ್ನಡ ಸಂಸ್ಕೃತಿಯ ಮೇಲೆ ತಮ್ಮದೇ ಪ್ರಭಾವವನ್ನು ಬೀರುತ್ತಿದ್ದವು. ನಾಡಿನ ಎಲ್ಲೆಡೆ ಪ್ರಾರಂಭವಾಗುತ್ತಿದ್ದ ಇಂಗ್ಲಿಷ್ ಮಾದರಿಯ ಶಾಲೆ ಹಾಗೂ ಹೊಸ ಇಂಗ್ಲಿಷ್ ಸಂಸ್ಕೃತಿಯ ಬೆಡಗು, ಅವುಗಳ ಬಳಕೆ: ಜೊತೆಗೆ ಸಂಸ್ಕೃತದ ಮೂಲಕವೇ ಕನ್ನಡ ಸಂಸ್ಕೃತಿಯನ್ನು ಅರ್ಥೈಸುವ ರೀತಿಗಳು ಕನ್ನಡದ ಅಸ್ತಿತ್ವದ ಬಗ್ಗೆ ಪ್ರಶ್ನೆ ಮೂಡಿಸುತ್ತಿದ್ದವು. ಇಂತಹ ಸಂದರ್ಭದಲ್ಲಿ ಆಲೂರು ವೆಂಕಟರಾಯರು "ಕರ್ನಾಟಕದ ಗತವೈಭವ"ವನ್ನು ಚಿತ್ರಿಸಿದ್ದರೆ, ಶಂಬಾ ಅದಕ್ಕೆ ಪೂರಕವಾಗಿ "ಕಣ್ಮರೆಯಾದ ಕನ್ನಡ" ಬರೆದು ವೈಭವ ನಾಶದ ಕುರುಹುಗಳನ್ನು ಪ್ರಮಾಣಪೂರ್ವಕವಾಗಿ ಪತ್ತೆ ಹಚ್ಚಿದರು.

ಈ ಕೃತಿಯ ಮೊದಲ ಮಾತಿನಲ್ಲಿ ಶಂಬಾ ತಾವು ಈ ಹಾದಿಯಲ್ಲಿ ಹೆಜ್ಜೆ ಊರಿದ್ದು ಒಂದು ಆಕಸ್ಮಿಕ ಯೋಗಾಯೋಗ ಎಂದು ಹೇಳುತ್ತಾರೆ. "ಒಂದನ್ನು ಹುಡುಕುವಾಗ ಇನ್ನೂ ಒಂದು ಕೈಗೆ ಬಂದಂತಾಗಿದೆ. ಇಂತಹ ಅಭೂತಪೂರ್ವ ವೈಭವಶಾಲಿಯಾದ ಕರ್ನಾಟಕದ ಅವನತಿಯ ಕಾರಣಗಳಾವುವು ಎಂಬುದನ್ನು ಅರಿತುಕೊಳ್ಳಲು ಮೊದಲು ನಾನು ಹೊರಟುದು; ಆದರೆ, ಅಲ್ಲಿ ಕಣ್ಣಿಗೆ ಬಿದ್ದುದು 'ಕಣ್ಮರೆಯಾದ ಕನ್ನಡ'. ಸಂಶೋಧಕನೆಂದು ನಾನಿದ್ದನ್ನು ಬರೆಯಲು ಕೈಗೊಂಡವನಲ್ಲ. ಏಕೆಂದರೆ, ನನಗೆ ಆ ಅಧಿಕಾರವಿಲ್ಲ. ಅಲ್ಲದೇ, ಇತಿಹಾಸದ ಸಂಶೋಧನವು ನನ್ನ ಕ್ಷೇತ್ರವು ಅಲ್ಲ. ನನಗಿದನ್ನು ಬರೆಯುವುದರಲ್ಲಿ ಮನುಷ್ಯನ ಸ್ವಭಾವವೇ ಮುದಲ್ಲು (ಮೊದಲು). ಇತಿಹಾಸ ಮತ್ತು ಭಾಷಾಶಾಸ್ತ್ರಗಳ ಬೆಳಕಿನಲ್ಲಿ ಮನುಷ್ಯ ಸ್ವಭಾವದ ಸುಳಿವು ಹಿಡಿದು ಮುಂದೆ ಸಾಗಿದ್ದೇನೆ." ಹೀಗೆ ಹೇಳುತ್ತ ತಮ್ಮ ಸಾಹಿತ್ಯಕ ಕೃಷಿ ಮುಂದುವರೆಯುವ ಮಾರ್ಗವನ್ನು ಸೂಚಿಸಿದ್ದಾರೆ. ಈ ಅಭೂತಪೂರ್ವ ಕನ್ನಡ ಸಂಸ್ಕೃತಿಯ ಇಳಿಗಾಲಕ್ಕೆ ಕಾರಣವೇನು? ಎಂಬ ಭೂತ ಮತ್ತು ವರ್ತಮಾನದ ಸ್ಥಿತಿಗಳು ಶಂಬಾ ಅವರನ್ನು ಬಹುವಾಗಿ ಕಾಡಿದವು. ಹಿಂದೆ ಇದ್ದ ಕನ್ನಡಿಗರ ಹಿರಿಮೆ-ಗರಿಮೆ, ಶಕ್ತಿ-ಸಾಮರ್ಥ್ಯಗಳ ಮೂಲಧನ ಎಲ್ಲಿ ಹೋಯಿತು ಎಂಬ ಹುಡುಕಾಟ ನಡೆಸುವಲ್ಲಿ ಹಿಂದೊಮ್ಮೆ ಕನ್ನಡವೇ ಆಗಿದ್ದ ಮಹಾರಾಷ್ಟ್ರದ ನೆಲವು ಇಂದು ಕನ್ನಡತನವನ್ನು ಕಳೆದುಕೊಂಡಿತ್ತು ಎಂಬ ಅರಿವು ಉಂಟಾಯಿತು. ಈ ತಳಮಳಗಳ ಪ್ರಭಾವದಿಂದ 'ಮಹಾರಾಷ್ಟ್ರದ ಮೂಲ' ಎಂಬ ಕನ್ನಡ ಕೃತಿ ಹೊರಬಂದಿತು. ನಿರೀಕ್ಷೆಯಂತೆಯೇ ಈ ಕೃತಿ ಬಲವಾದ ವಿವಾದಗಳ ಅಲೆಯನ್ನೇ ಎಬ್ಬಿಸಿತು. ಆ ಸಂದರ್ಭ ಮರಾಠಿ

ವಿದ್ವಾಂಸರಾದ ಆಚಾರ್ಯ ಸ.ಜ. ಭಾಗವತರು ಶಂಬಾ ಅವರನ್ನು ಆಹ್ವಾನಿಸಿ 'ಈ ವಿಷಯದ ಬಗ್ಗೆ ಮರಾಠಿಗರ ಟೀಕೆಗಳನ್ನು ಎದುರಿಸಬಲ್ಲಿರಾ?' ಎಂದು ಕೇಳಿದ ಪ್ರಶ್ನೆಗೆ ಶಂಬಾ ಮೊದಲ ಬಾರಿಗೆ ಮರಾಠಿಯಲ್ಲಿ 'ಮರಾಟೀ ಸಂಸ್ಕೃತಿ : ಕಾಹೀ ಸಮಸ್ಯಾ' ಸಂಶೋಧನಾತ್ಮಕ ಕೃತಿಯನ್ನು ಪ್ರಕಟಿಸಿದರು. ಮುಂದೆ ಅದು ಆಚಾರ್ಯ ಭಾಗವತರಿಂದಲೇ ಪ್ರಸಿದ್ಧವಾಯಿತು. ಈ ಕೃತಿಯ ಬಗ್ಗೆ ಪ್ರಚಂಡ ವಿರೋಧವಿದ್ದರು ೧೯೫೩ರ ಅತ್ಯುತ್ತಮ ಪುಸ್ತಕವೆಂದು ಆ ವರುಷ ಮುಂಬೈಯ ಮರಾಠಿ ಗ್ರಂಥ ಸಂಗ್ರಹಾಲಯದವರು ನಿರ್ಣಯಿಸಿದರು. ಶಂಬಾ ಅವರನ್ನು ಮುಂಬೈಗೆ ಕರೆಸಿಕೊಂಡು ಸನ್ಮಾನಿಸಿ ಗೌರವಧನ ಸಲ್ಲಿಸಿದರು. 'ನನ್ನನ್ನೇ ನಾನು ಒರೆಗಲ್ಲಿಗೆ ಹಚ್ಚಿ ನೋಡಲು ಮಹಾರಾಷ್ಟ್ರ ತಕ್ಕ ಪ್ರತಿಕ್ರಿಯೆ ತೋರಿದೆ' ಎಂಬುದು ಮಹಾರಾಷ್ಟ್ರದ ಬಗ್ಗೆ ಶಂಬಾ ಅವರ ಅನುಭವದ ಮಾತು ಮುಂದೆ 'ನವಭಾರತ' ಪತ್ರಿಕೆ ಶಂಬಾ ಅವರ ಮರಾಠಿ ಲೇಖನಗಳಿಗೆ ಸಾಕಷ್ಟು ಪ್ರಾಶಸ್ತ್ಯವನ್ನು ಕೊಟ್ಟಿತು.

ಮೊದಲಿನೆರಡು ಕೃತಿಗಳಿಂದಲೇ ಶಂಬಾ ಸಂಸ್ಕೃತಿ ಅನ್ವೇಷಣಗಳನ್ನು ಸತ್ಯದ ನೆಲೆಯಲ್ಲಿ ನಡೆಸತೊಡಗಿದರು. 'ಕರ್ನಾಟಕದ ವೀರಕ್ಷತ್ರಿಯರು', 'ಕನ್ನಡ ನೆಲೆ', 'ಎಡೆಗಳು ಹೇಳುವ ಕಂನಾಡ ಕಥೆ', 'ಶಿವರಹಸ್ಯ ಅಥವಾ ವೇದದಲ್ಲಿ ಕಾಣುವ ವೀರಶೈವ ಮತದ ಬೇರುಗಳು' ಮುಂತಾದ ಕೃತಿಗಳು ಇದೇ ನಿಟ್ಟಿನಲ್ಲಿ ಹೊರಬಂದವು. ಇಲ್ಲಿ "ಪ್ರಾಚೀನ ನಾಗರಿಕತೆಯನ್ನಷ್ಟೇ ತಿಳಿಯಬೇಕಾದರೆ ಭಗ್ನಾವಶೇಷಗಳು, ಶಾಸನ, ನಾಣ್ಯ, ಶಿಲ್ಪ ಇತ್ಯಾದಿ ಜಡವಸ್ತುಗಳು ಸಾಕು. ಆದರೆ ನಾಗರಿಕತೆಗಿಂತ ಪ್ರಾಚೀನವಾದ ಸಂಸ್ಕೃತಿಯನ್ನು ತಿಳಿಯಲು ಅದರೊಂದಿಗೆ ಹುಟ್ಟಿದ ಭಾಷೆಯೇ ಸೂಕ್ತ ಸಾಧನ" ಎಂಬ ನಿಲುವನ್ನು ಶಂಬಾ ಬಲವಾಗಿ ಪ್ರತಿಪಾದಿಸಿದರು. ಆದರೂ ಅವರು ಕೇವಲ ಭಾಷೆಯ ಬೆನ್ನು ಹತ್ತಿ ಹೋಗಿಲ್ಲ. ಕಂಡುಕೊಂಡ 'ಅನುಮಾನಿತ ಸತ್ಯ'ಗಳನ್ನು ವಾಸ್ತವಿಕ ಸತ್ಯದೊಂದಿಗೆ ಮೇಳವಿಸಿ ದೈವತಗಳು, ಸಂಪ್ರದಾಯ, ಸ್ಥಳನಾಮ ಸಂಕೇತಗಳು ಒಂದುಗೂಡಿದ ಸಂಸ್ಕೃತಿಯ ಪ್ರವಾಹದ ಹರಹಿನಲ್ಲಿ ಬರುವ ಉತ್ಖನನದ ಅವಶೇಷಗಳನ್ನೆಲ್ಲ ಬಳಸಿಕೊಂಡಿದ್ದಾರೆ. ಒಟ್ಟು ಸಂಸ್ಕೃತಿಯ ಆಶಯವನ್ನು ಗ್ರಹಿಸಲು ಶಂಬಾ ಆಯ್ದುಕೊಂಡ ನೆಲೆಗಳನ್ನು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಸ್ಥೂಲವಾಗಿ ಹೀಗೆ ಸೂಚಿಸಿದ್ದಾರೆ. ಭೌಗೋಳಿಕ ವ್ಯಾಪ್ತಿಯ ನೆಲೆಗಳು, ಜನಾಂಗೀಯ ಅಧ್ಯಯನದ ನೆಲೆಗಳು, ಭಾಷಿಕ ಅಂತಃಪ್ರಮಾಣದ ನಲೆಗಳು, ಆಚರಣಾ ಮೂಲದ ನೆಲೆಗಳು, ದೈವತ ಕಥೆಗಳ ಸಾಂಕೇತಿಕ ಆಕೃತಿಗಳ ನೆಲೆಗಳು. ಶಂಬಾ ಅವರ ಸಾಂಸ್ಕೃತಿಕ ಗ್ರಹಿಕೆಯನ್ನು ಒಟ್ಟಾಗಿ ಅರ್ಥೈಸಿಕೊಳ್ಳಲು ಈ ನೆಲೆಗಳು ಸಹಾಯಕವಾಗುತ್ತವೆ. ಶಂಬಾ ಅವರ ಮೇಲಿನ ಕೃತಿಗಳನ್ನು ಪರಿಶೀಲಿಸಿದಾಗ ಸಾಂಸ್ಕೃತಿಕ ಚರಿತ್ರೆ ಎಂಬುದು ಕಳೆದು

ಹೋದದ್ದರ ಹೋರಾಟ ಎನ್ನುವುದಕ್ಕಿಂತ ವರ್ತಮಾನದ ಹುಡುಕಾಟ ಎಂಬ ಅರ್ಥವನ್ನು ಹೊರಹೊಮ್ಮಿಸುತ್ತದೆ.

ಶಂಬಾ ಅವರು ಕನ್ನಾಡು ಕಂನುಡಿಗಳ ಬಗ್ಗೆ ಬರೆದ ಕೆಲವು ಕೃತಿಗಳನ್ನು, ಕರ್ಣನ ಮೂರು ಚಿತ್ರಗಳು, ಸೌಂದರ್ಯ ವಿಚಾರ ಮಕ್ಕಳ ಒಡಪುಗಳು ಮೊದಲಾದ ಗ್ರಂಥಗಳನ್ನು ಪ್ರಕಟಣೆಯನ್ನು ಮಾಡಿದರು. ಗ್ರಂಥಗಳ ಪ್ರಕಟಣೆ ಶಂಬಾ ಅವರಿಗೆ ಒಂದು ದೊಡ್ಡ ಸಾಹಸವೇ ಆಗಿತ್ತು. ಆಗಿನ ಕಾಲದಲ್ಲಿ ಕನ್ನಡ ಗ್ರಂಥ ಪ್ರಕಾಶಕರೇ ಕಡಿಮೆ. ಅದರಲ್ಲೂ ಶಂಬಾ ಅವರ ರಚನೆಗಳು ಕಥೆಯಲ್ಲ, ಕವನವಲ್ಲ ಲಲಿತ ಸಾಹಿತ್ಯ ಪ್ರಕಾರಕ್ಕೇ ಒಳಪಡದ ಈ ಕೃತಿಗಳಿಗೆ ಪ್ರಕಾಶಕರು ಮುಂದೆ ಬರುವುದು ಸಾಧ್ಯವಿರಲಿಲ್ಲ. ಜೀವನ ನಿರ್ವಹಣೆಗೆ ಕಷ್ಟವಿದ್ದರೂ ಈ ಎಲ್ಲ ಗ್ರಂಥಗಳ ಪ್ರಕಾಶನದ ಹೊಣೆ ಹೊತ್ತ ಶಂಬಾ ಅವರಿಗೆ ಅಧಮ್ಯ ಸಾಹಸವಿಲ್ಲದಿದ್ದರೆ ಗಹನ ವಿಚಾರ ಗ್ರಂಥಗಳು ಬೆಳಕು ಕಾಣುತ್ತಲೇ ಇರಲಿಲ್ಲ. 'ಮಾಧವ ಬಲ್ಲಾಳ ಬಂಧುಗಳು' ಅವರದೇ ಪ್ರಕಟಣ ಸಂಸ್ಥೆಯಾಗಿತ್ತು. ತಮ್ಮ ಇಬ್ಬರು ಗಂಡು ಮಕ್ಕಳ ಹೆಸರಿನಲ್ಲಿ ಈ ಪ್ರಕಾಶನ ಇತ್ತು.

ಶಂಬಾ ಅವರು ತಮ್ಮ ಸಂಸ್ಕೃತಿ ಅಧ್ಯಯನಕ್ಕೆ ಬಳಸಿಕೊಂಡ ಶಾಸ್ತ್ರ ವಿಧಾನವು ಕ್ರಮೇಣ ಬದಲಾಗುತ್ತ ಬಂದದ್ದನ್ನು ಗಮನಿಸಬಹುದು. ಹಿಂದೆ ಭಾಷೆ, ವ್ಯುತ್ಪತ್ತಿ, ಶಾಸನ, ಕಾವ್ಯ, ಆಚರಣೆ, ಎಡೆಗಳ ಹೆಸರು ಹೀಗೆ ಅನೇಕ ವಿವರಗಳಿಂದ ಅಧ್ಯಯನಕ್ಕೆ ತೊಡಗಿದ್ದರು. ಮುಂದೆ 'ಹಾಲುಮತ ದರ್ಶನ' ಕೃತಿಯಿಂದ ಅವರ ಅಧ್ಯಯನದ ಬಗೆಗೆ ಸಾಂಸ್ಕೃತಿಕವಾಗಿ ಪರಿವರ್ತನೆ ಪಡೆದುದನ್ನು ಶಂಬಾ 'ಜೀವನದ ಅರ್ಥಗ್ರಹಣ ಪದ್ಧತಿ' ಎಂದು ಕರೆದಿದ್ದಾರೆ. ಈ ಹಂತದಲ್ಲಿ ಹೊರತಂದ ೧೯೬೭ರಲ್ಲಿ ಸಿದ್ಧಪಡಿಸಿ ೧೯೭೦ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದ 'ಕರ್ನಾಟ ಸಂಸ್ಕೃತಿಯ ಪೂರ್ವ ಪೀಠಿಕೆ' ಒಂದು ಮೇರುಕೃತಿಯಾಗಿದೆ. ಈ ಕೃತಿಯ ಮುನ್ನುಡಿಯಲ್ಲಿ ಶಂಬಾ ಕಂ-ನುಡಿಯು ಮೈದಾಳಿದ ಸ್ಥಳ-ಕಾಲಗಳ ಅಂದಾಜಿನೊಡನೆ ಈ ಜನದ ಸಂಸ್ಕೃತಿಯು ಆಕಾರ ಪಡೆದ ಹಿನ್ನೆಲೆಯನ್ನು ಕಂಡುಹಿಡಿಯುವುದೂ, ಈ ಪ್ರಬಂಧದ ಮುಖ್ಯ ಉದ್ದೇಶವಾಗಿದೆ. ಇದರಿಂದಾಗಿ ಈ ವಿವರಣೆಯ ರೀತಿಯಲ್ಲಿ ಜೋಡುಹೆಣಿಗೆಯು ಕಾಣಿಸಿಕೊಂಡಿದೆ. ಈ ಹೆಣಿಗೆಯ ಒಂದು ಮೈ ಭಾಷೆಯ ಆಕೃತಿಯನ್ನು ಕುರಿತು ಮುಂದುವರೆಯುವುದರೊಡನೆ, ಇನ್ನೊಂದು ಮೈ ಸಾಂಸ್ಕೃತಿಕ ಆಚಾರ-ವಿಚಾರಗಳ ಎಣಿಕೆಯನ್ನು ಗಮನಕ್ಕೆ ತರುತ್ತದೆ. ಭಾಷೆ ಮತ್ತು ಸಂಸ್ಕೃತಿ ಇವೆರಡರ ಆಕೃತಿ ಬೇರೆ ಬೇರೆ ಇದ್ದರೂ, ಆರಂಭದಲ್ಲಿ 'ಸಂಸ್ಕೃತಿ' ಎಂಬುದಕ್ಕೆ ಸ್ವತಂತ್ರ ಆಕಾರವು ಪ್ರಾಪ್ತವಾಗಿರುವುದಿಲ್ಲ. ಭಾಷಾ ಮಾಧ್ಯಮವು ಸಂಕೇತ : ಪ್ರತಿಕಾತ್ಮಕವಾಗುವ ಹಂತದಿಂದ ಆಯಾ ಭಾಷಿಕ ಸಂಸ್ಕೃತಿಯು ಸ್ವತಂತ್ರ ರೂಪ ಆಕಾರವನ್ನು ಪಡೆಯತೊಡಗುತ್ತದೆ. ಭಾಷೆಯೊಡನೆ ಸಂಸ್ಕೃತಿ ಆರಂಭವಾಗುತ್ತದೆ. ಜ್ಞಾನದ ಆಧಾರವು ಭಾಷೆ ಈ ಭಾಷೆ,

ಸಂಸ್ಕೃತಿ, ಜ್ಞಾನ ಇವು ನಿಧಿನಿಕ್ಷೇಪವಂತೆ, ಥಕ್ಕನೆ ದೊರೆತ ಸಂಗತಿಗಳಲ್ಲಾ ಮಾನವನು 'ಕ್ಷಣಶಃ ಕ್ಷಣಶಃ ಚ ಏವ ವಿದ್ಯಾಂ, ಅರ್ಥಂಚ' ಸಾಧಿಸುತ್ತ ಬಂದಂತೆ ಇದನ್ನು ಸಂಗ್ರಹಿಸುತ್ತ ಬಂದಿದ್ದಾನೆ. ಯಾವುದೇ ಒಂದು ಶಾಖೆಯ ಜ್ಞಾನವನ್ನು ಸಹ ಆಮೂಲಾಗ್ರವಾಗಿ ಅಧ್ಯಯನ ಮಾಡಲು ಒಂದು ಜನ್ಮ ಸಾಲದು ಎನ್ನುವಷ್ಟು ಅದು ವಿಶಾಲವಾಗಿದೆ. ಭಾಷೆ ಮತ್ತು ಜ್ಞಾನ ಇವುಗಳ ಸಂಬಂಧವನ್ನು ಗಮನಿಸಿದರೆ, ಭಾಷೆಯೊಡನೆ ಜ್ಞಾನದ ಅಭಿವೃದ್ಧಿ ಪ್ರಾರಂಭವಾಯಿತು ಎಂದು ಹೇಳಬಹುದು. ಶಂಬಾ ಅವರ ಈ ಮಾತಿನಂತೆ ಈ ರೀತಿಯ ಕ್ಷಣಶಃ ಆಗುವ ವಿಕಾಸಕ್ಕೆ ಮೂರು ಮಜಲುಗಳು. ಅನುಕರಣ, ಅನುಸರಣ ಮತ್ತು ಸಾಂಕೇತಿಕ ಸ್ವಾತಂತ್ರ್ಯ ವಿಚಾರ. ಈ ಅಪ್ರತಿಮ ಸಂಕೇತಗಳನ್ನು ಬರೆದಿಡಲು ಲಿಪಿ ಬೆಳೆದು ಬಂದಿತು ಎಂದು ಶಂಬಾ ಅವರು ಅಭಿಪ್ರಾಯಪಡುತ್ತಾರೆ.

ಈ ನಿಟ್ಟಿನಲ್ಲಿ ಶಂಬಾ ನಡೆಸಿದ ಅಧ್ಯಯನದಲ್ಲಿ ಪುರಾಣ, ಇತಿಹಾಸ, ದೈವತಶಾಸ್ತ್ರ, ಸಂಕೇತಶಾಸ್ತ್ರ, ಭಾಷಾಶಾಸ್ತ್ರ ಮತ್ತು ಮನುಷ್ಯ ಸಂಬಂಧಗಳು -ಹೀಗೆ ಬೇರೆ ಬೇರೆ ಜ್ಞಾನಶಾಖೆಗಳನ್ನು ಒಂದು ತೆಕ್ಕೆಗೆ ಹಿಡಿದು 'ವಿಶ್ಲೇಷಣಾತ್ಮಕ' ಹಿನ್ನೆಲೆಯಲ್ಲಿ ರೂಪಿಸಿರುವುದು ಕಂಡುಬರುತ್ತದೆ. ನಮ್ಮಲ್ಲಿ ಕಳೆದ ಎರಡು ದಶಕಗಳಲ್ಲಿ ಕಂಡುಬರುತ್ತಿರುವ 'ಅನ್ಯಶಾಸ್ತ್ರ ಜ್ಞಾನ'ಗಳನ್ನು ಶಂಬಾ ಅವರು ತಮ್ಮ ಅಧ್ಯಯನ ವಿಧಾನದಲ್ಲಿ ಅರ್ಧ ಶತಮಾನದ ಹಿಂದೆ ಬಳಸಿಕೊಂಡದ್ದು ತುಂಬಾ ಮಹತ್ವದ ಅಂಶವಾಗಿದೆ.

ಕನ್ನಡ ಸಂಸ್ಕೃತಿಯ ನೆಲೆಯಲ್ಲಿಯೇ ಮುಂದುವರೆದು ಶಂಬಾ ಭಾರತೀಯ ಸಂಸ್ಕೃತಿಯನ್ನು ನೋಡಿದರು, ಅಧ್ಯಯನ ನಡೆಸಿ, ಕೃತಿ ರಚಿಸಿದರು. ೬೦ನೇ ದಶಕದಲ್ಲಿ ಜೀವನ : ಸಂಸ್ಕೃತಿಯ ಅರ್ಥಗ್ರಹಣವನ್ನು ಮಾಡಲು ಹೊರಟರು. 'ಜೀವನ ಎಂಬುದಕ್ಕೆ ಅರ್ಥ : ಆಕೃತಿ ಉಂಟೆ? ಜೀವನಕ್ಕೆ 'ಅರ್ಥ' ಇದ್ದರೆ, ಅದು ಆ ಜೀವನ : ಸಂಸ್ಕೃತಿಯಲ್ಲೂ ಅಭಿವ್ಯಕ್ತವಾಗಿರಲೇ ಬೇಕು. ಆದರೆ, ಜೀವನದಲ್ಲಿ ಅರ್ಥ : ಮೌಲ್ಯಗಳು ಉಂಟೆ?' ಎಂಬ ಸಂದೇಹಗಳನ್ನು ಮುಂದಿಟ್ಟಿತು. ಇದನ್ನು ಜೀವನ : ಸಂಸ್ಕೃತಿಯ ಅರ್ಥಗ್ರಹಣದ ಪ್ರಾಯೋಗಿಕ ಪ್ರಯತ್ನ ಎಂದು ಶಂಬಾ ಹೇಳುತ್ತಾರೆ.

ಈ ಅಧ್ಯಯನದಲ್ಲಿ ಶಂಬಾ ಇತಿಹಾಸವನ್ನು ಒಂದು ಅಂಶವಾಗಿ ಸ್ವೀಕರಿಸಿದರೂ ಸಾಂಸ್ಕೃತಿಕ ನೆಲೆಯಲ್ಲೂ ನೋಡತೊಡಗಿದರು. ವೈದಿಕ ಮನೆತನದಿಂದ ಬಂದ ಶಂಬಾ ಅವರಿಗೆ ಅನೇಕ ವರ್ಷಗಳಿಂದ ಋಗ್ವೇದದಲ್ಲಿ ಆಸಕ್ತಿ ಸಹಜವಾಗಿಯೇ ಬಂದಿತ್ತು. ಹೀಗಾಗಿ ಈ ಸಾಂಸ್ಕೃತಿಕ ಚರಿತ್ರಶಾಸ್ತ್ರದ ತಿಳುವಳಿಕೆಗಾಗಿ ಋಗ್ವೇದದ ಆಳವಾದ ಅಧ್ಯಯನಕ್ಕೂ ತೊಡಗಿದರು. ಇದರ ಪ್ರತಿಫಲವೇ ಅವರ 'ಋಗ್ವೇದ ಸಾರ : ನಾಗ

ಪ್ರತಿಮಾ ವಿಚಾರ' ಕೃತಿಯಾಗಿದೆ. ಋಗ್ವೇದಕ್ಕೆ ಮಾತ್ರ ಸೀಮಿತವಾದ ಪ್ರಮುಖ ಸಮಸ್ಯೆ ನಾಗ ಸಮಸ್ಯೆ ಎಂದುಕೊಂಡಿದ್ದು ಸಾಂಸ್ಕೃತಿಕ ಮಹತ್ವವುಳ್ಳ ಜಾಗತಿಕ ಸಮಸ್ಯೆಯಾಗಿ ಅರಿವಿಗೆ ಬಂದಿದ್ದನ್ನು ಹೇಳುತ್ತ, ಮನೋವೈಜ್ಞಾನಿಕ ದೃಷ್ಟಿಕೋನದಿಂದ ಈ ಅಧ್ಯಯನ ನಡೆಸಿದ್ದಾರೆ. ನಾನಾ ದೇವತ ರೂಪದಲ್ಲಿ ಭಾರತೀಯರ ಜೀವನ ಆದರ್ಶವಾಗಿ ಅವರ ಬಾಳನ್ನು ರೂಪಿಸುವ ನಾಗಪ್ರತಿಮಾ ವಿಚಾರದಲ್ಲಿ ಮಾನವಶಾಸ್ತ್ರಕ್ಕೆ ಕೂಡ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ಶಂಬಾ ಜೋಶಿಯವರ ಸಾಂಸ್ಕೃತಿಕ ಕ್ಷೇತ್ರ ಯಾತ್ರೆಯಲ್ಲಿ ೧೯೭೩ ಒಂದು ಮನ್ವಂತರ ಕಾಲ ಎಂದು ವಿಮರ್ಶಕರು ಗುರುತಿಸಿದ್ದಾರೆ. ಅವರ 'ಪ್ರವಾಹ ಪತಿತರ ಕರ್ಮ 'ಹಿಂದೂ' ಎಂಬ ಧರ್ಮ' ಕೃತಿ ಪ್ರಕಟಗೊಂಡದ್ದು ಆಗಲೇ. ಒಂದು ಸಮುದಾಯದ ಬದುಕಿನಲ್ಲಿ ವ್ಯಕ್ತಿಯ ಅಥವಾ ಒಂದು ವರ್ಗದ ಹಿತ ಮುಖ್ಯವೇ? ಎಂಬುದನ್ನು ಚರ್ಚಿಸುತ್ತಾರೆ. ವ್ಯಕ್ತಿ-ಸಮಷ್ಟಿಗಳಿಗೆ ಬದುಕಿನಲ್ಲಿ ಇರುವ ಸ್ಥಾನ ಮತ್ತು ಅಂತರ, ವ್ಯಕ್ತಿಗಿಂತ ಸಮಷ್ಟಿ ಬಹುಮುಖ್ಯ. ಇನ್ನೊಂದು ಕಾಲದಲ್ಲಿ ವಿಶ್ವ ಜೀವನವನ್ನು ಆಳುತ್ತಿದ್ದ ಸಮಷ್ಟಿ ಇಂದು ಹಿಂದಕ್ಕೆ ಸರಿದು ವ್ಯಕ್ತಿ ವಿಶ್ವ ಮುಖ್ಯವಾಯಿತು. ಹೀಗೆ ಹಿನ್ನೆಲೆಗೆ ಹೋದದ್ದು ಏಕೆ? ಹೇಗೆ? ಎಂಬ ಜಿಜ್ಞಾಸೆ ಅವರ ನಂತರದ ಕೃತಿಗಳಲ್ಲಿ ಅಡಗಿದೆ.

ಇತಿಹಾಸ-ತತ್ವಶಾಸ್ತ್ರಗಳೆರಡನ್ನು ಮೇಳವಿಸಿ ಚಿಂತಿಸುವ ಶಂಬಾ ಅವುಗಳಲ್ಲಿ ಸಾಂಸ್ಕೃತಿಕ ಬದುಕನ್ನು ಹುಡುಕ ಹೊರಡುತ್ತಾರೆ. ಇದಕ್ಕಾಗಿ ಆಯಾ ಕಾಲದ ದೈವತಗಳ ಕಲ್ಪನೆಯು ಸಾಮಾಜಿಕ ಸ್ಥಿತ್ಯಂತರ - ಬಿಕ್ಕಟ್ಟುಗಳ ಅರಿವನ್ನು ಮೂಡಿಸುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಈ ಸಾಂಸ್ಕೃತಿಕ ಚಿಂತನದ ಜೊತೆ ಜೊತೆಗೆ ಹಿಂದಿನ ಬಾಳ್ವೆಯನ್ನು ಕುರಿತು ಅಧ್ಯಯನದಲ್ಲಿ ತೊಡಗುತ್ತಾರೆ. ಇದಕ್ಕಾಗಿ ದಿನಕರ ದೇಸಾಯಿ ಅವರ 'ನೀನಾರಿಗಾದೆಯೋ ಎಲೆ ಮಾನವ' ಎಂಬ ಸಾಲನ್ನು ಉದ್ಧರಿಸುತ್ತ, ಇದು ನಮ್ಮನ್ನು ಅಂತರ್ಮುಖಿಯಾಗಿಸುತ್ತದೆ ಎಂದು ಸಾಂಸ್ಕೃತಿಕ ಕಳಕಳಿಯನ್ನು ವ್ಯಕ್ತಪಡಿಸುತ್ತಾರೆ.

ಶಂಬಾ ಅವರು ತಮ್ಮ ಪುಸ್ತಕಗಳಿಗೆ ಕೊಡುವ ಶೀರ್ಷಿಕೆಗಳಲ್ಲೂ ವಿಶಿಷ್ಟತೆಯನ್ನು ಕಾಣಲು ಸಾಧ್ಯವಿದೆ. 'ಪ್ರವಾಹ ಪತಿತರ ಕರ್ಮ 'ಹಿಂದೂ' ಎಂಬ ಧರ್ಮ', 'ಬುಧನ ಜಾತಕ', 'ವೈವಸ್ವತ ಮನು ಪ್ರಣೀತ ಮಾನವ ಧರ್ಮದ ಆಕೃತಿ', 'ಬಿತ್ತಿದ್ದನ್ನು ಬೆಳಕೋ' -ಈ ಹೆಸರುಗಳಲ್ಲಿ ವರ್ತಮಾನದ ಸ್ಥಿತಿಗತಿಗಳು ಬಿಂಬಿತವಾಗಿರುವುದನ್ನು ಗುರುತಿಸಬಹುದು. ಈ ಕೃತಿಗಳಷ್ಟೇ ಅಲ್ಲದೇ ಮೊದಲಿನ ರಚನೆಗಳಲ್ಲಿಯೂ ಈ ವಿಶಿಷ್ಟತೆಯನ್ನು ಗಮನಿಸಬಹುದು. ಉದಾಹರಣೆಗೆ 'ರೂಢಿ ಹಾಗೂ ಭಾವಿಕ ಕಲ್ಪನೆಗಳು', 'ದಾರಿಯ ಬುತ್ತಿ', 'ಎದ್ದೇಳು ಕನ್ನಡಿಗಾ! ಅಥವಾ ಅಸಂತೋಷವೇ

ಪಳ್ಳಿಯ ಮೂಲ' ಹಾಗೂ 'ಯಕ್ಷ ಪ್ರಶ್ನೆ ಅಥವಾ ಬರಲಿರುವ ಸಮಾಜ.' ತಾವು ಕೈಗೊಂಡ ಸಾಂಸ್ಕೃತಿಕ ಯಾತ್ರೆಯನ್ನು ಕುರಿತು ಶಂಬಾ 'ಬಿತ್ತಿದ್ದನ್ನು ಬೆಳಕೋ' ಕೃತಿಯ ಅರಿಕೆಯಲ್ಲಿ 'ಹಾಲುಮತ' ದರ್ಶನದಿಂದ (೧೯೬೦) ತೊಡಗಿ ತಲೆಯೆತ್ತಿದ್ದ ಜಿಜ್ಞಾಸೆ ನನ್ನನ್ನು 'ಬಿತ್ತಿದ್ದನ್ನು ಬೆಳಕೋ' (೧೯೮೪) ಈ ಪ್ರಕಟಣೆಯವರೆಗೆ ತಳ್ಳಿಕೊಂಡು ಬಂದಿದೆ. ಭಾರತೀಯ ಸಂಸ್ಕೃತಿಯಲ್ಲಿ ಆಗಿರುವ ಪಲ್ಲಟವನ್ನು ಗ್ರಹಿಸಿಕೊಳ್ಳಲು ಪ್ರಾರಂಭವಾದ ಅನ್ವೇಷಣೆ ಇದು' ಎಂಬ ಮಾತನ್ನು ಹೇಳಿದ್ದಾರೆ. ಹೀಗೆ ಶಂಬಾ ಅವರ ಚಿಂತನೆ ಭೂತ ನಿನ್ನೆಯ ಶೋಧನೆಯ ಜೊತೆಗೆ ವರ್ತಮಾನವನ್ನು ಒಳಗೊಳ್ಳುತ್ತದೆ. ಅಷ್ಟೇ ಅಲ್ಲದೆ, ಅದು ಹೊರ ತೋರಿಕೆಯದ್ದಾಗದೇ, ಸುತ್ತಮುತ್ತಲಿನ ಬಾಳ್ವೆಯ ನೆಲೆಗಟ್ಟಿನ ಮೇಲೆ ನಿಲ್ಲುತ್ತದೆ.

ಶಂಬಾ ಜೋಶಿಯವರು ಕನ್ನಡ ನಾಡು-ಭಾರತೀಯ ಸಂಸ್ಕೃತಿ, ಮಾನವ ಸಂಸ್ಕೃತಿಯನ್ನು ಕುರಿತು ಹಲವಾರು ಪುಸ್ತಕಗಳನ್ನು ಪ್ರಕಟಗೊಳಿಸಿದರು. ಜೊತೆಗೆ, ಇದಕ್ಕೆ ಸಂವಾದಿಯಾಗಿ ಸಾಹಿತ್ಯವನ್ನು ಕುರಿತ ಅವರ ಬರಹಗಳನ್ನು ಗಮನಿಸುವುದು ಅಗತ್ಯವಾಗಿದೆ. ಅವರು ಜೀವನ ಚರಿತ್ರೆ, ವೈಚಾರಿಕ ಚಿಂತನೆ, ರಾಜಕೀಯ ಪ್ರಜ್ಞೆಗಳು -ಜಾಗೃತಿಯ ಕುರಿತು ಗಮನಹರಿಸಿದ್ದಾರೆ. ಶಂಬಾ ಅವರು ಬರೆದ ಎರಡು ಜೀವನ ಚರಿತ್ರೆಗಳು 'ಮಹರ್ಷಿ ಅರವಿಂದ ಘೋಷ್ ಇವರ ಸಂಕ್ಷಿಪ್ತ ಚರಿತ್ರವು', 'ಟಿಳಕ ಕಥಾಮೃತ ಸಾರ.'

ಅರವಿಂದರನ್ನು ಕುರಿತು ಕನ್ನಡದಲ್ಲಿ ಬಂದ ಮೊಟ್ಟಮೊದಲ ಕೃತಿ 'ಮಹರ್ಷಿ ಅರವಿಂದ ಘೋಷ್ ಇವರ ಸಂಕ್ಷಿಪ್ತ ಚರಿತ್ರವು'. ಅಂದು ಧಾರವಾಡ ಸಾಂಸ್ಕೃತಿಕ ಜಗತ್ತಿನ ಮೇಲೆ ರಾಷ್ಟ್ರೀಯ ತತ್ವಜ್ಞಾನದ ಪ್ರೇರಣೆ ಉಂಟಾಗಲು ಪರ್ಯಾಯವಾಗಿ ಕಾರಣವಾದ ಕೃತಿ ಇದು. ಈ ಜೀವನ ಚರಿತ್ರೆ ಅರವಿಂದರ ಬದುಕಿನ ಘಟನಾವಳಿಗಳನ್ನು ಹೇಳುತ್ತಿದ್ದರೂ ಅವರ ಬದುಕಿನ ಆಂತರಂಗಿಕ ಪ್ರೇರಣೆಗಳನ್ನು ಕಂಡುಕೊಳ್ಳುವ ಪ್ರಯತ್ನವಾಗಿದೆ. ದೇಶಸೇವೆಯನ್ನು ಕುರಿತು ಬರೆಯುವಾಗ ಶಂಬಾ ಹೇಳುವಂತೆ, "ಶ್ರೀ ಅರವಿಂದರು ತಮ್ಮ ಆಯುಷ್ಯದ ಎರಡು ಅವಸ್ಥೆಗಳನ್ನು ಮುಗಿಸಿ, ಮೂರನೇ ಅವಸ್ಥೆಯಲ್ಲಿ ಪ್ರವೇಶಿಸಿದರು. ಪೂರ್ವ ವಯಸ್ಸಿನಲ್ಲಿದ್ದ ವಿಕ್ಷಿಪ್ತತನವು ಈಗ ಒಂದು ವಿಶಿಷ್ಟ ಸ್ವರೂಪವನ್ನು ಧರಿಸಿತು. ಸಾಮಾನ್ಯನಂತೆ ಉಂಡುಟ್ಟು ಸ್ವಸ್ಥವಾಗಿರುವುದನ್ನು ಬಿಟ್ಟು ಅವರು ಲೋಕಸೇವೆಗೆ ಟೊಂಕ ಕಟ್ಟಿದ್ದು ವಿಕ್ಷಿಪ್ತತನವೇ ಇರುತ್ತದೆ... ಜ್ಞಾನದಿಂದ ಅಂತಃಸ್ಫೂರ್ತಿಯ ಬೋಧವು ಆಯಿತೆಂದರೆ ಮನುಷ್ಯನು ಸರಿಯಾದ ಮಾರ್ಗಕ್ಕೆ ಬರಲಿಕ್ಕೆ ಹತ್ತುವುದುಂಟು, ಪ್ರತಿಯೊಬ್ಬನಿಗೆ ಒಂದು ತರಹದ ಅಂತಃಪ್ರೇರಣೆ ಆಗುತ್ತಿರುವುದುಂಟು... ಶ್ರೀ ಅರವಿಂದರಿಗೆ ಅವರ ತಂದೆಯು ಐ.ಸಿ.ಎಸ್.ಗೆ

ಕಳಿಸಿದರೂ, ಪ್ರಸಂಗವು ಸಿಗುತ್ತಲೇ ಅವರು ತಮ್ಮ ಪ್ರವೃತ್ತಿಯಂತೆ ಇಷ್ಟ ಮಾರ್ಗವನ್ನೇ ಹಿಡಿದರು." ಇಲ್ಲಿ ಶಂಬಾ ಅವರ ಸಂಶೋಧನಾ ಪ್ರವೃತ್ತಿಯ ಎಳೆಗಳನ್ನು ಗುರುತಿಸಬಹುದು. ಲೇಖನ ವ್ಯವಸಾಯದಿಂದಲೇ ಬದುಕುವ ಭ್ರಮೆ ಹೊತ್ತು ಧಾರವಾಡಕ್ಕೆ ಬಂದವರಂತೆ ಶಂಬಾ. ಆದರೆ ಮುಂದೆ ಅದು ಅವರ ಬದುಕಿನ ಆಧಾರವಾಗದೇ, ತಮ್ಮೊಳಗೆ ತುಡಿಯುತ್ತಿದ್ದ ತುಮುಲಗಳನ್ನು ಹೊರಹೊಮ್ಮಿಸಲು ಪರ್ಯಾಯ ಮಾರ್ಗವಾಯಿತು.

ಶಂಬಾ ಅವರಲ್ಲಿ ಮಿಡಿಯುತ್ತಿದ್ದ ರಾಷ್ಟ್ರೀಯ ಮನೋಧರ್ಮ, ಪ್ರಾಚೀನ ಸಾಹಿತ್ಯ ಹಾಗೂ ತತ್ವಜ್ಞಾನದ ಆಳವಾದ ಅಧ್ಯಯನಗಳ ಫಲಿತವನ್ನು ಇನ್ನೊಂದು ಜೀವನ ಚರಿತ್ರೆ 'ಟಿಳಕ ಕಥಾಮೃತ'ದಲ್ಲೂ ಕಾಣಬಹುದು. ಲೋಕಮಾನ್ಯರ ಜೀವನ; ಗುಣಕಥನ ಹಾಗೂ ಅವರ ಕೆಲವು ವಿಚಾರ ಲಹರಿಗಳಿಂದ ಕೂಡಿದ ಈ ಕೃತಿಯಲ್ಲಿ ಶಂಬಾ ಅವರ ಸಾಮಾಜಿಕ ವಿಚಾರಗಳ ಕಾಣ್ಕೆಯೂ ಅಡಗಿದೆ. ಕಾಲದ ದೃಷ್ಟಿಯಿಂದ ಈ ಎರಡು ಕೃತಿಗಳು ಮಹತ್ವವುಳ್ಳದ್ದಾಗಿದ್ದು, ಜೀವನ ಚರಿತ್ರೆಗಳ ಮಾದರಿಗೆ ಒಂದು ಹೊಸ ಆಕೃತಿಯನ್ನು ಸೇರಿಸಿದಂತಾಗಿದೆ.

ಶಂಬಾ ಅವರ ವೈಚಾರಿಕ ಕೃತಿಗಳ ಸಾಲಿಗೆ ಸೇರಿರುವ 'ರೂಢಿ ಹಾಗೂ ಭಾವಿಕ ಕಲ್ಪನೆಗಳು', 'ಅಸಂತೋಷವೇ ಏಳ್ಗೆಯ ಮೂಲ', 'ಅಗ್ನಿ ವಿದ್ಯೆ', 'ದಾರಿಯ ಬುತ್ತಿ' ಇವು ಕನ್ನಡದ ಬಹುಮುಖ್ಯ ಬರಹಗಳೆನಿಸಿವೆ. ಸ್ವಾತಂತ್ರ್ಯ ಬರುವ ಪೂರ್ವದಲ್ಲಿ ರಚನೆಯಾಗಿ ಆಕಾರದಲ್ಲಿ ಸಣ್ಣದಾಗಿದ್ದರೂ ಸಮಕಾಲೀನ ಸಾಮಾಜಿಕ ಸಂದರ್ಭಕ್ಕೂ ತಕ್ಕ ವಿಚಾರಗಳು ಇಲ್ಲಿವೆ. ಸ್ವಾತಂತ್ರ್ಯ ಎಂಬುದೇನು? ಅದು ನಮ್ಮನ್ನು ಎಲ್ಲಿಗೆ ಕರೆದೊಯ್ಯುತ್ತದೆ? ಸ್ವಾತಂತ್ರ್ಯಕ್ಕೂ ಮನುಷ್ಯನ ವಿಚಾರ ತತ್ವಕ್ಕೂ ಪರಸ್ಪರ ಸಂಬಂಧಗಳುಂಟೇ? ಮನುಷ್ಯನಿಗೆ ಸಂತುಷ್ಟಿ ಇರಬೇಕೆ ಅಥವಾ ಅಸಂತುಷ್ಟಿ ಇರಬೇಕೆ? ಮುಂತಾದ ಅನೇಕ ಪ್ರಶ್ನೆಗಳ ಜಿಜ್ಞಾಸೆ ಇಲ್ಲಿದೆ.

ಪ್ರಾಚೀನ ಕಾಲದಿಂದ ಆರಾಧಿಸುತ್ತ ಬಂದಿರುವ ಅಗ್ನಿಯ ವಿಶ್ವವ್ಯಾಪಿ ಸಾಂಸ್ಕೃತಿಕ ಅರ್ಥವನ್ನು ಶಂಬಾ 'ಅಗ್ನಿ ವಿದ್ಯೆ'ಯಲ್ಲಿ ವಿಶ್ಲೇಷಿಸುತ್ತಾರೆ. ಒಳಗಿನ ಹಾಗೂ ಹೊರಗಿನ ಬೆಂಕಿಗಳನ್ನು ವಿವೇಚಿಸುತ್ತ, ಬೆಳಕು ಮತ್ತು ಶಕ್ತಿಗಳಿಗೂ ಅದನ್ನು ಅನ್ವಯಿಸುತ್ತಾರೆ.

ಶಂಬಾ ವಿಶಿಷ್ಟತೆ ಕಂಡುಬರುವುದೆಂದರೆ ಸಾಮಾನ್ಯೀಕರಿಸಿದ ವಿಚಾರಗಳಿಗಿಂತ ವಿಭಿನ್ನವಾಗಿ ನಿಲ್ಲುವುದರಲ್ಲಿ ಇದೆ. ಹಿರಿಯರ ಅನುಭವದ ನುಡಿಯು 'ಇದ್ದುದರಲ್ಲಿ ತೃಪ್ತಿಪಡು' ಎಂದು ಹೇಳುತ್ತದೆ. ಸಾಮಾನ್ಯವಾಗಿ ಹೇಳುವ 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬ ಮಾತಿಗೆ ವಿಭಿನ್ನವಾಗಿ 'ಅಸಂತೋಷವೇ ಏಳ್ಗೆಯ ಮೂಲ' ಎನ್ನುತ್ತಾರೆ.

ಶಂಬಾ ಅವರ ಸಾಮಾಜಿಕ ಕಳಕಳಿಯ ಮುಂದಿನ ಹಂತದಲ್ಲಿ 'ಸಮಾಜ ದರ್ಶನ', 'ಯಕ್ಷ ಪ್ರಶ್ನೆ'ಗಳಲ್ಲಿ ಮಡುಗಟ್ಟಿ ನಿಂತಿದೆ. ಸಮಾಜದ ಸದ್ಯದ ಸ್ಥಿತಿಗತಿಗಳನ್ನು ವ್ಯಾಖ್ಯಾನಿಸಿ, ವಿಶ್ಲೇಷಿಸುತ್ತಾರೆ. ಅಷ್ಟೇ ಅಲ್ಲ ವಾಸ್ತವವಾಗಿ ಮುಂದಿನ ಸಮಾಜ ಹೇಗಿರಬೇಕು ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಚಿಂತಿಸುತ್ತಾರೆ. ಇದನ್ನು ಶಂಬಾ 'ಸ್ವಾತಂತ್ರ್ಯವೇ ಹೆಗ್ಗುರಿಯಾಗಿದ್ದರೆ, ಈಗಿನ ಸಮಾಜ ರಚನೆಯಲ್ಲಿ ಕೆಲವೊಂದು ಮಾರ್ಪಾಟುಗಳು ಅನಿವಾರ್ಯವೆಂದು ನನ್ನ ಮನವರಿಕೆಯಾಗಿದೆ. ಸ್ವಾತಂತ್ರ್ಯ ಅಂತೂ ಬೇಕು; ಮಾರ್ಪಾಟುಗಳು ಮಾತ್ರ ಬೇಡವೆಂಬುದು ರೂಢಿಯ ಜನದ ರೀತಿಯಾಗಿದೆ. ಜನಗಳಲ್ಲಿ ಈ ಪರಸ್ಪರ ವಿಸಂಗತಿಯ ಅರಿವು ಉಂಟಾಗದಿದ್ದರೆ ದೊರೆತ ಸ್ವಾತಂತ್ರ್ಯಕ್ಕೆ ಬೇಗನೇ ಎರವಾಗುವಲ್ಲಿ ಸಂದೇಹವಿಲ್ಲ' ಎಂದು ನಾನು ಭವಿಷ್ಯವಾದಿಯಲ್ಲ ಎನ್ನುತ್ತಲೇ ಭವಿಷ್ಯ ನುಡಿಯುತ್ತಾರೆ.

'ಯಕ್ಷಪ್ರಶ್ನೆ' ಕೃತಿಯಲ್ಲಿ ಕಾಲದ ಸ್ವಾತಂತ್ರ್ಯದ ಯಕ್ಷನು ಹೊಡ್ಡಿರುವ ೧೬ ಪ್ರಶ್ನೆಗಳನ್ನು ಶಂಬಾ ಗುರುತಿಸುತ್ತಾರೆ. ಅವು: ಜಾತಿ-ಧರ್ಮ, ಸಂಸ್ಕಾರ, ಶಿಕ್ಷಣ, ಮನಃಪರಿವರ್ತನೆ ಇಂತಹ ಪ್ರಮುಖವಾದ ಸಾಮಾಜಿಕ ಪ್ರಶ್ನೆಗಳಾಗಿದೆ. ಇಲ್ಲೆಲ್ಲ ಶಂಬಾ ಅವರಿಗೆ ನಾಳಿನ ಸಮಾಜವನ್ನು ಹಸನುಗೊಳಿಸಬೇಕು ಎಂಬ ಒಳಗುದಿ ಇರುವುದನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ.

ಶಂಬಾ ಅವರನ್ನು ಪ್ರಬಲವಾಗಿ ಕಾಡಿದ ಕೃತಿ ಮಹಾಭಾರತ. 'ಯಕ್ಷಪ್ರಶ್ನೆ' ಅಲ್ಲಿನದೇ. ಅಲ್ಲದೇ 'ಕರ್ಣನ ಮೂರು ಚಿತ್ರಗಳು' ಕೂಡ ತೀರ ಹೊಚ್ಚ ಹೊಸ ವಿಶ್ಲೇಷಣೆಗಳಿಂದ ಕೂಡಿದೆ. ಪಂಪ, ಕುಮಾರವ್ಯಾಸ, ವ್ಯಾಸ ಈ ಮೂವರ ಕರ್ಣನ ಪಾತ್ರದ ಸ್ವಭಾವವನ್ನು ಭಾವುಕತೆಯಿಂದ, ಕರುಣೆಯಿಂದ ಕಾಣದೇ ವೈಚಾರಿಕ ನೆಲೆಯಲ್ಲಿ ನೋಡಬೇಕೆಂಬ ಆಶಯ ಇಲ್ಲಿದೆ. ಇಲ್ಲೂ ಕೂಡ ಕೇವಲ ಸಾಹಿತ್ಯದ ಅಭ್ಯಾಸಿ ಒಬ್ಬನ ಕುತೂಹಲ ಮಾತ್ರವಲ್ಲ, ಸಂಸ್ಕೃತಿಯ ವ್ಯಾಖ್ಯಾನದ ತೆಕ್ಕೆಗೆ ಅದನ್ನು ತೆಗೆದುಕೊಳ್ಳುವ ರೀತಿ ಅನನ್ಯವಾಗಿದೆ. ಅಂದಿನ ದಿನಗಳಲ್ಲಿ ಕನ್ನಡನಾಡಿನಲ್ಲಿ ವೈಜ್ಞಾನಿಕ ಮಾದರಿಯ ಅಧ್ಯಾಯಕ್ಕೆ ತಳಹದಿಯನ್ನು ನಿರ್ಮಿಸಿದವರು ಶಂಬಾ ಅವರೊಬ್ಬರೆ. ಅವರ ಸತ್ಯನಿಷ್ಠುರತೆ, ವ್ಯಾಸಂಗದ ಕುತೂಹಲ ಎಲ್ಲಿಂದಲೋ ತಂದು ಜೋಡಿಸಿ ಅದಕ್ಕೊಂದು ಕ್ರಮವಾದ ರೂಪವನ್ನು ಕೊಡುತ್ತಿದ್ದ ರೀತಿ ಇಂದಿಗೂ ಅಚ್ಚರಿ ಮೂಡುವಂತಹುದು. ಅಷ್ಟೇ ಅಲ್ಲ ಈಗಾಗಲೇ ನೋಡಿದಂತೆ ಶಂಬಾ ಅವರ ಅಧ್ಯಯನ ಏಕರೂಪದ್ದಲ್ಲ, ಅನೇಕ ನೆಲೆಗಳನ್ನು ಒಳಗೊಂಡದ್ದು ಎಂದರೆ, ಬೇರೆ ಬೇರೆ ಆಯಾಮಗಳಲ್ಲಿ ಚಿಂತನೆ ನಡೆಸುತ್ತ ತಾತ್ವಿಕ ಹುಡುಕಾಟದಲ್ಲಿ ತೊಡಗುತ್ತಾರೆ. ಶಂಬಾ ಇದು ಕೇವಲ ಬರುವಂಥದ್ದಾಗಿರದೇ, ಬದುಕನ್ನು ತೀವ್ರವಾಗಿ ಅವಲೋಕಿಸುವ, ನಿರೀಕ್ಷಿಸುವ

ಗುಣದಿಂದ ಬರುವಂಥದ್ದಾಗಿದೆ. ಈ ದೃಷ್ಟಿಯಿಂದ ಶಂಬಾ ಇಡೀ ವಿದ್ವತ್ ಜಗತ್ತಿನಲ್ಲೇ ಅನನ್ಯ ರೀತಿಯ ವ್ಯಕ್ತಿಯಾಗಿ ಗುರುತಿಸಲ್ಪಟ್ಟಿದ್ದಾರೆ.

೧೯೨೧ರಲ್ಲಿ ಮೊದಲ ಕೃತಿ ರಚಿಸಿ ೩೦ರ ದಶಕದಲ್ಲಿ ಅನೇಕ ಕೃತಿಗಳನ್ನು ಹೊರತಂದ ಶಂಬಾ ಅವರ ಸಾಂಸ್ಕೃತಿಕ ಸಂಶೋಧನೆಯಲ್ಲಿ ಆಸಕ್ತಿ, ಅಧ್ಯಯನ, ಚಿಂತನೆ, ಸಂಶೋಧನೆಗಳೆಲ್ಲವೂ ಅಪೂರ್ವ ಹಾಗೂ ವಿಶಿಷ್ಟ ಮಾರ್ಗದ್ದಾಗಿದೆ. ಆದರೆ ಶಂಬಾ ಅಂದಿನ ವಿದ್ವಜ್ಜನರಲ್ಲಿ ಬಹುಪಾಲು ಎಲೆಮರೆಯ ಕಾಯಿಯಾಗಿಯೇ ಉಳಿದಿದ್ದರೂ 'ಕರ್ನಾಟಕ ವೀರಕ್ಷತ್ರಿಯರು', 'ಕನ್ನಡ ನೆಲೆ', 'ಕನ್ನಡ ನುಡಿಯ ಜೀವಾಳ', ಕೃತಿಗಳಿಗೆ ಮೈಸೂರು ಸರ್ಕಾರದ ದೇವರಾಜ ಬಹದ್ದೂರ್ ಬಹುಮಾನ, ಮರಾಠಿ ಗ್ರಂಥಕ್ಕಾಗಿ ಗ್ರಂಥಾಲಯ ಸತ್ಕಾರ ದೊರೆತಿತ್ತು. ಆದರೂ ೧೯೭೦ರಲ್ಲಿ 'ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆ' ಕೃತಿಗೆ ಭಾರತ ಸರ್ಕಾರದ ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ದೊರೆತಾಗ ಶಂಬಾ ಅವರ ಸಾಧನೆಗೆ ಅಸಾಮಾನ್ಯತೆ ಪ್ರಾಪ್ತವಾಯಿತು. ೧೯೭೧ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ಪದವಿಯನ್ನಿತ್ತು ಗೌರವಿಸಿತು. ೧೯೭೬ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯ ಅವರ 'ಪ್ರವಾಹ ಪತಿತರ ಕರ್ಮ ಹಿಂದೂ ಎಂಬ ಧರ್ಮ' ಗ್ರಂಥವನ್ನು ಪ್ರಕಟಿಸಿತು. ೧೯೮೦ರಲ್ಲಿ ಸಮಸ್ತ ಕನ್ನಡಿಗರ ಪರವಾಗಿ ಬೆಂಗಳೂರಿನಲ್ಲಿ 'ಅಧ್ಯಯನ' ಸಂಭಾವನ ಗ್ರಂಥ ಸಮರ್ಪಿಸಿ, ಸತ್ಕಾರ ಮಾಡಲಾಯಿತು. ೧೯೮೧ರ ೫೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗೌರವ ಅರಸಿ ಬಂತು. ೧೯೮೬ರಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಲಭಿಸಿತು. ೧೯೯೦ರಲ್ಲಿ 'ಶಬ್ದದಿಂದ-ಅರ್ಥದೆಡೆಗೆ' ಶಂಬಾ ಅವರನ್ನು ಕುರಿತ ಸಾಕ್ಷ್ಯ ಚಿತ್ರ ಮೂಡಿಬಂತು. ಹೀಗೆ ಶಂಬಾ ಅವರ ಇಳಿವಯಸ್ಸಿನಲ್ಲಿ ಇಡೀ ಬದುಕಿನ ಅನನ್ಯ ಸಾಂಸ್ಕೃತಿಕ ಸಂಶೋಧನೆಗೆ ತಕ್ಕ ಗೌರವ ಸಲ್ಲುವಂತಾಯಿತು.

ಶಂಬಾ ಅವರು ಸಂಶೋಧನಾ ಜಗತ್ತಿನಲ್ಲಿ ಮುಳುಗಿದ್ದವರಾದರೂ ಕಡೆಗಣಿಸಿದವರಲ್ಲ. ಅವರ ಮೂರು ಮಕ್ಕಳಲ್ಲಿ ಬಲ್ಲಾಳ ಜೋಶಿ, ಪೃಥು ಜೋಶಿ ಇಬ್ಬರೂ ಡಾಕ್ಟರೇಟ್ ಪದವಿ ಪಡೆದು ವಿದೇಶದಲ್ಲಿ ಪ್ರತಿಭಾವಂತ ವಿಜ್ಞಾನಿಗಳಾಗಿದ್ದು, ಸದ್ಯದಲ್ಲಿ ಅಮೇರಿಕೆಯಲ್ಲಿ ವಾಸವಾಗಿದ್ದಾರೆ. ಮಗಳು ವಿಮಲಾ ಡಿಸ್ಕಳ್ಕರ್ ನರ್ಸಿಂಗ್ ತರಬೇತಿ ಪಡೆದು ಮೇಟ್ರನ್ ಹುದ್ದೆಯಲ್ಲಿದ್ದು ಈಗ ನಿವೃತ್ತ ಜೀವನ ಸಾಗಿಸುತ್ತಿದ್ದಾರೆ. ಶಂಬಾ ಅವರು ಪದವೀಧರರಾಗಲು ಪರಿಸ್ಥಿತಿ ಅನುವು ಮಾಡಿಕೊಡದಿದ್ದರೂ ಮಕ್ಕಳ ಸಾಧನೆ ಅವರ ಬದುಕಿಗೆ ನೆಮ್ಮದಿಯನ್ನು ನೀಡಿತ್ತು.

ಈ ಎಲ್ಲ ಸಾಧನೆಯ ಹಿನ್ನೆಲೆಯಲ್ಲಿ ಶಂಬಾ ಅವರ ಬದುಕು ಹೂವಿನ ಹಾದಿಯೇನೂ ಆಗಿರಲಿಲ್ಲ. ಜೀವನ ನಿರ್ವಹಣೆಗೆಂದು ಶಿಕ್ಷಕ ವೃತ್ತಿ ಇದ್ದರೂ

ಬಾಳಿನುದ್ದಕ್ಕೂ ಮತ್ತೆ ಮತ್ತೆ ತೀವ್ರವಾಗಿ ಕೆಡುತ್ತಿದ್ದ ಆರೋಗ್ಯ ಅವರನ್ನು ಕಂಗೆಡಿಸುತ್ತಿತ್ತು. ಅನಾರೋಗ್ಯ ಕಾರಣದಿಂದಾಗಿಯೇ ಶಂಬಾ ವೃತ್ತಿಯಿಂದ ಸ್ವಯಂ ನಿವೃತ್ತಿಯನ್ನು ಪಡೆಯಬೇಕಾಯಿತು. ಆ ಸಂದರ್ಭಗಳಲ್ಲಿ ಪತಿಯ ಸಾಹಿತ್ಯ ಸೇವೆಗೆ ಒತ್ತಾಸೆಯಾಗಿ ನಿಂತು ಎಲ್ಲ ರೀತಿಯ ಗಮನ ಕೊಟ್ಟು ಕಾಪಾಡಿಕೊಂಡು ಬಂದವರು ಪತ್ನಿ ಪಾರ್ವತಿಬಾಯಿ. ಶಂಬಾ ಜೋಶಿಯವರು ತಮ್ಮ ಪತ್ನಿಯ ಸಹನೆ, ಸಹಕಾರಗಳನ್ನು ಈ ರೀತಿ ಸ್ಮರಿಸಿದ್ದಾರೆ. 'ನನ್ನ ಈ ಜಿಜ್ಞಾಸೆಯ ಹುಚ್ಚಿನಲ್ಲಿ ನನ್ನ ಮಡದಿಗೆ ಅನುಭವಿಸಬೇಕಾದ ತಾಪತ್ರಯಗಳನ್ನು ಹೇಳಿ ತಿಳಿಯದು. ನಮ್ಮ ಆ ಜೀವನ ಪ್ರಯೋಗದಲ್ಲಿ ಬಡತನದ ತೀವ್ರತೆಯನ್ನು ಸಹಿಸುವ ಸಾಮರ್ಥ್ಯವು ಬಂದದ್ದು ಮಹಾತ್ಮಾಜೀಯವರ ಪುಣ್ಯದಿಂದ! ನನ್ನ ಆ ಆರ್ಥಿಕ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ನನ್ನೊಡನೆ ಬಾಳ ಸಮ್ಮುದಿಗಾಗಿ ಸಹಕರಿಸಿದ ಜೀವನ ಸಂಗಾತಿಯನ್ನು ಈ ಕೊನೆಯ ಘಟ್ಟದಲ್ಲಿಯೂ ಸ್ಮರಿಸಿಕೊಳ್ಳದಿದ್ದರೆ ಮಹಾಪರಾಧವಾಗಲಿದೆ' ಎನ್ನುವಲ್ಲಿ ಪತಿ-ಪತ್ನಿಯರ ಪರಸ್ಪರ ಸಹೃದಯತೆ ಗೋಚರವಾಗುತ್ತಿದೆ. ಶಂಬಾ ಅವರನ್ನು ಸಮೀಪದಿಂದ ಬಲ್ಲವರು ಹೇಳುವಂತೆ ಶಂಬಾ ದಂಪತಿಗಳದು ಆದರ್ಶ ಸಂಸಾರ. ಬದುಕಿನಲ್ಲಿ ಹೇಗೋ ಸಾವಿನಲ್ಲೂ ಒಂದಾಗಿ ಒಂದೇ ದಿನ ಚಿತೆಯನ್ನು ಏರಿದ 'ಜನುಮದ ಜೋಡಿ' ಇವರದು.

'ಸಂಶೋಧಕನಿಗೆ ಸುಲಭ ಮಾರ್ಗವಿಲ್ಲ, ದುರ್ಗಮ ದಾರಿಯಲ್ಲಿ ನಡೆದೂ ಜನಪ್ರಿಯತೆ ದೊರಕುವುದಿಲ್ಲ' ಎಂಬ ಮಾತೊಂದಿದೆ. ಅದರಂತೆ ಪಂಡಿತ ಮಾನ್ಯರಾದ ಶಂಬಾ ಅವರ ಸುಮಾರು ೪೦ ಕೃತಿಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರವು ಆರು ಬೃಹತ್ ಸಂಪುಟದಲ್ಲಿ ಹೊರತಂದು ಕನ್ನಡಿಗರ ಕೈಗಿಟ್ಟಿರುವುದು ಶ್ಲಾಘನೀಯ ಕಾರ್ಯವಾಗಿದೆ. ಶಂಬಾ ಅವರ ಬಹುಶ್ರುತ ಚಿಂತನೆಗಳನ್ನು ಅರ್ಥೈಸಿಕೊಳ್ಳುವುದು ಸುಲಭ ಸಾಧ್ಯವಲ್ಲ. ಈ ರೀತಿಯ ಶಂಬಾ ಅವರ ಗ್ರಂಥ ಭಂಡಾರಕ್ಕೆ ಕೀಲಿಕೈ ಎನಿಸುವಂಥ ಸೂಕ್ತ ಪ್ರಸ್ತಾವನೆಯನ್ನು ಕೊಟ್ಟು, ವಿಷಯ ಹಾಗೂ ಚಾರಿತ್ರಿಕಾನುಸಾರವಾಗಿ ಸಂಪಾದಿಸಿಕೊಟ್ಟ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರ ಪರಿಶ್ರಮವು ಸಾರ್ಥಕವೆನಿಸಿದೆ.

ಶಂಬಾ ಕೃತಿ ಶ್ರೇಣಿ

೧೯೨೧ ಮಹರ್ಷಿ ಅರವಿಂದ ಘೋಷರ ಚರಿತ್ರವು

೧೯೨೮ ಉಪನಿಷತ್ ರಹಸ್ಯ (ಮೂಲ ಇಂಗ್ಲೀಷ್‌ನಿಂದ ಕನ್ನಡಕ್ಕೆ ಅನುವಾದ)

೧೯೩೨ ಟಿಳಕ ಕಥಾಮೃತ ಸಾರ

೧೯೩೩ ಕಣ್ಮರೆಯಾದ ಕನ್ನಡ

೧೯೩೪ ಮಹಾರಾಷ್ಟ್ರದ ಮೂಲ

೧೯೩೬ ಕರ್ನಾಟಕದ ವೀರ ಕ್ಷತ್ರಿಯರು (೧೯೬೬ರಲ್ಲಿ ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ, ಪ್ರಸ್ತಾಪ ಹೆಸರಿನಿಂದ ಮುದ್ರಣ)

೧೯೩೭ ಕಂನುಡಿಯ ಹುಟ್ಟು ಅಥವಾ ನಿರುಕ್ತ

೧೯೩೯ ಶಿವ ರಹಸ್ಯ

೧೯೩೯ ಕನ್ನಡದ ನೆಲೆ .

೧೯೪೦ ಮಕ್ಕಳ ಒಡಪುಗಳು

೧೯೪೦ ರೂಢಿ ಹಾಗೂ ಭಾವಿಕ ಕಲ್ಪನೆಗಳು

೧೯೪೩ ಎದ್ದೇಳು ಕನ್ನಡಿಗಾ! ಅಥವಾ ಅಸಂತೋಷವೇ ಏಳ್ಗೆಯ ಮೂಲ

೧೯೪೩ ದಾರಿಯ ಬುತ್ತಿ

೧೯೪೪ ಶ್ರೀಮದ್ ಭಗವದ್ಗೀತೆ-ಪುರುಷಾರ್ಥ ಬೋಧಿನಿ (ಸಟೀಕಾ) ಭಾಗ-೧ (ಮರಾಠಿಯಿಂದ ಕನ್ನಡಕ್ಕೆ ಅನುವಾದ)

೧೯೪೪ ಕನ್ನಡ ನುಡಿಯ ಜೀವಾಳ

೧೯೪೬ ಅಗ್ನಿವಿದ್ಯೆ

೧೯೪೬ ಸನಾತನ ಧರ್ಮ

೧೯೪೭ ಎಡೆಗಳು ಹೇಳುವ ಕಂನಾಡ ಕತೆ

೧೯೪೭ ಕರ್ಣನ ಮೂರು ಚಿತ್ರಗಳು

೧೯೪೮ ಯಕ್ಷ ಪ್ರಶ್ನೆ ಅಥವಾ ಬರಲಿರುವ ಸಮಾಜ

೧೯೪೯ ಸಮಾಜ ದರ್ಶನ

೧೯೫೦ ಸೌಂದರ್ಯ ವಿಕಾರ

೧೯೫೨ ಮರ್ಹಾಟೀ ಸಂಸ್ಕೃತಿ; ಕಾಹೀ ಸಮಸ್ಯಾ (ಮರಾಠಿ) ವಿಸ್ತೃತ ಆವೃತ್ತಿ ೧೯೮೦ರಲ್ಲಿ.

೧೯೬೦ ಹಾಲುಮತ ದರ್ಶನ

೧೯೬೭ ಕರ್ಣಾಟ ಸಂಸ್ಕೃತಿಯ ಪೂರ್ವಪೀಠಿಕೆ - ಪ್ರಥಮ ಭಾಗ

೧೯೭೧ ಋಗ್ವೇದ ಸಾರ : ನಾಗ ಪ್ರತಿಮಾ ವಿಚಾರ

೧೯೭೫ ಸತ್-ತ್ಯ ಮತ್ತು ಸತ್ಯ

೧೯೭೫ ಭಾಷೆ ಮತ್ತು ಸಂಸ್ಕೃತಿ

೧೯೭೬ ಕನ್ನಡ ಸಾಹಿತ್ಯ ಅಭಿವೃದ್ಧಿ

೧೯೭೬ ಪ್ರವಾಹ ಪತಿತರ ಕರ್ಮ : ಹಿಂದೂ ಎಂಬ ಧರ್ಮ

೧೯೭೭ ಶ್ರೀಮತ್ ಭಗವದ್ಗೀತೆಯಲ್ಲಿ ಹುದುಗಿರುವ ರಾಜಯೋಗದ ಸ್ವರೂಪ

೧೯೭೮ ಸಾಂಸ್ಕೃತಿಕ ಮೂಲದಲ್ಲಿನ ತಾತ್ವಿಕ ಚಿಂತನೆಗಳು (ಎದ್ದೇಳು ಕನ್ನಡಿಗಾ ಅಥವಾ ಅಸಂತೋಷವೇ ಏಳ್ಗೆಯ ಮೂಲ ಇದರ ತಿದ್ದಿದ ಆವೃತ್ತಿ)

೧೯೭೯ ವೈವಸ್ವತಮನು ಪ್ರಣೀತ ಮಾನವ ಧರ್ಮದ ಆಕೃತಿ

೧೯೮೦ ಬುಧನ ಜಾತಕ

೧೯೮೧ ಕಂನಾಡವರ ಸಂಸ್ಕೃತಿಯ ಗತಿ-ಸ್ಥಿತಿ

೧೯೮೪ ಬಿತ್ತಿದ್ದನ್ನು ಬೆಳಕೊ

೧೯೮೬ ಜೀವನದ ಅರ್ಥಗ್ರಹಣ ಪದ್ಧತಿ

೧೯೯೦ ಮರಾಠಿ ಸಂಸ್ಕೃತಿ : ಕೆಲವು ಸಮಸ್ಯೆಗಳು (೧೯೫೨ ಮರಾಠಿಯಿಂದ ಕನ್ನಡಕ್ಕೆ : ಡಾ. ಕೆ.ಡಿ. ಕುರ್ತಕೋಟಿ)

೧೯೯೬ ಶಂ.ಬಾ. ಜೋಶಿಯವರ ಆಯ್ದ ಲೇಖನಗಳು
ಸಂಪಾದಕರು: ಮಲ್ಲೇಪುರಂ ಜಿ. ವೆಂಕಟೇಶ್

೧೯೯೯ ಸ್ಥಿತ್ಯಂತರ (ಮರಾಠಿ ಆಯ್ದ ಲೇಖನಗಳು. ಅನುವಾದ: ಡಾ. ಗೌರೀಶ ಕಾಯ್ಕಿಣಿ)

ಗ್ರಂಥಋಣ: 'ಸತ್ಯಾನ್ವೇಷಕ ಡಾ. ಶಂ.ಬಾ. ಜೋಶಿ' ಪ್ರೊ. ಜ್ಯೋತಿ ಹೊಸೂರ (೨೦೦೦) ಕನ್ನಡ ಪುಸ್ತಕ ಪ್ರಾಧಿಕಾರ.

ಡಾ|| ಹಾ.ಮಾ. ನಾಯಕ ಸಾಹಿತ್ಯದಲ್ಲೊಬ್ಬ ಸಾತ್ವಿಕ



❒ ಟಿ. ಮಹಾಬಲೇಶ್ವರ ಭಟ್ಟ

ಹಾರೋಗದ್ದೆ ಮಾನಪ್ಪ ನಾಯಕ ಹುಟ್ಟೂರು ಮಲೆನಾಡಿನ ಸಿರಿಯ ಊರಾದ ತೀರ್ಥಹಳ್ಳಿಯ ಹಾರೋಗದ್ದೆ, ತಂದೆ ಶ್ರೀನಿವಾಸ ನಾಯಕರು, ತಾಯಿ ಶ್ರೀಮತಿ ರುಕ್ಮಿಣಿಯಮ್ಮ ಜನನ ೧೯೩೧ ಅಲ್ಲಿಯ ಹೊಸಮನೆಯಲ್ಲಿ ಅವರ ಬಾಲ್ಯ. ಪ್ರಾಥಮಿಕ ವಿದ್ಯಾಭ್ಯಾಸ ಮಲೆನಾಡಿನ ನಾಲೂರು, ಮೇಗರವಳ್ಳಿ, ತೀರ್ಥಹಳ್ಳಿ ನಂತರ ಶಿವಮೊಗ್ಗ ಇಲ್ಲಿಯ ಪ್ರಕೃತಿಯ ಸಿರಿಯ ಸೊಬಗನ್ನ ಉಂಡ ವ್ಯಕ್ತಿ. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಆನರ್ಸ್ ಪದವಿ. ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಭಾಷಾ ಶಾಸ್ತ್ರದ ಬಗ್ಗೆ ಎಂ.ಎ. ಪ್ರಥಮ ರ್‍ಯಾಂಕ್‌ನಲ್ಲಿ ಉತ್ತೀರ್ಣ, ಸುವರ್ಣ ಪದಕ, ಅಮೇರಿಕೆಯ ಇಂಡಿಯಾನ ವಿಶ್ವವಿದ್ಯಾನಿಲಯದಲ್ಲಿ ಪಿ.ಎಚ್.ಡಿ. ಪದವಿ, ಇವೆಲ್ಲವೂ ಡಾ. ಹಾ.ಮಾ. ನಾಯಕರ ಜೀವನದಲ್ಲಿ ಸುಲಭವಾಗಿ ನಡೆದ ಸಂಗತಿಗಳು.

ಡಾ. ಹಾ.ಮಾ. ನಾಯಕರ ಗುರು ಕುವೆಂಪು. ನಂತರದಲ್ಲಿ ಡಾ. ದೇ. ಜವರೇಗೌಡರು. ಅನಂತರ ಜವರೇಗೌಡರು, ಹಾ.ಮಾ. ನಾಯಕರು ಗುರು-ಶಿಷ್ಯ ಸಂಬಂಧದಿಂದ ದೂರ ಸರಿದು ಆತ್ಮೀಯ ಮಿತ್ರರಾದರು. ಕುವೆಂಪು ದೇ. ಜವರೇ ಗೌಡರು, ಹಾ.ಮಾ.ನಾ. ಈ ಮೂರು ಜನರ ಸಂಗಮದಿಂದ ಮೈಸೂರು ವಿಶ್ವವಿದ್ಯಾನಿಲಯದ "ಮಾನಸ ಗಂಗೋತ್ರಿ".

ಡಾ. ಹಾ.ಮಾ. ನಾಯಕರು ಪ್ರಾರಂಭದಲ್ಲಿ ತುಮಕೂರು, ಶಿವಮೊಗ್ಗದಲ್ಲಿ ಉಪಾಧ್ಯಾಯ ವೃತ್ತಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಭಾಷಾ ಶಾಸ್ತ್ರದ ಸಹ ಪ್ರಾಧ್ಯಾಪಕ, ಅಮೇರಿಕಾದ ಪ್ರವಾಸ, ಇಂಡಿಯಾನಾ ವಿಶ್ವವಿದ್ಯಾನಿಲಯದಲ್ಲಿ ಸಂಶೋಧಕ ಸಹಾಯಕರಾಗಿ ಕೆಲಸ, ಪುನಃ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಆಗಮನ. ಅಲ್ಲಿ ಕನ್ನಡ ಹಾಗೂ ಭಾಷಾ ಶಾಸ್ತ್ರದ ಪ್ರಾಧ್ಯಾಪಕ. ಕೊನೆಯಲ್ಲಿ ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿ ಕುಲಪತಿ. ಇದು ಹಾ.ಮಾ. ನಾಯಕರ ಜೀವನದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ನಡೆದ ಘಟನೆಗಳು.

೧೯೪೬ನೇ ಇಸವಿ ಇರಬೇಕು. ಸಾಗರದ ಪುರ ಪ್ರೌಢಶಾಲೆಯಲ್ಲಿ ಶಿವಮೊಗ್ಗ ಜಿಲ್ಲೆಯ ಪ್ರೌಢಶಾಲೆಗಳ ವಿದ್ಯಾರ್ಥಿಗಳ ಚರ್ಚಾಗೋಷ್ಠಿ ನಡೆದ ಸಮಯ. ಅದಕ್ಕೆ

ವಿಳಾಸ : ನಂ. ೭೩, ಸುದರ್ಶನ, ಶ್ರೀಮಾರಿಕಾಂಬ ರಸ್ತೆ, ಸಾಗರ-೫೭೭೪೦೧, ಶಿವಮೊಗ್ಗ ಜಿಲ್ಲೆ

ತೀರ್ಥಹಳ್ಳಿ ಪ್ರೌಢಶಾಲೆಯಿಂದ ಪ್ರತಿನಿಧಿಯಾಗಿ ಡಾ॥ ಹಾ.ಮಾ. ನಾಯಕರು ಬಂದಿದ್ದರಂತೆ. ಆಗ ತಾನೇ ನಾನು ಪತ್ರಿಕೆಗಳಿಗೆ ಲೇಖನ ಬರೆಯಲು ಪ್ರಾರಂಭಿಸಿದ್ದ ಸಮಯ. ಅಂದು ಚರ್ಚಾಗೋಷ್ಠಿ ಮುಗಿದ ನಂತರ, ನನ್ನ ಮನೆಯನ್ನು ಹುಡುಕಿಕೊಂಡು ಬಂದು ತಮ್ಮನ್ನು ತಾವಾಗಿಯೇ ಪರಿಚಯಿಸಿಕೊಂಡರು. ನನ್ನ ಅವರ ಭೇಟಿ, ಪ್ರಥಮವಾಗಿ ನಡೆದದ್ದು ಹೀಗೆ. ಒಂದೆರಡು ಗಂಟೆ ಇದ್ದು ಕಾಫಿ, ತಿಂಡಿ ತಿಂದು ಸಾಕಷ್ಟು ಮಾತನಾಡಿದ ನಂತರ ತೀರ್ಥಹಳ್ಳಿಗೆ ಹೊರಟು ಹೋದರು. ಅನಂತರ ಪರಸ್ಪರ ಪತ್ರ ವ್ಯವಹಾರ ಪ್ರಾರಂಭ. ಚಿಕ್ಕಮಗಳೂರಿನಿಂದ ಹೊರಡುತ್ತಿದ್ದ ಮಾಸಿಕ "ಮಲೆನಾಡು" ಪತ್ರಿಕೆಗೆ ನಾನು ಮತ್ತು ಹಾ.ಮಾ. ನಾಯಕರು ಸುಮಾರು ಹತ್ತು ವರ್ಷಗಳ ಕಾಲ ಪ್ರತಿ ತಿಂಗಳು ಬೇರೆ ಬೇರೆ ವಿಷಯದಲ್ಲಿ ಬರೆಯುತ್ತಾ ಬಂದಿದ್ದೆವು. ಆ ಕಾಲದಲ್ಲಿ ಎಂ.ವಿ. ಗುರುಬಸಪ್ಪ ಶೆಟ್ಟಿ ಹೊರಡಿಸುತ್ತಿದ್ದ ಈ ಪತ್ರಿಕೆ ತುಂಬಾ ಸೊಗಸಾಗಿ ಮುದ್ರಣಗೊಂಡು ತುಂಬಾ ಜನಪ್ರಿಯವಾಗಿತ್ತು. ಅನೇಕರು ಹಾ.ಮಾ. ನಾಯಕರ ಮತ್ತು ನನ್ನ ಲೇಖನ ಪ್ರತಿ ತಿಂಗಳು ಬರುವುದನ್ನು ನೋಡಿ ಈ ಪತ್ರಿಕೆಗೆ ಇವರಿಬ್ಬರೂ ಪಾಲುದಾರರಾಗಿರಬೇಕೆಂದು ಭಾವಿಸಿದ್ದರು. ಈ ಕುರಿತು ನನಗೆ ಅಂದು ನಾಲ್ಕಾರು ಪತ್ರಗಳೂ ಬಂದಿದ್ದವು. ಹಾ.ಮಾ.ನಾ. ರವರಿಗೆ ಎಷ್ಟು ಪತ್ರಗಳು ಬಂದಿದ್ದವೋ ಗೊತ್ತಿಲ್ಲ. ಅಂದು ಬರೆಯುವವರ ಸಂಖ್ಯೆ ಕಡಿಮೆ ಇದ್ದುದರಿಂದ ನಮ್ಮ ಉತ್ಸಾಹಕ್ಕೆ ಸಂಪಾದಕರು ಪ್ರೋತ್ಸಾಹ ನೀಡುತ್ತಿದ್ದರು ಅಷ್ಟೆ. ಜನ ತಿಳಿದಂತೆ ನಮ್ಮಿಬ್ಬರ ಪಾಲುದಾರಿಕೆ ಇರಲಿಲ್ಲ.

ವರಕವಿ ದ.ರಾ. ಬೇಂದ್ರೆಯವರನ್ನು ಸಾಗರಕ್ಕೆ ಕರೆಸಿ ಗೌರವಿಸಬೇಕೆಂದು ನಾನು, ನನ್ನ ಮಿತ್ರರಾದ ಕೆ.ವಿ. ಸುಬ್ಬಣ್ಣ ತೀರ್ಮಾನಿಸಿ, ಬೇಂದ್ರೆಯವರನ್ನು ಸಂಪರ್ಕಿಸಿದೆವು. ಸಾಗರಕ್ಕೆ ಬರಲು ಒಪ್ಪಿದರು. ಆ ಸಂದರ್ಭದಲ್ಲಿ ಅಭಿನಂದನ ಭಾಷಣ ಮಾಡಲು ಯಾರನ್ನು ಕರೆಸಬೇಕೆಂದು ಯೋಚಿಸಿದಾಗ ಹಾ.ಮಾ. ನಾಯಕರನ್ನು ಕರೆಸೋಣ. ಚೆನ್ನಾಗಿ ಮಾತನಾಡುತ್ತಾರೆ. ಯುವಕರೂ ಆಗಿದ್ದಾರೆ ಎಂದು ತೀರ್ಮಾನಕ್ಕೆ ಬಂದು, ನಾಯಕರಿಗೆ ಪತ್ರ ಬರೆದು ಕೇಳಿಕೊಂಡೆವು. ಸಂತೋಷದಿಂದ ಒಪ್ಪಿ ಬಂದರು. ಬೇಂದ್ರೆಯವರಿಗೂ ಖುಶಿಯಾಗಿತ್ತು. ಅಂದು ಬೇಂದ್ರೆಯವರ ಸಮಗ್ರ ಕಾವ್ಯವನ್ನು ಕುರಿತು ದೀರ್ಘವಾಗಿ ಮಾತನಾಡಿದ್ದಲ್ಲದೆ ಬೇಂದ್ರೆಯವರ ಮುಗ್ಧ ವ್ಯಕ್ತಿತ್ವ, ಕಾವ್ಯದ ಧೀಶಕ್ತಿಯನ್ನು ಕುರಿತು ತುಂಬಾ ಸೊಗಸಾಗಿ ಮಾತನಾಡಿದರು. ಬೇಂದ್ರೆಯವರಂತೂ ನಾಯಕರ ಮಾತುಗಳ ನೆನಪನ್ನು ತಮ್ಮ ಭಾಷಣದಲ್ಲಿ ಆಗಾಗ ನೆನಪಿಸಿಕೊಳ್ಳುತ್ತಿದ್ದರು. ಅಂದು ಸಮಾರಂಭವಲ್ಲಿ ಸೇರಿದ ಜನರಿಗೆ ಆದ ಸಂತೋಷಕ್ಕೆ ಎಣೆಯೇ ಇರಲಿಲ್ಲ. ಅಂದಿನಿಂದ ನನ್ನ ಹಾ.ಮಾ. ನಾಯಕರ ಸ್ನೇಹ ಸೌಹಾರ್ದ, ಆತ್ಮೀಯತೆ ಗಟ್ಟಿಯಾಗಿ ನೆಲೆಗೊಂಡಿತು.

ಈಗ್ಗೆ ೨೫ ವರ್ಷಗಳ ಹಿಂದೆ ನನ್ನ ಆತ್ಮೀಯರೊಬ್ಬರು ಅವರ ಮಗನಿಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎ., ತರಗತಿಗೆ ಸ್ಥಳವನ್ನು ಹಾ.ಮಾ. ನಾಯಕರ

ಮೂಲಕ ಕೊಡಿಸುವಂತೆ ನನ್ನ ಬಳಿ ಬಂದಿದ್ದರು. ಆ ವಿದ್ಯಾರ್ಥಿಗೆ ವಿಶ್ವವಿದ್ಯಾನಿಲಯದಲ್ಲಿ ಸ್ಥಳ ಸಿಗಲು ಕೇವಲ ನಾಲ್ಕು ಅಂಕಗಳು ಕಡಿಮೆಯಾಗಿತ್ತು. ನಾನು ಇದು ಕಷ್ಟಕರ ವಿಶ್ವವಿದ್ಯಾನಿಲಯದ ಕಾನೂನು ಬಹಳ ನಾಜೂಕಾಗಿದೆ. ನೀವು ಬೇರೆಯವರ ಮೂಲಕ ಪ್ರಯತ್ನಿಸಿ. ಹಾ.ಮಾ. ನಾಯಕರು ಕೆಲವೊಂದು ತತ್ವಸಿದ್ಧಾಂತಗಳನ್ನು ಉಳ್ಳವರು. ಅವರಲ್ಲಿ ಹೇಳುವುದು ನನಗೂ ಕಷ್ಟವಾಗುತ್ತದೆ. ಇದರಿಂದ ನಮ್ಮ ಸ್ನೇಹಕ್ಕೂ ಧಕ್ಕೆಯಾಗಬಹುದು ಎಂದು ಎಷ್ಟು ಹೇಳಿದರೂ ಅವರು ಕೇಳಲಿಲ್ಲ. ಕೊನೆಗೆ ಏನಾದರೂ ಆಗಲಿ ಎಂದು ಅವರೊಡನೆ ಕಾರಿನಲ್ಲಿ ಹೊರಟೆ. ಮೈಸೂರು ವಿಶ್ವವಿದ್ಯಾನಿಲಯ ತಲುಪುವಾಗ ಮಧ್ಯಾಹ್ನ ೨ ಗಂಟೆ. ನಾಯಕರು ಮನೆಗೆ ಊಟಕ್ಕೆ ಹೋಗಿದ್ದರು. ಅರ್ಧ ಗಂಟೆಯಲ್ಲಿ ಬಂದರು. ಮೊದಲು ಕಾಫಿ, ಆಮೇಲೆ ಮಾತು ಎಂದು ಹೇಳಿ ಜರೂರು ಕಾಗದಗಳಿಗೆ ಸಹಿ ಹಾಕುತ್ತಿದ್ದರು. ಕಾಫಿ ಹೀರಿದ ನಂತರ ನಾನು ಬಂದ ಸಂಗತಿ ಹೇಳಿದೆ. ವಿದ್ಯಾರ್ಥಿಯ ಅಂಕದ ಪಟ್ಟಿ, ಪ್ರವೇಶ ಪತ್ರ ಅವರ ಮುಂದಿಟ್ಟು ಈ ಕೆಲಸ ಮಾಡಿಕೊಟ್ಟರೆ ನೇರವಾಗಿ ನನಗೆ ಉಪಕಾರ ಮಾಡಿದಂತಾಗುತ್ತದೆ ಎಂದೆ, ನಕ್ಕರು. ಸ್ವಲ್ಪ ಹೊತ್ತು ಸುಮ್ಮನಿದ್ದು, ಅಂಕದ ಪಟ್ಟಿ, ಪ್ರವೇಶ ಪತ್ರ ಕೈಯಲ್ಲಿ ಹಿಡಿದು ತಮ್ಮ ಕೊಠಡಿಯಿಂದ ಹೊರ ಹೋದರು. ನಾವೆಲ್ಲಾ ಅವರ ಕೋಣೆಯಲ್ಲಿಯೇ ಕುಳಿತಿದ್ದೆವು. ಅರ್ಧ ಗಂಟೆಯ ನಂತರ ಬಂದು, "ಕುಲಪತಿಗಳನ್ನು ಕಂಡುಬಂದೆ. ನಿಮ್ಮ ಜಿಲ್ಲೆಯವರು ಎಂದು ಹೇಳುತ್ತೀರಿ, ಈ ತನಕ ನನ್ನಲ್ಲಿ ಏನನ್ನೂ ಕೇಳಿಲ್ಲ. ಸೇರಿಸಿಕೊಳ್ಳೋಣ. "ಚೆನ್ನಾಗಿ ಓದಲಿ" ಎಂದಿದ್ದಾರೆ ಎಂದರು. ಆ ವಿದ್ಯಾರ್ಥಿಯ ಯೋಗ ಚೆನ್ನಾಗಿತ್ತು. ನನ್ನ ಅದೃಷ್ಟವೂ ಕೂಡಿಬಂದಿತ್ತು. ಮುಂದೆ ಆ ವಿದ್ಯಾರ್ಥಿ ಎಲ್ಲಾ ಪರೀಕ್ಷೆಯಲ್ಲೂ ಮೊದಲ ಶ್ರೇಣಿಯಲ್ಲಿ ಬಂದು, ಈಗ ಕೇಂದ್ರ ಸರ್ಕಾರದ ಒಳ್ಳೆಯ ಹುದ್ದೆಯಲ್ಲಿದ್ದಾರೆ. ಇದನ್ನ ನಾನು ಆಗಾಗ ನೆನಪಿಸಿಕೊಳ್ಳುತ್ತೇನೆ. ನಾಯಕರು ನಾನು ಇಬ್ಬರೇ ಸೇರಿದಾಗ ಅವರಿಗೂ ಆಗಾಗ ಜ್ಞಾಪಿಸುತ್ತಾ ಬಂದಿದ್ದೇನೆ. ಒಬ್ಬರಿಗೆ ಉಪಕಾರ ಮಾಡುವ ಮನಸ್ಸು ಇದ್ದರೆ ಅದು ಒಳ್ಳೆಯದಾಗಿದ್ದರೆ, ಅವರಿಗೆ ಸಾತ್ವಿಕ ಗುಣಗಳಿದ್ದರೆ, ಸುಲಭವಾಗಿ ಕೆಲಸಗಳು ಆಗುತ್ತವೆ ಎನ್ನುವುದಕ್ಕೆ ಹಾ.ಮಾ. ನಾಯಕರು ಉತ್ತಮ ಉದಾಹರಣೆಯಾಗಿ ನನ್ನ ಮುಂದೆ ಸದಾ ಇದ್ದಾರೆ. ಡಾ|| ಹಾ.ಮಾ. ನಾಯಕರು, ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾದಾಗ, ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಕುಲಪತಿಗಳಾದಾಗ, ನಾನು ಅವರಿಗೆ ಶುಭಕೋರಿ ವಿಶೇಷವಾದ ಪತ್ರವನ್ನು ಬರೆದೆ. "ನೀವು ಸಮ್ಮೇಳನಾಧ್ಯಕ್ಷರಾಗಿರುವುದು, ವಿಶ್ವವಿದ್ಯಾನಿಲಯದ ಕುಲಪತಿಗಳಾಗಿರುವುದು, ನಾನು ಆದಷ್ಟೇ ಸಂತೋಷವಾಗಿದೆ" ಎಂಬ ವಾಕ್ಯ ಕೂಡಾ ಅದರಲ್ಲಿತ್ತು. ಹಾ.ಮಾ.ನಾ. ಉತ್ತರಿಸುತ್ತಾ, "ನಿಮ್ಮ ಪತ್ರದಲ್ಲಿ ನಾನು ಆದಷ್ಟೇ ಸಂತೋಷವಾಗಿದೆ ಎಂದು ಬರೆದಿದ್ದೀರಿ. ನಿಜವಾದ ಸ್ನೇಹಿತ ಆಡುವ ಮಾತಿದು. ಅಂತೂ ನನಗೊಬ್ಬ ಆತ್ಮೀಯ ಬಂಧು ಇದ್ದಾರೆಂಬುದೇ ನನಗೆ ಸಂತೋಷ. ಈ ಮಾತನ್ನ ನಾನು ಜೀವನ ಪರ್ಯಂತ ನೆನೆಯುತ್ತಿರುತ್ತೇನೆ" ಎಂದು ಬರೆದಿದ್ದರು. ತಮ್ಮ ಜೀವನದುದ್ದಕ್ಕೂ ಮಗುವಿನ ಹೃದಯವನ್ನು ಕಾಯ್ದುಕೊಂಡು ಬಂದರು. ಇವರು ಬೇರೆ ಬೇರೆ ಕಡೆಗಳಲ್ಲಿ ಭಾಷಣ

ಮಾಡಿದ ಸಂದರ್ಭದಲ್ಲಿ ನಾನು ಇಪ್ಪತ್ತಕ್ಕೂ ಹೆಚ್ಚು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೆ. ಇವರ ಭಾಷಣ ಕೇಳುವುದೆಂದರೆ ಕಿವಿಗೊಂದು ಹಬ್ಬ, ಕಣ್ಣಿಗೆ ಆನಂದ, ಹೃದಯಕ್ಕೆ ತಂಪು. ಅವರ ವ್ಯಕ್ತಿತ್ವವೇ ಸಂತೋಷ ಕೊಡುವಂತಹುದು.

ಈಗ್ಗೆ ನಾಲ್ಕು ವರ್ಷಗಳ ಹಿಂದೆ ಶಿವಮೊಗ್ಗದಲ್ಲಿ ಕಾದಂಬರಿಕಾರ ಡಾ. ಎಸ್.ಎಲ್. ಭೈರಪ್ಪನವರ ಸಾಹಿತ್ಯ ಕುರಿತು ವಿಚಾರ ಸಂಕಿರಣ ನಡೆಯಿತು. ಡಾ. ಹಾ.ಮಾ. ನಾಯಕರು ಆ ಸಮಾರಂಭಕ್ಕೆ ಬರುವವರಿದ್ದರು. ಒಂದು ವಾರದ ಮುಂಚೆ ನನಗೊಂದು ಅಂಚೆ ಕಾರ್ಡು ಅವರಿಂದ ಬಂತು. ನಾನು ಶಿವಮೊಗ್ಗಕ್ಕೆ ಬರುತ್ತಿದ್ದೇನೆ; ಬಿಡುಪಿದ್ದರೆ ಬನ್ನಿ ಎಂದು. ಆಗ ನಾನು ಹೋದೆ. ಎರಡು ದಿನದ ಕಾರ್ಯಕ್ರಮ. ಈ ಎರಡು ದಿನ, ಭೈರಪ್ಪ, ಹಾ.ಮಾ.ನಾ., ನಾನು ಕಳೆದ ಸಮಯವನ್ನು ಮರೆಯಲು ಸಾಧ್ಯವಿಲ್ಲ. ಇದೇ ಸಮಯದಲ್ಲಿಯೇ ಅವರ ಬರೆಯುವ ಕೈ ನೋವಿನಿಂದ ಪೀಡಿಸುತ್ತಿತ್ತು. ಡಾಕ್ಟರ್ ಹತ್ತಿರ ಪರೀಕ್ಷೆ ಮಾಡಿಸಿದಾಗ ಅವರ ಡಾಕ್ಟರು ಹೇಳಿದರಂತೆ, ಇದು ರೈಟರ್ಸ್ ಪೇಯಿನ್, ಲೇಖಕರ ನೋವು ಎಂದು. ಇದನ್ನೇ ತಮಾಷೆಯಾಗಿ ಅವರದೇ ಮಾತಿನಿಂದ ಹೇಳುತ್ತಿದ್ದರು. ಈ ಕಾರಣದಿಂದ ಒಂದು ವರ್ಷ ಕಾಲ ಬರೆಯುವುದನ್ನೇ ನಿಲ್ಲಿಸಿದ್ದರು. ನೋವು ಕಡಿಮೆ ಆದ ನಂತರ ಪುನಃ ಬರೆಯಲು ಪ್ರಾರಂಭಿಸಿದರು. ಪತ್ರಿಕೆಗಳಿಗೆ ಇವರಷ್ಟು ಲೇಖನ ಬರೆದವರು ಬಹಳ ವಿರಳ. ಜೀವಮಾನವಿಡೀ ಬರವಣಿಗೆಯಲ್ಲಿಯೇ ಜೀವನ ಸಾಗಿಬಂದಿತ್ತು.

ಈ ವರ್ಷ ಬಾಗಲಕೋಟೆ ಸಾಹಿತ್ಯ ಸಮ್ಮೇಳನ ಮುಗಿಸಿಕೊಂಡು ಡಾ. ಎಸ್.ಎಲ್. ಭೈರಪ್ಪನವರು, ಇವರು ಮೈಸೂರಿಗೆ ರೈಲಿನಲ್ಲಿ ಹೊರಟಾಗ ದಾರಿಯಲ್ಲಿ ಸಣ್ಣ ಹೃದಯಾಘಾತಕ್ಕೆ ಒಳಗಾದರು.

ನಾನು ದೂರದರ್ಶನದಲ್ಲಿ ಸುದ್ದಿ ಕೇಳಿದ ಕೂಡಲೇ ಮೈಸೂರಿನ ಅವರ ಮನೆಗೆ ಫೋನ್ ಮಾಡಿದೆ. ಯಾರೂ ಎತ್ತುವವರಿರಲಿಲ್ಲ. ಎಲ್ಲರೂ ಆಸ್ಪತ್ರೆಗೆ ಹೋಗಿದ್ದರು. ಒಂದು ವಾರದ ನಂತರ ಚೇತರಿಸಿಕೊಂಡು ಮನೆಗೆ ಬಂದ ನಂತರ ಪತ್ರ ಬರೆದೆ. ನನಗೆ ಏನೂ ಆಗಿಲ್ಲ. ಸ್ವಲ್ಪ ಆಯಾಸವಾಗಿತ್ತು ಅಷ್ಟೆ. ಈ ಸುದ್ದಿ ಮಾಧ್ಯಮದವರು ಮಾಡಿದ ಗಲಾಟೆ ಎಂದು ಬರೆದರು. ಈ ಬಗ್ಗೆ ಜನರಿಗೆ ತಿಳಿಹೇಳಲು ಸುಧಾ ವಾರಪತ್ರಿಕೆಯಲ್ಲಿ ತಮ್ಮ ಅಂಕಣದಲ್ಲಿ ಬರೆಯಬೇಕಾಯಿತು. ಅಂಕಣ ಬರಹದಲ್ಲಿ ಮಾತ್ರವಲ್ಲ, ಕನ್ನಡ ಸಾಹಿತ್ಯದಲ್ಲಿಯೇ ಒಂದು ಹೊಸ ಅಲೆಯನ್ನ ಡಾ. ಹಾ.ಮಾ. ನಾಯಕರು ಪ್ರಾರಂಭಿಸಿದರು. ಒಬ್ಬ ಪ್ರಭಾವೀ, ಸತ್ವಯುತ ಸಾಹಿತಿ ಎನಿಸಿಕೊಂಡರು; ಯಶಸ್ಸು ಗಳಿಸಿದರು; ಅದೃಷ್ಟವಂತರಾದರು. ಪ್ರತಿಭೆಯಂತೂ ಅವರ ಜೀವನದಲ್ಲಿ ಹಾಸುಹೊಕ್ಕಾಗಿತ್ತು. ಅವರ ಜೀವನ ಶುದ್ಧ ಅಪರಂಜಿ. ವಿನಯ, ಸಜ್ಜನಿಕೆ ನಾಯಕರ ಬಾಳಿನ ಉದ್ದಕ್ಕೂ ಜೊತೆ ಜೊತೆಯಾಗಿ ಬಂದಿದ್ದವು.

ಪುಸ್ತಕ ಓದುವುದೆಂದರೆ ಅವರಿಗೆ ಊಟ ಮಾಡಿದಷ್ಟೇ ಸಂತೋಷ. ಯಾರೇ ಪುಸ್ತಕ ಕಳಿಸಿದರೂ ಅದನ್ನು ಓದಿದ ನಂತರವೇ ಅವರಿಗ ಪತ್ರ ಬರೆಯುವ ಅಭ್ಯಾಸ

ದೀರ್ಘಕಾಲದಿಂದ ಬಂದದ್ದು. ಪತ್ರಗಳಿಗೆ ಉತ್ತರ ಕೊಡುವುದರಲ್ಲಿ ಸಾಹಿತಿಗಳಲ್ಲಿ ಹಾ.ಮಾ.ನಾ. ಮೊದಲಿಗರು. ನನ್ನ "ಬೇವು-ಬೆಲ್ಲ" ಸಂಯುಕ್ತ ಕರ್ನಾಟಕದಲ್ಲಿ ಒಂದೂವರೆ ವರ್ಷಗಳ ಕಾಲ ಪ್ರಕಟವಾಯಿತು. ಅದರಲ್ಲಿ ಎಪ್ಪತ್ತೈದು ಲೇಖನ ಸೇರಿಸಿ ಮೊದಲ ಸಂಪುಟ ಹೊರತರುವ ಪ್ರಯತ್ನ ಬೆಂಗಳೂರಿನ 'ಹೇಮಂತ ಸಾಹಿತ್ಯ'ದವರು ನಡೆಸಿದರು. ಆಗ ಅದಕ್ಕೊಂದು ಅಂಕಣ ಲೇಖಕರಿಂದಲೇ ಮುನ್ನುಡಿ ಬರೆಸಬೇಕೆಂದು, ಡಾ. ಹಾ.ಮಾ. ನಾಯಕರಿಗೆ ಪತ್ರ ಬರೆದೆ. ನೀವು ಅಂಕಣ ಬರೆಯುವುದರಲ್ಲಿ ಅಗ್ರಗಣ್ಯರು. ನನ್ನ ಅಂಕಣ ಬರಹಕ್ಕೆ ನಿಮ್ಮಿಂದಲೇ ಮುನ್ನುಡಿ ಬರೆಸಬೇಕೆಂಬ ಆಸೆ ನನ್ನದು. ಓದಿ ಒಳಿತು, ಕೆಡುಕು ಎರಡನ್ನೂ ಬರೆಯಿರಿ. ಇದು ಎಂದೂ ಸ್ನೇಹಕ್ಕೆ ಕಟ್ಟು ಬೀಳಬಾರದು ಎಂದು ಬರೆದೆ. ಎರಡೇ ದಿನದಲ್ಲಿ ಉತ್ತರ. ಕೂಡಲೇ ಮುದ್ರಣದ ಹಾಳೆಯನ್ನು ಕಳಿಸಿ. ನಿಮ್ಮ ಪುಸ್ತಕಕ್ಕೆ 'ಮುನ್ನುಡಿ' ಬರೆಯುವ ಅವಕಾಶ ಸಿಕ್ಕಿರುವುದು ಸಂತೋಷ ಎಂದು ಬರೆದಿದ್ದರು. 'ಬೇವು-ಬೆಲ್ಲ' ಓದಿ ದೀರ್ಘವಾದ ಮುನ್ನುಡಿ ಬರೆದು ಒಂದು ವಾರದಲ್ಲಿ ಹಿಂದಿರುಗಿಸಿದರು. ಇದರಿಂದ ಪುಸ್ತಕದ ಚೆಲುವು ಹೆಚ್ಚಿತು. ಒಂದೊಂದು ಲೇಖನವನ್ನೂ ಕುರಿತು ಅದರಲ್ಲಿ ತಮ್ಮ ಅಭಿಪ್ರಾಯವನ್ನು ದಾಖಲಿಸಿದ್ದಾರೆ. ಅಷ್ಟೇ ಅಲ್ಲ, 'ಸುಧಾ'ದ ತಮ್ಮ ಅಂಕಣದಲ್ಲಿ ನನ್ನ "ಆಸ್ಟ್ರೇಲಿಯಾದಲ್ಲಿ ಎಪ್ಪತ್ತು ದಿನಗಳು" ಎಂಬ ಪ್ರವಾಸ ಸಾಹಿತ್ಯದ ಪುಸ್ತಕ ಕುರಿತು ಎರಡು ಪುಟಗಳ ಲೇಖನವನ್ನು ಬರೆದು ಕನ್ನಡ ಓದುಗರಿಗೆ ಅದರ ಪರಿಚಯವನ್ನು ಮಾಡಿಕೊಟ್ಟರು. ಒಬ್ಬ ಸಾಹಿತಿಯಾದವನು, ಇನ್ನೊಬ್ಬ ಸಾಹಿತಿಯನ್ನು ಮೆಚ್ಚಿಕೊಳ್ಳುವುದು ತುಂಬಾ ಕಷ್ಟಕರವಾದ ಈ ದಿನದಲ್ಲಿ, ನಾಯಕರು ಇನ್ನೊಬ್ಬ ಲೇಖಕನನ್ನು ಬಹಳ ಪ್ರೀತಿಯಿಂದ ಕಾಣುತ್ತಿದ್ದುದು ಅವರ ಹೃದಯವಂತಿಕೆಯನ್ನು ತೋರಿಸುತ್ತದೆ. ದಿವಂಗತ ಅ.ನ. ಕೃಷ್ಣರಾಯರಲ್ಲಿ ಈ ಹೃದಯವಂತಿಕೆಯನ್ನು ಕಾಣಬಹುದಾಗಿತ್ತು.

ಶಿವಮೊಗ್ಗ ಜಿಲ್ಲೆಯವರಾಗಿದ್ದು ತೀರ್ಥಹಳ್ಳಿ ತಾಲ್ಲೂಕಿನ ಹಾರೋಗದ್ದೆ ಮಾನಪ್ಪ ನಾಯಕರನ್ನು ಸಾಗರಕ್ಕೆ ಕರೆತಂದು ಒಂದು ಒಳ್ಳೆಯ ರೀತಿಯಲ್ಲಿ, ಸನ್ಮಾನಿಸಬೇಕೆಂದು ಕಳೆದ ಎರಡು-ಮೂರು ವರ್ಷಗಳಿಂದ ನನ್ನ ಆಲೋಚನೆಯಾಗಿತ್ತು. ನಮ್ಮ ಜಿಲ್ಲೆಯವರಾದ, ಕುವೆಂಪು, ಎಸ್.ವಿ. ಪರಮೇಶ್ವರ ಭಟ್ಟರನ್ನ, ಯು.ಆರ್. ಅನಂತಮೂರ್ತಿಯವರನ್ನ ಈ ಹಿಂದೆ ಸಾಗರಕ್ಕೆ ಕರೆಸಿ ಗೌರವಿಸಲಾಗಿತ್ತು. ಡಾ. ಹಾ.ಮಾ. ನಾಯಕರನ್ನ ಕರೆಸಲಾಗಲಿಲ್ಲವಲ್ಲ ಎಂಬ ಕೊರಗು ನನ್ನಲ್ಲಿ ಉಳಿದಿತ್ತು. ೨೦೦೦ ಅಕ್ಟೋಬರ್ ಮಧ್ಯದಲ್ಲಿ ಒಂದು ದಿನ ಶ್ರೀ ಹೊಸಬಾಳೆ ಮಂಜುನಾಥ ಹೆಗಡೆಯವರು ನನ್ನ ಮನೆಗೆ ಬಂದು, "ಪಶ್ಚಿಮ ಘಟ್ಟದ ಜೀವ ವೈವಿಧ್ಯ" ಎಂಬ ಮುದ್ದಾದ ಪುಸ್ತಕವನ್ನು ನನ್ನ ಕೈಗೆ ನೀಡಿದಾಗ-ಕೈ ತೊಳೆದೇ ಮುಟ್ಟಬೇಕೆಂಬಷ್ಟು ಸಂತೋಷವಾಯಿತು. ಡಾ. ಶಿವರಾಮ ಕಾರಂತ ಅಧ್ಯಯನ ಕೇಂದ್ರ, ಪುತ್ತೂರು ಇವರು ತಮ್ಮ ಪ್ರಕಾಶನದಲ್ಲಿ ಪ್ರಕಟಪಡಿಸಿದ್ದರು. ಇದರ ನಿರ್ದೇಶಕರಾದ ಶ್ರೀ ಬೋಳಂತ ಕೋಡಿ ಈಶ್ವರಭಟ್ಟರು ಪುಸ್ತಕಗಳ ಪ್ರಕಟಣೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ

ಪ್ರಸಿದ್ಧಿ ಪಡೆದವರಾಗಿದ್ದು, ಅವರ ಕೀರ್ತಿ ಇಡೀ ಕರ್ನಾಟಕದಲ್ಲಿ ಹರಡಿದೆ. "ಜೀವ ವೈವಿಧ್ಯ" ಪುಸ್ತಕ ಪ್ರಾಣಿ ಪಕ್ಷಿಗಳ ಜೀವ ವೈವಿಧ್ಯವನ್ನು ಕುರಿತಾಗಿದ್ದು, ಈ ಪುಸ್ತಕವನ್ನು ಸಾಗರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮುಖದಲ್ಲಿ ಬಿಡುಗಡೆ ಮಾಡಬೇಕೆಂಬ ತಮ್ಮ ಅಪೇಕ್ಷೆಯನ್ನು ವ್ಯಕ್ತಪಡಿಸಿದಾಗ ನಾನಿದಕ್ಕೆ ಒಪ್ಪಿ ಒಳ್ಳೆಯವರಿಂದ ಬಿಡುಗಡೆ ಮಾಡಿಸೋಣ. ಡಾ. ಹಾ.ಮಾ. ನಾಯಕರನ್ನ ಕರೆಸೋಣ. ಹಾಗೆಯೇ ಅವರಿಗೆ ಸನ್ಮಾನ ಮಾಡೋಣ. ಎರಡೂ ಕೆಲಸ ಕೂಡಿ ನಡೆದರೆ ಒಳ್ಳೆಯದು ಎಂಬ ಸಲಹೆ ಮಾಡಿದೆ. ಅವರೂ ಸಂತೋಷದಿಂದ ಒಪ್ಪಿ, ನವೆಂಬರ್ ೫ನೇ ತಾರೀಖು ಸಾಗರದಲ್ಲಿ ಚೆಂದವಾದ ಕಾರ್ಯಕ್ರಮ ನಡೆಸಲು ಸಿದ್ಧತೆಗಳು ಆದವು. ಮುಂಚಿನ ದಿನವೇ ಮೈಸೂರಿನಿಂದ ಕಾರಿನಲ್ಲಿ ಡಾ. ಎಸ್.ಎನ್. ಹೆಗಡೆ, ಡಾ. ನಿರಂಜನ ವಾನಳ್ಳಿಯವರ ಸಂಗಡ ಡಾ. ಹಾ.ಮಾ. ನಾಯಕರು ಸಂಜೆ ೭ ಗಂಟೆಗೆ ಸಾಗರಕ್ಕೆ ಬಂದರು. ಮಾರನೆ ದಿನ ಬೆಳಿಗ್ಗೆ ಸಾಗರದ ನನ್ನ ಮನೆಗೆ ಡಾ. ಹಾ.ಮಾ.ನಾ. ಮತ್ತು ಅವರೊಡನೆ ಬಂದಿದ್ದ ಡಾ. ಎಸ್.ಎನ್. ಹೆಗಡೆ, ಡಾ. ನಿರಂಜನ ವಾನಳ್ಳಿಯವರೊಡನೆ ಉಪಹಾರಕ್ಕೆ ಬಂದವರು ಮಧ್ಯಾಹ್ನ ನನ್ನ ಊರಾದ ಬೇದೂರಿಗೆ ಊಟಕ್ಕೆ ಬಂದಿದ್ದರು. ಅಂದು ಸಮಾರಂಭದ ಮುಖ್ಯ ಅತಿಥಿಗಳಾಗಿದ್ದ ಪುತ್ತೂರು ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಬೋಳಂತ ಕೋಡಿ ಈಶ್ವರಭಟ್ಟರು ಅವರೊಡನೆ ಬಂದ ಡಾ. ಹೆಚ್.ಜಿ. ಶ್ರೀಧರ್, ಶ್ರೀ ವಿ.ಬಿ. ಅರ್ತಿಕಜೆ, ಶ್ರೀ ಬಿ. ಪುರಂದರ ಭಟ್ಟರು ಇನ್ನಿತರರೂ ಬಂದಿದ್ದರು. ಸಂಜೆ ನಡೆದ ಸಮಾರಂಭ ತುಂಬಾ ಆತ್ಮೀಯವಾಗಿತ್ತಲ್ಲದೆ, ಜನರು ತುಂಬಾ ಸೇರಿದ್ದರು. ಹಾರಗಳ ಮಹಾಪೂರವೇ ಅವರ ಕೊರಳನ್ನು ತುಂಬಿ ತುಳುಕುತ್ತಿತ್ತು. ಅವರು ಅಂದು ಆಡಿದ ಕೆಲವು ಮಾತುಗಳು ಚರಿತ್ರೆಯಲ್ಲಿ ದಾಖಲಾಗುವಂತಹದು. ತಮ್ಮ ಮಾತಿನ ಕೊನೆಯಲ್ಲಿ ಹಿಂದೆ ತೀರ್ಥಹಳ್ಳಿಯ ಕೆಲವು ಗ್ರಾಮಗಳು ಸಾಗರ ಕ್ಷೇತ್ರಕ್ಕೆ ಸೇರಿದ್ದಾಗಿತ್ತು. ಆದ್ದರಿಂದ ನಾನು ತೀರ್ಥಹಳ್ಳಿಯಲ್ಲಿ ಹುಟ್ಟಿದರೂ ಸಾಗರದವನೇ, ನಿಮ್ಮವನೇ ಆಗಿದ್ದೇನೆ. ನಿಮ್ಮ ಪ್ರೀತಿ-ವಿಶ್ವಾಸಗಳಿಗೆ ನಾನು ಏನು ಹೇಳಬೇಕೆಂಬುದೇ ತಿಳಿಯುತ್ತಿಲ್ಲ ಎಂದರು. ಮಾರನೆ ದಿನ ಬೆಳಿಗ್ಗೆ ಏಳು ಗಂಟೆಗೆ ಅವರು ತಂಗಿದ್ದ ಅತಿಥಿ ಗೃಹದಿಂದ ಬೀಳ್ಕೊಟ್ಟೆ. ಅದೇ ಕೊನೆಯದಾಯಿತು. ನವೆಂಬರ್ ೧೦ರಂದು ಹೃದಯಾಘಾತದಿಂದ ರಾತ್ರಿ ೧೦-೩೦ಕ್ಕೆ ನಿಧನರಾದರೆಂಬ ಸುದ್ದಿ ೧೧ರ ಬೆಳಿಗ್ಗೆ ದೂರವಾಣಿಯಲ್ಲಿ ಬಂದಾಗ ಟೆಲಿಫೋನ್ ಹಿಡಿದ ಕೈ ನಡುಗಿತು. ಮಾತು ಮೌನವಾಯಿತು. ನಲವತ್ತು ವರ್ಷಗಳ ಆತ್ಮೀಯ ಸ್ನೇಹಿತನನ್ನು ಕಳೆದುಕೊಂಡೆ. ನಾಡಿನ ಸಾಹಿತ್ಯದಲ್ಲೊಬ್ಬ ಸಾತ್ವಿಕ ವ್ಯಕ್ತಿ ದೂರವಾದರು. ಸಾಗರದ ಸನ್ಮಾನ ಸ್ವೀಕರಿಸಿದ್ದೇ ಕೊನೆಯದಾಯಿತು. ಡಾ. ಹಾ.ಮಾ.ನಾ.ರವರ ಮರಣವನ್ನು ನನಗೆ ಮರೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಮನಸ್ಸು ತುಂಬಾ ನೊಂದಿದೆ.

□□

ಸತ್ಯ ಪಕ್ಷಪಾತಿ ಡಾ. ಶಂ.ಬಾ. ಜೋಶಿ



❑ ಡಾ. ಸಂಗಮೇಶ ಸವದತ್ತಿಮಠ

ಡಾ. ಶಂಕರ ಬಾಳ ದೀಕ್ಷಿತ ಜೋಶಿ ಎಂಬ ಹೆಸರು ಕನ್ನಡ ಸಂಶೋಧನ ಕ್ಷೇತ್ರದ ಧ್ರುವನಕ್ಷತ್ರ. ಸಂಶೋಧನ ಕ್ಷೇತ್ರದ ದಿಗ್ಗಜ, ೨೦ನೆಯ ಶತಮಾನದ ಅಚ್ಚರಿ ಎಂದೇ ಅವರ ಖ್ಯಾತಿ. ಜಾತಿ-ಮತ-ಪಂಥಗಳನ್ನು ಮೀರಿ ಸಂಶೋಧನೆಯ ಪ್ರಜ್ಞಾಪಾತಳಿಯಲ್ಲಿ ತೇಲಾಡಿ ಸತ್ಯ ಸಂಗತಿಗಳನ್ನಷ್ಟೇ ಹೆಕ್ಕಿ ತೆಗೆದ ಧೀಮಂತರು. ಅವರ ಸಂಶೋಧನೆಯ ರೀತಿಯೇ ವಿಶಿಷ್ಟ. ಅರ್ಥಗ್ರಹಣ ಪದ್ಧತಿಯೇ ಅನನ್ಯ. ಅಲ್ಲಿ ಅವರೇ ಕ್ರಾಂತಿ ಪುರುಷರು. ಸಂಪ್ರದಾಯನಿಷ್ಠರನ್ನು ಪರಂಪರೆಯ ಹಿರಿಯರನ್ನು ಎದುರು ಹಾಕಿಕೊಂಡು ಅವರ ನಿಂದೆಗೆ ಕುಗ್ಗದೆ, ಪ್ರಗತಿವಾದಿಗಳ ಪ್ರಶಂಸೆಗೆ ಹಿಗ್ಗದೆ ಸಂಶೋಧನ ಪಥದಲ್ಲಿ ಮುನ್ನುಗ್ಗಿದ ಧೀಮಂತರು ಶಂಬಾ. ಅಖಂಡ ತಪಸ್ಸಾಧನೆಯ ಒಂಟಿ ಸಲಗನಂತೆ ಸಂಶೋಧನೆಯ ಹೊಸ ಮಾರ್ಗವನ್ನು ಹುಟ್ಟುಹಾಕಿಕೊಂಡವರು.

ಕರ್ನಾಟಕ ಸಂಸ್ಕೃತಿ, ಭಾಷೆ, ಜನಾಂಗ, ಧರ್ಮ ಕುರಿತು ಶಂಬಾ ಅನ್ವೇಷಿಸಿದ ಸಂಗತಿಗಳು ೨೦ನೆಯ ಶತಮಾನ ಮುಗಿದು ೨೧ನೆಯ ಶತಮಾನದ ಅರ್ಧ ದಶಕ ಕಳೆದರೂ ಇನ್ನೂ ಅನೇಕ ಸಂಶೋಧಕರಿಗೇ ಅರ್ಥವಾಗದೆ ಕುಳಿತಿವೆ. ಮಾನವಧರ್ಮದ ವಿಶ್ವಪ್ರಜ್ಞೆಯ ಈ ಸಂಶೋಧಕ ಕರ್ನಾಟಕದಲ್ಲಿ ಹುಟ್ಟಿ ಕನ್ನಡದಲ್ಲಿ ಬರೆದದ್ದರಿಂದ ಜಾಗತಿಕವಾಗಿ ಇನ್ನೂ ಗುರುತಿಸಲ್ಪಡಬೇಕಾಗಿದೆ.

ಶಂಬಾ ಅವರನ್ನು ಕರ್ನಾಟಕ ಗುರುತಿಸಿದ್ದು- ೧೯೭೦ರಲ್ಲಿ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಅವರ "ಕರ್ನಾಟಕ ಪೂರ್ವಪೀಠಿಕೆ" ಕೃತಿಗೆ ಪ್ರಶಸ್ತಿ ದೊರಕಿದ ನಂತರವೇ. ಆಗ ಅವರಿಗೆ ೭೪ರ ಇಳಿವಯಸ್ಸು. ಅಲ್ಲಿಯವರೆಗೆ ಅವರು ಅಲಕ್ಷಿತರಾಗಿಯೇ ಉಳಿದಂತಿದ್ದರು. ಮುಂದಿನ ಕೆಲವು ವರ್ಷಗಳಲ್ಲಿ ಅವರಿಗೆ ಹಲವು ಪ್ರಶಸ್ತಿ, ಗೌರವ, ಅಭಿನಂದನೆಗಳ ಸುರಿಮಳೆ. ಕೇವಲ ಹೈಸ್ಕೂಲು ಶಿಕ್ಷಣ ಪಡೆದ ಎಲೆಮರೆಯ ಹಣ್ಣಾಗಿದ್ದ ಶಂಬಾ, ವಿಶ್ವವಿದ್ಯಾಲಯಗಳ ಘನ ಸಂಶೋಧಕರೂ ಅಸೂಯೆಪಡುವಂತೆ ಕೆಲಸ ಮಾಡಿ ತೋರಿದ್ದು ಒಂದು ಆಶ್ಚರ್ಯದ ಸಂಗತಿಯೇ.

ಶಂಬಾ ಅವರ ಜೀವನವೇ ಒಂದು ಸಂಘರ್ಷಮಯವಾದದ್ದು. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಗುರ್ಲಹೊಸೂರ ಎಂಬ ಚಿಕ್ಕ ಹಳ್ಳಿಯಲ್ಲಿ ಅವರು ಜನಿಸಿದರು. ಮುರಗೋಡದ ಮಹಾಮಹಿಮಾ ಪುರುಷ ಚಿದಂಬರ ದೀಕ್ಷಿತರು ನೆಲೆಸಿದ

ವಿಳಾಸ : "ಸಂತೃಪ್ತಿ", ಮನೆ ನಂ. ೫೪, ಶ್ರೀನಗರ, ಉಣಕಲ್, ಹುಬ್ಬಳ್ಳಿ-೫೮೦೦೩೧

ಪುಣ್ಯಧಾಮ. ಅಲ್ಲಿ ೧೮೯೬ನೆಯ ಇಸ್ವಿಯ ಜನವರಿ ೪ನೇ ತಾರೀಖಿನಂದು ಜನಿಸಿದರು. ಶಂಬಾ ಅವರ ಮಾತೃಭಾಷೆ ಮರಾಠಿ. ಆದರೆ ಊರು ಅಚ್ಚಗನ್ನಡ. ಕವಿರಾಜಮಾರ್ಗಕಾರನು ಹೇಳಿದ ಸವಭಿಸ್ತುತಮಪ್ಪ "ಒಕ್ಕುಂದ"ವೂ ಮಲಪ್ರಭಾ ದಂಡೆಗೇ ಹತ್ತಿರದಲ್ಲಿದ್ದ ಊರು. ಶಂಬಾ ಸಹಜವಾಗಿ ಕನ್ನಡ ಕಲಿಯಲೇ ಬೇಕಾಯಿತು. ಮನೆಯಲ್ಲಿ ವೈದಿಕ ಸಂಸ್ಕೃತ ಅಧ್ಯಯನ, ಹೊರಗೆ ಕನ್ನಡ, ಮಾತೃಭಾಷೆ ಮರಾಠಿ ಹೀಗೆ ಮೂರು ಭಾಷೆಗಳನ್ನು ಬಾಲ್ಯದಲ್ಲಿಯೇ ಅರಗಿಸಿಕೊಂಡದ್ದು ಪ್ರಾಯಶಃ ಇವರಿಗೆ ಮುಂದೆ ಸಂಶೋಧನೆಗೆ ಹೆಚ್ಚು ನೆರವಾಗಲು ಸಾಧ್ಯವಾಯಿತೆನಿಸುತ್ತದೆ.

ಶಂಬಾ ಗುರ್ಲಹೊಸೂರಿನಲ್ಲಿ ಪ್ರಾಥಮಿಕ ಶಾಲೆ ಮುಗಿಸುವ ಮುನ್ನವೇ ತಂದೆ ಬಾಳದೀಕ್ಷಿತರು ಪ್ಲೇಗಿನಿಂದ ಮೃತರಾದರು. ಹೈಸ್ಕೂಲು ಶಿಕ್ಷಣಕ್ಕಾಗಿ ಮನೆತನದ ಅನಾನುಕೂಲತೆಯಿಂದ ಗುರ್ಲಹೊಸೂರಿನಲ್ಲಿಯೇ ಉಳಿಯಬೇಕಾಗಿ ಬಂದಿತು. ಆದರೆ ಊರಿನಲ್ಲಿನ ಮನೆ ಮಲಪ್ರಭಾ ಪ್ರವಾಹದಲ್ಲಿ ನೀರು ಪಾಲಾದಾಗ ಅನಿವಾರ್ಯವಾಗಿ ಊರು ಬಿಟ್ಟು ಪುಣೆಗೆ ಅಜ್ಜಿಯ ಮನೆಗೆ ವಲಸೆ ಹೋಗಬೇಕಾಯಿತು. ಆದರೆ ಮುಂದಿನ ಓದಿಗೆ ಮಾತ್ರ ಅವಕಾಶ ಸಿಗಲಿಲ್ಲ. ಪ್ರೋತ್ಸಾಹವೂ ದೊರೆಯಲಿಲ್ಲ. ಹೀಗಾಗಿ ಸ್ವಾಧ್ಯಾಯದಲ್ಲೇ ಕಾಲಕಳೆಯತೊಡಗಿದರು. ಕಷ್ಟಪಟ್ಟು ಇಂಗ್ಲೀಷ್ ಕಲಿತರು. ಯಾವಾಗಲೂ ಓದು ಓದು. ನಗರದ ಗ್ರಂಥಾಲಯಗಳಿಗೆ ಹೋಗುವುದು ಅಲ್ಲಿ ಓದುತ್ತ ಕೂಡ್ರುವುದು ಇವರ ಹವ್ಯಾಸ ಆಯಿತು.

ಬದುಕಲು ಉದ್ಯೋಗ ಮಾಡಬೇಕಾಗಿತ್ತು. ಪುಣೆಯಲ್ಲಿ ಸಾಧ್ಯವಾಗಲಿಲ್ಲ. ಧಾರವಾಡಕ್ಕೆ ಬಂದು ಶಿಕ್ಷಕ ತರಬೇತಿ ಕಾಲೇಜಿಗೆ ಸೇರಿಕೊಂಡರು. ಶಿಕ್ಷಕ ತರಬೇತಿ ಮುಗಿಸಿ ಚಿಕ್ಕೋಡಿ ಶಾಲೆಯಲ್ಲಿ ಶಿಕ್ಷಕರಾಗಿ ನೇಮಕಗೊಂಡರು. ಅಲ್ಲಿ ದೇಶಭಕ್ತಿ ಪ್ರಜ್ಞೆಯನ್ನು ಬೆಳೆಸಿಕೊಂಡರು. ಬದುಕಿಗೆ ಒಂದು ನೆಲೆ ಸಿಕ್ಕಿದ್ದರಿಂದ ಅಧ್ಯಯನಕ್ಕೆ ಅನುಕೂಲವೂ ಆಗಿತ್ತು. ವೃತ್ತಿಗಿಂತ ಪ್ರವೃತ್ತಿಮಾರ್ಗದ ಕಡೆಗೆ ಅವರ ಒಲವು ಹೆಚ್ಚು. ೧೯೨೧ರಲ್ಲಿ ಜಮಖಂಡಿಯ ಕೃಷ್ಣಾ (ಪಾರ್ವತಿ) ಅವಳೊಂದಿಗೆ ಪುಣೆಯಲ್ಲಿ ಮದುವೆ ಮಾಡಿಕೊಂಡು ಸ್ವದೇಶಿ ಆಂದೋಲನ ಚಟುವಟಿಕೆಗಳಲ್ಲಿ ತೊಡಗಿದರು. ಇದರಿಂದ ಬ್ರಿಟಿಷ್ ಆಡಳಿತ ಕುಪಿತಗೊಂಡು ಅವರನ್ನು ಉಗರಗೋಳ ಎಂಬ ಕುಗ್ರಾಮಕ್ಕೆ ವರ್ಗ ಮಾಡಿತು. ಇದರಿಂದ ಮನನೊಂದುಕೊಂಡೇ ಶಂಬಾ ಉಗರಗೋಳ ಶಾಲೆಗೆ ಹೋಗಿ ಹಾಜರಾದರು. ಆದರೆ ಅಲ್ಲಿ ಅವರಿಗೆ ನೌಕರಿ ಮಾಡಲು ಮನಸ್ಸು ಆಗಲಿಲ್ಲ. ನೌಕರಿಗೆ ರಾಜೀನಾಮೆ ಕೊಟ್ಟು ಧಾರವಾಡ ಸೇರಿದರು. ಧಾರವಾಡ ಐತಿಹಾಸಿಕ ಮತ್ತು ಸಾಂಸ್ಕೃತಿಕವಾಗಿ ಮಹತ್ವದ ಸ್ಥಳ. ಹಲವಾರು ದಿಗ್ಗಜ ಸಾಹಿತಿಗಳು, ವಿದ್ವಾಂಸರು, ಪತ್ರಕರ್ತರು, ರಾಜಕಾರಣಿಗಳು ಇದ್ದ ಶ್ರೇಷ್ಠ ಊರು. ಹೀಗಾಗಿ ಶಂಬಾ ಅವರಿಗೆ ಧಾರವಾಡ ಕರ್ಮಭೂಮಿಯಾಯಿತು. ಬರಹದ ಮೂಲಕ ಬದುಕು ಸಾಗಿಸುವುದು ಶಂಬಾ ಅವರಿಗೆ ಅದು ಅನಿವಾರ್ಯವಾಗಿತ್ತು. ಅಂತೂ ಇಂತೂ ಜೀವನ ನಡೆದಿತ್ತು.

ಇನ್ನೊಬ್ಬರ ಹಂಗಿನಲ್ಲಿ ಇರಬಾರದೆಂದು ತಮ್ಮ ಸ್ವಂತ ಮನೆ ಕಟ್ಟಿಕೊಂಡರು. ಮನೆ ಕಟ್ಟಡಕ್ಕೆ ಪತ್ನಿ ಪಾರ್ವತಿ ತನ್ನ ಒಡವೆಗಳನ್ನೆಲ್ಲ ನೀಡಿ ಮಾರಲು ಹಚ್ಚಿದ್ದನ್ನು ಶಂಬಾ "...ಸೌಭಾಗ್ಯವತಿಯ ತ್ಯಾಗಬುದ್ಧಿಯಿಂದ ನನಗೊಂದು ಸ್ವಂತದ ಮನೆಯೆಂಬ ನೆರಳು ದೊರೆತಿದೆ" ಎಂದು ಹೇಳುತ್ತಿದ್ದರಂತೆ.

ಜೀವನ ಎಂಬುದು ತಿರುಗುವ ಗಾಲಿಯ ಚಕ್ರವಿದ್ದಂತೆ. ಅದು ತಿರುಗುತ್ತಲೆ ಮುಂದೆ ಸಾಗುತ್ತದೆ. ಶಂಬಾ ನೌಕರಿ ಬಿಟ್ಟು ಬಡತನದ ಕಷ್ಟದಲ್ಲಿ ತೊಳಲಾಡು-ವಂತಾಗಿತ್ತು. ಧಾರವಾಡದಲ್ಲಿ ಅವರು ನಡೆಸಿದ ಸಾಹಿತ್ಯಿಕ, ರಾಷ್ಟ್ರೀಯ ಚಟುವಟಿಕೆಗಳಿಂದ ಬಹುಬೇಗ ಅವರು ಎಲ್ಲರ ಗಮನ ಸೆಳೆದಿದ್ದರು. ಇದರಿಂದ ಧಾರವಾಡದ ವಿಕ್ಟೋರಿಯ ಹೈಸ್ಕೂಲಿನಲ್ಲಿ ಶಿಕ್ಷಕ ಹುದ್ದೆ ಅವರಿಗೆ ದೊರೆಯುವಂತಾಯಿತು. ೧೯೪೬ರಲ್ಲಿ ಅವರು ಸ್ವಯಂ ನಿವೃತ್ತಿ ಪಡೆಯುವವರೆಗೂ ಅವರು ಹೈಸ್ಕೂಲ್ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಆಗ ಆರೋಗ್ಯದೊಂದಿಗೆ ಹೋರಾಟ ಆರಂಭವಾಗಿತ್ತು. ಬಹು ಶ್ರಮವಹಿಸಿ ಆರೋಗ್ಯ ಸುಧಾರಣೆ ಮಾಡಿಕೊಂಡು ಬರವಣಿಗೆ, ಸಂಶೋಧನ ಅಧ್ಯಯನಗಳಲ್ಲಿ ನಿರಂತರ ತೊಡಗಿಕೊಂಡರು. ನಂತರ ಅವರ ಸಂಶೋಧನ ಬದುಕಿನ ಮತ್ತೊಂದು ಅಧ್ಯಾಯ ತೆರೆದುಕೊಂಡಂತಾಯಿತು.

ಶಂ.ಬಾ. ಅವರ ಅಧ್ಯಯನ, ಚಿಂತನಗಳ ಮೂಲಕ ಮೂಡಿಬಂದ ಸಂಶೋಧನ ಗ್ರಂಥಗಳಲ್ಲಿ - ಋಗ್ವೇದ ಸಾರ; ನಾಗಪ್ರತಿಮಾ ವಿಚಾರ (೧೯೭೧), ಪ್ರವಾಹಪತಿತರ ಕರ್ಮ ಹಿಂದೂ ಎಂಬ ಧರ್ಮ (೧೯೭೬), ವೈವಸ್ವತ ಮನುಪ್ರಣೀತ ಮಾನವ ಧರ್ಮದ ಆಕೃತಿ (೧೯೭೯), ಬುಧನ ಜಾತಕ (೧೯೮೧), ಬಿತ್ತಿದ್ದನ್ನು ಬೆಳಕೊ (೧೯೮೪) ಮುಂತಾದವು ಪ್ರಮುಖವಾಗಿವೆ. ಕಣ್ಮರೆಯಾದ ಕನ್ನಡ ಅವರ ಮೊದಲ ಕೃತಿ. ನಂತರ ಕನ್ನಡ ನಾಡು-ನುಡಿಗೆ ಸಂಬಂಧಿಸಿ ಕನ್ನಡನುಡಿಯ ಹುಟ್ಟು, ಕನ್ನಡ ನುಡಿಯ ಜೀವಾಳ, ದಾರಿಯ ಬುತ್ತಿ, ಅಸಂತೋಷವೇ ಏಳ್ಗೆಯ ಮೂಲ ಮುಂತಾದ ಕೃತಿಗಳು ಬೆಳಕು ಕಂಡವು.

ಇವರ ಸಾಧನೆಯನ್ನು ಪರಿಗಣಿಸಿ ಮೈಸೂರು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿತು. ಹೈಸ್ಕೂಲು ಕಟ್ಟೆ ಹತ್ತದ ಕನ್ನಡ ಸಂಶೋಧಕ ಪ್ರತಿಷ್ಠಿತ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿಗೆ ಅರ್ಹರಾದುದು ಶಂಬಾ ಸಾಧನೆಗೆ ಹಿಡಿದ ಕನ್ನಡಿಯಂತಾಯಿತು. ಶಂಬಾ ಅವರು ಸಾರಸ್ವತ ಲೋಕದಲ್ಲಿ ಇಷ್ಟೊಂದು ಎತ್ತರಕ್ಕೆ ಬೆಳೆದಿದ್ದರೂ ಅವರ ಕೃತಿಗಳನ್ನು ಪ್ರಕಟಿಸಲು ಪ್ರತಿಷ್ಠಿತ ಪ್ರಕಾಶಕರು ಮುಂದೆ ಬರಲಿಲ್ಲ ಎಂಬುದು ಚೋದ್ಯದ ವಿಷಯ. ಪ್ರಾಯಶಃ ಅದಕ್ಕೆ ಕಾರಣವೆಂದರೆ ಅವರ ಕ್ರಾಂತಿಕಾರಿ ಬರಹಗಳು ಎಷ್ಟೋ ಸಲ ಕೆಲವು ಸಮುದಾಯದವರ ಕೆಂಗಣ್ಣಿಗೆ ಗುರಿಯಾಗುತ್ತಿದ್ದವು ಎಂಬುದೇ ಆಗಿರಬೇಕು. ತಮ್ಮ ಕೃತಿಗಳನ್ನು ರಚಿಸುವಾಗ ಆಧುನಿಕ ಸಂಶೋಧಕರ ವಿಚಾರ ಅಭಿಪ್ರಾಯಗಳನ್ನು ತಪ್ಪದೇ ಗಮನಿಸುತ್ತಿದ್ದರು. ಅವುಗಳ

ಅಧ್ಯಯನ ಮಾಡಿದ ಯಾರಾದರೂ ಇದ್ದರೆ ಅಂಥವರು ಸಿಕ್ಕರೆ ಅವರೊಂದಿಗೆ ಗಂಟೆಗಟ್ಟಲೆ ಚರ್ಚಿಸುತ್ತಿದ್ದರು. ನಾನು "ದ್ರಾವಿಡ ಭಾಷಾ ವ್ಯಾಸಂಗ", "ದ್ರಾವಿಡ ಜನಾಂಗ" ಇಂತಹ ಕೃತಿಗಳನ್ನು ಮತ್ತು ಕೆಲವು ಲೇಖನಗಳನ್ನು ಪ್ರಕಟಿಸಿದ್ದು ತಿಳಿದು ಧಾರವಾಡದ ಸಾಧನಕೇರಿಯಲ್ಲಿ ಅವರ ಮನೆಗೆ ಹೋದಾಗ ನನ್ನೊಡನೆ ಗಂಟೆಗಟ್ಟಲೆ ಚರ್ಚಿಸಿದ್ದು ನನಗೆ ನೆನಪಿದೆ. ದ್ರಾವಿಡರು ಶಿವಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದವರು. ಅವರೇ ಮೂಲ ಕನ್ನಡಿಗರು ಅವರ ಅವಶೇಷಗಳು ಉತ್ತರ, ದಕ್ಷಿಣ ಭಾರತದಾದ್ಯಂತ ಇಂದಿಗೂ ಇವೆ ಎಂಬುದನ್ನು ಅವರು ನನ್ನ ಮುಂದೆ ಪ್ರಸ್ತಾಪಿಸಿದ್ದರು.

ಜಾತಿ-ಮತ-ಪಂಥಗಳ ಬಗೆಗೆ ಭೇದಭಾವವನ್ನು ಶಂಬಾ ಎಂದಿಗೂ ಎಣಿಸುತ್ತಿರಲಿಲ್ಲ. ಎಲ್ಲರನ್ನೂ ಸಮಾನವಾಗಿ ಗೌರವಿಸುತ್ತಿದ್ದರು. ಪತ್ನಿ ಪಾರ್ವತಿ ಅವರಿಗೆ ತಕ್ಕುದಾಗಿ ನಡೆದುಕೊಂಡು ಸಂಸಾರದ ಎಲ್ಲ ಕಷ್ಟ-ನಷ್ಟಗಳನ್ನು ಅನುಭವಿಸುತ್ತಲೂ ಮಕ್ಕಳನ್ನು ಚೆನ್ನಾಗಿ ಬೆಳೆಸಿ ವಿದ್ಯಾವಂತರನ್ನಾಗಿ ಮಾಡಿದರು. ಅವರು ಅಮೇರಿಕದಲ್ಲಿ ಉನ್ನತ ಉದ್ಯೋಗದಲ್ಲಿ ಇದ್ದಾರೆ. ಜಾತಿ-ಧರ್ಮದ ಕಟ್ಟಳೆಯನ್ನು ತಂದೆ-ತಾಯಿಯರ ಅಪೇಕ್ಷೆಯಂತೆಯೇ ಮೀರಿ ತಮಗೆ ಇಷ್ಟವಾದವರನ್ನು ಮದುವೆಯಾಗಿ ಮಕ್ಕಳನ್ನು ಪಡೆದುಕೊಂಡು ಸುಖವಾಗಿದ್ದಾರೆ.

ಶಂಬಾ ಅವರು ೯೫ ವರ್ಷಗಳ ಸುದೀರ್ಘ ಬದುಕು ಸಾಗಿಸಿ ೨೮-೦೯-೧೯೯೧ ರಂದು ಕೊನೆಯುಸಿರೆಳೆದರು. ಮರುದಿನವೇ ಅವರ ಪತ್ನಿ ಪಾರ್ವತಿಯೂ ಅವರನ್ನು ಹಿಂಬಾಲಿಸಿದರು. ಪತಿ-ಪತ್ನಿಯರಿಬ್ಬರ ಭೌತಿಕ ದೇಹಗಳನ್ನು ಒಂದೇ ಚಿತೆಯಲ್ಲಿ ಚಿತೆಗೇರಿಸಿ ಅಭಿಮಾನಿಗಳು ಕಣ್ಣೀರಿಟ್ಟರು. ಸಂಶೋಧಕ ಸೂರ್ಯ ಅಸ್ತಂಗತನಾದರೂ ಅವರು ಬಿಟ್ಟುಹೋದ ಸಂಶೋಧನೆಯ ಬೆಳಕು ಇನ್ನೂ ಬೆಳಗುತ್ತಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಶಂಬಾ ಅಧ್ಯಯನ ಪೀಠ, ಧಾರವಾಡದಲ್ಲಿ ಶಂಬಾ ಅವರೇ ಸ್ಥಾಪಿಸದಿರುವ ಮಾನವಧರ್ಮ ಪ್ರತಿಷ್ಠಾನ, ಬೆಂಗಳೂರಿನಲ್ಲಿ ಶಂಬಾ ವಿಚಾರ ವೇದಿಕೆ, ಶಿವಮೊಗ್ಗೆಯ ಕರ್ನಾಟಕ ಸಂಘ ಇರಿಸಿದ ಶಂಬಾಜೋಶಿ ಪ್ರಶಸ್ತಿ ಮುಂತಾದವು ಶಂಬಾ ಅವರ ನೆನಪಿನಲ್ಲಿ ಸ್ಥಾಪಿತವಾಗಿ ಅವರ ಕಾರ್ಯಗಳನ್ನು ಮುಂದುವರಿಸಿರುವುದು ಸ್ಮರಣೀಯ ಸಂಗತಿಯಾಗಿದೆ. ಶಂಬಾ ಅವರು ಈ ಮೂಲಕವಾಗಿ ಅಜರಾಮರರಾಗಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯ ಅವರ ಸಮಗ್ರ ಕೃತಿಗಳನ್ನು ಅಚ್ಚುಕಟ್ಟಾಗಿ ಪ್ರಕಟಿಸಿದೆ. ತಮ್ಮ ಜೀವಿತ ಕಾಲದಲ್ಲಿ ತಮ್ಮ ಕೃತಿಗಳಿಗೆ ಪ್ರಕಾಶಕರ ಕೊರತೆಯ ಬಗ್ಗೆ ಕೊರಗಿದ್ದ ಶಂಬಾ ಅವರ ಆತ್ಮಕ್ಕೆ ಕನ್ನಡ ವಿಶ್ವವಿದ್ಯಾಲಯ ಮತ್ತು ಶಂಬಾ ಸ್ಮರಣೆಯಲ್ಲಿ ಚಟುವಟಿಕೆ ನಡೆಸುತ್ತಿರುವ ಸಂಸ್ಥೆಗಳು ಅವರ ಕೃತಿ ಪ್ರಕಟನೆ, ವಿಮರ್ಶೆ, ಚಿಂತನ ಕಾರ್ಯಕ್ರಮಗಳ ಮೂಲಕ ತಕ್ಕುದಾದ ರೀತಿಯಲ್ಲಿ ಶಾಂತಿ ನೀಡುವ ಸಾರ್ಥಕ ಕಾರ್ಯ ಮಾಡುತ್ತಿವೆ. ಇದು ಅಭಿನಂದನೀಯ.

□□

ಕನ್ನಡಕ್ಕೆ ಒಂದು ಗುಡಿ... ಈ ಕರ್ನಾಟಕ ಸಂಘ

❐ ಎನ್. ಶಶಿಕಾಂತ್ ಜೈನ್

ಶಿವಮೊಗ್ಗದ 'ಕರ್ನಾಟಕ ಸಂಘ' ಇದು ನಗರಕ್ಕೆ ತಿಲಕ ಪ್ರಾಯವಾದಂತಹ ಸಾಹಿತ್ಯ. ಸಾಂಸ್ಕೃತಿಕ ಕಲಾಕೇಂದ್ರ ಒಬ್ಬ ಮಹಾನ್ ಸಾಹಿತ್ಯಾಸಕ್ತನಿಂದ ಸಾಕಾರಗೊಂಡ ಮನೋ ಮಂಟಪ. ಇದಕ್ಕಾಗಿ ಇದರ ದಾನಿ, ದಿ. ಶ್ರೀ ಹೊಸೂಡಿವೆಂಕಟ ಶಾಸ್ತ್ರಿಗಳು ಇಲ್ಲಿ ನಿತ್ಯ ಪ್ರಾತಃ ಸ್ಮರಣೀಯರು. ಆದ್ದರಿಂದ ಈ ಭವನದ ಮೂಲ ನಾಮಧೇಯ 'ಶ್ರೀ ಹಸೂಡಿ ವೆಂಕಟ ಶಾಸ್ತ್ರಿಯವರ ಸಾಹಿತ್ಯ ಭವನ' ಎಂದು.

೧೯೩೦ರಲ್ಲಿ ರಾಷ್ಟ್ರಕವಿ ಕುವೆಂಪುರವರಿಂದ ಉದ್ಘಾಟಿಸಲ್ಪಟ್ಟ ಈ ಕರ್ನಾಟಕ ಸಂಘ ಭವನವು ಉದಾರದಾನಿ ಉದಾತ್ತ ಸಾಹಿತ್ಯ ಪ್ರೇಮಿ ಶ್ರೀ ಹಸೂಡಿವೆಂಕಟಶಾಸ್ತ್ರಿಗಳವರ ಕನಸಿನ ಕೂಸಾಗಿತ್ತು. ತದನಂತರದಲ್ಲಿ ತದನಂತರದಲ್ಲಿ ಅಂದಿನ ಮೈಸೂರು ಸಂಸ್ಥಾನದ ಒಡೆಯರಾದ ಶ್ರೀಮನ್ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್‌ರವರ ಅಮೃತ ಹಸ್ತದಿಂದ, ೧೧-೦೨-೧೯೪೩ ರಲ್ಲಿ ಭವನದ ಉದ್ಘಾಟನೆಯಾಯಿತು. ಅಂದಿನಿಂದ ಇಂದಿನವರೆಗೂ ಕಲೆ-ಸಾಹಿತ್ಯ ಸಂಸ್ಕೃತಿಯ ಸೌರಭವನ್ನು ನಾಡಿನೆಲ್ಲೆಡೆ ಪಸರಿಸಿದೆ. ಈ ಸಂಘವು ಕನ್ನಡ ಮಾತ್ರವಲ್ಲದೇ ಕನ್ನಡೇತರ ಕಲಾವಿದರು, ಕವಿಗಳು, ವಿದ್ವಾಂಸರು ವಿಜ್ಞಾನಿ, ವಿದ್ವನ್ಮಣಿಗಳನ್ನು ಗುರುತಿಸಿ, ಪ್ರೋತ್ಸಾಹಿಸಿ, ಪುರಸ್ಕರಿಸಿರುವುದು. ಇಂದಿನ- ಹಿಂದಿನ ಹಲವಾರು ಕಿರಿಯ ಶ್ರೇಷ್ಠ ಕವಿ-ಕಲಾವಿದರು, ಬರಹಗಾರರನ್ನು ಬೆಳಕಿಗೆ ತಂದ ಖ್ಯಾತಿ ಈ ಸಂಘದ್ದಾಗಿದೆ. ಗ್ರಂಥ ಪ್ರಕಟಣೆಯಂತಹ ಮಹತ್ತರ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡು, ಹಲವಾರು ಶ್ರೇಷ್ಠ ಗ್ರಂಥಗಳನ್ನು ಪ್ರಕಾಶಿಸಿದ ಕೀರ್ತಿಗೂ ಭಾಜನವಾಗಿದೆ. ಎರಡು ಸಾಹಿತ್ಯ ಸಮ್ಮೇಳನಗಳನ್ನು ನಡೆಸಿಕೊಟ್ಟ ನಮ್ಮ ಕರ್ನಾಟಕ ಸಂಘವು ಸಾಹಿತ್ಯಾಸಕ್ತರ ಕಣ್ಮಣಿಯೆನಿಸಿದೆ.

ಈ ಸಂಘದ ಸ್ಥಾಪಕ ಅಧ್ಯಕ್ಷರಾಗಿ ದಿ.ಶ್ರೀಯುತ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು, ಕಾರ್ಯದರ್ಶಿಗಳಾಗಿ ಕೂಡಲಿ ಚಿದಂಬರಂರಂತಹ ಮಹನೀಯರು ಈ ಸಾಹಿತ್ಯ ಭವನಕ್ಕೆ ಭವ್ಯ- ಭದ್ರ ಬುನಾದಿ ಹಾಕಿದರು. ೧೯೯೧-೯೨ರಲ್ಲಿ ಕರ್ನಾಟಕ ಸಂಘವು ತನ್ನ ವಜ್ರಮಹೋತ್ಸವವನ್ನು ವರ್ಷವಿಡೀ ಕನ್ನಡ ಸಾಹಿತ್ಯ-ಸಾಂಸ್ಕೃತಿಕ ಕಾರ್ಯಕ್ರಮ-ಗಳಿಂದೊಡಗೂಡಿ ವಿಜೃಂಭಣೆಯಿಂದ ಆಚರಿಸಿಕೊಂಡಿತು. ಇದರ ಮಧುರ ಸ್ಮೃತಿಗಾಗಿ ಶಿವಮೊಗ್ಗ ಜಿಲ್ಲೆಯ ಜನಪ್ರಿಯ ಲೇಖಕರು- ಬರಹಗಾರರನ್ನು ಸಂಘದ ಗೌರವ ಸದಸ್ಯತ್ವ ನೀಡಿ ಪುರಸ್ಕರಿಸುವ ಯೋಜನೆಯನ್ನು ಹಾಕಿಕೊಂಡು, ಶ್ರೀ ಕುವೆಂಪು, ಶ್ರೀ ಎಸ್.ವಿ. ಪರಮೇಶ್ವರಭಟ್ಟ ಯು.ಆರ್. ಅನಂತಮೂರ್ತಿ, ಶ್ರೀ ಜಿ.ಎಸ್. ಶಿವರುದ್ರಪ್ಪ ಎಂ.ಕೆ. ಇಂದಿರಾ, ಹಾ.ಮಾ.ನಾ. ಪಿ. ಲಂಕೇಶ್, ಶ್ರೀಕೆ. ವಿ. ಸುಬ್ಬಣ್ಣ ಇವರುಗಳನ್ನು ಸನ್ಮಾನಿಸಿತು. ಹೀಗೆ ಕಲೆ-ಸಾಹಿತ್ಯ ಸಂಗೀತ ಸಾಂಸ್ಕೃತಿಕ ಚಟುವಟಿಕೆಗಳಿಗೆ ಭವ್ಯ ವೇದಿಕೆಯಾಗಿ ನಿರ್ಮಾಣಗೊಂಡ ಈ ಕರ್ನಾಟಕ ಸಂಘ ನಿಜಕ್ಕೂ, ಸಾಹಿತ್ಯ, ದಿಗ್ಗಜ ಶ್ರೀಯುತ ಪ್ರೊ|| ಎ.ಆರ್. ಕೃಷ್ಣಶಾಸ್ತ್ರಿಗಳು ಉದ್ಗರಿಸಿದಂತೆ... ಶಿವಮೊಗ್ಗೆಯ ಈ ಕರ್ನಾಟಕ ಸಂಘ... 'ಕನ್ನಡಕ್ಕೆ ಒಂದು ಗುಡಿ...'

❐❐

ಕಾಸಿಲ್ಲದೆ ಕೈಲಾಸ ತೋರಿಸಿದ ಗೋಪೀನಾಥ್

❒ ಶ್ರೀನಿವಾಸ್, ನಾವಿಕ

ಅಲ್ಲಿ ನೆರೆದಿದ್ದವರ ಮನದಲ್ಲಿ ಆನಂದದ ಅನುಭೂತಿ ಇತ್ತು. ಅವ್ಯಕ್ತ ಭಾವನೆಗಳಿದ್ದವು.

ಹಿಮಾಲಯದಲ್ಲಿರುವ ಕೈಲಾಸ ಪರ್ವತ ಮತ್ತು ಮಾನಸ ಸರೋವರವನ್ನು ಬದುಕಿನಲ್ಲೊಮ್ಮೆ ಕಾಣಬೇಕೆಂಬ ಹಿಂದೂ ಧಾರ್ಮಿಕ ಶ್ರದ್ಧಾಳುಗಳ ಅಭಿಲಾಷೆ ಅದೊಂದು ಬಗೆಯಲ್ಲಿ ಈಡೇರುತ್ತಿತ್ತು.

ಇಂತಹವರ ಮನಮಿಡಿತಕ್ಕೆ ಸ್ಪಂದಿಸಿದ್ದು ಕರ್ನಾಟಕ ಸಂಘ.

ನವದೆಹಲಿಯ ಟೆಲಿಕಾಂ ಕಮೀಷನ್‌ನ ಡೆಪ್ಯೂಟಿ ಡೈರೆಕ್ಟರ್ ಜನರಲ್ ಸಿ.ವಿ. ಗೋಪಿನಾಥ್ ತಾವು ಕೈಗೊಂಡಿದ್ದ ಕೈಲಾಸ ಪರ್ವತ, ಮಾನಸ ಸರೋವರ ಯಾತ್ರೆಯನ್ನು ವೇದಗಳ ಪರಿಕಲ್ಪನೆಯ ಹಿನ್ನೆಲೆಯಲ್ಲಿ ದೃಶ್ಯ- ಧ್ವನಿ, ಪ್ರಾತ್ಯಕ್ಷಿಕೆ ಮತ್ತು ಉಪನ್ಯಾಸ ಮೂಲಕ ನೀಡಿದ ಕಾರ್ಯಕ್ರಮವು ನಿನ್ನೆ ಸಂಜೆ ಕರ್ನಾಟಕ ಸಂಘದಲ್ಲಿ ನಡೆಯಿತು.

ನವದೆಹಲಿಯಿಂದ ಅಲ್ಮೋರ, ಸಿರ್ಕಾ, ಮಲ್ಪ, ಬಂಧಿ, ಗುಂಜಿ ಮಾರ್ಗವಾಗಿ ರಾಕ್ಷಸ ಸರೋವರವನ್ನು ಹಾದು ಮಾನಸ ಸರೋವರವನ್ನು ತಲುಪುವ, ಅಲ್ಲಿಂದ ಕೈಲಾಸ ಪರ್ವತವನ್ನು ಮುಟ್ಟುವ ಪ್ರವಾಸವನ್ನು ಮನಸೂರೆಗೊಳ್ಳುವ ಚಿತ್ರಗಳೊಂದಿಗೆ ಸ್ಲೈಡ್ ಶೋ ಮೂಲಕ ತೋರಿಸಿಕೊಟ್ಟರು ಗೋಪೀನಾಥ್.

ಸಂಜೆ ೬ ಗಂಟೆಯಿಂದ ರಾತ್ರಿ ೮ ಗಂಟೆಯವರೆಗಿನ ಕೇವಲ ಎರಡು ಗಂಟೆಗಳ ಅವಧಿಯಲ್ಲಿ ಸುಮಾರು ೧೫ ದಿನಗಳ ಪ್ರವಾಸವನ್ನುಚಿತ್ರಗಳ ಮೂಲಕ ಎಳೆ-ಎಳೆಯಾಗಿ ತೆರೆದಿಟ್ಟು ಅವರು ಮಾಹಿತಿಯನ್ನು ನೀಡುತ್ತಿದ್ದರು.

ಪ್ರೇಕ್ಷಕರನ್ನು ಯಾತ್ರಿಕರೇ ಎಂದು ಸಂಬೋಧಿಸುವ ಮೂಲಕ ಕೇಳುಗರ ಮನದಲ್ಲಿ ತಾವೇ ಯಾತ್ರೆಯನ್ನು ಕೈಗೊಂಡ ಅನುಭವ ಮೂಡಿಸುವಲ್ಲಿ ಗೋಪೀನಾಥ್ ಯಶಸ್ವಿಯಾದರು.

ಮಾನಸ ಸರೋವರ

ಮಾನಸ ಸರೋವರ ಎಂಬ ಹೆಸರನ್ನು ಕೇಳಿದರೆ ಮೈಮನ ಪುಳಕಗೊಳ್ಳುತ್ತದೆ. ಸೃಷ್ಟಿಯ ಮೊದಲ ನೀರು ಇಲ್ಲೇ ಉದ್ಭವವಾಗಿದ್ದು ಎಂಬ ಪ್ರತೀತಿ ಇದೆ. ಸಮುದ್ರ ಮಟ್ಟದಿಂದ ೧೫ ಸಾವಿರ ಅಡಿ ಎತ್ತರದಲ್ಲಿರುವ, ೧೩೫ಕಿ.ಮೀ. ವಿಸ್ತಾರರಾಗಿ ಹರಡಿರುವ ಜಲರಾಶಿಯೇ ಮಾನಸ ಸರೋವರ. ವರ್ಷದಲ್ಲಿ ೭ ತಿಂಗಳು ಹೆಪ್ಪು

ಗಟ್ಟಿದ್ದು ಉಳಿದ ೫ ತಿಂಗಳು ಮಾತ್ರ ದ್ರವರೂಪದಲ್ಲಿರುತ್ತದೆ. ೧೮೮೫ರಲ್ಲಿ ಬ್ರಿಟಿಷ್ ಅಧಿಕಾರಿ ಸರ್ ಟ್ರಮಂಡ್ ಎಂಬಾತ ರಬ್ಬರ್ ದೋಣಿಯಲ್ಲಿ ಮಾನಸ ಸರೋವರದಲ್ಲಿ ಯಾನ ಕೈಗೊಂಡಿದ್ದಕ್ಕಾಗಿ 'ತಲೆ' ದಂಡ ತೆತ್ತ ಘಟನೆಯನ್ನೂ ಅವರು ಹೇಳಿದರು.

ಮಾನಸ ಸರೋವರದ ಬಗ್ಗೆ ಈ ಮಾಹಿತಿಗಳನ್ನು ಗೋಪಿನಾಥ್ ನೀಡುತ್ತಿದ್ದರೆ ನೋಡುಗರ ಅಲ್ಲಲ್ಲ, ಯಾತ್ರಿಕರ ಮೈಮನ ಮಿಂದೇಳುತ್ತಿತ್ತು. ಕೈಲಾಸಪರ್ವತ ನಂತರ ಹೆಜ್ಜೆ ಹಾಕಿದ್ದು ಕೈಲಾಸ ಪರ್ವತದ ಕಡೆಗೆ ದೇವತೆಗಳು ಸ್ವರ್ಗಕ್ಕೆ ಏರುವ ಸ್ಥಳ ಎಂದೇ ಭಾವಿಸಲಾಗಿರುವ ಕೈಲಾಸಪರ್ವತದ ತುದಿಯನ್ನು ನೋಡುತ್ತಿದ್ದರೆ ನಾವೇ ಪರ್ವತದ ಬುಡದಲ್ಲಿದ್ದೇವೇನೊ ಎಂಬ ಭಾಸ.

೫೬ ಕಿಮೀ ಪರ್ವತ ಪ್ರದಕ್ಷಿಣೆಯಲ್ಲಿ ಕೈಲಾಸ ಪರ್ವತದ ೨೭ ಆಕರ್ಷಕ, ಭವ್ಯ ಮುಖಗಳು ಛಾಯಾಚಿತ್ರದ ಮೂಲಕ ಅನಾವರಣಗೊಂಡವು.

ಯೋನಿಪೀಠದೊಳಗಿನ ಲಿಂಗದಂತಿರುವ ಕೈಲಾಸ ಪರ್ವತದ ಚಿತ್ರವನ್ನು ಕಂಡಾಗಲಂತೂ ಶ್ರದ್ಧಾಭಕ್ತಿಯ ಉತ್ತುಂಗದಲ್ಲಿದ್ದ ಮನಸ್ಸುಗಳು ಮೂಕವಾದವು!

ಇಲ್ಲಿಗೆ ಮಾನಸ ಸರೋವರ ಹಾಗೂ ಕೈಲಾಸ ಪರ್ವತದ ಯಾತ್ರೆ ಕೊನೆಗೊಂಡಿತ್ತು. 'ಕಾಸಿದ್ದರಷ್ಟೇ ಕೈಲಾಸ' ಎಂಬ ಮಾತಿದೆ. ಇದಂತೂ ೪೫ ಸಾವಿರ ರೂ. ಖರ್ಚಿನ ಪ್ರವಾಸ. ಆದರೆ ಕಾಸಿಲ್ಲದೆ ಪ್ರೇಕ್ಷಕ (ಯಾತ್ರಿಕ)ರನ್ನು ಗೋಪೀನಾಥ್ ಕೈಲಾಸಕ್ಕೆ ಕರೆದೊಯ್ದಿದ್ದರು. ಖುದ್ದು ಕೈಲಾಸ ಪರ್ವತವನ್ನು ಕಂಡಷ್ಟೇ ಧನ್ಯತೆ ಮನದಲ್ಲಿ ಮನೆ ಮಾಡಿತ್ತು.

ಹೆಚ್ಚಾಗಿ ಖಾಲಿ ಕುರ್ಚಿಗಳೊಂದಿಗೆ ಕರ್ನಾಟಕ ಸಂಘದ ಕಾರ್ಯಕ್ರಮಗಳು ನಡೆಯುವುದು ರೂಢಿ. ಆದರೆ ನಿನ್ನೆ ಸಂಜೆ ಕರ್ನಾಟಕ ಸಂಘ ಹೌಸ್ ಫುಲ್!

ಸ್ಲೈಡ್ ಶೋಗೂ ಮೊದಲು ಸಿ.ವಿ. ಗೋಪಿನಾಥ್ ಮಾತನಾಡಿ, ಯಾತ್ರೆಗೆ ಪೂರ್ವ ಪೀಠಿಕೆಯನ್ನು ಹಾಕಿಕೊಟ್ಟರು. ಅನುಭವವನ್ನು ಹಂಚಿಕೊಂಡರು.

ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ಕೆ.ಜಿ ಸುಬ್ರಹ್ಮಣ್ಯ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಸಂಘದ ಗೌರವ ಕಾರ್ಯದರ್ಶಿ ಜಯದೇವಪ್ಪ ಜೈನಕೇರಿ ಉಪಸ್ಥಿತರಿದ್ದರು.

❑❑

ಶಿವಮೊಗ್ಗ : ಪುಸ್ತಕ ನೋಡಲು ಜನ ಜಾತ್ರೆ

❒ ನಾವಿಕ ವರದಿ

ಸಾಹಿತ್ಯಾಭಿರುಚಿ, ಓದುವ ಹವ್ಯಾಸ ಕಡಿಮೆಯಾ ಗುತ್ತಿದೆ ಎಂಬ ಆರೋಪವನ್ನು ಹುಸಿಯಾಗಿಸಿದ ಪುಸ್ತಕ ಪ್ರಿಯರು ತಮ್ಮ ನೆಚ್ಚಿನ ಲೇಖಕರ ಪುಸ್ತಕ ಖರೀದಿಗೆ ಮುಗಿಬಿದ್ದಿದ್ದರು.

ಕಳೆದೊಂದು ವಾರದಿಂದ ಇಲ್ಲಿನ ಕರ್ನಾಟಕ ಸಂಘದ ಹಸೂಡಿ ವೆಂಕಟ ಶಾಸ್ತ್ರಿ ಸಾಹಿತ್ಯ ಭವನದಲ್ಲಿ ಕನ್ನಡ ರಾಜ್ಯೋತ್ಸವ ಅಂಗವಾಗಿ ಆಯೋಜಿಸಲಾಗಿರುವ ಪುಸಕ್ತ ಪ್ರದರ್ಶನ ಹಾಗೂ ಮಾರಾಟ ಮೇಳ ಜನಮನವನ್ನು ಆಕರ್ಷಿಸುತ್ತಿದೆ.

ನವಕರ್ನಾಟಕ ಪಬ್ಲಿಕೇಷನ್ಸ್‌ನ ಮಕ್ಕಳ ಸರಣಿಯ ಪುಸ್ತಕಗಳು, ಮನೋವಿಕಾಸಕ್ಕೆ ಸಂಬಂಧಿಸಿದ ಪುಸ್ತಕಗಳು, ಲೋಕ ಶಿಕ್ಷಣ ಟ್ರಸ್ಟಿನ ಹೆಮ್ಮೆಯ ಕೊಡುಗೆಗಳಾದ ಕೃಷ್ಣಾವತಾರ, ಸುಧಾಮೂರ್ತಿ ಅವರ ಮನದ ಮಾತು, ಆಯುರ್ವೇದ, ಕೃಷ್ಣಾವತಾರದ ಕೊನೆಘಳಿಗೆಗಳು, ಮೈಸೂರು ವಿವಿ ಪ್ರಸಾರಾಂಗದ ಎಫಿಗ್ರಾಫಿಕ್ ಕರ್ನಾಟಕ, ಕನ್ನಡ ಕೈಪಿಡಿ, ಸಂಸ್ಕೃತ ವ್ಯಾಕರಣ ದೀಪಿಕಾ, ಅಮರಕೋಶ ಮೊದಲಾದ ಕೃತಿಗಳು ಪುಸ್ತಕ ಪ್ರಿಯರ ಗಮನ ಸೆಳೆಯುತ್ತಿವೆ.

ಕಳೆದೊಂದು ವಾರದಲ್ಲಿ ದಾಖಲೆಯ ಮಾರಾಟವಾಗಿವೆ. ಈ ಅವಧಿಯಲ್ಲಿ ೪ ಲಕ್ಷರೂಪಾಯಿಗೂ ಹೆಚ್ಚಿನ ವಹಿವಾಟು ನಡೆದಿದ್ದು ಪುಸ್ತಕ ಪ್ರದರ್ಶನ ಯಶಸ್ವಿಯಾಗಿ ನಡೆಯುತ್ತಿರುವುದಕ್ಕೆ ಸಂಕೇತವಾಗಿದೆ.

ಪ್ರದರ್ಶನದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಸರ್ವಜ್ಞನ ವಚನಗಳು, ಪಾರಿಭಾಷಿಕ ಸೂತ್ರಗಳು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು, ಪುರಾಣನಾಮ ಚುಡಾಮಣಿ, ಭಾರತೀಯ ಕಾವ್ಯ ಮಿಮಾಂಸೆ, ಕರ್ನಾಟಕ ಭಾರತ ಕಥಾ ಮಂಜರಿ, ಕನ್ನಡ ವ್ಯಾಕರಣ ಮೊದಲಾದ ಪ್ರೌಢ ಗ್ರಂಥಗಳು, ಅಮೇರಿಕಾದಲ್ಲಿ ಗೊರೂರು, ಕಂಪ್ಯೂಟರ್ ಲೋಕದಲ್ಲಿ, ಮಕ್ಕಳಿಗಾಗಿ ಅದ್ಭುತಗಳು, ಕನ್ನಡಕ್ಕೊಬ್ಬ ಕೈಲಾಸಂ ಮೊದಲಾದ ಪುಸ್ತಕಗಳು ಭರದಿಂದ ಮಾರಾಟವಾಗುತ್ತಿವೆ. ಲೋಕ ಶಿಕ್ಷಣ ಟ್ರಸ್ಟ್‌ನ ಪ್ರಕಟಣೆಗಳು ಸೇರಿದಂತೆ ಹಲವು ಪ್ರಕಾಶಕರು ಕಳುಹಿಸಿದ ಪುಸ್ತಕಗಳು ಸಂಪೂರ್ಣ ಮಾರಾಟವಾಗಿದ್ದು, ಸಂಘಟಕರು ಹೆಚ್ಚಿನ ಪುಸ್ತಕಗಳಿಗಾಗಿ ಬೇಡಿಕೆ ಸಲ್ಲಿಸಿದ್ದು, ಪ್ರದರ್ಶನ, ಮಾರಾಟ ಮೇಳದ ಯಶಸ್ಸಿಗೆ ಹಿಡಿದ ಕೈಗನ್ನಡಿಯಾಗಿದೆ.

ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ಕನ್ನಡ ಸಾಹಿತ್ಯ ಆಕಾಡೆಮಿ, ಹಂಪಿ ವಿವಿ ಪ್ರಸಾರಾಂಗ, ಕರ್ನಾಟಕ ಸಂಘ ಸೇರಿದಂತೆ ನಾಡಿನ ಹಲವಾರು ಪ್ರತಿಷ್ಠಿತ ಪ್ರಕಾಶಕರು ಮೇಳದಲ್ಲಿ ಪಾಲ್ಗೊಂಡಿದ್ದಾರೆ.

ಕಥೆ, ಕಾದಂಬರಿ, ಕವನ ಸಂಕಲನ, ಪ್ರವಾಸ ಕಥನ, ಪತ್ತೆದಾರಿ ಕಾದಂಬರಿ ಮೊದಲಾದ ಜನಪ್ರಿಯ ಸಾಹಿತ್ಯ ಕೃತಿಗಳು, ವೈಚಾರಿಕ ಗ್ರಂಥಗಳು, ಪಠ್ಯ ಪುಸ್ತಕಗಳು, ಪಠ್ಯ ಪೂರಕ ಪುಸ್ತಕಗಳು, ಮಕ್ಕಳ ಸಾಹಿತ್ಯ ಕೃತಿಗಳು, ಪೌರಾಣಿಕ ಗ್ರಂಥಗಳು, ದಾಸಸಾಹಿತ್ಯ, ವಚನ ಸಾಹಿತ್ಯ, ವ್ಯಾಕರಣ, ಮನೋವಿಜ್ಞಾನ, ಆಯುರ್ವೇದ, ಯೋಗ, ಧ್ಯಾನ, ವಿಜ್ಞಾನ, ಇತಿಹಾಸ, ವಾಣಿಜ್ಯ, ಕಂಪ್ಯೂಟರ್, ಜ್ಯೋತಿಷ್ಯ, ಆಧ್ಯಾತ್ಮಸೇರಿದಂತೆ ಹತ್ತು ಹಲವು ವಿಷಯಗಳಿಗೆ ಸಂಬಂಧಿಸಿದ ಸಾವಿರಾರು ಪುಸ್ತಕಗಳಿವೆ.

ಕೆಲವು ಪ್ರಕಾಶಕರು ಶೇ. ೨೫ ಮತ್ತೆ ಕೆಲವರು ಶೇ. ೧೫ ರಿಯಾಯ್ತಿ ದರದಲ್ಲಿ ಪುಸ್ತಕಗಳನ್ನು ಮಾರಾಟ ಮಾಡುತ್ತಿದ್ದರೆ, ಸಾಹಿತ್ಯ ಆಕಾಡೆಮಿ ಶೇ. ೫೦ ರಷ್ಟು ರಿಯಾಯ್ತಿ ನೀಡಿದ್ದು, ಈ ಸಂಸ್ಥೆಯ ಮೌಲಿಕ ಗ್ರಂಥಗಳು ಅರ್ಧ ಬೆಲೆಯಲ್ಲಿ ದೊರೆಯುತ್ತಿವೆ.

ಕರ್ನಾಟಕ ಸಂಘದಲ್ಲಿ ನಡೆಯುವ ಸಾಹಿತ್ಯಿಕ ಕಾರ್ಯಕ್ರಮಗಳಿಗೆ ಸಾರ್ವಜನಿಕರ ಸ್ಪಂದನೆ ಕಡಿಮೆ ಇದ್ದರೂ, ಪುಸ್ತಕ ಪ್ರದರ್ಶನಕ್ಕೆ ಮಾತ್ರ ವ್ಯಾಪಕ ಸ್ಪಂದನೆ ಕಂಡುಬರುತ್ತಿರುವುದು ಆಶ್ಚರ್ಯಕ್ಕೆ ಕಾರಣವಾಗಿದೆ.

ಕರ್ನಾಟಕ ಸಂಘ ಕಳೆದ ೪ ವರ್ಷಗಳಿಂದ ರಾಜ್ಯೋತ್ಸವ ಸಂದರ್ಭದಲ್ಲಿ ಪುಸ್ತಕ ಮೇಳಗಳನ್ನು ಆಯೋಜಿಸುತ್ತಿದ್ದು. ಈ ಬಾರಿಯ ಪುಸ್ತಕ ಮೇಳ ಇದೇ ದಿನಾಂಕ ೨೬ಕ್ಕೆ ಕೊನೆಗೊಳ್ಳಲಿದೆ.

ಪ್ರದರ್ಶನದಲ್ಲಿ ಪಾಲ್ಗೊಳ್ಳುವ ಪ್ರಕಾಶಕ ಸಂಸ್ಥೆಗಳಿಗೆ ಯಾವುದೇ ಶುಲ್ಕನಿಗದಿ ಪಡಿಸದಿರುವುದು ವಿಶೇಷವಾಗಿದೆ. ರಾಜ್ಯೋತ್ಸವದ ಸಂದರ್ಭದಲ್ಲಿ ಕನ್ನಡಿಗರಿಗೆ ಕಡಿಮೆ ಬೆಲೆಯಲ್ಲಿ ಕನ್ನಡ ಗ್ರಂಥಗಳು ದೊರಕುವಂತೆ ಮಾಡುವುದೇ ಸಂಘದ ಉದ್ದೇಶವಾಗಿದೆ ಎಂದು ಗೌರವ ಕಾರ್ಯದರ್ಶಿ ಜಯದೇವಪ್ಪ ಜೈನಕೇರಿ ತಿಳಿಸಿದ್ದಾರೆ.

□□

೭೫ ವರ್ಷಗಳ ಸಾರ್ಥಕ ಸೇವೆ

❒ ಡಾ. ಎಸ್. ವಿದ್ಯಾಶಂಕರ

ಸ್ವಾತಂತ್ರ್ಯೋತ್ತರ ಪೂರ್ವ ಕನ್ನಡಪರ ಸಂಘಟನೆಗಳ ಇತಿಹಾಸವನ್ನು ಗಮನಿಸಿದಾಗ ಕನ್ನಡವನ್ನು ಕಟ್ಟುವ, ಬಲಪಡಿಸುವ ಕೆಲಸ ಆಗಲೇ ನಡೆದಿದ್ದಿತು. ಭಾರತೀಯತೆ ಹಾಗೂ ಕರ್ನಾಟಕತ್ವ ಹೀಗೆ ಎರಡು ಪರಿಕಲ್ಪನೆಗಳು ಆಗಿನ ಬಿಸಿನೆತ್ತರ ಯುವಕರ ಕಣ್ಮುಂದಿದ್ದುವು. ಸ್ವಾತಂತ್ರ್ಯದ ಕನಸು, ದೇಶದ ಬಿಡುಗಡೆಯ ಸಲುವಾಗಿನ ಹೋರಾಟದ ಅನಿವಾರ್ಯತೆ, ಒಂದು ದಿವ್ಯ ಆದರ್ಶಕ್ಕೆ ತಮ್ಮನ್ನು ಒಡ್ಡಿಕೊಳ್ಳುವ ಉತ್ಸಾಹ ತರುಣರಲ್ಲಿ ಚಿಗುರೊಡೆಯುತ್ತಿತ್ತು. ಪರಿದುಹಂಚಿ ಹೋಗಿದ್ದ ಕನ್ನಡ ನೆಲ ಒಂದಾಗಬೇಕೆನ್ನುವ ಏಕೀಕರಣದ ದಿವ್ಯ ಮಂತ್ರವೂ ಆಗ ನಿನದಿಸುತ್ತಿತ್ತು ಇವೆರಡರ ಜೊತೆ ಕನ್ನಡದ ಸಂಬಂಧ ಬಿಡಿಸಿಕೊಳ್ಳಲಾಗದಂತಹ ತಳಕುಹಾಕಿಕೊಂಡಿದ್ದಿತು. ಹಳೆಗನ್ನಡ-ನಡುಗನ್ನುಡ ಸಾಹಿತ್ಯ ತನ್ನೆಲ್ಲ ಸಾಧ್ಯತೆಗಳನ್ನು ಪ್ರಕಟಪಡಿಸಿ ಅಭಿವ್ಯಕ್ತಿಯ ಹೊಸತನಕ್ಕಾಗಿ ಹುಡುಕಾಟ ನಡೆಸಿದ್ದ ಪರ್ವಕಾಲವದು. ಸ್ವಾರಸ್ಯವೆಂದರೆ, ಇವೆಲ್ಲವನ್ನೂ ತನ್ನ ತೆಕ್ಕೆಯಲ್ಲಿ ಹಾಕಿಕೊಂಡು ಇವಕ್ಕೆ ಅಭಿವ್ಯಕ್ತಿ ಮಾಧ್ಯಮವಾದದ್ದು ಹೊಸಗನ್ನಡ ಭಾಷೆ ಹಾಗೂ ಸಾಹಿತ್ಯ. ಇನ್ನೂಸ್ವಾರಸ್ಯದ ಸಂಗತಿಯೆಂದರೆ, ಇವೆಲ್ಲಕ್ಕೆ ತಾಯಿಯಾಗಿ ನಿಂತದ್ದು ಕನ್ನಡದ ಸಂಘ-ಸಂಸ್ಥೆಗಳು.

ಕಳೆದ ಶತಮಾನದ ಆದಿಭಾಗದಲ್ಲಿ ಧಾರವಾಡದಲ್ಲಿ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ್ ಹಾಗೂ ಅವರ ಗೆಳೆಯರ ಬಳಗ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಹುಟ್ಟುಹಾಕುವ ಮೂಲಕ ಕನ್ನಡಪರ ಚಟುವಟಿಕೆಗಳನ್ನು ತೀವ್ರವಾಗಿ ಅಲ್ಲಿ ನಡೆಸಿದರು. ಬೇಂದ್ರೆ, ಗೋಕಾಕ, ಮಧುರಚೆನ್ನ ಮುಗಳಿ ಇವರೇ ಮೊದಲಾದವರ ಸಾಹಿತ್ಯಕ ಚಟುವಟಿಕೆಗಳು ಆ ಭಾಗದ ತರುಣರಲ್ಲಿ ಸಂಘಟನೆಯ ಮನೋಭಾವವನ್ನೂ ಸಾಹಿತ್ಯ ರಚನೆಯ ಹುರುಪನ್ನು ಜೊತೆಜೊತೆಯಾಗಿ ಹುಟ್ಟಿಸಿದವು. ೧೯೧೫-೧೬ರಲ್ಲಿ ಮೈಸೂರು ಪ್ರಾಂತ್ಯದಲ್ಲಿ ಬೆಂಗಳೂರನ್ನು ಕೇಂದ್ರ ನೆಲೆಯಾಗಿ ಹೊಂದಿ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಗೊಂಡರೂ ಅದು ಅಖಿಲ ಕರ್ನಾಟಕ ವ್ಯಾಪ್ತಿಯನ್ನು ಪ್ರಾರಂಭದಲ್ಲೇ ತನ್ನ ಗುರಿಯನ್ನಾಗಿ ಹೊಂದಿ ಕನ್ನಡಪರ ಸಂಘಟನೆಗೆ ತೊಡಗಿತು. 'ಕನ್ನಡದ ಕಣ್ವ' ಬಿ.ಎಂ.ಶ್ರೀ ಡಿ.ವಿ. ಗುಂಡಪ್ಪ ಬೆಳ್ಳಾವೆ ವಂಕಟನಾರಾಣಪ್ಪ ಎಂ. ಆರ್. ಶ್ರೀ. ವಿ.ಸೀ. ಅ.ನ.ಕೃ ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳ ಜೊತೆಗೆ ತಮ್ಮನ್ನು ಗುರುತಿಸಿಕೊಂಡಿದ್ದರು. ಅದಕ್ಕೊಂದು ನಿರಂತರ ಚಾಲನಶಕ್ತಿಯಾಗಿ ತ್ರಿಕರಣಪೂರ್ವಕವಾಗಿ ದುಡಿದರು. ೧೯೧೯-೨೦ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ ಕನ್ನಡದ ಅಶ್ವಿನಿ ದೇವತೆಗಳೆಂದು ಪ್ರಸಿದ್ಧರಾಗಿದ್ದ ತಳುಕಿನ ವೆಂಕಣ್ಣಯ್ಯ-ಎ.ಆರ್. ಕೃಷ್ಣ ಶಾಸ್ತ್ರಿಗಳ ಮುಂಗಾಣ್ಕೆಯ ಫಲವಾಗಿ ಪ್ರಾರಂಭವಾಯಿತು. 'ಪ್ರಬುದ್ಧ ಕರ್ನಾಟಕ' ತ್ರೈಮಾಸಿಕ ಆ ವೇಳೆಗೆ ಆಧುನಿಕ ಸಾಹಿತ್ಯ ಕ್ರಿಯಾತ್ಮಕವಾಗಿ ಬೆಳೆಯಲು ತನ್ನದೇ ಆದ ಸಾಹಿತ್ಯಕ ಪರಿಸರ ನಿರ್ಮಾಣ ಮಾಡುತ್ತಿದ್ದಿತು. ಇದರ ಜವಾಬ್ದಾರಿಯನ್ನು ಹೊತ್ತ

ವೆಂಕಣ್ಣಯ್ಯ ಹಾಗೂ ಎ.ಆರ್. ಕೃಷ್ಣ ಶಾಸ್ತ್ರಿಗಳು ಸೆಂಟ್ರಲ್ ಕಾಲೇಜಿನಲ್ಲಿರುವವರೆಗೆ ಆ ವಿದ್ವದ್ ಪತ್ರಿಕೆಯನ್ನು ಅಲ್ಲಿಯೇ ಬೆಳೆಸಿದರು. ಕೆ.ವಿ. ಪುಟ್ಟಪ್ಪನವರೂ ಸೆಂಟ್ರಲ್ ಕಾಲೇಜಿನಲ್ಲಿ ಕೆಲಕಾಲ ಅಧ್ಯಾಪಕರಾಗಿದ್ದುದರಿಂದ ಅಲ್ಲಿನ ಕರ್ನಾಟಕ ಸಂಘದ ಉತ್ಸಾಹದ ವಾತಾವರಣದಲ್ಲಿ ಅವರೂ ಪಾಲುಗೊಂಡಿದ್ದರು. ಮುಂದೆ ಜಿ.ಪಿ. ರಾಜರತ್ನಂ ಕರ್ನಾಟಕ ಸಂಘದ ಅವಿಭಾಜ್ಯ ಭಾಗವೇ ಆಗಿ ಅಲ್ಲಿ ಕನ್ನಡದ ಕಂಪನ್ನು ಹರಡಿದರು. ಬೆಳೆವ ಚೇತನಗಳನ್ನು ಗುರುತಿಸಿ ಬೆನ್ನುತಟ್ಟಿದರು.

ಈ ಎಲ್ಲ ಕನ್ನಡಪರ ಚಟುವಟಿಕೆಗಳು ನಡೆಯುತ್ತಿರುವಾಗ ಮಲೆನಾಡಿನ ಮಧ್ಯಭಾಗದಲ್ಲಿ ೧೯೩೦ರಲ್ಲಿ ಶಿವಮೊಗ್ಗದಲ್ಲಿ ಸಣ್ಣ ಕತೆಗಾರರಾಗಿ ಪ್ರಸಿದ್ಧರಾದ ಆನಂದ (ಅಜ್ಜಂಪುರದ ಸೀತಾರಾಂ) ಕೂಡಲಿ ಚಿದಂಬರಂ, ಎಸ್.ವಿ. ಕೃಷ್ಣಮೂರ್ತಿರಾಯರು, ಎಸ್. ವಿಷ್ಣುಭಟ್ಟರು ಬಿ.ಎನ್. ರಾಘವಯ್ಯ, ಎಲ್.ಸಿದ್ದಪ್ಪ, ಹೆಚ್ ಸಿದ್ದಯ್ಯ, ಭೂಪಾಳಂ ಚಂದ್ರಶೇಖರಯ್ಯ, ಪುಟ್ಟನಂಜಪ್ಪ, ದೇವಂಗಿ ಆರ್ ಮಾನಪ್ಪ-ಇವರೇ ಮೊದಲಾದ ಸಾಹಿತ್ಯ ಪ್ರಿಯರ ಸಾಮೂಹಿಕ ಸಂಘಟನೆಯ ಫಲವಾಗಿ ಕರ್ನಾಟಕ ಸಂಘ ಅಸ್ತಿತ್ವಕ್ಕೆ ಬಂದಿತು. ಇದರ ಮೊದಲ ಅಧ್ಯಕ್ಷರು ಅಸ್ಥಾನ ಮಹಾವಿದ್ವಾನ್ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು, ಮೊದಲ ಕಾರ್ಯದರ್ಶಿಗಳು ಆನಂದರವರು. ಕರ್ನಾಟಕ ಸಂಘದ ಕಾರ್ಯಾಲಯವಿದ್ದದ್ದು ಈಗಿನ ಪ್ರಹ್ಲಾದಶೆಟ್ಟವೃತ್ತದಲ್ಲಿರುವ (ಚರ್ಚ್ ಸರ್ಕಲ್, ಬಿ. ಹೆಚ್. ರಸ್ತೆ) ಕೃಷ್ಣಾಕೆಫೆಯ ಮಹಡಿಯ ೧೦ ಅಡಿ ಅಗಲ ೨೦ ಅಡಿ ಉದ್ದದ ಸಣ್ಣ ಕೊಠಡಿಯಲ್ಲಿ. ಶಿವಮೊಗ್ಗೆಯ ಕರ್ನಾಟಕದ ಸಂಘ ಉದ್ಘಾಟನೆಯಾದದ್ದು ೮-೧೧-೧೯೩೦ ರಂದು. ಉದ್ಘಾಟಿಸಿದವರು ಆ ವೇಳೆಗೆ ಪ್ರಸಿದ್ಧರಾಗಿದ್ದ ಮಲೆನಾಡಿನ ಮನೆಮಾತಾಗಿದ್ದಶ್ರೀ ಕುವೆಂಪುರವರು.

ಶಿವಮೊಗ್ಗೆಯ ಕರ್ನಾಟಕ ಸಂಘ ಕನ್ನಡ ಪುಸ್ತಕಗಳ ಪ್ರಕಟಣೆಯಲ್ಲಿ ತನ್ನ ಪ್ರಾರಂಭದ ದಿನಗಳಲ್ಲಿಯೇ ಉತ್ಸಾಹವನ್ನು ಪ್ರಕಟಪಡಿಸಿದೆ. ೧೯೩೮ರ ಜನವರಿಯಲ್ಲಿ ಟಿ.ಎಸ್. ವೆಂಕಣ್ಣಯ್ಯ ಹಾಗೂ ಡಿ.ಎಲ್. ನರಸಿಂಹಾಚಾರ್ ಜೊತೆಗೂಡಿ ಸಂಪಾದಿಸಿರುವ 'ಸಿದ್ಧರಾಮ ಚಾರಿತ್ರ'ದ ಕೊನೆಯಲ್ಲಿ ಸಂಘದ ಪ್ರಕಟಣೆಗಳ ವಿವರ ಕೊಟ್ಟಿರುವರು. ಪಂ. ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳ ಕನ್ನಡ ಮೇಘಸಂದೇಶ, ಜಿ.ಪಿ. ರಾಜರತ್ನಂರವರ ಗಂಡುಗೊಡಲಿ ಕೆ.ವಿ. ಪುಟ್ಟಪ್ಪನವರ ರಕ್ತಾಕ್ಷಿ ಪಾಂಚಜನ್ಯ, ನವಿಲು ಜಿ.ಪಿ. ರಾಜರತ್ನಂರವರ ಹನಿಗಳು, ಆನಂದರ ಮಾಟಗಾತಿ! ಮತ್ತು ಇತರ ಕಥೆಗಳು, ನಾ. ಕಸ್ತೂರಿಯವರ ಪಾತಾಳದಲ್ಲಿ ಪಾಪಚ್ಚಿ ಎ.ಎನ್.ಮೂರ್ತಿರಾಯರ ಹಗಲುಗನಸುಗಳು, ವಿ.ಸೀ. ಅವರ ನೆಳಲುಬೆಳಕು, ಜಿ. ಹನುಮಂತರಾವ್‌ರವರ ವಿಜ್ಞಾನ, ದ.ರಾ.ಬೇಂದ್ರೆಯವರ ನಾದಲೀಲೆ, ಎಂ.ಆರ್. ಶ್ರೀ. ಅವರ ವಯಸ್ಕರ ವಿದ್ಯಾಭ್ಯಾಸದ ಮೊದಲನೆಯ ಪುಸ್ತಕ ಹೀಗೆ ಅಂದಿನ ಖ್ಯಾತನಾಮರಾದ ಸಾಹಿತಿಗಳ ಮಹತ್ವದ ಕೃತಿಗಳನ್ನು ಪ್ರಕಟಿಸಿದ ಶ್ರೇಯಸ್ಸು ಕರ್ನಾಟಕ ಸಂಘದ್ದು. ಮುದ್ರಣದ ಸೊಗಸು, ಬಳಸಿದ ಕಾಗದ ಎಲ್ಲವೂ ಶ್ರೇಷ್ಠಮಟ್ಟದ ಅಭಿರುಚಿಯದು ಅನಂತರದ ವರ್ಷಗಳಲ್ಲಿ ಗೊರೂರರ ಪುನರ್ಜನ್ಮ (ಕಾದಂಬರಿ), ಜಿ.ಪಿ. ರಾಜರತ್ನಂ ಅವರ ಶಕಾರನ ಶಾರೋಟು, ತ.ಸು. ಶಾಮರಾವ್ ಹಾಗೂ ಡಿ.ಎಲ್. ನರಸಿಂಹಾಚಾರ್ ಸಂಪಾದಿಸಿದ ಶಾಂತಿನಾಥ ಕವಿಯ 'ಸುಕುಮಾರ ಚರಿತಂ, ಟಿ.ಪಿ. ಕೈಲಾಸಂರವರ

ಬಂಡ್ವಾಳ್ವಿಲ್ಲದ ಬಡಾಯಿ, ಶ್ರೀಮತಿ ವಸುಮತಿ ಉಡುಪರವರ ಬಂದನಾ ಹುಲಿರಾಯ, ಮೃಗತೃಷ್ಣಾ, ಮಾಧವಪೈರವರ ಶಬ್ದಾರ್ಥಗೌರವ, ವಜ್ರಪಥ (ಸ್ಮರಣ ಸಂಚಿಕೆ). ಕರ್ನಾಟಕ ಸಂಘ ಭವನ-೬೦ (ನೆನಪಿನ ಸಂಪುಟ), ಈ ಕೃತಿಗಳನ್ನು ಹೊರತಂದಿದೆ.

ಕರ್ನಾಟಕ ಸಂಘವು ತನ್ನ ಸ್ವಂತ ಕಟ್ಟಡವನ್ನು ಶ್ರೀಹಸೂಡಿ ವೆಂಕಟಶಾಸ್ತ್ರಿಗಳ ಉದಾರ ಕೊಡಿಗೆಯಿಂದ ಹೊಂದಿತು. ೧೯೪೨ರಲ್ಲಿ ಆಚಾರ್ಯ ಬಿ.ಎಂ.ಶ್ರೀ. ಇದರ ಶಂಕುಸ್ಥಾಪನೆ ಮಾಡಿವರೆ, ಶ್ರೀ ಜಯಚಾಮರಾಜ ಒಡೆಯರ್ ಅವರು ೧೯೪೩ರಲ್ಲಿ ಇದರ ಉದ್ಘಾಟನೆ ನೆರವೇರಿಸಿದರು. ೧೯೫೭ರಲ್ಲಿ ಶ್ರೀಹಸೂಡಿ ವೆಂಕಟಶಾಸ್ತ್ರಿಗಳು ನಿಧನರಾದಾಗ ದ.ರಾ. ಬೇಂದ್ರೆಯವರ ಸೂಚನೆಯಂತೆ ಈ ಭವನಕ್ಕೆ ಹಸೂಡಿ ವೆಂಕಟಶಾಸ್ತ್ರಿಗಳ ಸಾಹಿತ್ಯ ಭವನ ಎಂದು ನಾಮಕರಣ ಮಾಡಲಾಯಿತು. ಈ ಭವನ ೧೯೯೩ರಲ್ಲಿ ಸುವರ್ಣ ಮಹೋತ್ಸವವನ್ನೂ ೨೦೦೩ರಲ್ಲಿ ವಜ್ರಮಹೋತ್ಸವವನ್ನೂ ವಿಜೃಂಭಣೆಯಿಂದ ಆಚರಿಸುವ ಭಾಗ್ಯ ಪಡೆಯಿತು.

ಕರ್ನಾಟಕ ಸಂಘದ ಹೆಚ್ಚುಗಾರಿಕೆಯಿರುವುದು ಅಲ್ಲಿ ನಡೆದ ನಾಡಿನ ಪ್ರತಿಷ್ಠಿತ ಸಾಹಿತಿ-ವಿದ್ವಾಂಸರು ಮಾಡಿದ ಭಾಷಣಗಳಲ್ಲಿ. ಕೆ.ವಿ. ಪುಟ್ಟಪ್ಪ ಎಸ್.ವಿ ಪರಮೇಶ್ವರಭಟ್ಟ, ಶಂಬಾ ಜೋಶಿ, ಹಾಮಾನಾ, ಪಿ.ಲಂಕೇಶ್, ಎಂ.ಕೆ. ಇಂದಿರಾ, ಕೆ.ವಿ. ಸುಬ್ಬಣ್ಣ, ಯು.ಆರ್. ಅನಂತಮೂರ್ತಿ, ಜಿ.ಎಸ್. ಶಿವರುದ್ರಪ್ಪ ಈ ಮಹನೀಯರಿಗೆ ಕರ್ನಾಟಕ ಸಂಘ ಗೌರವ ಸದಸ್ಯತ್ವ ಪ್ರದಾನ ಮಾಡಿ ಅವರುಗಳ ಹೆಸರಿನಲ್ಲಿ ಸಾಹಿತ್ಯ ಪ್ರಶಸ್ತಿಯನ್ನು ವರ್ಷವರ್ಷವೂ ನೀಡುತ್ತ ಬಂದಿದೆ. ೧೯೪೩ರಲ್ಲಿ ಶಿವಮೊಗ್ಗದಲ್ಲಿ ದ.ರಾ. ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಮ್ಮೇಳನ ನಡೆಯಿತು. ಇದರ ಸಂಪೂರ್ಣ ಜವಾಬ್ದಾರಿ ಶಿವಮೊಗ್ಗ ಕರ್ನಾಟಕ ಸಂಘದ್ದು. ಸಮ್ಮೇಳನದ ಮುಕ್ತಾಯದ ದಿನ ಬೇಂದ್ರೆಯವರು 'ಹಕ್ಕಿ ಹಾರುತಿದೆ ನೋಡಿದಿರಾ' ಮತ್ತು 'ಗಂಗಾವತರಣ' ಎಂಬ ಎರಡು ಪ್ರಸಿದ್ಧ ಕವನಗಳನ್ನು ಹಾಡಿದರು. ಅದನ್ನು ದ.ರಾ. ಬೇಂದ್ರೆಯವರು ಓದಿದ ರೀತಿ ಹಾಗೂ ಅದರ ಪರಿಣಾಮ ಮರೆಯಲಾಗದ ಒಂದು ದಿವ್ಯ ಅನುಭವ. ಕರ್ನಾಟಕ ಸಂಘವು ಅನೇಕ ಸಾಹಿತಿ, ಕವಿ, ಕಲಾವಿದರನ್ನು ಕರೆದು ಸನ್ಮಾನಿಸಿದೆ. ಕರ್ನಾಟಕ ಸಂಘದ ಪ್ರಾರಂಭೋತ್ಸವ ನೆರವೇರಿಸಿದ ಕುವೆಂಪು 'ನವೋದಯ ಸಾಹಿತ್ಯ'ದ ಪರಿಕಲ್ಪನೆಯನ್ನು ಮತ್ತು ಅದರ ಹೊಳಹನ್ನು ಆ ಶುಭ ಸಂದರ್ಭದಲ್ಲಿ ತಿಳಿಸಿದರು. ಇದೊಂದು ಮಹತ್ವದ ದಾಖಲೆ. (ಈ ವಿಷಯ ನನಗೆ ತಿಳಿಸಿ ಉಪಕರಿಸಿದವರು ಡಾ. ಜಿ.ಎಸ್. ಶಿವರುದ್ರಪ್ಪನವರು).

ಶಿವಮೊಗ್ಗೆಯ ಕರ್ನಾಟಕ ಸಂಘಕ್ಕೀಗ ೭೫ ವರ್ಷಗಳು. ಒಂದು ಸಂಘ ಇಷ್ಟು ದೀರ್ಘಕಾಲ ಉಳಿದುಕೊಂಡು ಬಂದಿರುವುದು, ಸಾಹಿತ್ಯ ಹಾಗೂ ಸಂಸ್ಕೃತಿ ವರ್ಧನೆಗೆ ಒಂದು ಅಭಿರುಚಿ ನಿರ್ಮಾಣಕ್ಕೆ ಸಾಂಸ್ಕೃತಿಕವಾಗಿ ಕೇಳುಗರು. ಸಾಹಿತ್ಯಾಸಕ್ತರ ಜೊತೆ ಒಂದು ಮಧುರ ಸಂಬಂಧ ಬೆಳೆಸಲು ಸೇತುವೆಯಾಗಿ ವ್ಯವಹರಿಸುತ್ತಿರುವುದು ನಾಡಿನ ಭಾಗ್ಯ.

ಕೃಪೆ : 'ಭಾನುವಾರ' ವಾರಪತ್ರಿಕೆ

ಕವಿ ಹಾಡುವ ಮೊದಲು ಕನ್ನಡ ದೀಪ ಹಚ್ಚಿದ ಸಂಘ...

❒ ವಾಸು

ನಾಡಿನ ಎರಡು ನಂದಾದೀಪಗಳಲ್ಲಿ ಒಂದು; ಧಾರವಾಡದ ವಿದ್ಯಾವರ್ಧಕ ಸಂಘ. ಮತ್ತೊಂದು; ಶಿವಮೊಗ್ಗ ಕರ್ನಾಟಕ ಸಂಘ. ಹಚ್ಚೇವು ಕನ್ನಡದ ದೀಪ ಎಂದು ಕವಿ ಹಾಡುವ ಮೊದಲೇ ಕನ್ನಡದ ದೀಪ ಹಚ್ಚಿದ್ದು ಕರ್ನಾಟಕ ಸಂಘ. ವಾಣಿಜ್ಯ ಕ್ಷೇತ್ರವಾಗಿ ಲಕ್ಷ್ಮಿಯ ಸಾಮ್ರಾಜ್ಯವಾಗಿದ್ದ ಶಿವಮೊಗ್ಗದಲ್ಲಿ ಸರಸ್ವತಿ ಪೀಠ ಸ್ಥಾಪಿಸಿದ ಕರ್ನಾಟಕ ಸಂಘಕ್ಕೆ ಈಗ ಅಮೃತ ಮಹೋತ್ಸವದ ಸಂಭ್ರಮ. ನಾಡಿನ ಈ ಹೆಮ್ಮೆಯ ಸಂಘದ ಅಮೃತ ಮಹೋತ್ಸವವನ್ನು ಇಡೀ ವರ್ಷ ಆಚರಿಸಲು ನಿರ್ಧರಿಸಲಾಗಿದ್ದು ನಾಳೆ ನ. ೮ರಿಂದ ೨೦೦೫ ನವೆಂಬರ್ ೮ರವರೆಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಬೆಳೆದು ಬಂದ ದಾರಿ:

ಶಿವಮೊಗ್ಗದಲ್ಲಿ ಕನ್ನಡ ನಂದಾದೀಪವನ್ನು ಹಚ್ಚಿದವರು ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯಾಭಿಮಾನಿಗಳು. ೧೯೩೦ರಲ್ಲಿ ಕರ್ನಾಟಕ ಸಂಘ ಅಸ್ತಿತ್ವಕ್ಕೆ ಬಂದಾಗ ಮುಂಚೂಣಿಯಲ್ಲಿದ್ದವರು ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು, ಕೂಡಲಿ ಚಿದಂಬರಂ ಹಾಗೂ ಎಸ್.ವಿ. ಕೃಷ್ಣಮೂರ್ತಿರಾಯರು. ಕರ್ನಾಟಕ ಸಂಘದ ಉದ್ಘಾಟನ ಸಮಾರಂಭ ನಡೆದಿದ್ದು ಸರ್ಕಾರಿ ಪ್ರೌಢ ಶಾಲೆಯಲ್ಲಿ ರಾಷ್ಟ್ರಕವಿ ಕುವೆಂಪು ದೀಪ ಬೆಳಗಿಸಿ ಸಂಘವನ್ನು ಉದ್ಘಾಟಿಸಿದ್ದರು. ಈಗಿನ ಓಲ್ಡಬಾರ್ ಲೈನ್ ರಸ್ತೆಯ ಹೆಂಚಿನ ಮನೆಯೊಂದರಲ್ಲಿ ಸಂಘದ ಚಟುವಟಿಕೆ ಪ್ರಾರಂಭ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು ಸ್ಥಾಪಕಾಧ್ಯಕ್ಷರು, ಕೂಡಲಿ ಚಿದಂಬರಂ ಸ್ಥಾಪಕ ಕಾರ್ಯದರ್ಶಿಗಳು.

ಕರ್ನಾಟಕ ಸಂಘ ಶಿಶುವಾಗಿದ್ದಾಗ ಹೆಂಚಿನ ಮನೆಯ ತೊಟ್ಟಿಲಲ್ಲಿ ಆಟವಾಡಿ, ಅಂಬೇಗಾಲಿಟ್ಟು ಬೆಳೆಯಿತು. ಅಲ್ಲಿಂದ ಸಂಘದ ಚಟುವಟಿಕೆ ಕೃಷ್ಣಾ ಕೆಫೆ ಉಪ್ಪರಿಗೆಗೆ, ಅಲ್ಲಿಂದ ಎಸ್.ವಿ.ಕೃಷ್ಣಮೂರ್ತಿರಾಯರ ಆಫೀಸಿಗೆ, ನಂತರ ಕೆಲವು ದಿನಗಳವರೆಗೆ ನಗರಸಭೆಯ ಒಂದು ಕೊಠಡಿಗೆ ವರ್ಗಾವಣೆಯಾಗಿದ್ದು ಈಗ ಇತಿಹಾಸ. ಅಲೆಮಾರಿಯಾಗಿ ಅಲ್ಲಿಂದಿಲ್ಲಿಗೆ ಅಲೆದಾಡುತ್ತಿದ್ದ ಕರ್ನಾಟಕ ಸಂಘಕ್ಕೆ ಒಂದು ಸ್ಥಿರವಾದ ನೆಲೆ ಒದಗಿಸಿದವರು ಶಿವಮೊಗ್ಗದ ಪ್ರತಿಷ್ಠಿತ ಶ್ರೀಮಂತ ಅಡಿಕೆ ಮಂಡಿ ವರ್ತಕ ದಿವಂಗತ ಹಸೂಡಿ ವೆಂಕಟಶಾಸ್ತ್ರಿಗಳು. ಸಂಘದ ಸದಸ್ಯರು ಕರ್ನಾಟಕದ ಸಂಘ ಕಟ್ಟಡ ನಿರ್ಮಾಣಕ್ಕೆ ಧನಸಹಾಯ ಕೇಳಲು ಬಂದಾಗ ಶಾಸ್ತ್ರಿಗಳು ಕಟ್ಟಡದ ಪೂರ್ತಿ ಖರ್ಚನ್ನು ತಾವೇ ವಹಿಸಿಕೊಳ್ಳುವುದಾಗಿ ಮುಂದೆ ಬಂದರು.

ಮೂಲತಃ ಶಾಸ್ತ್ರಿಗಳು ಕವಿಯೂ ಅಲ್ಲ, ಸಾಹಿತಿಯೂ ಅಲ್ಲ. ಆದರೆ ಕಾವ್ಯಾಸಕ್ತರು, ಸಾಹಿತ್ಯಾಭಿಮಾನಿ, ಭಾಷಾಭಿಮಾನಿಗಳು, ಕನ್ನಡ ಸಂಸ್ಕೃತಿ ಕುರಿತು ಅಪಾರ ಗೌರವಾದರ ಹೊಂದಿದವರು. ಮಳೆ ಬಿಸಿಲು, ಚಳಿ ಎನ್ನದೆ ಪ್ರತಿದಿನ ಕೊಡೆ ಹಿಡಿದುಕೊಂಡು ಬಂದು ನಿಂತು ಕಟ್ಟಡದ ಕಾಮಗಾರಿ ವೀಕ್ಷಿಸುತ್ತಿದ್ದರು. ನಿರ್ಮಾಣದ ಪ್ರತಿ ಹಂತದಲ್ಲೂ ಓರೆ ಕೋರೆಗಳಾಗದಂತೆ, ಯಾವ ಕೊರತೆಯೂ ಉಂಟಾಗದಂತೆ ಶಾಸ್ತ್ರಿಗಳು ಮೇಲ್ವಿಚಾರಣೆ ನಡೆಸುತ್ತಿದ್ದರು. ಆಗ ನಗರಸಭೆ ಅಧ್ಯಕ್ಷರಾಗಿದ್ದ ನರಸಿಂಹ ಕಾಮತ್ ಕರ್ನಾಟಕ ಸಂಘಭವನಕ್ಕಾಗಿ ಮುಖ್ಯ ರಸ್ತೆಯಲ್ಲಿ ನಿವೇಶನ ಒದಗಿಸಿದ್ದರು. ಕೇವಲ ೫ ಸಾವಿರ ರೂ ವೆಚ್ಚದಲ್ಲಿ ಚಿಕ್ಕ ಭವನ ನಿರ್ಮಿಸಲು ನಿಶ್ಚಯಿಸಲಾಗಿತ್ತಾದರೂ ಕೊನೆಗೆ ನಿರ್ಮಾಣವಾಗಿದ್ದು ೩೦ ಸಾವಿರ ರೂ. ವೆಚ್ಚದ ಸುಸಜ್ಜಿತ ಸೌಧ. ಶಾಸ್ತ್ರಿಗಳ ಸೇವೆಯ ಸ್ಮರಣಾರ್ಥ ಈ ಭವನಕ್ಕೆ ಅವರ ಹೆಸರನ್ನೇ ಇಡಲಾಯಿತು. ಕನ್ನಡದ ಕಣ್ವ ಬಿ.ಎಂ.ಶ್ರೀ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರೆ ಮೈಸೂರು ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಉದ್ಘಾಟನೆ ನೆರವೇರಿಸಿದ್ದರು.

ಕನ್ನಡದ ಸೇವೆ:

ಕರ್ನಾಟಕ ಸಂಘಭವನ ಶಿವಮೊಗ್ಗದ ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆ ಕೇಂದ್ರವಾಗಿ ಬೆಳೆಯಿತು. ಆದರೆ ಸಂಘ ತನ್ನ ಕಾರ್ಯ ಕ್ಷೇತ್ರವನ್ನು ಶಿವಮೊಗ್ಗಗೆ, ಮಾತ್ರ ಸೀಮಿತಗೊಳಿಸಲಿಲ್ಲ. ಕನ್ನಡ ನಾಡಿನ ಎಲ್ಲಾ ಸಾಹಿತ್ಯಕ ಚಳವಳಿಗಳಿಗೆ ಸಾಕ್ಷಿಯಾಯಿತು. ನಾಡಿನ ಮೂಲೆ ಮೂಲೆಯಿಂದ ಕವಿ ಕಲಾವಿದರನ್ನು ಆಹ್ವಾನಿಸಿ ಸಂಘದ ವೇದಿಕೆಗೆ ಘನತೆ ತಂದು ಕೊಟ್ಟಿತು. ನಾಡಿನ ಹಿರಿ-ಕಿರಿಯ ಕವಿಗಳು, ವಿದ್ವಾಂಸರು, ಸಾಹಿತಿಗಳು, ಕಲಾವಿದರು ಇಲ್ಲಿ ಹಾಡಿ ಸಂಘದ ವೇದಿಕೆಯನ್ನು ಪಾವನಗೊಳಿಸಿದ್ದಾರೆ. ಬಿ.ಎಂ.ಶ್ರೀ, ಟಿ.ಎಸ್. ವೆಂಕಣ್ಣಯ್ಯ ವಿ.ಸೀ. ಪು.ತಿ.ನ. ಬೇಂದ್ರೆ, ಕಾರಂತ, ದೇ.ಜ.ಗೌ. ಗೋಕಾಕರು, ಅಡಿಗರು, ಆನಂದಕಂದ, ಎಸ್.ವಿ.ಪಿ. ಅನಂತಮೂರ್ತಿ ಹಾ.ಮಾ.ನಾ. ಕೆ.ವಿ. ಸುಬ್ಬಣ್ಣ, ಚೆನ್ನವೀರ ಕಣವಿ, ಜೋಳದರಾಶಿ ದೊಡ್ಡಣ್ಣ ಗೌಡರು, ಗಂಗೂಬಾಯಿ ಹಾನಗಲ್, ಕೆರೆಮನೆ ಶಂಭು ಹೆಗಡೆ, ಶ್ರೇಣಿ ಗೋಪಾಲಕೃಷ್ಣಭಟ್, ಇದಿನಬ್ಬ, ಹುಕ್ಕೇರಿ ಬಾಳಪ್ಪ, ಕೈಯ್ಯಾರ ಕಿಂಞಣ್ಣರೈ, ಅನಕೃ, ತ.ರಾ.ಸು. ಶಿವಮೊಗ್ಗ ಸುಬ್ಬಣ್ಣ, ಕುಂಬ್ಳೆ ಮೊದಲಾದ ಕವಿ, ಕಲಾವಿದ ಸಾಹಿತಿಗಳು ತಾವು ಈ ವೇದಿಕೆಯಲ್ಲಿ ಮಾತನಾಡಿದ್ದು. ತಮ್ಮ ಬದುಕಿನಲ್ಲಿ ದೊರೆತ ಮಹಾ ಅದೃಷ್ಟವೆಂದು ಧನ್ಯತೆ ವ್ಯಕ್ತಪಡಿಸಿದ್ದಾರೆ.

ಸಾಹಿತ್ಯ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಿದ ಗಣ್ಯರಿಗೆ ಸಂಘದ ಗೌರವ ಸದಸ್ಯತ್ವ ನೀಡಲಾಗುವುದು. ಅಲ್ಲದೆ ಅವರ ಹೆಸರಿನಲ್ಲಿ ಪ್ರಶಸ್ತಿಯೊಂದನ್ನು

ಘೋಷಿಸಲಾಗುವುದು. ಈ ಪ್ರಶಸ್ತಿ ೨ ಸಾವಿರ ರೂ. ನಗದು ಹಾಗೂ ಪ್ರಶಸ್ತಿ ಪತ್ರವನ್ನೊಳಗೊಂಡಿರುತ್ತದೆ. ಕರ್ನಾಟಕ ಸಂಘಕೊಡಮಾಡುವ ಈ ಗೌರವಕ್ಕೆ ತನ್ನದೇ ಆದ ಘನತೆ ಇದೆ. ಈವರೆಗೂ ನಾಡಿನ ೮ ಹಿರಿಯ ಸಾಹಿತಿಗಳಿಗೆ ಗೌರವ ಸದಸ್ಯತ್ವ ನೀಡಿ ಪುರಸ್ಕರಿಸಲಾಗಿದೆ. ರಾಷ್ಟ್ರಕವಿ ಕುವೆಂಪು, ಪ್ರೊ. ಎಸ್.ವಿ ಪರಮೇಶ್ವರ ಭಟ್, ಎಂ.ಕೆ ಇಂದಿರಾ, ಪಿ. ಲಂಕೇಶ್, ಪ್ರೊ. ಜಿ.ಎಸ್. ಶಿವರುದ್ರಪ್ಪ, ಡಾ.ಹಾ.ಮಾ. ನಾಯಕ್, ಡಾ. ಯು.ಆರ್. ಅನಂತಮೂರ್ತಿ ಹಾಗೂ ಕೆ.ವಿ. ಸುಬ್ಬಣ್ಣ ಅವರು ಸಂಘದ ಗೌರವ ಸದಸ್ಯರಾಗಿದ್ದಾರೆ.

ಚಟುವಟಿಕೆ:

ಕರ್ನಾಟಕ ಸಂಘದ ಈಗಿನ ಕಾರ್ಯಕಾರಿ ಸಮಿತಿಯು ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿಯೇ ಕಾರ್ಯನಿರ್ವಹಿಸುತ್ತಿದೆ. ತಾಯಿಯ ಸೇವೆಯ ವಿವಿಧ ರೂಪಗಳಾದ ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಆಶ್ರಯ, ಪುಸ್ತಕ ಪ್ರಕಾಶನ, ಮಾರಾಟ ಮೊದಲಾದ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಕಾರ್ಯಕಾರಿ ಸಮಿತಿ ಅಧ್ಯಕ್ಷ ಪ್ರೊ. ಪಾಂಡುರಂಗ ಉಡುಪ, ಗೌರವ ಕಾರ್ಯದರ್ಶಿ ಜಯದೇವಪ್ಪ ಜೈನಕೇರಿ, ಕೋಶಾಧ್ಯಕ್ಷ ಹೆಚ್.ಡಿ. ಮೋಹನಶಾಸ್ತ್ರಿ ಅವರ ನೇತೃತ್ವದಲ್ಲಿ ಸಂಘ ಕ್ರಿಯಾಶೀಲವಾಗಿದೆ. ರಾಷ್ಟ್ರಕವಿ ಕುವೆಂಪು ಅವರ ಲಲಿತ ಕವನ ಸಂಕಲನ ನವಿಲು, ಕುಕ್ಕೆ ಸುಬ್ರಮಣ್ಯ ಶಾಸ್ತ್ರಿಗಳ ಕನ್ನಡ ಮೇಘ ಸಂದೇಶ, ಜಿ.ಪಿ. ರಾಜರತ್ನಂ ಅವರ ಗಂಡು ಗೊಡಲಿ, ಆನಂದರ ಮಾಟಗಾತಿ, ಮೂರ್ತಿರಾಯರ ಹಗಲುಗನಸುಗಳು, ಬೇಂದ್ರೆ ಅವರ ನಾದಲೀಲೆ, ವಿ.ಸೀ. ಅವರ ನೆಳಲು ಬೆಳಕು, ರಾಘವಾಂಕನ ಸಿದ್ಧರಾಮಚರಿತ್ರೆ, ಗೊರೂರು ಅವರ ಪುನರ್ಜನ್ಮ ನಾ. ಕಸ್ತೂರಿ ಅವರ ಪಾತಾಳದಲ್ಲಿ ಪಾಪಚ್ಚಿ, ಕೈಲಾಸಂ ಅವರ ಬಂಡ್ವಾಳ್ವಿಲ್ಲದ ಬಡಾಯಿ, ವಸುಮತಿ ಉಡುಪರ ಮೃಗ ತೃಷ್ಣಾ, ಮಾಧವ ಪೈ ಅವರ ಶಬ್ದಾರ್ಥ ಗೌರವ ಸೇರಿದಂತೆ ೨೪ ಅಪರೂಪದ ಕೃತಿಗಳನ್ನು ಸಂಘ ಪ್ರಕಟಿಸಿದೆ.

ಕೃಪೆ : ಸಂಯುಕ್ತ ಕರ್ನಾಟಕ

❑❑

ಶಿವಮೊಗ್ಗ ಕರ್ನಾಟಕ ಸಂಘದ ಹೆಜ್ಜೆಗಳು

☐ ಶ್ರೀ ಹೆಚ್.ಡಿ. ಮೋಹನಶಾಸ್ತ್ರಿ

೧೯೩೦ರ ವೇಳೆ ಕನ್ನಡ ಸಾಹಿತ್ಯದ ಆಧುನಿಕ ವರ್ಷದ ಪ್ರಾರಂಭ ಆಗಿನ ಮೈಸೂರು ರಾಜ್ಯದಲ್ಲಿ ಬಿ.ಎಂ. ಶ್ರೀ, ಉತ್ತರ ಕರ್ನಾಟಕದಲ್ಲಿ ಫ.ಗು. ಹಳಕಟ್ಟಿ, ದಕ್ಷಿಣ ಕನ್ನಡದಲ್ಲಿ ಪಂಜೆ ಮಂಗೇಶರಾಯರು, ಮಂಜೇಶ್ವರ, ಗೋವಿಂದ ಪೈಗಳಿಂದ ಆಧುನಿಕ ಕವಿತಾ ರಚನೆಗಳು ಬಂದಿದ್ದವು. ಅದಕ್ಕೆ ಮೊದಲೇ ಅನುವಾದದ ಮೂಲಕ, ಬಂಗಾಳಿಯಿಂದ ಕೆರೂರ ವಾಸುದೇವಾಚಾರ್ಯರಿಂದ, ಮರಾಠಿ ಭಾಷೆಯಲ್ಲಿ ಗಳನಾಥರಿಂದ ಕಾದಂಬರಿಗಳ ಪ್ರವೇಶವೂ ಆಗಿತ್ತು. ಕನ್ನಡದ ಪ್ರಥಮ ಕಾದಂಬರಿಗಳನ್ನೆಲಾಗುವ, ಬೋಳಾರ ಬಾಬುರಾಯರ "ವಾಗ್ದೇವಿ" ಗುಲ್ವಾಡಿ ವೆಂಕಟರಾಯರ "ಇಂದಿರಾ", ಎಂ.ಎಸ್. ಪುಟ್ಟಣ್ಣನವರ "ಮಾಡಿದ್ದುಣ್ಣೋ ಮಹಾರಾಯ" ಪ್ರಕಟವಾಗಿದ್ದವು. ಆ ಕಾಲಕ್ಕೆ ಶ್ರೀಯವರಲ್ಲದೆ, ಕನ್ನಡದ ಅಶ್ವಿನೀ ದೇವತೆಗಳೆಂದು ಕರೆಯಲಾದ ತಳುಕಿನ ವೆಂಕಣ್ಣಯ್ಯನವರು ಎ.ಆರ್. ಕೃಷ್ಣಶಾಸ್ತ್ರಿಗಳು ತಾವೂ ಬರೆಯುವುದಲ್ಲದೇ ಅನೇಕ ಯುವಕರನ್ನು ಹುರಿದುಂಬಿಸಿ ಕವಿತೆ, ಸಣ್ಣಕತೆ, ಪ್ರಬಂಧ ಇತ್ಯಾದಿಗಳನ್ನು ಬರೆಸುತ್ತಿದ್ದರು. ಕುವೆಂಪು ತರುಣ ಕವಿಯಾಗಿ ಪ್ರವರ್ಧಮಾನಕ್ಕೆ ಬರುತ್ತಿದ್ದರು. ಅದೇ ಕಾಲಕ್ಕೆ ತೀ.ನಂ.ಶ್ರೀ. ವಿಸೀ.ಯವರ ಕವಿತಾ ರಚನೆಗಳೂ ಬರಲಾರಂಭಿಸಿದ್ದವು. ಧಾರವಾಡದಲ್ಲಿ "ಗೆಳೆಯರ ಗುಂಪು" ಆಗಲೇ ಚುರುಕಾಗಿತ್ತು. ಬೇಂದ್ರೆ ಗೋಕಾಕ್, ಮುಗಳಿ, ಆನಂದಕಂದ, ಮಧುರ ಚೆನ್ನ, ಶಂಬಾ ಜೋಶಿಯಂಥವರು ಸಾಹಿತ್ಯ ರಚನೆಯಲ್ಲಿ ತೊಡಗಿಯಾಗಿತ್ತು.

ಇಂಥ ಸಮುದ್ರದಲ್ಲಿ, ಶಿವಮೊಗ್ಗೆಯಂಥ ಊರಿನಲ್ಲಿ ಹೊಸ ಪೀಳಿಗೆಯ ವಿದ್ಯಾವಂತರನೇಕರು ಸಾಹಿತ್ಯದಲ್ಲಿ ಆಸಕ್ತಿ ಹೊಂದಿ, ಆಗ ವಿರಳವಾಗಿ ಬರುತ್ತಿದ್ದ ಗ್ರಂಥಗಳನ್ನು ಓದುವುದು ಚರ್ಚಿಸುವುದು, ವಿಮರ್ಶಿಸುವಂಥ ಚಟುವಟಿಕೆಗಳಲ್ಲಿ ತೊಡಗಿದ್ದರು ಆಗ ಶಿವಮೊಗ್ಗೆ ಜನ ಸಂಖ್ಯೆ ಬಹುಶಃ ಮೂವತ್ತರಿಂದ ನಲವತ್ತು ಸಾವಿರ ಊರಿನ ವಿಸ್ತಾರವೂ ಅಷ್ಟೆ. ಬಿ.ಹೆಚ್. ರಸ್ತೆ ಮತ್ತು ಸೀಗೆಹಟ್ಟಿ ದೊಡ್ಡ ಬ್ರಾಹ್ಮಣರ ಕೇರಿ, ಚಿಕ್ಕ ಬ್ರಾಹ್ಮಣರ ರಸ್ತೆ ಮೂಲಕ ಹಳೆಯ ಮನೆಗಳು. ಈಗಿನ ನೆಹ್ರೂ ರಸ್ತೆಯಲ್ಲಿ ಕೈಗಾರಿಕಾ ಕಛೇರಿ, ಒಂದು ರೈಸ್ ಮಿಲ್, ಒಂದೆರಡು ಹೋಟೆಲುಗಳಿಗಷ್ಟೇ. ಆಗಿನ್ನೂ ಹೊಸ ರೈಲ್ವೆ ಸ್ಟೇಷನ್ ಬಂದಿರಲಿಲ್ಲ. ತುಂಗೆಯ ಆಚೆಯ ವಡಕ್ಕೇ ರೈಲಿನ ಸಂಚಾರ ಸೀಮಿತವಾಗಿತ್ತು. ಪ್ರಾಯಶಃ ವಿದ್ಯುತ್‌ನಲ್ಲಿ ನೀರು, ಕಾರು-ಬಸ್ಸುಗಳ ಪ್ರವೇಶವಾಗಿಯೂ ಬಹಳ ಕಾಲವಾಗಿರಲಿಕ್ಕಿಲ್ಲ.

ತರುಣರಲ್ಲಿ ಆಗ ಪ್ರಬಲವಾಗುತ್ತಿದ್ದ ಸ್ವಾತಂತ್ರ್ಯ ಚಳವಳಿ, ವಿಶ್ವದ ಮೂಲೆ ಮೂಲೆಗಳನ್ನೂ ಮುಟ್ಟುತ್ತಿದ್ದ ಅಂತಾರಾಷ್ಟ್ರೀಯ ರಾಜಕಾರಣ, ವ್ಯಾಪಾರ, ವ್ಯವಹಾರ, ಯುದ್ಧಗಳು, ಪ್ರಭಾವ ಬೀರುತ್ತಿದ್ದವು. ಹಾಗಾಗಿ ವೃತ್ತಪತ್ರಿಕೆ. ಜತೆಗೆ ಹೊಸದಾಗಿ

ಸೃಷ್ಟಿಯಾಗಿ ಬರುತ್ತಿದ್ದ ಆಧುನಿಕ ಭಾಷಾ ಸಾಹಿತ್ಯ, ಆಂಗ್ಲ ಸಾಹಿತ್ಯ ಇವೆಲ್ಲವೂ ದೈನಂದಿನ ಚಟುವಟಿಕೆಗಳ ಭಾಗವಾಗುತ್ತಾ ಬಂದವು.

ಆ ಸಮಯದಲ್ಲೇ ತರುಣ ಕಥೆಗಾರರಾಗಿ, ಮಾಸ್ತಿಯವರ ನಂತರದ ಸ್ಥಾನವನ್ನು ಪಡೆಯುತ್ತಿದ್ದ ಆನಂದ (ಅಜ್ಜಂಪುರ ಸೀತಾರಾಂ) ಶಿವಮೊಗ್ಗದಲ್ಲಿಯೇ ಇದ್ದರು. ಸರಕಾರೀ ನೌಕರಿಯ ದೆಸೆಯಿಂದ ಶಿವಮೊಗ್ಗದ ಸುತ್ತಮುತ್ತ ಇರುತ್ತಿದ್ದ ತ್ಯಾಗರಾಜ ಪರಮಶಿವ ಕೈಲಾಸಂ, ತನ್ನ ಸುತ್ತ ವಿದ್ಯಾವಂತ ಸಾಹಿತ್ಯಾಸಕ್ತಯುವ ಪೀಳಿಗೆಗೆ ಆಕರ್ಷಣೀಯ ಕೇಂದ್ರವಾಗಿದ್ದರು. ಅವರ ಮೊದಲ ನಾಟಕ "ಟೊಳ್ಳು ಗಟ್ಟಿ" ಶಿವಮೊಗ್ಗದಲ್ಲಿದ್ದ ಕಾಲದಲ್ಲೇ ರಚನೆಯಾಯಿತು. ಇಂಥ ಸಮಯದಲ್ಲಿ ಆಗಿನ್ನೂ ಪ್ರವರ್ಧಮಾನಕ್ಕೆ ಬರುತ್ತಿದ್ದ ಮತ್ತು ವರ್ಷದಿಂದ ವರ್ಷಕ್ಕೆ ಕೊಂಚವಾಗಿಯೇ ಬೆಳೆಯುತ್ತಿದ್ದ ತರುಣ ವಿದ್ಯಾವಂತ ವರ್ಗಕ್ಕೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಒಂದು ಸಂಘಟನೆಯ ಅವಶ್ಯಕತೆ ಕಂಡು ಬಂದಿದ್ದು ಸಹಜವೆ. ಆನಂದ, ತರುಣ ವಕೀಲರಾದ ಚಿದಂಬರಂ, ಎಸ್.ವಿ. ಕೃಷ್ಣಮೂರ್ತಿರಾಯರು, ಎಸ್. ವಿಷ್ಣುಭಟ್ಟ, ಬಿ.ಎನ್. ರಾಘವಯ್ಯ, ಎಲ್. ಸಿದ್ಧಪ್ಪ, ಹೆಚ್. ಸಿದ್ಧಯ್ಯ, ಭೂಪಾಳಂ ಸೋದರರಾದ ಚಂದ್ರಶೇಖರಯ್ಯ ಮತ್ತು ಪುಟ್ಟನಂಜಪ್ಪ ದೇವಂಗಿ ಆರ್. ಮಾನಪ್ಪ ಮತ್ತಿತರ ಸ್ನೇಹಿತರು ಇಂಥ ಅವಶ್ಯಕತೆಯನ್ನು ಮನಗಂಡು ಆ ದಿಕ್ಕಿನಲ್ಲಿ ಹೆಜ್ಜೆಯಿಟ್ಟವರು. ಇವರುಗಳ ಪ್ರಯತ್ನ ಆಸಕ್ತಿಗಳಿಂದಾಗಿ ಶಿವಮೊಗ್ಗದ "ಕರ್ನಾಟಕ ಸಂಘ" ೧೯೩೦ರಲ್ಲಿ ಹಿರಿಯರೊಬ್ಬರ ನೇತೃತ್ವವಿರಬೇಕೆಂದು ಕೊಂಡು, ಶಿವಮೊಗ್ಗದ ಸರ್ಕಾರಿ ಪ್ರೌಢಶಾಲೆಯಲ್ಲಿ ಸಂಸ್ಕೃತ ಉಪಾಧ್ಯಾಯರಾಗಿದ್ದ, ಮತ್ತು ಆಗಾಗಲೇ ಸಾಹಿತ್ಯದ ರಚನೆಯಲ್ಲಿ ಸಿದ್ಧಹಸ್ತರಾಗಿದ್ದ ಆಸ್ಥಾನ ಮಹಾ ವಿದ್ವಾನ್ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳನ್ನು ಅಧ್ಯಕ್ಷರನ್ನಾಗಿ ಮಾಡಿಕೊಂಡರು. ಶ್ರೀ ಗುರುರಾವ್ ದೇಶಪಾಂಡೆ ಮೊದಲ ಕಾರ್ಯದರ್ಶಿಯಾಗಿದ್ದರು. ಕೂಡಲಿ ಚಿದಂಬಂರವರು ಸಹ ಕಾರ್ಯದರ್ಶಿ ಮತ್ತು ಕೋಶಾಧ್ಯಕ್ಷರಾಗಿದ್ದರು. ಶಿವಮೊಗ್ಗದ ಕರ್ನಾಟಕ ಸಂಘವನ್ನು ೮-೧೧-೧೯೩೦ರಂದು ರಾಷ್ಟ್ರಕವಿ ಕುವೆಂಪು ಉದ್ಘಾಟಿಸಿದರು.

ಪ್ರಾರಂಭದ ವರ್ಷಗಳಲ್ಲಿ ಸಂಘ ತನ್ನ ಸಭೆಗಳನ್ನು ಬಿ.ಹೆಚ್. ರಸ್ತೆಯಲ್ಲಿ ಈಗ ಶರಾವತಿ ನರ್ಸಿಂಗ್ ಹೋಂ ಇರುವ ಜಾಗದಲ್ಲಿ ಆಗ ಇದ್ದ "ಶ್ರೀ ಕೃಷ್ಣಕೆಫೆ"ಯ ಮಹಡಿಯ ಮೇಲೆ ನಡೆಸುತ್ತಿತ್ತೆಂದು ತಿಳಿದುಬರುತ್ತದೆ. (ಈಗಲೂ ಆ ಹೋಟೆಲು, ಚಿಕ್ಕದಾಗಿ ನರ್ಸಿಂಗ್ ಹೋಂ ಕಟ್ಟಡದ ಒಂದು ಭಾಗದಲ್ಲಿ ಅಸ್ತಿತ್ವದಲ್ಲಿದೆ) ಆ ಕಾಲದಲ್ಲಿ ಆ ಕಟ್ಟಡದ ಮಾಲೀಕತ್ವ ಎಸ್.ವಿ. ಕೃಷ್ಣಮೂರ್ತಿರಾಯರಿಗೆ ಸೇರಿದ್ದು, ಒಂದು ಸಲ, ಒಂದು ಸಭೆ, ಏಕಾದಶಿಯ ದಿನ ಇತ್ತಂತೆ, ಕುಕ್ಕೆಯವರು ಕೃಷ್ಣ ಕೆಫೆಯ ಮಹಡಿ ಹತ್ತುತ್ತಾ "ಏನಪ್ಪಾ ಈ ವೃದ್ಧ ಶ್ರೋತ್ರಿಯು ಏಕಾದಶೀ ದಿನ ಹೋಟೆಲಿಗೆ ಹೋಗ್ತಿದಾನಲ್ಲಾ" ಅಂತ ಯಾರಾದರೂ ನೋಡಿದವರು ಅಂದಾರು" ಎಂದರಂತೆ. ಅವರೇನೋ ತಮಾಷೆಯಾಗಿಯೂ ಹಾಗಂದಿರಬಹುದು. ಆದರೆ, ಅವರ ಜೊತೆಗಿದ್ದವರಿಗೆ ಮುಜುಗರವಾಗಿರಬಹುದು. ಸಂಘದ ಪ್ರಮುಖರೆಲ್ಲ ಸೇರಿ ಪುರಸಭಾ

ಭವನದ ಒಂದು ಕೊಠಡಿಯನ್ನು ಸಂಘದ ಕಲಾಪಗಳಿಗಾಗಿ ಪಡೆದುಕೊಂಡರಂತೆ ಅಲ್ಲದೇ ಸಂಘಕ್ಕೊಂದು ಸ್ವಂತ ಕಟ್ಟಡವನ್ನೂ ಮಾಡಿಕೊಳ್ಳುವ ಯೋಚನೆಯೂ ಆಗಲೇ ಹುಟ್ಟಿತಂತೆ.

ನಂತರ, ಕೆಲವು ವರ್ಷ, ಸಂಘವು ಆಗಿನ ಪುರಸಭೆಯನ್ನು ವಿನಂತಿಸಿಕೊಂಡು, ಒಂದು ಉಚಿತ ನಿವೇಶನವನ್ನು ಕೊಡಿಸಿಕೊಡಬೇಕಾಗಿ ೧-೬-೩೫ರಲ್ಲಿ ಕೇಳಿದೆ. ಸಂಘವು ನೋಂದಣಿ ಮಾಡಿಸಿಕೊಂಡು ನಂತರ ಪುನಃ ಅರ್ಜಿ ಸಲ್ಲಿಸಬೇಕೆಂದು ಪುರಸಭೆ ಉತ್ತರಿಸಿದ ಪ್ರಕಾರ, ಸಂಘವು ೩೬-೩೭ರಲ್ಲಿ ನೋಂದಣಿಯಾಗಿರುತ್ತದೆ. ೧೯೪೧ರಲ್ಲಿ ಸಂಘವು, ಕಟ್ಟಡದ ನಿರ್ಮಾಣಕ್ಕಾಗಿ ಧನ ಸಹಾಯ ಕೋರಿ ಶ್ರೀ ಹಸೂಡಿ ವೆಂಕಟಶಾಸ್ತ್ರಿಗಳನ್ನು ಕೇಳಿಕೊಂಡರು. ಅವರು ೫೦೦೦ ರೂ. ಸಹಾಯವನ್ನು ಕೊಡವೊಪ್ಪಿ ಬರೆದಿದ್ದಾರೆ. ೧೯೪೨ರಲ್ಲಿ ಆಗಿನ ವಿದ್ಯಾಮಂತ್ರಿಗಳಾಗಿದ್ದ ಶ್ರೀ ಜೆ.ಎಂ. ಇಮಾಂ ಅವರ ಅಧ್ಯಕ್ಷತೆಯಲ್ಲಿ, ಶ್ರೀಬಿ.ಎಂ. ಶ್ರೀಕಂಠಯ್ಯನವರು ಶಂಕುಸ್ಥಾಪನೆ ನೆರವೇರಿಸಿದ್ದಾರೆ. ೧೧-೨-೧೯೪೩ರಲ್ಲಿ ಶ್ರೀ ಜಯಚಾಮರಾಜ ಒಡೆಯರ್ ಅವರು ಸಂಘದ ಭವನದ ಉದ್ಘಾಟನೆ ನೆರವೇರಿಸಿದ್ದಾರೆ. ೨೬-೧೨-೧೯೪೩ರಲ್ಲಿ ಸಂಘದ ಸದಸ್ಯರು ಶ್ರೀ ವೆಂಕಟಶಾಸ್ತ್ರಿಗಳಿಗೆ ಅರ್ಪಿಸಿದ ಬಿನ್ನವತ್ತಳೆಯಲ್ಲಿ ಸುಮಾರು ರೂ. ೩೦,೦೦೦ಗಳ ವೆಚ್ಚದಲ್ಲಿ ಕಟ್ಟಡ ಕಟ್ಟಿಸಿ, ಕೊಟ್ಟಿರುವರಲ್ಲದೆ, ಪುದುವಟ್ಟಾಗಿ ರೂ. ೧೦೦೦ ದಾನಮಾಡಿರುವುದನ್ನು ಪ್ರಸ್ತಾಪಿಸಿ, ಶ್ರೀಮಹಾರಾಜರು ಪ್ರಥಮ ಶ್ರೇಣಿಯ ಸೇವಾಪದಕವನ್ನು ದಯಪಾಲಿಸಿರುವುದನ್ನು ಪ್ರಸ್ತಾಪಿಸಿ, ಭವನದಲ್ಲಿ ಶ್ರೀ ಶಾಸ್ತ್ರಿಗಳ ತೈಲ ಚಿತ್ರವನ್ನು ಅನಾವರಣ ಮಾಡಲು ಅನುಮತಿಯನ್ನು ಕೇಳಿರುತ್ತಾರೆ. ೧೯೫೭ರಲ್ಲಿ ಶ್ರೀ ವೆಂಕಟಶಾಸ್ತ್ರಿಗಳು ನಿಧನರಾದಾಗ, ಕವಿ ದತ್ತಾತ್ರೇಯ ಬೇಂದ್ರೆಯವರು ಈ ಭವನಕ್ಕೆ ಹಸೂಡಿ ವೆಂಕಟಶಾಸ್ತ್ರಿಗಳ ಸಾಹಿತ್ಯ ಭವನ ಎಂದು ಹೆಸರಿಡಲು ಸರ್ವಸಮ್ಮತಿ ದೊರೆತಿದೆ. ೨೦೦೩, ಏಪ್ರಿಲ್ ೫ ಮತ್ತು ೬ರಂದು ಭವನದ ೬೦ನೇ ವರ್ಷಾಚರಣೆ ನಡೆಯಲಿದೆ. ಸಮಾರಂಭವನ್ನು ೫ರಂದು ಮುಂಜಾನೆ ೧೦-೩೦ಕ್ಕೆ ರಾಜ್ಯ ಕಸಾಪ ಅಧ್ಯಕ್ಷ ಹರಿಕೃಷ್ಣ ಪುನರೂರು ಉದ್ಘಾಟಿಸಲಿದ್ದಾರೆ. ಸಂಘದ ಅಧ್ಯಕ್ಷ ಪ್ರೊ. ಪಾಂಡುರಂಗ ಉಡುಪ, ಶ್ರೀನಿವಾಸ ಸಂಘದ ಮಾಜಿ ಅಧ್ಯಕ್ಷ ಕೆ.ಜಿ. ಸುಬ್ರಹ್ಮಣ್ಯ ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಎರಡು ದಿನಗಳ ಕಾಲ ವಿಚಾರ ಸಂಕಿರಣ, ಕವಿಗೋಷ್ಠಿ ಜರುಗಲಿದ್ದು ದಿ. ೬ರ ಮಧ್ಯಾಹ್ನ ೩ಕ್ಕೆ ಹೆಗ್ಗೋಡು ನೀನಾಸಂನ ಕೆ.ವಿ. ಸುಬ್ಬಣ್ಣ ಅಧ್ಯಕ್ಷತೆಯ ಸಮಾರೋಪ ಸಮಾರಂಭದಲ್ಲಿ ಡಾ. ಪಾಟೀಲಪುಟ್ಟಪ್ಪ ಸಮಾರೋಪ ಭಾಷಣ ಮಾಡಲಿದ್ದು ಕುವೆಂಪು ವಿ.ವಿ. ಕುಲಪತಿ ಪ್ರೊ.ಕೆ. ಚಿದಾನಂದಗೌಡ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ಕೃಪೆ : ಸಂಯುಕ್ತ ಕರ್ನಾಟಕ

□□

ಶಿವಮೊಗ್ಗಕ್ಕೆ ಸಾಹಿತ್ಯದ ಸುಗಂಧ ಬೀರಿದ ಸಂಘ

❒ ಸರ್ವಜಿತ

ಕನ್ನಡದ ಪುನರುಜ್ಜೀವನದ ಕಾಲವೆಂದರೆ ಹೋದ ಶತಮಾನದ ೨೦ನೆಯ ದಶಕದಿಂದ ೫೦ನೆಯ ದಶಕದಲ್ಲಿಯ ಸಾಹಿತ್ಯ ಸಮೃದ್ಧಿಯ ಕಾಲ ಹಂಚಿಹೋದ ನಾಡು ಒಂದುಗೂಡಬೇಕು: ಇಂಗ್ಲೀಷರ ಪ್ರಾಬಲ್ಯದಲ್ಲಿ ಕನ್ನಡ ನುಡಿ ಮಸುಕಾಗಿ ಮರೆಯಾಗಬಾರದು ಪ್ರತಿಭಾವಂತರಿಂದ ಸೃಷ್ಟಿಯಾಗುತ್ತಿದ್ದ ಹೊಸಗನ್ನಡ ಸಾಹಿತ್ಯದ ಸವಿ, ಕಂಪು ನಾಡಿನ ತುಂಬ ಪಸರಿಸಿ, ಕನ್ನಡಿಗರಲ್ಲಿ ಸ್ವಾಭಿಮಾನ, ಸ್ವೋಪಜ್ಞತೆ ಜಾಗೃತವಾಗಬೇಕು: ಕನ್ನಡಿಗರಲ್ಲಿಯ ಆಲಸ್ಯ, ಹಿಂಜರಿಕೆ, ಅನೈಕ್ಯ ಭಾವ ನಾಶವಾಗಿ ಚಟುವಟಿಕೆ, ಉತ್ಸಾಹ, ಭಾವೈಕ್ಯ ಪ್ರಕಟವಾಗಬೇಕು.

ಈ ಆಶಯಗಳನ್ನು ಸಾಧ್ಯ ಮಾಡಲು ೧೮೯೦ರಲ್ಲಿ ಧಾರವಾಡದಲ್ಲಿ 'ಕರ್ನಾಟಕ ವಿದ್ಯಾವರ್ಧಕ ಸಂಘ ತಲೆ ಎತ್ತಿತ್ತು ೧೯೧೫ರಲ್ಲಿ ಬೆಂಗಳೂರಲ್ಲಿ 'ಕನ್ನಡ ಸಾಹಿತ್ಯ ಪರಿಷತ್ತು' ಮೈಸೂರು ಅರಸರ ಮೋಕ್ಷಗುಂಡಂ ವಿಶ್ವೇಶ್ವರಾಯರ ಪ್ರವರ್ತನೆಗಳಿಂದ ಹುಟ್ಟಿತು. ಧಾರವಾಡದ 'ಗೆಳೆಯರ ಗುಂಪು' ಹಲಸಂಗಿಯ 'ಗೆಳೆಯರ ಗುಂಪು' ಸ್ನೇಹ-ಒಲವು,ಸಹಕಾರಗಳ ಬಂಡವಾಳದಿಂದ ಸಂಸ್ಕೃತಿ ಸಂವರ್ಧನೆಯ ವ್ಯಾಪಾರ ಆರಂಭಿಸಿದವು. ಸೃಜನಶೀಲ ಪ್ರತಿಭೆಗಳು, ನವೋದಯ ಸಾಹಿತ್ಯದ ಅಧ್ವರ್ಯುಗಳು ನಾಡಿನ ತುಂಬ ಸಂಚರಿಸಿದ ಸಾಹಿತ್ಯದ ಪ್ರಚಾರ ಮಾಡಿದ್ದು, ನಾಡ ಹಬ್ಬದ ಆಚರಣೆ ಪಸರಿಸಿದ್ದು, ಸಾಹಿತ್ಯಾಸಕ್ತ ಗೆಳೆಯರ ಬಳಗಗಳು ತಮ್ಮ ತಮ್ಮ ಪರಿಸರಗಳಲ್ಲಿ ಕರ್ನಾಟಕ ಸಂಘ, ಕನ್ನಡ ಸಂಘ, ಸಾಹಿತ್ಯ ವೇದಿಕೆ ಕಟ್ಟಿಕೊಂಡು, ಸಾಮೂಹಿಕ ಸಂಸ್ಕೃತಿಯ ಪ್ರದರ್ಶನ ಮಾಡಿದ್ದು ಕನ್ನಡ ತಲೆ ಎತ್ತಿ ಮೆರೆಯಲು ಸಾಧ್ಯವಾಯಿತು. ಹೊರ ನಾಡಿನಲ್ಲಿಯೂ ಕನ್ನಡಿಗರು ತಮ್ಮ ನುಡಿ ಏಳ್ಗೆಯ ಕೈಂರ್ಯಕ್ಕಾಗಿ 'ಕರ್ನಾಟಕ ಸಂಘ'ಗಳನ್ನು ರಚಿಸಿ ಕೊಂಡಿದ್ದರು. ಇಂದಿಗೂ ಚೆನ್ನೈ, ಮುಂಬೈ, ಮಧುರೈ, ಹೈದ್ರಾಬಾದ್, ಪಣಜಿ, ಸೇಲಂ, ದೆಹಲಿ, ಭೂಪಾಳ, ಲಖನೌ, ಪುಣೆ ಕಾಸರಗೋಡುಗಳಲ್ಲಿ ಅಂಥ ಸಂಘಗಳು ಕನ್ನಡದ ಕಂಪುಸಿರನ್ನು ಬಿಡುತ್ತಿವೆ. ಶಿವಮೊಗ್ಗದಂತ ಒಳನಾಡಿನಲ್ಲಿ ೧೯೩೦ರಲ್ಲಿ ಹುಟ್ಟಿ, ೧೯೫೩ರಲ್ಲಿ ಸ್ವಂತ ಭವನವನ್ನು ಹೊಂದಿದ ಕರ್ನಾಟಕ ಸಂಘ, ಉಳಿದೆಲ್ಲ ಸಂಘಗಳಿಗಿಂತ ನಿರಂತರ ಚಟುವಟಿಕೆಗಳಿಂದ 'ಜೀವಂತ ಸ್ಪಂದನೆಗಳಿಂದ ಬೆಳೆಯುತ್ತಿದೆ; ಬಾಳುತ್ತಿದೆ. ಈ ಸಂಘ ೨೦೦೩ ಮಾರ್ಚದಲ್ಲಿ ಪ್ರಕಟಿಸಿದ 'ಕರ್ನಾಟಕ ಸಂಘ ಭವನ-೫೦' ನೆನಪಿನ ಸಂಪುಟ 'ಭವನ'ದ ಇತಿಹಾಸವನ್ನು ನಮ್ಮೆದುರಿಗಿಡುತ್ತ ಈಗಲೂ ಕನ್ನಡ ತಲೆ ಎತ್ತಿ ನಿಂತರೆ ಸಾಲದು; ದಿಟ್ಟ ಹೆಜ್ಜೆಯಿಂದ, ದಿಟದ ಹಾದಿಯಲ್ಲಿ ವೇಗವಾಗಿ ಮುನ್ನಡೆಯ ಬೇಕಾಗಿದೆ ಎಂಬುದನ್ನು ಸೂಚಿಸುತ್ತಿದೆ.

ಭವನ ೧೯೫೩:

೧೯೩೦ರಲ್ಲಿ ಒಂದು ದಿನ ಶಿವಮೊಗ್ಗದ ಪ್ರಜ್ಞಾವಂತರೂ, ಲೇಖಕರೂ ಆಗಿದ್ದ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿ, ಕೂಡಲಿ ಚಿದಂಬರಂ, ಎಸ್.ಪಿ. ಕೃಷ್ಣಮೂರ್ತಿರಾವ್ ಮುಂತಾದ ಕೆಲವರು 'ಕರ್ನಾಟಕ ಸಂಘ'ವನ್ನು ಸ್ಥಾಪಿಸಿದರು. ಭಾಷೆ ಮತ್ತು ಸಾಹಿತ್ಯದ ಕುರಿತು ವಿಚಾರ ವಿನಿಮಯ ಮಾಡುವುದು; ಲೇಖಕರನ್ನು ಕರೆಸಿ ಉಪನ್ಯಾಸ ಏರ್ಪಡಿಸುವುದು, ನಾಡಿನ ಚಿಂತನೆ ನಡೆಸುವುದು; ಬರಹದಲ್ಲಿದ್ದುದನ್ನು ಪ್ರಕಟಪಡಿಸಿ ಓದಿಸುವುದು: ಓದುಗ ವರ್ಗವನ್ನು ವಿಸ್ತರಿಸುವುದು, ಒಟ್ಟಿನಲ್ಲಿ ನವೋದಯ ಕಾಲದ ಆಶಯಗಳನ್ನು ಸಾಕಾರಗೊಳಿಸುವುದು

ಸಂಘದ ಕಾರ್ಯಕ್ರಮವಾಗಿದ್ದವು. ಮಲೆನಾಡಿನ ಕೋಗಿಲೆ ಕವಿ ಕುವೆಂಪು ಸಂಘವನ್ನು ಉದ್ಘಾಟಿಸಿದರು. ಒಂದು ಹಂಚಿನ ಮನೆಯಲ್ಲಿ ಸ್ಥಾಪಿತವಾಗಿ ಕಾರ್ಯ ಚಟುವಟಿಕೆಗೆ ತೊಡಗಿದ ಸಂಘ, ಬೇರೆ ಬೇರೆ ಸಣ್ಣ ಮನೆ ಕೋಣೆಗಳಿಗೆ ವರ್ಗಾಂತರವಾಗುತ್ತಿತ್ತು. ಸಂಘದ ನಿರಂತರತೆಯನ್ನು ಗಮನಿಸಿದ ಶಿವಮೊಗ್ಗದ ಶ್ರೀಮಂತ ಅಡಿಕೆ ವರ್ತಕರಾಗಿದ್ದ ಹಸೂಡಿ ವೆಂಕಟಶಾಸ್ತ್ರಿಗಳು ಸಾಹಿತ್ಯ-ಸಂಸ್ಕೃತಿ-ಅಧ್ಯಯನಗಳಿಗೆ ಒಂದು ಶಾಶ್ವತ, ಇಂಬಾದ ನೆಲೆ ಇರಬೇಕೆಂದು ಆಶಿಸಿ, ಕಟ್ಟಡವೊಂದನ್ನು ಕಟ್ಟಿಸಿಕೊಟ್ಟರು. ಅದಕ್ಕೆ ೧೯೫೭ರಲ್ಲಿ 'ಹಸೂಡಿ ವೆಂಕಟಶಾಸ್ತ್ರಿಗಳ ಸಾಹಿತ್ಯ' ಭವನ ಎಂದು ಹೆಸರಿಡಲಾಯಿತು. ಈ ಭವನಕ್ಕೆ ಈಗ ಅರವತ್ತರ ಆಯುಷ್ಯ ಇದು ಬರೀ ಒಂದು ಸ್ಥಾವರ ಕಟ್ಟಡ ಅಲ್ಲ; ಅರವತ್ತು ವರ್ಷಗಳಿಂದ ಇದು, ನಾಡಿನ ಬಹುತೇಕ ಎಲ್ಲಾ ಹಿರಿಯ, ಕಿರಿಯ ಕವಿ, ಸಾಹಿತಿಗಳ ಭಾಷಣ, ವಿಚಾರ ಸಂಕಿರಣ: ಸಂಗೀತ ಕಚೇರಿ, ನೃತ್ಯ-ನಾಟಕಗಳ ಕಾರ್ಯಕ್ರಮಗಳಿಗೆ ಆಶ್ರಯ ಕೊಟ್ಟಿದೆ. ಜೀವಂತಿಕೆಗೆ ನೆಲೆ ಒದಗಿಸಿದೆ. ಭವನವನ್ನು ಸಂವಹನ ಮಾಧ್ಯಮವಾಗಿ ಬಳಸಿಕೊಂಡಿರುವುದು, ಸಂಸ್ಕೃತಿ ಬೆಳವಣಿಗೆಯ ಕುರುಹು. ನೆನಪಿನ ಸಂಪುಟದಲ್ಲಿ ಎಪ್ಪತ್ಮೂರು ವರ್ಷಗಳಿಂದ ನಡೆದು ಬರುತ್ತಿರುವ ಕಾರ್ಯಕ್ರಮಗಳ ನೆನಪಿನ ವಿವರಗಳಿವೆ: ಶಿವಮೊಗ್ಗ ಜಿಲ್ಲೆಯವರೇ ಆಗಿದ್ದು ಭಾರತೀಯ ಸಾಹಿತ್ಯ, ಸಂಸ್ಕೃತಿಗೆ ವಿಶಿಷ್ಟ ಕೊಡುಗೆ ಕೊಟ್ಟು ಆಧುನಿಕ ಸಂದರ್ಭದಲ್ಲಿ ಅರ್ಥಪೂರ್ಣ ಸಾಧಕರಾಗಿರುವ ಒಂಭತ್ತು ಜನ ಲೇಖಕ, ಸಂಶೋಧಕರಿಗೆ ಕರ್ನಾಟಕ ಸಂಘ ಗೌರವ ಸದಸ್ಯತ್ವವನ್ನು ನೀಡಿದೆ; ಅವರ ಹೆಸರಿನಲ್ಲಿ ವಾರ್ಷಿಕ ಬಹುಮಾನಗಳನ್ನು ಲೇಖಕರಿಗೆ, ಗಾಯಕರಿಗೆ, ಕಲಾವಿದರಿಗೆ ಕೊಡುವ ಪರಿಪಾಠವನ್ನು ಬೆಳೆಸಿಕೊಂಡ ದಾಖಲೆಗಳಿವೆ. ಪ್ರಜ್ಞೆಯ ಪ್ರಚಾರ, ಪ್ರಜ್ಞೆಯೊಂದಿಗೆ ಪ್ರಗತಿ ಸಾಧಿಸುವ ಕರ್ನಾಟಕ ಸಂಘದ ಈ ಎಲ್ಲ ಚಟುವಟಿಕೆಗಳಿಗೆ ಮುಖ್ಯ ಕಾರಣ, ಸದಸ್ಯರಲ್ಲಿರುವ ಸಾಹಿತ್ಯದ ಅಭಿರುಚಿ. ಬರಹಗಾರಿಕೆಯ ನೆಲೆ-ಬೆಲೆ ತಿಳಿದು ಮನ್ನಿಸುವ ದೃಷ್ಟಿಕೋನ ಕಳೆದ ಮೂರು ವರ್ಷಗಳಿಂದ ಅಧ್ಯಕ್ಷರಾಗಿ ಕೆಲಸ ಮಾಡುತ್ತಿರುವ ಪ್ರೊ. ಪಾಂಡುರಂಗ ಉಡುಪ; ಗೌರವ ಕಾರ್ಯದರ್ಶಿ ಜಯದೇವಪ ಜೈನಕೇರಿ ಸ್ವತಃ ಅಧ್ಯಯನಶೀಲ ಪ್ರವೃತ್ತಿಯವರು: ಉತ್ತಮ ವಾಗ್ಮಿಗಳು: ಸದಾ ಚಿಂತನಶೀಲರು, ಶೋಧಕರು ಹಾಗೂ ಸಂಘಟನೆಯ ಗುಣವುಳ್ಳವರು. ಶಿವಮೊಗ್ಗೆಯ ಪರಿಸರಕ್ಕೆ ಸಾಹಿತ್ಯದ ಸುಗಂಧ ಬೀರುವಲ್ಲಿ ಇವರು ಶಿಸ್ತಿನಿಂದ, ಪ್ರಾಮಾಣಿಕತೆಯಿಂದ ಶ್ರಮಿಸುತ್ತಿರುವುದು ಅಭಿನಂದನೀಯ.

ಶಿವಮೊಗ್ಗದ ಕರ್ನಾಟಕ ಸಂಘ ಈವರೆಗೆ ೨೪ ವಿವಿಧ ಪ್ರಕಾರದ ಗ್ರಂಥಗಳನ್ನು ಪ್ರಕಟಿಸಿದೆ. ಕುವೆಂಪು ಬೇಂದ್ರೆ, ಕೈಲಾಸಂ; ನರಸಿಂಹಾಚಾರ, ಮೂರ್ತಿರಾಯ ಮೊದಲಾದ ಸಾಹಿತ್ಯ ದಿಗ್ಗಜಗಳ ಕೃತಿಗಳ ಪ್ರಕಾಶನ ಸಂಘದಿಂದಾದುದು ಶಿವಮೊಗ್ಗೆಯ ಹೆಮ್ಮೆ. ಓದುಗಾರಿಕೆ ಲಯವಾಗುತ್ತಿರುವ ಈ ದಿನಗಳಲ್ಲಿ ಅದನ್ನು ಪ್ರಚಲಿತಗೊಳಿಸುವ ದಿಕ್ಕಿನಲ್ಲಿ ನಾಡಿನ ಈ ಹಿರಿಯ ಸಂಘ ಹೊಸ ಹೊಸ ಯೋಜನೆಗಳನ್ನು ಮಾಡಬಹುದಾದರೆ ಅದರ ಹೆಜ್ಜೆ ಗುರುತುಗಳಿಗೆ ಚಾರಿತ್ರಿಕ ಮಹತ್ವ ಲಭಿಸಿತು.

ಹುಬ್ಬಳ್ಳಿ -ಡಾ. ಶಾಮಸುಂದರ ಬಿದರಕುಂದಿ

ಕೃಪೆ : ನವೋದಯ, ಗದಗ, ದಿ. ೨೫.೪.೨೦೦೩

□□

ಬೇಕಾದಷ್ಟಿದೆ ಎನ್ನುವ ಸಂತೃಪ್ತರು!

❒ ಸುಧಾಮೂರ್ತಿ

ಇತ್ತೀಚೆಗೆ ನನ್ನ 'ಪರಿಧಿ' ಪುಸ್ತಕಕ್ಕೆ ಶ್ರೀಮತಿ ಎಂ.ಕೆ. ಇಂದಿರಾ ಪ್ರಶಸ್ತಿ ಬಂದಿತ್ತು. ಅದನ್ನು ಸ್ವೀಕರಿಸಲು ಶಿವಮೊಗ್ಗಕ್ಕೆ ಹೋದೆ. ಸಮಾರಂಭ ಸಾಹಿತ್ಯಕವಾಗಿ ನಡೆಯಿತು. ಅನೇಕ ಸಾಹಿತ್ಯ ಸಮಾರಂಭಗಳಲ್ಲಿ ಸಾಹಿತ್ಯವೊಂದು ಉಳಿದು ಇನ್ನೆಲ್ಲಾ ಇರುತ್ತದೆ. ಆದ್ದರಿಂದ ಇಂಥ ಸಮಾರಂಭಗಳು ನನಗಂತೂ ತೀರ ಅಪರೂಪ. ತೀರ್ಪುಗಾರರ ನಿಷ್ಪಕ್ಷಪಾತ ಆಯ್ಕೆಯ ಪದ್ಧತಿ, ಸ್ವಚ್ಛ ಕನ್ನಡದಲ್ಲಿ ಒಂದೂ ಇಂಗ್ಲಿಷ್ ಪದ ಬಳಸದೆ ಶುದ್ಧವಾಗಿ ಮಾತಾಡಿದ್ದನ್ನು ಕೇಳಿ ನನ್ನ ಮನಸ್ಸಿಗೂ, ಕಿವಿಗಳಿಗೂ ಪರಮಾನಂದವಾಯಿತು. ಶಿವಮೊಗ್ಗದ ಕನ್ನಡದ ಕಂಪು ಮನತುಂಬಿ ಬಂತು. ಶುದ್ಧವಾದ ಹಿಂದುಸ್ಥಾನಿ ರಾಗ ಕೇಳಿದಂತೆ ಭಾಸವಾಯಿತು. ಎಲ್ಲಿಯೂ ಅತೀ ಉಪಚಾರವಿಲ್ಲ. ಇಲ್ಲದ ಸಲ್ಲದ ಇಂದ್ರನ ಪದವಿಯ ಹೊಗಳಿಕೆ ಇಲ್ಲ. ನನ್ನ ಸಂಪತ್ತಿನ, ಅಧಿಕಾರದ ವರ್ಣನೆಯ ಸೋಂಕೂ ಇಲ್ಲ. ನನ್ನನ್ನು ಅವರು ಒಬ್ಬ ಸಾಹಿತಿಯಂತೆ ಕಂಡರು. ಸಾಹಿತಿಯಂತೆ ಗೌರವಿಸಿದರು. ಅದಕ್ಕಿಂತ ಗೌರವದ ಮಾತೇನು?

ಸಭೆ ಮುಗಿದ ಮೇಲೆ ಮಾತಿನಲ್ಲಿ ಅವರ ಸಂಘದ ಎಪ್ಪತ್ತೈದನೇ ವಾರ್ಷಿಕ ಸಮಾರಂಭ ನವೆಂಬರ್ ತಿಂಗಳಿನಲ್ಲಿದೆ ಎಂದು ತಿಳಿಯಿತು. ಇಂಥ ಸಮಾರಂಭಕ್ಕೆ ಎಷ್ಟೇ ಹಣವಿದ್ದರೂ ಖರ್ಚಿಗೆ ನೂರು ದಾರಿಗಳಿರುತ್ತವೆ. ಅದನ್ನು ನೆನೆದು ನಾನು ಅವರು ಕೊಟ್ಟ ಗೌರವಧನ ನಾಲ್ಕು ಸಾವಿರ ರೂಪಾಯಿಯನ್ನು ಅಧ್ಯಕ್ಷರ ಕೈಗಿಡುತ್ತಾ "ಈ ಹಣ ನಿಮ್ಮ ವಾರ್ಷಿಕ ಹುಟ್ಟುಹಬ್ಬಕ್ಕೆ ನನ್ನ ಕಾಣಿಕೆ, ತೆಗೆದುಕೊಳ್ಳಿ" ಎಂದೆ. ಅವರು ಒಂದು ಕ್ಷಣ ಅವಾಕ್ಕಾದರೂ, ಕೂಡಲೇ ಕಾರ್ಯದರ್ಶಿಯವರನ್ನು ಕರೆದು, "ನೋಡಿ, ಶ್ರೀಮತಿಯವರು ಏನು ಹೇಳುತ್ತಾರೆ! ಎಂದರು. ಮತ್ತೆ ಅದೇ ಮಾತನ್ನು ಹೇಳಿದೆ. ಅವರಿಬ್ಬರೂ "ಖಂಡಿತ ಬೇಡ" ಎಂದರು.

"ನೀವು ಕೊಟ್ಟ ಹಣವನ್ನು ನಾನು ತಿರಸ್ಕರಿಸುತ್ತಿದ್ದೇನೆ ಎಂದು ತಿಳಿಯಬೇಡಿ. ನಿಮ್ಮ ಸಭೆಯನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ. ನಾನು ಸಾಮಾನ್ಯವಾಗಿ ಜನರಿಂದ ಬಂದ ಹಣವನ್ನು ಜನರಿಗೆ ಕೊಡಲು ಇಚ್ಛಿಸುತ್ತೇನೆ. ಇದು ಗರ್ವದಿಂದ ಹೇಳುತ್ತಿರುವುದಲ್ಲ, ಬದಲಿಗೆ ವಿನಂತಿಸಿಕೊಳ್ಳುತ್ತಿದ್ದೇನೆ." ಅದಕ್ಕವರು "ನಾವು ಬೇಡ ಎನ್ನುತ್ತಿರುವುದು ಖಂಡಿತಾ ಆ ದೃಷ್ಟಿಯಿಂದಲ್ಲ ಮ್ಯಾಡಂ. ನಮ್ಮ ಹಿರಿಯರು, ಕರ್ನಾಟಕ ಸಂಘವು ಯಾರದೇ ನೆರವು ಇಲ್ಲದೆ ನಡೆಯುವ ಹಾಗೆ ವ್ಯವಸ್ಥೆ ಮಾಡಿದ್ದಾರೆ. ಆದ್ದರಿಂದ ನಿಮ್ಮ ಹಣ ನಮಗೆ ಬೇಡ. ಬದಲು ನಿಮ್ಮ ಕೆಲಸದಲ್ಲಿ ನೀವು ಅನೇಕ ಹೊರನಾಡ ಕನ್ನಡ ಸಂಘಗಳನ್ನು ನೋಡಿರಬಹುದು. ಅಲ್ಲಿ ದಾನಿಗಳ ಕೊರತೆಯೂ ಇರಬಹುದು. ದಯವಿಟ್ಟು ಅಂತಹವರಿಗೆ ದಾನ ಮಾಡಿ, ನಮಗೆ ಬೇಕಾದಷ್ಟಿದೆ" ಎಂದರು. ಬೇಕಾದಷ್ಟು ಎಂಬ ಶಬ್ದ ಬಹು ವಿಚಿತ್ರ. ಎಷ್ಟೇ ಹಣವಿದ್ದವರೂ ಸಹಿತ ನಮಗೆ ಇಲ್ಲ ಎನ್ನುವ ಭ್ರಮೆಯಲ್ಲಿ ಇರುತ್ತಾರೆ. ಒಂದು ಮನೆ ಕಟ್ಟಿದವರಿಗೆ ಎರಡು ಮನೆ ಚಿಂತೆ. ಎರಡು ಮನೆ ಕಟ್ಟಿದವರಿಗೆ ಅರಮನೆಯ ಚಿಂತೆ. ಕಾರು ಇದ್ದವರಿಗೆ ಮರ್ಸಿಡಿಸ್ ಚಿಂತೆ. ಗಂಡು ಇದ್ದವರಿಗೆ ಹೆಣ್ಣಿನ ಚಿಂತೆ. ಹೆಣ್ಣು ಇದ್ದವರಿಗೆ ಸಿರಿವಂತ ಅಳಿಯನ ಚಿಂತೆ. ಹೀಗೆ ಇಲ್ಲವೆನ್ನುವುದು ನಮ್ಮ ಸಮಾಜದ ಎಲ್ಲ ಸ್ತರಗಳಲ್ಲಿ ಸೇರಿಹೋಗಿದೆ. ಆಗ ನನಗೆ ಅಂಬಿಗರ ಚೌಡಯ್ಯನವರ ವಚನ ನೆನಪಾಯಿತು. **"ಬಡತನಕ್ಕೆ ಉಂಬುವ ಚಿಂತೆ ಉಣಲಾದರೆ ಉಡುವ ಚಿಂತೆ ಉಡಲಾದರೆ ಇಡುವ ಚಿಂತೆ......"** ಇಂಥ ಸಮಾಜದಲ್ಲಿ ನಮಗೆ ಬೇಕಾದಷ್ಟಿದೆ ಎನ್ನುವ ಅಪರೂಪದ ಪದ ನನ್ನ ಜೀವನದಲ್ಲಿ ಕೆಲವು ಬಾರಿ ಮಾತ್ರ ಕೇಳಿದ್ದೇನೆ.

ನಾಲ್ಕು ಸಾವಿರ ರೂಪಾಯಿಯ ಪಾಕೀಟು ನನ್ನ ಕೈಯಲ್ಲಿ ನಕ್ಕಿತು.

ಕೃಪೆ : ವಿಜಯ ಕರ್ನಾಟಕ, ಅಂಕಣ ದಿ. ೧೦.೮.೨೦೦೫

❒❒

ಸಾಂಸ್ಕೃತಿಕ ಸೇವೆ

❒ ಎಸ್. ಮಲ್ಲಿಕಾರ್ಜುನಪ್ಪ

ಮಲೆನಾಡಿನ ಸಿರಿ ಶಿಖರದ ವನಸಿರಿಯ ಮಡಿಲಲ್ಲಿರುವ, ನಾಡುನುಡಿಯ ಅಭಿಮಾನಿಗಳ ನೆಲೆ, ಕಲೆಯ ಸಿರಿಯ, ಸಾಹಿತ್ಯದ ಸೊಬಗಿನ, ಸಂಗೀತದ ಸುಧೆಯ, ಸುಸಂಸ್ಕೃತಿಯ ಆಗರದ ಸುಂದರ ನಗರ ಶಿವಮೊಗ್ಗ. ಈ ನಗರವನ್ನು ಹಿಂದೊಮ್ಮೆ ಆಳಿದ ಕೆಳದಿಯ ಖ್ಯಾತ ದೊರೆ ಶಿವಪ್ಪನಾಯಕ ಹೇಗೆ ತನ್ನ ರಾಜ್ಯಾಡಳಿತದಲ್ಲಿ ಶಿಸ್ತಿಗೆ ಪ್ರಾಮುಖ್ಯತೆಯನ್ನು ಕೊಟ್ಟು ಕರ್ನಾಟಕ ಚರಿತ್ರೆಯಲ್ಲಿ "ಶಿವಪ್ಪನಾಯಕನ ಶಿಸ್ತು" ಎಂಬುದನ್ನು ಅಮರಗೊಳಿಸಿದ್ದಾನೊ ಹಾಗೆಯೇ ನಗರದಲ್ಲಿರುವ ಶಿವಮೊಗ್ಗ ಕರ್ನಾಟಕ ಸಂಘ ತನ್ನ ಜನನದಾರಭ್ಯದಿಂದಲೂ ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಗಳನ್ನು ಸಮಯಕ್ಕನುಸಾರವಾಗಿ, ಶಿಸ್ತುಬದ್ಧವಾಗಿ ನಡೆಸುತ್ತಾ ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಗಳ ಶಿಸ್ತುಬದ್ಧ ಸಂಘವೆಂಬ ಖ್ಯಾತಿಗೆ ಪಾತ್ರವಾಗಿರುವುದು ಕನ್ನಡಾಭಿಮಾನಿಗಳಿಗೆ, ಸಾಹಿತ್ಯಪ್ರಿಯರಿಗೆ, ಸಂಸ್ಕೃತಿಯ ಉಪಾಸಕರಿಗೆ ಸಂತಸದ ಹಾಗೂ ಅಭಿಮಾನದ ಸಂಗತಿಯಾಗಿದೆ.

ಶಿವಮೊಗ್ಗ ಕರ್ನಾಟಕ ಸಂಘದ ಅಭಿಮಾನಿಗಳಲ್ಲೊಬ್ಬನಾಗಿ ನನಗೆ ಅರಿವು ಮೂಡಿದಂದಿನಿಂದಲೂ ಅದರ ವೈವಿಧ್ಯಮಯ ಅರ್ಥಪೂರ್ಣ ನಿರಂತರ ಚಟುವಟಿಕೆಗಳನ್ನು ಗಮನಿಸುತ್ತಾ ಬಂದಿದ್ದು, ಈಗ್ಗೆ ಎರಡು ಮೂರು ಸಂವತ್ಸರಗಳಿಂದಲೂ ಅದರ ನಿಕಟವರ್ತಿಯಾಗಿ ನಾನು ಸಂಘದ ಕಾರ್ಯಕ್ರಮಗಳನ್ನು ಅವಲೋಕಿಸುತ್ತಾ ಬಂದಿದ್ದು ಅದರ ಉದಾತ್ತ ನಿರಂತರ ಕಾರ್ಯಕ್ರಮಗಳು ಅವುಗಳನ್ನು ಶಿಸ್ತುಬದ್ಧವಾಗಿ ಲೋಪರಹಿತವಾಗಿ ಮುಂಜಾಗ್ರತೆಯ ಸಿದ್ಧತೆಯಿಂದ ಯಶಸ್ವಿಯಾಗಿ ನಡೆಸುತ್ತಿರುವುದನ್ನು ಕಂಡು ಆಶ್ಚರ್ಯಚಕಿತನಾಗಿದ್ದೇನೆ.

ಕನ್ನಡದ ಬಹುತೇಕ ಎಲ್ಲಾ ಹೆಸರಾಂತ ಕವಿ, ಸಾಹಿತಿ, ಬರಹಗಾರರನ್ನು ಕುರಿತಾದ ನೂರರ ನೆನಪು, ಮಲೆನಾಡಿನ ಮಡಿಲಿನಲ್ಲಿ ಜನಿಸಿ ಕನ್ನಡ ಸಾರಸ್ವತ ಲೋಕಕ್ಕೆ ತಮ್ಮ ಅಮರ ಕೃತಿಗಳನ್ನು ಅರ್ಪಿಸಿ ಪುನೀತರಾದ ಖ್ಯಾತ ಕವಿಗಳು, ಸಾಹಿತಿಗಳು, ಅಂಕಣಕಾರರು, ಕಾದಂಬರಿಗಾರರುಗಳ ಸವಿನೆನಪಿನಲ್ಲಿ ಪ್ರತಿಭಾವಂತ ಕವಿ, ಸಾಹಿತಿ, ಬರಹಗಾರರನ್ನು ಗುರುತಿಸಿ ಪ್ರಶಸ್ತಿ ನೀಡುವುದು, ಪ್ರತಿಭಾವಂತ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನೆರವಾಗುವಂತಹ ನಗದು ಪುರಸ್ಕಾರ ಪ್ರಶಸ್ತಿ, ಶಿಶು ಸಾಹಿತ್ಯ ಪ್ರಶಸ್ತಿ, ಹಿರಿಯರ ಕಿರಿಯರ ಗೀತಗಾಯನ, ಕವಿಗೋಷ್ಠಿ, ಚರ್ಚಾಕೂಟ, ಭಾಷೆ, ಕಾವ್ಯ, ನಾಟಕ, ಗದ್ಯ ಬರಹಗಳ ಬಗೆಗೆ ಕಾರ್ಯಾಗಾರ, ವಿಚಾರ ಸಾಹಿತ್ಯ, ಪುಸ್ತಕ ಪ್ರದರ್ಶನ, ಮಾರಾಟ, ಪುಸ್ತಕ ಬಿಡುಗಡೆ, ಉಪನ್ಯಾಸ ಮಾಲಿಕೆ, ಕೈಲಾಸ ಪರ್ವತ, ಮಾನಸ

ಸರೋವರ ಯಾತ್ರೆ ಬಗೆಗಿನ ದೃಶ್ಯ, ಧ್ವನಿ, ಪ್ರಾತ್ಯಕ್ಷತೆ, ಶಿವಮೊಗ್ಗ ಜಿಲ್ಲೆಯ ಅರ್ಹ ಪ್ರೌಢಶಾಲಾ ಗ್ರಂಥಾಲಯಕ್ಕೆ ಪುಸ್ತಕಗಳ ಕೊಡುಗೆ, ಸಾಹಿತ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ಸಾಹಿತಿಗಳಿಗೆ ಪುಸ್ತಕಗಳ ಕೊಡುಗೆ, ಭದ್ರಾವತಿ ಆಕಾಶವಾಣಿ ಕಾರ್ಯಕ್ರಮಕ್ಕೆ ಪುಸ್ತಕಗಳ ಕೊಡುಗೆ, ಪ್ರಶಸ್ತಿ ಪುರಸ್ಕೃತರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಆಹ್ವಾನ ಪತ್ರಿಕೆಯಲ್ಲಿ ಪ್ರಕಟಿಸುವುದರ ಮೂಲಕ ಓದುಗರಿಗೆ ಅವರ ವ್ಯಕ್ತಿತ್ವದ ಪರಿಚಯ ಹಾಗೂ ಶರಣರ, ಸಂತರ, ದಾಸರ, ಪರಿಚಯ -ಹೀಗೆ ಕರ್ನಾಟಕ ಸಂಘದ ಕಾರ್ಯಕ್ರಮಗಳನ್ನು ಪಟ್ಟಿ ಮಾಡುತ್ತಾ ಹೋದರೆ ಅದಕ್ಕೆ ಆರಂಭವಿದೆ. ಆದರೆ ಅಂತ್ಯವಿಲ್ಲ. ಸಂಘದ ಕಾರ್ಯಕ್ರಮಗಳು ೭೫ ಸಂವತ್ಸರಗಳಿಂದಲೂ ನಿರಂತರವಾಗಿ ಹರಿಯುತ್ತಿರುವ ಪಾವನ ಗಂಗೆಯಾಗಿ ಜನಮನ ಮಂದಿರವನ್ನು ಸೇರಿ ಅವರನ್ನು ಪುನೀತರನ್ನಾಗಿಸುತ್ತಿವೆ.

ಅಕ್ಕನ ವಚನವಾಣಿಯಂತೆ ಸಮಾಜದಲ್ಲಿ ಅಡಗಿರುವ ಅಜ್ಞಾತ ಪ್ರತಿಭೆಗಳನ್ನು ಗುರುತಿಸುವ, ಹಿರಿಕಿರಿಯ ಸಾಹಿತಿಗಳ ಸಾಹಿತ್ಯದ ಸ್ವಾದವನ್ನು ಸಮಾಜಕ್ಕೆ ಪರಿಚಯಿಸುವ, ನಾಟ್ಯ ಸಂಗೀತದಂತಹ ಕಲೆಗಳಲ್ಲಿ ಹುದುಗಿರುವ ಪ್ರತಿಭಾವಂತ ಕಲಾವಿದರನ್ನು ಗುರುತಿಸಿ ಗೌರವಿಸುವಲ್ಲಿ ಶಿವಮೊಗ್ಗ ಕರ್ನಾಟಕ ಸಂಘದ ಅಂತರಾಳದ ನಿಲವನ್ನು ಅದರ ಸತ್ಕಾರ್ಯಗಳ ಹಿರಿಮೆ, ವಿಶಾಲತೆಯ ಆಳಗಳನ್ನು ಅರಿಯಬಲ್ಲವರು ಸಾಹಿತ್ಯದ ಸೌರಭ, ಸಂಸ್ಕೃತಿಯ ಸಿರಿಯನ್ನು ಅರಿಯಬಲ್ಲರು.

ಓ ಸಹೃದಯ ಸಜ್ಜನ ಸಭಿಕನೆ!
ಶಾರದೆಯು ಸ್ವಾಗತವ ಕೋರುವಳು ನಿನಗೆ!
ಇಲ್ಲಿಗೆ ಈ ಕರ್ನಾಟಕ ಸಂಘದ ಭವನಕೆ!
ಬರಿಯ ಸೌಧವು ಅಲ್ಲ ಭವನವಿದುವು,
ಸಾಹಿತ್ಯದೇವಿಯ ಭವ್ಯಮಂದಿರ ಮೇಣ್
ಸಂಸ್ಕೃತಿಯ ಸಿರಿಯ ದಿವ್ಯ ದೇಗುಲವು,
ಪ್ರತಿಭೆಯಾ ಪ್ರತಿಮೆ ಸ್ಥಾಪನೆಗೊಂಡಿಹುದಿಲ್ಲಿ,
ಪುರಸ್ಕಾರದ ದಿವ್ಯಜ್ಯೋತಿಯ ಬೆಳಗಿಹರು ಇಲ್ಲಿ,
ಕಲೆ, ಸಾಹಿತ್ಯ, ಸಂಸ್ಕೃತಿಯ ಚಟುವಟಿಕೆಗಳ
ಮಂಗಳದ ನಿನಾದ ನಿರಂತರ ಮೊಳಗುತಿಹುದಿಲ್ಲಿ,
ಬಂದಿಹುದು ಸಂಘದ ಸೇವೆಯ ಸಾರ್ಥಕದ ಘಳಿಗೆ,
ತಂದಿಹುದು ವಜ್ರಮಹೋತ್ಸವದ ಭವ್ಯ ಆಚರಣೆಯನ್ನೆ.

ಎಪ್ಪತ್ತೈದು ಸಂವತ್ಸರಗಳ ಸಾರ್ಥಕ ಸೇವೆಗೈಯ್ಯುತ್ತಾ, ಸಾಹಿತ್ಯ ಸಾಂಸ್ಕೃತಿಕ ರಂಗದಲ್ಲಿ ದಾಪುಗಾಲು ಹಾಕುತ್ತಾ ಸಾಗಿರುವ ಶಿವಮೊಗ್ಗ ಕರ್ನಾಟಕ ಸಂಘಕ್ಕೆ ಅದರ ಅಮೃತ ವಜ್ರಮಹೋತ್ಸವದ ಶುಭಕಾಲದಲ್ಲಿ ಅದು ತನ್ನ ಸತ್ಕಾರ್ಯಗಳ ವಜ್ರಕಾಯವನ್ನು ಧರಿಸಿ ಶತಶತಮಾನಗಳ ಕಾಲ ಸಮಾಜ ಸೇವೆಯಲ್ಲಿ ತೊಡಗಲಿ ಎಂದು ಕನ್ನಡ ಜಾಗೃತಿ ಕೇಂದ್ರದ ಹೃತ್ಪೂರ್ವಕವಾದ ಶುಭ ಹಾರೈಕೆಯಾಗಿದೆ.

☐☐

ಕನ್ನಡ ಸಾಹಿತ್ಯ ಒಂದು ಅವಲೋಕನ

□ ಜಯದೇವಪ್ಪ ಜೈನಕೇರಿ

ಕನ್ನಡ ಭಾಷೆಯನ್ನಾಡುವ ಪ್ರದೇಶಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ನಾಲ್ಕು ಬಗೆಯ ಮುಖ್ಯ ಭಾಷಾ ಪ್ರಭೇದಗಳು ಕಂಡುಬರುತ್ತವೆ. ಮುಖ್ಯವಾಗಿ ಮೈಸೂರು ಕನ್ನಡ, ಕರಾವಳಿ ಕನ್ನಡ, ಧಾರವಾಡ ಕನ್ನಡ, ಗುಲ್ಬರ್ಗಾ ಕನ್ನಡ ಎಂಬ ನಾಲ್ಕು ಪ್ರಾದೇಶಿಕ ಉಪಭಾಷೆಗಳನ್ನು ಗಮನಿಸಬಹುದು. ಸಾಮಾಜಿಕವಾಗಿ ಇವುಗಳಲ್ಲಿ ಇನ್ನೂ ಹಲವು ಒಳಪ್ರಭೇದಗಳು ಕಂಡುಬರುತ್ತವೆ.

ಹಿಂದಿನ ಮೈಸೂರು ಸಂಸ್ಥಾನದ ೯ ಜಿಲ್ಲೆಗಳ ಭಾಷೆಯನ್ನು ಸ್ಥೂಲವಾಗಿ ಮೈಸೂರು ಕನ್ನಡ ಎನ್ನುತ್ತೇವೆ. ಅವುಗಳಲ್ಲಿಯೂ ಪ್ರಾದೇಶಿಕವಾದ ಬೇರೆ ಬೇರೆ ನುಡಿಗಟ್ಟುಗಳು, ಉಚ್ಚಾರಣೆಗಳು ಕಂಡುಬರುತ್ತವೆ. ಗ್ರಾಮಾಂತರ ಪ್ರದೇಶಗಳಲ್ಲಿಯೂ ವ್ಯತ್ಯಾಸಗಳಿವೆ. ಹಾಗೆಯೇ ಇತರ ಕನ್ನಡ ಪ್ರದೇಶಗಳ ಭಾಷೆಯಲ್ಲಿಯೂ ಅನೇಕ ವೈರುಧ್ಯಗಳಿದ್ದರೂ ಕನ್ನಡ ನಾಡು, ಕನ್ನಡ ಭಾಷೆ, ಕರ್ನಾಟಕ ಗಡಿನಾಡ ಕನ್ನಡ ಭಾಷೆಯನ್ನು ಆಡುವ ಪ್ರದೇಶಗಳೆಲ್ಲವೂ ಒಂದು ಎಂಬ ಭಾವನಾತ್ಮಕ ಸಂಬಂಧ ದೀರ್ಘ ಕಾಲದಿದಂಲೂ ಮುಂದುವರಿದು ಬಂದಿದೆ.

ಕನ್ನಡ ಭಾಷೆಯ ಸ್ವರೂಪ ಮತ್ತು ಅದು ಬೆಳೆದು ಬಂದ ದಾರಿಯನ್ನು, ರೀತಿಯನ್ನು ಅರಿಯಲು ಕರ್ನಾಟಕದ ಮೂಲೆ ಮೂಲೆಗಳಲ್ಲಿರುವ ಭಾಷಾ ಪ್ರಭೇದಗಳನ್ನು ತಿಳಿದುಕೊಳ್ಳುವುದು ಅವಶ್ಯಕ. ರಾಜಕೀಯ ಕಾರಣಗಳಿಂದಾಗಿ ಇತರ ಭಾಷಾ ಪ್ರದೇಶಗಳಲ್ಲಿ ಹಂಚಿಹೋಗಿದ್ದ ಕನ್ನಡ ನಾಡಿನ ಭಾಷೆಯಲ್ಲಿ ಇತರ ಭಾಷೆಗಳ ಆಡುನುಡಿಗಳು ನುಸುಳಿಕೊಂಡಿವೆ. ಭೌಗೋಳಿಕ ಪರಿಸರ ಮತ್ತು ಐತಿಹಾಸಿಕ ಕಾರಣಗಳಿಂದ ಧಾರವಾಡ, ಬೆಳಗಾವಿ ಕನ್ನಡದ ಮೇಲೆ ಮರಾಠಿ ಪ್ರಭಾವ ಕಂಡುಬರುತ್ತದೆ. ಆದರೆ ಗ್ರಂಥಸ್ಥ ಭಾಷೆಗೆ ಮೈಸೂರು ಕನ್ನಡವೇ ಹತ್ತಿರವಾಗಿದೆ.

೧೭ನೇ ಶತಮಾನದಿಂದ ಆರಂಭವಾದ ಹಳಗನ್ನಡ-ನಡುಗನ್ನಡಗಳ ಮುಂದುವರಿಕೆಯಾಗಿ ಹೊಸಗನ್ನಡ ಪ್ರಭೇದವನ್ನು ವಿದ್ವಾಂಸರು ಗುರುತಿಸಿದ್ದಾರೆ. ಪ್ರಾದೇಶಿಕವಾಗಿ ಎಲ್ಲ ಆಧುನಿಕ ಕನ್ನಡಿಗರ ವ್ಯವಹಾರೋಪಯುಕ್ತ ಕನ್ನಡವನ್ನು ಹೊಸ ಕನ್ನಡವೆಂದು ಕರೆಯಬಹುದು. ಕಾಲ, ದೇಶ ಮತ್ತು ರಾಜಕೀಯ, ಸಾಮಾಜಿಕ ಪರಿಸ್ಥಿತಿಗಳಿಗನುಗುಣವಾಗಿ ಜನಬಳಕೆಯ ಭಾಷೆಯಲ್ಲಿ ಬದಲಾವಣೆಗಳು ಸಹಜವಾಗಿ ಉಂಟಾಗುತ್ತವೆ. ಆದರೆ ಲಿಖಿತ ಭಾಷೆಯಲ್ಲಿ ಹೆಚ್ಚಿನ ವ್ಯತ್ಯಾಸಗಳು ಅಷ್ಟಾಗಿ ಕಂಡುಬರುವುದಿಲ್ಲ.

ಕನ್ನಡ ಲಿಪಿಗೆ ಸುಮಾರು ಎರಡು ಸಾವಿರ ವರ್ಷಗಳ ಪರಂಪರೆ ಇದೆ. ಒಂದು ಲಿಪಿಯು ಹುಟ್ಟುವುದಕ್ಕೆ ಮೊದಲು ಭಾಷೆಯು ಸಾವಿರಾರು ವರ್ಷಗಳ ಕಾಲ ಜನರ ನಾಲಿಗೆಯ ಮೇಲೆ ಬೆಳೆಯಬೇಕಾಗುತ್ತದೆ. ಇಂದಿಗೂ ಲಿಪಿ ಇಲ್ಲದ ಸಹಸ್ರಾರು ಭಾಷೆಗಳಿವೆ ಎಂಬುದು ಭಾಷೆಯ ಬೆಳವಣಿಗೆಗೆ ಲಿಪಿಯ ಮಹತ್ವ ಎಷ್ಟು ಮುಖ್ಯ ಎನ್ನುವುದನ್ನು ತಿಳಿಸುತ್ತದೆ. ಭಾಷೆಯ ಬಳಕೆ ಹೆಚ್ಚಾದಂತೆ ಅಭಿವ್ಯಕ್ತಿಗೆ ಲಿಪಿಯ ಹುಟ್ಟು ಬೆಳವಣಿಗೆ ಅದನ್ನು ಬಳಸುವ ಜನರ ಸಂಸ್ಕೃತಿಯ ಪ್ರತೀಕವಾಗಿರುತ್ತದೆ. ಭಾವನೆಗಳ ಸಂವಹನ, ಅಭಿವ್ಯಕ್ತಿ, ಶಬ್ದಗಳ ಉಚ್ಚಾರಣೆ ಸರಳವಾಗಿರಬೇಕು. ಬರೆದಂತೆ ಓದುವಂತಿರಬೇಕು. ಓದಿದಂತೆ ಬರೆಯುವಂತೆಯೂ ಇರಬೇಕು. ಈ ದೃಷ್ಟಿಯಿಂದ ಕನ್ನಡ ಒಂದು ಪರಿಪೂರ್ಣ ಭಾಷೆ ಎನ್ನಬಹುದು. ಕಾಲಕ್ರಮದಲ್ಲಿ ಅನೇಕ ಮಾರ್ಪಾಡುಗಳನ್ನು ಅರಗಿಸಿಕೊಂಡು ವೈವಿಧ್ಯಪೂರ್ಣ ವಿಕಾಸವನ್ನು ಪಡೆದು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಹಿರಿಮೆಯನ್ನು ವ್ಯಕ್ತಪಡಿಸುತ್ತಿದೆ. ಹೊರಭಾಷೆಯ ಪದಗಳನ್ನು ಎರವಲಾಗಿ ಪಡೆದು ಕನ್ನಡೀಕರಿಸಿಕೊಂಡು ಬೆಳೆಯುತ್ತಾ ಜೀವಂತವಾಗಿದೆ.

ಶ್ರೀಮಂತವೂ ವೈವಿಧ್ಯಪೂರ್ಣವೂ ಆದ ಕನ್ನಡ ಸಾಹಿತ್ಯಕ್ಕೆ ೧೫೦೦ ವರ್ಷಗಳ ಇತಿಹಾಸವಿದೆ. ಮತೀಯ ದೃಷ್ಟಿಯಿಂದ ಜೈನಯುಗ, ವೀರಶೈವಯುಗ, ಬ್ರಾಹ್ಮಣ ಯುಗವೆಂದೂ, ಪ್ರಮುಖ ಕವಿಗಳನ್ನಾಧರಿಸಿ ಪಂಪಯುಗ, ಬಸವಯುಗ, ಹರಿಹರಯುಗ ಕುಮಾರವ್ಯಾಸ ಯುಗವೆಂದೂ, ಸಾಹಿತ್ಯರೂಪಗಳನ್ನಾಧರಿಸಿ, ಚಂಪೂ, ವಚನ, ರಗಳೆ, ತ್ರಿಪದಿ, ಸಾಂಗತ್ಯ ಪ್ರಕಾರಗಳೆಂದೂ ವಿದ್ವಾಂಸರು ಗುರುತಿಸಿದ್ದಾರೆ. ಭಾಷೆಯ ವಿವಿಧ ಅವಸ್ಥೆಗಳನ್ನು ಪೂರ್ವದ ಹಳಗನ್ನಡ ಕಾಲ, ನಡುಗನ್ನಡ ಕಾಲ,, ಹೊಸಗನ್ನಡ ಕಾಲವೆಂದು ವರ್ಗೀಕರಿಸಿದ್ದಾರೆ. ಬೌದ್ಧರು ಕನ್ನಡದ ಆದಿಕವಿಗಳೆಂದೂ, ಬೌದ್ಧಧರ್ಮದ ನಾಶದೊಂದಿಗೇ ಬೌದ್ಧಗ್ರಂಥಗಳೂ ನಾಶವಾಗಿರಬಹುದೆಂದೂ ವಿದ್ವಾಂಸರು ಊಹಿಸಿದ್ದಾರೆ. ಕನ್ನಡದ ಪ್ರಥಮ ಲಿಖಿತ ಶಾಸನವೆಂದರೆ ಹಲ್ಮಿಡಿ ಶಾಸನವೆಂದು ಗುರುತಿಸಲಾಗಿದೆ. ಇದಕ್ಕೂ ಪೂರ್ವದಲ್ಲಿ ಕನ್ನಡ ಸಾಕಷ್ಟು ಬಳಕೆಯಲ್ಲಿದ್ದಿರಬಹುದೆಂದೂ, ಈ ಶಾಸನದ ಆರಂಭಿಕ ಸಾಲು ಸಂಸ್ಕೃತ ಭಾಷೆಯ ಮಂಗಳ ಶ್ಲೋಕವಿದ್ದು, ಕನ್ನಡದ ಮೇಲೆ ಸಂಸ್ಕೃತದ ಪ್ರಭಾವ ಅಂದಿನಿಂದಲೇ ಗಾಢವಾಗಿದ್ದಿರಬಹುದೆಂದೂ ಊಹಿಸಿದ್ದಾರೆ. ಹಲ್ಮಿಡಿ ಶಾಸನದ ಗದ್ಯಶೈಲಿ ನಂತರದ ಕೆಲವು ಶಾಸನಗಳು, ಮತ್ತು ೭ನೇ ಶತಮಾನದ ಬಾದಾಮಿಯ ಕಪ್ಪೆ ಅರಭಟ್ಟನ ಶಾಸನಗಳು ಕಾವ್ಯಮಯವಾಗಿವೆ. ಅಚ್ಚಕನ್ನಡದ ತ್ರಿಪದಿಯಲ್ಲಿರುವ ಬಾದಾಮಿ ಶಾಸನ ಸುಂದರ ಭಾವಗೀತೆಯಾಗಿದೆ. ೭-೮ನೇ ಶತಮಾನಗಳಲ್ಲಿದ್ದ ಕನ್ನಡ ಕವಿಗಳ, ಅವರ ಕೃತಿಗಳ ಉಲ್ಲೇಖ ನಂತರದ ಕವಿಗಳ ಕಾವ್ಯಗಳಲ್ಲಿ ಕಂಡುಬಂದರೂ, ಕೃತಿಗಳು

ಇದುವರೆಗೆ ಲಭ್ಯವಾಗಿಲ್ಲ. ಪ್ರಸ್ತುತ ಶ್ರೀವಿಜಯನ ಕವಿರಾಜಮಾರ್ಗ ಕನ್ನಡದ ಮೊದಲ ಗ್ರಂಥವೆಂದು ಗುರುತಿಸಲಾಗಿದೆ. ವ್ಯಾಕರಣ, ಅಲಂಕಾರಗಳನ್ನು ನಿರೂಪಿಸುವ ಲಕ್ಷಣ ಗ್ರಂಥವಾಗಿದೆ. ಕನ್ನಡನಾಡು, ನುಡಿ, ಸಾಹಿತ್ಯ, ಸಂಸ್ಕೃತಿಗಳನ್ನು ಕುರಿತು ಈ ಕೃತಿ ಅಮೂಲ್ಯವಾಗಿದೆ. ಆ ಕಾಲಕ್ಕಾಗಲೇ ಕನ್ನಡದಲ್ಲಿ ರಾಮಾಯಣ ಹುಟ್ಟಿದ್ದಿತು ಎಂದು ಕವಿರಾಜಮಾರ್ಗದಿಂದ ತಿಳಿದುಬರುತ್ತದೆ. ಮೇಲಿನ ಸಂಗತಿಗಳಿಂದ ಕ್ರಿಸ್ತಶಕದ ಆರಂಭದಿಂದ ೬-೭ನೇ ಶತಮಾನಗಳ ವೇಳೆಗೆ ಕನ್ನಡ ಭಾಷೆ ಸಮೃದ್ಧವಾಗಿ ಬೆಳೆದು ಬಂದಿರಬಹುದೆಂದು ಹೇಳಬಹುದಾಗಿದೆ.

ಪಂಪಯುಗ: ಸು. ಕ್ರಿ.ಶ. ೯೦೦ ರಿಂದ ೧೧೫೦ ರವರೆಗೆ ಪ್ರಥಮ ಘಟ್ಟದ ಪಂಪಯುಗದಲ್ಲಿ ಚಂಪೂಕಾವ್ಯಗಳೇ ವಿಜೃಂಭಿಸಿವೆ. ಪಂಪ, ರನ್ನ, ಜನ್ನರು ಮಹಾಕಾವ್ಯಗಳನ್ನು ರಚಿಸಿ ಪ್ರಸಿದ್ಧರಾಗಿದ್ದಾರೆ. ಕನ್ನಡ ಗದ್ಯ ಇತಿಹಾಸದಲ್ಲಿ ವಡ್ಡಾರಾಧನೆ ಒಂದು ಮೈಲಿಗಲ್ಲು. ಸು. ೯೨೦ರಲ್ಲಿ ಶಿವಕೋಟ್ಯಾಚಾರ್ಯರು ರಚಿಸಿದ ಈ ಗದ್ಯ ಕೃತಿ ಅಂದಿನ ಭಾಷಾ ಸ್ವರೂಪ, ಜನಜೀವನದ ಕೈಗನ್ನಡಿಯಾಗಿದೆ. ಸರಳ ಸುಂದರ ಶೈಲಿಯ ಕಥನಕಲೆ ಅಪೂರ್ವವಾಗಿದೆ.

ವಚನ ಯುಗ: ೧೨ನೇ ಶತಮಾನದಲ್ಲಿ ಕನ್ನಡ ಧಾರ್ಮಿಕ ಜಗತ್ತಿನಲ್ಲಿ ನಡೆದ ಸಮಾಜೋಧಾರ್ಮಿಕ ಚಳುವಳಿಯಿಂದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನೂತನ ಯುಗ ಪ್ರಾರಂಭವಾಯಿತು. ರಾಜಾಶ್ರಯದಿಂದ ಹೊರಬಂದ ಶರಣರು ಜನಸಾಮಾನ್ಯರ ಮಧ್ಯದಿಂದ ಬಂದು ಜನಸಾಮಾನ್ಯರ ಆಡುಭಾಷೆಯಲ್ಲಿ ಹೊಸ ಪ್ರಕಾರದ ಗದ್ಯ-ಪದ್ಯಗಳ ವಚನಗಳನ್ನು ರಚಿಸಿ ಕನ್ನಡ ಸಾಹಿತ್ಯದಲ್ಲಿ ಹೊಸ ಕ್ರಾಂತಿಯನ್ನು ಮಾಡಿದ ಕೀರ್ತಿಗೆ ಪಾತ್ರರಾದರು. ಕೇವಲ ೧೧ ವರ್ಷಗಳ ಅವಧಿಯಲ್ಲಿ ೩೬೦ಕ್ಕೂ ಹೆಚ್ಚು ಎಲ್ಲ ವರ್ಗ, ವರ್ಣ, ಜಾತಿಗಳ ಜನಸಾಮಾನ್ಯರು ಶರಣರಾಗಿ ಒಂದೇ ಧರ್ಮವಡಿಯಲ್ಲಿ ಚಿಂತನೆ ನಡೆಸಿ ಸಾವಿರಾರು ವಚನಗಳನ್ನು ರಚಿಸಿರುವುದು, ಪ್ರಪಂಚದ ಸಾಹಿತ್ಯದ ಇತಿಹಾಸದಲ್ಲೇ ಒಂದು ವಿನೂತನ ದಾಖಲೆ ಎನ್ನಬಹುದು. ಜನಸಾಮಾನ್ಯರ ಆಡುಭಾಷೆಯಾದ ಕನ್ನಡವನ್ನು ಅದರ ಎಲ್ಲ ಅಭಿವ್ಯಕ್ತಿ ಸಾಧ್ಯತೆಗಳನ್ನು ಬಳಸಿ ದೇವಭಾಷೆಯನ್ನಾಗಿಸಿ ಕನ್ನಡ ಭಾಷೆಗೆ ಒಂದು ವ್ಯಕ್ತಿತ್ವವನ್ನು ತಂದುಕೊಟ್ಟವರು ವಚನಕಾರರು.

ಮೂಢನಂಬಿಕೆ, ಅಂಧಶ್ರದ್ಧೆ, ಡಾಂಭಿಕತೆ, ಜಾತೀಯತೆ, ವರ್ಣಾಶ್ರಮ ಧರ್ಮದ ವರ್ಗಭೇದ, ವರ್ಣಭೇದಗಳಿಂದ ತನ್ನ ಸತ್ವವನ್ನು ಕಳೆದುಕೊಂಡ ವೈದಿಕಧರ್ಮ ಮಡಿವಂತಿಕೆಯಲ್ಲಿ ಮುಳುಗಿ ಹೋಗಿತ್ತು. ಇಂತಹ ಪರ್ವ ಕಾಲದಲ್ಲಿ ಸರ್ವಸಮಾನತೆಯ ಸಕಲ ಜೀವರಿಗೆ ಲೇಸನೇ ಬಯಸುವ ಸ್ತ್ರೀಯರಿಗೂ ಸಮಾನತೆ ನೀಡಿದ ಲಿಂಗಾಯತ ಧರ್ಮ, ಹೊಸ ಸಮಾಜವೊಂದರ ಸೃಷ್ಟಿಗೆ ಕಾರಣವಾಯಿತು. ಜೊತೆಗೆ ಜನಸಾಮಾನ್ಯರ ಆಡುಭಾಷೆ ಕನ್ನಡಕ್ಕೆ ಮರುಹುಟ್ಟು ನೀಡಿತು. ಕಾಯಕತತ್ವ ದಾಸೋಹ ತತ್ವಗಳು ನಾಡನ್ನು

ಶ್ರೀಮಂತಗೊಳಿಸಿದವು. ಕಲ್ಯಾಣ ನಾಡಿನ ಕೀರ್ತಿ ಕೇಳಿ ಭಾರತದಾದ್ಯಂತ ತುಳಿತಕ್ಕೊಳಗಾದ ಜನ ಕರ್ನಾಟಕಕ್ಕೆ ಬಂದರು. ಆಧ್ಯಾತ್ಮ ಜ್ಞಾನವೆಲ್ಲವೂ ಶ್ರೀಸಾಮಾನ್ಯರ ಸ್ವತ್ತಾಗುವಂತೆ, ವಚನ ಪ್ರಕಾರ ಶ್ರೇಷ್ಠ ಸಾಹಿತ್ಯವಾಗಿ ಬೆಳೆಯಿತು. ಕನ್ನಡ ನೆಲದಲ್ಲಿ ಹುಟ್ಟಿ ಅಪ್ಪಟ ಕನ್ನಡತನದಿಂದ ತುಂಬಿದ, ಈ ಕಾಲವನ್ನು ಕನ್ನಡ ಸಾಹಿತ್ಯದ ಪ್ರಜಾಪ್ರಭುತ್ವದ ಕಾಲ ಎನ್ನಬಹುದು.

ಕುಮಾರ ವ್ಯಾಸಯುಗ: ೧೫ ರಿಂದ ೧೯ನೇ ಶತಮಾನವನ್ನು ಕುಮಾರವ್ಯಾಸ ಯುಗ ಎಂದು ಗುರುತಿಸಲಾಗಿದೆ. ಈ ಕಾಲದಲ್ಲಿ ಭಾಷೆ ಪುನಃ ಪಂಡಿತರ ಸ್ವತ್ತಾಗಿ ಷಟ್ಪದಿ, ಸಾಂಗತ್ಯ, ತ್ರಿಪದಿಗಳ ಸಂಕೀರ್ಣ ಯುಗವಾಯಿತು. ಭಾಮಿನಿ ಷಟ್ಪದಿ ಹೆಚ್ಚು ಜೀವಂತವಾಯಿತು. ಹಿನ್ನೆಲೆಗೆ ಹೋಗಿದ್ದ ವಚನ ಸಾಹಿತ್ಯ ವಿಜಯನಗರದ ಪ್ರೌಢದೇವರಾಯನ (೧೪೨೪-೧೪೪೬) ಮತ್ತು ತೋಂಟದ ಸಿದ್ಧಲಿಂಗಯತಿಗಳ (೧೪೭೦) ಆಶ್ರಯದಲ್ಲಿ ಪುನರುಜ್ಜೀವನಗೊಂಡಿತು. ವಚನಗಳ ಸಂಕಲನ, ಸಂಪಾದನೆ ಟೀಕು, ವ್ಯಾಖ್ಯಾನಗಳು ರಚಿತವಾದವು. ಅಲ್ಲದೆ ಪ್ರತಿ ಮಾಡುವ ಕಾರ್ಯವೂ ನಡೆಯಿತು. ಸರಳ ಕನ್ನಡದಲ್ಲಿ ರಚಿತವಾದ ಸರ್ವಜ್ಞನ ವಚನಗಳು ಅನನ್ಯವಾಗಿ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದವು. "ಸುಲಿದ ಬಾಳೆಯ ಹಣ್ಣಿನಂದದಿ" ಅತ್ಯಂತ ಮನೋಹರವಾದ ಕನ್ನಡದಲ್ಲಿ ಆತ್ಮಜ್ಞಾನ ಪಡೆದರೆ ಸಾಲದೇನು? ಸಂಸ್ಕೃತದಲ್ಲಿನ್ನೇನು? ಎಂದು ಸವಾಲು ಹಾಕಿದ ಮಹಾಲಿಂಗರಂಗ ಒಳ್ಳೆಯ ಕವಿ ಹೃದಯವುಳ್ಳವನು. ನಂತರದ ಮೈಸೂರು ಅರಸರು, ಕೆಳದಿ ಅರಸರು ಪ್ರಾಚೀನ ಆಚಾರ್ಯ ಪರಂಪರೆಗೆ ಸಂಸ್ಕೃತ ಕೃತಿ ರಚನೆಗೆ, ರಾಜಾಶ್ರಯ ನೀಡಿ ಕನ್ನಡದ ಹಿನ್ನೆಡೆಗೆ ಕಾರಣರಾಗಿದ್ದಾರೆ. ವಿವಿಧ ಭಾಗಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡ ನಾಡು ಉರ್ದು, ಮರಾಠಿ, ತೆಲುಗು, ತಮಿಳು ಭಾಷೆಗಳ ಆಕ್ರಮಣಕ್ಕೆ ಸಿಲುಕಿತು. ಈ ಅವಧಿಯಲ್ಲಿಯೂ ಕೆಲವೇ ಕವಿಗಳು ಕನ್ನಡವನ್ನು ಜೀವಂತವಾಗಿ ಉಳಿಸಿಕೊಂಡು ಕೃತಿ ರಚಿಸಿದರು.

೧೯ನೇ ಶತಮಾನದ ಆದಿಭಾಗದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಕನ್ನಡದಲ್ಲಿ ಗ್ರಂಥಗಳ ರಚನೆ ಪ್ರಾರಂಭವಾಯಿತು. ಬ್ರಿಟಿಷರು ತಮ್ಮ ಆಡಳಿತಕ್ಕೆ ಬೇಕಾದ ಗುಮಾಸ್ತರಿಗಾಗಿ ತೆರೆದ ಅಕ್ಷರ ವಿದ್ಯೆಯಿಂದಾಗಿ ಕನ್ನಡ ಶಾಲೆಗಳು ಪ್ರಾರಂಭವಾದವು. ಚಾಮರಾಜ ಒಡೆಯರ ಕಾಲದಲ್ಲಿ ಕನ್ನಡ ಸಾಹಿತ್ಯದ ಆಧುನಿಕ ಯುಗ ಪ್ರಾರಂಭವಾಯಿತು. ಆಡಳಿತ ಕನ್ನಡ ಭಾಷೆಯಲ್ಲೇ ಜನಸಾಮಾನ್ಯರಿಗೆ ತಿಳಿಯುವ ಭಾಷೆಯಲ್ಲೇ ನಡೆಯಬೇಕೆಂಬ ನೀತಿಯಿಂದಾಗಿ ಕನ್ನಡ ಭಾಷೆ ಬೆಳೆಯಲು ಸಹಾಯಕವಾಯಿತು. ಮೇಲ್ವರ್ಗದವರು ಇಂಗ್ಲೀಷ್ ಭಾಷಾ ಕಲಿಕೆಗೆ ಮುಂದಾಗಿ, ಕನ್ನಡ ಪುನಃ ಕೆಲಕಾಲ ಹಿನ್ನೆಡೆ ಅನುಭವಿಸಿತು. ಬುದ್ಧಿಜೀವಿಗಳ ಮಾತೃಭಾಷಾ ಪ್ರೇಮದ ಜೊತೆಗೆ ಆಂಗ್ಲ ಭಾಷೆಯಿಂದ ದೊರೆತ ಪ್ರಪಂಚ ಜ್ಞಾನಗಳು ದೇಶದಲ್ಲಿ ಸ್ವಾತಂತ್ರ್ಯದ ಕಿಡಿಯನ್ನು ಹೊತ್ತಿಸಿದವು. ಇಂಗ್ಲೀಷ್ ಭಾಷೆಯ ಅಧ್ಯಯನದಿಂದ ಕನ್ನಡಿಗರ

ಆತ್ಮಾಭಿಮಾನ ಜಾಗೃತಗೊಂಡು ಇಂಗ್ಲೀಷ್ ಸಾಹಿತ್ಯದ ಅನುವಾದ ದೇಶ-ಭಾಷೆಗಳ ಆಧುನಿಕ ಯುಗ ಪ್ರಾರಂಭವಾಯಿತು. ಹಲವು ವಿದೇಶೀಯರು ಕನ್ನಡವನ್ನು ಕಲಿತು ಕನ್ನಡದ ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ, ಪರಿಷ್ಕರಿಸಿ ಪ್ರಕಟಿಸಲು ಪ್ರಾರಂಭಿಸಿದರು. ಮುದ್ರಣ ಯಂತ್ರದ ಆಗಮನದೊಂದಿಗೆ ಹೊಸ ಮನ್ವಂತರ ಆರಂಭವಾಯಿತು. ಕನ್ನಡ ಭಾಷಾಸ್ವರೂಪವನ್ನು, ತಿಳಿಸುವ ವ್ಯಾಕರಣ, ನಿಘಂಟು ಛಂದಸ್ಸುಗಳ ಗ್ರಂಥ ರಚನೆಗೆ ವಿದೇಶೀಯರಾದ ಜಾನ್ ಹ್ಯಾಂಡ್, ವಿಲಿಯಂ ರೀಡ್, ಕಿಟ್ಟೆಲ್, ಜೀಗ್ಲರ್, ಬಿ.ಎಲ್. ರೈಸ್, ಇ.ಪಿ. ರೈಸ್ ಮುಂತಾದವರು ಮುಂದಾದರು. ಹಲವು ಪಾದ್ರಿಗಳೂ, ಕ್ರೈಸ್ತಧರ್ಮ ಬೋಧನೆಗೆ ಕನ್ನಡವನ್ನೇ ಅವಲಂಬಿಸಬೇಕಾಗಿತ್ತು. ಕಾರಣ ಕೆಳವರ್ಗದ ಬಡವರಾದ ಕನ್ನಡಿಗರಿಗೆ ಕನ್ನಡ ಬಿಟ್ಟು ಬೇರೆ ಭಾಷೆ ತಿಳಿಯುತ್ತಿರಲಿಲ್ಲ. ಮೊಟ್ಟಮೊದಲ ಕನ್ನಡ ಸಾಹಿತ್ಯ ಚರಿತ್ರೆ ಬರೆದ ಕೀರ್ತಿ ಇ.ಪಿ. ರೈಸ್ (೧೯೧೫)ರಿಗೆ ಸಲ್ಲುತ್ತದೆ. ಕನ್ನಡ ಶಾಸನಗಳನ್ನು ಕಲೆಹಾಕಿ ಮುದ್ರಿಸಿದ (೧೮೭೮) ಕೀರ್ತಿ ಪ್ಲೇಟ್ ಅವರಿಗೂ, ಮೈಸೂರು ಗೆಜೆಟಿಯರ್ ಎರಡು ಸಂಪುಟಗಳನ್ನು, ಎಫಿಗ್ರಾಫಿಯಾ ಕರ್ನಾಟಕದ ೧೨ ಸಂಪುಟಗಳನ್ನು ಹೊರತಂದ ಕೀರ್ತಿ ಬಿ.ಎಲ್. ರೈಸ್ ಅವರಿಗೂ ಅವರ ಸಹಾಯಕರಾಗಿದ್ದ ಶ್ರೀ ಆರ್. ನರಸಿಂಹಾಚಾರ್ಯರಿಗೂ ಸಲ್ಲುತ್ತದೆ. ಆಧುನಿಕ ಕನ್ನಡ ಸಾಹಿತ್ಯಕ್ಕೆ ಮೈಸೂರು ಅರಸರ ಪ್ರೋತ್ಸಾಹ ದೊರಕಿ, ಚಾಮರಾಜೇಂದ್ರ ನಾಟಕ ಸಭಾ ಮೂಲಕ ಆಸ್ಥಾನ ಪಂಡಿತರಿಂದ ಕನ್ನಡ ನಾಟಕ ರಚಿಸಿ ನಾಟಕ ಆಡಿಸಿದರು. ಮೊದಲು ಅನುವಾದ ನಾಟಕಗಳೂ, ನಂತರ ಸ್ವತಂತ್ರ ಕನ್ನಡ ನಾಟಕಗಳೂ ರಚಿತವಾದವು. ಮೈಸೂರು ಅರಸು ಶ್ರೀ ಕೃಷ್ಣರಾಜ ಒಡೆಯರು ಕನ್ನಡ ನವೋದಯಕ್ಕೆ ನೀಡಿದ ಎರಡು ಮುಖ್ಯ ಸಂಸ್ಥೆಗಳೆಂದರೆ ೧೯೧೫ರಲ್ಲಿ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ೧೯೧೬ರಲ್ಲಿ ಪ್ರಾರಂಭವಾದ ಮೈಸೂರು ವಿಶ್ವವಿದ್ಯಾನಿಲಯ. ಈ ಎರಡೂ ಸಂಸ್ಥೆಗಳು ಕನ್ನಡ ಸಾಹಿತ್ಯ ಸೇವೆಯನ್ನು ಪ್ರಮುಖವಾಗಿ ಕೈಗೆತ್ತಿಕೊಂಡವು. ಇದಕ್ಕೆ ಮರಾಠಿ ಆಡಳಿತದಲ್ಲಿದ್ದ ದಕ್ಷಿಣ ಮಹಾರಾಷ್ಟ್ರ ಪ್ರಾಂತ್ಯವೆಂದು ಹೆಸರಾದ ಧಾರವಾಡದಲ್ಲಿ ೧೮೯೫ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪಿತವಾಗಿ, ಆ ಭಾಗದ ಕನ್ನಡ ಮೇಲ್ಮೆಗೆ ಹೋರಾಟ ನಡೆಸುತ್ತಾ ಬಂದಿತು. ಈ ಕಾಲಘಟ್ಟದಲ್ಲಿ ಹಳೆ ಮೈಸೂರು ಪ್ರಾಂತ್ಯದಲ್ಲಿ ಎಲ್ಲ ಕಡೆ ಕರ್ನಾಟಕ ಸಂಘದ ಹೆಸರಿನಲ್ಲಿ ಕನ್ನಡಪರ ಸಂಸ್ಥೆಗಳು ಹುಟ್ಟಿದವು.

೨೦ನೇ ಶತಮಾನದಲ್ಲಾದ ನವೋದಯ ಕ್ರಾಂತಿ ವಿಶ್ವವಿಶಾಲವಾದ ಲೌಕಿಕ ಜ್ಞಾನ, ವೈಜ್ಞಾನಿಕ ಮನೋಭಾವನೆಯ ಸಾಹಿತ್ಯ ಕ್ರಾಂತಿ ನಮ್ಮ ಪ್ರಾಚೀನ ಸಾಹಿತ್ಯದ ಸತ್ವದೊಡನೆ ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಬಂದ ನೂತನ ವಿಚಾರಗಳನ್ನು ಹೊಸತು, ಹಳತು ಸಮನ್ವಯಗೊಳಿಸಿಕೊಂಡು ಆಧುನಿಕ ಸಾಹಿತ್ಯ ಸೃಷ್ಟಿ ಕಾರ್ಯ ಕನ್ನಡ ಸಂದರ್ಭದಲ್ಲಿ ಕಂಡುಬರುತ್ತದೆ.

೧೯೩೦ರ ವೇಳೆಗೆ ಕನ್ನಡ ಸಾಹಿತ್ಯದಲ್ಲಿ ಹೊಸ ಗಾಳಿ ಬೀಸಲು ಪ್ರಾರಂಭವಾಗಿತ್ತು. ಕನ್ನಡ ಕಣ್ವರೆಂದೇ ಖ್ಯಾತರಾದ ಶ್ರೀ ಬಿ.ಎಂ. ಶ್ರೀಕಂಠಯ್ಯನವರು ಇಂಗ್ಲೀಷ್ ಕವಿತೆಗಳನ್ನು ಬಹಳ ಸಮರ್ಥವಾಗಿ ಕನ್ನಡಕ್ಕೆ ಅನುವಾದಿಸಿ, ಕನ್ನಡ ಭಾಷೆಗೆ ಹೊಸ ಆಯಾಮ ನೀಡಿದರು. ಅವರ ಅನುವಾದ ಗೀತೆಗಳು ಕನ್ನಡದ ಮೂಲಕವಿತೆಗಳೇ ಎನ್ನುವ ಮಟ್ಟಿಗೆ ಜನಪ್ರಿಯವಾದವು. ಆಧುನಿಕ ವಿದ್ಯಾಭ್ಯಾಸಕ್ಕೆ ಆಗತಾನೇ ತೆರೆದು ಕೊಳ್ಳುತ್ತಿದ್ದ ವಿದ್ಯಾರ್ಥಿಗಳು ಶ್ರೀ ಅವರ ಕವಿತೆಗಳ ಪ್ರಭಾವಕ್ಕೆ ಒಳಗಾದರು. ದಕ್ಷಿಣ ಕನ್ನಡದಲ್ಲಿ ಪಂಜೆ ಮಂಗೇಶರಾಯರು, ಮಂಜೇಶ್ವರ ಗೋವಿಂದ ಪೈಗಳು, ಉತ್ತರ ಕರ್ನಾಟಕದಲ್ಲಿ ವಚನ ಪಿತಾಮಹ ಶ್ರೀ ಫ.ಗು. ಹಳಕಟ್ಟಿ ಅವರು ಆಧುನಿಕ ಕನ್ನಡ ಗೀತ, ಗದ್ಯ ರಚನೆಯಲ್ಲಿ ತೊಡಗಿದರು. ೨೦ನೇ ಶತಮಾನದ ಆದಿಯಲ್ಲಿ ಬಂದ ಅನುವಾದ ಸಾಹಿತ್ಯ-ಬಂಗಾಳಿಯಿಂದ ಕೆರೂರು ವಾಸುದೇವಾಚಾರ್ಯರು, ಮರಾಠಿಯಿಂದ ಗಳಗನಾಥರು ಮುಂತಾದವರು ಓದುಗರಲ್ಲಿ ಆಸಕ್ತಿ ಹುಟ್ಟುವಂತೆ ಅನುವಾದ ಸಾಹಿತ್ಯ ರಚಿಸಿ ಹೆಸರಾಗಿದ್ದರು. ಕನ್ನಡದ ಸ್ವತಂತ್ರ ಕಾದಂಬರಿಗಳೆಂದು ಗುರುತಿಸಲಾಗಿರುವ, ಬೋಳಾರ ಬಾಬೂರಾಯರ "ವಾಗ್ದೇವಿ", ಗುಲ್ವಾಡಿ ವೆಂಕಟರಾಯರ "ಇಂದಿರಾ", ಎಂ.ಎಸ್. ಪುಟ್ಟಣ್ಣನವರ "ಮಾಡಿದ್ದುಣ್ಣೊ ಮಹಾರಾಯ" ಮುಂತಾದ ಸಮಕಾಲೀನ ಸಮಸ್ಯೆಗಳನ್ನು ವಸ್ತುವಾಗಿಸಿ ರಚಿಸಿದ ಕಾದಂಬರಿಗಳು ಜನಪ್ರಿಯತೆ ಗಳಿಸಿದ್ದವು. ಆ ಕಾಲದಲ್ಲಿ ಕನ್ನಡದಲ್ಲಿ ಪ್ರಸಿದ್ಧರಾದ ತಳುಕಿನ ವೆಂಕಣ್ಣಯ್ಯನವರು, ಎ.ಆರ್. ಕೃಷ್ಣಶಾಸ್ತ್ರಿಗಳು ತಾವೂ ಸಾಹಿತ್ಯ ರಚಿಸುವುದರ ಜೊತೆಗೆ ಅನೇಕ ಯುವ ಶಿಷ್ಯರನ್ನು ಹುರಿದುಂಬಿಸಿ, ಕವಿತೆ, ಸಣ್ಣಕಥೆ, ಪ್ರಬಂಧಗಳನ್ನು ಬರೆಸಿದರು. ಇದೇ ಸಂದರ್ಭದಲ್ಲಿ ಮಲೆನಾಡಿನ ಮೂಲೆ ಕುಪ್ಪಳ್ಳಿಯಲ್ಲಿಂದ ಬಂದ ಪುಟ್ಟಪ್ಪ ತರುಣ ಕವಿಯಾಗಿ ಹೊಮ್ಮಿದರು. ಶಿವಮೊಗ್ಗ ಮತ್ತು ಮೈಸೂರು ವಿದ್ಯಾರ್ಥಿ ಜೀವನದಲ್ಲಿ ಕವಿತೆ ರಚಿಸುತ್ತಾ ವಾಚಿಸುತ್ತಾ ಗಮನ ಸೆಳೆದರು. ತೀ.ನಂ. ಶ್ರೀಕಂಠಯ್ಯ, ವಿ. ಸೀತಾರಾಮಯ್ಯ ಮುಂತಾದವರ ಕವನಗಳು ಪ್ರಕಟವಾದವು. ಧಾರವಾಡದಲ್ಲಿ ಗೆಳೆಯರ ಗುಂಪು, ಆ ಭಾಗದ ಸಾಹಿತ್ಯ ರಚನೆಗೆ ವೇದಿಕೆಯಾಗಿ ಕನ್ನಡ ಭಾಷೆಯ ಉತ್ಕರ್ಷಕ್ಕೆ ಕಾರಣವಾಯಿತು. ದ.ರಾ. ಬೇಂದ್ರೆ, ವಿ.ಕೃ. ಗೋಕಾಕ್, ರಂ.ಶ್ರೀ. ಮುಗಳಿ, ಬೆಟಗೇರಿ ಕೃಷ್ಣಶರ್ಮ (ಆನಂದಕಂದ), ಶಂ.ಬಾ. ಜೋಶಿ ಹಲಸಂಗಿ ಗೆಳೆಯರು ಮಧುರ ಚೆನ್ನರ ನೇತೃತ್ವದಲ್ಲಿ ಕನ್ನಡ ಸಾಹಿತ್ಯ ರಚನೆಯಲ್ಲಿ ತೊಡಗಿದರು.

ಕನ್ನಡ ಭಾಷೆ ಮತ್ತು ಸಾಹಿತ್ಯದ ಸರ್ವತೋಮುಖ ಅಭಿವೃದ್ಧಿ, ಕನ್ನಡ ಏಕೀಕರಣದಿಂದ ಮಾತ್ರ ಸಾಧ್ಯವೆಂಬ ಭಾವನೆ ಜನರಲ್ಲಿ ಮೊಳೆಯತೊಡಗಿತು. ಕನ್ನಡ ನಾಡಿನ ಏಕೀಕರಣ ಮತ್ತು ಕನ್ನಡ ಭಾಷೆಯ ಉನ್ನತಿಯನ್ನು ಉದ್ದೇಶವಾಗಿಟ್ಟುಕೊಂಡು ದಿನಾಂಕ ೫-೫-೧೯೧೫ ರಂದು ಬೆಂಗಳೂರಿನಲ್ಲಿ ಅಂದಿನ ಆಳುವ ಮಹಾರಾಜರ ಮತ್ತು ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರ ಸಹಕಾರದಿಂದ ಕರ್ನಾಟಕ

ಸಾಹಿತ್ಯ ಪರಿಷತ್ತು ಸ್ಥಾಪನೆಯಾಯಿತು. ಎಂಟು ಜಿಲ್ಲೆಗಳಿಗೆ ಸೀಮಿತವಾಗಿದ್ದ ಮೈಸೂರು ರಾಜ್ಯದ ಅಂದಿನ ಪ್ರಗತಿಪರ ಚಿಂತಕರಿಂದ 'ಮಾದರಿ ಮೈಸೂರು' ಎಂದು ಹೆಸರಾಗಿತ್ತು. ಕರ್ನಾಟಕದ ಬಹುಪಾಲು ಕನ್ನಡ ಪ್ರದೇಶಗಳು ಬ್ರಿಟೀಷರ ಆಡಳಿತಕ್ಕೆ ಅನುಕೂಲವಾಗುವಂತೆ, ಬೇರ ಬೇರೆ ಪ್ರಾಂತ್ಯಗಳಲ್ಲಿ ಸೇರಿಹೋಗಿದ್ದವು. ಮದರಾಸ್, ಬೊಂಬಾಯಿ, ಮುಂತಾದ ಪ್ರದೇಶಗಳಲ್ಲಿ ಅಲ್ಲದೆ ಹೈದರಾಬಾದ್, ಕೊಡಗು, ಸೊಂಡೂರು, ಸವಣೂರು, ಜಮಖಂಡಿ, ರಾಮದುರ್ಗ ಮುಂತಾದ ಸಂಸ್ಥಾನಗಳಲ್ಲಿ ಅನ್ಯಭಾಷೆಯ ಆಡಳಿತಗಾರರ ನಡುವೆ ಸಿಕ್ಕು ಕನ್ನಡ ನಲುಗುತ್ತಿತ್ತು. ವಿವಿಧ ಪ್ರಾಂತ್ಯಗಳ ಆಡುಭಾಷೆಯಲ್ಲಿ ಅನ್ಯಭಾಷೆಯ ಶಬ್ದಗಳು ಸೇರಿ ಕನ್ನಡ ಭಾಷೆ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಸ್ಥಿತಿ ತಲುಪಿತ್ತು. ಆಡುವ ಭಾಷೆಯಂತೆ ಲಿಖಿತ ಕನ್ನಡ ಭಾಷೆಯೂ ವಿವಿಧ ರೂಪ, ಆಯಾಮಗಳನ್ನು ಪಡೆಯಿತು.

ಈ ಹಂತದಲ್ಲಿ ಕನ್ನಡ ಭಾಷೆಯನ್ನು ಒಂದುಗೂಡಿಸುವ ಏಕರೀತಿಯ ಏಕರೂಪದ ಲಿಖಿತ ಭಾಷೆಯನ್ನು ರೂಪಿಸುವ ಗುರುತರವಾದ ಹೊಣೆಯನ್ನು ಹೊತ್ತು ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪಿತವಾಗಿ ಕ್ರಿಯಾಶೀಲವಾಗಿ ಕಾರ್ಯಪ್ರವೃತ್ತವಾಯಿತು. ಅಂದಿನ ಕನ್ನಡ ವಿದ್ವಾಂಸರು ಅಹರ್ನಿಶಿ ಇದಕ್ಕಾಗಿ ದುಡಿದರು. ಬೇರೆ ಬೇರೆ ಪ್ರಾಂತ್ಯಗಳ ಕನ್ನಡ ಭಾಷೆಯ ಪ್ರಾದೇಶಿಕತೆಯನ್ನು ಕಾಪಾಡುತ್ತಲೇ ಇದಕ್ಕಾಗಿ ಬೇರೆ ಬೇರೆ ಪ್ರಾಂತ್ಯಗಳ ಕನ್ನಡ ಭಾಷಾತಜ್ಞರ ನೆರವು ಪಡೆದರು. ಗ್ರಾಂಥಿಕ ಭಾಷೆಯನ್ನು ಏಕರೂಪಕ್ಕೆ ತರಲು ಪರಸ್ಪರ ಸೌಹಾರ್ದದಿಂದ ಐಕಮತ್ಯದಿಂದ ನಿಶ್ಚಯಿಸಿದರು. ಅನೇಕ ಅನ್ಯಭಾಷೆಗಳ ಶಬ್ದಗಳನ್ನು ತಮ್ಮವನ್ನಾಗಿಸಿಕೊಳ್ಳುವ ಅನಿವಾರ್ಯತೆಯನ್ನು ಸಮರ್ಥವಾಗಿ ಎದುರಿಸಿದರು. ಹೊಸ ಹೊಸ ಪಾರಿಭಾಷಿಕ ಶಬ್ದಗಳನ್ನು ನಿರ್ಧರಿಸಿ ಕನ್ನಡ ಶಾಸ್ತ್ರ ಗ್ರಂಥಗಳನ್ನು ರೂಪಿಸಿದರು. ಕನ್ನಡ ಮಾತನಾಡುವ ಜನರಿಗೆ ವ್ಯವಹಾರ ಜ್ಞಾನ ಸುಲಭವಾಗುವಂತೆ ಪುಸ್ತಕಗಳನ್ನು ಬರೆಯಿಸಿ ಪ್ರಚಾರ ಮಾಡಿದರು. ವ್ಯಾಪಕವಾದ ಚರ್ಚೆ ನಡೆಸಿ ಸೂಕ್ತ ತಿದ್ದುಪಡಿಗಳನ್ನು ಸರ್ವಾನುಮತದಿಂದ ಜಾರಿಗೆ ತಂದರು.

ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳು ದಕ್ಷಿಣ ಮಹಾರಾಷ್ಟ್ರವೆಂಬ ಹೆಸರಿನಲ್ಲಿ ಮರಾಠಿ ಭಾಷೆಯ ತುಳಿತಕ್ಕೆ ಒಳಗಾಗಿದ್ದವು. ಧಾರವಾಡ, ಬೆಳಗಾವಿ, ಬಿಜಾಪುರ, ಬೀದರ್, ಗುಲಬರ್ಗಾ ಮುಂತಾದವು ಉರ್ದು ಭಾಷೆಯ ಪ್ರಾಬಲ್ಯದಿಂದ ಕೂಡಿದ್ದವು. ಅಲ್ಲಿನ ಆಡಳಿತ ಭಾಷೆಯೂ ಕ್ರಮವಾಗಿ ಮರಾಠಿ, ಉರ್ದು ಆಗಿದ್ದವು. ಮದ್ರಾಸ್ ಸರ್ಕಾರದ ಆಳ್ವಿಕೆಗೆ ಒಳಪಟ್ಟಿದ್ದರೂ ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳು ಮಾತ್ರ ಮದ್ರಾಸ್‌ನಿಂದ ಬಹಳ ದೂರವಿದ್ದು, ಅಷ್ಟಾಗಿ ತಮಿಳು ಪ್ರಭಾವಕ್ಕೆ ಒಳಗಾಗಲಿಲ್ಲ. ಸ್ಥಳೀಯ ತುಳು, ಕೊಂಕಣಿ ಆಡುಭಾಷೆಗಳಾಗಿದ್ದವು. ಕನ್ನಡ ಕೇವಲ ಲಿಖಿತ ಗ್ರಂಥಸ್ಥ ಭಾಷೆಯಾಗಿತ್ತು. ಇನ್ನು ಕೋಲಾರ, ಬೆಂಗಳೂರು ಜಿಲ್ಲೆಗಳು ವಲಸೆ ತಮಿಳರಿಂದಾಗಿ ತಮಿಳು ಭಾಷಾಮಯವಾಗಿದ್ದವು.

೧೮೯೫ರಲ್ಲಿ ಅಂದಿನ ಕೆಲವು ಕನ್ನಡ ಭಾಷಾ ಅಭಿಮಾನಿಗಳು, ವಿದ್ವಾಂಸರು, ಮರಾಠಿಯನ್ನು ತಡೆಗಟ್ಟಿ ಕನ್ನಡ ಭಾಷೆ ಅಭಿವೃದ್ಧಿಗಾಗಿ ಕರ್ನಾಟಕ ವಿದ್ಯಾವರ್ಧಕ ಸಂಸ್ಥೆಯನ್ನು ಹುಟ್ಟುಹಾಕಿದ್ದಲ್ಲದೆ ಕರ್ನಾಟಕ ಏಕೀಕರಣ ಚಳುವಳಿಗೂ ನಾಂದಿ ಹಾಡಿದರು.

ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ ಮತ್ತು ಕನ್ನಡ ಸಾಹಿತ್ಯ ಪರಿಷತ್ ರಚನೆಯಿಂದಾಗಿ ಕನ್ನಡ ನಾಡಿನಾದ್ಯಂತ ಒಂದು ರೀತಿಯ ಸಂಚಲನೆ ಉಂಟಾಯಿತು. ಕನ್ನಡ ಭಾಷೆಯ ಕುರಿತು ಜನಸಾಮಾನ್ಯರಲ್ಲಿ ಅದರಲ್ಲಿಯೂ ವಿದ್ಯಾರ್ಥಿಗಳಲ್ಲಿ, ಯುವಕರಲ್ಲಿ ಕನ್ನಡ ಸಾಹಿತ್ಯ ರಚಿಸುವ, ಓದುವ ಉತ್ಸಾಹ ಮೂಡಿಬಂದಿತು. ಕನ್ನಡದ ಅಭ್ಯುದಯಕ್ಕಾಗಿ ಸಂಘ ಸಂಸ್ಥೆಗಳನ್ನು ಕಟ್ಟುವ ಅಭಿಲಾಷೆ ಮೂಡಿಬಂದಿತು.

ಕರ್ನಾಟಕದ ಹಳೆ ಮೈಸೂರಿನ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಕನ್ನಡ ಭಾಷೆಯನ್ನು ಆಡುವ ಎಲ್ಲ ಪ್ರದೇಶಗಳಲ್ಲಿ ೧೯೨೫ರಿಂದ 'ಕರ್ನಾಟಕ ಸಂಘ'ಗಳನ್ನು ಸ್ಥಾಪಿಸಿ ತನ್ಮೂಲಕ ಕನ್ನಡ ಭಾಷೆಯನ್ನು ಬೆಳೆಸುವ ಕರ್ನಾಟಕ ಏಕೀಕರಣಕ್ಕಾಗಿ ಹೋರಾಡುವ ವೇದಿಕೆಯನ್ನಾಗಿಸುತ್ತಾ ಕನ್ನಡ ಸಾಹಿತ್ಯವನ್ನು ಬೆಳಕಿಗೆ ತರುವ ಕೆಲಸ ಪ್ರಾರಂಭವಾಯಿತು. ಈ ಅವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸಹ ತನ್ನ ಮೂಲ ಉದ್ದೇಶಗಳಿಗೆ ಅನುಗುಣವಾಗಿ ತನ್ನ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಾ ಬಂದಿತು. ಆಡಳಿತಾತ್ಮಕ ಕನ್ನಡ ಭಾಷೆಯ ಜೊತೆಗೆ ಪ್ರಾಚೀನ ಗ್ರಂಥಗಳ ಸಂಪಾದನೆ ಪತ್ರಿಕಾ ಭಾಷೆಯ ಪರಿಷ್ಕರಣೆ ಮತ್ತು ವಾರ್ಷಿಕ ಸಮ್ಮೇಳನಗಳನ್ನು ನಡೆಸುತ್ತಾ ಜನಸಾಮಾನ್ಯರ ಹೃದಯದಲ್ಲಿ ಕನ್ನಡದ ಬಗ್ಗೆ ಪ್ರೀತಿ ಬೆಳೆಸುವ ಅಭಿಮಾನ ಮೂಡಿಸುವ ಕಾರ್ಯ ನಡೆಸುತ್ತಾ ಬಂದಿತು. ಬಹು ಭಾಷಾ ಪಂಡಿತರೂ, ವಿದ್ವಾಂಸರೂ ಸರ್ಕಾರದ ಉನ್ನತ ಅಧಿಕಾರಿಗಳು ಪರಿಷತ್ತಿನ ಬಳಿಗೆ ಬರುವಂತಾಯಿತು.

> ಸಾಹಿತ್ಯ ಪಂಚಾಮೃತವಾಗಿಯಾದರೂ ಇರಲಿ,
> ಸಾಹಿತ್ಯ ಪಂಚಗವ್ಯವಾಗಿಯಾದರೂ ಇರಲಿ,
> ಸಾಹಿತ್ಯ ಪಂಚಕಜ್ಜಾಯವಾಗಿಯಾದರೂ ಇರಲಿ

ಈ ಮೂರರಲ್ಲೊಂದಲ್ಲದೆ ಸಾಹಿತ್ಯ ಉದಾತ್ತವೆನಿಸದು ಎಂದಿದ್ದಾರೆ. ಪ್ರೊ|| ಎಸ್.ವಿ. ಪರಮೇಶ್ವರ ಭಟ್ಟರು ತಮ್ಮದೊಂದು ಆಧುನಿಕ ವಚನದಲ್ಲಿ ಅವರ ವಚನಾಂಕಿತ 'ಸದಾಶಿವ ಗುರು' ಕಳೆದ ಶತಮಾನಗಳ ಹಿರಿಯರು ಸಾಹಿತ್ಯ ಸಾಗರದೊಳು ಹೊಸ ಹೊಸ ಭೂಖಂಡಗಳ ಅರಸಿ ಹೊರಟ ಧೀಮಂತರು. ಈಗ ಅವರ ನೆರಳೊಳು ಸಿರಿಬೀಡುಗಳ ಕಟ್ಟಿ, ವಾಣಿಜ್ಯೋದ್ಯಮಗಳ ಕೈಗೊಂಡ ಸಾಹಿತ್ಯದ ಹರದರು ನಾವು ಎನ್ನುತ್ತಾರೆ. ನಾವು ಸತ್ತರೂ ನಮ್ಮ ಕೃತಿಗೆ ಸಾವಿರದು. ನಾವು ಬಡವರು. ಆದರೆ ನಮ್ಮ ಕೃತಿಗೆ ಸಿರಿತನವಳಿಯದು, ನಮ್ಮ ಕೃತಿ ನಮಗಿಂತ ಹಿರಿಯದು ಎಂದು ಭಟ್ಟರು

ಸಾಹಿತ್ಯದ ಉನ್ನತಿಯನ್ನು ತಮ್ಮ ಶಿಷ್ಯರಿಗೆ ಬೋಧಿಸಿ ಮುಂದಿನ ಪೀಳಿಗೆಯನ್ನು ಸಾಹಿತ್ಯ ಸೇವೆಗೆ ಅಣಿಗೊಳಿಸಿದ್ದಾರೆ.

ಹೊಸ ಪೀಳಿಗೆಯ ಅನೇಕ ವಿದ್ಯಾವಂತರು ಕನ್ನಡ ಸಾಹಿತ್ಯದಲ್ಲಿ ಆಸಕ್ತಿ ಬೆಳೆಸಿಕೊಂಡು ಆಗ ವಿರಳವಾಗಿ ಪ್ರಕಟವಾಗುತ್ತಿದ್ದ ಗ್ರಂಥಗಳನ್ನು ಕೊಂಡು ಓದುವುದು, ಚರ್ಚಿಸುವುದು ಮತ್ತು ವಿಮರ್ಶಿಸುವ ಚಟುವಟಿಕೆಗಳಲ್ಲಿ ತೊಡಗಿದರು. ೧೯೩೦ರ ಸುಮಾರಿನಲ್ಲಿ ಶಿವಮೊಗ್ಗೆಯ ಜನಸಂಖ್ಯೆ ಸುಮಾರು ೩೦ ರಿಂದ ೩೫ ಸಾವಿರ ಇದ್ದಿರಬಹುದು. ಊರಿನ ವಿಸ್ತಾರವೂ ಅಷ್ಟೇ. ಬಿ.ಹೆಚ್. ರಸ್ತೆ, ಸೀಗೆಹಟ್ಟಿ, ಸಿದ್ಧಯ್ಯ ರಸ್ತೆ, ದೊಡ್ಡ ಬ್ರಾಹ್ಮಣರ ಬೀದಿ, ಚಿಕ್ಕ ಬ್ರಾಹ್ಮಣರ ಬೀದಿ, ಈಗಿನ ಗಾಂಧಿ ಬಜಾರ್ ಆಗಿನ ಪ್ರಮುಖ ವಾಣಿಜ್ಯ ಕೇಂದ್ರ. ಈಗಿನ ನೆಹರೂ ರಸ್ತೆ ಆರಂಭದಲ್ಲಿರುವ ಶಿವಪ್ಪ ನಾಯಕ ಮಾರುಕಟ್ಟೆ ಅಂದಿನ ಖಾಸಗಿ ನಿಲ್ದಾಣ ದುರ್ಗಿಗುಡಿ ಬಡಾವಣೆಯಲ್ಲಿ ಜೈಲು, ಅಲ್ಲಲ್ಲಿ ವಿರಳವಾಗಿ ಮನೆಗಳು, ರೈಲು ನಿಲ್ದಾಣ ತುಂಗೆಯ ಆಚೆಯ ದಡಕ್ಕೆ ಸೀಮಿತವಾಗಿತ್ತು. ಪ್ರಾಯಶಃ ವಿದ್ಯುತ್‌ನಲ್ಲಿ ನೀರು, ಕಾರು, ಬಸ್ಸುಗಳು ಆಗತಾನೆ ಓಡಾಟ ಪ್ರಾರಂಭಿಸಬಹುದಾಗಿದ್ದ ಕಾಲ. ಬಿದನೂರು ನಾಯಕರ ಕಾಲದಲ್ಲೇ ಪ್ರಮುಖ ನಗರವಾಗಿದ್ದ ಶಿವಮೊಗ್ಗ, ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಜಿಲ್ಲಾ ಕೇಂದ್ರವಾಯಿತು. ಈಗ ಸುಮಾರು ೧೫೦ ವರ್ಷಗಳ ಇತಿಹಾಸವಿರುವ ಪ್ರೌಢಶಾಲೆ ಮತ್ತು ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಶಿವಮೊಗ್ಗದಲ್ಲಿ ನೆಲೆಗೊಂಡ ಮಲೆನಾಡಿನ ಪ್ರಮುಖ ಆರ್ಥಿಕ ಬೆಳೆಯಾದ ಅಡಿಕೆ ವಹಿವಾಟಿನಿಂದಾಗಿ ಪ್ರಾಮುಖ್ಯತೆ ಪಡೆದಿತ್ತು. ಸರ್ಕಾರಿ ಕಛೇರಿಗಳು, ನ್ಯಾಯಾಲಯಗಳು (ಆಗಿನಕಾಲಕ್ಕೆ ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೂ ಸೇರಿ ಶಿವಮೊಗ್ಗದಲ್ಲಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವಿದ್ದಿತು.) ಜಿಲ್ಲಾ ಕೇಂದ್ರವೂ, ವ್ಯಾಪಾರ ಕೇಂದ್ರವೂ ಆಗಿದ್ದ ಶಿವಮೊಗ್ಗದಲ್ಲಿ ಸಹಜವಾಗಿ ವಿದ್ಯಾವಂತರೂ ಅಧಿಕಾರಿಗಳು, ವಕೀಲರು ನೆಲಸುವಂತಾಗಿದ್ದು ಸಹಜವಾಗಿತ್ತು. ಇದೇ ಸಮಯದಲ್ಲಿ ದೇಶಾದ್ಯಂತ ಬೀಸುತ್ತಿದ್ದ ಸ್ವಾತಂತ್ರ್ಯ ಚಳುವಳಿ, ಕರ್ನಾಟಕ ಏಕೀಕರಣ ಚಳುವಳಿ, ರೇಡಿಯೋ ಮೂಲಕ ವಿಶ್ವದ ಮೂಲೆ ಮೂಲೆಗಳನ್ನು ಮುಟ್ಟುತ್ತಿದ್ದ ಸುದ್ದಿಗಳು, ಮೊದಲ ಮಹಾಯುದ್ಧದ ಪರಿಣಾಮಗಳು ಜನರ ಮೇಲೆ ಆಗುತ್ತಿತ್ತು. ವೃತ್ತ ಪತ್ರಿಕೆಗಳನ್ನು ಓದುವ ಜೊತೆಗೆ ಹೊಸದಾಗಿ ಪ್ರಕಟವಾಗುತ್ತಿದ್ದ ಆಧುನಿಕ ಭಾಷಾ ಸಾಹಿತ್ಯ, ಆಂಗ್ಲ ಸಾಹಿತ್ಯಗಳು ಜನರನ್ನು ಆಕರ್ಷಿಸಿ ಕನ್ನಡ ನವೋದಯಕ್ಕೆ ನಾಂದಿ ಹಾಡಿದವು. ೮.೧೧.೧೯೩೦ರಂದು ಶಿವಮೊಗ್ಗ ನಗರದಲ್ಲಿ ಕರ್ನಾಟಕ ಸಂಘವು ಸ್ಥಾಪಿತವಾಗಿ ಜಿಲ್ಲೆಯಾದ್ಯಂತ ಕನ್ನಡ ಸೇವೆಯಲ್ಲಿ ತೊಡಗಿತು.

ವಿಳಾಸ:

ನಂ. ೮೭, 'ಶಾಂತಲಾ', ಕುವೆಂಪು ರಸ್ತೆ, ಶಿವಮೊಗ್ಗ-೫೭೭೨೦೧

□□

ಕಾರ್ಯಕ್ರಮಗಳು

ಲಭ್ಯವಿರುವ ಆಹ್ವಾನ ಪತ್ರಿಕೆಗಳ ಮಾಹಿತಿ ಪ್ರಕಾರ

೨೮-೧-೭೮	'ಬ್ರಿಟನ್ನಿನಲ್ಲಿ ಸಾಮಾಜಿಕ ಜೀವನ' ಉಪನ್ಯಾಸ- ಶ್ರೀ ಮತ್ತೂರು ಕೃಷ್ಣಮೂರ್ತಿ, ಅಧ್ಯಕ್ಷತೆ- ಟಿ. ವೆಂಕಟರಾಮಶಾಸ್ತ್ರಿ
೩೦-೪-೭೮	'ತಿಮ್ಮನ ನುಡಿಗಳು' ಪುಸ್ತಕ ಪರಿಚಯ- ಡಾ|| ಎ.ಎಸ್. ವೇಣುಗೋಪಾಲರಾವ್ (ಲೇಖಕರು ಟಿ. ವೆಂಕಟರಾಮಶಾಸ್ತ್ರಿ)
೧೯-೮-೭೮	ಸನ್ಮಾನ ಸಮಾರಂಭ- ಡಾ|| ವಿ. ಸೀತಾರಾಮಯ್ಯ ಅವರಿಗೆ- ಅಭಿನಂದನೆ- ಪ್ರೊ|| ಎಸ್. ಪಂಚಾಕ್ಷರಿ, ಅಧ್ಯಕ್ಷತೆ- ಡಾ|| ಹಂಪನಾ
೯-೧೨-೭೮	ಡಿ.ವಿ.ಜಿ. ಭಾವಚಿತ್ರ ಅನಾವರಣ ಜೀವನ-ದರ್ಶನ ಉಪನ್ಯಾಸ, ಉಪನ್ಯಾಸ- ಶ್ರೀ ಇ.ಆರ್. ಸೇತುರಾಮ್, ಕಾವ್ಯವಾಚನ- ಕಗ್ಗ- ಶ್ರೀ ಹೊಸಬಾಳೆ ಸಿತಾರಾಮರಾವ್, ಉಪನ್ಯಾಸ- ಕಗ್ಗ- ಶ್ರೀ ಬ್ರಹ್ಮ ಚೈತನ್ಯ, ವಿಚಾರಗೋಷ್ಠಿ- ಅಧ್ಯಕ್ಷತೆ- ಶ್ರೀ ಕು.ಶಿ. ಹರಿದಾಸಭಟ್ಟ, ಉಪನ್ಯಾಸ- ಶ್ರೀ ಶ್ರೀನಿವಾಸ ಉಡುಪ, ಡಾ|| ತೀ.ನಂ. ಶಂಕರನಾರಾಯಣ, ಪ್ರೊ|| ಗುಂಡ್ಮಿ ಚಂದ್ರಶೇಖರ ಐತಾಳ, ಶ್ರೀ ಕೆ.ವಿ. ಸುಬ್ಬಣ್ಣ
೧೨-೫-೭೯	ಸನ್ಮಾನ ಸಮಾರಂಭ- ಶ್ರೀ ಶಿವಮೊಗ್ಗ ಸುಬ್ಬಣ್ಣ ಮತ್ತು ಶ್ರೀ ಕೆ.ಜಿ. ಸುಬ್ರಹ್ಮಣ್ಯ ಅವರಿಗೆ, ಅಧ್ಯಕ್ಷತೆ- ಶ್ರೀ ವಿಠಲರೈ ಎ.
೭-೮-೮೦	ವಿಶೇಷ ಉಪನ್ಯಾಸ- ಡಾ|| ಪು.ತಿ. ನರಸಿಂಹಾಚಾರ್ ಅವರಿಂದ
೧-೭-೮೦	ಉಪನ್ಯಾಸ- ಧ್ವನಿಮುದ್ರಿಕೆ ಬಿಡುಗಡೆ- ಶ್ರೀ ಜೋಳದ ರಾಶಿ ದೊಡ್ಡನ ಗೌಡರು, ಹಾಡಿದವರು- ಶ್ರೀ ಶಿವಮೊಗ್ಗ ಸುಬ್ಬಣ್ಣ
೧೧-೧-೮೧	ಡಾ|| ಬಿ.ಜಿ.ಎಲ್. ಸ್ವಾಮಿ ಸ್ಮರಣೆ- ಉಪನ್ಯಾಸ- ಶ್ರೀ ಎ.ಆರ್. ವಾಮನರಾವ್, ಅಧ್ಯಕ್ಷತೆ- ಶ್ರೀ ಡಿ.ಎನ್. ಸ್ವಾಮಿ
೧೧-೯-೮೨	ಉಪನ್ಯಾಸ- ಶ್ರೀಮತಿ ನಿರ್ಮಲ ವಿ. ಭಟ್, ಅಧ್ಯಕ್ಷತೆ- ಶ್ರೀಮತಿ ಕಮಲ ಮಂಜುನಾಥ್
೧೨-೯-೮೨	ಉಪನ್ಯಾಸ- ಶ್ರೀಮತಿ ವಿಜಯಾ ಶ್ರೀಧರ್, ಅಧ್ಯಕ್ಷತೆ- ಶ್ರೀಮತಿ ಶಂಕರ್
೧೯-೨-೮೪	ಕುವೆಂಪು ೮೦ನೇ ಜನ್ಮದಿನೋತ್ಸವ- ಮುಖ್ಯ ಅತಿಥಿ- ಡಾ|| ಲಕ್ಕಪ್ಪಗೌಡ ಅಧ್ಯಕ್ಷತೆ- ಶ್ರೀ ಭೂಪಾಳಂ ಚಂದ್ರಶೇಖರಯ್ಯ
೧೨/೧೩-೫-೮೪	ಟಿ.ಪಿ. ಕೈಲಾಸಂ ಮತ್ತು ಬಿ.ಎಂ.ಶ್ರೀ. ಜನ್ಮಶತಮಾನೋತ್ಸವ ಸಮಾರಂಭ
೧೩-೫-೮೪	(ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು ಸಂಯುಕ್ತಾಶ್ರಯದಲ್ಲಿ) ಉಪನ್ಯಾಸ- ಶ್ರೀಮತಿ ವಿಜಯಾ ಶ್ರೀಧರ್, ಶ್ರೀ ಟಿ. ಗಣಪತಿ, ಅಧ್ಯಕ್ಷತೆ- ಶ್ರೀ ಮಹಿಪಿ ನರಸಿಂಹಮೂರ್ತಿ .

•

೧೩-೫-೮೪ ಉದ್ಘಾಟನೆ- ಶ್ರೀ ಜಿ. ನಾರಾಯಣ, ಅಧ್ಯಕ್ಷತೆ- ಶ್ರೀ ನಿಟ್ಟೂರು ಶ್ರೀನಿವಾಸರಾವ್, ಉಪನ್ಯಾಸ- ಪ್ರೊ॥ ಎಸ್. ಅನಂತ ನಾರಾಯಣ, ಶ್ರೀ ಎಸ್.ಆರ್. ಮಾಳಗಿ, ಶ್ರೀ ಬಿ. ಕೃಷ್ಣಪ್ಪರೆಡ್ಡಿ

೫-೧೧-೮೮ ಕಾವ್ಯಕಮ್ಮಟ ಮತ್ತು ಸನ್ಮಾನ
ಕಾವ್ಯಕಮ್ಮಟ- ಅಧ್ಯಕ್ಷತೆ- ಡಾ॥ ಚನ್ನವೀರ ಕಣವಿ

೬-೧೧-೮೮ ಸನ್ಮಾನ- ಡಾ॥ ಚನ್ನವೀರ ಕಣವಿ / ಶ್ರೀಮತಿ ಶಾಂತಾದೇವಿ ಕಣವಿ ಅವರಿಗೆ, ಅಭಿನಂದನೆ- ಪ್ರೊ॥ ಎಸ್. ಪಂಚಾಕ್ಷರಿ ಶ್ರೀ ರಹಮತ್ ತರೀಕೆರೆ, ಅಧ್ಯಕ್ಷತೆ- ಡಾ॥ ಶಾಂತಿನಾಥ ದೇಸಾಯಿ

೧೩-೧೦-೮೯ ಸನ್ಮಾನ- ಶ್ರೀ ಮತ್ತೂರು ಕೃಷ್ಣಮೂರ್ತಿ ಅವರಿಗೆ, ಅಭಿನಂದನೆ- ಶ್ರೀ ಮಾರ್ಕಂಡೇಯ ಅವಧಾನಿ, ಅಧ್ಯಕ್ಷತೆ- ಡಾ॥ ಕೆ. ಶಿವರಾಮ ಕಾರಂತ

೩೧-೩-೯೦ ಉಪನ್ಯಾಸ- ಡಾ॥ ಕೆ. ಶಿವರಾಮ ಕಾರಂತ,

೧-೯-೯೦ ಸನ್ಮಾನ- ಶ್ರೀ ಜಿ.ಬಿ. ಜೋಶಿ (ಜಡಭರತ) ಅವರಿಗೆ- ಅಭಿನಂದನೆ- ಶ್ರೀ ಗಿರೀಶ್ ಕಾರ್ನಾಡ್, ಶ್ರೀ ಸುರೇಶ್ ಹೆಬ್ಳೀಕರ್, ಅಧ್ಯಕ್ಷತೆ- ಡಾ॥ ಶಾಂತಿನಾಥ ದೇಸಾಯಿ, ಪುಸ್ತಕ ಬಿಡುಗಡೆ- ಮುಖ್ಯ ಅತಿಥಿ- ಶ್ರೀ ವೈ.ಎನ್. ಕೃಷ್ಣಮೂರ್ತಿ

೧೦-೯-೯೧ ವಜ್ರಮಹೋತ್ಸವ ವರ್ಷದ ಉದ್ಘಾಟನೆ, ಉದ್ಘಾಟನೆ- ಶ್ರೀ ಕೆ.ವಿ. ಸುಬ್ಬಣ್ಣ, ಮುಖ್ಯ ಅತಿಥಿ- ಪ್ರೊ॥ ಜಿ.ಎಸ್. ಸಿದ್ಧಲಿಂಗಯ್ಯ, ಅಧ್ಯಕ್ಷತೆ- ಪ್ರೊ॥ ಗಜೇಂದ್ರಗಡ

೨೯-೧೦-೯೧ ಶಿವಮೊಗ್ಗ ನಗರ ಪ್ರದೇಶದ ಪ್ರಾಚೀನ ಸಾಂಸ್ಕೃತಿಕ ಕುರುಹುಗಳು -ಒಂದು ಅಧ್ಯಯನ, ಅಧ್ಯಕ್ಷತೆ- ಶ್ರೀ ಬಿ.ಎಸ್. ನಾಗರಾಜ, ಭಾಷಣ- ಡಾ॥ ಅ. ಸುಂದರ

೯-೧೧-೯೧ ಉಪನ್ಯಾಸ- "ಭಾರತ ಸಿಂಧುರಶ್ಮಿ" ಡಾ॥ ಎ.ಎಸ್. ವೇಣುಗೋಪಾಲರಾವ್

೧೭-೧೧-೯೧ ಗರ್ತಿಕೆರೆ ರಾಘವೇಂದ್ರರಾವ್ ಸನ್ಮಾನ- ಭಾವಗೀತೆ ಗಾಯನ

೨೩-೧೧-೯೧ "ಪರಿಸರದ ಕಥೆ" ಗ್ರಂಥ ಪರಿಚಯ- ಪ್ರೊ॥ ಎನ್. ಶ್ರೀನಿವಾಸ ಉಡುಪ

೩೦-೧೧-೯೧ ಕನ್ನಡ ರಾಜ್ಯೋತ್ಸವ- ಅಧ್ಯಕ್ಷತೆ- ಡಾ॥ ಹೆಚ್.ಜೆ. ಲಕ್ಕಪ್ಪಗೌಡ

೧೪-೧೨-೯೧ ಜಿಲ್ಲಾ ಮಟ್ಟದ ಅಂತರ ಕಾಲೇಜು ಯುವ ಕವಿಗೋಷ್ಠಿ- ಅಧ್ಯಕ್ಷತೆ- ಶ್ರೀ ಸತ್ಯನಾರಾಯಣರಾವ್ ಅಣತಿ

೨೧-೧೨-೯೧ "ಮನಸ್ಸು ಮತ್ತು ಸಮಾಜ" ಅಧ್ಯಕ್ಷತೆ- ಡಾ. ಹೆಚ್.ಡಿ. ಚಂದ್ರಪ್ಪಗೌಡ, ಉಪನ್ಯಾಸ- ಡಾ. ಸಿ.ಆರ್. ಚಂದ್ರಶೇಖರ್, ಡಾ. ಕಿಶೋರ್ ಕುಮಾರ್, ಡಾ. ಕೆ. ನಾಗರಾಜ್, ಡಾ. ಜಿ.ಎಸ್. ಪಾಲಾಕ್ಷ

* * *

೫-೧-೯೨ ಮಾಸ್ತಿ ಜನ್ಮ ಶತಮಾನೋತ್ಸವ- ಉದ್ಘಾಟನೆ- ಪ್ರೊ॥ ಜಂಪಾ, ಅಧ್ಯಕ್ಷತೆ- ಡಾ॥ ಎಸ್. ಅನಂತನಾರಾಯಣ

ಗೋಷ್ಠಿ-೧ ಅಧ್ಯಕ್ಷತೆ- ಶ್ರೀ ಜಿ.ಎಸ್. ಆಮೂರ, ಉಪನ್ಯಾಸ- ಪ್ರಭುಸ್ವಾಮಿ, ಶ್ರೀ ಬಸವರಾಜ ಕಲ್ಗುಡಿ

ಗೋಷ್ಠಿ-೨ ಅಧ್ಯಕ್ಷತೆ- ಕೆ. ನರಸಿಂಹಮೂರ್ತಿ, ಉಪನ್ಯಾಸ- ಶ್ರೀಮತಿ ಉಷಾ, ಶ್ರೀ ಪಟ್ಟಾಭಿರಾಮ ಸೋಮಯಾಜಿ, ಸಮಾರೋಪ ಸಮಾರಂಭ ಅಧ್ಯಕ್ಷತೆ- ಪ್ರೊ॥ ಎಲ್.ಎಸ್. ಶೇಷಗಿರಿರಾವ್, ಸಮಾರೋಪ- ಶ್ರೀ ಎಂ.ಹೆಚ್. ಕೃಷ್ಣಯ್ಯ

೧೮-೧-೯೨ "ನಾ ಕಂಡ ಮಲೆನಾಡು" ಪುಸ್ತಕ ಬಿಡುಗಡೆ, ಅಧ್ಯಕ್ಷತೆ- ಶ್ರೀ ರಾಮಾಜೋಯಿಸ್, ಪುಸ್ತಕ ಬಿಡುಗಡೆ- ನಾಗೇಗೌಡ, ಉಪಸ್ಥಿತ- ಡಾ॥ ಪ್ರಭುಶಂಕರ, ಲೇಖಕರು- ಶ್ರೀ ಎಂ.ಎಸ್. ಪುಟ್ಟಣ್ಣಯ್ಯ

೧೯-೧-೯೨ ಮೈಸೂರಿನಲ್ಲಿ ಕುವೆಂಪು, ಎಸ್.ವಿ.ಪಿ.ಗೆ ಗೌರವ ಸದಸ್ಯತ್ವ ಪ್ರದಾನ

೨೫-೧-೯೨ ಕುವೆಂಪು, ಎಸ್‌ವಿಪಿ ಸಾಹಿತ್ಯ ಪರಿಚಯ, ಅಧ್ಯಕ್ಷತೆ- ಡಾ॥ ಸುಜನಾ, ಉಪನ್ಯಾಸ- ಡಾ॥ ತೀ.ನಂ. ಶಂಕರನಾರಾಯಣ, ಪ್ರೊ॥ ಎ.ವಿ. ನಾವಡ

೮-೨-೯೨ ಸಾಹಿತ್ಯ ಪರಿಚಯ- "ಚಿದಂಬರ ರಹಸ್ಯ" ಪ್ರೊ॥ ಎಂ.ಬಿ. ನಟರಾಜ್, ಥಿಂಗ್ಸ್ ಫಾಲ್ ಅಪಾರ್ಟ್ -ಪ್ರೊ॥ ಟಿ.ವಿ. ಹೆಗಡೆ

೨೯-೨-೯೨ ಜನಪದ ಹಾಡುಗಾರಿಕೆ- ಬಾಳಪ್ಪ ಹುಕ್ಕೇರಿ

೧೪-೩-೯೨ ಎ.ಆರ್. ಕೃಷ್ಣಶಾಸ್ತ್ರಿ ಜನ್ಮಶತಾಬ್ದಿ- ಅಧ್ಯಕ್ಷತೆ- ಡಾ॥ ಜಿ.ಎಸ್. ಶಿವರುದ್ರಪ್ಪ, ಉಪನ್ಯಾಸ- ಶ್ರೀ ಎ.ಆರ್. ವಾಮನರಾವ್, ಶ್ರೀ ನೊ.ಸಂ. ತಿಮ್ಮೇಗೌಡ, ಶ್ರೀ ಪಿ.ಎಸ್. ಅಡಿಗ, ಶ್ರೀ ವಿ. ಕೃಷ್ಣಶೆಟ್ಟಿ

೨೮-೩-೯೨ ಶಂಬಾ ಮತ್ತು ಗೊರೂರು ಭಾವಚಿತ್ರ ಅನಾವರಣ- ಡಾ॥ ಎಂ. ಚಿದಾನಂದಮೂರ್ತಿ, ಡಾ॥ ಮಲ್ಲೇಪುರಂ ಜಿ. ವೆಂಕಟೇಶ, ಡಾ॥ ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ

೨೯-೩-೯೨ ದತ್ತಿ ಉಪನ್ಯಾಸ ಮತ್ತು ಗಮಕ

೧೩-೪-೯೨ ಶ್ರದ್ಧಾಂಜಲಿ- ಕಡಿದಾಳ್ ಕುರಿತು- ಶ್ರೀ ಡಿ.ಪಿ. ವಡೆಯರ್, ನಿರಂಜನ ಕುರಿತು- ಡಾ॥ ಕಾಳೇಗೌಡ ನಾಗವಾರ, ನಾಡಿಗೇರ ಕೃಷ್ಣರಾವ್ ಕುರಿತು- ಪ್ರೊ॥ ಎಂ.ಬಿ. ನಟರಾಜ್

೬,೭ ಮತ್ತು ೮.೫.೯೨ - ಗುಬ್ಬಿ ವೀರಣ್ಣ ಜನ್ಮಶತಮಾನೋತ್ಸವ- ನಾಟಕೋತ್ಸವ- ಐ.ಎಂ.ಎ. ಹಾಲ್‌ನಲ್ಲಿ

೯-೫-೯೨ ಗುಬ್ಬಿ ವೀರಣ್ಣ ಜನ್ಮಶತಮಾನೋತ್ಸವ- ಅಧ್ಯಕ್ಷತೆ- ಶ್ರೀ ಕೆ.ವಿ. ಸುಬ್ಬಣ್ಣ ಉಪನ್ಯಾಸ- ಶ್ರೀ ಬಿ.ವಿ. ಕಾರಂತ, ಪ್ರೊ॥ ಟಿ.ಪಿ. ಅಶೋಕ, ಶ್ರೀ ಜಿ. ಶ್ರೀನಿವಾಸ್

೧೦-೫-೯೨ ಗುಬ್ಬಿ ವೀರಣ್ಣ ಜನ್ಮಶತಮಾನೋತ್ಸವ- ಅಧ್ಯಕ್ಷತೆ- ಶ್ರೀ ಸಿಂಧುವಳ್ಳಿ ಅನಂತಮೂರ್ತಿ, ಉಪನ್ಯಾಸ- ಶ್ರೀ ಜಿ. ಶ್ರೀನಿವಾಸ, ಶ್ರೀ ಜಿ.ವಿ. ಶಿವಾನಂದ, ಸನ್ಮಾನ- ಶ್ರೀ ಕಮಕೋಡು ಶಂಕರಶಾಸ್ತ್ರಿ

೨೬-೭-೯೨ ನಗರ ಬರಹಗಾರ ಸಮ್ಮೇಳನ- ಅಧ್ಯಕ್ಷತೆ- ಶ್ರೀ ಕೆ.ಜಿ. ಸುಬ್ರಹ್ಮಣ್ಯ ಉದ್ಘಾಟನೆ- ಡಾ॥ ರಾಜೇಂದ್ರ ಚೆನ್ನಿ, ಮುಖ್ಯ ಅತಿಥಿ- ನಗರದ ಶ್ರೀನಿವಾಸ ಉಡುಪ

೯-೮-೯೨ ವಿಜ್ಞಾನ ವಿಕಾಸ, ಅಧ್ಯಕ್ಷತೆ- ಪ್ರಬಂಧ- ಪ್ರೊ॥ ಜಿ.ಟಿ. ನಾರಾಯಣರಾವ್, ಶ್ರೀ ಎಂ.ಆರ್.ಎನ್. ಮೂರ್ತಿ, ಪ್ರೊ॥ ಜೆ.ಆರ್. ಲಕ್ಷ್ಮಣರಾವ್

೧೨/೧೩-೯-೯೨ - ಜಿಲ್ಲಾ ಕಸಾಪ ಜೊತೆ - ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ, ಉದ್ಘಾಟನೆ- ಡಾ॥ ಜಿ.ಎಸ್. ಶಿವರುದ್ರಪ್ಪ, ಸಮ್ಮೇಳನಾಧ್ಯಕ್ಷರು- ಡಾ॥ ಹೆಚ್. ತಿಪ್ಪೇರುದ್ರಸ್ವಾಮಿ, ಮುಖ್ಯ ಅತಿಥಿ- ಡಾ॥ ಗೊ.ರು. ಚನ್ನಬಸಪ್ಪ

ಗೋಷ್ಠಿ-೧ ದಶಕದ ಸಾಹಿತ್ಯ ಸಮೀಕ್ಷೆ- ಅಧ್ಯಕ್ಷತೆ- ಶ್ರೀ ನಾ. ಡಿಸೋಜ ಉದ್ಘಾಟನೆ- ಡಾ॥ ಸುಮತೀಂದ್ರ ನಾಡಿಗ್,

ಗೋಷ್ಠಿ-೨ ಜಾನಪದ ಗೋಷ್ಠಿ, ಅಧ್ಯಕ್ಷತೆ- ಡಾ॥ ಶ್ರೀಕಂಠ ಕೂಡಿಗೆ, ಉದ್ಘಾಟನೆ- ಶ್ರೀ ಎಂ. ಮಹೇಶ್ವರಯ್ಯ

೧೩-೯-೯೨ ಜಿಲ್ಲಾ ಕ.ಸಾ. ಸಮ್ಮೇಳನ- ಸಮಾರೋಪ- ಶ್ರೀ ಕೆ.ಹೆಚ್. ಶ್ರೀನಿವಾಸ್, ಮುಖ್ಯ ಅತಿಥಿ- ಶ್ರೀಮತಿ ಹೇಮಲತಾ ಮಹಿಷಿ, ಉಪನ್ಯಾಸ- ಡಾ॥ ತಿಪ್ಪೇರುದ್ರ ಸ್ವಾಮಿ

೧೩-೯-೯೨ ವಜ್ರಮಹೋತ್ಸವ ಸಮಾರೋಪ- ಅಧ್ಯಕ್ಷರು- ಡಾ॥ ಶಿವರಾಮ ಕಾರಂತ, ಮುಖ್ಯ ಅತಿಥಿ- ಶ್ರೀ ಗೊರುಚ, ಸಮಾರೋಪ- ಶ್ರೀ ಇ.ಎಸ್. ವೆಂಕಟರಾಮಯ್ಯ

೧೧-೧೦-೯೨ ಕನ್ನಡದಲ್ಲಿ ವೈದ್ಯಕೀಯ ಸಾಹಿತ್ಯ (ಕ.ಸಾ. ಅಕಾಡೆಮಿ ಸಹಯೋಗದಲ್ಲಿ), ಉದ್ಘಾಟನೆ- ಡಾ. ದೊಡ್ಡೇರಿ ವೆಂಕಟಗಿರಿರಾವ್, ಭಾಷಣ- ಡಾ. ಡಿ.ಎಸ್. ಶಿವಪ್ಪ, ಡಾ. ಪಿ.ಎಸ್. ಶಂಕರ್, ಪ್ರೊ॥ ಜೆ.ಆರ್. ಲಕ್ಷ್ಮಣರಾವ್, ಡಾ. ಸಿ.ಆರ್. ಚಂದ್ರಶೇಖರ್, ಶ್ರೀ ಸಂತೋಷ ಕುಮಾರ ಗುಲ್ವಾಡಿ, ಡಾ. ಹೆಚ್. ಗಿರಿಜಮ್ಮ

೧೪-೧೧-೯೨ ರಿಂದ ೧೬-೧೧೯೨ರವರೆಗೆ - ನೀನಾಸಂ ತಿರುಗಾಟ ೩ ನಾಟಕ ಪ್ರದರ್ಶನಗಳು

೨೨-೧೧-೯೨ ಕನ್ನಡ ರಾಜ್ಯೋತ್ಸವ, ಕುವೆಂಪು ಎಸ್.ವಿ.ಪಿ. ಪುರಸ್ಕಾರ, ಮುಖ್ಯ ಅತಿಥಿ- ಪ್ರೊ॥ ಗಜೇಂದ್ರಗಡ

೧-೧-೯೩ "ಚಲನಚಿತ್ರ ಅಧ್ಯಯನ ಶಿಬಿರ" ಉದ್ಘಾಟನೆ- ಡಾ. ಕೆ.ಎ. ಅಶೋಕ ಪೈ

೩-೧-೯೩ ಪ್ರಾಸ್ತಾವಿಕ- ಪ್ರೊ|| ಜಸವಂತ ಜಾದವ್, ಶ್ರೀ ಗಿರೀಶ ಕಾಸರವಳ್ಳಿ, ಶ್ರೀ ಕೆ.ವಿ. ಸುಬ್ಬಣ್ಣ (ಸಹ್ಯಾದ್ರಿ ಚಿತ್ರ ಸಮಾಜ)

೨೩-೧-೯೩ ಶ್ರದ್ಧಾಂಜಲಿ ಕಾರ್ಯಕ್ರಮ (ಗೋಪಾಲಕೃಷ್ಣ ಅಡಿಗರಿಗೆ), ಅರ್ಪಣೆ- ಶ್ರೀ ಎಂ.ಕೆ. ರೇಣುಕಪ್ಪಗೌಡ

೬-೩-೯೩ ಸುವರ್ಣ ಮಹೋತ್ಸವ (ಅಭಿನಂದನೆ ಸಭೆ), ಅಧ್ಯಕ್ಷತೆ- ಡಾ|| ಯು.ಆರ್. ಅನಂತಮೂರ್ತಿ, ಉಪನ್ಯಾಸ- ಡಾ|| ಶಾಂತಿನಾಥ ದೇಸಾಯಿ, ಪ್ರೊ|| ಗಜೇಂದ್ರಗಡ, ಡಾ|| ಬಿ.ಸಿ. ರಾಮಚಂದ್ರಶರ್ಮ, ಅಭಿನಂದನೆ- ಶ್ರೀ ಟಿ.ಆರ್. ವೆಂಕಟರಾಮಶಾಸ್ತ್ರಿಗಳಿಗೆ

೨೯-೪-೯೩ ಗ್ರಂಥ ಬಿಡುಗಡೆ (ವಚನ ತರಂಗಿಣಿ) ಉಪನ್ಯಾಸ- ಪ್ರೊ|| ದೊಡ್ಡರಂಗೇಗೌಡ

೨೮-೫-೯೩ ಅಭಿನಂದನಾ ಸಭೆ ಡಾ|| ಎ.ಎಸ್. ವೇಣುಗೋಪಾಲರಾವ್ ಮತ್ತು ಡಾ|| ರಾಜೇಂದ್ರ ಚೆನ್ನಿ ಅವರಿಗೆ ಭಾಷಣ- ಪ್ರೊ|| ಎನ್. ಶ್ರೀನಿವಾಸ ಉಡುಪ, ಪ್ರೊ|| ನೋ.ಸಂ. ತಿಮ್ಮೇಗೌಡ

೭-೮-೯೩ ಶ್ರದ್ಧಾಂಜಲಿ (ಡಾ|| ಎ.ಕೆ. ರಾಮಾನುಜಂ ಅವರಿಗೆ) ಅರ್ಪಣೆ- ಡಾ|| ಸುಮತೀಂದ್ರ ನಾಡಿಗ್

೨೬-೮-೯೩ ಯಕ್ಷಗಾನ ತಾಳಮದ್ದಲೆ

೨೯-೯-೯೩ ಶಂಬಾ ಸಂಸ್ಮರಣೆ, ಪ್ರಶಸ್ತಿ ಪ್ರದಾನ- ಶ್ರೀ ಶ್ರೀನಿವಾಸಮೂರ್ತಿ ಅವರಿಗೆ, ಅಧ್ಯಕ್ಷತೆ- ಡಾ|| ಶಿವರಾಮ ಕಾರಂತ

೨೧-೧೦-೯೩ ರಿಂದ ೨೩-೧೦-೯೩ - "ನುಡಿ ಹಬ್ಬ" ಪ್ರಚಾರೋಪನ್ಯಾಸ, ಉಪನ್ಯಾಸಕರು- ಡಾ|| ಐ.ಎ. ಲೋಕಾಪೂರ, ಡಾ|| ರಾಜರಾಮ ಹೆಗಡೆ, ಡಾ|| ಬಿ.ಎಸ್. ಮಹಾದೇವಯ್ಯ

೩೦-೧೦-೯೩ ರಿಂದ ೩೧-೧೦-೯೩ - ಸಾಹಿತ್ಯಾಭ್ಯಾಸ ಕಮ್ಮಟ, ಸಂಯೋಜಕರು- ಶ್ರೀ ಶರತ್ ಕಲ್ಕೋಡ್, ಮಾರ್ಗದರ್ಶನ- ಶ್ರೀಮತಿ ಚ. ಸರ್ವಮಂಗಳ, ಶ್ರೀ ಸತ್ಯನಾರಾಯಣರಾವ್ ಅಣತಿ, ಶ್ರೀ ಬಿ.ಆರ್. ಲಕ್ಷ್ಮಣರಾವ್, ಶ್ರೀ ಜಯಪ್ರಕಾಶ್ ಮಾವಿನಕುಳಿ, ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ, ಡಾ|| ಶ್ರೀಕಂಠ ಕೂಡಿಗೆ, ಶ್ರೀಮತಿ ವೈದೇಹಿ, ಡಾ|| ಎಂ.ಜಿ. ಈಶ್ವರಪ್ಪ, ಶ್ರೀ ಶರತ್ ಕಲ್ಕೋಡ್

೩-೧೧-೯೩ ರಿಂದ ೧೧-೧೧-೯೩ ಶ್ರೋತೃ ಸಂಗೀತ ಸಮ್ಮೇಳನ

೨೧-೧೧-೯೩ "ರಾಜ್ಯೋತ್ಸವ" ಪುಸ್ತಕ ಬಿಡುಗಡೆ- "ನಾಲ್ಕು ಸಾಲು", "ಜ್ಞಾನದೀಪ" ಕುರಿತು, ಪ್ರೊ|| ಟಿ.ಜಿ. ಗಣಪತಿ

೧೪-೧೨-೯೩ ಸಂಗೀತ- ಸನ್ಮಾನ- ವಿದ್ಯಾಭೂಷಣರಿಂದ, ಅಭಿನಂದನೆ- ಪ್ರೊ|| ಎಸ್. ಪಂಚಾಕ್ಷರಿ, ಸಂಗೀತ- ಶ್ರೀ ಶ್ರೀ ವಿದ್ಯಾಭೂಷಣಸ್ವಾಮಿ, ಸನ್ಮಾನ- ಪಂ. ಆರ್.ವಿ. ಶೇಷಾದ್ರಿ ಗವಾಯಿಗಳಿಗೆ

೨೫-೧೨-೯೩ ಎಂ.ಆರ್.ಶ್ರೀ. ಜನ್ಮಶತಾಬ್ಧಿ, ಅಧ್ಯಕ್ಷತೆ- ಡಾ|| ಎ.ಎನ್. ಮೂರ್ತಿರಾವ್, ಭಾಷಣ- ಡಾ|| ಎಲ್.ಎಸ್. ಶೇಷಗಿರಿರಾವ್, ಗಾಯನ- ಶ್ರೀ ಶಿವಮೊಗ್ಗ ಸುಬ್ಬಣ್ಣ

೧೮-೧-೯೪ ಸನ್ಮಾನ ಸಮಾರಂಭ- ಪ್ರೊ॥ ಸುರಂ ಎಕ್ಕುಂಡಿ ಅವರಿಗೆ, ಅಭಿನಂದನೆ- ಶ್ರೀ ವೇಣುಗೋಪಾಲ ಸೊರಬ

೨೧-೨-೯೪ ಶೈಕ್ಷಣಿಕ ಸಮಸ್ಯೆಗಳ ಚಿಂತನೆ, ಚಿಂತನೆ- ಡಾ॥ ಶಿವರಾಮ ಕಾರಂತ

೨-೩-೯೪ ರಿಂದ ೪-೩-೯೪ ನೀನಾಸಂ ತಿರುಗಾಟ ೩ ನಾಟಕ ಪ್ರದರ್ಶನಗಳು

೭-೩-೯೪ "ಪುರಂದರ ದರ್ಶನ" ಸಂಗೀತ ಕಛೇರಿ- ರೂಪ-ದೀಪಾ (ಕಾಸರವಳ್ಳಿ ಸಹೋದರಿಯರು)

೧೨-೪-೯೪ ರಿಂದ ೧೪-೪-೯೪ - ಸಹ್ಯಾದ್ರಿ ಸಾಹಿತ್ಯೋತ್ಸವ

೧೭-೬-೯೪ ಪುಸ್ತಕ ಮಳಿಗೆ ಉದ್ಘಾಟನೆ- ಡಾ॥ ಎಲ್.ಎಸ್. ಶೇಷಗಿರಿರಾವ್, ವಜ್ರಪಥ ಬಿಡುಗಡೆ

೧೬-೮-೯೪ ರಿಂದ ೨೦-೮-೯೪ - "ಕರ್ಣ ರಸಾಯನ", ಗಮಕ ವಾಚನ ವ್ಯಾಖ್ಯಾನ, ಶ್ರೀ ಎಚ್.ಆರ್. ಕೇಶವಮೂರ್ತಿ, ಶ್ರೀ ಮಾರ್ಕಂಡೇಯ ಅವಧಾನಿ

೧೬-೯-೯೪ ಎಂ.ಕೆ. ಇಂದಿರಾ ಸಂಸ್ಮರಣೆ, ಪ್ರಶಸ್ತಿ ಪ್ರದಾನ ಶ್ರೀಮತಿ ವೈದೇಹಿ ಅವರಿಗೆ, ಅಧ್ಯಕ್ಷತೆ- ಪ್ರೊ॥ ಜಿ.ಎಸ್. ಸಿದ್ಧಲಿಂಗಯ್ಯ, ಅಭಿನಂದನೆ- ಶ್ರೀ ಪಿ.ಎಸ್. ಅಡಿಗ

೨೩-೯-೯೪ ಯಕ್ಷಗಾನ ತಾಳಮದ್ದಲೆ, ಭಾಗವತರು- ಶ್ರೀ ತ್ರ್ಯಂಬಕ್, ಹೆಗ್ಗಡೆ ಮತ್ತು ಸಂಗಡಿಗರು

೧೭-೧೦-೯೪ ದೇವನೂರು ಮಹಾದೇವರ ಸಾಹಿತ್ಯ ಪರಿಚಯ, ಭಾಷಣ- ಡಾ॥ ಜಿ.ಹೆಚ್. ನಾಯಕ

೧೨-೧೧-೯೪ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕಾರ ವಿತರಣೆ- ಶ್ರೀ ಕೋ. ಚನ್ನಬಸಪ್ಪ

೧೬-೧೧-೯೪ ರಿಂದ ೨೪-೧೧-೯೪ ಶ್ರೋತೃ ಹಿಂದೂಸ್ತಾನಿ ಸಂಗೀತ ಸಪ್ತಾಹ

೧೧-೧೨-೯೪ ಹಾಸ್ಯ ಸಲ್ಲಾಪ, ಉಪನ್ಯಾಸ- ಅರಾಸೇ, ದುಂಡಿರಾಜ್

೧೭-೧೨-೯೪ ಕಿಟ್ಟೆಲ್ ಸ್ಮರಣೆ- ಭಾಷಣಕಾರರು- ಪ್ರೊ॥ ಪಾಂಡುರಂಗ ಉಡುಪ, ಅಧ್ಯಕ್ಷತೆ- ಶ್ರೀ ಕ.ಮ.ಶಿ. ಚಂದ್ರಶೇಖರಯ್ಯ

೨೪-೧೨-೯೪ ಕುವೆಂಪು ಸಾಹಿತ್ಯ ಉದ್ಘಾಟನೆ- ಶ್ರೀ ಎನ್.ಡಿ. ವೆಂಕಟೇಶ್, ಗೋಷ್ಠಿ-೧ ಶ್ರೀ ಕೆ.ಎಸ್. ಭಗವಾನ್, ಡಾ॥ ವೇಣುಗೋಪಾಲರಾವ್, ಶ್ರೀ ಎಸ್.ಬಿ. ಮಿಣಜಿಗಿ, ಡಾ॥ ಹಂಪ ನಾಗರಾಜಯ್ಯ

೨೫-೧೨-೯೪ ತೌಲನಿಕ ಚಿಂತನ, ಪ್ರಸ್ತಾವನೆ- ದೇಜಗೌ, ಗೋಷ್ಠಿ-೨ ಡಾ॥ ತಿಪ್ಪೇರುದ್ರಸ್ವಾಮಿ, ಡಾ॥ ಸಿ.ಪಿ.ಕೆ., ಡಾ॥ ವತ್ಸಲಾ ಎ.ಎಸ್., ಡಾ॥ ಪ್ರಭುಶಂಕರ

ಗೋಷ್ಠಿ-೩ ಡಾ॥ ರಮೇಶ ಚಂದ್ರದತ್ತ, ಡಾ॥ ಸಿ.ಎಸ್. ಶಿವಕುಮಾರಸ್ವಾಮಿ, ಡಾ॥ ಲಕ್ಕಪ್ಪಗೌಡ, ಸನ್ಮಾನ- "ದೇಜಗೌ" ಅವರಿಗೆ, ಅಭಿನಂದನೆ- ಡಾ॥ ಲಕ್ಕಪ್ಪಗೌಡರು

೩೦-೧೨-೯೪ ಕೃಷ್ಣಪುರಂದರ, ಉಪನ್ಯಾಸ- ಡಾ॥ ನಂದಕುಮಾರ್, ಅಧ್ಯಕ್ಷತೆ- ಕೆ.ಜಿ. ಸುಬ್ರಹ್ಮಣ್ಯ

೧೨-೧-೯೫ ಕವಿಗೋಷ್ಠಿ- ಹಳೆಗನ್ನಡ ಓದುವಿಕೆ- ಶ್ರೀ ಕೃಷ್ಣಶೆಟ್ಟರು- ಪ್ರೊ॥ ಪಂಚಾಕ್ಷರಿ, ಪ್ರೊ॥ ನೋ.ಸಂ. ತಿಮ್ಮೇಗೌಡ

೧೩-೧-೯೫ ಸಂಗೀತ ಕಛೇರಿ- ವಿ|| ಎಂ.ಎನ್. ಅನಂತಪದ್ಮನಾಭ ಮತ್ತು ಸಂಗಡಿಗರು

೧೫-೨-೯೫ ದಾನ ಚಿಂತಾಮಣಿ ಅತ್ತಿಮಬ್ಬೆ- ಅಧ್ಯಕ್ಷತೆ- ಡಾ|| ಜಿ. ನಾರಾಯಣ, (ಸಹಕಾರ-ಗಮಕ ಕಲಾ ಪರಿಷತ್ತು, ಮಹಾವೀರ ಸಂಘ)

೧೯-೨-೯೫ ದೃಷ್ಟಿ-ಸೃಷ್ಟಿ-ವಿಚಾರ ಸಂಕಿರಣ- ಉದ್ಘಾಟನೆ- ಡಾ|| ವೈ.ಎಂ. ಪರಮೇಶ್ವರಪ್ಪ, (ಕ.ಸಾ.ಅ. ಸಹಯೋಗ) ಸಮಾರೋಪ- ಶೂದ್ರ ಶ್ರೀನಿವಾಸ, ಉಪನ್ಯಾಸ- ಪ್ರೊ|| ಬಿ.ವಿ. ವೀರಭದ್ರಪ್ಪ

೧೯-೩-೯೫ "ಕಾಳಿದಾಸ ಸಾಹಿತ್ಯ ಸಮೀಕ್ಷೆ" (ಸಂಸ್ಕೃತ ವಿಭಾಗ ಕುವೆಂಪು ವಿ.ವಿ. ಸಹಯೋಗದೊಂದಿಗೆ) ಉದ್ಘಾಟನೆ- ಡಾ|| ಕೆ.ಎಸ್.ವಿ. ರಾವ್, ಪ್ರಾಸ್ತಾವಿಕ- ಡಾ|| ಬಿ.ಎಸ್. ಮಹಾದೇವಯ್ಯ

ಗೋಷ್ಠಿ-೧ ಶ್ರೀ ಶ್ರೀನಿವಾಸಮೂರ್ತಿ, ಡಾ|| ಮಲ್ಲೇಪುರಂ ಜಿ. ವೆಂಕಟೇಶ, ಸಮೀಕ್ಷೆ- ಡಾ|| ಕೀ.ರಂ. ನಾಗರಾಜ, ಸಂಜೆ- ಸನ್ಮಾನ ಸಮಾರೋಪ, ಸನ್ಮಾನ- ಡಾ|| ಕೆ. ಕೃಷ್ಣಮೂರ್ತಿ, ವಿದ್ವಾನ್ ಪಂಡಿತನಾಥಾಚಾರ್ಯ ಗಲಗಲಿ ಸಮಾರೋಪ- ಡಾ|| ಕೆ. ಕೃಷ್ಣಮೂರ್ತಿ.

ಗೋಷ್ಠಿ-೨ ಶ್ರೀ ಎಂ.ಕೆ. ಶ್ರೀಧರ್, ಡಾ|| ಬಿ.ಎನ್. ಸುಮಿತ್ರಾಬಾಯಿ, ಸಮೀಕ್ಷೆ- ವಿದ್ವಾನ್ ಪಂಡರಿನಾಥಾಚಾರ್ಯ ಗಲಗಲಿ, ಅಭಿನಂದನೆ- ಡಾ|| ಮಹಾಬಲೇಶ್ವರ, ಡಾ|| ಆರ್.ಆರ್. ಕುಲಕರ್ಣಿ

೨೮-೪-೯೫ ಮತ್ತು ೨೯-೪-೯೫ - ಸಾಹಿತ್ಯ ಪರಿಚಯ-೯೪ ಕಥೆ-ಕಾದಂಬರಿ- ಪ್ರೊ|| ಟಿ.ಪಿ. ಅಶೋಕ, ನಾಟಕ- ಶ್ರೀ ಕೆ.ವಿ. ಅಕ್ಷರ, ಕಾವ್ಯ- ಶ್ರೀ ಎ.ಆರ್. ನಾಗಭೂಷಣ, ವೈಚಾರಿಕ- ಡಾ|| ಮಲ್ಲೇಪುರಂ ಜಿ. ವೆಂಕಟೇಶ

೨೮-೫-೯೫ ಕಥಾಗೋಷ್ಠಿ, ಅಧ್ಯಕ್ಷತೆ- ಶ್ರೀ ನಾ. ಡಿಸೋಜ, ಕಥೆಗಾರರು- ಡಾ|| ರಾಜೇಂದ್ರ ಚೆನ್ನಿ, ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ, ಶ್ರೀ ಡಿ. ಅರವಿಂದ, ಶ್ರೀಮತಿ ಭಾಗೀರಥಿ ಹೆಗಡೆ

೩೦-೬-೯೫ ಕಾವ್ಯವಾಚನ, ಶ್ರೀ ಕೇಶವಮೂರ್ತಿ ಎಚ್.ಆರ್.

೩೧-೭-೯೫ ಯಕ್ಷಗಾನ ತಾಳಮದ್ದಲೆ

೫-೮-೯೫ ಲಂಕೇಶ್‌ರ "ಸಂಕ್ರಾಂತಿ" ಅಧ್ಯಯನ, ಉಪನ್ಯಾಸ- ಶ್ರೀ ಪಿ. ಶ್ರೀನಿವಾಸ ಅಡಿಗ

೨೫-೮-೯೫ / ೨೬-೮-೯೫ - ಲಂಕೇಶ್ ಅಧ್ಯಯನ ಶಿಬಿರ ಉದ್ಘಾಟನೆ- ಶ್ರೀ ಕೆ.ವಿ. ಸುಬ್ಬಣ್ಣ, ಸಂಪನ್ಮೂಲ ವ್ಯಕ್ತಿಗಳು- ಡಾ|| ಟಿ.ಪಿ. ಅಶೋಕ, ಶ್ರೀ ಕೆ.ವಿ. ಅಕ್ಷರ, ಶ್ರೀ ಸತ್ಯನಾರಾಯಣರಾವ್ ಅಣತಿ, ಶ್ರೀ ಎಂ.ಎಸ್. ನಾಗರಾಜರಾವ್, ಪ್ರೊ|| ನೋ.ಸಂ. ತಿಮ್ಮೇಗೌಡ ಪ್ರೊ|| ಎಂ.ಬಿ. ನಟರಾಜ್, ಡಾ|| ಕಿ.ರಂ. ನಾಗರಾಜ, ಶ್ರೀ ಎಸ್.ಆರ್. ವಿಜಯಶಂಕರ್ ಸಮಾರೋಪ- ಡಾ|| ಗಿರಡ್ಡಿ ಗೋವಿಂದರಾಜ. ಉಪನ್ಯಾಸ- ಡಾ|| ಕಿ.ರಂ. ನಾಗರಾಜ, ಶ್ರೀ ಟಿ.ಪಿ. ಅಶೋಕ್, "ಸಂಕ್ರಾಂತಿ" ನಾಟಕ ಅಭಿನಯ

೨೭-೮-೯೫	ಶ್ರೀ ಲಂಕೇಶ್‌ರವರಿಗೆ ಗೌರವ ಸದಸ್ಯತ್ವ ಪ್ರದಾನ, ಅಭಿನಂದನೆ- ಪ್ರೊ॥ ಕೆ. ರಾಮದಾಸ್, ಶ್ರೀ ಶೂದ್ರ ಶ್ರೀನಿವಾಸ, ಅಧ್ಯಕ್ಷತೆ- ಶ್ರೀ ಕೆ.ಪಿ. ಪೂರ್ಣಚಂದ್ರ ತೇಜಸ್ವಿ
೨೪-೯-೯೫	ಕವಿಗೋಷ್ಠಿ, ಶಂಬಾ ಸ್ಮರಣೆ ಪ್ರಶಸ್ತಿ ಪ್ರದಾನ ಶ್ರೀ ಸತ್ಯನಾಥರಿಗೆ, ಅಭಿನಂದನೆ- ಡಾ॥ ಮಲ್ಲೇಪುರಂ ಜಿ. ವೆಂಕಟೇಶ
೧೦-೧೦-೯೫	ಶ್ರೀ ಶೇಣಿ ಗೋಪಾಲಕೃಷ್ಣ ಭಟ್ಟರಿಗೆ ಸನ್ಮಾನ, ಯಕ್ಷಗಾನ-ತಾಳಮದ್ದಲೆ, ಅಭಿನಂದನೆ- ಪ್ರೊ॥ ಪಾಂಡುರಂಗ ಉಡುಪ
೨೫-೧೧-೯೫	ದೇವುಡು ಕೃತಿಗಳ ಪ್ರದರ್ಶನ, ಉದ್ಘಾಟನೆ- ಡಾ॥ ಗಿರಡ್ಡಿ ಗೋವಿಂದರಾಜ
೨೬-೧೧-೯೫	ಕಥಾಗೋಷ್ಠಿ, ಪುಸ್ತಕಗಳ ಬಿಡುಗಡೆ, ಮುಖ್ಯ ಅತಿಥಿ- ಶ್ರೀ ಗಂಗಾಧರ ದೇವುಡು, (ದೇವುಡು ಭಾವಚಿತ್ರ ಅನಾವರಣ), ದೇವುಡು ಕುರಿತು- ಗೋಷ್ಠಿ-೧ ಡಾ॥ ಶಿವಕುಮಾರಸ್ವಾಮಿ, ಗೋಷ್ಠಿ-೨ ಪ್ರೊ॥ ಎ.ವಿ. ನಾವಡ, ಶ್ರೀಮತಿ ವಿಜಯಾ ಶ್ರೀಧರ್, ಪ್ರೊ॥ ಜಿ. ಅಶ್ವತ್ಥ ನಾರಾಯಣ, ಸಮಾರೋಪ- ಶ್ರೀ ಪಿ.ಎಸ್. ಅಡಿಗ, ಸನ್ಮಾನ- ಡಾ॥ ಹೆಚ್.ಎಲ್. ನಾಗೇಗೌಡ ಇವರಿಗೆ, ಮುಖ್ಯ ಅತಿಥಿ- ವಂದನೀಯ ಗುರುನೊರೋನ, ಪುಸ್ತಕಗಳು- ಚಲ್ಯರ "ನವಾಬ", ದೇವುಡುರವರ, "ಮಹಾದರ್ಶನ", "ಪಂಚತಂತ್ರ".
೨೮-೧-೯೬	ಮದ್ದಣ-೧೨೫, ಭಾಷಣ- ಶ್ರೀ ನಂದಳಿಕೆ ಬಾಲಚಂದ್ರರಾವ್, ಶ್ರೀ ರಾಮಚಂದ್ರ ಉಚ್ಚಿಲ, ಶ್ರೀ ವಸಂತ ಭಾರದ್ವಾಜ್, ಕಾವ್ಯ ವಾಚನ- ಹೊಸ್ತೋಟ ಮಂಜುನಾಥ ಭಾಗವತರು.
೧೮-೨-೯೬	ಸಹೃದಯ ಸಂವಾದ ಕವಿ ನಮನ, ಬಿ.ಸಿ. ರಾಮಚಂದ್ರಶರ್ಮ, ಸುಮತೀಂದ್ರ ನಾಡಿಗ ಇವರಿಗೆ ಸನ್ಮಾನ, ಅಭಿನಂದನೆ- ರಾಜೇಂದ್ರ ಚೆನ್ನಿ, ಶ್ರೀನಿವಾಸ ಉಡುಪ
೧೭-೩-೯೬	ಸನ್ಮಾನ ಪ್ರೊ॥ ಕೆ.ಎಸ್. ನಿಸಾರ್ ಅಹಮದ್‌ರವರಿಗೆ, ಅಭಿನಂದನೆ- ಡಾ॥ ಶ್ರೀಕಂಠ ಕೂಡಿಗೆ, ಗಾಯನ- ನಗರದ ಶ್ರೀನಿವಾಸ ಉಡುಪ
೨೦-೪-೯೬	ಸಾಹಿತ್ಯ ಪರಿಚಯ, ಕಥೆ- ಡಾ॥ ಕೇಶವಶರ್ಮ, ಕವಿತೆ- ಡಾ॥ ಓ.ಎಲ್. ನಾಗಭೂಷಣ ಸ್ವಾಮಿ, ನಾಟಕ- ಶ್ರೀ ಪ್ರಸನ್ನ, ವೈಚಾರಿಕ ವಿಮರ್ಶೆ- ಡಾ॥ ಟಿ.ಪಿ. ಅಶೋಕ
೨೫-೫-೯೬	ಗಮಕ ಕಾರ್ಯಕ್ರಮ (ಗಮಕ ಕಲಾಪರಿಷತ್ ಸಹಯೋಗದಲ್ಲಿ) ಶ್ರೀ ಕೇಶವಮೂರ್ತಿ, ಶ್ರೀ ಮಾರ್ಕಂಡೇಯ ಅವಧಾನಿ
೨೬-೫-೯೬	ಶ್ರೀಮತಿ ವಾಗೀಶ್ವರಿ, ಶ್ರೀ ಮತ್ತೂರು ಕೃಷ್ಣಮೂರ್ತಿ
೧೬-೬-೯೬	ಸಾಹಿತ್ಯ ಸಂವಾದ
೨೯-೬-೯೬	ಪುಸ್ತಕ ಬಿಡುಗಡೆ, ಡಾ॥ ಟಿ.ಪಿ. ಅಶೋಕ್, "ಬಂದನಾ ಹುಲಿರಾಯ" ಲೇಖಕರು ಶ್ರೀಮತಿ ವಸುಮತಿ ಉಡುಪ

...

೩೦-೬-೯೬ ಕಥಾರಚನ ಕಮ್ಮಟ, ಸಂಪನ್ಮೂಲ- ಪ್ರೊ|| ನೊ.ಸಂ. ತಿಮ್ಮೇಗೌಡ, ಶ್ರೀ ರಾಘವೇಂದ್ರ ಪಾಟೀಲ, ಶ್ರೀ ಡಿ. ಅರವಿಂದ, ಶ್ರೀಮತಿ ಸಿ. ಉಷಾ, ಉದ್ಘಾಟನೆ- ಡಾ|| ಟಿ.ಪಿ. ಅಶೋಕ

೨೧-೯-೯೬ ಸಂವಾದ ಮತ್ತು ಸನ್ಮಾನ, ಯಶವಂತ ಚಿತ್ತಾಲ ಮತ್ತು ಶ್ರೀ ವ್ಯಾಸರಾಯ ಬಲ್ಲಾಳ ಇವರಿಗೆ, ಅಭಿನಂದನೆ- ಡಾ|| ಹೆಚ್.ಎಸ್. ರಾಘವೇಂದ್ರರಾವ್, ಡಾ|| ರಾಜೇಂದ್ರ ಚನ್ನಿ

೧೧-೧೦-೯೬ ಸನ್ಮಾನ ಮತ್ತು ಯಕ್ಷಗಾನ ತಾಳಮದ್ದಲೆ, ಸನ್ಮಾನ- ಮಲ್ಪೆ ರಾಮದಾಸ ಸಾಮಗರು, ಅಭಿನಂದನೆ- ಶ್ರೀ ಹೆಚ್. ಲಕ್ಷ್ಮಿನಾರಾಯಣ ಭಟ್ಟ

೧೩-೧೦-೯೬ "ಚಕೋರಿ" ವಿಚಾರ ಸಂಕಿರಣ ಡಾ|| ಕಂಬಾರರೊಡನೆ ಒಂದು ಸಂಜೆ- ಅಧ್ಯಕ್ಷತೆ- ಡಾ|| ಶಾಂತರಸ, ಉದ್ಘಾಟನೆ- ಡಾ|| ಟಿ.ಪಿ. ಅಶೋಕ, ಉಪನ್ಯಾಸ-೧- ಡಾ|| ಹೆಚ್.ಎಸ್. ಶಿವಪ್ರಕಾಶ, ಶ್ರೀ ಕೆ.ವಿ. ಅಕ್ಷರ, ಗೋಷ್ಠಿ-೨ ಡಾ|| ಓ.ಎಲ್. ನಾಗಭೂಷಣಸ್ವಾಮಿ, ಡಾ|| ಮಲ್ಲೇಪುರಂ ಜಿ. ವೆಂಕಟೇಶ, ಡಾ|| ಕಿ.ರಂ. ನಾಗರಾಜ

೧೪-೧೧-೯೬ ರಿಂದ ೨೨-೧೧-೯೬ ಶ್ರೋತೃ ಸಂಗೀತ ಸಮ್ಮೇಳನ

೨೨-೧೧-೯೬ ಪುಸ್ತಕ ಪ್ರದರ್ಶನ ಮಾರಾಟ ಉದ್ಘಾಟನೆ

೨೩-೧೧-೯೬ ಎಂ.ಕೆ. ಇಂದಿರಾ ಪ್ರಶಸ್ತಿ ವಿತರಣೆ, ಅಭಿನಂದನೆ- ಶ್ರೀಮತಿ ಗಾಯತ್ರಿ ನಾವಡ, ಶ್ರೀಮತಿ ಸುನಂದಾ ಬೆಳಗಾಂವಕರ್‌ರವರಿಗೆ

೨೪-೧೧-೯೬ ಕುವೆಂಪು ಲಂಕೇಶ್, ಎಸ್.ವಿ.ಪಿ. ಪ್ರಶಸ್ತಿ ಪುರಸ್ಕಾರ, ಬೇಂದ್ರೆ ನಮನ- ಪಾತರಗಿತ್ತಿ ಪಕ್ಕ, ಶ್ರೀ ಕೆ. ಯುವರಾಜ್ ವೃಂದದವರಿಂದ

* * *

೪-೧-೯೭ ಶಂಬಾ ಸಂಸ್ಮರಣೆ ಪ್ರಶಸ್ತಿ ಪ್ರದಾನ, ಅಭಿನಂದನೆ- ಡಾ|| ಗಿರಡ್ಡಿ ಗೋವಿಂದರಾಜ

೯-೨-೯೭ ಗೌರವ ಸದಸ್ಯತ್ವ ಪ್ರದಾನ ಮತ್ತು ವಿಚಾರ ಸಂಕಿರಣ, ಡಾ|| ಜಿ.ಎಸ್. ಶಿವರುದ್ರಪ್ಪನವರಿಗೆ, ಅಭಿನಂದನೆ- ಡಾ|| ಲಕ್ಕಪ್ಪಗೌಡ, ವಿಚಾರ ಸಂಕಿರಣ ಭಾಷಣ- ಶ್ರೀ ಡಿ.ಎಸ್. ನಾಗಭೂಷಣ, ಡಾ|| ಹೆಚ್.ಎಸ್. ವೆಂಕಟೇಶಮೂರ್ತಿ, ಶ್ರೀ ಜಿ.ಪಿ. ಬಸವರಾಜು

೧೬-೩-೯೭ ಸನ್ಮಾನ ಮತ್ತು ವಿಚಾರ ಸಂಕಿರಣ, ಅಭಿನಂದನೆ- ಡಾ|| ಹೆಚ್.ಎಸ್. ವೆಂಕಟೇಶಮೂರ್ತಿ, ಡಾ|| ಎನ್.ಎಸ್. ಲಕ್ಷ್ಮೀನಾರಾಯಣಭಟ್ಟರಿಗೆ, ಮುಖ್ಯ ಅತಿಥಿ- ಶ್ರೀ ಸಿ.ಆರ್. ಸಿಂಹ, ವಿಚಾರ ಸಂಕಿರಣ- ಡಾ|| ಹೆಚ್.ಎಸ್. ವೆಂಕಟೇಶಮೂರ್ತಿ, ಡಾ|| ಎಂ.ಎಚ್. ಕೃಷ್ಣಯ್ಯ ಪ್ರೊ|| ಪಾಂಡುರಂಗ ಉಡುಪ, ಡಾ|| ಎನ್.ಎಸ್. ತಾರಾನಾಥ್

೨೯-೪-೯೭ ಸಂವಾದ- ಡಾ|| ವಿಜಯಾದೇವಿ, ಡಾ|| ಜಿ.ಎಸ್. ಭಟ್, ಶ್ರೀ ಕೆ. ಪುಟ್ಟಯ್ಯ, ಶ್ರೀ ಯು.ಎಚ್. ಗಣೇಶ್

೧೦-೫-೯೭ ಅಭಿನಂದನಾ ಸಮಾರಂಭ, ಡಾ|| ಶಿವರಾಮ ಕಾರಂತರಿಗೆ ಅಭಿನಂದನೆ- ಶ್ರೀ ಎಸ್. ನಾರಾಯಣರಾವ್

೧೫-೬-೯೭ ಕೆಳದಿ ರಾಣಿ ಚೆನ್ನಮ್ಮಾಜಿ-೩೦೦, ಕೆಳದಿ ಸಾಮ್ರಾಜ್ಯ-೫೦೦ ವರ್ಷ, ಭಾಷಣ- ಡಾ।। ಸೂರ್ಯನಾಥ ಕಾಮತ್, ಡಾ।। ಅ. ಸುಂದರ, ಡಾ।। ರಘುನಾಥಭಟ್, ಸಮಾರೋಪ- ಡಾ।। ಹೆಚ್.ಎಸ್. ಗೋಪಾಲರಾವ್, 'ನಾ ಕಂಡ ಮಲೆನಾಡು' ಗ್ರಂಥ ಬಿಡುಗಡೆ- ಪ್ರೊ।। ಪಿ. ವೆಂಕಟರಾಮಯ್ಯ, ಕುಲಪತಿಗಳು- ಕುವೆಂಪು ವಿ.ವಿ. (ಲೇಖಕರು ಶ್ರೀ ಎಂ.ಎಸ್. ಪುಟ್ಟಣ್ಣಯ್ಯ)

೩೦-೭-೯೭ ಗ್ರಂಥಚಾಲನೆ- ಟಿ.ಎಸ್. ಹೂವಯ್ಯಗೌಡ

೧೭-೮-೯೭ ಸನ್ಮಾನ ಸಮಾರಂಭ- ಡಾ. ದೊಡ್ಡೇರಿ ವೆಂಕಟಗಿರಿರಾವ್‌ಗೆ, ಅಭಿನಂದನೆ- ಶ್ರೀ ಐ. ಈಶ್ವರಯ್ಯ, ಸುಗಮ ಸಂಗೀತ- ಶ್ರೀಮತಿ ಎಸ್.ಡಿ. ಬನುಮಾ

೨೦-೯-೯೭ ಗಮಕ ಕಾವೇರಿ, ಉದ್ಘಾಟನೆ- ಶ್ರೀ ಕೆ.ಎಸ್. ಈಶ್ವರಪ್ಪ, ಮುಖ್ಯ ಅತಿಥಿ- ಡಾ।। ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

೨೧-೯-೯೭ ಕವಿಗೋಷ್ಠಿ, ಮುಖ್ಯ ಅತಿಥಿ- ಶ್ರೀ ಜಿ.ಬಿ. ಆಲದಕಟ್ಟಿ, ಚುಟುಕು ಸಾಹಿತ್ಯ ಪರಿಷತ್

೨೨-೯-೯೭ ಶಾಸ್ತ್ರೀಯ ಸಂಗೀತ- ಶ್ರೀಮತಿಯರಾದ ರೂಪ-ದೀಪಾ (ಕಾಸರವಳ್ಳಿ ಸಹೋದರಿಯರು)

೨೭-೯-೯೭ ವಿಚಾರ ಸಂಕಿರಣ (ಇತಿಹಾಸ ಅಕಾಡೆಮಿ ಸಹಯೋಗ), ಗೋಷ್ಠಿ-೧ ಡಾ।। ಮಲ್ಲೇಪುರಂ ಜಿ. ವೆಂಕಟೇಶ, ಡಾ।। ಎನ್.ಎಸ್. ತಾರಾನಾಥ್, ಶ್ರೀ ಜಯದೇವಪ್ಪ ಜೈನಕೇರಿ, ಗೋಷ್ಠಿ-೨ ಡಾ।। ಬಿ. ರಾಜಶೇಖರಪ್ಪ, ಶ್ರೀ ಕೆಳದಿ ವೆಂಕಟೇಶ ಜೋಯ್ಸ್, ಪ್ರೊ।। ಎಂ.ಬಿ. ನಟರಾಜ್

೨೬-೦೧-೯೭ ಪೊಳಲಿ ಶಾಸ್ತ್ರಿ ಪ್ರಶಸ್ತಿ ಪ್ರದಾನ- ಪ್ರೊ।। ಎಂ.ಆರ್. ಶಾಸ್ತ್ರಿ ಅವರಿಗೆ, ಯಕ್ಷಗಾನ- ತಾಳಮದ್ದಲೆ, ಅಭಿನಂದನೆ- ಶ್ರೀ ಎಂ. ಪ್ರಭಾಕರ ಜೋಷಿ

೧-೧೨-೯೭ ಶಂಬಾ ಪ್ರಶಸ್ತಿ- ಅಭಿನಂದನೆ- ಡಾ।। ಶ್ರೀನಿವಾಸ ಪಾಡಿಗಾರ, ಡಾ।। ಅ. ಸುಂದರ ಅವರಿಗೆ, ಶ್ರೀಮತಿ ಸವಿತಾ ನಾಗಭೂಷಣ ಅವರಿಗೆ ಎಂ.ಕೆ. ಇಂದಿರಾ ಪ್ರಶಸ್ತಿ ಅಭಿನಂದನೆ- ಶ್ರೀಮತಿ ಶೈಲಜಾ ಅವರಿಂದ

೧೭-೧೨-೯೭ ಶ್ರದ್ಧಾಂಜಲಿ- ಡಾ।। ಶಿವರಾಮ ಕಾರಂತರಿಗೆ

೧-೧೨-೯೭ ಕಾವ್ಯಕಮ್ಮಟ, ಉದ್ಘಾಟನೆ- ಶ್ರೀಮತಿ ಪ್ರತಿಭಾ ನಂದಕುಮಾರ್, ಸಂಪನ್ಮೂಲ- ಡಾ।। ಎಂ.ಜಿ. ಈಶ್ವರಪ್ಪ, ಪ್ರೊ।। ಪಾಂಡುರಂಗ ಉಡುಪ, ಪ್ರೊ।। ಎಂ.ಬಿ. ನಟರಾಜ್

* * *

೧೮-೧-೯೮ ರಿಂದ ೨೫-೧-೯೮ ಶ್ರೋತೃ ಹಿಂದೂಸ್ತಾನಿ ಸಂಗೀತ ಸಮ್ಮೇಳನ

೨೨-೨-೯೮ ಬೇಂದ್ರೆ ಸ್ಮರಣೆ, ಅಧ್ಯಕ್ಷತೆ- ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ, 'ಭಾವ ಸಂಜೆ' ಭಾಷಣ, ಡಾ।। ವೇಣುಗೋಪಾಲರಾವ್

೧೬-೫-೯೮ "ಚಿನ್ನದ ಸರಿಗೆ" ಪುಸ್ತಕ ಬಿಡುಗಡೆ, ಶ್ರೀಮತಿ ಮಾಲಿನಿ ಮಲ್ಯ

ಜೂನ್ ೯೮ ಸನ್ಮಾನ ಸಮಾರಂಭ- ಪ್ರೊ|| ಎನ್. ಶ್ರೀನಿವಾಸ ಉಡುಪ, ಶ್ರೀಮತಿ ಸಾವಿತ್ರಮ್ಮ, ಡಾ|| ಮ. ಪ್ರಭಾಕರ್ ಇವರುಗಳಿಗೆ. ಅಭಿನಂದನಾ ಭಾಷಣ- ಪ್ರೊ|| ಪಾಂಡುರಂಗ ಉಡುಪ, ಶ್ರೀ ಸಯ್ಯದ್ ಅಹಮದ್

೧೨-೭-೯೮ ವಚನ ಸಾಹಿತ್ಯ ವಿಚಾರ ಸಂಕಿರಣ, ಉದ್ಘಾಟನೆ- ಡಾ|| ಎಂ.ಎಂ. ಕಲಬುರ್ಗಿ, ಗೋಷ್ಠಿ-೧ ಡಾ|| ಮಲ್ಲೇಪುರಂ ಜಿ. ವೆಂಕಟೇಶ, ಪ್ರೊ|| ಬಿದರಹಳ್ಳಿ ನರಸಿಂಹಮೂರ್ತಿ ಗೋಷ್ಠಿ-೨ ಡಾ|| ರಹಮತ್ ತರೀಕೆರೆ, ಡಾ|| ಪ್ರಭುಸ್ವಾಮಿ ಮಠ, ಸಮಾರೋಪ- ಡಾ|| ಗಿರಡ್ಡಿ ಗೋವಿಂದರಾಜ

೧೧-೮-೯೮ ಡಾ|| ಶಾಂತಿನಾಥ ದೇಸಾಯಿಯವರ ಒಂದು ನೆನಪು, ಅಧ್ಯಕ್ಷತೆ- ಶ್ರೀ ಸತ್ಯನಾರಾಯಣರಾವ್ ಅಣತಿ, "ಓಂಣಮೋ" ಪುಸ್ತಕ ಬಿಡಗಡೆ, ಭಾಷಣ- ಡಾ|| ರಾಜೇಂದ್ರಚೆನ್ನಿ, ಪ್ರೊ|| ಎಂ.ಬಿ. ನಟರಾಜ್, ಡಾ|| ಗಿರಡ್ಡಿ ಗೋವಿಂದರಾಜ

೨೭-೯-೯೮ ಡಾ|| ಹಾ.ಮಾ. ನಾಯಕ ಪ್ರಶಸ್ತಿ ಘೋಷಣೆ ಸಮಾರಂಭ, ಅಧ್ಯಕ್ಷತೆ- ಡಾ|| ಎಸ್.ಎಲ್. ಭೈರಪ್ಪ, ಅಭಿನಂದನೆ- ಡಾ|| ವಿಜಯಾದಬ್ಬೆ, ಗೌರವ ಸದಸ್ಯತ್ವ ಪ್ರದಾನ- ಡಾ|| ಹಾ.ಮಾ. ನಾಯಕರಿಗೆ

೨೬-೧೨-೯೮ ಕವಿಗೋಷ್ಠಿ, ಅಧ್ಯಕ್ಷತೆ- ಶ್ರೀ ಹಿರೇಮಗಳೂರು ಕಣ್ಣನ್

೨೭-೧೨-೯೮ ರಿಂದ ೩-೧-೯೯ - ಶ್ರೋತೃ ಹಿಂದೂಸ್ಥಾನಿ ಸಂಗೀತ ಸಮ್ಮೇಳನ

* * *

೧೧-೧-೯೯ ಯಕ್ಷಗಾನ ತಾಳಮದ್ದಲೆ, ಭಾಗವತರು, ಶ್ರೀ ತ್ರ್ಯಂಬಕ ಹೆಗಡೆ, ಇಡುವಾಣಿ

೨೦-೧-೯೯ ಶ್ರೀ ಎಸ್.ಎಲ್. ಭೈರಪ್ಪನವರ "ಸಾರ್ಥ" ಕುರಿತು ವಿಚಾರ ಸಂಕಿರಣ, ಉಪನ್ಯಾಸಕರು- ಪ್ರೊ|| ರಾಘವೇಂದ್ರ ಪಾಟೀಲ, ಶ್ರೀ ಎ.ಎಸ್. ಮಂಜುನಾಥ, ಪ್ರೊ|| ಪಾಂಡುರಂಗ ಉಡುಪ

೬-೨-೯೯ ಗ್ರಂಥ ಬಿಡುಗಡೆ ಮತ್ತು ಶಂಬಾ ಪ್ರಶಸ್ತಿ ಪ್ರದಾನ, 'ಸಂವಾದ' ಪ್ರೊ|| ಜಿ. ವೆಂಕಟಸುಬ್ಬಯ್ಯ ಇವರಿಗೆ, ಅಭಿನಂದನೆ- ಡಾ|| ಮಲ್ಲೇಪುರಂ ಜಿ. ವೆಂಕಟೇಶ, ಗ್ರಂಥ- ಶಬ್ದಾರ್ಥ ಗೌರವ ಬಿಡುಗಡೆ ಶ್ರೀ ಪಿ. ಶ್ರೀನಿವಾಸ ಅಡಿಗ, ಲೇಖಕರು ಶ್ರೀ ಮಾಧವ ಪೈ

೧೪-೨-೯೯ ಡಾ|| ಗಿರೀಶ್ ಕಾರ್ನಾಡರಿಗೆ ಅಭಿನಂದನೆ - ವಿಚಾರ ಸಂಕಿರಣ ಮತ್ತು ಸಂವಾದ (ಮಾನಸ ಟ್ರಸ್ಟ್ ಸಹಯೋಗದೊಂದಿಗೆ), ಅಭಿನಂದನೆ- ಡಾ. ಅಶೋಕ ಪೈ, ಡಾ|| ರಾಜೇಂದ್ರ ಚೆನ್ನಿ ಅಧ್ಯಕ್ಷತೆ- ಶ್ರೀ ಕೆ.ವಿ. ಸುಬ್ಬಣ್ಣ ಮುಖ್ಯ ಅತಿಥಿ- ಶ್ರೀ ಎಂ.ಪಿ. ಪ್ರಕಾಶ್

೨೫-೪-೯೯ ವಿಶೇಷ ಉಪನ್ಯಾಸ ಸಂವಾದ, ಭಾಷಣಕಾರರು- ಶ್ರೀ ಗಿರಿ ವೈದ್ಯರು, ಅಮೇರಿಕ, ಶ್ರೀ ದಿವಾಕರ ಚೆನ್ನೈ

೧೯-೭-೯೯ ಗೌರವ ಸದಸ್ಯತ್ವ ಪ್ರದಾನ, ಡಾ|| ಯು.ಆರ್. ಅನಂತಮೂರ್ತಿ ಅವರಿಗೆ, ಅಭಿನಂದನೆ- ಶ್ರೀ ಎಂ.ಪಿ. ಪ್ರಕಾಶ, ಡಾ|| ಗಿರಡ್ಡಿ ಗೋವಿಂದರಾಜ, ಅಧ್ಯಕ್ಷತೆ- ಶ್ರೀ ಕೆ.ವಿ. ಸುಬ್ಬಣ್ಣ

೨೪-೧೦-೯೯ ಮರಣವೇ ಮಹಾನವಮಿ ವಿಚಾರ ಸಂಕಿರಣ (ಶರಣ ಸಾಹಿತ್ಯ ಪರಿಷತ್ ಸಹಯೋಗ), ಪ್ರಾಸ್ತಾವಿಕ- ಡಾ|| ಗೊ.ರು. ಚನ್ನಬಸಪ್ಪ, ಉಪನ್ಯಾಸ- ಡಾ|| ಹೆಚ್.ಎಂ. ಮರುಳಸಿದ್ಧಪ್ಪ, ಡಾ. ಅಶೋಕ ಪೈ, ಡಾ. ಕೇಶವ ಮೂರ್ತಿ, ಡಾ. ಷಣ್ಮುಖಯ್ಯ ಅಕ್ಕೂರಮಠ, ಅಧ್ಯಕ್ಷತೆ- ಡಾ. ಎಂ.ಸಿ. ಮೋದಿ, ಸಮಾರೋಪ- ಶ್ರೀ ಎಸ್.ಡಿ. ಜೆನ್ನಿವಾಲೆ

೧೬-೧೧-೯೯ ಗೌರವ ಸಮರ್ಪಣ ಸಮಾರಂಭ ಶ್ರೀ ಎನ್.ಕೆ. ಹರಿಹರೇಶ್ವರ ಅವರಿಗೆ, ಅಭಿನಂದನೆ- ಡಾ|| ಎಸ್.ಎನ್. ಲಕ್ಷ್ಮೀನಾರಾಯಣ ಭಟ್ಟ

೧೮-೧೧-೯೯ (ಎನ್.ಬಿ.ಟಿ. ಸಹಯೋಗದೊಂದಿಗೆ) ಶ್ರೀ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರೊಡನೆ ಒಂದು ಸಂಜೆ.

೨೮-೧೧-೯೯ ಶಂಬಾ ಪ್ರಶಸ್ತಿ ಪ್ರದಾನ ಸಂವಾದ, ಡಾ|| ಎ.ಎನ್. ಮೂರ್ತಿರಾವ್ ಅವರಿಗೆ, ಅಭಿನಂದನೆ- ಡಾ|| ಶ್ರೀಕಂಠ ಕೂಡಿಗೆ

೯-೧೨-೯೯ 'ಕಾರಂತ ಯುಗಾಂತ' ಗ್ರಂಥ ಬಿಡುಗಡೆ, ಉಪನ್ಯಾಸ- ಪ್ರೊ|| ಡಿ. ರಘುನಾಥ ರಾವ್, ಗ್ರಂಥ ಬಿಡುಗಡೆ, ಅಧ್ಯಕ್ಷತೆ- ಡಾ|| ತೀ.ನಂ. ಶಂಕರನಾರಾಯಣ

೨೬-೧೨-೯೯ ಕವಿಗೋಷ್ಠಿ ಮತ್ತು ಕಾವ್ಯ ಚಿಂತನೆ, ಕಾವ್ಯ ಚಿಂತನೆ- ಡಾ|| ಸುಮತೀಂದ್ರ ನಾಡಿಗ್

* * *

೧೬-೧-೨೦೦೦ ೨೩-೧-೨೦೦೦ - ಶ್ರೋತೃ ಹಿಂದೂಸ್ಥಾನಿ ಸಂಗೀತ ಸಮ್ಮೇಳನ

೨೭-೧-೨೦೦೦ "ಪುಸ್ತಕ ಬಿಡುಗಡೆ ಸಮಾರಂಭ" ಕವಿತಾ ವಾಚನ, ದುಂಡಿರಾಜ್ ಮತ್ತು ಹಿರೇಮಗಳೂರು ಕಣ್ಣನ್, ಗ್ರಂಥಗಳು- "ಮೃಗತೃಷ್ಣಾ", "ನೆಲದಾಳ", "ಇಪ್ಪತ್ತು ಭಾರತೀಯ ಕಥೆಗಳು"

೨೭-೨-೨೦೦೦ "ಜೈನ ಸಾಹಿತ್ಯ ಕುರಿತು ವಿಚಾರ ಸಂಕಿರಣ" (ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಂಯುಕ್ತ ಆಶ್ರಯದಲ್ಲಿ)

೨೮-೨-೨೦೦೦ ಶ್ರೀ ಶಿವಮೊಗ್ಗ ಸುಬ್ಬಣ್ಣನವರಿಗೆ ಸನ್ಮಾನ, ಅಧ್ಯಕ್ಷತೆ- ಶ್ರೀ ಟಿ.ಆರ್. ಪಾಂಡುರಂಗ, ಅಭಿನಂದನಾ- ಪ್ರೊ|| ಪಾಂಡುರಂಗ ಉಡುಪ, ಭಾವಾಭಿನಂದನೆ- ಶ್ರೀ ಗರ್ತಿಕೇರೆ ರಾಘಣ್ಣ, ಶ್ರೀಮತಿ ವಾಸಂತಿ ಶೆಣೈ, ಶ್ರೀ ಕೆ. ಯುವರಾಜ್ ಮತ್ತು ಸ್ಥಳೀಯ ಕಲಾವಿದರು.

೧೯-೪-೨೦೦೦ ಟಿ.ಎಸ್.ಆರ್. ಪ್ರಶಸ್ತಿ ಪುರಸ್ಕೃತ ಶ್ರೀ ಕೆ. ಶಾಮರಾವ್ ಅವರಿಗೆ ಅಭಿನಂದನೆ ಮತ್ತು ವಿಚಾರ ಸಂಕಿರಣ ಕನ್ನಡ ಪತ್ರಿಕೋದ್ಯಮ ಕುರಿತು (ಜಿಲ್ಲಾ ಕ.ಸಾ.ಪ. ಸಂಯುಕ್ತ ಆಶ್ರಯದಲ್ಲಿ)

೧೪-೫-೨೦೦೦ ಸಂವಾದ ಮತ್ತು "ಹಾ.ಮಾ.ನಾ." ಪ್ರಶಸ್ತಿ ಪ್ರದಾನ ಸಮಾರಂಭ, ಶ್ರೀ ಹೆಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಅವರಿಗೆ ಹಾ.ಮಾ.ನಾ. ಪ್ರಶಸ್ತಿ, ಅಭಿನಂದನೆ- ವಿದ್ವಾನ್ ಎಂ. ಶಿವಕುಮಾರ ಸ್ವಾಮಿ, ಅಧ್ಯಕ್ಷತೆ- ಶ್ರೀ ಟಿ.ಆರ್. ಪಾಂಡುರಂಗ

೮-೭-೨೦೦೦ "ಲಂಕೇಶ್ ಒಂದು ನೆನಪು" ವಿಚಾರ ಸಂಕಿರಣ, ಅಧ್ಯಕ್ಷತೆ- ಶ್ರೀಮತಿ ಗೌರಿ ಲಂಕೇಶ್, ಮುಖ್ಯ ಅತಿಥಿ- ಶ್ರೀ ಕೆ.ಎಚ್. ಶ್ರೀನಿವಾಸ್, ಶ್ರೀ ಎಂ.ಪಿ. ಪ್ರಕಾಶ್, ಉಪನ್ಯಾಸ- ಪ್ರೊ|| ಕೆ.ಎಸ್. ಉಮಾಪತಿ, ಶ್ರೀ ರವೀಂದ್ರ ರೇಷ್ಮೆ, ಶ್ರೀ ಟಿ.ಎನ್. ಸೀತಾರಾಂ

೧೫-೭-೨೦೦೦ "ಡಾ. ರಾಜ್‌ಕುಮಾರ್ ಅವರಿಗೆ ಶುಭ ಹಾರೈಕೆ" (ಶ್ರೀಗುರು ಗುಹಗಾನ ಸಭಾ ಆಶ್ರಯದಲ್ಲಿ) ಉದ್ಘಾಟನೆ- ವಿದ್ವಾನ್ ಶೃಂಗೇರಿ ಹೆಚ್.ಎಸ್. ನಾಗರಾಜ, ಅಧ್ಯಕ್ಷತೆ- ಶ್ರೀ ಟಿ.ಆರ್. ಪಾಂಡುರಂಗ, ಮುಖ್ಯ ಅತಿಥಿ- ಶ್ರೀ ಪಿ.ಎನ್. ಶ್ರೀನಿವಾಸಾಚಾರ್, ಜಿಲ್ಲಾಧಿಕಾರಿ, ಶಿವಮೊಗ್ಗ

೩೦-೯-೨೦೦೦ "ಪತ್ರಕರ್ತರೊಡನೆ ಒಂದು ಸಂಜೆ" ಸಂವಾದ, ಶ್ರೀ ಈಶ್ವರ ದೈತೋಟ ಅವರೊಂದಿಗೆ ಅಧ್ಯಕ್ಷತೆ- ಶ್ರೀ ಎ.ಎಸ್. ಚಂದ್ರಶೇಖರ

೧೪-೧೦-೨೦೦೦ "ಪುಸ್ತಕಗಳ ಬಿಡುಗಡೆ" ಮತ್ತು ರಂಗಗೀತೆಗಳ ಗಾಯನ ಶ್ರೀಮತಿ ಸುಭದ್ರಮ್ಮ ಮನ್ಸೂರ್, "ಮಾಧವಿ" (ಸಣ್ಣ ಕಥೆ), ಪಾರಿಜಾತ (ಕವನ ಸಂಕಲನ), ಮುಖ್ಯ ಅತಿಥಿ: ಫಾದರ್. ಸ್ಟ್ಯಾನಿ ಡಿಸೋಜಾ, ಪುಸ್ತಕ ಬಿಡುಗಡೆ- ಡಾ|| ಕುಮಾರ ಚಲ್ಯ, ಪ್ರೊ|| ಎಂ.ಬಿ. ನಟರಾಜ, ಅಧ್ಯಕ್ಷತೆ- ಶ್ರೀ ಟಿ.ಆರ್. ಪಾಂಡುರಂಗ, ಲೇಖಕರು- ಶ್ರೀ ರೋಹಿತದಾಸ್ ಎನ್. ಶೇಟ್, ಶ್ರೀ ಮಧುಸೂದನ್ ಜೆ. ಘಾಟೆ

೧೨-೧೧-೨೦೦೦ - ಶ್ರೀಮತಿ ಸುಧಾಮೂರ್ತಿ ಅವರ "ಕಂಪ್ಯೂಟರ್ ಲೋಕದಲ್ಲಿ" ಪುಸ್ತಕ ಬಿಡುಗಡೆ, ಪುಸ್ತಕ- ಶ್ರೀಮತಿ ಸುಧಾಮೂರ್ತಿ ಅವರ ಸಾಹಿತ್ಯ ಅವಲೋಕನ, ಶ್ರೀ ಟಿ.ಆರ್. ಪಾಂಡುರಂಗ, ಶ್ರೀ ಎಂ.ಎಸ್. ರಜನೀಕಾಂತ್, ಅಧ್ಯಕ್ಷತೆ- ಶ್ರೀ ಮತ್ತೂರು ಕೃಷ್ಣಮೂರ್ತಿ, ಮುಖ್ಯ ಅತಿಥಿಗಳು- ಶ್ರೀಮತಿ ಸುಧಾಮೂರ್ತಿ, ಪ್ರೊ|| ಪಾಂಡುರಂಗ ಉಡುಪ

೧೮-೧೧-೨೦೦೦ "ಸಂಗೀತ ಜಾಗರಣೆ" "ಶ್ರೋತೃ" ಸಹಯೋಗದೊಂದಿಗೆ

* * *

೬-೧-೦೧ "ಪ್ರೊ|| ಎಸ್.ವಿ. ಪರಮೇಶ್ವರ ಭಟ್ಟ", "ಡಾ|| ಹಾ.ಮಾ.ನಾ. ಒಂದು ನೆನಪು" ಅಧ್ಯಕ್ಷತೆ- ಪ್ರೊ|| ಪಾಂಡುರಂಗ ಉಡುಪ, ಉಪನ್ಯಾಸ- ಪ್ರೊ|| ಎಸ್.ವಿ. ಪರಮೇಶ್ವರಭಟ್ಟ ಅವರ ಕೃತಿಗಳ ಕುರಿತು, ಡಾ|| ಸಿ.ಪಿ. ಕೃಷ್ಣಕುಮಾರ್, ಡಾ|| ಹಾ.ಮಾ.ನಾ. ಕೃತಿಗಳ ಕುರಿತು, ಡಾ|| ಎಸ್.ಎಸ್. ತಾರಾನಾಥ

೭-೧-೦೧ "ಶ್ರೀ ವಿದ್ಯಾರಣ್ಯ ಶ್ರೀ ಚರಣ ಸಂಗೀತ ಸಮ್ಮೇಳನ-೧೭"

ರಿಂದ ೧೪-೧-೦೧ - "ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ" 'ಶ್ರೋತೃ'

೨೭-೧-೦೧ ಕುವೆಂಪು ಮತ್ತು ಎಸ್.ವಿ.ಪಿ. ಪ್ರಶಸ್ತಿ ವಿತರಣೆ, ಕಾವ್ಯ ವಾಚನ ಮತ್ತು ಉಪನ್ಯಾಸ, ಕಾವ್ಯವಾಚನ-ಉಪನ್ಯಾಸ- ಶ್ರೀ ಬಿ.ಎಂ. ಇದಿನಬ್ಬ

೩-೦೧ "ವಿಚಾರ ಸಂಕಿರಣ" ಉದ್ಘಾಟನೆ- ಡಾ|| ಚಂಪಾ, ಪ್ರಬಂಧ ಮಂಡನೆ- ಡಾ|| ಎಲ್. ಹನುಮಂತಯ್ಯ

೨೪-೨-೦೧ "ವಿಚಾರ ಸಂಕಿರಣ" ಉದ್ಘಾಟನೆ- ಉಪನ್ಯಾಸ- ಶ್ರೀ ವಿಜಯಕುಮಾರ ಮಹಾನುಭಾವಿಗಳು, ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ, ಡಾ|| ವಿಜಯಾದೇವಿ, ಶ್ರೀ ಗೋಪಾಲಕೃಷ್ಣ ಕೊಳ್ತಾಯ

೧೦-೩-೦೧ ಬೇಂದ್ರೆ ಕಾವ್ಯ ನಾದ-ಅರ್ಥ-ಅರಿವು ಪುಸ್ತಕ ಬಿಡುಗಡೆ, ಉಪನ್ಯಾಸ- ಡಾ|| ಜಿ.ಹೆಚ್. ನಾಯಕ್, 'ಮೊದಲ ಓದು' 'ಚೌಕಟ್ಟಿನ ಜನ', ಪುಸ್ತಕ ಬಿಡುಗಡೆ- ಶ್ರೀ ಕೆ.ಜಿ. ಸುಬ್ರಹ್ಮಣ್ಯ, ಬೇಂದ್ರೆ ಗೀತ ಗಾಯನ- ಶ್ರೀಮತಿ ಜಯಶ್ರೀ ಶ್ರೀಧರ್, ಶ್ರೀಮತಿ ಅಮೃತಾ ಚಂದ್ರಶೇಖರ್

೨೭-೩-೦೧ ಅಭಿನಂದನ ಸಮಾರಂಭ- ಶ್ರೀ ಮತಿಘಟ್ಟ ಕೃಷ್ಣಮೂರ್ತಿ ಅವರಿಗೆ, ಅಭಿನಂದನೆ- ಪ್ರೊ|| ಪಾಂಡುರಂಗ ಉಡುಪ, ಉಪನ್ಯಾಸ- ಡಾ|| ಬಸವರಾಜ ಮಲಶೆಟ್ಟಿ

೭-೪-೦೧ ದಾಸ ಸಾಹಿತ್ಯ- ಉಪನ್ಯಾಸ- ಡಾ|| ಬಸವರಾಜ ಸಬರದ, ಶ್ರೀಮತಿ ರಾಜಶ್ರೀ ಕಲ್ಲೂರಕರ್

೧೪-೪-೦೧ ತತ್ವಪದಗಳಲ್ಲಿ ಜೀವನ ದರ್ಶನ, ಮುಖ್ಯ ಅತಿಥಿ- ಪ್ರೊ|| ಡಿ. ರಘುನಾಥ ರಾವ್, ಉಪನ್ಯಾಸ- ಡಾ|| ಮಲ್ಲಿಕಾರ್ಜುನ ಸಿಂಧಗಿ

೫-೫-೦೧ ಶಂಬಾ ಪ್ರಶಸ್ತಿ ಪ್ರದಾನ, ಸನ್ಮಾನ- ಡಾ|| ಜಿ.ಎಸ್. ದೀಕ್ಷಿತ್ ಅವರಿಗೆ, ಅಭಿನಂದನೆ- ಪ್ರೊ|| ರಘುನಾಥಭಟ್, ಉಪನ್ಯಾಸ- ಡಾ|| ಸೂರ್ಯನಾಥ ಕಾಮತ್

೧೭-೬-೦೧ ಉಪನ್ಯಾಸ- ಪ್ರೊ|| ದೊಡ್ಡರಂಗೇಗೌಡ

೭-೭-೦೧ ಸ್ವರಚಿತ ಕಾವ್ಯವಾಚನ ಅವಲೋಕನ, ಪ್ರೊ|| ಶ್ಯಾಮಸುಂದರ ಬಿದರಕುಂದಿ, "ತೆರೆಮರೆಯ ಸೌಂದರ್ಯ ಬಿಡುಗಡೆ"

೨೧-೭-೦೧ ಶ್ರಾವಣ ಸಂಜೆ ಗೀತಗಾಯನ (ಸ್ಥಳೀಯ ಕಲಾವಿದರು)

೨೨-೭-೦೧ "ತುಂಗಭದ್ರಾ ನದಿ ಸಂಸ್ಕೃತಿ" ಕವಿಗೋಷ್ಠಿ, ಪ್ರಾಸ್ತಾವಿಕ- ಶ್ರೀ ಸತ್ಯನಾರಾಯಣರಾವ್ ಅಣತಿ, ಕಾವ್ಯವಾಚನ- ಡಾ|| ಯು.ಆರ್. ಅನಂತಮೂರ್ತಿ, ಶ್ರೀಮತಿ ಎಸ್. ಮಾಲತಿ

೧೧-೮-೦೧ "ಕವಿ ನಂದಳಿಕೆ ಮುದ್ರಣ ಶತಸ್ಮೃತಿ" (ಪ್ರಸಾರಾಂಗ ಕುವೆಂಪು ವಿ.ವಿ. ಆಶ್ರಯದಲ್ಲಿ) ಮುಖ್ಯ ಅತಿಥಿ- ಡಾ|| ಕಯ್ಯಾರ ಕಿಞ್ಞಣ್ಣರೈ, ಉಪನ್ಯಾಸ- ಡಾ|| ಬಿ.ಎ. ವಿವೇಕ ರೈ

೨೫-೮-೦೧ "ಸ್ವಾತಂತ್ರ್ಯೋತ್ತರ ಭಾರತ" ಕವಿಗೋಷ್ಠಿ ಸ್ವರಚಿತ ಕವಿತಾ ವಾಚನ- ಶ್ರೀಮತಿ ಮಾಲತಿ ಪಟ್ಟಣಶೆಟ್ಟಿ, ಅಧ್ಯಕ್ಷತೆ- ಡಾ|| ಎ.ಎಸ್. ವೇಣುಗೋಪಾಲ ರಾವ್

೧೫-೯-೦೧	"ಕಾವ್ಯಾಂಜಲಿ ಕನ್ನಡ ಗೀತಗಾಯನ", ನಿರ್ದೇಶನ- ಶ್ರೀಮತಿ ಹೆಚ್. ವಿಶಾಲಾಕ್ಷಿ, ಅಧ್ಯಕ್ಷತೆ- ಪ್ರೊ॥ ಪಾಂಡುರಂಗ ಉಡುಪ
೨೯-೯-೦೧	"ಪ್ರಶಸ್ತಿ ಪ್ರದಾನ ಸಮಾರಂಭ" ಡಾ॥ ಜಿ.ಎಸ್. ಶಿವರುದ್ರಪ್ಪ ಪ್ರಶಸ್ತಿ- ಶ್ರೀಮತಿ ರೂಪ ಹಾಸನ, ಡಾ॥ ಯು.ಆರ್. ಅನಂತ ಮೂರ್ತಿ, ಪ್ರಶಸ್ತಿ- ಶ್ರೀ ಕೃಷ್ಣ ಮಾಸಡಿ, ಡಾ॥ ಹಾ.ಮಾ. ನಾಯಕ ಪ್ರಶಸ್ತಿ- ಶ್ರೀಮತಿ ಅನಿತಾ ಹುಳಿಯಾರ್, ಶ್ರೀಮತಿ ಎಂ.ಕೆ. ಇಂದಿರಾ ಪ್ರಶಸ್ತಿ- ಶ್ರೀಮತಿ ಕುಸುಮ ಶ್ರೀ ಪಿ. ಲಂಕೇಶ್ ಪ್ರಶಸ್ತಿ, ಶ್ರೀ ಅದೀಬ್ ಅಖ್ತರ್
೬-೧೦-೦೧	ಉಪನ್ಯಾಸ- "ಕುಮಾರ ವ್ಯಾಸನ ಕರ್ನಾಟಕ ಭಾರತ ಕಥಾ ಮಂಜರಿ", ಗಮಕ ಗಾಯನ- ಶ್ರೀಮತಿ ವಾಗೀಶ್ವರಿ ಶ್ರೀಧರ್, ಉಪನ್ಯಾಸ- ಶ್ರೀ ಕೃಷ್ಣಮೂರ್ತಿ ಹನೂರ
೨೭-೧೦-೦೧	"ಡಾ॥ ಶಿವರಾಮ ಕಾರಂತ ಜನ್ಮಶತಮಾನೋತ್ಸವ ವರ್ಷ" (ಶಿವರಾಮ ಕಾರಂತ ಅಧ್ಯಯನ ಕೇಂದ್ರ ಆಶ್ರಯದಲ್ಲಿ) ಸಮಾರಂಭಗಳ ಉದ್ಘಾಟನೆ ಮತ್ತು ಚಿತ್ರ ಪ್ರದರ್ಶನ
೧೦-೧೧-೦೧	"ಕನ್ನಡ ರಾಜ್ಯೋತ್ಸವ ನುಡಿ ಹಬ್ಬ" "ಕನ್ನಡ ಗೀತ ಗಾಯನ" ನಿರ್ದೇಶನ- ಶ್ರೀಮತಿ ಬಿ. ಲಲಿತಾ ಡೋಂಗ್ರೆ
೨೩-೧೧-೦೧	"ಗೌರವ ಸದಸ್ಯತ್ವ ಪ್ರದಾನ ಸಮಾರಂಭ" ಮ್ಯಾಗ್‌ಸೆಸೆ ಪ್ರಶಸ್ತಿ ಮತ್ತು ಕಾಳಿದಾಸ ಸನ್ಮಾನ ಪುರಸ್ಕೃತರು, ಶ್ರೀ ಕೆ.ವಿ. ಸುಬ್ಬಣ್ಣ ನೀ.ನಾ.ಸಂ. ಹೆಗ್ಗೋಡು ಅವರಿಗೆ.
	"ಪ್ರತಿಬಿಂಬ ಕವನ ಸಂಕಲನ" ಬಿಡುಗಡೆ, ಲೇಖಕಿ- ಶ್ರೀಮತಿ ರಮಾಶಾಸ್ತ್ರಿ
೧೬-೧೨-೦೧	"ಡಾ॥ ಕುವೆಂಪು ಪ್ರಶಸ್ತಿ", ಪ್ರೊ॥ ಎಸ್.ವಿ. ಪರಮೇಶ್ವರಭಟ್ಟ ಪುರಸ್ಕಾರ ವಿತರಣೆ, ಡಾ॥ ಶಂಬಾಜೋಶಿ ಪ್ರಶಸ್ತಿ ಪ್ರದಾನ ಸಮಾರಂಭ, ಡಾ॥ ಎಂ. ಚಿದಾನಂದಮೂರ್ತಿ ಅವರಿಗೆ, "ಸಂಜನ ದರುಶನ" ಪ್ರವಾಸ ಕಥನ ಬಿಡುಗಡೆ, ಅಧ್ಯಕ್ಷತೆ- ಪ್ರೊ॥ ಪಾಂಡುರಂಗ ಉಡುಪ

* * *

೨೦-೧-೦೨	ಡಾ॥ ಶಿವರಾಮ ಕಾರಂತ ಜನ್ಮಶತಮಾನೋತ್ಸವ ವರ್ಷ, ವಿಷಯ- ಕಾರಂತರ ಕೃತಿ 'ಬಾಳ್ವೆಯೇ ಬೆಳಕು' ಕುರಿತು, ಉಪನ್ಯಾಸ- ಪ್ರೊ॥ ಜಿ. ಭಾಸ್ಕರಮಯ್ಯ
೧೩-೨-೦೨	"ರಾಗ ಸಂಗಮ ಕನ್ನಡ ಗೀತಗಾಯನ" (ಗುರುಗುಹಗಾನ ಸಭಾ ಸಂಯುಕ್ತ ಆಶ್ರಯದಲ್ಲಿ) ಅಧ್ಯಕ್ಷತೆ- ಪ್ರೊ॥ ಪಾಂಡುರಂಗ ಉಡುಪ
೨-೩-೦೨	ಶ್ರೀ ಪೂರ್ಣಚಂದ್ರ ತೇಜಸ್ವಿ ಸಾಹಿತ್ಯ ಅಧ್ಯಯನ ಶಿಬಿರ (ನೀ.ನಾ.ಸಂ. ಆಶ್ರಯದಲ್ಲಿ) ಸಂಪನ್ಮೂಲ ವ್ಯಕ್ತಿಗಳು- ಪ್ರೊ॥ ಟಿ.ಪಿ. ಅಶೋಕ, ಡಾ॥ ಶ್ರೀಕಂಠ ಕೂಡಿಗೆ, ಡಾ॥ ರಹಮತ್ ತರೀಕೆರೆ, ಡಾ॥ ರಾಜೇಂದ್ರ ಚನ್ನಿ, ಪ್ರೊ॥ ಹೆಚ್.ಎಂ. ಕೃಷ್ಣಯ್ಯ, ಶ್ರೀ ಜೆ.ಪಿ. ಬಸವರಾಜು, ಉದ್ಘಾಟನೆ- ಪ್ರೊ॥ ಟಿ.ಪಿ. ಅಶೋಕ, ಅಧ್ಯಕ್ಷತೆ- ಶ್ರೀ ಕೆ.ಜಿ. ಸುಬ್ರಹ್ಮಣ್ಯ

೧೬-೩-೦೨	ಡಾ|| ಶಿವರಾಮ ಕಾರಂತ ಜನ್ಮಶತಮಾನೋತ್ಸವ ಉಪನ್ಯಾಸ ಮಾಲೆ-೩, ಪುಸ್ತಕ ಬಿಡುಗಡೆ, ಉಪನ್ಯಾಸ- ಪ್ರೊ|| ರಾಮದಾಸ್
೬-೪-೦೨	ಜಾನಪದ ಸಂಜೆ ಮತ್ತು ಅಭಿನಂದನ ಸಮಾರಂಭ, ಅಧ್ಯಕ್ಷತೆ- ಡಾ|| ತೀ.ನಂ. ಶಂಕರನಾರಾಯಣ, ಜಾನಪದ ಜಂಗಮ- ಶ್ರೀ ಮುದೇನೂರು ಸಂಗಣ್ಣ ಅವರಿಗೆ
೧೫-೪-೦೨	ಹಾಸ್ಯ ಸಂಜೆ, ಉಪನ್ಯಾಸ- ಶ್ರೀಮತಿ ಭುವನೇಶ್ವರಿ ಹೆಗಡೆ, ಮುಖ್ಯ ಅತಿಥಿ- ಶ್ರೀ ರಾಮಮೂರ್ತಿ ತೆಮಮನೆ, ಶ್ರೀ ಎಫ್. ಅಸಾದುಲ್ಲಾ ಬೇಗ್, ಅಧ್ಯಕ್ಷತೆ- ಪ್ರೊ|| ಪಾಂಡುರಂಗ ಉಡುಪ
೫-೫-೦೨	ಉಪನ್ಯಾಸ ಮತ್ತು ಪುಸ್ತಕ ಬಿಡುಗಡೆ ಸಮಾರಂಭ, "ಸಮಕಾಲೀನ ನಾಟಕಗಳು", ಬಿಡುಗಡೆ- ಪ್ರೊ|| ಪಾಂಡುರಂಗ ಉಡುಪ, ಪುಸ್ತಕ- ನವೋದಯ ಕತೆಗಳು
೨೫-೫-೦೨	"ಅಭಿನಂದನ ಸಮಾರಂಭ", ಪ್ರೊ|| ಜಿ.ಎಸ್. ಸಿದ್ಧಲಿಂಗಯ್ಯ ಅವರಿಗೆ, ಪ್ರಾಸ್ತಾವಿಕ ನುಡಿ- ಶ್ರೀ ಕೆ.ಜಿ. ಸುಬ್ರಹ್ಮಣ್ಯ
೮-೬-೦೨	ಜಾಗತೀಕರಣ ಒಂದು ಮಂಥನ ಎರಡು ದಿನಗಳ ವಿಚಾರ ಸಂಕಿರಣ
೯-೬-೦೨	ಉದ್ಘಾಟನೆ- ಪ್ರೊ|| ಕೆ. ಚಿದಾನಂದಗೌಡ, ಮುಖ್ಯ ಅತಿಥಿ- ಪ್ರೊ|| ಪಾಂಡುರಂಗ ಉಡುಪ, ಅಧ್ಯಕ್ಷತೆ- ಡಾ|| ಗುರುಲಿಂಗ ಕಾಪಸೆ
೨೯-೬-೦೨	ಉಪನ್ಯಾಸ ಮತ್ತು ಪುಸ್ತಕ ಬಿಡುಗಡೆ, ಕುಂ. ವೀರಭದ್ರಪ್ಪ, ಅಧ್ಯಕ್ಷತೆ- ಪ್ರೊ|| ಪಾಂಡುರಂಗ ಉಡುಪ, ವಿಷಯ- "ಶಿಲ್ಪಿ" ನಾಟಕ ಕೃತಿ ಬಿಡುಗಡೆ, ಸಮಗ್ರ ಕವಿತೆ- ಶ್ರೀ ಕೆ.ಜಿ. ಸುಬ್ರಹ್ಮಣ್ಯ

* * *

೧೩-೭-೦೨	"ಕವಿಗೋಷ್ಠಿ ಉಪನ್ಯಾಸ" ಪುಸ್ತಕ ಬಿಡುಗಡೆ, ಉಪನ್ಯಾಸ- ಡಾ|| ಹೆಚ್.ಆರ್. ಸಿದ್ಧಲಿಂಗಯ್ಯ ವಿಷಯ- ಕಾವ್ಯ ಸಂವಹನ, ಸಂಸ್ಕೃತಿ ಚಂದನ ಬಿಡುಗಡೆ
೩-೮-೦೨	ಸೇಡಿಯಾಪು ಜನ್ಮಶತಮಾನೋತ್ಸವ ಉಪನ್ಯಾಸ- ಪ್ರೊ|| ಎಂ. ರಾಮಚಂದ್ರ, ಶ್ರೀ ಹೆಚ್. ಚಂದ್ರಶೇಖರ ಕೆದ್ಲಾಯ, ಅಧ್ಯಕ್ಷತೆ- ಶ್ರೀ ಪಿ. ಶ್ರೀನಿವಾಸ ಅಡಿಗ
೨೪-೮-೦೨	"ಪ್ರಶಸ್ತಿ ಪ್ರದಾನ ಸಮಾರಂಭ" ಪ್ರಾಸ್ತಾವಿಕ ನುಡಿ- ಶ್ರೀ ಕೆ.ಜಿ. ಸುಬ್ರಹ್ಮಣ್ಯ, ಮುಖ್ಯ ಅತಿಥಿ- ಡಾ|| ಮಲ್ಲೇಪುರಂ ಜಿ. ವೆಂಕಟೇಶ
೨೧-೯-೦೨	"ಅಭಿನಂದನ ಸಮಾರಂಭ", ಭಾಷಣ- ಡಾ|| ಮಲ್ಲೇಪುರಂ ಜಿ. ವೆಂಕಟೇಶ, ಸನ್ಮಾನ- ಪ್ರೊ|| ಎಲ್.ಎಸ್. ಶೇಷಗಿರಿರಾವ್ ಅವರಿಗೆ, ಅಧ್ಯಕ್ಷತೆ- ಶ್ರೀ ಕೆ.ಜಿ. ಸುಬ್ರಹ್ಮಣ್ಯ
೨೧-೯-೦೨	ಶತಮಾನದ ಶ್ರೇಷ್ಠ ಪುಸ್ತಕಗಳು, ಉದ್ಘಾಟನೆ- ಡಾ|| ಕೆ. ಮರುಳಸಿದ್ಧಪ್ಪ
೨೨-೯-೦೨	ಉದಯೋನ್ಮುಖ ಲೇಖಕರ ಕಮ್ಮಟ ಮುಖ್ಯ ಅತಿಥಿ- ಪ್ರೊ|| ಎಲ್.ಎಸ್. ಶೇಷಗಿರಿರಾವ್

೨೮-೯-೦೨ ಮಧುರ ಚನ್ನರ ಜನ್ಮಶತಮಾನೋತ್ಸವ, ಉಪನ್ಯಾಸ- ಡಾ|| ಗುರುಲಿಂಗ ಕಾಪಸೆ, ಡಾ|| ಎಸ್.ಕೆ. ಕೊಪ್ಪ, ಅಧ್ಯಕ್ಷತೆ- ಪ್ರೊ|| ಚನ್ನವೀರ ಕಣವಿ

೫-೧೦-೦೨ "ಕಾರಂತ ನಮನ" ದಿ|| ಬಿ.ವಿ. ಕಾರಂತ ಸಂಸ್ಮರಣೆ, ರಂಗಗೀತ ಗಾಯನ, ಕನ್ನಡ ಕಲಾ ಸಂಘ, ಟಿ.ಬಿ. ಡ್ಯಾಮ್, ಉಪನ್ಯಾಸ- ಶ್ರೀ ವೆಂಕಟರಮಣ ಐತಾಳ್, ಅಧ್ಯಕ್ಷತೆ- ಪ್ರೊ|| ಪಾಂಡುರಂಗ ಉಡುಪ

೧-೧೧-೦೨ ಡಾ|| ಶಿವರಾಮ ಕಾರಂತ ಜನ್ಮಶತಮಾನೋತ್ಸವ ವರ್ಷಾಚರಣೆಯ ಸಮಾರೋಪ, ಉಪನ್ಯಾಸ- ಶ್ರೀ ತಿರುಮಲ ಮಾವಿನಕುಳಿ, ಡಾ|| ಎಸ್.ಆರ್. ವಿಜಯ ಶಂಕರ, ಡಾ|| ಜಿ.ಎಂ. ಹೆಗಡೆ, ಶ್ರೀ ಜಿ.ಆರ್. ಲಕ್ಷ್ಮಣರಾವ್

೬-೧೧-೦೨ ರಿಂದ

೧೫-೧೧-೦೨ ಕನ್ನಡ ರಾಜ್ಯೋತ್ಸವದ ಅಂಗವಾಗಿ ವಿಶೇಷ ಉಪನ್ಯಾಸ

೨೨-೧೧-೦೨ ಕನ್ನಡ ರಾಜ್ಯೋತ್ಸವ ಅಂಗವಾಗಿ, ಕಾವೇರಿ ಚಳುವಳಿ ಒಂದು ಜನಪದ ಹೋರಾಟ, ಕನ್ನಡಪರ ಚಳುವಳಿಗಳು, ಉಪನ್ಯಾಸ- ಪ್ರಾಸ್ತಾವಿಕ ನುಡಿ- ಡಾ|| ರಾಜೇಂದ್ರ ಚೆನ್ನಿ, ಉಪನ್ಯಾಸ- ಪ್ರೊ|| ಕೆ. ರಾಮದಾಸ್

೧೧-೧೨-೦೨ ಭಾವಲಹರಿ (ಸುಮಗ ಸಂಗೀತ ಲಹರಿ) "ವಂದನಾ ಮತ್ತು ಕೃಷ್ಣ ಬರುವನಂತೆ" ಧ್ವನಿಸುರುಳಿ ಬಿಡುಗಡೆ ಅಧ್ಯಕ್ಷತೆ- ಶ್ರೀ ಕೆ.ಜಿ. ಸುಬ್ರಹ್ಮಣ್ಯ

೨೮-೧೨-೦೨ "ಕುವೆಂಪು-೯೮ ಉಪನ್ಯಾಸ" "ಪುಸ್ತಕ ಬಿಡುಗಡೆ" ಮುಖ್ಯ ಅತಿಥಿ- ಶ್ರೀ ಕೋ. ಚೆನ್ನಬಸಪ್ಪ, ಪುಸ್ತಕ ಬಿಡುಗಡೆ- ಪ್ರೊ|| ಚಿದಾನಂದಗೌಡ, ಉಪನ್ಯಾಸ- ಡಾ|| ರಂಗರಾಜ ವನದುರ್ಗ, ಪುಸ್ತಕ- ಕುವೆಂಪು ಪ್ರವಚನ

* * *

೪-೩-೦೩ "ಡಾ|| ಕುವೆಂಪು ಪ್ರಶಸ್ತಿ" ಮತ್ತು ಪ್ರೊ|| ಎಸ್.ವಿ.ಪಿ. ಪುರಸ್ಕಾರ – ಡಾ|| ಶಂ.ಬಾ. ಜೋಶಿ ಪ್ರಶಸ್ತಿ ಪ್ರಧಾನ, ಡಾ|| ಶಂ.ಬಾ. ಪ್ರಶಸ್ತಿ- ಡಾ|| ಟಿ.ವಿ. ವೆಂಕಟಾಚಲಶಾಸ್ತ್ರಿ ಅವರಿಗೆ, ಪ್ರಾಸ್ತಾವಿಕ- ಶ್ರೀ ಕೆ.ಜಿ. ಸುಬ್ರಹ್ಮಣ್ಯ ಮುಖ್ಯ ಅತಿಥಿ- ಡಾ|| ಶ್ರೀಕಂಠ ಕೂಡಿಗೆ

೮-೨-೦೩ ಮತ್ತು ೯-೨-೦೩ – ಸಂವಾದ ಕಾರ್ಯಕ್ರಮ "ಕರ್ನಾಟ ಭಾರತ ಕಥಾಮಂಜರಿ", ಅಧ್ಯಕ್ಷತೆ- ಡಾ|| ಎಚ್.ಜೆ. ಲಕ್ಕಪ್ಪಗೌಡ, ಪ್ರಾಸ್ತಾವಿಕ- ಡಾ|| ರಹಮತ್ ತರೀಕೆರೆ, ಸಮಾರಂಭ ಭಾಷಣ- ಡಾ|| ಕಿ.ರಂ. ನಾಗರಾಜ, ಪುಸ್ತಕ ಬಿಡುಗಡೆ- ಪ್ರೊ|| ಪಾಂಡುರಂಗ ಉಡುಪ

೨೮-೨-೦೩ ಸ್ತ್ರೀ ಸಂವೇದನೆ (ಮಹಿಳಾ ಕವಿಗೋಷ್ಠಿ) ವಿಷಯ- ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ, ಅಧ್ಯಕ್ಷತೆ- ಡಾ|| ಕೆ.ಆರ್. ಸಂಧ್ಯಾರೆಡ್ಡಿ

೧೩-೩-೦೩ "ಬೇಂದ್ರೆ ಸಾಹಿತ್ಯ", ಉಪನ್ಯಾಸ- ಡಾ|| ವಿ. ಚಂದ್ರಶೇಖರ ನಂಗಲಿ, ಡಾ|| ಎಂ.ಎಸ್. ಆಶಾದೇವಿ, ಪ್ರಾಸ್ತಾವಿಕ ನುಡಿ- ಶ್ರೀ ಕೆ.ಜಿ. ಸುಬ್ರಹ್ಮಣ್ಯ, ಅಧ್ಯಕ್ಷತೆ- ಪ್ರೊ|| ಪಾಂಡುರಂಗ ಉಡುಪ

೫-೪-೦೩ ಮತ್ತು
೬-೪-೦೩ ಕರ್ನಾಟಕ ಸಂಘ ಭವನ-೬೦ ಸಮಾರಂಭ, ಉದ್ಘಾಟನೆ- ಶ್ರೀ ಹರಿಕೃಷ್ಣ ಪುನರೂರು, ವಿಚಾರ ಸಂಕಿರಣ- ಡಾ|| ಸುಮತೀಂದ್ರ ನಾಡಿಗ, ಡಾ|| ಗುರುರಾವ್ ಬಾಪಟ್, ಡಾ|| ಎಲ್.ಸಿ. ಸುಮಿತ್ರ, ಸಮಾರೋಪ ಭಾಷಣ- ನಾಡೋಜ ಡಾ|| ಪಾಟೀಲ ಪುಟ್ಟಪ್ಪ

೨೬-೪-೦೩ "ಸ್ವರಾಂಜಲಿ" (ದಿ. ಅ. ಹರಗೋಪಾಲಭಟ್ಟರ ಸ್ಮರಣಾರ್ಥ) ಹಿಂದೂಸ್ಥಾನಿ ಗಾಯನ- ವಿದ್ವಾನ್ ರವೀಂದ್ರ ಹೆಗಡೆ, ಮುರೂರು

೨೪-೫-೦೩ ಪಂಡಿತ ಬಿ. ಶಿವಮೂರ್ತಿ ಶಾಸ್ತ್ರಿ ಶ್ರೀ ಎಸ್.ವಿ. ಕೃಷ್ಣಮೂರ್ತಿರಾವ್ ನೂರರ ನೆನಪು, ಉಪನ್ಯಾಸ- ಪ್ರೊ|| ಎನ್. ಬಸವಾರಾಧ್ಯ, ಶ್ರೀ ರಾಜಲಗೋಪಾಲ ಎನ್. ಗಿರಿಮಾಜಿ, ಶ್ರೀ ಶ್ರೀರಂಗರಾಜು, ಮುಖ್ಯ ಅತಿಥಿ- ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್

೭-೬-೦೩ "ವೈಜ್ಞಾನಿಕ ಮನೋಧರ್ಮ" ಉಪನ್ಯಾಸ- ಪ್ರೊ|| ಜೆ.ಆರ್. ಲಕ್ಷ್ಮಣರಾವ್, "ಸಾಹಿತ್ಯ ಸೌರಭ" ಗ್ರಂಥ ಬಿಡುಗಡೆ- ಶ್ರೀ ಟಿ. ಮಹಾಬಲೇಶ್ವರ ಭಟ್ಟರು

೨೭-೬-೦೩ "ಭಾವ ಸಂಗಮ" ಕನ್ನಡ ಗೀತಗಾಯನ ಅಧ್ಯಕ್ಷತೆ- ಶ್ರೀ ಕೆ.ಜಿ. ಸುಬ್ರಹ್ಮಣ್ಯ

೧೯-೭-೦೩ ಆನಂದ ಕಂದ - ನೂರರ ನೆನಪು ಮತ್ತು ಪ್ರಶಸ್ತಿ ಪ್ರದಾನ ಉಪನ್ಯಾಸ- ಶ್ರೀ ರಾಘವೇಂದ್ರ ಪಾಟೀಲ, ಪ್ರಶಸ್ತಿ ಪ್ರದಾನ- ಡಾ|| ಗೊ.ರು. ಚನ್ನಬಸಪ್ಪ

೧೦-೮-೦೩ "ಬೇಂದ್ರೆ ನೆನಪು ಕಾವ್ಯದ ಝುಲಕು" ಪ್ರೊ|| ವಸಂತ ಕುಷ್ಟಗಿ ಉಪನ್ಯಾಸ ಕವಿಗೋಷ್ಠಿ, ಅಧ್ಯಕ್ಷತೆ- ಶ್ರೀ ಕ.ಮ.ಶಿ. ಚಂದ್ರಶೇಖರಯ್ಯ, ಮುಖ್ಯ ಅತಿಥಿ- ಶ್ರೀ ಡಿ.ಸಿ. ರಾಜಪ್ಪ

೨೩-೮-೦೩ ಆನಂದ (ಅಜ್ಜಂಪುರ ಸೀತಾರಾಂ) ಮತ್ತು ಮಹಮದ್ ಫೀರ್ ನೂರರ ನೆನಪು ಉಪನ್ಯಾಸ- ಶ್ರೀ ಜಿ.ವಿ. ಅಯ್ಯರ್ ಮತ್ತು ಡಾ|| ಎ.ಎಸ್. ವೇಣುಗೋಪಾಲರಾವ್

೬-೯-೦೩ ಪ್ರೊ|| ಕೀರ್ತಿನಾಥ ಕುರ್ತಕೋಟಿ, ಪ್ರೊ|| ಎ.ಎನ್. ಮೂರ್ತಿರಾವ್ ಸಂಸ್ಮರಣೆ, ಉಪನ್ಯಾಸ- ಡಾ|| ಗಿರಡ್ಡಿ ಗೋವಿಂದರಾಜ, ಡಾ|| ಲಿಂಗದೇವರು ಹಳೆಮನೆ, ಡಾ|| ಟಿ.ಪಿ. ಅಶೋಕ

೨೦-೯-೦೩ ಮತ್ತು ೨೧-೯-೦೩
ಕುವೆಂಪು ವಿ.ವಿ. ಶಂಕರಘಟ್ಟ ಮತ್ತು ಸಹ್ಯಾದ್ರಿ ಚಿತ್ರ ಸಮಾಜ ಸಂಯುಕ್ತ ಆಶ್ರಯದಲ್ಲಿ (ಚಿತ್ರ ಪ್ರದರ್ಶನ ಮತ್ತು ಚರ್ಚೆ) ಶ್ರೀ ಗಿರೀಶ್ ಕಾಸರವಳ್ಳಿಯವರಿಗೆ ಸನ್ಮಾನ, ಅಭಿನಂದನೆ- ಪ್ರೊ|| ಮನು ಚಕ್ರವರ್ತಿ

೨೭-೯-೦೩ ಕರ್ನಾಟಕ ಏಕೀಕರಣ ರೂವಾರಿ ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ ದಿ. ಸಿದ್ಧವನಹಳ್ಳಿ ನಿಜಲಿಂಗಪ್ಪ ಮತ್ತು ಖ್ಯಾತ ಚಲನಚಿತ್ರದ ನಿರ್ದೇಶಕ ದಿ. ಹೆಚ್.ಎಲ್.ಎನ್. ಸಿಂಹ ನೂರರ ನೆನಪು, ಉಪನ್ಯಾಸ- ಶ್ರೀ ಎಂ.ಪಿ. ಪ್ರಕಾಶ್, ಪ್ರೊ|| ಸಿ.ಎಸ್. ನಂಜುಂಡಯ್ಯ, ಮುಖ್ಯ ಅತಿಥಿ- ಶ್ರೀ ಎಸ್.ಬಿ. ಮುದ್ದಪ್ಪ

೨೯-೧೦-೦೩	ಡಾ|| ಶಂಬಾ ಜೋಶಿ ಪ್ರಶಸ್ತಿ ಪ್ರದಾನ- ಪ್ರೊ|| ಎಸ್. ಬಸವಾರಾಧ್ಯ ಅವರಿಗೆ, ಕಡೆಂಗೋಡ್ಲು ಶಂಕರಭಟ್ಟ ನೂರರ ನೆನಪು, ಪ್ರಶಸ್ತಿ ಪ್ರದಾನ- ಶ್ರೀ ಕೆ.ಜಿ. ಸುಬ್ರಹ್ಮಣ್ಯ, ಉಪನ್ಯಾಸ- ಪ್ರೊ|| ಎಂ. ರಾಮಚಂದ್ರ
೧-೧೧-೦೩	"ಕನ್ನಡ ರಾಜ್ಯೋತ್ಸವ ಅಂಗವಾಗಿ ವಿಶೇಷ ಉಪನ್ಯಾಸ"
೮-೧೧-೦೩	(ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದೊಂದಿಗೆ) ವಿಚಾರ ಸಾಹಿತ್ಯ ಕಮ್ಮಟ, ಉದ್ಘಾಟನೆ- ಪ್ರೊ|| ಚನ್ನಣ್ಣ ವಾಲೀಕಾರ, ಅಧ್ಯಕ್ಷತೆ- ಡಾ|| ಮಲ್ಲೇಪುರಂ ಜಿ. ವೆಂಕಟೇಶ, ಸಮಾರೋಪ- ಡಾ|| ರಾಜೇಂದ್ರ ಚೆನ್ನಿ
೧೦-೧೧-೦೩	ಕನ್ನಡ ಪುಸ್ತಕಗಳ ಪ್ರದರ್ಶನ - ಮಾರಾಟ
೧೬-೧೨-೦೩	"ಕುವೆಂಪು ಪ್ರಶಸ್ತಿ" ಎಸ್.ವಿ. ಪರಮೇಶ್ವರಭಟ್ಟ ಪುರಸ್ಕಾರ ವಿತರಣೆ ಮತ್ತು ಜಿ.ಬಿ. ಜೋಶಿ (ಜಡಭರತ) ನೂರರ ನೆನಪು, ಮುಖ್ಯ ಅತಿಥಿ- ಡಾ|| ತೀ.ನಂ. ಶಂಕರನಾರಾಯಣ, ಪ್ರಶಸ್ತಿ ಪುರಸ್ಕಾರ- ಪ್ರೊ|| ಪಾಂಡುರಂಗ ಉಡುಪ, ಉಪನ್ಯಾಸ- ಪ್ರೊ|| ದುಶ್ಯಂತ ನಾಡಗೌಡ, ಅಧ್ಯಕ್ಷತೆ- ಪ್ರೊ|| ಕೆ. ಚಿದಾನಂದಗೌಡ

* * *

೧೦-೧-೦೪	ಕುವೆಂಪು ಜನ್ಮಶತಮಾನೋತ್ಸವ ವರ್ಷಾಚರಣೆ ಉದ್ಘಾಟನಾ ಸಮಾರಂಭ, ಕುವೆಂಪು ಭಾವಗೀತೆಗಳ ಗಾಯನ, ಮುಖ್ಯ ಅತಿಥಿ- ಶ್ರೀ ಡಿ.ಆರ್. ರತ್ನಾಕರ್, ಉಪನ್ಯಾಸ- ಪ್ರೊ|| ಜೆ.ಕೆ. ರಮೇಶ, ವೃಂದಗಾನ ವಿಜೇತ ತಂಡಗಳಿಗೆ ಪ್ರಶಸ್ತಿ ಪತ್ರ ಮತ್ತು ನಗದು ಪುರಸ್ಕಾರ- ಪ್ರೊ|| ಪಾಂಡುರಂಗ ಉಡುಪ, ಉದ್ಘಾಟನೆ- ಪ್ರೊ|| ಕೆ. ರಾಮದಾಸ, ಅಧ್ಯಕ್ಷತೆ- ಶ್ರೀ ಎನ್.ಡಿ. ವೆಂಕಟೇಶ್
೨೮-೨-೦೪	ಆಧುನಿಕ ನಾಟಕಕಾರ ಶ್ರೀರಂಗರ ನೂರರ ನೆನಪು, ಅಧ್ಯಕ್ಷತೆ- ಪ್ರೊ|| ಪಾಂಡುರಂಗ ಉಡುಪ, ಉಪನ್ಯಾಸ- ಶ್ರೀ ಸಿ. ಬಸವಲಿಂಗಯ್ಯ, ಡಾ|| ಎಂ.ಎಸ್. ಆಶಾದೇವಿ
೨೮-೩-೦೪	"ಸಂಗೀತ ಸೌರಭ" ಶ್ರೋತೃ ಸಹಯೋಗದಲ್ಲಿ ಗಾಯನ- ಪಂಡಿತ ಗಣಪತಿಭಟ್ಟ ಹಾಸಣಗಿ
೨೯-೪-೦೪	"ಕುವೆಂಪು ಅವರೊಂದಿಗೆ ರಸ ಪ್ರಸಂಗಗಳು", ಉಪನ್ಯಾಸ- ಡಾ|| ಪ್ರಭುಶಂಕರ, ಅಧ್ಯಕ್ಷತೆ ಮತ್ತು ಪುಸ್ತಕ ಬಿಡುಗಡೆ- ಪ್ರೊ|| ಪಾಂಡುರಂಗ ಉಡುಪ, ಕೃತಿ- ಬೆಳಗುತ್ತಿ ಅರಸರು, ಪರಿಚಯ- ಡಾ|| ರಾಜಾರಾಂ ಹೆಗಡೆ.
೨೬-೫-೦೪	ಕುವೆಂಪು ಜನ್ಮಶತಮಾನೋತ್ಸವ ಸ್ಪರ್ಧೆಗಳ ಬಹುಮಾನ ವಿತರಣೆ ಮತ್ತು ಉಪನ್ಯಾಸ, ಮುಖ್ಯ ಅತಿಥಿ- ಶ್ರೀಮತಿ ಬಿ. ಜಯಶ್ರೀ, ಉಪನ್ಯಾಸ- ಡಾ|| ಎಸ್. ಪ್ರಸಾದ್ ಸ್ವಾಮಿ, ಅಧ್ಯಕ್ಷತೆ- ಪ್ರೊ|| ಪಾಂಡುರಂಗ ಉಡುಪ
೧೯-೬-೦೪	ಕೆ.ಎಸ್. ನರಸಿಂಹಸ್ವಾಮಿ ಸಂಸ್ಮರಣೆ- ಡಾ|| ಎಸ್.ಎಸ್. ಲಕ್ಷ್ಮೀನಾರಾಯಣಭಟ್ಟ, ಸಿದ್ಧವನಹಳ್ಳಿ ಕೃಷ್ಣಶರ್ಮ ನೂರರ ನೆನಪು,

ಉಪನ್ಯಾಸ- ಡಾ|| ಮಲ್ಲೇಪುರಂ ಜಿ. ವೆಂಕಟೇಶ, ಅಧ್ಯಕ್ಷತೆ- ಪ್ರೊ|| ಪಾಂಡುರಂಗ ಉಡುಪ

೩೦-೬-೦೪ ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು ಉಪನ್ಯಾಸ- ಡಾ|| ಎಂ.ಎಂ. ಕಲಬುರ್ಗಿ, ಮುಖ್ಯ ಅತಿಥಿ- ಡಾ. ಹೆಚ್.ಡಿ. ಚಂದ್ರಪ್ಪಗೌಡ

೩೦-೭-೦೪ ಕನ್ನಡ ವೈದ್ಯ ಸಾಹಿತ್ಯ ಕಮ್ಮಟ, ಮುಖ್ಯ ಅತಿಥಿ- ಡಾ|| ಚಿದಾನಂದ ಗೌಡ

೩೧-೭-೦೪ ಪು.ತಿ.ನ. ಮತ್ತು ಗೊರೂರು ರಾಮಸ್ವಾಮಿ ಐಯ್ಯಂಗಾರ್ ನೂರರ ನೆನಪು, ಉಪನ್ಯಾಸ- ಡಾ|| ಆಶಾದೇವಿ, ಶ್ರೀ ಶ್ರೀನಿವಾಸರಾಜು, ಅಧ್ಯಕ್ಷತೆ- ಪ್ರೊ|| ಪಾಂಡುರಂಗ ಉಡುಪ

೧-೮-೦೪ ವೈದ್ಯಕೀಯ ಸಾಹಿತ್ಯ ರಚನೆ ಕಾರ್ಯಗಾರ, ಉಪಸ್ಥಿತಿ- ಡಾ. ಅಶೋಕ ಪೈ

೨೧-೮-೦೪ ಮಕ್ಕಳ ಸಾಹಿತ್ಯ ಪುರಸ್ಕಾರ-೦೩ ಭಂಗಸ್ವನೆ ನಾಟಕ ಕೃತಿ ಬಿಡುಗಡೆ, ಪ್ರಶಸ್ತಿ ಪುರಸ್ಕೃತರು- ಶ್ರೀ ಕಂಚ್ಯಾಣಿ ಶರಣಪ್ಪ, ವಿಜಾಪುರ, ಭಂಗಸ್ವನೆ ಕೃತಿಕಾರರು- ಶ್ರೀ ಮಧುಸೂಧನ್ ಜಿ. ಘಾಟೆ, ಅಭಿನಂದನಾ ಭಾಷಣ- ಡಾ|| ಐ.ಎ. ಲೋಕಾಪೂರ, ಹರಿಹರ

೧೩-೯-೦೪ ಕುವೆಂಪು ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ರಸಪ್ರಸಂಗಗಳು ಉಪನ್ಯಾಸ ಮಾಲಿಕೆ, ಅಕ್ಕಮಹಾದೇವಿಯರ ವಚನ ವ್ಯಾಖ್ಯಾನ ಮತ್ತು ವಚನಾನುಭವ ಗ್ರಂಥ ಬಿಡುಗಡೆ, ಗ್ರಂಥ ಕುರಿತು- ಡಾ|| ಗುರುಲಿಂಗ ಕಾಪಸೆ, ಅಧ್ಯಕ್ಷತೆ- ಪ್ರೊ|| ಪಾಂಡುರಂಗ ಉಡುಪ, ಉದ್ಘಾಟನೆ- ಡಾ|| ಚಿದಾನಂದಗೌಡ

೧೪-೧೦-೦೪ "ಕುವೆಂಪು ಭಾವಗೀತ ಗಾಯನ" ಶಿವಮೊಗ್ಗದ ಖ್ಯಾತ ಗಾಯಕಿ ಶ್ರೀಮತಿ ಶಾಂತ ಎಸ್. ಶೆಟ್ಟಿ ಮತ್ತು ತಂಡ, ಅಧ್ಯಕ್ಷತೆ ಮತ್ತು ಬಹುಮಾನ ವಿತರಣೆ- ಪ್ರೊ|| ಪಾಂಡುರಂಗ ಉಡುಪ

೮-೧೧-೦೪ ಕರ್ನಾಟಕ ಸಂಘ ಅಮೃತ ಮಹೋತ್ಸವ ಉದ್ಘಾಟನೆ ಮತ್ತು ಡಾ|| ಶಂಬಾ ಜೋಶಿ ಪ್ರಶಸ್ತಿ ಪ್ರದಾನ, ಉದ್ಘಾಟನೆ- ಡಾ|| ಎಸ್.ಎಂ. ವೃಷಭೇಂದ್ರಸ್ವಾಮಿ, ಮುಖ್ಯ ಅತಿಥಿ- ಡಾ|| ಮಲ್ಲೇಪುರಂ ಜಿ. ವೆಂಕಟೇಶ, ಡಾ|| ಕಾಳೇಗೌಡ ನಾಗವಾರ, ಕುವೆಂಪು ನೂರರ ನೆನಪು ಉಪನ್ಯಾಸ- ಡಾ|| ರಂಗರಾಜ ವನದುರ್ಗ, ಡಾ|| ನೂ.ಸಂ. ತಿಮ್ಮೇಗೌಡ, ಪ್ರಶಸ್ತಿ ಪುರಸ್ಕೃತರು- ಡಾ|| ಸಂಗಮೇಶ ಸವದತ್ತಿ ಮಠ

೧೬-೧೧-೦೪ ರಿಂದ ೨೬-೧೧-೦೪ - ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡ ಪುಸ್ತಕಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ

೧೭-೧೨-೦೪ ಸಾಹಿತ್ಯ ಸಂಪದ ಪುಸ್ತಕ ಬಿಡುಗಡೆ, ಕುವೆಂಪು ನೂರರ ನೆನಪು ಗೀತ ಗಾಯನ, ಮುಖ್ಯ ಅತಿಥಿ- ಶ್ರೀ ಕೆ.ಜಿ. ಸುಬ್ರಹ್ಮಣ್ಯ, ಪುಸ್ತಕ ಬಿಡುಗಡೆ- ಪ್ರೊ|| ಪಾಂಡುರಂಗ ಉಡುಪ, ಕೃತಿ ಪರಿಚಯ-

ಡಾ|| ಎಸ್. ಪ್ರಸಾದಸ್ವಾಮಿ, ಪ್ರಾಸ್ತಾವಿಕ- ಶ್ರೀ ಹೆಚ್.ಟಿ. ಕೃಷ್ಣಮೂರ್ತಿ, ಉದ್ಘಾಟನೆ- ಪ್ರೊ|| ಚಿದಾನಂದಗೌಡ

ಗೋಷ್ಠಿ-೧ ಡಾ|| ಸಂಗಮೇಶ ಸವದತ್ತಿಮಠ, ಡಾ|| ಚಂದ್ರಶೇಖರ ನಂಗಲಿ, ಶ್ರೀ ರಘುನಂದನ, ಡಾ|| ಎನ್.ಎಸ್. ತಾರನಾಥ್, ಡಾ|| ಪಿ.ಎಸ್. ಗೀತಾ, ಡಾ|| ಲಿಂಗದೇವರು ಹಳೆಮನೆ

* * *

೨೪-೧-೦೫	ಕುವೆಂಪು ಪ್ರಶಸ್ತಿ, ಎಸ್.ವಿ.ಪಿ. ಪುರಸ್ಕಾರ ವಿತರಣೆ, ಭಾವಲಹರಿ- ಗೀತಗಾಯನ, ಅಧ್ಯಕ್ಷತೆ- ಪ್ರೊ|| ಚಿದಾನಂದಗೌಡ, ಮುಖ್ಯ ಅತಿಥಿ- ಡಾ|| ಶ್ರೀಕಂಠ ಕೂಡಿಗೆ
೪-೨-೦೫	ಕೈಲಾಸ ಮಾನಸ ಸರೋವರ ಯಾತ್ರೆ ಪ್ರಾತ್ಯಕ್ಷಿಕೆ, ಚಿತ್ರ ಪ್ರದರ್ಶನ ಉಪನ್ಯಾಸ, ಶ್ರೀ ಸಿ.ವಿ. ಗೋಪಿನಾಥ್
೨೦-೨-೦೫	ಬೇಂದ್ರೆ ನೆನಪು, ಕವಿಗೋಷ್ಠಿ, ಅಧ್ಯಕ್ಷತೆ/ಉಪನ್ಯಾಸ- ಡಾ|| ಹೇಮಾ ಪಟ್ಟಣಶೆಟ್ಟಿ
೨೦-೩-೦೫	ಸಿಂಪಿ ಲಿಂಗಣ್ಣ ನೂರರ ನೆನಪು, ಮುಖ್ಯ ಅತಿಥಿ- ಪ್ರೊ|| ವೀರೇಂದ್ರ ಸಿಂಪಿ, ಉಪನ್ಯಾಸ- ಡಾ|| ಶ್ಯಾಮಸುಂದರ ಬಿದರಕುಂದಿ, ಶ್ರೀಮತಿ ಕಿರಣ ದೇಸಾಯಿ
೩೦-೪-೦೫	ಎಲ್. ಗುಂಡಪ್ಪ ನೂರರ ನೆನಪು, ಮುಖ್ಯ ಅತಿಥಿ- ಶ್ರೀ ಎಲ್.ಜಿ. ಜ್ಯೋತೀಶ್ವರ, ಉಪನ್ಯಾಸ- ಡಾ|| ಎಸ್. ವಿದ್ಯಾಶಂಕರ, ಡಾ|| ತೀ.ನಂ. ಶಂಕರನಾರಾಯಣ
೨೮-೫-೦೫	ಪ್ರಶಸ್ತಿ ಪ್ರದಾನ ಉಪನ್ಯಾಸ, ಉಪನ್ಯಾಸ- ಶ್ರೀ ಕೆ.ಟಿ. ಗಟ್ಟಿ
೧೧-೬-೦೫	ಪ್ರಶಸ್ತಿ ಪ್ರದಾನ ಉಪನ್ಯಾಸ, ಉಪನ್ಯಾಸ- ಡಾ|| ತೀ.ನಂ. ಶಂಕರ ನಾರಾಯಣ
೩-೭-೦೫	ಆಷಾಢದ ಒಂದು ಸಂಜೆ - ಗೀತಗಾಯನ ಸ್ಥಳೀಯ ಗಾಯಕರಿಂದ
೨೩-೭-೦೫	ಮಕ್ಕಳ ಸಾಹಿತ್ಯ ಪ್ರಶಸ್ತಿ, ಶ್ರೀ ಪಳಕಳ ಸೀತಾರಾಮಭಟ್ಟ ಇವರಿಗೆ ಅಭಿನಂದನೆ- ಪ್ರೊ|| ಟಿ.ಎಸ್. ನಾಗರಾಜಶೆಟ್ಟಿ, ಉಪನ್ಯಾಸ- ಡಾ|| ವಿಜಯಾದೇವಿ
೩೧-೮-೦೫	ಶಂಬಾ ಪ್ರಶಸ್ತಿ ಪ್ರದಾನ, ಡಾ|| ಹಂಪನಾ ಅವರಿಗೆ, ಅಭಿನಂದನೆ- ಡಾ|| ನಲ್ಲೂರು ಪ್ರಸಾದ್, ಉಪನ್ಯಾಸ- ಡಾ|| ಕಮಲಾ ಹಂಪನಾ
೨೪-೯-೦೫	"ರಂ.ಶ್ರೀ. ಮುಗಳಿ ನೂರರ ನೆನಪು", ಉಪನ್ಯಾಸ- ಪ್ರೊ|| ಕೆ.ಬಿ. ಪ್ರಭುಪ್ರಸಾದ್, ಶ್ರೀ ನಾರಾಯಣ ಪಿ. ಭಟ್, ಡಾ|| ಎಂ.ಎಸ್. ಆಶಾದೇವಿ.
೧-೧೦-೦೫	ಭಾವ ಗೀತಗಾಯನ - ಶ್ರೀಮತಿಯವರಾದ ರೂಪಾ-ದೀಪಾ (ಕಾಸರವಳ್ಳಿ ಸಹೋದರಿಯರು)

ಅನಿಸಿಕೆಗಳು

ಶಿವಮೊಗ್ಗೆಯ ಕರ್ನಾಟಕ ಸಂಘವು ಸುಸಂಸ್ಕೃತವಾದ ಸಂಸ್ಥೆ ಎಂದು ಕೇಳಿದ್ದೆ. ಈ ದಿನದ ಭೇಟಿಯಿಂದ ಖಚಿತಪಡಿಸಿಕೊಂಡಂತಾಯ್ತು.

೭-೧೦-೮೦ -ಎಸ್.ಎಲ್. ಭೈರಪ್ಪ

* * *

ಕನ್ನಡನಾಡಿನ ಸಂಸ್ಕೃತಿಯ ಭೂಪಟದಲ್ಲಿ ಈ ಕರ್ನಾಟಕ ಸಂಘ ಒಂದು ದಿವ್ಯ ಕ್ಷೇತ್ರ ಯಾತ್ರಿಕರು ತಮ್ಮ ಭಕ್ತಿ ಕೈಂಕರ್ಯವನ್ನು ಇಲ್ಲಿ ಸಲ್ಲಿಸಿ ಕೃತಾರ್ಥರಾಗುತ್ತಿದ್ದಾರೆ.

೩೧-೫-೮೧ -ಎಸ್.ವಿ. ಪರಮೇಶ್ವರಭಟ್ಟ

೩೧-೫-೮೧ -ಹಾ.ಮಾ. ನಾಯಕ

೩೧-೫-೮೧ -ಲಕ್ಷ್ಮೀನಾರಾಯಣ ಭಟ್ಟ

* * *

ನಲವತ್ತು ವರ್ಷಗಳಾದ ಮೇಲೆ ಶಿವಮೊಗ್ಗ ಕರ್ನಾಟಕ ಸಂಘಕ್ಕೆ ಭೇಟಿ ಕೊಡುತ್ತಿದ್ದೇನೆ. ಸಂಘದ ಹಿಂದಿನ ಚರಿತ್ರೆಯನ್ನೆಲ್ಲ, ವೈಭವವನ್ನೆಲ್ಲ ನೆನಪಿಸಿಕೊಂಡು ಆನಂದಪಡುತ್ತಿದ್ದೇನೆ. ಹಿಂದೆ ಪ್ರಿಯ ಮಿತ್ರರಾಗಿದ್ದ ಕೆಲವರನ್ನು ಇಲ್ಲಿ ಭೇಟಿ ಮಾಡಿದ್ದರಿಂದ ಆನಂದ ಮತ್ತಷ್ಟು ಹೆಚ್ಚಿತು. ಸಂಘದ ಚಟುವಟಿಕೆಗಳ ವಿಷಯ ಕೇಳಿದಾಗ ಈ ಹಳೆಯ ಸಂಘದ ಯೌವನ ಇನ್ನೂ ಕಳೆದಿಲ್ಲ ಎನ್ನಿಸಿ ಸಂತೋಷವಾಯಿತು. ಸಂಘಕ್ಕೆ ಸಕಲ ಶುಭವನ್ನು ಕೋರುತ್ತೇನೆ.

-ಎ.ಎನ್. ಮೂರ್ತಿರಾವ್

* * *

ನಾನು ಇಂದು ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮದ ಅಂಗವಾಗಿ ಕರ್ನಾಟಕ ಸಂಘಕ್ಕೆ ಭೇಟಿ ಕೊಡಲು ಸಂತೋಷವಾಗಿದೆ. ಶಿವಮೊಗ್ಗದ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿರುವ ಕರ್ನಾಟಕ ಸಂಘದ ಪರಿಚಯ ಸುಮಾರು ಮೂರು ದಶಕದ್ದು. ಇಲ್ಲಿನ ಕಾರ್ಯಕ್ರಮಗಳನ್ನು ಕಂಡಿದ್ದೇನೆ. ಕೇಳಿದ್ದೇನೆ. ಹಲವಾರು ಬಾರಿ ಭಾಗವಹಿಸುವ ಸೌಭಾಗ್ಯವೂ ನನ್ನದಾಗಿದೆ. ಇದು ಬೆಳೆಯಲಿ, ಬೆಳಗಲಿ.

೧೫.೮.೮೩ -ಜೆ.ಹೆಚ್. ಪಟೇಲ್

* * *

ಶಿವಮೊಗ್ಗ ಕರ್ನಾಟಕ ಸಂಘಕ್ಕೆ ಭೇಟಿ ಕೊಟ್ಟೆ. ಈ ಕರ್ನಾಟಕ ಸಂಘ ೫೦ ವರ್ಷಗಳಿಗಿಂತ ಹೆಚ್ಚು ಕಾಲ ಕನ್ನಡ ಸೇವೆ ಮಾಡಿದೆ. ಇದೊಂದು ಕನ್ನಡಾಭಿಮಾನಿ ಸಂಘ, ಕನ್ನಡ ಇವರ ಶೈಲಿ ಸುರಕ್ಷಿತವಾಗಿದೆ. ಇವರಿಂದ ಕನ್ನಡ ಸೇವೆ ಸದಾ ನಡೆಯುತ್ತಿರಲಿ. ಈ ಸಂಘಕ್ಕೆ ಎಲ್ಲ ಒಳ್ಳೆಯದೂ ಲಭಿಸಲಿ.

೨೭-೧೦-೮೩ -ಗೊರೂರು ರಾಮಸ್ವಾಮಿ ಅಯ್ಯಂಗಾರ್

* * *

ಕರ್ನಾಟಕ ಸಂಘದ ಈ ಆವರಣ ನನಗೆ ಹಲವು ಸಂದರ್ಭಗಳಲ್ಲಿ ಪುಳಕ ತಂದುಕೊಟ್ಟಿದೆ. ಇಲ್ಲಿಗೆ ಬಂದಾಗಲೆಲ್ಲಾ ನನಗೆ ನನ್ನ ತಾಯಿ ಮನೆಗೆ ಬಂದ ಸಂತೃಪ್ತಿ ಮೂಡುತ್ತದೆ. ಈ ಸಂಘದ ಚಟುವಟಿಕೆಗಳು ಎಂದಿಗೂ ನಿಲ್ಲದಿರಲಿ.

೨೭.೧೦.೯೮೮೩ —ಹಂಪ ನಾಗರಾಜಯ್ಯ

* * *

ಈ ಸಂಘಕ್ಕೆ ಭೇಟಿ ಕೊಡುವುದೆಂದರೆ ನನಗೆ ತೌರಿಗೆ ಬಂದ ಸಂತೋಷ.

೨೭.೧೦.೮೩ —ಹಾ.ಮಾ. ನಾಯಕ

* * *

ಶಿವಮೊಗ್ಗೆಯ ಕರ್ನಾಟಕ ಸಂಘ ನನ್ನನ್ನು ಶಿವಮೊಗ್ಗೆಯ ಅಳಿಯನೆಂದು ಸಹಜವಾಗಿ ಭಾವಿಸಿ ಸನ್ಮಾನಿಸಿದ್ದಕ್ಕಾಗಿ ನಾನು ಕೃತಜ್ಞ. ಬಹುಕಾಲದಿಂದ ಕನ್ನಡದ ಸೇವೆಯನ್ನು ಮಾಡುತ್ತ ಬಂದಿರುವ ಸಂಘಕ್ಕೆ ನಾನು ನನ್ನ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

೨೦.೧೧.೮೩ —ಕೆ.ಎಸ್. ನರಸಿಂಹಸ್ವಾಮಿ

* * *

ಕಮಲಾ ಹಂಪನಾ

ಶಿವಮೊಗ್ಗದ ಕನ್ನಡ ಜನಸಮುದಾಯ ನವೋದಯ ಕಾವ್ಯದ ಹರಿಕಾರರಲ್ಲಿ ಒಬ್ಬರಾದ ಶ್ರೀ ಕೆ.ಎಸ್. ನರಸಿಂಹಸ್ವಾಮಿ ಅವರನ್ನು ತುಂಬು ಹೃದಯದಿಂದ ಸನ್ಮಾನಿಸಿದ ಈ ಸಂದರ್ಭದಲ್ಲಿ ಪಾಲ್ಗೊಂಡ ನನಗೆ, ಈ ಸಮಾರಂಭದ ಅಚ್ಚುಕಟ್ಟುತನ, ಸದಭಿರುಚಿ, ತಾಳ್ಮೆ, ಕಾವ್ಯಾಸಕ್ತಿ ಕಂಡು ಮನ ತುಂಬಿದೆ.

"ಕನ್ನಡ ಸಂಸ್ಕೃತಿಯ ರೂವಾರಿ"ಗಳನ್ನು ಹೀಗೆ ವರುಷ ವರುಷ ಸನ್ಮಾನಿಸುವ ಸತ್ಪರಂಪರೆ ನಿರಂತರವಾಗಿ ಹೀಗೆ ಮುಂದುವರೆಯಲಿ ಎಂದು ಹಾರೈಸುತ್ತೇನೆ.

೨೦.೧೧.೮೩ —ಕಮಲಾ ಹಂಪನಾ

* * *

ಬಿ.ಎಂ.ಶ್ರೀ. ಅವರು ಶಂಕುಸ್ಥಾಪನೆ ಮಾಡಿದ ಭವ್ಯ ಕರ್ನಾಟಕ ಸಂಘದ ಭವನದಲ್ಲಿಯೇ ಈ ಜನ್ಮಶತಮಾನೋತ್ಸವ ನಡೆದದ್ದು ಅರ್ಥಪೂರ್ಣ, ಔಚಿತ್ಯಪೂರ್ಣ, ಶಿವಮೊಗ್ಗದ ಜನ ಕನ್ನಡದ ಅಭಿಮಾನಿಗಳು, ಕರ್ನಾಟಕ ಸಂಘ, ಶಿವಮೊಗ್ಗದ ಜನರ ಅಭಿಮಾನವನ್ನು ಕಾಪಾಡಿಕೊಂಡು ಬರುವುದರಲ್ಲಿ ಸುಮಾರು ಅರ್ಧ ಶತಮಾನದಿಂದ ಅಭಿನಂದನೀಯವಾದ ಕೆಲಸವನ್ನು ಮಾಡಿಕೊಂಡು ಬಂದಿದೆ. ಎರಡು ಸಮ್ಮೇಳನಗಳನ್ನು ನಡೆಸಿದೆ. ಹಿರಿಯ ಕವಿಗಳನ್ನು, ಸಾಹಿತಿಗಳನ್ನು ಸನ್ಮಾನಿಸಿದೆ. ಅನೇಕ ವಿಚಾರ ಗೋಷ್ಠಿಗಳನ್ನು ನಡೆಸಿದೆ. ಇಂದು, ನಿನ್ನೆ ಕೈಲಾಸಂ- ಶ್ರೀ ಶತಮಾನೋತ್ಸವಗಳನ್ನು ನಡೆಸಿ ಧನ್ಯವಾಗಿದೆ. ಇಲ್ಲಿಗೆ ಅತಿಥಿಗಳಾಗಿ ಬಂದ ನಮ್ಮ ಕೃತಜ್ಞತೆಗೆ ಪಾತ್ರವಾಗಿದೆ.

೧೩.೫.೮೪ —ಜಿ. ನಾರಾಯಣ

* * *

ಶಿವಮೊಗ್ಗೆಯ ಕರ್ನಾಟಕ ಸಂಘವು ನಮ್ಮ ನಾಡಿನ ಪ್ರತಿಷ್ಠೆಯ ಸಂಸ್ಥೆ. ಈ ಸಂಘದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು ಒಂದು ಸಂತೋಷಪಡುವ ಹೆಮ್ಮೆಪಡುವ ಸಂಗತಿ. ಕನ್ನಡದ ಹಾಗೂ ಕರ್ನಾಟಕದ ಅಭಿಮಾನಿಗಳು ಈ ಸಂಘದಲ್ಲಿ ತುಂಬಿದ್ದಾರೆ. ಕನ್ನಡದಲ್ಲಿ ಗಣ್ಯರೆನಿಸುವ ಕವಿಗಳು ಕಲಾವಿದರು ಇಲ್ಲಿ ಬಂದು ಹೋಗಿದ್ದಾರೆ. ಕನ್ನಡಕ್ಕೋಸುಗ ಹೋರಾಡಿದವನು ಇಲ್ಲಿ ಸನ್ಮಾನಗೊಳ್ಳುವುದಕ್ಕೆ ಸಂತೋಷಪಡುತ್ತಾನೆ. ಒಳ್ಳೆಯದನ್ನು ಮೆಚ್ಚುವ ಪುರಸ್ಕರಿಸುವ ಗುಣ ಈ ಸಂಘದ ಸದಸ್ಯರಲ್ಲಿ ಇದೆ. ಕನ್ನಡ ಸಾಹಿತ್ಯ ಸಂಸ್ಕೃತಿ ಹಾಗೂ ಕಲೆಗಳು ಅಭಿವೃದ್ಧಿಗೊಳ್ಳಬೇಕೆನ್ನುವ ಕಳಕಳಿ ಹಾಗೂ ಕಕ್ಕುಲಾತಿ ಅವರ ಹೃದಯದಲ್ಲಿ ತುಂಬಿಕೊಂಡಿವೆ. ಈ ಕರ್ನಾಟಕ ಸಂಘವು ಕನ್ನಡದ ಅಭಿಮಾನಿಗಳಿಗೆಲ್ಲ ತವರು ಮನೆ ಎನಿಸಿ ಬಾಳಿ ಬೆಳಗಲೆಂದು ನಾನು ಹೃದಯತುಂಬಿ ಹಾರೈಸುತ್ತೇನೆ.

೧೦.೧೧.೮೫ —ಪಾಟೀಲ ಪುಟ್ಟಪ್ಪ

ಅಧ್ಯಕ್ಷರು, ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ
ವಿಧಾನಸೌಧ, ಬೆಂಗಳೂರು

* * *

ವಸಂತೋತ್ಸವ ಪ್ರತಿಭೆಗಳು ಗರಿಗೆದರಿ ಕುಸುಮಿಸುವ ಕಾಲ. ಕಳೆದ ಹಲವಾರು ದಶಕಗಳಿಂದ ಈ ಉತ್ಸವ ನೆರವೇರಿಸುತ್ತ ಕರ್ನಾಟಕದ ಅನೇಕ ಪ್ರತಿಭೆಗಳನ್ನು ಕರೆಯಿಸಿ ಪುರಸ್ಕರಿಸಿ ಸೃಜನಶೀಲ ಪ್ರಕ್ರಿಯೆಯನ್ನು ನಿರಂತರ ಚಲನಶೀಲ ದಿಕ್ಕಿನಲ್ಲಿ ಸಂವಹನಿಸುತ್ತಿರುವ ಕರ್ನಾಟಕ ಸಂಘ ನಮ್ಮ ನಾಡಿನ ಒಂದು ಹೆಮ್ಮೆಯ ಸಂಸ್ಥೆ. ಇಂದಿನ ಸಾಹಿತ್ಯೋತ್ಸವ ಸಮಾರಂಭದಲ್ಲಿ ಆಕಸ್ಮಿಕವಾಗಿ ಭಾಗವಹಿಸುವ ಸಂದರ್ಭ ಒಂದು ಯೋಗಾಯೋಗ. ಅವಿಸ್ಮರಣೀಯ ಕ್ಷಣ. ಈ ಹೆಮ್ಮೆಯ ಸಂಸ್ಥೆ ನಿರಂತರ ಬೆಳಗಲಿ.

೨೭.೫.೮೯ —ದೇವೇಂದ್ರಕುಮಾರ ಸಿ. ಹಕಾರಿ

* * *

ವಸಂತೋತ್ಸವದ ಭಾಗವಾಗಿ ನಾನು ಇಷ್ಟೊಂದು ದಿನ ಇರಲಾಗಲಿಲ್ಲವಾದರೂ ಒಂದು ದಿನದ ಭೇಟಿಯು ಕಣ್ಣಿಟ್ಟಿಗೊಂಡಂತಾಗಿದೆ. ಇದು ಒಳ್ಳೆ ಸಂಪ್ರದಾಯ ಹೀಗೇ ಉಳಿಸಿಕೊಂಡು ಹೋಗಬೇಕೆಂದು ನನ್ನ ಆಶಯ. ನಿಮಗೆ ದೇವರು ಇದೇ ಸೊಗಸು ಇಟ್ಟುಕೊಳ್ಳುವಂತೆ ದಯಪಾಲಿಸಲಿ ಎಂದು ಹಾರೈಸುತ್ತೇನೆ.

೨೮.೫.೮೯ —ಶಂಕರ ಮೊಕಾಶಿ ಪುಣೇಕರ

* * *

ವಸಂತೋತ್ಸವದ ಅಂಗವಾಗಿ ಜಿಲ್ಲಾ ಸಾಹಿತ್ಯ ಪರಿಷತ್ತಿನ ಘಟಕದ ಉದ್ಘಾಟನೆಯನ್ನು ಅತ್ಯಂತ ಅರ್ಥಪೂರ್ಣವಾಗಿ ನೆರವೇರಿಸಿದ ಜಿಲ್ಲಾ ಸಾಹಿತ್ಯ ಪರಿಷತ್ತು ಹಾಗೂ ಕರ್ನಾಟಕ ಸಂಘ ಅಪೂರ್ವ ಕಾರ್ಯವೊಂದನ್ನು ಮಾಡಿದೆ. ಈ ವರ್ಷದ ಅಕಾಡೆಮಿ ಪ್ರಶಸ್ತಿ ವಿಜೇತರಾದ ಡಾ. ಶಂಕರ ಮೊಕಾಶಿ ಪುಣೇಕರ್ ಅವರನ್ನು ಸನ್ಮಾನಿಸುವ ಉದಾತ್ತ ಕಾರ್ಯವನ್ನು ಮಾಡಿದ್ದೀರಿ. ಜೊತೆಗೆ ವೈವಿಧ್ಯಪೂರ್ಣವಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಯೋಜಿಸಿ ವಸಂತೋತ್ಸವದ ವೈಭವವನ್ನು ಹಾಗೂ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದೀರಿ. ಇಂದಂತೂ ನನ್ನ ಬಗೆಗೆ ತಾವು ತೋರಿರುವ ಆದರಾಭಿಮಾನಿಗಳಿಗೆ ನಾನು ವಿಶೇಷವಾಗಿ ಕೃತಜ್ಞ. ಈ ಜಿಲ್ಲಾ ಸಾಹಿತ್ಯ ಪರಿಷತ್ತಿನ ಘಟಕ ಹಾಗೂ ಕರ್ನಾಟಕ ಸಂಘಗಳು ಹೀಗೆಯೇ ಅವಳಿ-ಜವಳಿಗಳಾಗಿ ಕನ್ನಡ ಸಾಹಿತ್ಯ ಸಂಸ್ಕೃತಿ ಸಂಘಟನೆಗೆ ಕಾರಣವಾಗಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

೨೯.೫.೮೯ —ಜಿ.ಎಸ್. ಸಿದ್ಧಲಿಂಗಯ್ಯ

* * *

ಶಿವಮೊಗ್ಗೆಯ ಕರ್ನಾಟಕ ಸಂಘ ನಮ್ಮ ಕರ್ನಾಟಕ ಸಂಘಗಳಲ್ಲೆಲ್ಲ ಪ್ರಪ್ರಥಮವಾದುದು. ಕನ್ನಡ ನಾಡಿನ ಎಲ್ಲ ಪ್ರಮುಖ ಲೇಖಕರೂ ಈ ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಕನ್ನಡದ ಚಟುವಟಿಕೆಗಳನ್ನು ಜೀವಂತವಾಗಿ ಇಟ್ಟುಕೊಂಡು ಬಂದಿರುವ ಸಂಸ್ಥೆಯಾಗಿದೆ.

೨೮.೬.೮೯ –ಜಿ.ಶಂ. ಪರಮಶಿವಯ್ಯ

* * *

"ಮರಣವೇ ಮಹಾನವಮಿ" ವಿಚಾರ ಸಂಕಿರಣ

ಇಂದು "ಮರಣವೇ ಮಹಾನವಮಿ" ಚಿಂತನ ಸಂಕಿರಣ ಸಂಬಂಧ ಕರ್ನಾಟಕ ಸಂಘದ ಬಂಧುಗಳ ನಿಕಟ ಸಂಪರ್ಕವಾದಂತಾಯಿತು. ಸಂಘವು ನಮ್ಮ ನಾಡಿನ ಹಿರಿಯ ಸಾಂಸ್ಕೃತಿಕ ಸಂಸ್ಥೆಯಾಗಿದ್ದು ಮಲೆನಾಡು ಭಾಗದ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಅಗತ್ಯಗಳನ್ನು ಪೂರೈಸುತ್ತಿರುವುದು ನಿಜಕ್ಕೂ ಅಭಿನಂದನೀಯ. ನಗರದ ಇತರ ಸಾಂಸ್ಕೃತಿಕ ಸಂಸ್ಥೆಗಳೊಂದಿಗೆ ಸಹಯೋಗ ನೀಡಿ ನಡೆಸುವ ಕಾರ್ಯಕ್ರಮಗಳು ಎಂತಹ ಯಶಸ್ಸು ಪಡೆಯಬಲ್ಲುವೆಂಬುದಕ್ಕೆ ಇಂದು ನಡೆದ ಚಿಂತನ ಸಂಕಿರಣ ಒಂದು ಸಾಕ್ಷಿ. ಮುಂಬರುವ ದಿನಗಳಲ್ಲಿ ಕರ್ನಾಟಕ ಸಂಘ ಇಂತಹ ಹೆಚ್ಚು ಹೆಚ್ಚು ಸಹಯೋಗದ ಕಾರ್ಯ ಚಟುವಟಿಕೆಗಳನ್ನು ನಡೆಸುವಂತಾಗಲಿ.

ಇಂದು ನಡೆದ ಕಾರ್ಯಕ್ರಮಕ್ಕೆ ಈ ನಗರದಲ್ಲಿ ತುಂಬಿದ ಸಭೆ ಶೋಭೆ ತಂದಿತು. ಉಪನ್ಯಾಸಗಳನ್ನು ಸಾವಧಾನ ಚಿತ್ತದಿಂದ ಆಲಿಸಿದ ಸಭಿಕರನ್ನು ಕಂಡು ಸಂತೋಷವೂ ಆಯಿತು. ನಾನು ಇಲ್ಲಿಗೆ ಬಂದು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದುದು ಸಾರ್ಥಕವಾಯಿತು ಎನ್ನಿಸುತ್ತದೆ.

೨೪.೧೦.೮೯ –ಡಾ. ಹೆಚ್.ಎಂ. ಮರುಳಸಿದ್ಧಯ್ಯ

* * *

ಇಂದು ನೀವು ಏರ್ಪಡಿಸಿದ ಸಂವಾದ ಅತ್ಯುತ್ತಮ ಮಟ್ಟದ ವಿಚಾರವನ್ನು ಕೆರಳಿಸಿತು. ವ್ಯವಸ್ಥೆ ಚೆನ್ನಾಗಿದ್ದು ಜನರು ಉತ್ತಮ ರೀತಿಯಲ್ಲಿ ಭಾಗವಹಿಸಿದರು. ನಿಮ್ಮ ಸಂಘ ಚೆನ್ನಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಕ್ಯಾಲಿಫೋರ್ನಿಯಾ –ಗಿರಿ ಹೆಗಡೆ

ಪ್ರೊಫೆಸರ್, ಕ್ಯಾಲಿಫೋರ್ನಿಯಾ

* * *

"ಡಾ. ಯು.ಆರ್. ಅನಂತಮೂರ್ತಿಯವರಿಗೆ ಗೌರವ ಸದಸ್ಯತ್ವ"

ಈ ಕರ್ನಾಟಕ ಸಂಘದ ಆವರಣ, ನನ್ನ ಜೀವನದಲ್ಲಿ ಹಲವು ನೆನಪುಗಳಿಗೆ ಕಾರಣವಾಗಿದೆ. ನನ್ನನ್ನು ಬೆಳೆಸಿದೆ. ಆದ್ದರಿಂದ ಇಲ್ಲಿನ ಗೌರವ ಸದಸ್ಯತ್ವ ನನಗೆ ತುಂಬಾ ಸಂತೋಷ ತಂದಿದೆ.

೧೮.೭.೧೯೯೯ –ಡಾ|| ಯು.ಆರ್. ಅನಂತಮೂರ್ತಿ

ನನ್ನ ಸಂತೋಷ ದಾಖಲಿಸುತ್ತ.

೧೮.೭.೧೯೯೯ –ಕೆ.ವಿ. ಸುಬ್ಬಣ್ಣ

*

ಇಂದು ನೀವೆಲ್ಲ ವಿಶ್ವಾಸಪೂರ್ವಕ ಏರ್ಪಡಿಸಿರುವ ಸಮಾರಂಭ ನನಗೆ ತುಂಬಾ ಸಂತೋಷ ತಂದಿದೆ. ನನ್ನ ಬಂಧುಗಳನ್ನೆಲ್ಲ ಇನ್ನೊಮ್ಮೆ ಒಂದೆಡೆ ನೋಡಲು, ನನಗೆ ಚಿಕ್ಕಂದಿನಲ್ಲಿ ಹಲವು ಬಗೆಯಿಂದ ನೆರವು ನೀಡಿ ನನ್ನ ಓದಿಗೆ ಪೋಷಕರಾದವರನ್ನು ಇನ್ನೊಮ್ಮೆ ನೋಡಿ ಕೃತಜ್ಞತೆ ಸಲ್ಲಿಸಲು ಈ ಕಾರ್‍ಯಕ್ರಮ ಅನುವಾಯಿತು. ನಿಮಗೆಲ್ಲ ವಂದನೆಗಳು.

೧೬-೧೧-೧೯೯೯ -ಎಸ್.ಕೆ. ಹರಿಹರೇಶ್ವರ
ಅಮೆರಿಕನ್ನಡ

* * *

ಸಂವಾದ ಮತ್ತು ಶಂಭಾಜೋಶಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಮಿಕ್ಕೆಲ್ಲ ಬಗೆಯ ಕಾರ್ಯಕ್ರಮಕ್ಕಿಂತ ಹೆಚ್ಚು ಉಪಯುಕ್ತ ಎನ್ನಿಸುತ್ತದೆ.

೧೮-೧೧-೯೯ -ಕೆ.ಪಿ. ಪೂರ್ಣಚಂದ್ರ ತೇಜಸ್ವಿ

* * *

ಇಂದಿನ ಶಂ.ಬಾ. ಜೋಷಿ ಪ್ರಶಸ್ತಿ ಸಮಾರಂಭ ಬಹಳ ಹಿತವಾಗಿಯೂ ಯಶಸ್ವಿಯಾಗಿಯೂ ಜರುಗಿತು.

೨೮-೧೧-೯೯ -ಎ.ಎನ್. ಮೂರ್ತಿರಾವ್

* * *

ನಾಡಿನ ಹಾಗು ಪ್ರಪಂಚದ ಆರ್ಥಿಕ ವಿಚಾರಗಳ ಬಗ್ಗೆ, ನಮ್ಮನ್ನು ಕಾಡಿಸುವ ನಾನಾ ಸಮಸ್ಯೆಗಳ ಬಗ್ಗೆ ಮುಕ್ತವಾದ ಸಂವಾದವನ್ನು ಏರ್ಪಡಿಸಿದ್ದು, ವಿಶಿಷ್ಟವಾದ ಅನುಭವವಾಗಿತ್ತು. ನಮ್ಮ ಜನ ಈ ನಿಟ್ಟಿನಲ್ಲಿ ಚಿಂತಿಸುವುದು ಬಹುಮುಖ್ಯ ಇದು. ಇಂದು ಅತ್ಯಂತ ಅಗತ್ಯ. ನನಗೆ ಈ ಅವಕಾಶ ದೊರಕಿದ್ದಕ್ಕಾಗಿ ನಾನು ಸಂಘಕ್ಕೆ ಕೃತಜ್ಞ.

ಇದೇ ಸಂದರ್ಭದಲ್ಲಿ ಕರ್ನಾಟಕ ಸಂಘ ನನಗೆ ಹಾಮಾನಾ ಪ್ರಶಸ್ತಿ ನೀಡಿ ಅಭಿಮಾನ ವ್ಯಕ್ತಪಡಿಸಿದೆ. ಇದು ನನ್ನಲ್ಲಿ ಧನ್ಯತೆಯ ಭಾವವನ್ನು ಮೂಡಿಸಿದೆ. ಈ ಸುಂದರವಾದ ಸಮಾರಂಭದ ನೆನಪು ನನ್ನಲ್ಲಿ ಯಾವಾಗಲೂ ಹಸುರಾಗಿ ಉಳಿಯುತ್ತದೆ.

೧೪.೫.೨೦೦೦ -ಎಚ್ಚೆಸ್ಕೆ

* * *

ಈ ನೆಲದ ಮಗನಾದ, ನಾಡಿನ ಅಭಿಮಾನದ ವ್ಯಕ್ತಿಯಾದ, ಸೃಜನಶೀಲ ಶ್ರೀ ಲಂಕೇಶರ ಬಗ್ಗೆ ಒಂದು ವಿಚಾರ ಸಂಕಿರಣ ಹಾಗೂ "ಅವರ ನೆನಪು"ಯೆನ್ನುವ ಕಾರ್ಯಕ್ರಮ ರೂಪಿಸಿ, ಜನಮನದಲ್ಲಿ ಮತ್ತೆ ನಡೆದು ಬಂದ ಹಾದಿಯ ಬಗ್ಗೆ ಮೆಲುಕು ಹಾಕುವಂತೆ ಮಾಡಿದ್ದೀರಿ ಇದೊಂದು ಮಹತ್ವದ ಸಾಂಸ್ಕೃತಿಕ ಕಾರ್ಯಕ್ರಮ, ಅಭಿನಂದನೆಗಳು.

೮-೭-೨೦೦೦ -ಎಂ.ಪಿ. ಪ್ರಕಾಶ್

* * *

ನನಗೆ ಪ್ರಿಯವಾದ ಶಿವಮೊಗ್ಗದಲ್ಲಿ ನನ್ನನ್ನು ಮಾತನಾಡಲು ಕೇಳಿದ್ದು ನನ್ನ ಹೆಮ್ಮೆಗೆ ಕಾರಣವಾಗಿದೆ.

೮-೭-೨೦೦೦ -ಟಿ.ಎನ್. ಸೀತಾರಾಂ

* * *

ನಮ್ಮ ಸಂಪಾದಕರ ಸ್ಮರಣ ಸಮಾರಂಭವನ್ನು ಇಷ್ಟೊಂದು ಭಾವಪೂರ್ಣವಾಗಿ, ಯಶಸ್ವಿಯಾಗಿ ಸಂಘಟಿಸಿದ್ದಕ್ಕೆ ಅಭಿನಂದನೆಗಳು.

೮-೭-೨೦೦೦ -ರವೀಂದ್ರ ರೇಷ್ಮೆ

* * *

ನನ್ನ ಅಪ್ಪನ ನೆನಪಿನ ಸಮಾರಂಭ ಉತ್ತಮವಾಗಿತ್ತು. ಧನ್ಯವಾದಗಳು.

೮-೭-೨೦೦೦ -ಗೌರಿ ಲಂಕೇಶ್

* * *

ಹಿಂದಿಗಿಂತಲೂ ಉತ್ತಮ ಕಾರ್ಯಕ್ರಮಗಳನ್ನು ನಡೆಸುತ್ತಿದ್ದೀರಿ. ಬಹಳ ಸಂತೋಷ.

೮-೭-೨೦೦೦ -ಕೆ.ಎಸ್. ಉಮಾಪತಿ

* * *

ಕರ್ನಾಟಕದಲ್ಲೇ ಈ ಶಿವಮೊಗ್ಗೆಯ ಕರ್ನಾಟಕ ಸಂಘ ಮಾದರಿಯಾಗಿ ಸಾಂಸ್ಕೃತಿಕ, ಸಾಹಿತ್ಯಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಅದಕ್ಕಾಗಿ ಅಭಿನಂದನಗೆಳು. ಸಾಹಿತ್ಯಕವಾಗಿ ಅನಾಸ್ಥೆ ರೂಪುಗೊಳ್ಳುತ್ತಿರುವ ಈ ಕಾಲದಲ್ಲಿ ಇಂಥ ಕಾರ್ಯಕ್ರಮದ ಅಗತ್ಯ ಹೆಚ್ಚಿದೆ. ಈ ಸಾತತ್ಯ ಉಳಿಯಲಿ.

೧೫.೭.೨೦೦೦ -ಹೇಮಾ ಪಟ್ಟಣಶೆಟ್ಟಿ

* * *

ಪರಿಸರ ಎಂದರೆ ಮರಗಿಡಗಳು ಮಾತ್ರವಲ್ಲ; ಭಾಷೆ ಸಂಸ್ಕೃತಿಯೂ ಸೇರಿಕೊಳ್ಳುತ್ತದೆ. ಆದರೂ ಅಂತರಾಷ್ಟ್ರೀಯ ಒತ್ತಡದಲ್ಲಿ ಸ್ಥಳೀಯ ಭಾಷೆ, ಸಂಸ್ಕೃತಿಗಳು ಕ್ಷೀಣಗೊಳ್ಳುತ್ತಿರುವುದು ಆತಂಕಕಾರಿ. ಕನ್ನಡ ಭಾಷೆ, ಸಂಸ್ಕೃತಿ ಅಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿದೆ. ಆದ್ದರಿಂದಲೇ ಶಿವಮೊಗ್ಗ ಕರ್ನಾಟಕ ಸಂಘ ನಡೆಸುತ್ತಿರುವ ಈ ಸಂವಾದ ಕಾರ್ಯಕ್ರಮ ಮಹತ್ವ ಪಡೆಯುತ್ತವೆ. ಅಭಿನಂದನೆಗಳು.

೩೦-೯-೨೦೦೦ -ಈಶ್ವರ ದೈತೋಟ

* * *

ಕರ್ನಾಟಕ ಸಂಘವೆಂದರೆ ಹೆಣ್ಣು ಮಗಳಿಗೆ ತೌರು ಮನೆಗೆ ಬಂದಾಗ ಆಗುವ ಆನಂದವಾಗುತ್ತದೆ. ಬಹಳ ವರ್ಷಗಳಾದ ಮೇಲೆ ಬರುವಂತಾಯಿತು. ಬಾಲ್ಯದ ನೆನಪು ಆಯಿತು. ಕರ್ನಾಟಕ ಸಂಘವು ನಮ್ಮ ಶಿವಮೊಗ್ಗೆಯ ಆಭರಣ-ಅಮೂಲ್ಯ ಆಭರಣ, ಸಾಹಿತ್ಯ ಸಾಂಸ್ಕೃತಿಕ ಸೇವೆಯು ಎಂದಿಗಿಂತ ಹತ್ತು ಪಟ್ಟು ಹೆಚ್ಚು ನಡೆಯಲಿ ಎಂದೇ ಹಾರೈಸುತ್ತೇನೆ.

೧೨-೧೧-೨೦೦೦ -ಮತ್ತೂರು ಕೃಷ್ಣಮೂರ್ತಿ

* * *

ಪುಸ್ತಕದ ಬಿಡುಗಡೆ ಸಮಾರಂಭ ಕಾರ್ಯಕ್ರಮ ಬಹಳ ಸರಳ, ನೇರ ಚೆನ್ನಾಗಿತ್ತು.

೧೨-೧೧-೨೦೦೦ -ಸುಧಾಮೂರ್ತಿ

* * *

ಮಹಾಮಾಹಿತಿ ಕ್ರಾಂತಿಗೆ ಬಾಗಿಲು ತೆರೆವ ರೀತಿಯಲ್ಲಿ ಶಿವಮೊಗ್ಗದ ಕರ್ನಾಟಕ ಸಂಘ ಅತ್ಯುತ್ತಮ ಕಾರ್ಯಕ್ರಮ ಏರ್ಪಡಿಸಿದ್ದು ಅಭಿನಂದನೀಯ.

-ಎಂ.ಎಸ್. ರಜನಿಕಾಂತ
ಇಂಡಿಯನ್ ಇನ್‌ಫಾರ್ಮೇಷನ್ ಸರ್ವೀಸ್
ಬೆಂಗಳೂರು

* * *

ಸಾರ್ಥಕವಾದ ಕಾರ್ಯಕ್ರಮ, ಇದರಲ್ಲಿ ಭಾಗವಹಿಸಿದ್ದು ನನಗೆ ಧನ್ಯತೆಯ ಭಾವವನ್ನು ತಂದುಕೊಟ್ಟಿವೆ. ಕಾರ್ಯಕ್ರಮಗಳಿಂದ ಕರ್ನಾಟಕ ಸಂಘ ಎತ್ತರಕ್ಕೇರುತ್ತದೆ. ಪರಂಪರೆ ಮುಂದುವರಿಯಲಿ.

೬.೧.೨೦೦೧ -ಸಿ.ಪಿ.ಕೆ.

* * *

ಕಾರ್ಯಕ್ರಮದ ವ್ಯವಸ್ಥೆ, ಯಶಸ್ಸು ಸ್ಮರಣೀಯ ಕರ್ನಾಟಕ ಸಂಘದ ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಅಭಿಮಾನದ, ಗೌರವದ ವಿಷಯ, ಸಂಘಕ್ಕೆ ಸಂವರ್ಧನೆ ಹಾರೈಸುತ್ತೇನೆ.

೬-೧-೨೦೦೧ -ಎನ್.ಎಸ್. ತಾರಾನಾಥ

* * *

ಕರ್ನಾಟಕ ಸಂಘ, ಶಿವಮೊಗ್ಗ ಇವರು ಜರುಗಿಸಿದ ಸಮಾರಂಭದಲ್ಲಿ ನಾನು ಭಾಗವಹಿಸಿದೆ. ನನಗೆ ತುಂಬಾ ಸಂತೋಷವಾಯಿತು. ಕನ್ನಡದ ಅಭಿವೃದ್ಧಿಗಾಗಿ, ಏಳಿಗೆಗಾಗಿ ದುಡಿಯುವ ಈ ಸಂಘದಲ್ಲಿ ಅಧ್ಯಕ್ಷರಾದ ಪಾಂಡುರಂಗ ಉಡುಪರವರು ಮತ್ತು ಕಾರ್ಯದರ್ಶಿಗಳಾದ ಜಯದೇವಪ್ಪ ಜೈನಕೇರಿ ಇವರು ಇನ್ನಿತರ ಪದಾಧಿಕಾರಿಗಳು ಇಲ್ಲಿ ಅವಿರತ ದುಡಿಯುತ್ತಿರುವುದು ಶ್ಲಾಘನೀಯ. ಈ ಸಂಘ ಭವಿಷ್ಯದಲ್ಲಿ ಇನ್ನೂ ಜಾಸ್ತಿಯಾಗಿ ಕನ್ನಡದ ಅಭ್ಯುದಯಕ್ಕಾಗಿ ದುಡಿಯುವಂತಾಗಲಿ. ಕನ್ನಡದ ಡಿಂಡಿಮವನ್ನು ಈ ಸಂಘ ಬಾರಿಸುತ್ತಾ ಕನ್ನಡಿಗರನ್ನು ಜಾಗೃತಗೊಳಿಸು- ವಂತಾಗಲಿ.

೨೭-೧-೨೦೦೧ -ಇದಿನಬ್ಬ

* * *

ಬಹಳ ಅರ್ಥಪೂರ್ಣ ವಿಚಾರ ಸಂಕಿರಣವಿದು. ಶಿವಮೊಗ್ಗೆಯ ಕರ್ನಾಟಕ ಸಂಘ ತನ್ನ ಪರಂಪರೆಯನ್ನು ಜೀವಂತವಾಗಿ ಉಳಿಸಿಕೊಂಡಿರುವುದು ಸಂತೋಷದ ವಿಷಯ.

೩ ಫೆಬ್ರವರಿ ೨೦೦೧ -ಚಂದ್ರಶೇಖರ ಪಾಟೀಲ

* * *

ಸರಿಯಾದ ಕಾಲಕ್ಕೆ ಸಕಾಲಿಕ ವಿಷಯವನ್ನು ಕುರಿತು ಇವತ್ತಿನ ಸಂಕಿರಣ ಅರ್ಥಪೂರ್ಣವಾಗಿತ್ತು. ಕ.ಸಂ. ಈ ರೀತಿಯ ಚರ್ಚೆಯನ್ನು ಮುಂದುವರಿಸಲಿ, ಶುಭಕೋರಿ.

೩.೨.೨೦೦೦೧ -ಡಾ. ಎಲ್. ಹನುಮಂತಯ್ಯ

* * *

"ಹೊಸ ಶತಮಾನದ ಸಾಹಿತ್ಯಕ ಸವಾಲುಗಳು" ವಿಚಾರ ಸಂಕಿರಣದಲ್ಲಿ ಮಾತನಾಡುವ ಅವಕಾಶ ದೊರೆತಿದ್ದು ನನಗೆ ಸಂತೋಷವುಂಟು ಮಾಡಿದೆ. ಶಿವಮೊಗ್ಗದ ಕರ್ನಾಟಕ ಸಂಘವು ದೀರ್ಘಕಾಲದಿಂದ ಉತ್ಕೃಷ್ಟ ಕಾರ್ಯಕ್ರಮಗಳನ್ನು ನಡೆಸಿ, ಜನತೆಯ ವೈಚಾರಿಕ ಮಟ್ಟವನ್ನು ಎತ್ತಿಹಿಡಿದಿರುವುದು ಅಭಿಮಾನ ಪಡಬೇಕಾದ ಸಂಗತಿಯಾಗಿದೆ.

೩-೨-೨೦೦೧ -ಡಾ. ಪಿ.ವಿ. ನಾರಾಯಣ

* * *

ಕರ್ನಾಟಕ ಸಂಘ ಶಿವಮೊಗ್ಗದವರು ಪ್ರಭುದೇವರ ವಿಚಾರ ಸಂಕಿರಣ ಏರ್ಪಡಿಸಿದ ಸಮಾರಂಭದಲ್ಲಿ ಭಾಗವಹಿಸಿ ಅಪಾರ ಸಂತೋಷವಾಯಿತು. ಈ ವಿಚಾರ ಸಂಕಿರಣವು ಅತ್ಯಂತ ಸುಮಧುರವಾಗಿ ವಿಚಾರದ ಎತ್ತರದಲ್ಲಿ ನಡೆಯಿತು. ತುಂಬ ಸಂತೋಷವಾಯಿತು.

೨೪-೨-೨೦೦೧ -ಡಾ|| ವಿಜಯಕುಮಾರ ಮಹಾನುಭಾವಿಗಳು

* * *

ಕನ್ನಡ ಸಾಹಿತ್ಯಕ್ಕೆ ಎಟುಕದವನೆಂದು ಪ್ರಖ್ಯಾತರಾದ ಅಲ್ಲಮನ ಸಾಹಿತ್ಯ ಸರ್ವಕಾಲಿಕ ವೈಚಾರಿಕ ಗೋಷ್ಠಿ ನಿಜಕ್ಕೂ ಅರ್ಥಪೂರ್ಣವಾಗಿತ್ತು. ವ್ಯವಸ್ಥೆ ತುಂಬಾ ಅಚ್ಚುಕಟ್ಟಾಗಿತ್ತು. ಇಂತಹ ಕೆಲಸಗಳು ಅನಂತವಾಗಿ ನಡೆಯಲಿ ಎಂದು ಆಶಿಸುವೆ.

೨೪-೩-೨೦೦೧ -ಡಾ. ವಿಜಯಾದೇವಿ

* * *

ಇಂದು ಶಿವಮೊಗ್ಗ ಕರ್ನಾಟಕ ಸಂಘದಲ್ಲಿ ನನ್ನ ಉಪನ್ಯಾಸವಾದದ್ದು ನನ್ನ ಭಾಗ್ಯ ವಿಶೇಷವೆಂದು ಭಾವಿಸುತ್ತೇನೆ. ಒಂದು ವಿಶ್ವವಿದ್ಯಾಲಯದಂತೆ ಈ ಕರ್ನಾಟಕ ಸಂಘ ಕನ್ನಡ ಸಾಹಿತ್ಯ ಸಂಸ್ಕೃತಿಯ ಪುರೋಭಿವೃದ್ಧಿಗೆ ಕೆಲಸ ಮಾಡಿದ್ದನ್ನು ನಾನು ತಿಳಿದಿದ್ದೇನೆ. ಈ ಕಾರ್ಯವನ್ನು ಇಂದಿಗೂ ನಿರಂತರವಾಗಿ ನಡೆಸಿಕೊಂಡು ಬರುತ್ತಿರುವುದು ಹೆಮ್ಮೆಯ ವಿಷಯ.

೨೭-೩-೨೦೦೧ -ಬಸವರಾಜ ಮಲಶೆಟ್ಟಿ

* * *

ಶಿವಮೊಗ್ಗೆಯ ಕರ್ನಾಟಕ ಸಂಘಕ್ಕೆ ದೀರ್ಘವಾದ ಸಾಂಸ್ಕೃತಿಕ ಪರಂಪರೆಯಿದೆ. ಸಾಹಿತ್ಯಕ ಚಟುವಟಿಕೆಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಈ ಸಂಸ್ಥೆ ಇಲ್ಲಿಯ ವಿಶೇಷ ಉಪನ್ಯಾಸಗಳನ್ನು ಪ್ರಕಟಿಸುವುದರಿಂದ, ಇನ್ನೂ ಹೆಚ್ಚಿನ ಜ್ಞಾನ ಪ್ರಸಾರ ಮಾಡಿದಂತಾಗುತ್ತದೆ. ಈ ಸಂಸ್ಥೆಯ ಪದಾಧಿಕಾರಿಗಳು ಅಭಿನಂದನಾರ್ಹರು.

೭-೪-೨೦೦೧ -ಡಾ. ಬಸವರಾಜ ಸಬರದ

* * *

ಶಿವಮೊಗ್ಗೆಯ ಕರ್ನಾಟಕ ಸಂಘವು ನನಗೆ ಪುಣ್ಯಭೂಮಿ.

೫-೫-೨೦೦೧ -ಜಿ.ಎಸ್. ದೀಕ್ಷಿತ್

* * *

ಕಾರ್ಯಕ್ರಮ ಸೊಗಸಾಗಿ ಆಯಿತು.

೫-೫-೨೦೦೧ -ಸೂರ್ಯನಾಥ ಕಾಮತ್

* * *

ಈ ಸಂಜೆ ನಾನು "ಸ್ವರಚಿತ ಕವನಗಳ ನಿವೇದನೆ ಮತ್ತು ಅವಲೋಕನ"ವನ್ನು ಕರ್ನಾಟಕ ಸಂಘದಲ್ಲಿ ಮಾಡಿದ್ದೇನೆ. ಕಾರ್ಯಕ್ರಮವನ್ನು ರೂಪಿಸಿದ ರೀತಿಯಲ್ಲಿ ಸಾಂಸ್ಕೃತಿಕ ದೃಷ್ಟಿ ಇದೆ. ನನ್ನನ್ನು ನಡೆಸಿಕೊಂಡ ರೀತಿಯಲ್ಲಿ ಸಾಹಿತ್ಯದ ನೀತಿ ಇದೆ. ಇದು ನನಗೆ ಅತ್ಯಂತ ಮೆಚ್ಚುಗೆಯಾದ ಸಂಗತಿ.

ಸಭಿಕರು ಕೂಡ ಪ್ರತಿಸ್ಪಂದಿಸಿದ ರೀತಿ ಹಾರ್ದಿಕವಾಗಿತ್ತು. ಇದೊಂದು ಸಂತೋಷದ ಸಂದರ್ಭ. ಅಧ್ಯಕ್ಷರಾದ ಪ್ರೊ. ಪಾಂಡುರಂಗ ಉಡುಪರ ಉಪಸ್ಥಿತಿ. ಕಾರ್ಯದರ್ಶಿ ಶ್ರೀ ಜಯದೇವಪ್ಪನವರ ನಿರ್ವಹಣಾ ಯೋಜನೆ ನನಗೆ ತುಂಬ ಆತ್ಮೀಯತೆ ಹುಟ್ಟಿಸಿದೆ. 'ಸಂಘ' ಶಿವಮೊಗ್ಗದ ಘನತೆ-ಗೌರವದ ನಿರಂತರ ಪ್ರತೀಕವಾಗಿ ಉಳಿಯಲೆಂದು ಹಾರೈಕೆ.

೨, ಜುಲೈ ೨೦೦೧ -ಶ್ಯಾಮಸುಂದರ ಬಿದರಕುಂದಿ

* * *

ಶಿವಮೊಗ್ಗ ಕರ್ನಾಟಕ ಸಂಘದಲ್ಲಿ ಮುದ್ದಣ ಶತಸ್ಮೃತಿಯ ಸಮಾರಂಭಕ್ಕೆ ಬಂದು ನನಗೆ ಅತೀವ ಸಂತೋಷವಾಗಿದೆ. ಮುದ್ದಣ ನಂದಳಿಕೆ ಹೇಗೋ ಹಾಗೂ ಶಿವಮೊಗ್ಗೆಯಲ್ಲಿ ಅವರ ಈ ಸಮಾರಂಭ ಜರುಗಿಸಿ ನಾಡಿನ ಹಿರಿಯ ಈ ಸಂಸ್ಥೆ ಉತ್ತರೋತ್ತರ ಶ್ರೇಯಸ್ಸು ಪಡೆಯಲಿ.

೧೧-೮-೨೦೦೧ -ಕೈಯಾರ ಕಿಞ್ಞಣ್ಣರೈ

* * *

ಶಿವಮೊಗ್ಗ ಕರ್ನಾಟಕ ಸಂಘದಲ್ಲಿ ಈ ದಿನ ಮುದ್ದಣ್ಣ ಶತಸ್ಮೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಒಂದು ಅವಿಸ್ಮರಣೀಯ ಅನುಭವ. ಕನ್ನಡ ಸಾಹಿತ್ಯ ಸಂಸ್ಕೃತಿಯ ಪ್ರಕರಣದ ಕಾರ್ಯವನ್ನು ಶ್ರದ್ಧೆಯಿಂದ ಅನವರತ ಮಾಡುತ್ತಿರುವ ಕರ್ನಾಟಕ ಸಂಘದಲ್ಲಿ ಭಾಗವಹಿಸಿದ್ದು, ನನಗೆ ಧನ್ಯತೆಯ ಭಾವವನ್ನು ಉಂಟುಮಾಡಿದೆ. ಪ್ರೀತಿ, ಸಂಘಟನೆಗಳು ಇಲ್ಲಿ ಒಟ್ಟು ಸೇರಿವೆ. ಸಂಘದ ಎಲ್ಲರಿಗೆ ಹಾರ್ದಿಕ ಅಭಿನಂದನೆಗಳು.

-ಬಿ.ಎ. ವಿವೇಕ ರೈ

* * *

ಈ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದು ಸಂತೋಷ ಕೊಟ್ಟಿದೆ. ಈ ಪ್ರಶಸ್ತಿಗಳು ಇನ್ನಷ್ಟು ಜನಪ್ರಿಯವಾಗಲಿ ಎಂದು ಆಶಿಸುತ್ತೇನೆ.

೨೯-೯-೨೦೦೧ -ಗಿರಡ್ಡಿ ಗೋವಿಂದರಾಜ

* * *

ಅತ್ಯಂತ ಪ್ರೀತಿಯಿಂದ ನೆರವೇರಿಸಿದ ಸಮಾರಂಭ ಸಂತೋಷ ತಂದಿದೆ. ಮೌಲ್ಯಯುತವಾದ ನಿಮ್ಮ ತೀರ್ಪುಗಳು ಇನ್ನು ಮುಂದೆಯೂ ನನ್ನಂತಹಾ ಉದಯೋನ್ಮುಖರಿಗೆ ದಾರಿದೀಪವಾಗಲಿ ಎಂದು ಹಾರೈಸುವೆ.

೨೯-೯-೨೦೦೧ -ರೂಪಾ ಹಾಸನ

* * *

ಕರ್ನಾಟಕ ಸಂಘ, ಹೊಸ ಲೇಖಕರಿಗೆ ಪ್ರೋತ್ಸಾಹಿಸುತ್ತಿರುವುದರಿಂದ ಹೊಸ ಲೇಖಕರಿಗೆ ದಾರಿ ದೀಪವಾಗಿದೆ.

೨೯-೯-೨೦೦೧ -ಅದೀಬ್ ಅಖ್ತರ್

* * *

ಕರ್ನಾಟಕ ಸಂಘ ಶಿವಮೊಗ್ಗದ ಸಾಂಸ್ಕೃತಿಕ ಅಭಿರುಚಿ ಯಾರೇ ಆಗಲಿ ಮೆಚ್ಚುವಂಥದ್ದು. ಆಧುನಿಕ ವಿದ್ಯಮಾನಗಳ ನಡುವೆ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಳ್ಳಬೇಕೆಂಬ ಕಾಳಜಿ ಗಮನಾರ್ಹವಾದುದು.

೬-೧೦-೨೦೦೧ -ಡಾ॥ ಕೃಷ್ಣಮೂರ್ತಿ ಹನೂರು

* * *

ಬಹುಕಾಲದ ಹಿಂದೆಯೇ ನಾನು ಕೇಳಿದ ಹೆಸರು ಶಿವಮೊಗ್ಗ ಕರ್ನಾಟಕ ಸಂಘ. ಈ ದಿನ ಈ ಸಂಸ್ಥೆಯಲ್ಲಿ ನೆರವೇರಿದ ಶಿವರಾಮ ಕಾರಂತ ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಆದದ್ದು ಒಂದು ಸ್ಮರಣೀಯ ಘಟನೆ. ಕಾರ್ಯಕ್ರಮ ಸೊಗಸಾಗಿ ನಡೆಯಿತು. ಈ ಸಂಘದವರಿಗೆ ಹಾರ್ದಿಕವಾಗಿ ಅಭಿನಂದಿಸುತ್ತೇನೆ.

೨೭-೧೦-೨೦೦೧ -ಎಂ. ರಾಮಚಂದ್ರ

* * *

ಕಾರ್ಯಕ್ರಮ ಬಹು ಸಾರ್ಥಕವಾಗಿ ನೆರವೇರಿತು. ನನಗೆ ಬಹು ಸಂತೋಷವಾಗಿದೆ.

೧೬.೧೨.೨೦೦೧ -ಡಾ॥ ಎಂ. ಚಿದಾನಂದಮೂರ್ತಿ

* * *

ಕಾರ್ಯಕ್ರಮ ತುಂಬಾ ಚೆನ್ನಾಗಿ ನಡೆಯಿತು.

೧೬.೧೨.೨೦೦೧ -ಎಸ್.ಎಸ್. ಅಂಗಡಿ

* * *

ಸಮಾರಂಭವು ತುಂಬ ಆತ್ಮೀಯವಾಗಿತ್ತು. ನನ್ನ ಆತ್ಮೀಯ ಸ್ನೇಹಿತ ಡಾ॥ ಚಿದಾನಂದ ಮೂರ್ತಿಯವರ ವಿಚಾರಧಾರೆ ಹೃತ್ಪೂರ್ವಕವು ವಸ್ತುನಿಷ್ಠವು ಆಗಿತ್ತು.

೧೬.೧೨.೨೦೦೧ -ಡಾ॥ ಅ. ಸುಂದರ

* * *

ಕಾರ್ಯಕ್ರಮ ನಡೆಸಿರುವ ಪ್ರಕ್ರಿಯೆ ಉತ್ತಮವಾಗಿದೆ.

೨೦.೧.೨೦೦೨ ಡಾ॥ ಜಿ. ಭಾಸ್ಕರ ಮಯ್ಯ

* * *

ಕಾರ್ಯಕ್ರಮದಲ್ಲಿ ಪಾಲ್ಗೊಂಡ ಬಗ್ಗೆ ನನಗೆ ಸಂತೋಷವಾಗಿದೆ. ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಲಾಗಿದೆ.

೨೦.೧.೨೦೦೨ -ಪ್ರೊ॥ ರಾಮದಾಸ್

* * *

ಇಂದು ಕರ್ನಾಟಕ ಸಂಘದಲ್ಲಿ ಭಾಗವಹಿಸಿದ್ದು ನನ್ನ ಬದುಕಿನ ಭಾವುಕ ಅನುಭವವಾಗಿದೆ. ಹಸೂಡಿ ವೆಂಕಟಶಾಸ್ತ್ರಿಗಳ ಕನಸಿನ ಈ ಸಂಘದಲ್ಲಿ ಮುದೇನೂರ ಸಂಗಣ್ಣನವರ ಅಭಿನಂದನ ಸಮಾರಂಭದಲ್ಲಿ ಅಭಿನಂದನ ಭಾಷಣ ಮಾಡಿದ್ದು ಹೆಮ್ಮೆಯ ಸಂಗತಿಯಾಗಿದೆ. ಇದಕ್ಕೆ ಕಾರಣರಾದ ಜೈನಕೇರಿ ಮತ್ತಿತರ ಮಾನ್ಯರಿಗೆ ನಾನು ಕೃತಜ್ಞನಾಗಿದ್ದೇನೆ.

೬.೪.೨೦೦೨ -ಡಾ॥ ಮೃತ್ಯುಂಜಯ ರುಮಾಲೆ

* * *

ಇಂದು ಹಾಸ್ಯ ಸಂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಶಿವಮೊಗ್ಗ ಕರ್ನಾಟಕ ಸಂಘದ ಆತ್ಮೀಯ ವಾತಾವರಣ ಅನುಭವ ಸೊಗಸಾಗಿತ್ತು. ಕಾರ್ಯಕ್ರಮದ ಅಚ್ಚುಕಟ್ಟುತನ ಸಾಂಸ್ಕೃತಿಕ ಕಾಳಜಿಗಳು ಆಕರ್ಷಿಸಿದವು.

೧೫-೪-೨೦೦೨. -ಭುವನೇಶ್ವರಿ ಹೆಗಡೆ

* * *

ಅಭಿನಂದನೆಯ ಕಾರ್ಯಕ್ರಮದ ನೆನಪಿನಲ್ಲಿ ನನ್ನನ್ನು ಗೌರವಿಸಿ ಅಪಾರವಾದ ಪ್ರೀತಿಯನ್ನು ಹೇರಿದ್ದೀರಿ. ಆದರೆ ಪ್ರೀತಿ ಎಂದಿಗೂ ಭಾರ ಅಲ್ಲ. ಅದು ಸಂಜೀವನ ಕಡ್ಡಿ, ಇದಕ್ಕಾಗಿ ಕೃತಜ್ಞತೆಗಳು.

೨೫-೫-೨೦೦೨ -ಜಿ.ಎಸ್. ಸಿದ್ಧಲಿಂಗಯ್ಯ

* * *

ಶಿವಮೊಗ್ಗ ಕರ್ನಾಟಕ ಸಂಘದ ಇತಿಹಾಸ ಕನ್ನಡದ ಪುನರುಜ್ಜೀವನದ ಹಿನ್ನೆಲೆಯಲ್ಲಿ ಅತ್ಯಂತ ಮಹತ್ವದ್ದು. ಇಲ್ಲಿನ ಸಾಹಿತ್ಯಕ ಚಟುವಟಿಕೆಗಳು ಇಂದೂ ಮುಂದುವರಿದಿರುವುದು ಸಂತೋಷದ ಸಂಗತಿ.

೨೫-೫-೦೨ -ಎಸ್. ವಿದ್ಯಾಶಂಕರ

* * *

ಶಿವಮೊಗ್ಗ ಕರ್ನಾಟಕ ಸಂಘ, ನಾಡಿನ ಪ್ರತಿಷ್ಠಿತ ಸಂಸ್ಥೆಯಾಗಿದ್ದು, ನಾನು ಕಳೆದ ಐವತ್ತು ವರ್ಷಗಳಿಂದ ಇದರ ಪ್ರಗತಿಯನ್ನು ಕಾಣುತ್ತಾ ಬಂದಿದ್ದೇನೆ. ಇಲ್ಲಿ ಭಾಗವಹಿಸುವುದೇ ಒಂದು ಆನಂದ.

೨೯-೬-೨೦೦೨ -ಟಿ. ಮಹಾಬಲೇಶ್ವರ ಭಟ್ಟ

* * *

ಶತಮಾನದ ಶ್ರೇಷ್ಠ ಕೃತಿಗಳನ್ನು ಕುರಿತ ಕಮ್ಮಟ ಶಿವಮೊಗ್ಗ ಕರ್ನಾಟಕ ಸಂಘದ ವಿಶ್ವಾಸದ ಸನ್ಮಾನ ಎರಡು ಕಾರ್ಯಕ್ರಮಗಳಲ್ಲಿ ಸಂತೋಷವಾಗಿ ಭಾಗವಹಿಸಿದೆ. ಇಲ್ಲಿಗೆ ಪ್ರತಿ ಬಾರಿ ಬಂದಾಗಲೂ ಈ ಸಂಘದ ವಿಷಯದಲ್ಲಿ ಅಭಿಮಾನ ಹೆಚ್ಚುತ್ತದೆ. ಶಿಸ್ತು ಅಚ್ಚುಕಟ್ಟಾದ ವ್ಯವಸ್ಥೆ ಕಾರ್ಯಕ್ರಮದಲ್ಲಿ ಪ್ರೀತಿ ಎದ್ದು ಕಾಣುತ್ತರೆ. ಎಲ್ಲ ಶುಭಾಶಯಗಳು.

೨೧-೯-೨೦೦೨ -ಎಲ್.ಎಸ್. ಶೇಷಗಿರಿರಾವ್

* * *

ಕನ್ನಡದ ಅದ್ವಿತೀಯ ಅನುಭಾವಿ ಕವಿ ಮಧುರ ಚೆನ್ನರ ಜನ್ಮ ಶತಮಾನೋತ್ಸವವವನ್ನು ಆಚರಿಸಿದ ಶಿವಮೊಗ್ಗ ಕರ್ನಾಟಕ ಸಂಘದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡುವ ಅವಕಾಶ ಒದಗಿದ್ದು, ನನ್ನ ಭಾಗ್ಯ 'ಪ್ರೀತಿಯಂಥಾ ವಸ್ತು ಕಾಣೆ ಭವದಲ್ಲಿ' ಎಂದು ಮಧುರ ಚನ್ನರು ನುಡಿದಂತೆ ಅಂಥ ಪ್ರೀತಿಯನ್ನು ತೋರಿಸಿದ ಕರ್ನಾಟಕ ಸಂಘಕ್ಕೆ ನನ್ನ ನಮನ.

೨೮-೯-೨೦೦೨ -ಚೆನ್ನವೀರ ಕಣವಿ

* * *

ಅನುಭಾವಿ ಕವಿ ಮಧುರ ಚೆನ್ನರ ಜನ್ಮ ಶತಮಾನೋತ್ಸವವನ್ನು ಶ್ರೀ ಚೆನ್ನವೀರ ಕಣವಿಯವರ ಅಧ್ಯಕ್ಷತೆಯಲ್ಲಿ ಅರ್ಥಪೂರ್ಣವಾಗಿ ಕರ್ನಾಟಕ ಸಂಘವು ಆಚರಿಸಿತು. ಸುಮಾರು ಮೂರು ಗಂಟೆ ಆಸಕ್ತರು ಉಪನ್ಯಾಸಗಳನ್ನು ಆಲಿಸಿದರು.

ಶಿವಮೊಗ್ಗೆಯ ಕರ್ನಾಟಕ ಸಂಘವು ವರಕವಿ ದ.ರಾ. ಬೇಂದ್ರೆಯವರ ಆತ್ಮೀಯ ಸಂಘ ಸಾಹಿತ್ಯ ಸಂಸ್ಕೃತಿಗಳ ಉಪಾಸನೆಗೆ ಹೆಸರಾದ ಸಂಸ್ಥೆಯಿದು.

ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಹಿಂದಿನ ಪರಂಪರೆಯನ್ನು ಬೆಳೆಸುತ್ತಿರುವುದು ಸಂತೋಷದ ಸಂಗತಿ. ಅವರಿಗೆ ಅಭಿನಂದನೆಗಳು.

೨೮.೯.೨೦೦೨ -ಡಾ. ಗುರುಲಿಂಗ ಕಾಪಸೆ

* * *

ಡಾ. ಶಿವರಾಮ ಕಾರಂತರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಕರ್ನಾಟಕ ಸಂಘವು ಯೋಜಿಸಿದ ವಿಚಾರ ಸಂಕಿರಣದಲ್ಲಿ ಭಾಗವಹಿಸುವ ಅವಕಾಶ ನನಗೆ ದೊರಕಿದ್ದು ನನಗೆ ತುಂಬಾ ಸಂತೋಷ ಕೊಟ್ಟಿದೆ. ಈ ಸಂಕಿರಣದಲ್ಲಿ ಭಾಗವಹಿಸಿ ಹಾಗೂ ಕಾರಂತರ ಬಗ್ಗೆ, ಸಾಹಿತ್ಯದ ಬಗ್ಗೆ ಸಾಕಷ್ಟು ಕಲಿತಿದ್ದೇನೆ. ಸಂಘದ ಪದಾಧಿಕಾರಿಗಳೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ.

೧-೧೧-೦೨ -ಪ್ರೊ. ಸಿ.ಎನ್. ರಾಮಚಂದ್ರನ್

* * *

ಮಾನ್ಯಶ್ರೀ ಶ್ರೀ ಶಿವರಾಮ ಕಾರಂತರ ಶತಮಾನೋತ್ಸವದ ಸಮಾರೋಪ ಕಾರ್ಯಕ್ರಮದಲ್ಲಿ ಸಂಸ್ಥೆಗೂ ಮಾನ್ಯ ಕಾರಂತರ ನೆನಪಿಗೂ ಕೃತಜ್ಞತೆ ಸಲ್ಲಿಸುವ ಸದವಕಾಶ ಸಿಕ್ಕಿದೆ. ಕೃತಜ್ಞತೆಗಳೊಡನೆ,

-ಕೆ.ವಿ. ಸುಬ್ಬಣ್ಣ

* * *

ಶಿವಮೊಗ್ಗದ ಕರ್ನಾಟಕ ಸಂಘ ಐತಿಹಾಸಿಕವಾದ ತನ್ನ ಪರಂಪರೆಯನ್ನು ಉಳಿಸಿಕೊಳ್ಳಲು ನಾಡು-ನುಡಿಯ ಪ್ರಬುದ್ಧ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

೨೨.೧೧.೨೦೦೨ -ಕೆ. ರಾಮದಾಸ್, ಮೈಸೂರು

* * *

ಶಿವಮೊಗ್ಗ ಕರ್ನಾಟಕ ಸಂಘ ಕನ್ನಡ ಭಾಷೆ ಸಾಹಿತ್ಯ ಹಾಗೂ ಸಾಹಿತಿಗಳ ಪೋಷಣೆ ಪ್ರೋತ್ಸಾಹಗಳಿಗಾಗಿ ದಶಕಗಳಿಂದ ಕೆಲಸ ಮಾಡುತ್ತಿರುವ ಹಳೆಯ ಸಂಸ್ಥೆ ಅದು ಆಚಂದ್ರಾರ್ಕವಾಗಿ ಚಟುವಟಿಕೆಗಳನ್ನು ನಡೆಸುತ್ತಿರಲಿ ಎಂಬುದಾಗಿ ಹಾರೈಸುತ್ತೇನೆ.

೪-೨-೨೦೦೩ -ಟಿ.ವಿ. ವೆಂಕಟಾಚಲಶಾಸ್ತ್ರಿ

* * *

ಕುವೆಂಪು ಮತ್ತು ಬೇಂದ್ರೆ ಮಾತನಾಡಿದ ವೇದಿಕೆಯಿಂದ, ಇಂದು ನಾನು ಮಾತನಾಡುವ ಅವಕಾಶ ಸಿಕ್ಕಿದ್ದು, ಶಿವಮೊಗ್ಗದ ಸಹೃದಯರ ಸಹೃದಯತೆಯ ಪ್ರತೀಕವೆಂದು ಭಾವಿಸುತ್ತೇನೆ.

೧೩-೩-೨೦೦೩ -ಚಂದ್ರಶೇಖರ ನಂಗಲಿ

* * *

ಕರ್ನಾಟಕ ಸಂಘದ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಸಂತೋಷ ಮತ್ತು ಹೆಮ್ಮೆ. ಅದಕ್ಕೆ ಅವಕಾಶ ಮಾಡಿಕೊಟ್ಟ ಸಂಘಕ್ಕೆ ಕೃತಜ್ಞತೆಗಳು.

೧೩.೩.೨೦೦೩ -ಡಾ|| ಆಶಾದೇವಿ ಎಂ.ಎಸ್.

* * *

ಕರ್ನಾಟಕ ಸಂಘದ ಕಟ್ಟಡಕ್ಕೆ ೬೦ ತುಂಬಿದಾಗ ಇಲ್ಲಿಗೆ ಬಂದಾಗ, ವಸುದೇವ ಭೂಪಾಲಂ ಅವರು ಕಾರ್ಯದರ್ಶಿಯಾಗಿದ್ದಾಗ ನಾನು ಅವರ ಜೊತೆ ಇಲ್ಲಿ ನಾಟಕದಲ್ಲಿ ಭಾಗವಹಿಸಿದ್ದು ನೆನಪಾಯಿತು. ಅನೇಕ ವರ್ಷಗಳಿಂದ ಈ ಸಂಸ್ಥೆಯನ್ನು ನನ್ನ ಸ್ನೇಹಿತರು ಜೀವಂತವಾಗಿ ಉಲ್ಲಾಸಪೂರ್ಣವಾಗಿ ಸ್ವತಂತ್ರವಾಗಿ ಉಳಿಸಿಕೊಂಡು ಬರುತ್ತಿರುವುದನ್ನು

ನೋಡಿ ಸಂತೋಷವಾಯಿತು. ಬೇಂದ್ರೆ, ಕುವೆಂಪು ಅವರ ಮೊದಲ ಪುಸ್ತಕಗಳನ್ನು ಪ್ರಕಟಿಸಿದ ಈ ಸಂಸ್ಥೆಯಲ್ಲಿ ನನ್ನ ಕನಸುಗಳೂ ಸೇರಿವೆ. ಪುಸ್ತಕ ಭಂಡಾರಕ್ಕೆ ತಕ್ಕ ವ್ಯವಸ್ಥೆಯಾಗಬೇಕು. ಒಂದು ವೇಳೆ ಹಸ್ತಪ್ರತಿಗಳನ್ನು ಶೇಖರಿಸುವುದು ಸಾಧ್ಯವಾದರೆ ಅದನ್ನು ಮಾಡಬೇಕು.

೬.೪.೨೦೦೩ -ಸುಮತೀಂದ್ರ ನಾಡಿಗ್

* * *

ಹಸೂಡಿ ವೆಂಕಟ ಶಾಸ್ತ್ರಿಗಳ ಈ ಕರ್ನಾಟಕ ಸಂಘ ಕರ್ನಾಟಕದ ಅನೇಕ ಕರ್ನಾಟಕ ಸಂಘಗಳಿಗೆ ಮಾತೃಸ್ಥಾನದಲ್ಲಿ ಇದೆ. ಕರ್ನಾಟಕದ ಅನೇಕ ಚೇತನಗಳು ಇಲ್ಲಿ ಸುಳಿದಾಡಿವೆ. ಇಲ್ಲಿಗೆ ಬಂದವರು ಆ ಮಹಾನ್ ಚೇತನಗಳ ಸಮ್ಮೋಹಿನಿಗೆ ಒಳಗಾಗದೆ ಹೋಗುವುದಿಲ್ಲ. ಅರವತ್ತು ವರ್ಷಗಳ ಅನುಪಮ ಸೇವೆಯಿಂದ ಈ ಸಂಘ, ಭವನ ಕನ್ನಡಿಗರ ಸ್ಮರಣೆಯಲ್ಲಿ ಯಾವಾಗಲೂ ಹಸಿರಾಗಿಯೇ ಉಳಿದುಕೊಳ್ಳುತ್ತದೆ. ನನಗಂತೂ ಈ ಸಂಘ ಒಂದು ಪವಿತ್ರ ಯಾತ್ರಾಸ್ಥಳವೆನಿಸಿದೆ.

೬-೪-೨೦೦೩ -ಡಾ|| ಪಾಟೀಲ ಪುಟ್ಟಪ್ಪ

* * *

ಶಿವಮೊಗ್ಗ ಕರ್ನಾಟಕ ಸಂಘ ತನ್ನದೇ ಆದ ವ್ಯಕ್ತಿತ್ವವನ್ನು ಸ್ಥಾಪಿಸಿಕೊಂಡು ಕನ್ನಡ ನಾಡು-ನುಡಿಗೆ ಕನ್ನಡ ಸಾಹಿತ್ಯ ಭಂಡಾರದ ಸರಸ್ವತಿಗೆ ಅಮೂಲ್ಯವಾದ ಕೊಡುಗೆಯನ್ನು ಕೊಟ್ಟಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಕರ್ನಾಟಕ ಸಂಘವು ಸ್ವಶಕ್ತಿಯಿಂದ ಕಂಗೊಳಿಸುತ್ತಿರುವುದು ಎಲ್ಲ ಕರ್ನಾಟಕ ಸಂಘಕ್ಕೆ ಮಾದರಿಯಾಗಿ ನಿಂತಿದೆ.

ಕನ್ನಡಾಂಬೆಯ ಕೃಪೆಯು ಈ ಸಂಸ್ಥೆಯ ಮೇಲೆ ನಿರಂತರವಾಗಿ ಹರಿದು ಬರಲೆಂದು ಹಾರೈಸುತ್ತೇನೆ.

೨೪-೫-೦೩ -ಲೀಲಾದೇವಿ ಆರ್. ಪ್ರಸಾದ್

* * *

ಶಿವಮೊಗ್ಗದ ಕರ್ನಾಟಕ ಸಂಘ ನಡೆಸಿಕೊಂಡು ಬರುತ್ತಿರುವ ಕಾರ್ಯಗಳನ್ನು ನಾನು ಬಹಳ ಕಾಲದಿಂದ ಬಲ್ಲವನಾಗಿದ್ದೇನೆ. ಈ ಸಂಘದ ಪ್ರಕಟಣೆಗಳು ಅತ್ಯಂತ ಮೌಲ್ಯವಾದವು. ವಿಚಾರ ಸಂಕಿರಣಗಳನ್ನು ಹಿರಿಯರ ಶತಮಾನೋತ್ಸವ ಸಮಾರಂಭಗಳನ್ನು ಮಾಡಿ ಕೃತಾರ್ಥವಾಗಿದೆ.

೨೪-೫-೦೩ -ಎನ್. ಬಸವಾರಾಧ್ಯ

* * *

ಈ ದಿನ ಇಲ್ಲಿ ನಡೆದ ಪುಸ್ತಕ ಬಿಡುಗಡೆ ಮತ್ತು ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿದೆ. ಎಂದಿನಂತೆ ವ್ಯವಸ್ಥೆ ಪರಿಪೂರ್ಣವಾಗಿತ್ತು.

ಜೂನ್ ೭, ೨೦೦೩ -ಜೆ.ಆರ್. ಲಕ್ಷ್ಮಣರಾವ್

* * *

ಕರ್ನಾಟಕ ಸಂಘದ ಆಶ್ರಯದಲ್ಲಿ ಜೊತೆಗೆ ಕೆ.ವಿ. ಸುಬ್ಬಣ್ಣ ಅವರ ಹೆಸರಿನಲ್ಲಿ ಪ್ರಶಸ್ತಿ ಸ್ವೀಕರಿಸಿದ್ದು ಸಂತೋಷದ ಸಂಗತಿ. ಈ ಸಂಘ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಯುವಕರನ್ನು ತನ್ನ ತೆಕ್ಕೆಗೆ ತಂದುಕೊಂಡು ಮುನ್ನಡೆಯಲಿ ಈ ಅವಕಾಶವನ್ನು ಕಲ್ಪಿಸಿದ್ದಕ್ಕೆ ಧನ್ಯವಾದಗಳು.

೧೯-೭-೨೦೦೩ -ಚಿ. ಶ್ರೀನಿವಾಸರಾಜು

* * *

ಕರ್ನಾಟಕ ಸಂಘದ ಇಂದಿನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲುಗೊಂಡುದು ಒಂದು ಹರ್ಷದ ಅನುಭವ. ಇಂದಿನ ಪ್ರಶಸ್ತಿ ಪುರಸ್ಕೃತರೆಲ್ಲ ತುಂಬು ಹೃದಯದ ಮಾತುಗಳನ್ನಾಡಿದರು. ಒಳ್ಳೆಯ ಶ್ರೋತೃಗಳು ಒಳ್ಳೆಯ ಕಾರ್ಯಕ್ರಮ.

೧೯.೭.೨೦೦೩ -ಗೊ.ರು. ಚೆನ್ನಬಸಪ್ಪ

* * *

ಮೂರು ಬಗೆಯ ಸಂತಸ ನನ್ನದು. ಪತ್ರಕರ್ತನಾಗಿ ಎರಡು ದಶಕ ಕಳೆದು ಬೇರೆ ಬೇರೆ ಮಾಧ್ಯಮದಲ್ಲಿ ತೊಡಗಿಸಿಕೊಂಡಿರುವ ನನಗೆ ಪತ್ರಿಕೆಯಲ್ಲಿನ ಅಂಕಣಕ್ಕೆ ಪ್ರಶಸ್ತಿ ಬಂದಿರುವುದು. ನನ್ನ ಜಿಲ್ಲೆಯ ಪ್ರತಿಷ್ಠಿತ ಕರ್ನಾಟಕ ಸಂಘದಿಂದ ನನ್ನ ಮೊದಲ ಕೃತಿಗೆ ಮೊದಲ ಪ್ರಶಸ್ತಿ ಬಂದಿರುವುದು. ಕುವೆಂಪು, ಬೇಂದ್ರೆ, ಮಾಸ್ತಿ, ಅನಂತಮೂರ್ತಿ, ಲಂಕೇಶ್ ಮುಂತಾದವರ ನಲ್ನುಡಿಯೊಂದಿಗೆ ಹಿರಿಯ ಸಾಹಿತ್ಯಾಸಕ್ತರಿಂದ ಆರಂಭವಾದ ಸಂಸ್ಥೆಯಿಂದ ಈ ಪ್ರಶಸ್ತಿ ಬಂದಿರುತ್ತದೆ. ಅತಿ ಸಂತಸದ ಸಂಗತಿ.

೧೯.೭.೨೦೦೩ -ಸತ್ಯಮೂರ್ತಿ ಆನಂದೂರು

* * *

ಕರ್ನಾಟಕ ಸಂಘದ ಕಾರ್ಯಕ್ರಮದಲ್ಲಿ ಪಾಲುಗೊಂಡದ್ದು ನನ್ನ ಭಾಗ್ಯವೆಂದು ಭಾವಿಸಿದ್ದೇನೆ. ಈ ಸಂಘದಲ್ಲಿ ಅಚ್ಚುಕಟ್ಟು ಕಂಡೆ. ಇಲ್ಲಿನ ಸಂಘಟನೆಯಿಂದ ಸ್ಫೂರ್ತಿಗೊಂಡೆ. ಆತ್ಮೀಯ ಶ್ರೀ ಜೈನಕೇರಿ ಅವರ ಸ್ನೇಹವನ್ನು ಸದಾ ಗೌರವಿಸುತ್ತ, ಈ ಕರ್ನಾಟಕ ಸಂಘದಿಂದ ನಾನು ಬಹಳ ಪಡೆದಿದ್ದೇನೆ.

೧೦-೮-೦೩ -ವಸಂತ ಕುಷ್ಟಗಿ

* * *

ಕರ್ನಾಟಕ ಸಂಘ ಶಿವಮೊಗ್ಗ ಪೀರ್ ಸಾಹೇಬರ ನೆನಪಿಗೆ ಅವಕಾಶ ಮಾಡಿಕೊಟ್ಟಿತು. ಹಿಂದಿನ ನೆನಪುಗಳಿಗೆ ಈಗಿನ ನನ್ನ ಅನಿಸಿಕೆಗಳನ್ನು ಹೇಳಿದೆ. ಇದರಲ್ಲಿ ಯಾರ ವಿಡಂಬನೆಯೂ ಇಲ್ಲ. ಮಾನವ ಸಹಜ ಗುಣಗಳ ವಿಶ್ಲೇಷಣೆಯಷ್ಟೆ. ಈ ಸಂಘ ಇನ್ನೂ ಅತ್ಯುಪಯುಕ್ತವಾದ ಕೆಲಸಗಳನ್ನು ಮಾಡುತ್ತಾ ಕನ್ನಡತನವನ್ನು ಕನ್ನಡವನ್ನೂ ಅಭಿವರ್ಧಿಸಲಿ.

೨೩.೮.೨೦೦೩ -ಜಿ.ವಿ. ಅಯ್ಯರ್

* * *

ನನ್ನ ಭಾವಜೀವನಕ್ಕೆ ತುಂಬ ಹತ್ತಿರವಾಗಿ ನನ್ನನ್ನು ಸಾಹಿತ್ಯಕವಾಗಿ ಸಾಂಸ್ಕೃತಿಕವಾಗಿ ಬೆಳೆಸಿದ ಕರ್ನಾಟಕ ಸಂಘಕ್ಕೆ ನಾನು ಋಣಿಯಾಗಿದ್ದೇನೆ. ಇಂದಿನ ಚಿರಸ್ಮರಣೀಯ ಸಮಾರಂಭ ನನ್ನ ನೆನಪಿನಲ್ಲಿ ಸದಾ ಹಸಿರಾಗಿ ಉಳಿಯುತ್ತದೆ.

೨೩-೮-೦೩ -ಎ.ಎಸ್. ವೇಣುಗೋಪಾಲರಾವ್

* * *

ಈ ಸಂಸ್ಮರಣೆಯ ಕಾರ್ಯಕ್ರಮ ತುಂಬ ಉಚಿತವೂ ಅರ್ಥಪೂರ್ಣವೂ ಆಗಿತ್ತು. ಸಂಸ್ಮರಣೆಯ ಕಾರ್ಯಕ್ರಮಗಳು ಕಣ್ಮರೆಯಾದ ಹಿರಿಯರ ಕೇವಲ ಆರಾಧನೆಯಾಗಬಾರದು. ಹಿಂದಿನವರ ವಿಚಾರಗಳನ್ನು ಇಂದಿನವರು ಮರುವಿಮರ್ಶೆಗೆ ಒಳಪಡಿಸಬೇಕು. ಅವುಗಳನ್ನು

...ಸುಪ್ತವರ ಮೂಲಕ ಹಿರಿಯ ಚೇತನಗಳನ್ನು ಜೀವಂತವಾಗಿಡಬೇಕು. ಈ ದೃಷ್ಟಿಯಿಂದ ಮೇಲ್ಕಂಡ ಕಾರ್ಯಕ್ರಮ ಮುಖ್ಯ.

೬.೯.೨೦೦೩ -ಟಿ.ಪಿ. ಅಶೋಕ

* * *

ಪ್ರೊ. ಕೀರ್ತಿನಾಥ ಕುರ್ತಕೋಟಿ ಮತ್ತು ಪ್ರೊ. ಎ.ಎನ್. ಮೂರ್ತಿರಾವ್ ಅವರ ಸಂಸ್ಮರಣ ದಿನಾಚರಣೆಯನ್ನು ಕರ್ನಾಟಕ ಸಂಘ ಅತ್ಯಂತ ವ್ಯವಸ್ಥಿತವಾಗಿ ಏರ್ಪಡಿಸಿತ್ತು. ವಿಮರ್ಶಾ ಸಾಹಿತ್ಯದ ಬಗೆಗಿನ ಚರ್ಚೆ ಸಕಾಲಿಕವೂ ಪರಿಣಾಮಕಾರಿಯೂ ಆಗಿತ್ತು. ನಿಮ್ಮ ಸಂಘದ ಚಟುವಟಿಕೆಗಳು ಶ್ಲಾಘನೀಯ.

೬-೯-೦೩ -ಲಿಂಗದೇವರು ಹಳೆಮನೆ

* * *

ಬಹಳ ಶ್ರದ್ಧೆಯಿಂದ ನಡೆಸಿದ ಈ ಶಿಬಿರ ನಿಜಕ್ಕೂ ಒಳ್ಳೆಯ ಯತ್ನ. ಈ ಸನ್ನಿವೇಶದಲ್ಲಿ ಸಂಸ್ಕೃತಿಯ ಸ್ವರೂಪವನ್ನು ಉಳಿಸಲು ಮಾಡಿದ ಪ್ರಯತ್ನ. ಖಂಡಿತವಾಗಿಯೂ ಇದನ್ನು ಮುಂದುವರೆಸಬೇಕು. ಬಹಳ ಅಗತ್ಯವಾದ ಕೆಲಸ.

೨೧-೯-೦೩ -ಎನ್. ಮನು ಚಕ್ರವರ್ತಿ

* * *

ಕರ್ನಾಟಕ ಸಂಘದ ಆಶ್ರಯದಲ್ಲಿ ದಿ. ೨೦.೯.೦೩ ಹಾಗೂ ೨೧.೯.೦೩ರಲ್ಲಿ ನಡೆದ ಚಲನಚಿತ್ರ ಅಧ್ಯಯನ ಶಿಬಿರ ಒಂದು ಶ್ಲಾಘನೀಯ ಪ್ರಯತ್ನ. ಅತ್ಯಂತ ಪ್ರಬಲ ಸಂವಹನ ಮಾಧ್ಯಮವಾದ ಸಿನಿಮಾವನ್ನು ಅಪಬಳಕೆ ಮಾಡುತ್ತಿರುವ ಈ ಸಂದರ್ಭದಲ್ಲಿ ಈ ಕಿರು ಕಾರ್ಯಾಗಾರ ಒಂದು ಅರ್ಥಪೂರ್ಣ ಪ್ರಯತ್ನ. ಇಂತಹ ಕಾರ್ಯಾಗಾರ ಆಗಾಗ್ಗೆ ನಡೆಯುತ್ತಿರಲಿ ಎಂದು ಆಶಿಸುತ್ತಾ.

೨೧-೯-೦೩ -ಗಿರೀಶ್ ಕಾಸರವಳ್ಳಿ

* * *

ತುಂಬಾ ಹೆಗ್ಗಳಿಕೆಗಳು, ಪ್ರತಿಷ್ಠಿತವಾದ ಕರ್ನಾಟಕ ಸಂಘ, ನಮ್ಮ ನಾಡಿನ ಸಾಂಸ್ಕೃತಿಕ ವಲಯದ ಹೃದಯಭಾಗ, ತನ್ನ ೭೫ ವರ್ಷದ ಸುದೀರ್ಘ ಬದುಕಿನಲ್ಲಿ, ಜನಪರವಾದ ಅನೇಕ ಕಾರ್ಯಕ್ರಮಗಳನ್ನು ಮಾಡಿ ನಮ್ಮೆಲ್ಲರ ಗೌರವ ಆದರಗಳಿಗೆ ಭಾಜನವಾಗಿದೆ. ಇದೇ ರೀತಿ ಚಟುವಟಿಕೆಗಳು ನಿರಂತರವಾಗಿ ಜರುಗಲಿಯೆಂದು ಹಾರೈಸುವೆ.

೨೨-೯-೦೩ -ಎಂ.ಪಿ. ಪ್ರಕಾಶ್

* * *

ಈ ದಿನ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ದೊರೆತದ್ದು ನನ್ನ ಸೌಭಾಗ್ಯವೇ ಸರಿ. ಅನೇಕ ದಿಗ್ಗಜಗಳು ಭಾಗವಹಿಸಿರುವ ಈ ಸಂಸ್ಥೆ ನಿಜಕ್ಕೂ ಕನ್ನಡದ ಕೆಲಸ ಮಾಡುತ್ತಾ ಇದೆ. ಇದೇ ರೀತಿ ಕನ್ನಡದ ಕೃಷಿ ಮುಂದುವರಿಯಲಿ ಎಂದು ಆಶಿಸುವೆ.

೨೨-೯-೦೩ -ಎಸ್.ಬಿ. ಮುದ್ದಪ್ಪ

* * *

ಶಿವಮೊಗ್ಗ ಕರ್ನಾಟಕ ಸಂಘ ಬಹುಕಾಲದಿಂದ ಅತ್ಯುತ್ತಮ ಕೆಲಸ ಮಾಡುತ್ತಿದೆ. ನಾನು ಅನೇಕ ಸಾರಿ ಇಲ್ಲಿಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇನೆ. ವಿಚಾರ ಸಾಹಿತ್ಯ

ಕಮ್ಮಟ ತುಂಬ ಉಪಯುಕ್ತವಾದ ರೀತಿಯಲ್ಲಿ ಸಂಘಟಿತವಾಗಿ ನಿರ್ವಹಿಸಲಾಗಿತ್ತು. ಮುಂದುವರಿಯಲಿ.

೯-೧-೦೩ -ಬಿ.ವಿ. ವೀರಭದ್ರಪ್ಪ

* * *

ಎರಡು ದಿನಗಳ ವಿಚಾರ ಸಾಹಿತ್ಯ ಕಮ್ಮಟದಲ್ಲಿ ಭಾಗವಹಿಸಿ ಪ್ರೀತಿ ಗಳಿಸಿದ್ದು ಸಂತಸ ತಂದಿದೆ. ಕರ್ನಾಟಕ ಸಂಘ ಮೊದಲಿನಿಂದಲೂ ತನ್ನ ಕ್ರಿಯಾಶೀಲತೆಯ ಉತ್ಸಾಹವನ್ನು ಭಂಗ ಮಾಡಿಕೊಂಡಿಲ್ಲ. ಇಲ್ಲಿ ಅಂಥ ಸೃಜನಶೀಲ ಮನಸ್ಸುಗಳಿವೆ. ಇದೊಂದು ಹೆಮ್ಮೆ ತಂದ ಕಾರ್ಯಕ್ರಮ.

೯.೧೧.೨೦೦೩ -ಡಾ|| ಮೃತ್ಯುಂಜಯ ರುಮಾಲೆ

* * *

ಸಮಾರಂಭದಲ್ಲಿ ಭಾಗವಹಿಸಿದ್ದಕ್ಕೆ ನನಗೆ ಬಹಳ ಸಂತೋಷವಾಗಿದೆ. ಜಿ.ಬಿ. ಜೋಶಿಯವರ ಬಗೆಗೆ ಮಾತನಾಡಲು ಅವಕಾಶ ಸಿಕ್ಕಿದ್ದಕ್ಕೆ ಸಾರ್ಥಕತೆ ಅನಿಸಿದೆ. ಇಲ್ಲಿ ಸಾಹಿತ್ಯದ ಚಟುವಟಿಕೆಗಳು ಇನ್ನೂ ಹೆಚ್ಚಿನ ಸಾರ್ಥಕ ರೀತಿಯಲ್ಲಿ ನಡೆಯಲಿ ಎಂದು ಹಾರೈಸುವೆ.

೧೬.೧೨.೨೦೦೩ -ದುಶ್ಯಂತ ನಾಡಗೌಡ

* * *

ಕುವೆಂಪು ಶತಮಾನೋತ್ಸವದ ಉದ್ಘಾಟನಾ ಕಾರ್ಯಕ್ರಮ ಕರ್ನಾಟಕ ಸಂಘದಲ್ಲಿ ಅರ್ಥಪೂರ್ಣವಾಗಿ ನಡೆದಿರುವುದು ಹೆಮ್ಮೆಯ ಸಂಗತಿಯಾಗಿದೆ. ಅವರ ವಿಶ್ವಮಾನವ ಆಶಯಕ್ಕೆ ಅನುಗುಣವಾಗಿ ಮುಂದಿನ ಕಾರ್ಯಕ್ರಮಗಳು ನಡೆಯಲಿ ಎಂದು ಆಶಿಸುತ್ತೇನೆ. ಇದರಲ್ಲಿ ಭಾಗವಹಿಸಲು ಅವಕಾಶ ಕೊಟ್ಟ ಕರ್ನಾಟಕ ಸಂಘಕ್ಕೆ ನಾನು ಋಣಿಯಾಗಿದ್ದೇನೆ.

೧೦.೧.೨೦೦೪ -ಕೆ. ರಾಮದಾಸ್, ಮೈಸೂರು

* * *

ಶ್ರೀರಂಗ ನೂರರ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಯೋಜಿಸಿದ ಕನ್ನಡ ಸಂಘಕ್ಕೆ ಅಭಿನಂದನೆಗಳು. ನಿಜದ ಅರ್ಥದಲ್ಲಿ ಆಧುನಿಕ ಕನ್ನಡ ನಾಟಕಕಾರ ಆದ್ಯರು. ಕನ್ನಡ ಸಾಂಸ್ಕೃತಿಕ ಲೋಕವನ್ನು ರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸಿದ ಕೀರ್ತಿ ಶ್ರೀರಂಗರದು ಅವರನ್ನು ಸ್ಮರಿಸುವುದರೊಂದಿಗೆ ಉತ್ತಮ ಕಾರ್ಯಕ್ರಮವಾಗಿದೆ.

೨೮.೨.೨೦೦೪ -ಸಿ. ಬಸವಲಿಂಗಯ್ಯ

* * *

ಶ್ರೀ ಕುವೆಂಪು ಅವರ ಪರಿವೇಷವನ್ನು ಧರಿಸಿರುವ, ಮಹಾನ್ ಸಾಹಿತಿಗಳ ಸಾಹಿತ್ಯ ಸುಧೆಯಿಂದ ಪೋಷಿತವಾಗಿರುವ ಈ ಕರ್ನಾಟಕ ಸಂಘದಲ್ಲಿ ಗುರು ಸ್ಮರಣೆ ಮಾಡಲು ಅವಕಾಶ ದೊರೆತದ್ದು ನನ್ನ ಬದುಕಿನ ಸೌಭಾಗ್ಯಗಳಲ್ಲಿ ಒಂದು ಎಂದು ಭಾವಿಸಿದ್ದೇನೆ.

೨೯.೪.೨೦೦೪ -ಡಾ. ಪ್ರಭುಶಂಕರ

* * *

ಪ್ರಶಸ್ತಿ ಯಾರಿಗೆ ಖುಷಿ ಕೊಡುವುದಿಲ್ಲ? ನನಗೂ ಖುಷಿಯಾಗಿದೆ. ಇಲ್ಲಿನ ಸರಳತೆ, ನಿರಾಡಂಬರತೆ, ಶಿಸ್ತು ಅನೇಕ ಸಂಘ ಸಂಸ್ಥೆಗಳಿಗೆ ಅನುಕರಣೀಯ. ಮುಂಗಾರು ಮಳೆಯ ಮುಸ್ಸಂಜೆಯಲ್ಲಿ ನಡೆದ ಈ ಕಾರ್ಯಕ್ರಮ ಬಹುಕಾಲ ಸ್ಮರಣೀಯ.

೩೦-೬-೦೪ -ನಾಗತಿಹಳ್ಳಿ ಚಂದ್ರಶೇಖರ

* * *

ಈ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ "ಸಾಹಿತ್ಯ ಪರಂಪರೆ ಕುವೆಂಪು" ಡಾ. ಎಂ.ಎಂ. ಕಲಬುರ್ಗಿಯವರ ಉಪನ್ಯಾಸ ಬಹಳ ಸೊಗಸಾಗಿತ್ತು. ಇಂತಹ ಅವಕಾಶ ಕಲ್ಪಿಸಿದ ಕರ್ನಾಟಕ ಸಂಘದ ಹಿರಿಯರಿಗೆ ನನ್ನ ಅಭಿನಂದನೆಗಳು.

೩೦.೬.೨೦೦೪ -ಬಿ. ಚಂದ್ರೇಗೌಡ

* * *

ನನ್ನ ಗುರುವಿನ ಹೆಸರಿನ ಪ್ರಶಸ್ತಿ (ಡಾ|| ಜಿ.ಎಸ್.ಎಸ್.) ನನಗೆ ಬಂದದ್ದು ತುಂಬಾ ಖುಷಿಕೊಟ್ಟಿತು. ಸಮಾರಂಭದಲ್ಲಿ ಡಾ|| ಎಂ.ಎಂ. ಕಲಬುರ್ಗಿಯವರು ಕುವೆಂಪು ಕನ್ನಡ ಪರಂಪರೆ ಬಗ್ಗೆ ನೀಡಿದ ಉಪನ್ಯಾಸ ಒಂದು ವಿಶಿಷ್ಟ ಅನುಭವ ನೀಡಿತು. ಸಮಾರಂಭದ ಅಚ್ಚುಕಟ್ಟು ಎಲ್ಲ ಗೆಳೆಯರ ಭೇಟಿ ಆನಂದ ನೀಡಿದೆ.

೩೦-೬-೨೦೦೪ -ಎಸ್.ಜಿ. ಸಿದ್ಧರಾಮಯ್ಯ

* * *

೨೦೦೩ರ ಮಕ್ಕಳ ಸಾಹಿತ್ಯ ಪುರಸ್ಕಾರ ಹಾಗೂ ಭಂಗಸ್ವನೆ ನಾಟಕ ಕೃತಿ ಬಿಡುಗಡೆ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು. ಮಕ್ಕಳ ಸಾಹಿತ್ಯ ಪುರಸ್ಕಾರ ಆರಂಭಿಸಿದ್ದು ಅಭಿನಂದನೀಯ ಕರ್ನಾಟಕ ಸಂಘ. ಇಂತಹ ಹೊಸ ಹೆಜ್ಜೆಗಳನ್ನು ಇಡುತ್ತಲೇ ಕಾರ್ಯಕ್ರಮ ಸಂಘಟನೆ ಅಚ್ಚುಕಟ್ಟಾಗಿರುತ್ತದೆ. ಇಂತಹ ಹೊಸತನ ಸದಾ ಕರ್ನಾಟಕ ಸಂಘದಿಂದ ಮೂಡಿಬರಲೆಂದು ಹಾರೈಸುತ್ತೇನೆ.

೨೧.೮.೨೦೦೪ -ಡಾ. ಐ.ಎ. ಲೋಕಾಪುರ

* * *

ಕರ್ನಾಟಕದಲ್ಲಿ ಶಿವಮೊಗ್ಗದ ಕರ್ನಾಟಕ ಸಂಘ ಅರ್ಥಪೂರ್ಣ ಕಾರ್ಯಕ್ರಮ ವಿಧಾಯಕ ರೀತಿಯಲ್ಲಿ ಆಚರಿಸುತ್ತಾರೆ ಅಂತಾ ಬಹುದಿನಗಳಿಂದ ಕೇಳಿದ್ದೆ. ಇಂದು ಸ್ವತಃ ಅನುಭವಿಸಿದಂತಾಯಿತು. ಮಕ್ಕಳ ಸಾಹಿತಿಯಾದ ನನಗೆ ಪುರಸ್ಕಾರ ನೀಡಿದ್ದು ಮಕ್ಕಳ ಸಾಹಿತ್ಯವನ್ನೇ ಗೌರವಿಸಿದಂತಾಯಿತು. ಸಂಘವನ್ನು ಕಟ್ಟಿ ಬೆಳೆಸಿದವನು ಪ್ರಾತಃಸ್ಮರಣೀಯರು. ಎಲ್ಲ ಪದಾಧಿಕಾರಿಗಳು ವಂದನಾರ್ಹರು.

೨೧.೮.೨೦೦೪ -ಕಂಬ್ಯಾಣಿ ಶರಣಪ್ಪ

* * *

ಕಾರ್ಯಕ್ರಮದಲ್ಲಿ ನಾನು ಭಾಗವಹಿಸಿದ್ದೆ. ತುಂಬಾ ಸಂತೋಷವಾಯಿತು. ತುಂಬಾ ಶ್ರದ್ಧೆಯಿಂದ ಇದನ್ನೆಲ್ಲ ಏರ್ಪಡಿಸಿರುವ ಕರ್ನಾಟಕ ಸಂಘದ ಪದಾಧಿಕಾರಿಗಳನ್ನು ಸದಸ್ಯರನ್ನು ಅಭಿನಂದಿಸುತ್ತೇನೆ. ಸದಭಿರುಚಿಯ ದ್ಯೋತಕವಾಗಿ ಶಿವಮೊಗ್ಗೆಯಲ್ಲಿ ಈ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತಿರುವುದು ತುಂಬಾ ಆನಂದದ ಸಂಗತಿಯಾಗಿದೆ.

೮-೧೧-೦೪ -ಡಾ|| ಸಂಗಮೇಶ ಸವದತ್ತಿಮಠ

* * *

ಕರ್ನಾಟಕ ಸಂಘ ನಾಡಿನ ಅತ್ಯಂತ ಮಾದರಿಯ ಸಂಘ. ಎಪ್ಪತ್ತೈದು ವರ್ಷಗಳ ಅರ್ಥಪೂರ್ಣ ಇತಿಹಾಸವನ್ನು ಕೇಳಿ ತಿಳಿದಿದ್ದೆ. ಇಂದು ಆ ಸಂಸ್ಥೆಯವರು ಉತ್ತರ

ಕರ್ನಾಟಕದ ಹಳ್ಳಿಗಾಡಿನ ಸಾಹಿತಿಯಾದ ಶ್ರೀ ಸಿಂಪಿ ಲಿಂಗಣ್ಣನವರ ಶತಮಾನೋತ್ಸವವನ್ನು ಆಚರಿಸಿದ್ದು ರೋಮಾಂಚನಕಾರಿ ಸನ್ನಿವೇಶ. ಈ ಸಂಸ್ಥೆ ಇನ್ನೂ ದೊಡ್ಡದಾಗಿ ಬೆಳೆದು ನಾಡಿನಲ್ಲೆಲ್ಲ ತನ್ನ ಪರಿಮಳವನ್ನು ಬೀರಲಿ ಎಂದು ಹಾರೈಸುವೆ.

–ವೀರೇಂದ್ರ ಸಿಂಪಿ

* * *

ಕರ್ನಾಟಕ ಸಂಘದ ಈ ಪ್ರಶಸ್ತಿ ಪ್ರದಾನ ಸಮಾರಂಭ ಅತ್ಯಂತ ಉತ್ತಮವಾಗಿತ್ತು. ಕೇವಲ ಸಾಹಿತ್ಯ ಪ್ರಿಯರೇ ನೆರೆದಿದ್ದರಿಂದ ಬಹಳ ಸಂತೋಷವಾಗಿದೆ. ನನಗೆ ಮತ್ತೆ ಮತ್ತೆ ಬರಬೇಕೆನ್ನುವ ಆಸೆಯಿದೆ.

೧೧-೬-೦೫ –ಸುಧಾ ಮೂರ್ತಿ

* * *

ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಈ ಪ್ರತಿಷ್ಠಿತ ಪ್ರಶಸ್ತಿ ಪಡೆದದ್ದು ನಿಜಕ್ಕೂ ಖುಷಿ ನೀಡಿದೆ.

೧೧.೬.೨೦೦೫ –ಚಂದ್ರಶೇಖರ ಆಲೂರು

* * *

ಅತ್ಯಂತ ಅರ್ಥಪೂರ್ಣವಾದ ಕಾರ್ಯಕ್ರಮ ಇದು. ನನಗೆ ಅತೀವ ಸಂತಸವನ್ನು ಒದಗಿಸಿದೆ.

೧೧.೬.೨೦೦೫ –ಚಂದ್ರಶೇಖರ ತಾಳ್ಯ

* * *

ಅಚ್ಚುಕಟ್ಟಾಗಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಲು ತುಂಬ ಸಂತೋಷವಾಯಿತು. ಸಾರ್ಥಕ ಕಾರ್ಯಕ್ರಮವಿದು. ಸ್ತುತ್ಯರ್ಹ.

೨೩.೭.೨೦೦೫ –ಪಳಕಳ ಸೀತಾರಾಮಭಟ್ಟ
ಮಿತ್ತ ಬೈಲು, ದ.ಕ.

* * *

ಅತ್ಯಂತ ನಿರ್ಲಕ್ಷಕ್ಕೆ ಒಳಗಾಗಿರುವ ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಆದ್ಯತೆ ನೀಡಿ ಆ ಕ್ಷೇತ್ರಕ್ಕೆ ಗಮನಾರ್ಹ ಸೇವೆ ಸಲ್ಲಿಸಿದ ಹಿರಿಯರೊಬ್ಬರನ್ನು ಗೌರವಿಸುವ ಈ ಪರಿಪಾಠ ನನಗೆ ಸಂತಸ ತಂದಿದೆ. ಮಕ್ಕಳ ಸಾಹಿತಿಗಳ ಪರವಾಗಿ ಧನ್ಯವಾದಗಳು, ಕಾರ್ಯಕ್ರಮವೂ ಅಚ್ಚುಕಟ್ಟಾಗಿ ನಡೆಯಿತು.

೨೩.೭.೨೦೦೫ –ಟಿ.ಎಸ್. ನಾಗರಾಜಶೆಟ್ಟಿ

* * *

ಕರ್ನಾಟಕ ಸಂಘದ 'ಮಕ್ಕಳ ಪ್ರಶಸ್ತಿ ಪ್ರದಾನ' ಸಮಾರಂಭವು ಅತ್ಯಂತ ಹೃದ್ಯವಾಗಿತ್ತು. ಹಿರಿಯ ಸಾಹಿತಿಗಳನ್ನು ಸನ್ಮಾನಿಸುವ ಈ ಕಾರ್ಯ ಸಂಸ್ಕೃತಿಯ ಪ್ರತೀಕವಾದುದು, ಮಾದರಿಯಾದುದು, ಸ್ತುತ್ಯವಾದುದು, ಶ್ರೇಯಸ್ಸಾಗಲಿ ಸಂಸ್ಥೆಗೆ.

೨೩.೭.೨೦೦೫ –ಡಾ॥ ವಿಜಯಾದೇವಿ

* * *

ಕರ್ನಾಟಕ ಸಂಘ, ಅನೇಕ ಸಾಹಿತಿಗಳ ಪ್ರತಿಭೆ, ಚೈತನ್ಯಕ್ಕೆ ಇಂಬುಗೊಟ್ಟು ಬೆಳೆಸಿದೆ. ಅನೇಕ ಮಹೋದಯರನ್ನು ಬೆಳೆಸಿದೆ. ಸಾಹಿತ್ಯಕ, ಸಾಂಸ್ಕೃತಿಕ ತವರೂರಾದ ಶಿವಮೊಗ್ಗದ ಕರ್ನಾಟಕ ಸಂಘದ ಕಾರ್ಯಕ್ರಮಗಳು ಅರ್ಥಪೂರ್ಣ, ಅನನ್ಯ.

೩೧.೮.೦೫ -ಕಮಲ ಹಂಪನಾ

* * *

ಕರ್ನಾಟಕದ ಪ್ರತಿಷ್ಠಿತ ಕರ್ನಾಟಕ ಸಂಘಗಳ ಸಾಲಿನಲ್ಲಿ ಮೂರ್ಧನ್ಯ ಪ್ರಾಯವಾದ ಈ ಶಿವಮೊಗ್ಗ ಕರ್ನಾಟಕ ಸಂಘ ದಯಪಾಲಿಸಿದ ಪ್ರಾತಃಸ್ಮರಣೀಯ ಶ್ರೀ ಶಂ.ಬಾ. ಜೋಶಿ ಅವರ ಹೆಸರಿನ ಪ್ರಶಸ್ತಿ ನನಗೆ ಇದುವರೆಗೆ ಬಂದಿರುವ ಹಲವಾರು ಪ್ರಶಸ್ತಿಗಳಲ್ಲಿ ಶೃಂಗರಪ್ರಾಯವಾದುದೆಂದು ಭಾವಿಸಿದ್ದೇನೆ.

೩೧.೮.೦೫ -ಹಂಪನಾ

* * *

ಕನ್ನಡದ ಕಾರ್ಯಕ್ಕೆ ಅರ್ಪಿಸಿಕೊಂಡ ಈ ಕರ್ನಾಟಕ ಸಂಘದ ಬಗ್ಗೆ ನನಗೆ ಅಪಾರ ಗೌರವ ಮತ್ತು ಅಭಿಮಾನವಿದೆ. ಈ ಪವಿತ್ರ ತಾಣದಲ್ಲಿ ಅಭಿನಂದನಾ ಭಾಷಣ ಮಾಡಿದ ಪುಣ್ಯ ನನ್ನದು. ನನ್ನ ಬದುಕು ಸಾರ್ಥಕವೆನಿಸಿದೆ. ಕರ್ನಾಟಕ ಸಂಘ ಇನ್ನಷ್ಟು ಮತ್ತಷ್ಟು ಮಹತ್ವವಾದುದನ್ನು ಸಾಧಿಸಲಿ ಎಂಬ ಬಯಕೆ ನನ್ನದು.

೩೧.೮.೦೫ -ಡಾ॥ ನಲ್ಲೂರು ಪ್ರಸಾದ್

* * *

ಶಿವಮೊಗ್ಗ ಕರ್ನಾಟಕ ಸಂಘಕ್ಕೆ ಬರುವುದೆಂದರೆ ನನ್ನ ಜೀವನದ ಒಂದು ಸಾರ್ಥಕ ಘಟನೆ. ಅತ್ಯಂತ ಉತ್ತಮ ಕನ್ನಡ ಕಾರ್ಯಕ್ರಮಗಳಿಗಾಗಿ ತುಂಬ ಪ್ರಸಿದ್ಧವಾದ ಈ ಸಂಘ ಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ವಿಶಿಷ್ಟ ಸೇವೆಯನ್ನು ಕನ್ನಡಕ್ಕೆ ಸಲ್ಲಿಸಲಿ ಎಂದು ಹಾರೈಸುತ್ತೇನೆ. ಈ ಸಂಘಕ್ಕೆ ನಾನು ಕೃತಜ್ಞನಾಗಿದ್ದೇನೆ.

೨೫.೯.೦೫ -ನಾರಾಯಣ ಪಿ. ಭಟ್ಟ, ಧಾರವಾಡ

* * *

ನನ್ನನ್ನು ಯಾವ ಗುರುಗಳು ರೂಪಿಸಿ ಮಲೆನಾಡಿನ ಸಾಹಿತ್ಯ-ಸಂಸ್ಕೃತಿ- ಸೌಂದರ್ಯಗಳ ಕೇಂದ್ರವಾದ ಶಿವಮೊಗ್ಗೆಯ ಕಾಲೇಜಿನ ಹಾಗೆಯೇ ನಿಸರ್ಗ ರಮಣೀಯ ಮಲೆನಾಡಿನ ಮಡಿಲಿಗೆ ಶಿಕ್ಷಕ ವೃತ್ತಿ ಜೀವನದ ಆರಂಭದಲ್ಲಿ ಹಾಕಿತೊ, ಆ ದಿವ್ಯ ದೂರದರ್ಶಿ ಪ್ರೊ. ರಂ.ಶ್ರೀ. ಮುಗಳಿಯವರ ಜನ್ಮ ಶತಮಾನೋತ್ಸವದ ಸಮಾರಂಭದಲ್ಲಿ ಒಬ್ಬ ಕಿರಿಯ ಶಿಷ್ಯನಾಗಿ ಆ ಗುರುಗಳನ್ನು ಕೃತಜ್ಞತೆಯಿಂದ ಸ್ಮರಿಸುತ್ತಾ ಧನ್ಯಭಾವದ ನಮನಗಳನ್ನು ಭಕ್ತಿಯಿಂದ, ನಮ್ರತೆಯಿಂದ ಸಲ್ಲಿಸುವ ಸುಯೋಗ, ಪ್ರತಿಷ್ಠಿತ ಕರ್ನಾಟಕ ಸಂಘದ ವೇದಿಕೆಯ ಮೇಲೆ ನಿಂತು ಮಾತನಾಡುವ ಗೌರವ ನನಗೊದಗಿದುದು ದೇವರ ಕೃಪೆ ಎಂದು ಭಾವಿಸುತ್ತ ಒದಗಿಸಿದ ಪ್ರಿಯ ಕೆ.ಜಿ.ಎಸ್. ಹಾಗೂ ಜೈನಕೇರಿ ಅವರ ಎಲ್ಲ ಬೆಂಬಲಿಗ ಮಿತ್ರರಿಗೆ ಧನ್ಯವಾದ ಹೇಳುತ್ತ ಈ ದಿನ ನನ್ನ ಬದುಕಿನಲ್ಲಿ ಚಿರಸ್ಮರಣೀಯವಾದುದು ಎಂಬ ಸವಿನೆನಪನ್ನು ನನ್ನ ಮನದಲ್ಲಿ ತುಂಬಿಕೊಂಡಿದ್ದೇನೆ. ಹಳೆಯ ವಿದ್ಯಾರ್ಥಿಗಳನ್ನು ಶಿವಮೊಗ್ಗೆಯ ಸುಸಂಸ್ಕೃತ ಜನರನ್ನು ಕಾಣುವ ಸಂತೋಷವೂ ದೊರಕಿದಂತಾಗಿದೆ.

೨೪-೯-೦೫ -ಪ್ರೊ॥ ಪ್ರಭುಪ್ರಸಾದ್, ಮೈಸೂರು

* * *

ಕರ್ನಾಟಕ ಸಂಘ, ಶಿವಮೊಗ್ಗ

೨೦೦೪-೦೫ನೇ ಸಾಲಿನಲ್ಲಿ ಕರ್ನಾಟಕ ಸಂಘ ಕೊಡುಗೆ ಈ ಕೆಳಕಂಡ ಶಾಲೆಗಳ ಗ್ರಂಥಾಲಯಗಳಿಗೆ ಉಚಿತವಾಗಿ ಪುಸ್ತಕಗಳನ್ನು ಕೊಡಲಾಗಿದೆ.

	ಶಾಲೆಗಳ ಹೆಸರು	ಪುಸ್ತಕಗಳ ಮೌಲ್ಯ	ಪುಸ್ತಕಗಳ ಸಂಖ್ಯೆ
೧.	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಮಾಚಿನಗೊಂಡನಹಳ್ಳಿ	೬೫೩-೦೦	೧೮
೨.	ಗ್ರಾಮ ಪಂಚಾಯತಿ ಗ್ರಂಥಾಲಯ, ಸೌಳಂಗ	೬೯೮-೦೦	೧೪
೩.	ಸರ್ಕಾರಿ ಪ್ರೌಢಶಾಲೆ, ಸವಳಂಗ	೬೪೯-೦೦	೧೬
೪.	ಶ್ರೀ ಆಂಜನೇಯ ಯುವಕ ಸಂಘ, ಗೊಲ್ಲರಹಳ್ಳಿ	೬೯೮-೦೦	೧೮
೫.	ಶ್ರೀ ಉಮಾ ಪ್ರಗತಿ ಪ್ರೌಢಶಾಲೆ, ಚನ್ನಿಕಟ್ಟೆ	೬೨೨-೦೦	೧೪
೬.	ಸರ್ಕಾರಿ ಸಂಯುಕ್ತ ಪ.ಪೂ. ಕಾಲೇಜು, ಹೊನ್ನಾಳಿ	೬೫೬-೦೦	೧೮
೭.	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸವಳಂಗ	೫೭೫-೦೦	೧೫
೮.	ಭಾರತೀಯ ವಿದ್ಯಾಸಂಸ್ಥೆ (ರಿ) ಹೊನ್ನಾಳಿ	೬೭೨-೦೦	೧೬
೯.	ಕಸ್ತೂರಿಬಾ ಬಾಲಿಕಾ ಪದವಿಪೂರ್ವ ಕಾಲೇಜು (ಪ್ರೌಢಶಾಲೆ) ಶಿವಮೊಗ್ಗ	೬೩೭-೦೦	೧೮
೧೦.	ಶ್ರೀ ಹಳದಮ್ಮದೇವಿ ಬಾಲಕಿಯರ ಪ್ರೌಢಶಾಲೆ, ಹೊನ್ನಾಳಿ	೬೮೬-೦೦	೧೭
೧೧.	ಶ್ರೀ ಅಕ್ಕಮಹಾದೇವಿ ಆಂಗ್ಲ ಮಾಧ್ಯಮ ಶಾಲೆ, ಹೊನ್ನಾಳಿ	೬೫೦-೦೦	೧೪
೧೨.	ಶ್ರೀ ಜಗದ್ಗುರು ಜಡೆಯ ಶಂಕರಸ್ವಾಮಿ ಪ್ರೌಢಶಾಲೆ, ಹಿರೇಕಲ್ಮಠ, ಹೊನ್ನಾಳಿ	೬೯೦-೦೦	೧೬
೧೩.	ಸರ್ಕಾರಿ ಪ್ರೌಢಶಾಲೆ, ನೊಣಬೂರು, ತೀರ್ಥಹಳ್ಳಿ ತಾ.	೬೭೪-೦೦	೧೪
೧೪.	ಶ್ರೀ ಶಾರದಾದೇವಿ ಅಂಧರ ವಸತಿ ಶಾಲೆ (ರಿ) ಶಿವಮೊಗ್ಗ	೬೪೮-೦೦	೧೬
೧೫.	'ತರಂಗ' ಕಿವುಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆ, ಶಿವಮೊಗ್ಗ	೬೪೫-೦೦	೧೬
೧೬.	ಸರ್ಕಾರಿ ಪ್ರೌಢಶಾಲೆ, ಕೊಮ್ಮನಾಳು, ಶಿವಮೊಗ್ಗ ತಾ.	೬೮೯-೦೦	೧೪
೧೭.	ಸಹ್ಯಾದ್ರಿ ಪ್ರೌಢಶಾಲೆ, ಶಿವಮೊಗ್ಗ	೬೫೨-೦೦	೧೫
೧೮.	ಶ್ರೀ ಎಸ್. ರಾಮಯ್ಯ ಸರ್ವೋದಯ ಬಾಲಿಕಾ ಪ್ರೌಢಶಾಲೆ ಶಿವಮೊಗ್ಗ	೭೪೮-೦೦	೧೬
೧೯.	ಶ್ರೀ ವೇಣುಗೋಪಾಲ ಕೃಷ್ಣಸ್ವಾಮಿ ಪ್ರೌಢಶಾಲೆ, ಆಗುಂಬೆ	೫೩೫-೦೦	೧೩
೨೦.	ಬಸವೇಶ್ವರ ಪದವಿ-ಪೂರ್ವ ಕಾಲೇಜು, (ಪ್ರೌಢಶಾಲೆ) ಶಿವಮೊಗ್ಗ	೬೪೨-೦೦	೧೫

೨೧.	ಶಾರದಾದೇವಿ ಬಾಲಿಕಾ ಪ್ರೌಢಶಾಲೆ, ಶಿವಮೊಗ್ಗ	೬೪೦-೦೦	೧೫
೨೨.	ಹಾರ್ನಹಳ್ಳಿ ಗ್ರಾಮಾಂತರ ವಿದ್ಯಾಭಿವೃದ್ಧಿ ಸಂಘ (ರಿ) ಹಾರ್ನಹಳ್ಳಿ	೬೯೫-೦೦	೧೫
೨೩.	ಜ್ಞಾನೇಶ್ವರಿ ಜನಸೇವಾ ಟ್ರಸ್ಟ್ (ರಿ), ವೃದ್ಧಾಶ್ರಮ, ಶಿವಮೊಗ್ಗ	೧೧೪೦-೦೦	೨೨
೨೪.	ಇಂಡಿಯನ್ ಪ್ರೌಢಶಾಲೆ, ಶಿವಮೊಗ್ಗ	೭೧೩-೦೦	೧೪
೨೫.	ಮಕ್ಕಳ ವಿದ್ಯಾಸಂಸ್ಥೆ, ಶಿವಮೊಗ್ಗ	೭೧೫-೦೦	೧೫
೨೬.	ಪೂರ್ವ ಪ್ರಾಥಮಿಕ ಶಿಕ್ಷಕಿಯರ ತರಬೇತಿ ಸಂಸ್ಥೆ, ಶಿವಮೊಗ್ಗ	೭೭೫-೦೦	೧೩
೨೭.	ಸರ್ಕಾರಿ ಪದವಿಪೂರ್ವ ಕಾಲೇಜು, ಜೀನಹಳ್ಳಿ, ಹೊನ್ನಾಳಿ ತಾ.	೭೭೦-೦೦	೧೫
೨೮.	ಸರ್ಕಾರಿ ಪ್ರೌಢಶಾಲೆ, ಕತ್ತಿಗೆ, ಹೊನ್ನಾಳಿ ತಾ.	೭೮೦-೦೦	೧೨
೨೯.	ಬನಸಿರಿ ಲಯನ್ಸ್ ಎಜುಕೇಶನ್ ಸೊಸೈಟಿ, ಶಿಕಾರಿಪುರ	೯೯೮-೦೦	೨೧
೩೦.	ಗೌಡ್ರ ಹಾಲಪ್ಪ ಪ್ರೌಢಶಾಲೆ, ಮೆದಿಕೆರೆ	೧೦೦೯-೦೦	೨೬
೩೧.	ರಾಷ್ಟ್ರೀಯ ಬಸವದಳ ಟ್ರಸ್ಟ್, ಭದ್ರಾವತಿ	೧೦೦೨-೦೦	೨೪
೩೨.	ಸರ್ಕಾರಿ ಪ.ಪೂ. ಕಾಲೇಜು, ಬಸವಾನಿ	೧೦೦೮-೦೦	೧೮
೩೩.	ಬಾಲಕಿಯರ ಪ.ಪೂ. ಕಾಲೇಜು, ಶಿವಮೊಗ್ಗ	೧೦೨೩-೦೦	೨೩
೩೪.	ಬಸವ ಕೇಂದ್ರ, ಶಿವಮೊಗ್ಗ	೯೩೫-೦೦	೧೭
೩೫.	ಸರ್ಕಾರಿ ಪ್ರೌಢಶಾಲೆ, ಗಾಜನೂರು	೭೦೦-೦೦	೧೨
೩೬.	ಸರ್ಕಾರಿ ಪ.ಪೂ. ಕಾಲೇಜು, ಶಿರಾಳಕೊಪ್ಪ	೧೦೪೦-೦೦	೧೮
೩೭.	ಆಕಾಶವಾಣಿ, ಭದ್ರಾವತಿ	೧೪೮೪-೦೦	೨೫
		೨೮೫೫೫-೦೦	೬೧೮

ಗೌರವ ಕಾರ್ಯದರ್ಶಿ
ಕರ್ನಾಟಕ ಸಂಘ, ಶಿವಮೊಗ್ಗ

ಶಿವಮೊಗ್ಗ ಕರ್ನಾಟಕ ಸಂಘದ ಪ್ರಕಟಣೆಗಳು

	ಪ್ರಕಟಿತ ಕೃತಿಗಳ ಹೆಸರು	ಲೇಖಕರ ಹೆಸರು
೧.	ಸಾಹಿತ್ಯ ಪ್ರಚಾರ (ಭಾಷಣ)	ಶ್ರೀ ಕೆ.ವಿ. ಪುಟ್ಟಪ್ಪ
೨.	ರಕ್ತಾಕ್ಷಿ (ನಾಟಕ)	ಶ್ರೀ ಕೆ.ವಿ. ಪುಟ್ಟಪ್ಪ
೩.	ಪಾಂಚಜನ್ಯ (ರುದ್ರ ಕವನಗಳು)	ಶ್ರೀ ಕೆ.ವಿ. ಪುಟ್ಟಪ್ಪ
೪.	ನವಿಲು-೧ (ಲಲಿತ ಕವನಗಳು)	ಶ್ರೀ ಕೆ.ವಿ. ಪುಟ್ಟಪ್ಪ
೫.	ನವಿಲು-೨ (ಲಲಿತ ಕವನಗಳು)	ಶ್ರೀ ಕೆ.ವಿ. ಪುಟ್ಟಪ್ಪ
೬.	ಕನ್ನಡ ಮೇಘ ಸಂದೇಶ (ಕಾವ್ಯ)	ಶ್ರೀ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿ
೭.	ಗಂಡು ಗೊಡಲಿ (ಏಕಾಂಕ ದೃಶ್ಯ)	ಶ್ರೀ ಜಿ.ಪಿ. ರಾಜರತ್ನಂ
೮.	ಗಂಡು ಗೊಡಲಿ (ನಾಟಕ)	ಶ್ರೀ ಜಿ.ಪಿ. ರಾಜರತ್ನಂ
೯.	ಹನಿಗಳು (ಲಘು ಚಿತ್ರಗಳು)	ಶ್ರೀ ಜಿ.ಪಿ. ರಾಜರತ್ನಂ
೧೦.	ಕನ್ನಡ ಮೇಘ ಸಂದೇಶ (ಪದ್ಯಕಾವ್ಯ)	ಪಂ॥ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿ
೧೧.	ಪುನರ್ಜನ್ಮ (ಕಾದಂಬರಿ)	ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್
೧೨.	ಮಾಟಗಾತಿ (ಸಣ್ಣ ಕಥೆಗಳು)	ಶ್ರೀ ಆನಂದ
೧೩.	ಪಾತಾಳದಲ್ಲಿ ಪಾಪಚ್ಚಿ (ಬಾಲಸಾಹಿತ್ಯ ಕಥೆ)	ಶ್ರೀ ನಾ. ಕಸ್ತೂರಿ
೧೪.	ಹಗಲುಗನಸುಗಳು (ಪ್ರಬಂಧಗಳು)	ಶ್ರೀ ಎ.ಎನ್. ಮೂರ್ತಿರಾವ್
೧೫.	ವಿಜ್ಞಾನ	ಶ್ರೀ ಜಿ. ಹನುಮಂತರಾವ್
೧೬.	ನಾದಲೀಲೆ (ಕವನ ಸಂಕಲನ)	ಶ್ರೀ ದ.ರಾ. ಬೇಂದ್ರೆ
೧೭.	ವಯಸ್ಕರ ವಿದ್ಯಾಭ್ಯಾಸ ಮೊದಲನೆಯ ಪುಸ್ತಕ	ಶ್ರೀ ಎ.ಆರ್. ಶ್ರೀನಿವಾಸಮೂರ್ತಿ
೧೮.	ಶ್ರೀ ರಾಘವಾಂಕ ಸಿದ್ಧರಾಮ ಚಾರಿತ್ರ	ಸಂ: ಶ್ರೀ ಟಿ.ಎಸ್. ವೆಂಕಣ್ಣಯ್ಯ ಶ್ರೀ ಡಿ.ಎಲ್. ನರಸಿಂಹಾಚಾರ್ಯ
೧೯.	ಶಕಾರನ ಶಾರೋಟ; ನರಕದಲ್ಲಿ ನ್ಯಾಯ	ಶ್ರೀ ಜಿ.ಪಿ. ರಾಜರತ್ನಂ
೨೦.	ಶಾಂತಿನಾಥ ಕವಿಯ ಸುಕುಮಾರ ಚರಿತಂ	ಸಂ: ಶ್ರೀ ಟಿ.ಎಸ್. ಶಾಮರಾವ್ ಶ್ರೀ ಡಿ.ಎಲ್. ನರಸಿಂಹಾಚಾರ್ಯ
೨೧.	ಬಂಡ್ವಾಳ್ವಿಲ್ಲದ ಬಡಾಯ	ಶ್ರೀ ಟಿ.ಪಿ. ಕೈಲಾಸಂ
೨೨.	ಬಂದನಾ ಹುಲಿರಾಯ	ಶ್ರೀಮತಿ ವಸುಮತಿ ಉಡುಪ
೨೩.	ಮೃಗ ತೃಷ್ಣಾ	ಶ್ರೀಮತಿ ವಸುಮತಿ ಉಡುಪ
೨೪.	ಶಬ್ದಾರ್ಥ ಗೌರವ	ಶ್ರೀ ಮಾಧವ ಪೈ
೨೫.	ವಜ್ರಪಥ (ಸ್ಮರಣ ಸಂಚಿಕೆ)	
೨೫.	ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ	ಶ್ರೀ ಎಸ್.ವಿ. ಕೃಷ್ಣಮೂರ್ತಿರಾವ್

ಕರ್ನಾಟಕ ಸಂಘ, ಶಿವಮೊಗ್ಗ

ಮೊದಲ ಐದು ವರ್ಷಗಳು

(೮-೧೧-೧೯೩೦ ರಿಂದ ೧೯೩೬ರ ವರೆಗೆ)

೧೯೩೬

ವಿಷಯ ಸೂಚಿಕೆ

ಕರ್ನಾಟಕ ಸಂಘ, ಶಿವಮೊಗ್ಗ

ಸಂಘದ ಉದ್ದೇಶಗಳು

೧. ಕವಿಗಳನ್ನೂ ಲೇಖಕರನ್ನೂ ಶಿವಮೊಗ್ಗೆಗೆ ಬರಮಾಡಿ ಅವರ ಕಾವ್ಯವಾಚನ ಭಾಷಣಗಳ ಮೂಲಕ ಇಂದಿನ ಕನ್ನಡ ಸಾಹಿತ್ಯದ ಪರಿಚಯವನ್ನು ಜನರಿಗುಂಟುಮಾಡಿ ಕೊಡುವುದು.

೨. ಕಾವ್ಯಸತ್ವವುಳ್ಳ ನಾಟಕಗಳನ್ನು ಆಡಿ ತೋರಿಸುವುದು.

೩. ಹಳೆಯ ಸಾಹಿತ್ಯದ ಸೊಬಗನ್ನು ವಿಮರ್ಶಾತ್ಮಕವಾಗಿ ತಿಳಿಸುವುದು.

೪. ಕನ್ನಡ ಭಾರತ ಮುಂತಾದ ಹಿಂದಿನ ಉದ್ಗ್ರಂಥಗಳನ್ನು ಗಮಕಿಗಳಿಂದ ಓದಿಸಿ, ವಿದ್ಯಾರ್ಥಿಗಳಲ್ಲಿ ಕಾವ್ಯವಾಚನ ಸ್ಪರ್ಧೆಗಳನ್ನೇರ್ಪಡಿಸಿ ಕಾವ್ಯವಾಚನಕ್ಕೆ ತಕ್ಕ ಉತ್ತೇಜನವನ್ನು ಕೊಡುವುದು.

೫. ಒಳ್ಳೆಯ ಗ್ರಂಥಗಳನ್ನು ಪ್ರಕಟಿಸುವುದು.

೬. ಪೂರ್ವದಲ್ಲಿ ನಮ್ಮ ಭಾಷಾ ಸಾಹಿತ್ಯಗಳನ್ನು ಅಭಿವೃದ್ಧಿಗೊಳಿಸಿದ ಪಂಪ, ರನ್ನ, ನಾರಣಪ್ಪ ಮೊದಲಾದ ಕವಿವರ್ಯರ ಮತ್ತು ನಮ್ಮ ಮತಧರ್ಮಗಳನ್ನು ಶುಚಿಗೊಳಿಸಿ ಜನಜೀವನವನ್ನು ಉತ್ತಮಗೊಳಿಸಿದ ವಿದ್ಯಾರಣ್ಯರು, ಬಸವೇಶ್ವರರು, ಪುರಂದರದಾಸರು ಮೊದಲಾದ ಮಹಾತ್ಮರ ಜಯಂತ್ಯುತ್ಸವಗಳನ್ನು ನೆರವೇರಿಸುವುದು.

೭. ಭಾರತೀಯ ಸಂಸ್ಕೃತಿಗೆ ನೆಲೆಗಟ್ಟಾದ ಸಂಸ್ಕೃತ ಸಾಹಿತ್ಯ ವೇದಾಂತಗಳ ವಿಷಯವಾಗಿ ವಿದ್ಯಾಪರಿಣತರಿಂದ ಉಪನ್ಯಾಸ ಮಾಡಿಸುವುದು.

೮. ಇಂದಿನ ಸಾಹಿತ್ಯಕ್ಕೆ ಸ್ಫೂರ್ತಿದಾಯಕವಾಗಿರುವ ಇಂಗ್ಲೀಷು ಮೊದಲಾದ ಭಾಷಾ ಸಾಹಿತ್ಯಗಳ ವಿಚಾರವಾಗಿ ವಿದ್ವಾಂಸರಿಂದ ಉಪನ್ಯಾಸ ಮಾಡಿಸುವುದು.

೯. ಉತ್ತಮ ಪುಸ್ತಕ ಭಂಡಾರವೊಂದನ್ನು ಶಿವಮೊಗ್ಗೆಯಲ್ಲಿ ಸ್ಥಾಪಿಸುವುದು.

ಅನುಬಂಧಗಳು

ಕರ್ನಾಟಕ ಸಂಘ, ಶಿವಮೊಗ್ಗ

(ಸ್ಥಾಪನೆ-೧೯೩೦ನೆಯ ಇಸವಿ ನವೆಂಬರ್ ೮)

೧೯೩೬ನೆಯ ಫೆಬ್ರವರಿ ೭ನೆಯ ತಾರೀಕಿನ ವರೆಗಿನ ವರದಿ

ಮಹಾಶಯರೆ,

ಶಿವಮೊಗ್ಗೆಯ ಕರ್ನಾಟಕ ಸಂಘವು ಕಳೆದ ಐದು ವರ್ಷಗಳಲ್ಲಿ- ಎಂದರೆ ೧೯೩೦ನೆಯ ಇಸವಿ ನವೆಂಬರ್ ೮ನೆಯ ತಾರೀಕಿನಿಂದ ೧೯೩೬ನೆಯ ಇಸವಿ ಫೆಬ್ರವರಿ ೭ರವರೆಗೆ ನಡೆಸಿರುವ ಕಾರ್ಯಕಲಾಪಗಳ[೨] ವರದಿಯನ್ನು ಕಾರ್ಯನಿರ್ವಾಹಕ ಮಂಡಲಿಯ ಅಪ್ಪಣೆಯ ಮೇರೆಗೆ ತಮಗೆ ಒಪ್ಪಿಸಲು ಅನುಮತಿಯನ್ನು ಬೇಡುತ್ತೇನೆ.

೨. ಸಂಸ್ಥಾಪನೆಯ ಸಂದರ್ಭ

ಈ ಸಂಘವು ೧೯೩೦ನೆಯ ಇಸವಿ ನವೆಂಬರ್ ೮ನೆಯ ತಾರೀಕಿನಲ್ಲಿ ಪ್ರಸಿದ್ಧ ಕವಿಗಳಾದ ಶ್ರೀಮಾನ್ ಕೆ.ವಿ. ಪುಟ್ಟಪ್ಪ, ಎಂ.ಎ., ಯವರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾಯಿತು. ಸಂಘವು ಸ್ಥಾಪಿತವಾಗಲು ಒದಗಿದ ಸಂದರ್ಭವಿದು: ೧೯೩೦ನೆಯ ಇಸವಿ ನವರಾತ್ರಿ ಸಮಯದಲ್ಲಿ ಮೈಸೂರು ಪಟ್ಟಣದಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿದ ಹದಿನಾರನೆಯ ಕರ್ನಾಟಕ ಸಾಹಿತ್ಯ ಪರಿಷತ್ ಸಮ್ಮೇಳನ ಕಾಲದಲ್ಲಿ ಸೇರಿದ ತರುಣ ಲೇಖಕರ ಗೋಷ್ಠಿಯ ಅಧ್ಯಕ್ಷರಾಗಿದ್ದು ತಮ್ಮ ಕವಿತಾವಾಚನದಿಂದಲೂ ವ್ಯಾಖ್ಯಾನಗಳಿಂದಲೂ ಜನರ ಮನಸ್ಸನ್ನು ಸೆಳೆದ ಉತ್ತರ ಕರ್ನಾಟಕದ ಸುಪ್ರಸಿದ್ಧ ಕವಿಗಳಾದ ಶ್ರೀಮಾನ್ ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಎಂ.ಎ., ಯವರನ್ನೂ ಅವರ ಕೃತಿಗಳನ್ನೂ ನಮ್ಮ ಜನರಿಗೆ ಪರಿಚಯ ಮಾಡಿಕೊಡಬೇಕೆಂಬ ಉದ್ದೇಶದಿಂದ ಸ್ವಯಂ ಕವಿಗಳೂ ಸಹೃದಯರೂ ಉದಾರಮನಸ್ಕರೂ ಆದ ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ., ಯವರು ಶ್ರೀಮಾನ್ ಬೇಂದ್ರೆಯವರನ್ನು ಮೈಸೂರು ಸಂಸ್ಥಾನದ ಅನೇಕ ಪ್ರದೇಶಗಳಿಗೆ ತಮ್ಮೊಡನೆ ಕರೆದೊಯ್ದು, ಆ ಸ್ಥಳಗಳಲ್ಲೆಲ್ಲ ಸಭೆ ಸೇರಿಸಿ, ಜನರಿಗೆ ಶ್ರೀಮಾನ್ ಬೇಂದ್ರೆಯವರ ಕಾವ್ಯ ಪರಿಚಯವನ್ನುಂಟುಮಾಡಿಕೊಟ್ಟರು. ಶಿವಮೊಗ್ಗೆಯ ಜನರಿಗೆ ಶ್ರೀಮಾನ್ ಬೇಂದ್ರೆಯವರ ಕಾವ್ಯಶ್ರವಣಯೋಗವು ಮೇಲ್ಕಂಡ ವರ್ಷದ ಅಕ್ಟೋಬರ್ ತಿಂಗಳ ಅಂತ್ಯದಲ್ಲಿ ಲಭಿಸಿತು. ಆ ಕಾಲದಲ್ಲಿ ಶ್ರೀಮಾನ್ ಬೇಂದ್ರೆಯವರೂ ಶ್ರೀಮಾನ್ ಮಾಸ್ತಿ ವೆಂಕಟೇಶ

---

೧. ಐದನೆಯ ವರ್ಷವನ್ನು ಮೂರು ತಿಂಗಳ ಕಾಲ ಮುಂದುವರಿಸಿಕೊಳ್ಳಲಾಗಿದೆ.

೨. ಸಂಘದಲ್ಲಿ ನಡೆದ ಕಾರ್ಯಗಳನ್ನು ಆಗಾಗ ಪತ್ರಿಕೆಗಳಲ್ಲಿ ಪ್ರಕಟಪಡಿಸುವುದರಿಂದಲೂ ವರದಿಯ ಅಚ್ಚಿನ ವೆಚ್ಚವನ್ನು ಆದಷ್ಟು ಕಡಮೆ ಮಾಡಬೇಕೆಂಬ ಉದ್ದೇಶದಿಂದಲೂ ಈ ವರದಿಯನ್ನು ಸಾಧ್ಯವಾದ ಮಟ್ಟಿಗೂ ಸಂಕ್ಷೇಪ ಮಾಡಲಾಗಿದೆ. ಯಾವುದಾದರೂ ವಿಷಯವಾಗಿ ಹೆಚ್ಚು ವಿವರವನ್ನು ಸದಸ್ಯರು ಅಪೇಕ್ಷಿಸಿದಲ್ಲಿ ಅದನ್ನು ಸಾಧ್ಯವಿರುವ ಮಟ್ಟಿಗೂ ತಿಳುಹಿಸಲು ಕಾರ್ಯನಿರ್ವಾಹಕ ಮಂಡಲಿ ಸಿದ್ಧವಾಗಿರುತ್ತದೆ.

ಅಯ್ಯಂಗಾರ್ಯರೂ ಶಿವಮೊಗ್ಗೆಯಲ್ಲಿ ಕರ್ಣಾಟಕ ಸಂಘವೊಂದರ ಆವಶ್ಯಕತೆಯನ್ನು ಕುರಿತು ನಮ್ಮೊಡನೆ ಪ್ರಸ್ತಾಪಿಸಿದರು. ಈ ವಿಧವಾದ ಸಂಘಸಂಸ್ಥಾಪನೆಗೆ ಆಗ್ಗೆ ಸಾಕಾದಷ್ಟು ಸಾರ್ವಜನಿಕ ಪ್ರೋತ್ಸಾಹವು ದೊರೆಯಲಿಲ್ಲ. ಅದರಿಂದ ಸಂಘಸ್ಥಾಪನೆಯು ಅಸಾಧ್ಯವೆಂದು ನಮ್ಮಲ್ಲಿ ಕೆಲವರು ನಿರಾಶರಾದೆವು. ಆದರೆ ನಮ್ಮ ಮಿತ್ರರಾದ ಶ್ರೀಮಾನ್ ಭೂಪಾಳಂ ಪುಟ್ಟನಂಜಪ್ಪನವರು, ಶ್ರೀಮಾನ್ ಎ. ಸೀತಾರಾಮ್ ಅವರು ಆ ನಿರಾಶೆಯ ಕಾಲವು ಹೋಗುತ್ತಿದೆಯೆಂದೂ ಕನ್ನಡದ ವಿಚಾರದಲ್ಲಿ ಜನಜಾಗೃತಿಯನ್ನುಂಟುಮಾಡುವುದು ನಮ್ಮ ಕರ್ತವ್ಯವೆಂದೂ ನಮಗೆ ಧೈರ್ಯ ಹೇಳಿದರು. ಈ ಇಬ್ಬರು ಮಹನೀಯರ ಧೈರ್ಯೋತ್ಸಾಹಗಳಿಂದ ಶಿವಮೊಗ್ಗೆಯ ಕರ್ಣಾಟಕ ಸಂಘವು ಹುಟ್ಟಲವಕಾಶವಾಯಿತು.

೩. ಸಂಘದ ಪ್ರಾರಂಭೋತ್ಸವ

ಶ್ರೀಯುತರುಗಳಾದ ದೇಶಪಾಂಡೆ ಗುರುರಾವ್, ಬಿ.ಎ., ಬಿ,ಟಿ., ಎ. ಸೀತಾರಾಮ್, ಬಿ.ಎಸ್‌ಸಿ., ಮತ್ತು ಕೂಡಲಿ ಚಿದಂಬರಂ, ಬಿ.ಎ., ಎಲ್‌ಎಲ್.ಬಿ., ಇವರುಗಳನ್ನು ಸಂಘದ ಪ್ರಾರಂಭೋತ್ಸವಕ್ಕೆ ಚಾಲಕರನ್ನಾಗಿ ನಿಯೋಜಿಸಿ, ಉತ್ಸವವನ್ನು ಶ್ರೀಮಾನ್ ಪುಟ್ಟಪ್ಪ, ಎಂ.ಎ., ಯವರ ಅಧ್ಯಕ್ಷತೆಯಲ್ಲಿ ನೆರವೇರಿಸಬೇಕೆಂದು ನಿಶ್ಚಯಿಸಿದೆವು. ತಾ. ೮-೧೧-೧೯೩೦ನೆಯ ಶನಿವಾರ ಸಾಯಂಕಾಲ ಸಂಘದ ಪ್ರಾರಂಭೋತ್ಸವವು ಶಿವಮೊಗ್ಗ ಗೌರ್ನಮೆಂಟ್ ಹೈಸ್ಕೂಲು ಮಂದಿರದಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಶ್ರೀಮಾನ್ ಪುಟ್ಟಪ್ಪನವರ ಅಂದಿನ ಅಧ್ಯಕ್ಷ ಭಾಷಣವು "ಸಾಹಿತ್ಯ ಪ್ರಚಾರ"ವೆಂಬ ಹೆಸರಿನಿಂದ ಪುಸ್ತಕ ರೂಪದಲ್ಲಿ ಸಂಘದಿಂದ ಪ್ರಕಟವಾಗಿದೆ.

೪. ಸಂಘದ ಉದ್ದೇಶಗಳು

ಪ್ರಾರಂಭೋತ್ಸವ ಕಾಲದಲ್ಲಿ ಸಂಘದ ಆವಶ್ಯಕತೆ, ಉದ್ದೇಶಗಳು -ಈ ರೀತಿಯಾಗಿ ವಿವರಿಸಲ್ಪಟ್ಟವು-

ನಮ್ಮ ಜನಜೀವನದಲ್ಲಿ ಇಂದು ಒಂದು ಹೊಸ ಬೆಳಕು ತೋರಿದೆ; ಒಂದು ಹೊಸ ಜೀವಪ್ರವಾಹವು ಚಿಮ್ಮಿದೆ. ನಮ್ಮ ಜನರಲ್ಲಿ, ನಮ್ಮ ನಾಡಲ್ಲಿ ಒಂದು ನವಚೈತನ್ಯವುಂಟಾಗಿದೆ. ಇದನ್ನು ನಾಡಿನ ಅಭ್ಯುತ್ಥಾನವೆಂದು ಕರೆಯುವರು. ಈ ಅಭ್ಯುತ್ಥಾನವು ನಮ್ಮಲ್ಲಿ ಈಗ ಉಂಟಾಗಿದೆ; ನಮ್ಮ ನಾಡು, ನಮ್ಮ ಜನ, ನಮ್ಮ ಭಾಷೆ ಎಂಬ ಅಭಿಮಾನವು ತಲೆದೋರುತ್ತಿದೆ.

ಹೀಗೆ ನಮ್ಮ ಜನಜೀವನದಲ್ಲಿ ಈಗ ತೋರುತ್ತಿರುವ ಹೊಸ ಆಸೆ ಆಶಯಗಳೂ ಧ್ಯೇಯಗಳೂ ಹೊಸ ರೀತಿ ಮಾರ್ಪಾಡುಗಳೂ ಇಂದಿನ ಹೊಸ ಕನ್ನಡ ಸಾಹಿತ್ಯದಲ್ಲಿ ಹೊಸ ರೂಪಿನಿಂದ ಹೊಸ ಕಾವ್ಯ ನಾಟಕ ಪ್ರಬಂಧ ಕಥೆಗಳಲ್ಲಿ ಕಾಣುತ್ತಿವೆ, ಕಾಣಲು ಪ್ರಾರಂಭವಾಗಿದೆ. ಜನಜೀವನದ ಪ್ರತಿಬಿಂಬವಾದ ಈ ನೂತನ ಸಾಹಿತ್ಯದ ಅನುಭವ ಮಾಡಿಕೊಡಬೇಕೆಂಬುದು ನಮ್ಮ ಸಂಘದ ಉದ್ದೇಶವಾಗಿದೆ. ಸಾಹಿತ್ಯಸೇವಕರಾದ ಕವಿಗಳನ್ನು ಲೇಖಕರನ್ನೂ ಈ ಊರಿಗೆ ಬರಮಾಡಿ ಅವರ ಮತ್ತು ಅವರ ಕೃತಿಗಳ ಪರಿಚಯವನ್ನು ನಿಮಗೆಲ್ಲ ಉಂಟು ಮಾಡಿಸಿಕೊಡಬೇಕೆಂದಿದ್ದೇವೆ.

(೨) ಅವಕಾಶ ದೊರೆತಲ್ಲಿ ಆಧುನಿಕ ನಾಟಕಗಳನ್ನು ನಿಮ್ಮೆಲ್ಲರ ಮುಂದೆ ಆಡಿ ತೋರಿಸುವೆವು.

(೩) ಹೊಸದು ಹಳತು ಎಂಬ ಭೇದವನ್ನೆಣಿಸದೆ, ಬರಿಯ ಅಭಿಮಾನ ದುರಭಿಮಾನಗಳಿಗೊಳಗಾಗದೆ, ಎಲ್ಲವನ್ನೂ ಕೂಲಂಕಷವಾಗಿ, ಅದರದರ ನಿಜಯೋಗ್ಯತೆಗೆ

ಸರಿಯಾಗಿ ನಿರ್ಣಯಿಸುವ ಕಾಲವಿದು. ಈ ಸಮಯದಲ್ಲಿ, ಹೊಸ ಸಾಹಿತ್ಯದಲ್ಲಿ ಮೈಮರೆಯದೆ, ಪ್ರಾಚೀನ ಸಾಹಿತ್ಯದ ಸೊಬಗನ್ನು ವಿಮರ್ಶಾತ್ಮಕವಾಗಿ ತಿಳಿಸಲು ಯತ್ನಿಸುವೆವು.

(೪) 'ಕನ್ನಡ ಮಹಾಭಾರತ'ವೇ ಮುಂತಾದ ಹಿಂದಿನ ಉದ್ಗ್ರಂಥಗಳನ್ನು ಗಮಕಿಗಳಿಂದ ಓದಿಸಿ, ವಿದ್ಯಾರ್ಥಿಗಳಲ್ಲಿ ಕಾವ್ಯವಾಚನ ಸ್ಪರ್ಧೆಗಳನ್ನೇರ್ಪಡಿಸಿ, ಕಾವ್ಯವಾಚನಕ್ಕೆ ತಕ್ಕ ಉತ್ತೇಜನ ಕೊಡುವೆವು.

(೫) ಜನರ ಸಹಾಯ ಸಹಾನುಭೂತಿಗಳು ದೊರೆತಲ್ಲಿ, ಕರ್ಣಾಟಕದಲ್ಲಿ ಜನ್ಮವೆತ್ತಿ ಪೂರ್ವದಲ್ಲಿ ನಮ್ಮ ಸಾಹಿತ್ಯವನ್ನು ಅಭಿವೃದ್ಧಿಗೊಳಿಸಿದ ಪಂಪ, ರನ್ನ, ನಾರಣಪ್ಪ ಮೊದಲಾದ ಕವಿವರರ, ನಮ್ಮ ಮತಧರ್ಮಗಳನ್ನು ಶುಚಿಗೊಳಿಸಿ ಜನಜೀವನವನ್ನು ಉತ್ತಮಗೊಳಿಸಿದ ವಿದ್ಯಾರಣ್ಯರು, ಬಸವೇಶ್ವರರು, ಪುರಂದರದಾಸರು ಮೊದಲಾದ ಮಹಾತ್ಮರ ಜಯಂತ್ಯುತ್ಸವಗಳನ್ನು ನೆರವೇರಿಸಬೇಕೆಂಬ ಇಷ್ಟವಿದೆ.

(೬) ಪೂರ್ವದಲ್ಲಿ ನಮ್ಮ ಸಂಸ್ಕೃತಿಗೆ, ಸಾಹಿತ್ಯಕ್ಕೆ ನೆಲೆಯಾದ, ಇಂದಿಗೂ ಅನೇಕ ವಿಧದಲ್ಲಿ ನೆರವಾಗಿರುವ ನಮ್ಮ ಪ್ರಾಚೀನ ಆರ್ಯಸಂಸ್ಕೃತಿಯ ನೆಲೆಗಟ್ಟಾದ ಸಂಸ್ಕೃತ ಭಾಷಾ ಸಾಹಿತ್ಯ ವೇದಾಂತಗಳ ವಿಚಾರವಾಗಿಯೂ ವಿದ್ಯಾಪರಿಣತರಿಂದ ಉಪನ್ಯಾಸ ಮಾಡಿಸಲು ಪ್ರಯತ್ನಿಸುವೆವು.

(೭) ನಾವು ಯಾವ ವಿಧದಿಂದಲೂ ಸಂಕುಚಿತಭಾವದಿಂದ ಪ್ರವರ್ತಿಸಲೆಳಸುವುದಿಲ್ಲ. ಇಂದಿನ ಸಾಹಿತ್ಯಕ್ಕೆ ಸ್ಫೂರ್ತಿದಾಯಕವಾಗಿರುವ ಇಂಗ್ಲೀಷು ಮೊದಲಾದ ಭಾಷೆಗಳಿಂದ, ಜ್ಞಾನಭಂಡಾರದ ಎಲ್ಲ ಭಾಗಗಳಿಂದ, ಕನ್ನಡಕ್ಕೆ ಆಗುತ್ತಿರುವ, ಕನ್ನಡ ಜನಕ್ಕೆ ಆಗಬಹುದಾದ ಉಪಕಾರವನ್ನು ಬಗೆದು, ಅವುಗಳ ವಿಷಯವಾಗಿಯೂ ಉಪನ್ಯಾಸ ಕೊಡಿಸಬೇಕೆಂದು ಸಂಕಲ್ಪಿಸಿರುವೆವು.

(೮) ಶಿವಮೊಗ್ಗೆಯಂತಹ ದೊಡ್ಡ ಪಟ್ಟಣದಲ್ಲಿ ಒಳ್ಳೆಯ ಪುಸ್ತಕ ಭಂಡಾರವೊಂದು ಇಲ್ಲದಿರುವುದು ಶೋಚನೀಯವಾಗಿದೆ. ಈ ಕೊರತೆಯನ್ನು ದೂರಮಾಡಲು, ತಮ್ಮೆಲ್ಲರ ಸಹಾಯದಿಂದ ಪುಸ್ತಕ ಭಂಡಾರವೊಂದನ್ನು ಶಿವಮೊಗ್ಗೆಯಲ್ಲಿ ಸ್ಥಾಪಿಸಬೇಕೆಂಬುದು ಸಂಘದ ಘನೋದ್ದೇಶಗಳಲ್ಲಿ ಒಂದಾಗಿದೆ.

೫. ಕಾರ್ಯನಿರ್ವಾಹಕ ಮಂಡಲಿ

ಮೇಲೆಯೇ ಸೂಚಿಸಿದಂತೆ ಕನ್ನಡದ ವಿಚಾರದಲ್ಲಿ ಈಗ ತೋರುತ್ತಿರುವ ಆಸಕ್ತಿ ಉತ್ಸಾಹಗಳೂ ಜನಜಾಗೃತಿಯೂ ಆಗ್ಗೆ-ಐದು ವರ್ಷಗಳ ಸುಮಾರಿನ ಹಿಂದೆ-ಇರಲಿಲ್ಲ; ಅದರಿಂದ ಸಂಘದ ಉದ್ದೇಶ ಸಾಧನೆಗಾಗಿ ಆಡಳಿತ ಮಂಡಲವೊಂದನ್ನು ರಚಿಸಿ, ಸಂಘದ ಕಾರ್ಯಕ್ರಮಗಳಿಗೆ ವಿಹಿತವಾದ ರೂಪವೊಂದನ್ನು ಕೊಡಲು ಆಗ್ಗೆ ಪಟ್ಟ ಪ್ರಯತ್ನಗಳೂ ಫಲಕಾರಿಯಾಗಲಿಲ್ಲ. ಈ ಕಾರಣದಿಂದ ಸಂಘದ ಪ್ರಾರಂಭೋತ್ಸವದಲ್ಲಿ ಆಸಕ್ತಿವಹಿಸಿದ ಮಹನೀಯರುಗಳನ್ನೇ ಸೇರಿಸಿ, ಸಂಘದ ಮುಂದಿನ ಕಾರ್ಯಕ್ರಮಗಳ ವಿಷಯವನ್ನು ಆಲೋಚನೆ ಮಾಡಲಾಯಿತು. ಅದರ ಫಲವಾಗಿ ಶ್ರೀಮಾನ್ ಡಿ. ಗುರುರಾವ್, ಬಿ.ಎ., ಬಿ.ಟಿ., ಯವರು ಗೌರವ ಕಾರ್ಯದರ್ಶಿಗಳಾಗಿಯೂ ಶ್ರೀಮಾನ್ ಕೂಡಲಿ ಚಿದಂಬರಂ, ಬಿ.ಎ., ಎಲ್‌ಎಲ್.ಬಿ.,ಯವರು ಸಹಾಯ ಕಾರ್ಯದರ್ಶಿ ಮತ್ತು ಖಜಾಂಚಿಯಾಗಿಯೂ ಶ್ರೀಯುತರುಗಳಾದ ೧. ಭೂಪಾಳಂ ಚಂದ್ರಶೇಖರಯ್ಯ, ಬಿ.ಎ.; ೨. ಎಸ್.ಎಸ್. ಕೃಷ್ಣಮೂರ್ತಿ, ಬಿ.ಎಸ್‌ಸಿ., ಎಲ್‌ಎಲ್‌ಬಿ.;

೩. ಎಸ್.ವಿ. ಕೃಷ್ಣಮೂರ್ತಿರಾವ್, ಬಿ.ಎಸ್‌ಸಿ., ಎಲ್‌ಎಲ್.ಬಿ.; ೪. ಆರ್. ಕೃಷ್ಣಶೆಟ್ಟಿ, ಬಿ.ಎ., ಎಲ್‌ಎಲ್.ಬಿ.; ೫. ಎ.ಎನ್. ನಾರಾಯಣಭಟ್ಟ, ಬಿ.ಎ., ಬಿ.ಎಲ್.; ೬. ಭೂಪಾಳಂ ಪುಟ್ಟಸಂಜಪ್ಪ, ಎಂ.ಎ., ಎಲ್‌ಎಲ್.ಬಿ.; ೭. ಡಿ.ಆರ್. ಮಾನಪ್ಪನವರು -ಈ ಏಳು ಜನರು ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರುಗಳಾಗಿಯೂ ಏರ್ಪಟ್ಟರು. ಉದ್ದಾಮ ಪಂಡಿತರಾದ ವೇ॥ ಬ್ರ॥ ಶ್ರೀ॥ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು ನಮ್ಮ ಪ್ರಾರ್ಥನೆಯ ಮೇರೆಗೆ ಸಂಘದ ಅಧ್ಯಕ್ಷರಾಗಿರಲು ಒಪ್ಪಿ ಮಹೋಪಕಾರ ಮಾಡಿದರು.

ಕಳೆದ ಐದು ವರ್ಷಗಳಲ್ಲಿ ಸಂಘದ ಪರವಾಗಿ ನಡೆದ ಎಲ್ಲ ಕಾರ್ಯಗಳೂ ಸಂಘದ ಹಿತ ಮತ್ತು ಉದ್ದೇಶ ಸಾಧನೆ ಇವುಗಳೇ ಗುರಿಯಾಗಿ ಮೇಲ್ಕಂಡ ಕಾರ್ಯನಿರ್ವಾಹಕ ಮಂಡಲಿಯವರ ಸಲಹೆ ಸಹಾಯ ಅನುಮತಿಗಳಿಗೆ ಒಳಪಟ್ಟು ನಡೆದದ್ದಾಗಿರುತ್ತದೆ.

೬. ಉಪನ್ಯಾಸಾದಿ ಕಾರ್ಯಗಳು

ಪ್ರಾರಂಭೋತ್ಸವಾನಂತರ ಇದುವರೆಗೆ ಐದು ವಾರ್ಷಿಕೋತ್ಸವ ಸಭೆಗಳೂ ಸೇರಿ ಒಟ್ಟಿನಲ್ಲಿ ತೊಂಬತ್ತಾರು ಸಭೆಗಳು ನಡೆದಿರುತ್ತವೆ.[೧]

ಈ ಸಭೆಗಳಲ್ಲಿ ನಡೆದ ಕಾರ್ಯಕಲಾಪಗಳನ್ನು ಈ ರೀತಿಯಾಗಿ ವಿಂಗಡ ಮಾಡಬಹುದು-

ಅಧ್ಯಕ್ಷ ಭಾಷಣಗಳು	...	೫	ಸಂಗೀತ ಕಛೇರಿಗಳು	...	೫
ಉಪನ್ಯಾಸಗಳು...	...	೮೭	ನಾಟಕಾಭಿನಯಗಳು	...	೫
ಕವಿತಾವಾಚನ ಸಭೆಗಳು	...	೧೨	ಸಹಾಯಾರ್ಥ ನಾಟಕಗಳು	...	೪
ಕಾವ್ಯವಾಚನ ಸಭೆಗಳು	...	೮	ಸಂತಾಪಸೂಚಕ ಸಭೆಗಳು	...	೨
ಭಾರತವಾಚನ ಸಭೆಗಳು	...	೧೦	ಕೃತಜ್ಞತಾಸೂಚಕ ಸಭೆ	...	೧
ಕಾವ್ಯವಾಚನ ಸ್ಪರ್ಧಾ ಸಭೆಗಳು	...	೭	ಜಯಂತ್ಯುತ್ಸವಗಳು	...	೩
ವ್ಯಾಸಂಗ ಗೋಷ್ಠಿ	...	೧			

(i) ಉಪನ್ಯಾಸಗಳು: ಉಪನ್ಯಾಸಗಳಲ್ಲಿ ಸಾಹಿತ್ಯ ವಿಷಯಕವಾದವುಗಳೇ ಸಾಮಾನ್ಯವಾಗಿ ಹೆಚ್ಚಾಗಿ ನಡೆದಿರುತ್ತವೆಯಾದರೂ ಆಗಾಗ್ಗೆ ಇತರ ವಿಷಯಗಳ ಮೇಲೂ ಭಾಷಣಗಳು ಜರುಗಿವೆ. ನಿದರ್ಶನಾರ್ಥವಾಗಿ-

ಶ್ರೀಮದ್ರಾಮಾಯಣದ ಮೇಲೆ (ಪೌರಾಣಿಕ)	...	೫	ಉಪನ್ಯಾಸಗಳೂ
ಶ್ರೀಮದ್ಭಗವದ್ಗೀತೆಯ ಮೇಲೆ	...	೩	”
ತತ್ತ್ವಶಾಸ್ತ್ರಗಳಿಗೆ ಸಂಬಂಧಪಟ್ಟಂತೆ	...	೪	”
ಅರ್ಥಶಾಸ್ತ್ರ ಚರಿತ್ರೆಗಳಿಗೆ ಸಂಬಂಧಪಟ್ಟಂತೆ	...	೧೦	”
ಸೈನ್ಸ್ ವಿಚಾರಗಳಿಗೆ ಸಂಬಂಧಪಟ್ಟಂತೆ	...	೧೧	”
ಕನ್ನಡ ಶೀಘ್ರಲಿಪಿಯ ವಿಚಾರವಾಗಿ	...	೧	ಉಪನ್ಯಾಸವೂ

---

೧. ಮೊದಲನೆಯ ವರ್ಷ-೧೬; ೨ನೆಯ ವರ್ಷ-೧೭; ೩ನೆಯ ವರ್ಷ-೧೭; ೪ನೆಯ ವರ್ಷ-೨೧; ೫ನೆಯ ವರ್ಷ-೨೩; ೫ನೆಯ ವಾರ್ಷಿಕೋತ್ಸವಾನಂತರ-೨. ಅಂದರೆ ವರ್ಷಕ್ಕೆ ಸರಾಸರಿ ೧೯ ಸಭೆಗಳು ನಡೆದಿವೆ. ಅನುಬಂಧದಲ್ಲಿ ಸಭೆಗಳು ನಡೆದ ದಿವಸ, ಉಪನ್ಯಾಸಕರ ಹೆಸರು, ಉಪನ್ಯಾಸ ವಿಷಯ -ಇತ್ಯಾದಿ ವಿವರಗಳಿವೆ.

ನಡೆದಿರುತ್ತವೆ. ವಿದೇಶ ಸಾಹಿತ್ಯದ ಮೇಲೆ ಒಂದು ಉಪನ್ಯಾಸ ಮಾತ್ರ ನಡೆದಿರುತ್ತದೆ: ಗ್ರೀಕ್ ಕವಿ ಈಸ್ಕಿಲೀಸನ ರುದ್ರನಾಟಕಗಳ ಮೇಲೆ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ಅವರು ಮಾಡಿದ ಭಾಷಣ.

ಉಪನ್ಯಾಸಕರ ಹೆಸರುಗಳನ್ನೂ ಉಪನ್ಯಾಸ ವಿಷಯಗಳನ್ನೂ[೧] ಪರಿಶೀಲಿಸಿದಲ್ಲಿ ಉಪನ್ಯಾಸಗಳ ಮಟ್ಟವೂ ಉಪಯುಕ್ತತೆಯೂ ವೇದ್ಯವಾಗುತ್ತವೆ. ಶ್ರೀಯುತರುಗಳಾದ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ಟಿ.ಎಸ್. ವೆಂಕಣ್ಣಯ್ಯ, ಎಂ.ಎ., ಎ.ಆರ್. ಕೃಷ್ಣಶಾಸ್ತ್ರೀ, ಎಂ.ಎ., ಎಂ.ಆರ್. ಶ್ರೀನಿವಾಸಮೂರ್ತಿ, ಬಿ.ಎ., ಎಂ. ವೆಂಕಟೇಶ ಅಯ್ಯಂಗಾರ್, ಎಂ.ಎ., ಎ. ಸೀತಾರಾಮಯ್ಯ, ಎಂ.ಎ., ಕೆ.ವಿ. ಪುಟ್ಟಪ್ಪ, ಎಂ.ಎ., ಎ.ಎನ್. ಮೂರ್ತಿರಾವ್, ಎಂ.ಎ., ಜಿ.ಎಂ. ಮೇಕ್ರಿ, ಬಿ.ಎ., ಎಲ್‌ಎಲ್.ಬಿ., ಇವರೇ ಮೊದಲಾದ ವಿದ್ವಾಂಸರುಗಳು ಸಂಘದೊಡನೆ ಸಹಕರಿಸಿ ಆಗಾಗ್ಗೆ ಭಾಷಣಗಳನ್ನು ಮಾಡಿರುತ್ತಾರೆ. ಸ್ಥಳೀಕರಾದ ವೇ।। ಬ್ರ।। ಶ್ರೀ।। ಪಂಡಿತ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು, ವೇದಾಂತ ಶಿರೋಮಣಿ ವಿಠ್ಠಲಶಾಸ್ತ್ರಿಗಳು, ಶ್ರೀಮಾನ್ ಹೆಚ್. ಶ್ರೀನಿವಾಸರಾವ್, ಬಿ.ಎ., ಬಿ.ಎಲ್., ಶ್ರೀಮಾನ್ ಎಸ್. ವಿಷ್ಣುಭಟ್ಟ, ಬಿ.ಎ., ಎಲ್‌ಎಲ್.ಬಿ., ಶ್ರೀಮಾನ್ ಬಿ. ವೆಂಕಟಸ್ವಾಮಯ್ಯ, ಬಿ.ಎ., ಆರ್.ಕೆ. ಜಯತೀರ್ಥಾಚಾರ್, ಬಿ.ಎ., ಎಲ್‌ಎಲ್.ಬಿ., ಇವರುಗಳು ಉತ್ತಮ ಭಾಷಣಗಳ ಮೂಲಕ ಸಹಾಯ ಮಾಡಿದ್ದಾರೆ.

(ii) ವಾರ್ಷಿಕೋತ್ಸವ ಸಮಾರಂಭಗಳು: ಶ್ರೀಯುತರುಗಳಾದ ಎಂ.ಆರ್. ಶ್ರೀನಿವಾಸಮೂರ್ತಿ, ಬಿ.ಎ., ಎ.ಆರ್. ಕೃಷ್ಣಶಾಸ್ತ್ರೀ, ಎಂ.ಎ., ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ವಿದ್ವಾನ್ ಕಡಂಗೋಡ್ಲು ಶಂಕರಭಟ್ಟರು, ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಎಂ.ಎ., -ಈ ಐದು ಮಂದಿ ಕಳೆದ ಐದು ವರ್ಷಗಳಲ್ಲಿ ಕ್ರಮವಾಗಿ ವಾರ್ಷಿಕೋತ್ಸವದ ಅಧ್ಯಕ್ಷರಾಗಿ ದಯಮಾಡಿ ಬಂದು ಉದಾತ್ತ ಭಾಷಣಗಳನ್ನು ಮಾಡಿ ಸಂಘದ ಪುರೋಭಿವೃದ್ಧಿಯ ವಿಷಯದಲ್ಲಿ ಅಮೂಲ್ಯವಾದ ಸಲಹೆಗಳನ್ನಿತ್ತಿರುತ್ತಾರೆ.

(iii) ಉಪನ್ಯಾಸಮಾಲೆ: ಉಪನ್ಯಾಸಮಾಲೆಯ ವಿಚಾರದಲ್ಲಿಯೂ ಉಪನ್ಯಾಸ ಸಪ್ತಾಹದ ವಿಷಯದಲ್ಲಿಯೂ ಒಂದೆರಡು ಮಾತುಗಳನ್ನು ಹೇಳುವುದು ಆವಶ್ಯಕವಾಗಿ ತೋರುತ್ತದೆ. ಬೇರೆ ಬೇರೆ ವಿಷಯಗಳ ಮೇಲೆ ಬಿಡಿಯಾಗಿ ಉಪನ್ಯಾಸಗಳನ್ನು ಹೇಳಿಸುವುದಕ್ಕಿಂತಲೂ ಒಂದೇ ವಿಷಯದ ಮೇಲೆ ನಾಲ್ಕಾರು ಉಪನ್ಯಾಸಗಳನ್ನು ಏರ್ಪಡಿಸಿ ಕ್ರಮೇಣ ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವುದರಿಂದ ಹೆಚ್ಚು ಉಪಯೋಗವಾಗುವುದೆಂದು ತಿಳಿದು ಉಪನ್ಯಾಸ ಮಾಲೆಯ ಏರ್ಪಾಡನ್ನು ಯೋಚಿಸಲಾಯಿತು. ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ಅವರು 'ಕನ್ನಡ ಜೈನ ಸಾಹಿತ್ಯ'ದ ಮೇಲೆ ಮೂರು ಉಪನ್ಯಾಸಗಳನ್ನು ಹೇಳುವುದರ ಮೂಲಕ ಈ ಉಪನ್ಯಾಸಮಾಲೆಯನ್ನು ೧೯೩೪ನೆಯ ಇಸವಿ ಆಗಸ್ಟ್ ತಿಂಗಳಲ್ಲಿ ಪ್ರಾರಂಭಿಸಿದರು. 'ಕನ್ನಡ ವೀರಶೈವ ಸಾಹಿತ್ಯ'ದ ಮೇಲೆ ಉಪನ್ಯಾಸಗಳನ್ನು ಹೇಳಿ ಶ್ರೀಮಾನ್ ಎಂ.ಆರ್. ಶ್ರೀನಿವಾಸಮೂರ್ತಿ, ಬಿ.ಎ.,ಯವರು ಎರಡನೆಯ ಉಪನ್ಯಾಸಮಾಲೆಯನ್ನೂ 'ಇಂಡಿಯಾ ದೇಶದ ಆರ್ಥಿಕ ಪರಿಸ್ಥಿತಿ'ಯ ಮೇಲೆ ಉಪನ್ಯಾಸಗಳನ್ನು ಹೇಳಿ ಶ್ರೀಮಾನ್ ಎ. ಸೀತಾರಾಮಯ್ಯ, ಎಂ.ಎ., ಯವರು ಮೂರನೆಯ ಉಪನ್ಯಾಸಮಾಲೆಯನ್ನೂ ನಡೆಸಿಕೊಟ್ಟರು. ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯ, ಎಂ.ಎ.,ಯವರು ಬರುವ ಬೇಸಗೆ ರಜದ ಅಂತ್ಯದಲ್ಲಿ 'ಕನ್ನಡ ಬ್ರಾಹ್ಮಣ

---

೧. ಅನುಬಂಧದಲ್ಲಿ ಇವುಗಳ ವಿವರವಿದೆ.

ಸಾಹಿತ್ಯ'ದ ಮೇಲೆ ನಾಲ್ಕಾರು ಉಪನ್ಯಾಸಗಳನ್ನು ಹೇಳುವುದಾಗಿ ವಾಗ್ದಾನ ಮಾಡಿರುತ್ತಾರೆಂದು ತಿಳಿಸಲು ಸಂತೋಷವಾಗುತ್ತದೆ. 'ಆಧುನಿಕ ಸಾಹಿತ್ಯದ ಬೆಳವಣಿಗೆ'ಯ ವಿಷಯವಾಗಿ ಉಪನ್ಯಾಸ ಮಾಡಬೇಕಾಗಿ ಶ್ರೀಮಾನ್ ಎ.ಆರ್. ಕೃಷ್ಣಶಾಸ್ತ್ರೀ, ಎಂ.ಎ., ಯವರನ್ನು ಪ್ರಾರ್ಥಿಸಲಾಗಿದೆ. ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರೂ ಶ್ರೀಮಾನ್ ಎಂ.ಆರ್. ಶ್ರೀನಿವಾಸಮೂರ್ತಿಗಳೂ ತಮ್ಮ ತಮ್ಮ ಉಪನ್ಯಾಸಮಾಲೆಗಳ ವಿಷಯವನ್ನು ಗ್ರಂಥರೂಪವಾಗಿ ಬರೆದುಕೊಡಲು ಒಪ್ಪಿರುತ್ತಾರೆಂದೂ ಆ ಗ್ರಂಥಗಳು ಜಾಗ್ರತೆಯಾಗಿ ಸಿದ್ಧವಾಗಬಹುದೆಂಬ ನಿರೀಕ್ಷೆಯಲ್ಲಿದ್ದೇವೆಂದೂ ತಿಳಿಸಲು ಸಂತೋಷವಾಗುತ್ತದೆ. ಶ್ರೀಮಾನ್ ವಿ. ಸೀತಾರಾಮಯ್ಯ, ಎಂ.ಎ., ಯವರನ್ನು ತಮ್ಮ ಉಪನ್ಯಾಸ ವಿಷಯವನ್ನೂ ಗ್ರಂಥರೂಪವಾಗಿ ಬರೆದು ಕೊಡಬೇಕಾಗಿ ಪ್ರಾರ್ಥಿಸಿದ್ದೇವೆ.

ಉಪನ್ಯಾಸಮಾಲೆಯ ಏರ್ಪಾಡನ್ನು ಶ್ರೀಯುತರುಗಳಾದ ಎ.ಆರ್. ಕೃಷ್ಣಶಾಸ್ತ್ರಿಗಳು, ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು, ತಾತಾಚಾರ್ಯ ಶರ್ಮರವರು, ಇತರರೂ ಮೆಚ್ಚಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿರುತ್ತಾರೆ. ಒಟ್ಟಿನಲ್ಲಿ ಉಪನ್ಯಾಸಮಾಲೆಯ ಅನುಭವವು ಬಹಳ ತೃಪ್ತಿಕರವಾಗಿದೆಯೆಂದು ಹೇಳಬಹುದು.

(iv) ಉಪನ್ಯಾಸ ಸಪ್ತಾಹ:[೧] ವಿಶ್ವವಿದ್ಯಾನಿಲಯದ ಪ್ರಭಾವವನ್ನು ಸಂಸ್ಥಾನದ ಮೂಲೆಮೂಲೆಗೂ ಹರಡಿ ವಿಶ್ವವಿದ್ಯಾನಿಲಯಕ್ಕೂ ಜನಸಾಮಾನ್ಯಕ್ಕೂ ಹತ್ತಿರದ ಸಂಬಂಧವನ್ನೇರ್ಪಡಿಸಬೇಕೆಂಬ ಉದ್ದೇಶದಿಂದ, ಮುಖ್ಯವಾಗಿ ಜನಸಾಮಾನ್ಯದಲ್ಲಿಯೂ ಜ್ಞಾನವನ್ನು ಹರಡಬೇಕೆಂಬ ಘನೋದ್ದೇಶದಿಂದ ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದವರು ಸಂಸ್ಥಾನದ ಮುಖ್ಯ ಮುಖ್ಯಪಟ್ಟಣಗಳಲ್ಲಿ ರಜಾ ಕಾಲಗಳಲ್ಲಿ ಒಂದೊಂದು ವಾರ ಕಾಲ ವಿವಿಧ ವಿಷಯಗಳ ಮೇಲೆ ಉಪನ್ಯಾಸ ಸಪ್ತಾಹವನ್ನು ನಡೆಸುತ್ತಿದ್ದಾರೆ. ೧೯೩೩ನೆಯ ಇಸವಿ ಡಿಸೆಂಬರ್ ತಿಂಗಳ ಕ್ರಿಸ್‌ಮಸ್ ರಜಾ ಕಾಲದಲ್ಲಿ ಅಧ್ಯಾಪಕ ವರ್ಗದವರನ್ನು ಇಲ್ಲಿಗೆ ಬರಮಾಡಿಕೊಂಡು ಸಪ್ತಾಹವನ್ನು ನಡೆಸಲಾಯಿತು. ಹೀಗೆ ಅಧ್ಯಾಪಕ ವರ್ಗದವರನ್ನು ಬರಮಾಡಿಕೊಂಡ ಕರ್ಣಾಟಕ ಸಂಘಗಳಲ್ಲಿ ಶಿವಮೊಗ್ಗೆಯ ಸಂಘವು ಮೊದಲನೆಯದು. ಸಪ್ತಾಹವು ಯಶಸ್ವಿಯಾಗಿ ಜರುಗಿತೆಂಬುದು ತಮಗೆಲ್ಲಾ ವಿದಿತವಾಗಿಯೇ ಇದೆ. ಈ ಸಪ್ತಾಹದ ಕಾರ್ಯಕ್ರಮಗಳನ್ನು ಗಮನಿಸಲು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರಾದ ಡಾ|| ಇ.ಪಿ. ಮೆಟ್ಕಾಫ್, ಡಿ.ಎಸ್‌ಸಿ., ಎಫ್.ಇನ್‌ಸ್ಟ್.ಪಿ., ಯವರು ಸ್ವತಃ ಇಲ್ಲಿಗೆ ದಯಮಾಡಿಸಿದ್ದು ವಿಶೇಷ ಸಂಗತಿಯಾಗಿದೆ. ಆಗ್ಗೆ ಅವರು ಸಪ್ತಾಹದ ವಿಷಯದಲ್ಲಿಯೂ ಕನ್ನಡದ ವಿಷಯದಲ್ಲಿಯೂ ಅಭಿಮಾನಾಸ್ಪದವಾದ ಮಾತುಗಳನ್ನು ಆಡಿ ಜ್ಞಾನಪ್ರಸಾರದ ಉದ್ದೇಶದಿಂದ ಹೊರಟಿರುವ ಕನ್ನಡದ ಚಳುವಳಿಯ ವಿಷಯದಲ್ಲಿ ವಿಶ್ವವಿದ್ಯಾನಿಲಯದ ಸಹಾನುಭೂತಿಯಿದೆಯೆಂದು ವ್ಯಕ್ತಗೊಳಿಸಿದ್ದಲ್ಲದೆ ಜನತೆಯನ್ನು ಮುಟ್ಟಲು ಜನತೆಯ ಭಾಷೆಯಾದ ಕನ್ನಡವೇ ಸಾಧನವೆಂದು ಸ್ಪಷ್ಟವಾಗಿ ನುಡಿದರು. ಅವರು ಆಗ್ಗೆ ನುಡಿದ ಮಾತುಗಳು ಗಮನಾರ್ಹವಾದುವೆಂದೂ ಕೇವಲ ಉತ್ತೇಜನಕಾರಕವಾದುವು ಗಳೆಂದೂ ತಿಳಿಸಬೇಕಾಗಿಲ್ಲ.[೨]

---

೧. ಶಿವಮೊಗ್ಗೆಯಲ್ಲಿ ನಡೆದ ಉಪನ್ಯಾಸ ಸಪ್ತಾಹದ ಸಂಪೂರ್ಣ ವಿವರವನ್ನು 'ಪ್ರಬುದ್ಧ ಕರ್ಣಾಟಕ'ದ ೧೫ನೆಯ ಸಂಪುಟ ೩ನೆಯ ಸಂಚಿಕೆಯಲ್ಲಿ ನೋಡಬಹುದು. ಮೇಲ್ಕಂಡ ವರದಿಯಲ್ಲಿ ಈ ವಿಷಯವಾಗಿ ಬರೆದಿರುವ ಬಹುಭಾಗವನ್ನು 'ಪ್ರಬುದ್ಧ ಕರ್ಣಾಟಕ'ದ ಲೇಖನದಿಂದ ಎತ್ತಿಕೊಳ್ಳಲಾಗಿದೆ.

೨. ಡಾ|| ಇ.ಪಿ. ಮೆಟ್ಕಾಫ್ ರವರು ಆ ಸಂದರ್ಭದಲ್ಲಿ ಮಾಡಿದ ಪೂರ್ಣ ಭಾಷಣದ ಕನ್ನಡ ಅನುವಾದವನ್ನು 'ಪ್ರಬುದ್ಧ ಕರ್ಣಾಟಕ'ದ ೧೫ನೆಯ ಸಂಪುಟದ ೩ನೆಯ ಸಂಚಿಕೆಯಲ್ಲಿ ನೋಡಬಹುದು.

ಸಪ್ತಾಹಾಂತ್ಯದಲ್ಲಿ ಶಿವಮೊಗ್ಗದ ಮಹಾಜನರಲ್ಲಿ ಹಲವರು ಅಧ್ಯಾಪಕ ವರ್ಗದವರೊಂದಿಗೆ ಹಲವು ವಿಷಯಗಳನ್ನು ಚರ್ಚಿಸಿ ಕೆಲವು ಉಪಯುಕ್ತವಾದ ಸಲಹೆಗಳನ್ನಿತ್ತಿರುತ್ತಾರೆ. ಇಲ್ಲಿ ಅವುಗಳಲ್ಲಿ ಎರಡು ವಿಷಯಗಳನ್ನು ಕುರಿತು ಪ್ರಸ್ತಾಪಿಸಬಹುದು:

(೧) "ಸಪ್ತಾಹದ ಕಾರ್ಯಕ್ರಮದಲ್ಲಿ ಒಂದೊಂದು ವಿಷಯದ ಮೇಲೆ ಒಂದಕ್ಕಿಂತ ಹೆಚ್ಚು ಉಪನ್ಯಾಸಗಳನ್ನು ಕೊಡಿಸುವುದು ಸಾಮಾನ್ಯವಾಗಿ ಸಾಧ್ಯವಿಲ್ಲವಾಗಿದೆ. ಇದರಿಂದ ಕೇಳತಕ್ಕವರಿಗೆ ಒಂದು ವಿಷಯದಲ್ಲಿ ಅಭಿರುಚಿಯನ್ನು ಕೊಂಚಮಟ್ಟಿಗೆ ಹುಟ್ಟಿಸಿದ ಹಾಗಾಗುವುದೇ ಹೊರತು, ಅವರಿಗೆ ಅದರಲ್ಲಿ ಖಚಿತವೂ ಆಳವೂ ಆದ ತಿಳಿವಳಿಕೆ ಬರುವುದಿಲ್ಲ. ಇದರ ಬದಲು ಕೆಲವು ವಿಷಯಗಳನ್ನು ಮಾತ್ರ ಆರಿಸಿಕೊಂಡು ಒಂದೊಂದನ್ನೂ ನಾಲ್ಕೈದು ಉಪನ್ಯಾಸಗಳಲ್ಲಿ ವಿಸ್ತಾರವಾಗಿ ಪ್ರತಿಪಾದಿಸಿ ಒಂದು ನೆಲೆಗೆ ತರುವುದು ಉತ್ತಮ." ಈ ವಿಷಯವನ್ನು ಇದಕ್ಕೆ ಮೊದಲೆ ಸಂಘದಿಂದ ಪರ್ಯಾಲೋಚಿಸಬೇಕಾಗಿತ್ತು. ಅದು 'ಉಪನ್ಯಾಸಮಾಲೆ'ಯ ಏರ್ಪಾಡಿನ ಮೂಲಕ ಕಾರ್ಯರೂಪಕ್ಕೆ ಬಂದುದನ್ನು ಈ ಮೊದಲೆ ವಿವರಿಸಲಾಗಿದೆ.

(೨) "ಒಳನಾಡಿನಲ್ಲಿ (ಎಂದರೆ ತಾಲ್ಲೂಕು ಜಾಗ, ಗ್ರಾಮ ಮೊದಲಾದವುಗಳಲ್ಲಿ) ವಿಶ್ವವಿದ್ಯಾನಿಲಯದ ಅಧ್ಯಾಪಕರು ಸಂಚರಿಸಿ ಆರೋಗ್ಯ, ಗ್ರಾಮ ನೈರ್ಮಲ್ಯ, ಮಾತೃ ಕರ್ತವ್ಯ, ಶಿಶುರಕ್ಷಣೆ ಮೊದಲಾದ ವಿಷಯಗಳನ್ನು ಕುರಿತು ಬೋಧಿಸುವುದು ಅಗತ್ಯ." ಆದರೆ ತಮಗಿರುವ ಅಲ್ಪಕಾಲದಲ್ಲಿ, ಅಲ್ಪಧನಸಹಾಯದಲ್ಲಿ ಎಲ್ಲ ಕೆಲಸವನ್ನೂ ಅಧ್ಯಾಪಕ ವರ್ಗದವರೊಬ್ಬರೇ ನಿರ್ವಹಿಸುವುದು ಅಸಾಧ್ಯವೆಂದೂ ತಮ್ಮಂತೆ ಹೈಸ್ಕೂಲುಗಳ ಅಧ್ಯಾಪಕರೂ ಮಿಕ್ಕ ವಿದ್ಯಾವಂತರೂ ಸಪ್ತಾಹಗಳನ್ನು ಏರ್ಪಡಿಸಿಕೊಂಡು ತಮ್ಮ ಸುತ್ತು ಮುತ್ತಿನ ಗ್ರಾಮಗಳಲ್ಲಿ ಸಂಚರಿಸಿದರೆ, ಒಂದು ಸಾಧಿಸುತ್ತಿದ್ದ ಕಡೆ ಹತ್ತು ಸಾಧಿಸುವುದೆಂದೂ ನಮ್ಮ ಜನದ ಸಂಸ್ಕೃತಿ ಬಲುಬೇಗ ಉತ್ತಮವಾಗುವುದೆಂದೂ ಅಧ್ಯಾಪಕ ವರ್ಗದವರು ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಲ್ಲದೆ- "ಶಿವಮೊಗ್ಗದ ಕರ್ಣಾಟಕ ಸಂಘದವರು ತಮ್ಮ ಎಂದಿನ ಜಾಗರೂಕತೆಯಿಂದ ಈ ಅಂಶವನ್ನಾಗಲೇ ಅನುಷ್ಠಾನಕ್ಕೆ ತರಲು ಏರ್ಪಾಡು ಮಾಡುತ್ತಿದ್ದಾರೆಂದು ಕೇಳುತ್ತೇವೆ. ಈ ಕಾರ್ಯದಲ್ಲಿ ಅವರು ಪೂರ್ಣ ವಿಜಯಿಗಳಾಗಲೆಂದು ಕೋರುತ್ತೇವೆ" ಎಂಬುದಾಗಿ ತಮ್ಮ ಆಸೆಯನ್ನು ಸೂಚಿಸಿದರು. ಈಗ ಎರಡು ವರ್ಷಗಳಿಂದ ಪ್ರಯತ್ನ ಪಟ್ಟಾಗ್ಯೂ ಅನೇಕ ಕಾರಣಗಳಿಂದ ಇದು ಇನ್ನೂ ಸಾಧ್ಯವಾಗಿಲ್ಲವಾಗಿ ವಿಷಾದಿಸಬೇಕಾಗಿದೆ. ಮೇಲ್ಕಂಡ ಸಲಹೆಯನ್ನನುಸರಿಸಿ ತಿಪಟೂರು ಕರ್ಣಾಟಕ ಸಂಘದವರು ಈ ಮಾರ್ಗದಲ್ಲಿ ಈಚೆಗೆ ಅತ್ಯುತ್ತಮವಾದ ಮತ್ತು ಅನುಕರಣೀಯವಾದ ಕೆಲಸವನ್ನು ನಡೆಸಿರುತ್ತಾರೆ. ಬರುವ ವರ್ಷಗಳಲ್ಲಿ ಹಳ್ಳಿಗಳಲ್ಲಿ ಸಾಹಿತ್ಯ ಪ್ರಚಾರ ಕಾರ್ಯವು ಈ ಸಂಘದ ಕಾರ್ಯಗಳಲ್ಲಿ ಪ್ರಮುಖ ಸ್ಥಾನವನ್ನು ಹೊಂದತಕ್ಕದ್ದು ಅತ್ಯಾವಶ್ಯಕವೆಂದು ಸೂಚಿಸಬಹುದಲ್ಲವೇ?

ಸಪ್ತಾಹಕ್ಕೆ ಸಂಬಂಧಪಟ್ಟಂತೆ ಇಲ್ಲಿ ಇನ್ನೊಂದು ವಿಚಾರವನ್ನು ಹೇಳಬಹುದು. ಶಿವಮೊಗ್ಗೆಗೆ ಬಂದವರು ಸಾಮಾನ್ಯವಾಗಿ ಜೋಗದ ಜಲಪಾತವನ್ನೂ ಮಲೆನಾಡಿನ ಒಳಭಾಗವನ್ನೂ ನೋಡದೆ ಹಿಂದಿರುಗುವುದಿಲ್ಲ. ಅಧ್ಯಾಪಕ ವರ್ಗದವರಿಗೆ ಈ ಪ್ರಯಾಣಗಳಲ್ಲಿದ್ದ ಸಹಜ ಕುತೂಹಲವನ್ನು ಆಯಾಸ್ಥಳಗಳವರು ಉಪಯೋಗಿಸಿಕೊಳ್ಳುವಂತೆ ಸಂಘದಿಂದ ಏರ್ಪಾಡು ಮಾಡಲಾಯಿತು. ಇದರ ಫಲವಾಗಿ ಶಿವಮೊಗ್ಗದಲ್ಲಿ ಉಪನ್ಯಾಸಗಳು ನಡೆಯುತ್ತಿದ್ದಂತೆಯೆ ಅಧ್ಯಾಪಕರಲ್ಲಿ ಕೆಲವರು ತೀರ್ಥಹಳ್ಳಿಯಲ್ಲಿ ಒಂದು ಬೆಳಗ್ಗೆ ವಾಚನ ಭಾಷಣಗಳನ್ನು ನಡೆಸಿದರು; ಜೋಗದ ದಾರಿಯಲ್ಲಿ

ಸಾಗರದಲ್ಲಿ ಕೆಲವು ಗಂಟೆಗಳ ಕಾಲ ಮಾತ್ರ ನಿಂತು ಆ ಅಲ್ಪಾವಕಾಶದಲ್ಲೇ ಅಲ್ಲಿ ಒಂದು ಕರ್ಣಾಟಕ ಸಂಘವನ್ನು ಸ್ಥಾಪಿಸಲು ನೆರವಾದರು.

(v) **ಭಾರತವಾಚನ:** ಪ್ರಸಿದ್ಧ ಗಮಕಿಗಳಾದ ಶ್ರೀಯುತರುಗಳಾದ ಎಸ್.ಜಿ. ಬಿಂದೂರಾಯರು, ಕೃಷ್ಣಗಿರಿ ಕೃಷ್ಣರಾಯರು, ಎಸ್.ಜಿ. ಸಂಪತ್ಕುಮಾರಾಚಾರ್, ಬಿ.ಎ., ಬಿ.ಟಿ.ಯವರು ಮತ್ತು ಎ.ಎನ್. ಗುಂಡಪ್ಪನವರು ಇವರುಗಳ ಭಾರತವಾಚನಗಳು ಆಗಾಗ್ಗೆ ನಡೆದಿರುತ್ತವೆ.

(vi) **ಕಾವ್ಯವಾಚನ:** ಶ್ರೀಯುತರುಗಳಾದ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ಕೆ.ವಿ. ಪುಟ್ಟಪ್ಪ, ಎಂ.ಎ., ಟಿ.ಎಸ್. ವೆಂಕಣ್ಣಯ್ಯ, ಎಂ.ಎ., ಇವರುಗಳು 'ಯಶೋಧರ ಚರಿತೆ', 'ಆದಿಪುರಾಣ', 'ಪಂಪರಾಮಾಯಣ', 'ಹರಿಶ್ಚಂದ್ರಕಾವ್ಯ', 'ಕನ್ನಡ ಕಾದಂಬರಿ', 'ಬಸವರಾಜದೇವರ ರಗಳೆ' ಮುಂತಾದ ಪುರಾತನ ಗ್ರಂಥಗಳಲ್ಲಿ ಕೆಲವನ್ನು ಓದಿಹೇಳಿ ಜನರಿಗೆ ಹಳಗನ್ನಡ ಗ್ರಂಥಗಳಲ್ಲಿ ಅಭಿರುಚಿ ಹುಟ್ಟಿಸಿರುತ್ತಾರೆ.

(vii) **ಕವಿತಾವಾಚನ:** ಶ್ರೀಯತರುಗಳಾದ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ., ಕೆ.ವಿ. ಪುಟ್ಟಪ್ಪ, ಎಂ.ಎ., ಜೆ.ಪಿ. ರಾಜರತ್ನಂ, ಎಂ.ಎ., ಪಿ.ಟಿ. ನರಸಿಂಹಾಚಾರ್, ಬಿ.ಎ., ವಿದ್ವಾನ್ ಕಡೆಂಗೋಡ್ಲು ಶಂಕರಭಟ್ಟರು, ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಎಂ.ಎ., -ಕನ್ನಡ ನಾಡಿನ ಈ ಪ್ರಸಿದ್ಧ ಕವಿಗಳು ತಮ್ಮ ಕವನಗಳನ್ನೂ ಕೃತಿಗಳನ್ನೂ ವಾಚಿಸಿ ನೂತನ ಸಾಹಿತ್ಯದ ಸೊಬಗನ್ನು ತಮ್ಮೆಲ್ಲರಿಗೂ ಅನುಭವ ಮಾಡಿಕೊಟ್ಟಿರುತ್ತಾರೆ. ಮೂರನೆಯ ಸಂಘದ ವಾರ್ಷಿಕೋತ್ಸವ ಸಮಯದಲ್ಲಿ ಶಿವಮೊಗ್ಗೆಯ ಸೋದರ ಸಂಘದ ಸದಸ್ಯರು ತಮ್ಮ ಕವನಗಳಲ್ಲಿ ಕೆಲವನ್ನು ಓದಿಹೇಳಿದರು. ಶ್ರೀಯುತರುಗಳಾದ ಕಳಲೆ ಸಂಪತ್ಕುಮಾರಾಚಾರ್, ಬಿ.ಎ., ಬಿ.ಟಿ., ನಂ. ಶಿವರಾಮಶಾಸ್ತ್ರಿ, ಎಂ.ಎ., ಎ.ಸಿ. ನರಸಿಂಹಮೂರ್ತಿ ಇವರುಗಳು ಆಧುನಿಕ ಕವನಗಳಲ್ಲಿ ಅನೇಕವನ್ನು ಹಾಡಿ ನೂತನ ಕವಿತೆಗಳ ಮಾಧುರ್ಯವನ್ನೂ ಸ್ವಾರಸ್ಯವನ್ನೂ ವ್ಯಕ್ತಪಡಿಸಿರುತ್ತಾರೆ.

(viii) **ವ್ಯಾಸಂಗ ಗೋಷ್ಠಿ:** ಭಾಷಾ ಸಾಹಿತ್ಯಾದಿ ವಿಚಾರಗಳಲ್ಲಿ ಹೆಚ್ಚು ಪರಿಶ್ರಮವನ್ನು ಹೊಂದಬೇಕೆಂದು ಇಷ್ಟಪಡುವಂಥ ಸದಸ್ಯರ ಉಪಯೋಗಕ್ಕಾಗಿ ತಾ. ೨೯-೪-೧೯೩೫ರಲ್ಲಿ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ 'ವ್ಯಾಸಂಗ ಗೋಷ್ಠಿ'ಯೊಂದನ್ನು ಪ್ರಾರಂಭಿಸಲಾಯಿತು. ವ್ಯವಸ್ಥಿತವಾದ ಪುಸ್ತಕ ಭಂಡಾರವೊಂದು ಸಂಘದಲ್ಲಿ ಏರ್ಪಡುವವರೆಗೂ ಈ ಗೋಷ್ಠಿಯನ್ನು ಒಂದು ನೆಲೆಗ ತರುವುದು ಕಷ್ಟವಾಗಿ ತೋರಿದ್ದರಿಂದ ಇದುವರೆಗೆ ಈ ಸಂಬಂಧವಾದ ಸಭೆಗಳನ್ನು ಸೇರಿಸಿರುವುದಿಲ್ಲ.

(ix) **ಸಂಗೀತ ಕಛೇರಿ:** ಆಸ್ಥಾನ ವಿದ್ವಾನ್ ಗೊಟ್ಟುವಾದ್ಯಂ ನಾರಣಾಯ್ಯಂಗಾರ್ಯರ ಗೊಟ್ಟುವಾದ್ಯ ವಾದನವೂ ಆಸ್ಥಾನ ವಿದ್ವಾನ್ ಬಿ. ದೇವೇಂದ್ರಪ್ಪನವರು, ಶ್ರೀಮತಿ ಗಂಗಾಬಾಯಿಯವರು, ಶ್ರೀಮತಿ ಚೆನ್ನಮ್ಮನವರು, ಸಂಗೀತ ವಿದ್ವಾನ್ ಶೇಷಪ್ಪನವರು, ಸಂಗೀತ ವಿದ್ವಾನ್ ಎಳಂದೂರು ರಂಗಾಚಾರ್ಯರು ಇವರುಗಳ ಗಾಯನವು ನಡೆದಿರುತ್ತದೆ.

(x) **ನಾಟಕಾಭಿನಯ:** 'ಯಮನಸೋಲು', 'ಆಷಾಢ ಭೂತಿ', 'ಸಾಪಿನ ಸಮಸ್ಯೆ', 'ಹೋಂರೂಲು', 'ಗಂಡುಗೊಡಲಿ' -ಈ ನಾಟಕಗಳನ್ನು ಅಭಿನಯಿಸಲಾಗಿದೆ. 'ಗಂಡುಗೊಡಲಿ' ಯನ್ನು ಹೈಸ್ಕೂಲಿನ ವಿದ್ಯಾರ್ಥಿಗಳು ಸಂಘದ ಎರಡನೆಯ ವಾರ್ಷಿಕೋತ್ಸವ ಕಾಲದಲ್ಲಿ

ಅಭಿನಯಿಸಿದರು. ಉಳಿದ ನಾಟಕಗಳಿಗೆ ವಿಶ್ವವಿದ್ಯಾಲಯ ಕಲಾಸಂಘದವರಿಗೆ ನಾವು ಋಣಿಗಳು. 'ಗಂಡುಗೊಡಲಿ'ಯನ್ನುಳಿದ ನಾಟಕಗಳಿಗೆಲ್ಲಾ ಟೆಕಿಟಿನ ಮೂಲಕ ಮಾತ್ರವೇ ಪ್ರವೇಶವಿತ್ತು. ಹೀಗೆ ಶಿವಮೊಗ್ಗೆಯಲ್ಲಿ ಮೂರು ಬಾರಿಯೂ ಚಿಕ್ಕಮಗಳೂರಿನಲ್ಲಿ ಒಂದು ಸಾರಿಯೂ ನಾಟಕಗಳನ್ನು ಪ್ರದರ್ಶಿಸಲಾಯಿತು. ಈ ನಾಟಕಗಳಿಂದ ಹೆಚ್ಚು ಧನಲಾಭ ದೊರೆಯದಿದ್ದರೂ ಎಲ್ಲಿಯೂ ನಷ್ಟವುಂಟಾಗಲಿಲ್ಲವೆಂದು ಹೇಳಲು ಸಂತೋಷವಾಗುತ್ತದೆ. ಸರಿಯಾದ ವ್ಯವಸ್ಥೆಯಿಂದ ಉತ್ತಮ ರೀತಿಯಲ್ಲಿ ಅಭಿನಯಿಸಿದರೆ ಈ ನಾಟಕಗಳಿಗೆ ಜನ ಪ್ರೋತ್ಸಾಹವಿಲ್ಲದೆ ಇಲ್ಲವೆಂದು ಹೇಳಬಹುದು.

(xi) ಸಹಾಯಾರ್ಥ ನಾಟಕಗಳು: ಮೊದಲಿನ ಮೂರು ವರ್ಷಗಳಲ್ಲಿ ಗುರುಸಮರ್ಥ, ಅಂಬಾ ಪ್ರಾಸಾದಿಕ, ಚಂದ್ರಮೌಳೀಶ್ವರ ಮತ್ತು ಚಾಮುಂಡೇಶ್ವರೀ -ಈ ನಾಟಕ ಕಂಪೆನಿಗಳ 'ಬೆನಿಫಿಟ್' ನಾಟಕಗಳಿಂದ ಸಂಘಕ್ಕೆ ಸಹಾಯವಾಗಿರುತ್ತದೆ.

(xii) ಕಾವ್ಯ ಸ್ಪರ್ಧೆಗಳು: ಕಳೆದ ಮೂರು ವರ್ಷಗಳಿಂದ ಗೌರ್ನಮೆಂಟ್ ಹೈಸ್ಕೂಲು, ಮಿಡಲ್ ಸ್ಕೂಲು ಮತ್ತು ಗೌರ್ನಮೆಂಟ್ ಗರ್ಲ್ಸ್ ಮಿಡಲ್ ಸ್ಕೂಲುಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿ ಕಾವ್ಯವಾಚನ ಭಾರತವಾಚನ ಸ್ಪರ್ಧೆಗಳನ್ನು ಏರ್ಪಡಿಸಿ, ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಪುಸ್ತಕ ಬಹುಮಾನಗಳನ್ನು ಹಂಚಲಾಯಿತು. ಶ್ರೀಮಾನ್ ಎ.ಆರ್. ಕೃಷ್ಣಶಾಸ್ತ್ರೀ, ಎಂ.ಎ., ಯವರ ಪ್ರೋತ್ಸಾಹದಿಂದ ಸ್ಪರ್ಧೆಗಳನ್ನಿಡಲು ಅವಕಾಶವಾಯಿತು. ಎರಡನೆಯ ವಾರ್ಷಿಕೋತ್ಸವಕ್ಕೆ ಅವರು ಅಧ್ಯಕ್ಷರಾಗಿ ದಯಮಾಡಿಸಿದಾಗ್ಗೆ 'ಗಂಡುಗೊಡಲಿ' ದೃಶ್ಯದಲ್ಲಿ ಪರಶುರಾಮನ ಪಾತ್ರವನ್ನು ವಹಿಸಿದ ವಿದ್ಯಾರ್ಥಿಯ ಅಭಿನಯವನ್ನು ಮೆಚ್ಚಿ ಆತನಿಗೆ ಐದು ರೂಪಾಯಿಗಳ ಪುಸ್ತಕ ಬಹುಮಾನವನ್ನು ಕೊಟ್ಟದ್ದಲ್ಲದೆ- ಸಂಘದಿಂದ ಪ್ರತಿ ವರ್ಷವೂ ಕಾವ್ಯ ಸ್ಪರ್ಧೆಗಳನ್ನು ಏರ್ಪಡಿಸಬೇಕಾಗಿಯೂ ತಾವು ಪ್ರತಿ ವರ್ಷ ಅದಕ್ಕಾಗಿ ಐದು ರೂಪಾಯಿಗಳ ಒಂದು ಬಹುಮಾನವನ್ನು ಕೊಡುವುದಾಗಿಯೂ ವಾಗ್ದಾನ ಮಾಡಿ ಅಂದಿನಿಂದ ಈ ಸ್ಪರ್ಧೆಗಳಿಗೆ ಒಂದೇ ಸಮನಾಗಿ ಪ್ರೋತ್ಸಾಹವೀಯುತ್ತಿದ್ದಾರೆ. ಸ್ಥಳೀಕರಾದ ಶ್ರೀಮಾನ್ ಭೂಪಾಳಂ ರುಕ್ಮಯ್ಯನವರು, ಶ್ರೀಮಾನ್ ಹಸೂಡಿ ವೆಂಕಟಶಾಸ್ತ್ರಿಗಳು, ಶ್ರೀಮಾನ್ ಹಸೂಡಿ ರಾಮಾಶಾಸ್ತ್ರಿಗಳು, ಶ್ರೀಮಾನ್ ದೇವಂಗಿ ರಾಮಣ್ಣಗೌಡರು -ಇವರುಗಳು ಬಹುಮಾನಗಳ ಬಗ್ಗೆ ಧನಸಹಾಯ ಮಾಡುತ್ತ ಸ್ಪರ್ಧೆಗಳನ್ನು ನಡೆಸಿಕೊಂಡು ಬರಲು ನೆರವಾಗಿರುತ್ತಾರೆ. ೧೯೩೩ನೆಯ ಇಸವಿ ಡಿಸೆಂಬರ್ ತಿಂಗಳಲ್ಲಿ ನಡೆದ ಶಿವಮೊಗ್ಗಾ ಗೌರ್ನಮೆಂಟ್ ಹೈಸ್ಕೂಲ್ ಡೇ ಉತ್ಸವ ಸಂಬಂಧವಾಗಿ ಏರ್ಪಟ್ಟಿದ್ದ ವಸ್ತುಪ್ರದರ್ಶನದಲ್ಲಿ ಅತ್ಯುತ್ತಮವಾದ ಚಿತ್ರಕ್ಕಾಗಿ ಒಂದು ಬಹುಮಾನವನ್ನೂ ಅತ್ಯುತ್ತಮವಾದ ಕಸೂತಿ ಕೆಲಸಕ್ಕಾಗಿ ಒಂದು ಬಹುಮಾನವನ್ನೂ ಸಂಘದಿಂದ ಕೊಡಲಾಯಿತು.

(xiii) ಜಯಂತ್ಯುತ್ಸವಗಳು: ಸಂಘದ ಎರಡನೆಯ ಮತ್ತು ಐದನೆಯ ವರ್ಷಗಳಲ್ಲಿ ಪುರಂದರದಾಸರ ಜನ್ಮದಿನವನ್ನು ಆಚರಿಸಲಾಯಿತು. ಎರಡನೆಯ ವರ್ಷದ ಉತ್ಸವದಲ್ಲಿ ಶ್ರೀಮತಿ ಗಂಗಾಬಾಯಿಯವರೂ ಐದನೆಯ ವರ್ಷದ ಉತ್ಸವದಲ್ಲಿ ಶ್ರೀಮಾನ್ ಸಂಗೀತ ವಿದ್ವಾನ್ ರಂಗಾಚಾರ್ಯರವರೂ ಕೇವಲ ಪುರಂದರದಾಸರ ಕೃತಿಗಳನ್ನೇ ಆರಿಸಿ ಹಾಡಿದರು. ಸಂಘದ ನಾಲ್ಕನೆಯ ವರ್ಷದಲ್ಲಿ ಗೀತಾ ಜಯಂತ್ಯುತ್ಸವವನ್ನು ನೆರವೇರಿಸಲಾಯಿತು.

(xiv) ಸಂತಾಪಸೂಚಕ ಸಭೆ: ಆಸ್ಥಾನ ವಿದ್ವಾನ್ ಪಿ.ಆರ್. ಕರಿಬಸವಶಾಸ್ತ್ರಿಗಳು ಕೈಲಾಸವಾಸಿಗಳಾದ ಬಗ್ಗೆ ಮತ್ತು 'ಪ್ರಬೋಧಕ' ಮಾಸ ಪತ್ರಿಕೆಯ ಸಂಪಾದಕರಾದ ಬಿ.ಸಿ.ಎಸ್. ಶರ್ಮರವರು ಸ್ವರ್ಗಸ್ಥರಾದ ನಿಮಿತ್ತವೂ ಸಭೆ ಸೇರಿ ಸಂತಾಪವನ್ನು ವ್ಯಕ್ತಪಡಿಸಲಾಯಿತು.

(xv) ಕೃತಜ್ಞತಾಸೂಚಕ ಸಭೆ: ಮೈಸೂರು ಸರಕಾರ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರು ೧೯೩೩ನೆಯ ಇಸವಿ ಜೂನ್ ತಿಂಗಳಿನಿಂದ ಸಂಸ್ಥಾನದ ಎಲ್ಲ ಹೈಸ್ಕೂಲುಗಳಲ್ಲಿಯೂ ಚರಿತ್ರೆ, ಭೂಗೋಳ ಮತ್ತು ಗಣಿತಶಾಸ್ತ್ರ ಪಾಠಗಳು ಕನ್ನಡ ಭಾಷೆಯ ಮೂಲಕ ನಡೆಯುವಂತೆ ಏರ್ಪಡಿಸಿ ತನ್ಮೂಲಕ ಕನ್ನಡ ಭಾಷೆಯ ಅಭಿವೃದ್ಧಿಗೆ ವಿಶೇಷ ಪ್ರೋತ್ಸಾಹವನ್ನು ಕೊಟ್ಟದ್ದಕ್ಕಾಗಿ ಮೈಸೂರು ಸರಕಾರಕ್ಕೂ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರಿಗೂ ಕನ್ನಡ ಜನರ ಕೃತಜ್ಞತೆಯನ್ನು ವ್ಯಕ್ತಪಡಿಸಲು ಶ್ರೀಮಾನ್ ಹೆಚ್. ಸಿದ್ಧಯ್ಯ, ಬಿ.ಎ., ಎಲ್‌ಎಲ್.ಬಿ., ಎಂ.ಎಲ್.ಸಿ., ಅವರ ಅಧ್ಯಕ್ಷತೆಯಲ್ಲಿ ಕರ್ಣಾಟಕ ಸಂಘದ ಆಶ್ರಯದಲ್ಲಿ ಶಿವಮೊಗ್ಗೆಯ ಪುರಜನರ ಸಭೆಯನ್ನು ತಾ. ೧೧-೨-೩೩ನೆಯ ದಿವಸ ಸೇರಿಸಲಾಯಿತು. ಕನ್ನಡ ಭಾಷೆಯ ಮೂಲಕ ಶಿಕ್ಷಣ ಕೊಡುವುದರ ಆವಶ್ಯಕತೆ, ಉಪಯುಕ್ತತೆ ಮುಂತಾದ ವಿಷಯಗಳನ್ನು ಅನೇಕರು ವಿವರಿಸಿ ಮಾತನಾಡಿದ್ದಲ್ಲದೆ ವಿಜ್ಞಾನ ವಿಷಯಗಳನ್ನೂ ಕನ್ನಡದಲ್ಲಿ ಬೋಧಿಸುವುದು ಆವಶ್ಯಕವೆಂದು ತಿಳಿಯಪಡಿಸಿದರು. ಕೆಳಗೆ ಕಾಣಿಸಿರುವ ನಿರ್ಣಯಗಳನ್ನು ಅನಂತರದಲ್ಲಿ ಸಭೆಯವರು ಸರ್ವಾನುಮತದಿಂದ ಅಂಗೀಕರಿಸಿದರು.

ನಿರ್ಣಯಗಳು-

> (೧) ಶಿವಮೊಗ್ಗೆಯ ಕರ್ಣಾಟಕ ಸಂಘದ ಆಶ್ರಯದಲ್ಲಿ ಸೇರಿದ ಶಿವಮೊಗ್ಗೆಯ ಪುರಜನರ ಈ ಸಭೆಯು- ೧೯೩೩ನೆಯ ಇಸವಿ ಜೂನ್ ತಿಂಗಳಿನಿಂದ ಸಂಸ್ಥಾನದ ಎಲ್ಲ ಹೈಸ್ಕೂಲುಗಳಲ್ಲಿಯೂ, ಚರಿತ್ರೆ, ಭೂಗೋಳ ಮತ್ತು ಗಣಿತಶಾಸ್ತ್ರ ಪಾಠಗಳು ಕನ್ನಡದ ಮೂಲಕ ನಡೆಯುವಂತೆ ಏರ್ಪಡಿಸಿ ತನ್ಮೂಲಕ ಕನ್ನಡ ಭಾಷೆಯ ಅಭಿವೃದ್ಧಿಗೆ ವಿಶೇಷ ಪ್ರೋತ್ಸಾಹವನ್ನು ಕೊಟ್ಟದ್ದಕ್ಕಾಗಿ ಮೈಸೂರು ಸರಕಾರಕ್ಕೂ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರಿಗೂ ವಿಶೇಷ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ.
>
> (೨) ಅಲ್ಲದೆ ವಿಜ್ಞಾನಶಾಸ್ತ್ರ ಪಾಠಗಳನ್ನು ಕನ್ನಡದಲ್ಲಿ ಬೋಧಿಸುವುದರಿಂದ ಕನ್ನಡ ಭಾಷೆಯೂ ಕನ್ನಡ ಜನರೂ ಏಳಿಗೆಯನ್ನು ಹೊಂದುವರೆಂದು ಈ ಸಭೆಯು ಅಭಿಪ್ರಾಯಪಡುವುದರಿಂದ ಹೈಸ್ಕೂಲುಗಳಲ್ಲಿ ವಿಜ್ಞಾನಶಾಸ್ತ್ರ ಪಾಠಗಳನ್ನು ಕನ್ನಡದಲ್ಲಿಯೇ ಬೋಧಿಸಲು ಆದಷ್ಟು ಬೇಗ ಏರ್ಪಾಡು ಮಾಡಬೇಕಾಗಿ ಈ ಸಭೆಯು ಮೈಸೂರು ಸರಕಾರವನ್ನೂ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರನ್ನೂ ಪ್ರಾರ್ಥಿಸುತ್ತದೆ.

ಈ ನಿರ್ಣಯಗಳನ್ನು ಮೈಸೂರು ಸರಕಾರದ ಜನರಲ್ ಸೆಕ್ರೆಟರಿಯವರಿಗೂ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರವರಿಗೂ ಕಳುಹಿಸಲಾಯಿತು. ಡೈರೆಕ್ಟರವರು ಅದಕ್ಕೆ ಪ್ರತ್ಯುತ್ತರವಾಗಿ ವಿಜ್ಞಾನ ಶಾಸ್ತ್ರವನ್ನು ಕನ್ನಡದಲ್ಲಿ ಬೋಧಿಸುವ ವಿಚಾರವನ್ನು ಸುಮಾರು ಒಂದು ವರ್ಷದ ಅನಂತರದಲ್ಲಿ ಎಂದರೆ ಚರಿತ್ರೆ, ಭೂಗೋಳ ಮತ್ತು ಗಣಿತಶಾಸ್ತ್ರ ಪಾಠಗಳನ್ನು ಕನ್ನಡದಲ್ಲಿ ಬೋಧಿಸುವ ಈಗಿನ ವ್ಯವಸ್ಥೆಯಿಂದ ಅನುಭವಹೊಂದಿದ ಮೇಲೆ ಯೋಚಿಸಲಾಗುವುದೆಂದು ಉತ್ತರ ದಯಪಾಲಿಸಿದರೆಂದು ತಿಳಿಸಲು ಸಂತೋಷವಾಗುತ್ತದೆ.

೭. ಸದಸ್ಯ ಸಂಪತ್ತು

ಕೆಳಗಿನ ಪಟ್ಟಿಯು ಈ ಐದು ವರ್ಷಗಳಲ್ಲಿಯ ಸದಸ್ಯ ಸಂಖ್ಯೆಯನ್ನು ತೋರಿಸುತ್ತದೆ.

	ಆಶ್ರಯದಾತರು	ಪೋಷಕರು	ಸಾಮಾನ್ಯ ಸದಸ್ಯರು	ಒಟ್ಟಿನಲ್ಲಿ ಸದಸ್ಯರು
೧ನೆಯ ವರ್ಷ	....	....	೧೫೪	೧೫೪
೨ನೆಯ ವರ್ಷ	....	....	೧೯೩	೧೯೩
೩ನೆಯ ವರ್ಷ	೮	೩೨	೧೨೯	೧೬೯
೪ನೆಯ ವರ್ಷ	೬	೨೫	೮೯	೧೨೦
೫ನೆಯ ವರ್ಷ	೪	೨೨	೧೧೭	೧೪೩

ಮೊದಲನೆಯ ಎರಡು ವರ್ಷಗಳಲ್ಲಿ ಚಂದಾ ವರ್ಷ ಒಂದಕ್ಕೆ ಒಂದು ರೂಪಾಯಿ[1] ಎಂದು ನಿಗದಿಮಾಡಿ ಸದಸ್ಯರನ್ನು ಸೇರಿಸಲಾಯಿತು. ಮೂರನೆಯ ವರ್ಷದಿಂದ ವರ್ಷ ಒಂದಕ್ಕೆ ಒಂದು ರೂಪಾಯಿನ ಸಾಮಾನ್ಯ ಸದಸ್ಯರಲ್ಲದೆ ಹತ್ತು ರೂಪಾಯಿಗಳನ್ನು ಕೊಡುವ ಆಶ್ರಯದಾತರನ್ನೂ ಐದು ರೂಪಾಯಿಗಳನ್ನು ಕೊಡುವ ಪೋಷಕರನ್ನೂ ಸಂಪಾದಿಸಲಾಯಿತು. ಮೊದಲಿನ ಮೂರು ವರ್ಷಗಳಲ್ಲಿ ಸಾಮಾನ್ಯ ಸದಸ್ಯರಿಗೆ ಸಂಘದಿಂದ ಅಚ್ಚಾದ ಒಂದೊಂದು ಗ್ರಂಥವನ್ನು -ಎಂದರೆ 'ಸಾಹಿತ್ಯ ಪ್ರಚಾರ', 'ಕನ್ನಡ ಮೇಘ ಸಂದೇಶ', 'ಗಂಡುಗೊಡಲಿ' -ಕ್ರಮವಾಗಿ ಈ ಗ್ರಂಥಗಳನ್ನು ಉಚಿತವಾಗಿ ಕೊಡಲಾಯಿತು. ಕಳೆದ ಎರಡು ವರ್ಷಗಳಲ್ಲಿ 'ಉಪನ್ಯಾಸ ಸಪ್ತಾಹ' ಮತ್ತು 'ಉಪನ್ಯಾಸ ಮಾಲೆ'ಯ ಏರ್ಪಾಡುಗಳಿಂದ ಸಂಘದ ಖರ್ಚುಗಳು ವಿಪರೀತವಾಗಿ ಹೆಚ್ಚಿ ಅದಕ್ಕೆ ತಕ್ಕಂತೆ ಸಂಘದ ವರಮಾನಗಳು ಹೆಚ್ಚದಿದ್ದುದರಿಂದಲೂ ಆರ್ಥಿಕ ಪರಿಸ್ಥಿತಿಯಿಂದ ಸದಸ್ಯರ ಸಂಖ್ಯೆ ಬಿದ್ದುಹೋದುದರಿಂದಲೂ ಗ್ರಂಥ ಪ್ರಕಟನೆಗಳ ಕಡೆಯಿಂದ ಸಂಘದ ಮೇಲೆ ಸಾಲದ ಹೊರೆ ಏರಿದುದರಿಂದಲೂ ಸಾಮಾನ್ಯ ಸದಸ್ಯರಿಗೆ ಉಚಿತ ಗ್ರಂಥವನ್ನು ಕೊಡುವುದು ದುಸ್ತರವಾಯಿತು. ಆಶ್ರಯದಾತರಿಗೂ ಪೋಷಕರಿಗೂ ಕಳೆದ ಮೂರು ವರ್ಷಗಳಿಂದ ಸಂಘದಿಂದ ಆಯಾ ವರ್ಷಗಳಲ್ಲಿ ಅಚ್ಚಾದ ಎಲ್ಲ ಗ್ರಂಥಗಳನ್ನೂ ಉಚಿತವಾಗಿ ಕೊಡಲಾಗುತ್ತಿದೆ ಎಂದರೆ ಮೂರನೆಯ ವರ್ಷದಲ್ಲಿ 'ರಕ್ತಾಕ್ಷಿ', 'ಗಂಡುಗೊಡಲಿ', 'ಹನಿಗಳು' ಮತ್ತು 'ಪಾಂಚಜನ್ಯ' -ಈ ನಾಲ್ಕು ಗ್ರಂಥಗಳನ್ನೂ ನಾಲ್ಕನೆಯ ವರ್ಷದಲ್ಲಿ 'ಮಾಟಗಾತಿ' ಮತ್ತು 'ನವಿಲು' ೧ ಮತ್ತು ೨ನೆಯ ಭಾಗಗಳು -ಹೀಗೆ ಮೂರು ಗ್ರಂಥಗಳನ್ನೂ ಐದನೆಯ ವರ್ಷದಲ್ಲಿ ನಿರೀಕ್ಷಿತ ಗ್ರಂಥಗಳು ಅಚ್ಚಿಗೆ ಸಿದ್ಧವಾಗದ ಕಾರಣ 'ಪಾತಾಳದಲ್ಲಿ ಪಾಪಚ್ಚಿ' ಎಂಬ ಒಂದೇ ಗ್ರಂಥವನ್ನೂ ಹಂಚಲಾಯಿತು.

ವರ್ಷದ ಆದಿಭಾಗದಲ್ಲಿಯೇ ಹೆಚ್ಚಾಗಿ ಹಣ ದೊರೆತು ಗ್ರಂಥ ಪ್ರಕಟನೆಗೆ ಸಹಾಯವಾಗ ಬಹುದೆಂಬ ಅಭಿಪ್ರಾಯದಿಂದ ಆಶ್ರಯದಾತರು ಮತ್ತು ಪೋಷಕರ ವರ್ಗವನ್ನು ಮಾಡಲಾಯಿತು. ಆದರೆ ಈ ಏರ್ಪಾಡು ನಾವು ನಿರೀಕ್ಷಿಸಿದಷ್ಟು ಫಲಕಾರಿಯಾಗಲಿಲ್ಲ. ಚಂದಾ ವಸೂಲಿಯು ಯಾವಾಗಲೂ ಶ್ರಮಸಾಧ್ಯವಾದ ಕೆಲಸ. ಮೊದಲ ಮೂರು ವರ್ಷಗಳಲ್ಲಿ ಚಂದಾ ಹಣವು ಕೂಡಿದಷ್ಟು ಸೌಲಭ್ಯದಿಂದ ಕಳೆದ ಎರಡು ವರ್ಷಗಳಲ್ಲಿ ಕೂಡಲಿಲ್ಲ. ಈ ವಿಚಾರದಲ್ಲಿ ಸದಸ್ಯರು ಹೆಚ್ಚು ಸಹಕಾರವನ್ನು ತೋರಿಸಬೇಕಾಗಿ ಕೋರುತ್ತೇವೆ. ಶಿವಮೊಗ್ಗೆಯಂತಹ ದೊಡ್ಡ ಪಟ್ಟಣಕ್ಕೆ

---

೧. ವಿದ್ಯಾರ್ಥಿ ಶಾಖೆಯೊಂದನ್ನು ಏರ್ಪಡಿಸಬೇಕೆಂಬ ಉದ್ದೇಶದಿಂದ ವಿದ್ಯಾರ್ಥಿ ಸದಸ್ಯರಿಗೆ ತಲೆಯೊಂದಕ್ಕೆ ವರ್ಷ ಒಂದಕ್ಕೆ ೮ ಆಣೆ ಎಂದು ನಿಗದಿಮಾಡಿ ವಿದ್ಯಾರ್ಥಿ ಸದಸ್ಯರನ್ನು ಸೇರಿಸಲು ಪ್ರಯತ್ನಪಟ್ಟಿದ್ದಾಯಿತು. ಈ ಪ್ರಯತ್ನದ ಫಲವಾಗಿ ಮೊದಲ ವರ್ಷದಲ್ಲಿ ಕೇವಲ ೭ ಜನ ವಿದ್ಯಾರ್ಥಿ ಸದಸ್ಯರು ಮಾತ್ರ ದೊರೆತದ್ದರಿಂದ ಎರಡನೆಯ ವರ್ಷದಿಂದ ಈ ಏರ್ಪಾಡನ್ನು ಬಿಡಲಾಯಿತು.

ಈಗಿರುವ ಸದಸ್ಯ ಸಂಖ್ಯೆಯು ಅತ್ಯಲ್ಪವಾದುದೆಂದು ಹೇಳಬೇಕಾಗಿದೆ. ಸಂಘದ ಕಾರ್ಯಕ್ಷೇತ್ರವು ವರ್ಷ ವರ್ಷವೂ ವಿಸ್ತಾರವಾಗುತ್ತಿದೆ; ಅದಕ್ಕನುಗುಣವಾಗಿ ವೆಚ್ಚವೂ ಹೆಚ್ಚುತ್ತಿದೆ. ಇವುಗಳನ್ನನುಸರಿಸಿ ಸದಸ್ಯರ ಸಂಖ್ಯೆಯೂ ಚಂದಾಹಣವೂ ಹೆಚ್ಚಾಗದಿದ್ದಲ್ಲಿ ಸಂಘದ ಮುಂದಿನ ಕಾರ್ಯಗಳು ಎಂದಿನಂತೆ ಜರುಗುವುದು ದುಸ್ತರವಾಗುತ್ತದೆ.

೮. ಪುಸ್ತಕ ವ್ಯಾಪಾರ

ಸ್ಥಳದ ಪುಸ್ತಕ ವ್ಯಾಪಾರಿಗಳಲ್ಲಿ ಪಠ್ಯಪುಸ್ತಕಗಳಲ್ಲದ ಇತರ ಗ್ರಂಥಗಳು ದೊರೆಯುವುದು ಅಪೂರ್ವವಾದುದರಿಂದಲೂ ಆಧುನಿಕ ಸಾಹಿತ್ಯ ಗ್ರಂಥಗಳನ್ನು ಕೊಂಡುಕೊಳ್ಳಲು ಅನೇಕರು ಅಪೇಕ್ಷೆ ಪಟ್ಟದ್ದರಿಂದಲೂ ೧೯೩೧ನೆಯ ಇಸವಿ ಮಾರ್ಚಿ ತಿಂಗಳು ೨ನೆಯ ತಾರೀಖಿನ ದಿವಸ ಪುಸ್ತಕ ವ್ಯಾಪಾರ ಶಾಖೆಯೊಂದನ್ನು ತೆರೆಯಲಾಯಿತು.

ಪ್ರಾರಂಭದಲ್ಲಿ ಬೆಂಗಳೂರಿನ ರಾಮಮೋಹನ ಕಂಪೆನಿಯವರು ಅನೇಕ ಕನ್ನಡ ಗ್ರಂಥಗಳನ್ನೂ ಧಾರವಾಡದ ಕರ್ಣಾಟಕ ಶಿಕ್ಷಣ ಸಮಿತಿಯವರು ತಮ್ಮ ಪ್ರಕಟಣೆಗಳನ್ನೂ ಮಾರಾಟಕ್ಕಾಗಿ ನಮಗೆ ಒದಗಿಸಿಕೊಟ್ಟು ಸಹಾಯ ಮಾಡಿದರು. ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘದವರಿಂದಲೂ ಆಗಾಗ್ಗೆ ಸಹಾಯವಾಗಿರುತ್ತದೆ. ಶಿವಮೊಗ್ಗೆಯ ಫ್ರೆಂಡ್ಸ್ ಯೂನಿಯನ್ನಿನ ಶ್ರೀಮಾನ್ ಕೆ. ರಾಮರಾಯರು ಸುಮಾರು ಎರಡು ವರ್ಷಗಳ ಕಾಲ ಈ ಗ್ರಂಥಗಳನ್ನು ತಮ್ಮ ಅಂಗಡಿಯಲ್ಲಿ ಪ್ರದರ್ಶಿಸಿ ಅನೇಕ ಪುಸ್ತಕಗಳನ್ನು ವ್ಯಾಪಾರ ಮಾಡಿಕೊಟ್ಟರು. ತಿಪಟೂರು ಕರ್ಣಾಟಕ ಸಂಘದವರೂ ಅರಸೀಕೆರೆ ಕರ್ಣಾಟಕ ಸಂಘದವರೂ ತಂತಮ್ಮ ಲೈಬ್ರೆರಿಗಳಿಗೆ ಬೇಕಾದ ಎಲ್ಲ ಗ್ರಂಥಗಳನ್ನೂ ನಮ್ಮ ಸಂಘದ ಮೂಲಕ ತೆಗೆದುಕೊಂಡು ಉಪಕಾರ ಮಾಡಿರುತ್ತಾರೆ. ಪುಸ್ತಕ ವ್ಯಾಪಾರವು ವರ್ಷ ವರ್ಷವೂ ಹೆಚ್ಚುತ್ತಿದೆಯೆಂಬುದು ಅನುಬಂಧದಲ್ಲಿರುವ ಅಂಕಿಗಳಿಂದ ಕಾಣುತ್ತಿದೆ. ಹೆಚ್ಚಾದ ಪ್ರಚಾರ ವ್ಯವಸ್ಥೆಯಿಂದ ವ್ಯಾಪಾರವು ಇನ್ನೂ ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ. ಆದರೂ ಇದರ ಸಂಬಂಧವಾದ ಲೆಕ್ಕಪತ್ರಗಳನ್ನಿಡುವುದು ಇತ್ಯಾದಿ ಕೆಲಸಗಳು ತುಂಬ ರೇಜಿಗೆಯವುಗಳಾಗಿ ಬಹಳ ಕಾಲವನ್ನು ಅಪಹರಿಸುತ್ತವೆಯಲ್ಲದೆ, ಪುಸ್ತಕ ಕೊಳ್ಳುವವರ ಸಂಖ್ಯೆ ಈಗಿರುವುದಕ್ಕಿಂತಲೂ ಬಹುಮಟ್ಟಿಗೆ ಹೆಚ್ಚಿದ ಹೊರತು ಇದರಲ್ಲಿ ಶ್ರಮಕ್ಕೆ ತಕ್ಕ ಲಾಭವು ದೊರೆಯುವಂತಿಲ್ಲ. ಬೇಕಾದ ಗ್ರಂಥಗಳು ಒಡನೆಯೇ ಬೇರೆಯೆಡೆಯಲ್ಲಿ ದೊರೆಯುವವರೆಗೂ ಈ ವ್ಯಾಪಾರ ಶಾಖೆಯನ್ನು ಅನಿವಾರ್ಯವಾಗಿ- ಗ್ರಂಥ ಪ್ರಚಾರ ದೃಷ್ಟಿಯಿಂದ- ನಡೆಸಿಕೊಂಡು ಬರಬೇಕಾಗಿದೆ. ಪ್ರಾಯಶಃ ಪುಸ್ತಕ ವ್ಯಾಪಾರ ಶಾಖೆಯಿರುವ ಕರ್ಣಾಟಕ ಸಂಘವು ಸದ್ಯಕ್ಕೆ ಇದೊಂದೆ ಎಂದು ತೋರುತ್ತದೆ. ಒಟ್ಟಿನಲ್ಲಿ ಪುಸ್ತಕ ವ್ಯಾಪಾರಿಗಳು ಮಾಡಬೇಕಾದ ಕಾರ್ಯವನ್ನು ಕರ್ಣಾಟಕ ಸಂಘಗಳು ಮಾಡಬೇಕಾಗಿ ಬಂದಿರುವುದು ಶೋಚನೀಯ ವಿಷಯ.

೯. ಗ್ರಂಥ ಪ್ರಕಟನೆ

ಸಂಘವು ಸ್ಥಾಪಿತವಾದ ಸಮಯದಲ್ಲಿ ಈ ಕಾರ್ಯವನ್ನು ಸಂಘದ ಉದ್ದೇಶಗಳಲ್ಲಿ ಒಂದನ್ನಾಗಿ ಎಣಿಸಿರಲಿಲ್ಲ. ಆದರೆ ಈಗ ಗ್ರಂಥ ಪ್ರಕಟನೆಯು ಸಂಘದ ಕಾರ್ಯಗಳಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದೆ. ಸಂಘವು ಪ್ರಾರಂಭವಾದ ಈ ಐದು ವರ್ಷಗಳಲ್ಲಿ ಹತ್ತು ಗ್ರಂಥಗಳು ಸಂಘದಿಂದ ಪ್ರಕಟವಾಗಿವೆ. ಮೊದಲ ಎರಡು ವರ್ಷಗಳಲ್ಲಿ ಒಂದೊಂದು ಗ್ರಂಥವೂ ಮೂರನೆಯ ವರ್ಷದಲ್ಲಿ ನಾಲ್ಕು ಗ್ರಂಥಗಳೂ ನಾಲ್ಕನೆಯ ವರ್ಷದಲ್ಲಿ ಮೂರು ಗ್ರಂಥಗಳೂ ಐದನೆಯ ವರ್ಷದಲ್ಲಿ ಒಂದು ಗ್ರಂಥವೂ ಹೀಗೆ ಹತ್ತು ಗ್ರಂಥಗಳು ಪ್ರಕಟವಾಗಿವೆ. ಇವುಗಳಲ್ಲಿ ಶ್ರೀಮಾನ್ ಕೆ.ವಿ. ಪುಟ್ಟಪ್ಪನವರು ತಮ್ಮ ಐದು ಗ್ರಂಥಗಳನ್ನೂ ಶ್ರೀಮಾನ್ ಜೆ.ಪಿ. ರಾಜರತ್ನಂ ಅವರು ಎರಡು ಗ್ರಂಥಗಳನ್ನೂ ವೇ|| ಬ್ರ|| ಶ್ರೀ|| ಕುಕ್ಕೆ ಸುಬ್ರಮ್ಮಣ್ಯಶಾಸ್ತ್ರಿಗಳೂ ಶ್ರೀಮಾನ್ 'ಆನಂದ'ರೂ

ಶ್ರೀಮಾನ್ ಕಸ್ತೂರಿಯವರೂ ತಮ್ಮ ಒಂದೊಂದು ಗ್ರಂಥವನ್ನೂ ಸಂಘದಿಂದ ಪ್ರಕಾಶಿಸಲು ಅವಕಾಶವಿತ್ತು ಉಪಕಾರ ಮಾಡಿರುತ್ತಾರೆ. ಈ ಗ್ರಂಥಗಳ ಹೆಸರು, ಅಚ್ಚಾದ ವರ್ಷ ಇತ್ಯಾದಿ ವಿವರಗಳನ್ನು ಮುಂದಿನ ಪಟ್ಟಿ ಕಾಣಿಸಿದೆ.

ಸಂಖ್ಯೆ	ಗ್ರಂಥದ ಹೆಸರು	ಗ್ರಂಥಕರ್ತರು	ಕಾವ್ಯಜಾತಿ	ಅಚ್ಚಾದ ಪ್ರತಿಗಳ ಸಂಖ್ಯೆ	ಪ್ರಕಟನೆಯ ವರ್ಷ	
೧.	ಸಾಹಿತ್ಯ ಪ್ರಚಾರ	ಕೆ.ವಿ. ಪುಟ್ಟಪ್ಪ, ಎಂ.ಎ.	ಭಾಷಣ	೫೦೦	೧೯೩೦	ಮೊದಲನೆಯ ವರ್ಷ
೨.	ಕನ್ನಡ ಮೇಘ ಸಂದೇಶ	ಪಂಡಿತ ಕುಕ್ಕೆ ಸುಬ್ರಹ್ಮಣ್ಯ	ಪದ್ಯಕಾವ್ಯ (ಸಂಸ್ಕೃತ ಮೂಲ)	೧೦೦೦	೧೯೩೧	ಎರಡನೆಯ ವರ್ಷ
೩.	ರಕ್ತಾಕ್ಷಿ	ಕೆ.ವಿ. ಪುಟ್ಟಪ್ಪ, ಎಂ.ಎ.	ನಾಟಕ	೧೦೦೦	೧೯೩೨	
೪.	ಗಂಡುಗೊಡಲಿ	ಜಿ.ಪಿ. ರಾಜರತ್ನಂ, ಎಂ.ಎ.	ನಾಟಕ	೧೦೦೦	೧೯೩೨	ಮೂರನೆಯ ವರ್ಷ
೫.	ಹನಿಗಳು	ಜಿ.ಪಿ. ರಾಜರತ್ನಂ, ಎಂ.ಎ.	ಲಘುಚಿತ್ರಗಳು	೧೦೦೦	೧೯೩೩	
೬.	ಪಾಂಚಜನ್ಯ	ಕೆ.ವಿ. ಪುಟ್ಟಪ್ಪ, ಎಂ.ಎ.	ಕವಿತಾ ಸಂಗ್ರಹ	೧೦೦೦	೧೯೩೩	
೭.	ಮಾಟಗಾತಿ	'ಆನಂದ'	ಕಣ್ಣ ಕಥೆಗಳು	೧೦೦೦	೧೯೩೪	ನಾಲ್ಕನೆಯ ವರ್ಷ
೮.	ನವಿಲು-೧ನೆಯ ಭಾಗ	ಕೆ.ವಿ. ಪುಟ್ಟಪ್ಪ, ಎಂ.ಎ.	ಕವಿತಾ ಸಂಗ್ರಹ	೧೦೦೦	೧೯೩೪	
೯.	ನವಿಲು-೨ನೆಯ ಭಾಗ	ಕೆ.ವಿ. ಪುಟ್ಟಪ್ಪ, ಎಂ.ಎ.	ಕವಿತಾ ಸಂಗ್ರಹ	೧೦೦೦	೧೯೩೪	ಐದನೆಯ ವರ್ಷ
೧೦.	ಪಾತಾಳದಲ್ಲಿ ಪಾಪಚ್ಚಿ	ನಾ. ಕಸ್ತೂರಿ, ಎಂ.ಎ. ಬಿ.ಎಲ್.	ಬಾಲಸಾಹಿತ್ಯ (ಇಂಗ್ಲಿಷ್ ಮೂಲದ ರೂಪಾಂತರ)			

ಇವುಗಳಲ್ಲಿ ಮೊದಲನೆಯದಾದ 'ಸಾಹಿತ್ಯ ಪ್ರಚಾರ'ವೆಂಬ ಚಿಕ್ಕಗ್ರಂಥದ ಪ್ರತಿಗಳು ಮುಗಿದು ಹೋಗಿ ಎರಡು ವರ್ಷಗಳ ಮೇಲಾಯಿತು. 'ಕನ್ನಡ ಮೇಘ ಸಂದೇಶ', 'ರಕ್ಷಾಕ್ಷಿ' ಮತ್ತು 'ಗಂಡುಗೊಡಲಿ' -ಈ ಗ್ರಂಥಗಳ ಕೆಲವು ಪ್ರತಿಗಳು ಮಾತ್ರವೇ ಉಳಿದಿದ್ದು ಇವುಗಳ ಎರಡನೆಯ ಮುದ್ರಣವನ್ನು ಕೈಕೊಳ್ಳಬೇಕಾಗಬಹುದು. ಈ ಗ್ರಂಥಗಳನ್ನೆಲ್ಲ ವಿದ್ಯಾಭ್ಯಾಸದ ಇಲಾಖೆಯವರು ಸ್ಕೂಲು ಲೈಬ್ರರಿಗಳಿಗೆ ಉಪಯುಕ್ತವಾದ ಗ್ರಂಥಗಳೆಂದು ಮಂಜೂರು ಮಾಡಿ ಉಪಕಾರ ಮಾಡಿರುತ್ತಾರೆ. ಅಲ್ಲದೆ 'ರಕ್ಷಾಕ್ಷಿ'ಯು ೧೯೩೬-೩೭ನೆಯ ವಿ.ಟಿ.ಸಿ. ಪರೀಕ್ಷೆಗೆ ಪಠ್ಯ ಪುಸ್ತಕವಾಗಿ ನಿಯಮಿಸಲ್ಪಟ್ಟಿರುತ್ತದೆ. ಈ ಗ್ರಂಥಗಳಿಗೆ ಉದಾರಾಶ್ರಯವನ್ನಿತ್ತು ಉಪಕಾರ ಮಾಡಬೇಕಾಗಿ ಶ್ರೀಮನ್ಮಹಾರಾಜರವರನ್ನೂ ಮೈಸೂರು ಮತ್ತು ಬೊಂಬಾಯಿ ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನೂ ಪ್ರಾರ್ಥಿಸಲಾಗಿದೆ.

ಪ್ರಕಟನ ಕಾರ್ಯಕ್ಕಾಗಿ ಸಂಘದ ಎರಡನೆಯ ವರ್ಷದಲ್ಲಿ ಐವತ್ತು ರೂಪಾಯಿಗಳನ್ನೂ ನಾಲ್ಕು-ಐದನೆಯ ವರ್ಷಗಳಲ್ಲಿ ಮುನ್ನೂರು ಐವತ್ತು ರೂಪಾಯಿಗಳಂತೆಯೂ ಹೀಗೆ ಒಟ್ಟಿನಲ್ಲಿ ಏಳುನೂರು ಐವತ್ತು ರೂಪಾಯಿಗಳನ್ನು ಸಾಲ ಮಾಡಬೇಕಾಯಿತು. ಸಂಘದಲ್ಲಿ ದ್ರವ್ಯಾಭಾವದಿಂದ ಅಡಚಣೆಯುಂಟಾದ ಈ ಸಮಯಗಳಲ್ಲಿ ಶ್ರೀಯುತರುಗಳಾದ ಭೂಪಾಳಂ ಪುಟ್ಟನಂಜಪ್ಪನವರು, ಭೂಪಾಳಂ ಚಂದ್ರಶೇಖರ ಶೆಟ್ಟರು ಮತ್ತು ಡಿ.ಆರ್. ಮಾನಪ್ಪವರು -ಈ ಮೂವರು ಮಹನೀಯರು ಮೇಲ್ಕಂಡ ಮೊಬಲಗುಗಳನ್ನು ಸಾಲವಾಗಿ ಕೊಟ್ಟು ಉಪಕಾರ ಮಾಡಿರುತ್ತಾರೆ. ದೈವಕೃಪೆಯಿಂದ ಈ ಸಾಲಗಳೆಲ್ಲವೂ ತೀರ್ಮಾನವಾಗಿವೆಯೆಂದು ತಿಳಿಸಲು ಸಂತೋಷವಾಗುತ್ತದೆ.

ಸಾಧ್ಯವಾದ ಮಟ್ಟಿಗೂ ಉತ್ತಮ ಗ್ರಂಥಗಳನ್ನೇ ಅಚ್ಚುಹಾಕಿಸಲು ಪ್ರಯತ್ನಪಟ್ಟಿದ್ದೇವೆ. ಗ್ರಂಥದ ವಿಷಯ ಗೌರವ, ಉಪಯುಕ್ತತೆ -ಇತ್ಯಾದಿಗಳ ಕಡೆಗೆ ಗಮನ ಕೊಟ್ಟಿರುವಂತೆ ಅವುಗಳ ಮುದ್ರಣದ ಕಡೆಗೂ ಗಮನಕೊಡಲಾಗಿದೆ. ಸಂಘದ ಪ್ರಕಟನೆಗಳೆಲ್ಲವೂ ಅತ್ಯುತ್ತಮವಾಗಿ ಮುದ್ರಿತವಾಗಿವೆ. ಇವುಗಳಲ್ಲಿ ಕೆಲವು ಗ್ರಂಥಗಳಿಗೆ ಶ್ರೀಮಾನ್ 'ಆನಂದ'ರು ಉತ್ತಮವಾದ ರಕ್ಷಾಕವಚ ಚಿತ್ರಗಳನ್ನೂ ಶ್ರೀಮಾನ್ ಎಂ.ವಿ. ಸೀತಾರಾಮಯ್ಯನವರು 'ಪಾತಾಳದಲ್ಲಿ ಪಾಪಚ್ಚಿ' ಎಂಬ ಗ್ರಂಥಕ್ಕೆ ಅನೇಕ ಉತ್ತಮ ಚಿತ್ರಗಳನ್ನೂ ಬರೆದುಕೊಟ್ಟಿರುತ್ತಾರೆ. ಶ್ರೀಮಾನ್ 'ಆನಂದ'ರು ಸಂಘದ ಗುರುತಾದ ನವಿಲಿನ ಚಿತ್ರವನ್ನು ಬರೆದುಕೊಟ್ಟು ಉಪಕಾರ ಮಾಡಿರುತ್ತಾರೆ. 'ಕನ್ನಡ ಮೇಘ ಸಂದೇಶ' ಮತ್ತು 'ರಕ್ಷಾಕ್ಷಿ' -ಈ ಗ್ರಂಥಗಳ ಅಂದವಾದ ಮುದ್ರಣಕ್ಕೆ ರಾಮಮೋಹನ ಕಂಪೆನಿಯವರಿಗೂ ಶ್ರೀಮಾನ್ ವಿ. ಸೀತಾರಾಮಯ್ಯ, ಎಂ.ಎ., ಯವರಿಗೂ ನಾವು ಋಣಿಗಳು. ಪುಸ್ತಕ ಪ್ರಕಟನೆಯಲ್ಲಿ ನಮಗೆ ಬೇಕಾದ ಅನುಕೂಲಗಳನ್ನೆಲ್ಲ ಒದಗಿಸಿಕೊಟ್ಟು ಗ್ರಂಥಗಳನ್ನು ಅಂದವಾಗಿ ಮುದ್ರಿಸಿರುವ ಬೆಂಗಳೂರು ಪ್ರೆಸ್ಸಿನವರಿಗೂ ಮೈಸೂರಿನ ವೆಸ್ಲಿ ಪ್ರೆಸ್ಸಿನ ಅಧಿಕಾರಿಗಳಿಗೂ ಸಂಘವು ಕೃತಜ್ಞವಾಗಿದೆ.

ಸಂಘದಲ್ಲಿ ಸಿಬ್ಬಂದಿ ಇಲ್ಲದಿದ್ದುದರಿಂದಲೂ ಇತರ ಕಾರಣಗಳಿಂದಲೂ ಪ್ರಾರಂಭದಲ್ಲಿ ಪ್ರಕಟವಾದ 'ಕನ್ನಡ ಮೇಘ ಸಂದೇಶ' ಮತ್ತು 'ರಕ್ಷಾಕ್ಷಿ' ಈ ಎರಡು ಗ್ರಂಥಗಳ ಮಾರಾಟಕ್ಕೆ ಬೆಂಗಳೂರಿನ ರಾಮಮೋಹನ ಕಂಪೆನಿಯವರನ್ನು ಪೂರ್ಣ ಪ್ರತಿನಿಧಿಗಳಾಗಿ ನಿಯಮಿಸಿದೆವು. ಆದರೆ ವ್ಯಾಪಾರ ವ್ಯವಹಾರಗಳು ನಿರೀಕ್ಷಿಸಿದಷ್ಟು ಸುಸೂತ್ರವಾಗಿ ನಡೆಯದೆ ಅನೇಕ ತೊಡಕುಗಳು ಬಂದದ್ದರಿಂದ 'ರಕ್ಷಾಕ್ಷಿ'ಯ ಅನಂತರದಲ್ಲಿ ಪ್ರಕಟವಾದ ಗ್ರಂಥಗಳ ಮುದ್ರಣ ವ್ಯಾಪಾರಾದಿ ಕಾರ್ಯಗಳನ್ನು ಇತರರಿಗೆ ವಹಿಸದೆ ಸಂಘದಿಂದಲೇ ನೇರವಾಗಿ ನಿರ್ವಹಿಸಬೇಕಾಯಿತು. ಇದರಿಂದ ಸಂಘದ ಆಫೀಸಿನ ಕಾರ್ಯಗಳು ವಿಪರೀತವಾಗಿ ಹೆಚ್ಚಿ, ಸಿಬ್ಬಂದಿಯ ಸಹಾಯವಿಲ್ಲದೆ

ಎಲ್ಲಾ ಕಾರ್ಯಗಳನ್ನೂ ನಡೆಸಿಕೊಂಡು ಹೋಗುವುದು ದಿನೇ ದಿನೇ ದುಸ್ತರವಾಗುತ್ತಿದೆ. ಈ ಕೊರತೆಯನ್ನುಳಿದರೆ ಇತರ ವಿಷಯಗಳಲ್ಲಿ ಈಗಿರುವ ಏರ್ಪಾಡೇ ತೃಪ್ತಿಕರವಾದುದೆಂದು ಅನುಭವದಿಂದ ಹೇಳಬೇಕಾಗುತ್ತದೆ.

ಈ ಸಂಘದಿಂದ ಸ್ವಲ್ಪ ಹೆಚ್ಚು ಕಡಿಮೆ ಎಡೆಬಿಡದೆ ಗ್ರಂಥಗಳು ಪ್ರಕಟವಾಗುತ್ತಿರುವುದನ್ನು ಕಂಡು ಕೆಲವರು ಈ ಸಂಘವು ಕೇವಲ ಪ್ರಕಾಶಕ ಸಂಸ್ಥೆಯಾಗುತ್ತಿದೆಯೋ ಏನೋ ಎಂಬುದಾಗಿ ಒಂದು ವಿಧವಾದ ಭಯವನ್ನೋ ಅಸಮಾಧಾನವನ್ನೋ ಸೂಚಿಸಿದ್ದಾರೆ. ಸಂಘದಿಂದ ಇದುವರೆಗೆ ನಿರತರವಾಗಿ ನಡೆದಿರುವ ಇತರ ಕಾರ್ಯಗಳ ಪ್ರಸ್ತಾಪವನ್ನೂ ವಿವರಣೆಯನ್ನೂ ಈ ವರದಿಯ ಬೇರೊಂದು ಭಾಗದಲ್ಲಿಯೂ ಅನುಬಂಧಗಳಲ್ಲಿಯೂ ನೋಡಿ ತಿಳಿಯತಕ್ಕವರಿಗೆ ಈ ವಿಧವಾದ ಭಯಕ್ಕೆ ಆಧಾರವಿಲ್ಲವೆಂದು ತಾನೆ ಗೊತ್ತಾಗುತ್ತದೆ. (ಉಪನ್ಯಾಸ ಕಾವ್ಯವಾಚನಾದಿ ಕಾರ್ಯಗಳಿಗೇ ಈ ಐದು ವರ್ಷಗಳಲ್ಲಿ ಒಟ್ಟಿನಲ್ಲಿ ರೂ. ೭೨೫-೧೨-೬ ಪೈಗಳು ಖರ್ಚಾಗಿರುತ್ತವೆ.) ಗ್ರಂಥ ಪ್ರಕಟನೆಯ ಜವಾಬ್ದಾರಿಯನ್ನು ಧೈರ್ಯವಾಗಿ ಹೊರುವ ಪ್ರಕಾಶಕ ಸಂಸ್ಥೆಗಳಾದರೂ ನಮ್ಮಲ್ಲಿ ಬಹಳವಿಲ್ಲ. ಆದರಿಂದ ಈ ಕಾರ್ಯವನ್ನು ಕೈಕೊಳ್ಳುವ ಯಾವ ಕರ್ಣಾಟಕ ಸಂಘವೂ ಇದಕ್ಕಾಗಿ ತಲೆತಗ್ಗಿಸಬೇಕಾಗಿಲ್ಲ. ಅಲ್ಲದೆ ಸಾಹಿತ್ಯ ಪ್ರಚಾರ ಕಾರ್ಯಗಳಲ್ಲಿ ಗ್ರಂಥ ಪ್ರಕಟನೆಯ ಕಾರ್ಯವು ಅಗಣನೀಯವಾದುದೇನೂ ಅಲ್ಲ. ಪ್ರಕಟನೆಗಳ ಸಂಬಂಧವಾದ ವರಮಾನವಿಲ್ಲದಿದ್ದಲ್ಲಿ ಸಂಘದ ಪರವಾಗಿ ಇದುವರೆಗೆ ನಡೆದಿರುವ ಅನೇಕ ಕಾರ್ಯಗಳು ಸಾಧ್ಯವಾಗುತ್ತಿರಲಿಲ್ಲವೆಂದು ಹೇಳಬೇಕಾಗಿದೆ. ಸಂಘದ ಗ್ರಂಥಗಳು ಜನ ಪ್ರೀತಿಗೆ ಪಾತ್ರವಾಗಿ ಅವುಗಳಿಗೆ ನಿರಂತರವಾದ ಗಿರಾಕಿಯಿರುತ್ತದೆ. ಸದ್ಯಕ್ಕೆ ಸಂಘಕ್ಕೆ ಇರುವ ಸ್ಥಿತಿಯೆಲ್ಲವೂ ಅದರ ಪ್ರಕಟನೆಗಳ ಸಂಬಂಧವಾದದ್ದು. ಪ್ರಕಟನೆಗಳಿಂದ ಇತರ ಸಂಘಗಳಲ್ಲಿಯೂ ಪ್ರಕಾಶಕ ಸಂಸ್ಥೆಗಳ ಮಧ್ಯದಲ್ಲಿಯೂ ಈ ಸಂಘಕ್ಕೆ ಒಂದು ಗಣ್ಯವಾದ ಸ್ಥಾನವಿದೆಯೆಂದು ಎಣಿಸಿದರೆ ತಪ್ಪಾಗಲಾರದು.

ಐದನೆಯ ವರ್ಷದ ಪ್ರಕಟನೆಗಳ ಮತ್ತು ಉಪನ್ಯಾಸಮಾಲೆಯ ಗ್ರಂಥಾವಳಿಯ ವಿಚಾರದಲ್ಲಿ ಎರಡು ಮಾತುಗಳನ್ನಿಲ್ಲಿ ಹೇಳುವುದು ಉಚಿತವಾಗಿದೆ. ಮೂರು-ನಾಲ್ಕನೆಯ ವರ್ಷಗಳಂತೆ ಪ್ರಕೃತ ವರ್ಷದಲ್ಲಿಯೂ ಮೂರು-ನಾಲ್ಕು ಗ್ರಂಥಗಳನ್ನು ಪ್ರಕಟಿಸಬೇಕೆಂದಿದ್ದೆವು. ಆದರೆ ನಿರೀಕ್ಷಿತ ಹಸ್ತಪ್ರತಿಗಳು ಯಾವುವೂ ಅಚ್ಚಿಗೆ ಸಿದ್ಧವಾಗದೆ ಹೋಯಿತು. ಶ್ರೀಮಾನ್ ಎ.ಎನ್. ಮೂರ್ತಿರಾವ್, ಎಂ.ಎ., ಯವರ 'ಹಗಲುಗನಸುಗಳು' ಎಂಬ ಪ್ರಬಂಧ ಸಂಗ್ರಹದ ಹಸ್ತಪ್ರತಿಯು ಇದೀಗ ಹಸ್ತಗತವಾಗಿದೆ. ಈ ಗ್ರಂಥವು ಬೇಗನೆ ಅಚ್ಚಾಗಬಹುದಾಗಿ ನಿರೀಕ್ಷಿಸುತ್ತೇವೆ.

ಉಪನ್ಯಾಸಮಾಲೆಯ ಗ್ರಂಥಾವಳಿ: ಉಪನ್ಯಾಸಮಾಲೆಯ ಭಾಷಣಗಳನ್ನೆಲ್ಲಾ ಗ್ರಂಥರೂಪವಾಗಿ ಅಚ್ಚುಹಾಕಿಸಿ ಆ ಗ್ರಂಥಗಳೆಲ್ಲ ನಿಖರವಾದ ಒಂದೇ ಬೆಲೆಗೆ ದೊರೆಯುವಂತೆ ಮಾಡಬೇಕೆಂಬ ಉದ್ದೇಶವಿದೆಯೆಂದು ಈ ಮೊದಲೆ ತಿಳಿಸಿದೆ. ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರ 'ಕನ್ನಡ ಜೈನ ಸಾಹಿತ್ಯ' ಗ್ರಂಥವನ್ನೂ ಶ್ರೀಮಾನ್ ಎಂ.ಆರ್. ಶ್ರೀನಿವಾಸ ಮೂರ್ತಿಗಳ 'ಕನ್ನಡ ವೀರಶೈವ ಸಾಹಿತ್ಯ' ಗ್ರಂಥವನ್ನೂ ೧೯೩೫ನೆಯ ಇಸವಿಯ ಅಂತ್ಯದವೊಳಗೆ ಪ್ರಕಟಿಸಬೇಕೆಂದಿದ್ದೆವು. ಹೀಗೆ ಮಾಡಲು ಸಾಧ್ಯವಾಗದಿದ್ದುದಕ್ಕಾಗಿ ವಿಷಾದಿಸುತ್ತೇವೆ. ಈ ಗ್ರಂಥಗಳ ಹಸ್ತಪ್ರತಿಗಳು ಜಾಗ್ರತೆಯಾಗಿ ಸಿದ್ಧವಾಗಿ ಈ ವರ್ಷದಲ್ಲಿಯಾದರೂ ಇವು ಪ್ರಕಟವಾದೀತೆಂದು ನಿರೀಕ್ಷೆಯಿದೆ.

೧೦. ಸಾಹಿತ್ಯ ಪರಿಷತ್ತಿನ ಅಂಗಸಂಸ್ಥೆ

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅಂಗಸಂಸ್ಥೆಯಾಗಿ ಸೇರಿದ ಮೊದಲ ಕರ್ಣಾಟಕ ಸಂಘಗಳಲ್ಲಿ ನಮ್ಮ ಸಂಘವು ಒಂದಾಗಿದೆ. ಈ ಸಂಘವು ತಾ. ೧೨-೧೨-೧೯೩೩ರಲ್ಲಿ ಪರಿಷತ್ತಿನ

ಅಂಗಸಂಸ್ಥೆಯಾಗಿ ಸೇರಿ ಪರಿಷತ್ತಿನ ಕಾರ್ಯಕಲಾಪಗಳಲ್ಲಿ- ತನ್ಮೂಲಕ ಅಖಿಲ ಕರ್ನಾಟಕದ ಸಾಹಿತ್ಯ ಚಳುವಳಿವಳಿಗಳಲ್ಲಿ- ಭಾಗವಹಿಸುವ ಅವಕಾಶವನ್ನು ಹೊಂದಿದೆ. ಅಲ್ಲದೆ ಸಂಘದ ಕಾರ್ಯಕಲಾಪಗಳೆಲ್ಲ ಪರಿಷ್ಪತ್ರಿಕೆಯ ಮೂಲಕ ಜನಶ್ರುತವಾಗುತ್ತಿವೆ. ೧೯೩೩ ಮತ್ತು ೧೯೩೪ನೆಯ ಇಸವಿಯಲ್ಲಿ ಹುಬ್ಬಳ್ಳಿ ಮತ್ತು ರಾಯಚೂರುಗಳಲ್ಲಿ ನಡೆದ ಸಾಹಿತ್ಯ ಸಮ್ಮೇಳನಗಳಿಗೆ ಸಂಘದ ಪರವಾಗಿ ಪ್ರತಿನಿಧಿಯನ್ನು ಕಳುಹಿಸಲಾಗಿತ್ತು.

೧೧. ಸಂಘಕ್ಕೆ ಒಂದು ಕಟ್ಟಡ

ಸಂಘಕ್ಕೆ ತನ್ನದೇ ಆದ ಒಂದು ಸ್ವತಂತ್ರ ಕಟ್ಟಡದ ಅವಶ್ಯಕತೆಯನ್ನು ಈಗ್ಗೆ ಎರಡು ವರ್ಷಗಳ ಪೂರ್ವದಲ್ಲಿಯೇ ಕಂಡು ಈ ವಿಷಯದಲ್ಲಿ ಒಂದು ಉಚಿತ ಸನ್ನಿವೇಶವನ್ನು ಸಂಘಕ್ಕೆ ದಯಪಾಲಿಸಬೇಕಾಗಿ ಶಿವಮೊಗ್ಗ ಟವನ್ ಮ್ಯುನಿಸಿಪಲ್ ಕೌನ್ಸಿಲಿನ ಅಧಿಕಾರಿಗಳನ್ನು ಪ್ರಾರ್ಥಿಸಲಾಯಿತು.

ಈ ಪ್ರಾರ್ಥನೆಯ ಮೇರೆಗೆ ಸಂಘಕ್ಕೆ ಉಚಿತ ನಿವೇಶನವೊಂದನ್ನು ಕೊಡಬೇಕಾಗಿ ಮ್ಯುನಿಸಿಪಲ್ ಕೌನ್ಸಿಲ್‌ನವರು ಠರಾವುಮಾಡಿ, ಸದರಿ ಠರಾವನ್ನು ಸರಕಾರದ ಮಂಜೂರಾತಿಗೆ ಕಳುಹಿಸುವ ಸಂದರ್ಭದಲ್ಲಿ ಕಟ್ಟಡದ ನಕ್ಷೆಯೊಂದನ್ನೂ ಅದಕ್ಕೆ ತಗಲಬಹುದಾದ ವೆಚ್ಚಗಳ ಅಂದಾಜು ಪಟ್ಟಿಯನ್ನೂ ಕೇಳಲಾಗಿ, ಅವುಗಳನ್ನೂ ತಯಾರುಮಾಡಿಸಿ ಕಳುಹಿಸಲಾಯಿತು. ಈ ವಿಷಯವು ಸರಕಾರದ ಗಮನಕ್ಕೆ ಒಯ್ಯಲ್ಪಟ್ಟು ಸಂಘವು ರಿಜಿಸ್ಟರ್ಡ್ ಸಂಸ್ಥೆಯಾದ ಮೇಲೆ ಪುನಃ ಈ ವಿಚಾರದಲ್ಲಿ ಪ್ರಾರ್ಥಿಸಿಕೊಳ್ಳಬೇಕಾಗಿ ಸರಕಾರದವರು ಉತ್ತರ ದಯಪಾಲಿಸಿರುತ್ತಾರಾಗಿ ಮ್ಯುನಿಸಿಪಲ್ ಕೌನ್ಸಿಲಿನವರು ತಿಳಿಸಿರುತ್ತಾರೆ. ನಿವೇಶನ ಸಂಪಾದನೆಗೂ ಕಟ್ಟಡ ನಿರ್ಮಾಣಕ್ಕೂ ತಾವುಗಳೆಲ್ಲ ಶೀಘ್ರದಲ್ಲಿಯೇ ಪ್ರಯತ್ನಿಸುವಿರೆಂದು ನಂಬಿದ್ದೇವೆ.

೧೨. ಪುಸ್ತಕ ಭಂಡಾರ ಮತ್ತು ವಾಚನಾಲಯ

ವಾಚನಾಲಯ ಪುಸ್ತಕ ಭಂಡಾರಗಳ ಸ್ಥಾಪನೆಯು ಸಂಘದ ಉದ್ದೇಶಗಳಲ್ಲಿ ಒಂದಾಗಿದ್ದು, ಅತ್ಯವಶ್ಯವಾಗಿ ಮಾಡಬೇಕಾದ ಕಾರ್ಯವಾಗಿದೆ. ಈ ವಿಚಾರದಲ್ಲಿ ಅನೇಕ ಜನರ ಒತ್ತಾಯವು ಮೊದಲಿನಿಂದಲೂ ಇದ್ದಾಗ್ಯೂ ಸ್ಥಳಾಭಾವದಿಂದ ಈ ಕಾರ್ಯವನ್ನು ಇದುವರೆಗೂ ನಡೆಸಲಾಗಲಿಲ್ಲವೆಂದು ತಿಳಿಸಲು ಸಂಕೋಚವಾಗುತ್ತದೆ. ಈಚೆಗೆ ಸಂಘದ ಆಫೀಸನ್ನು ತೆರೆದ ಮೇಲೆ ಕಳೆದ ಜುಲೈ ತಿಂಗಳಿನಿಂದ ಚಿಕ್ಕದಾಗಿ ಒಂದು ಪುಸ್ತಕ ಭಂಡಾರವನ್ನು ನಡೆಸಲಾಗುತ್ತದೆ. ಇದರಲ್ಲಿ ಸದ್ಯಕ್ಕೆ ಕೇವಲ ಐವತ್ತು ಪುಸ್ತಕಗಳು ಮಾತ್ರ ಇವೆ. ಕನ್ನಡದ ಉತ್ತಮ ಗ್ರಂಥಗಳನ್ನೆಲ್ಲ ಒಳಗೊಂಡ ಪುಸ್ತಕ ಭಂಡಾರವನ್ನು ಪ್ರಾರಂಭಿಸಲು ಬೇಕಾದ ಸಿದ್ಧತೆಗಳನ್ನೆಲ್ಲ ಈಚೆಗೆ ಮಾಡಿದ್ದರುತ್ತೇವೆಯಾದ್ದರಿಂದ ಶೀಘ್ರದಲ್ಲಿಯೆ ಪುಸ್ತಕ ಭಂಡಾರದ ಪ್ರಾರಂಭೋತ್ಸವವನ್ನು ನೆರವೇರಿಸಬಹುದಾಗಿದೆ.

೧೩. ಸಂಘದ ಕಾರ್ಯಾಲಯ

ಇದುವರೆಗೆ ಸಂಘದ ಸ್ವತಂತ್ರವಾದ ಆಫೀಸೊಂದು ಇಲ್ಲದೆ ಸದಸ್ಯರು ಪರಸ್ಪರ ಕಲೆಯುವುದಕ್ಕೂ ಅಭಿಪ್ರಾಯ ವಿನಿಮಯಮಾಡಿಕೊಳ್ಳುವುದಕ್ಕೂ ಸಾಹಿತ್ಯಶಾಸ್ತ್ರ ಇತ್ಯಾದಿಗಳ ಅಧ್ಯಯನದಲ್ಲಿ ಹೆಚ್ಚು ಆಸಕ್ತಿಯುಳ್ಳವರು ಒಂದೆಡೆ ಸೇರಿ ವ್ಯಾಸಂಗ ಗೋಷ್ಠಿಗಳ ಮೂಲಕ ಪ್ರಯೋಜನ ಹೊಂದುವುದಕ್ಕೂ ಸಂಘದ ವ್ಯಾಪಾರ ಶಾಖೆಯ ಗ್ರಂಥಗಳನ್ನು ಪ್ರದರ್ಶಿಸಲಿಕ್ಕೂ ಸಂಘದಿಂದ ಅಚ್ಚಾದ ಗ್ರಂಥಗಳನ್ನು ಶೇಖರಿಸಿ ಇಡುವುದಕ್ಕೂ ಹೀಗೆಯೇ ಇದೇ ವಿಧವಾದ

ಇತರ ಅನೇಕ ಕಾರ್ಯಗಳಿಗೂ ಸಹ ಅವಕಾಶವಿರಲಿಲ್ಲ. ಈ ಕೊರತೆಯನ್ನು ಸ್ವಲ್ಪಮಟ್ಟಿಗಾದರೂ ದೂರ ಮಾಡಬೇಕೆಂಬ ಉದ್ದೇಶದಿಂದ ೧೯೩೫ನೆಯ ಇಸವಿ ಜೂನ್ ತಿಂಗಳಿನಲ್ಲಿ ಬೆಂಗಳೂರು-ಹೊನ್ನಾವರ ರೋಡಿನಲ್ಲಿ ಒಂದು ರೂಮನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲಿ ಸಂಘದ ಆಫೀಸನ್ನು ತೆರೆಯಲಾಗಿದೆ. ಪ್ರತಿನಿತ್ಯ ಬೆಳಗ್ಗೆ, ಸಂಜೆ, ಈ ಎರಡು ಹೊತ್ತೂ ಕೆಲವು ಕಾಲ ಸಂಘದ ಆಫೀಸು ತೆರೆದಿರುತ್ತದೆ. ಈಗಿರುವ ಆಫೀಸು ರೂಮು ಅತ್ಯಂತ ಚಿಕ್ಕದಾಗಿದ್ದು ಅಲ್ಲಿ ಸಂಘದ ಎಲ್ಲ ವಸ್ತುಗಳನ್ನು ಶೇಖರಿಸುವುದು ಶ್ರಮಸಾಧ್ಯವಾಗಿದೆ. ಹತ್ತಾರು ಜನರು ಒಂದೇ ಬಾರಿಗೆ ಆಫೀಸಿಗೆ ಪ್ರವೇಶಿಸಿದರೆ ಎಲ್ಲರಿಗೂ ಸರಿಯಾಗಿ ಕೂರುವುದಕ್ಕೆ-ನಿಲ್ಲುವುದಕ್ಕೆ-ಕೂಡ ಸ್ಥಳವಿಲ್ಲದಾಗಿದೆ. ಇಷ್ಟು ಕಿಷ್ಕಿಂದವಾದ ಜಾಗದಲ್ಲಿ ಪುಸ್ತಕ ಭಂಡಾರ ವಾಚನಾಲಯಗಳನ್ನು ಏರ್ಪಡಿಸುವುದು ಅತ್ಯಂತ ದುಸ್ತರದ ಕೆಲಸ. ಸಂಘದ ಸ್ವತಂತ್ರವಾದ ಭವನದ ನಿರ್ಮಾಣವೇ ಈ ಎಲ್ಲ ತೊಂದರೆಗಳಿಗೂ ಪರಿಹಾರ. ಅಂತಹ ಭವನವು ನಿರ್ಮಾಣವಾಗುವವರೆಗೂ ಉದಾರಚಿತ್ತರಾದ ಮಹನೀಯರು ಯಾರಾದರೂ ಸಂಘಕ್ಕೆ ಒಂದು ವಿಶಾಲವಾದ ಆಶ್ರಯಸ್ಥಾನವನ್ನು ಉಚಿತವಾಗಿ ಒದಗಿಸಿಕೊಟ್ಟಲ್ಲಿ ತುಂಬ ಉಪಕಾರವಾಗುವುದು.

೧೪. ಉಪಕಾರಿಗಳು

ಶಿವಮೊಗ್ಗಾ ಡಿಸ್ಟ್ರಿಕ್ಟ್ ಬೋರ್ಡಿನವರು ಮೊದಲ ವರ್ಷದಲ್ಲಿ ೨೫ ರೂಪಾಯಿಗಳನ್ನೂ ಈಚೆಗೆ ಪ್ರತಿ ವರ್ಷ ೫೦ ರೂಪಾಯಿಗಳಂತೆಯೂ ಸಂಘಕ್ಕೆ ಸಹಾಯ ಮಾಡಿರುತ್ತಾರೆ. ಈ ಸಂಸ್ಥೆಯ ಅಧಿಕಾರಗಳಿಗೆ ಸಂಘವು ತನ್ನ ವಿಶೇಷ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ. ಶಿವಮೊಗ್ಗಾ ಕೋ-ಆಪರೇಟಿವ್ ಬ್ಯಾಂಕ್, ಲಿಮಿಟೆಡ್, ಸಂಸ್ಥೆಯವರು ಸಂಘದ ಎರಡು-ಮೂರು-ನಾಲ್ಕನೆಯ ವರ್ಷಗಳಲ್ಲಿ ಪ್ರತಿ ವರ್ಷ ೧೦ ರೂಪಾಯಿಗಳಂತೆ ಸಹಾಯಮಾಡಿ ಉಪಕಾರ ಮಾಡಿರುತ್ತಾರಲ್ಲದೆ ಪ್ರಕೃತ ವರ್ಷದಲ್ಲಿ ಸಹಾಯ ದ್ರವ್ಯವನ್ನು ೨೫ ರೂಪಾಯಿಗಳಿಗೆ ಹೆಚ್ಚಿಸಿ ಪ್ರೋತ್ಸಾಹಿಸಿರುತ್ತಾರೆ. ಶಿವಮೊಗ್ಗಾ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಯವರು ಸಂಘದ ನಾಲ್ಕನೆಯ ವರ್ಷದಲ್ಲಿ ೧೦ ರೂಪಾಯಿಯಗಳ ಸಹಾಯ ದ್ರವ್ಯವನ್ನೂ ಪ್ರಕೃತ ವರ್ಷದಲ್ಲಿ ೧೫ ರೂಪಾಯಿಗಳನ್ನೂ ಸಹಾಯವಾಗಿ ದಯಪಾಲಿಸಿರುತ್ತಾರೆ. ಶಿವಮೊಗ್ಗಾ ಟವನ್ ಮ್ಯುನಿಸಿಪಾಲಿಟಿಯವರು ಉಪನ್ಯಾಸ ಸಪ್ತಾಹದ ಬಗ್ಗೆ ೫೦ ರೂಪಾಯಿಗಳ ಧನ ಸಹಾಯ ಮಾಡಿರುತ್ತಾರೆ. ಈ ರೀತಿಯಾಗಿ ಸಂಘಕ್ಕೆ ಸಹಾಯ ಮಾಡಿ ಸಂಘದ ಕಾರ್ಯಗಳಿಗೆ ಪ್ರೋತ್ಸಾಹವನ್ನಿತ್ತ ಮೇಲ್ಕಂಡ ಎಲ್ಲ ಸಂಸ್ಥೆಗಳು ಅಧಿಕಾರಿಗಳಿಗೂ ಸಂಘವು ಅತ್ಯಂತ ಕೃತಜ್ಞವಾಗಿರುತ್ತದೆ.

ಈ ಐದು ವರ್ಷಗಳಲ್ಲಿ ಸಂಘದ ಪ್ರಾರ್ಥನೆಯ ಮೇರೆಗೆ ಶಿವಮೊಗ್ಗಾಕ್ಕೆ ದಯಮಾಡಿಸಿ ತಮ್ಮ ಉಪನ್ಯಾಸ ಕವಿತಾವಾಚನ ಗಮಕಗಾಯನ ನಾಟಕಾಭಿನಯ ಅಧ್ಯಕ್ಷಭಾಷಣಾದಿಗಳಿಂದ ಸಂಘದ ಕಾರ್ಯಗಳಲ್ಲಿ ಸಹಕರಿಸಿರುವ ಎಲ್ಲ ವಿದ್ವಜ್ಜನರಿಗೂ ತಮ್ಮ ಗ್ರಂಥಗಳನ್ನು ಸಂಘದಿಂದ ಪ್ರಕಾಶಿಸಲು ಅನುಮತಿಯಿತ್ತ ಗ್ರಂಥಕರ್ತರುಗಳಿಗೂ ಕಾವ್ಯ ಸ್ಪರ್ಧೆಗಳನ್ನು ಏರ್ಪಡಿಸಲು ನೆರವಾದ ಎಲ್ಲ ಮಹನೀಯರಿಗೂ ಸಹಾಯಾರ್ಥ ನಾಟಕಗಳ ಮೂಲಕ ಸಹಾಯ ಮಾಡಿದ ನಾಟಕ ಕಂಪೆನಿಗಳ ಮಾಲೀಕರಿಗೂ ಸಂಘದ ಮನಃಪೂರ್ವಕವಾದ ವಂದನೆಗಳಿವೆ. ಸಂಘದ ಪ್ರಾರಂಭದಿಂದಲೂ ಸಂಘದ ಅಭಿವೃದ್ಧಿಯಲ್ಲಿ ವಿಶೇಷವಾದ ಮಮತೆ ಅಭಿಮಾನಗಳನ್ನು ತೋರಿ ಅನೇಕ ವಿಧದಲ್ಲಿ ಸಂಘದ ಕಾರ್ಯಗಳಲ್ಲಿ ಸಹಕರಿಸಿ ಉಪಕಾರ ಮಾಡಿರುವ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ಶ್ರೀಮಾನ್ ಕೆ.ವಿ. ಪುಟ್ಟಪ್ಪ, ಎಂ.ಎ., ಶ್ರೀಮಾನ್

ಎ.ಆರ್. ಕೃಷ್ಣಶಾಸ್ತ್ರೀ, ಎಂ.ಎ., ಶ್ರೀಮಾನ್ ಎಂ.ಆರ್. ಶ್ರೀನಿವಾಸಮೂರ್ತಿ, ಬಿ.ಎ., ಮತ್ತು ಶ್ರೀಮಾನ್ ಎ. ಸೀತಾರಾಮ್, ಬಿ.ಎಸ್‌ಸಿ., ಇವರುಗಳಿಗೆ ಸಂಘದ ವಿಶೇಷ ಕೃತಜ್ಞತೆಯು ಸಲ್ಲತಕ್ಕದ್ದಾಗಿದೆ.

ಸಂಘದ ಕಾರ್ಯಕಲಾಪಗಳನ್ನು ಜನಶ್ರುತಮಾಡಲು ತಮ್ಮ ಪತ್ರಿಕೆಗಳಲ್ಲಿ ಅವಕಾಶಕೊಟ್ಟ 'ಪ್ರಬುದ್ಧ ಕರ್ಣಾಟಕ' ಮತ್ತು 'ಪರಿಷತ್ಪತ್ರಿಕೆ'ಯ ಸಂಪಾದಕರುಗಳಿಗೂ 'ವಿಶ್ವಕರ್ಣಾಟಕ' ಮತ್ತು 'ತಾಯಿನಾಡು' -ಈ ವಾರ್ತಾಪತ್ರಿಕೆಗಳ ಸಂಪಾದಕರುಗಳಿಗೂ ಸಂಘವು ಋಣಿಯಾಗಿದೆ. ಈ ಐದು ವರ್ಷಗಳಲ್ಲಿ ಚಂದಾ ಹಣವನ್ನು ಕೊಡುವುದರ ಮೂಲಕ ಸಂಘದ ಆಶ್ರಯದಾತರು, ಪೋಷಕರು, ಸದಸ್ಯರು ಆಗಿ ಸಹಾಯ ಮಾಡಿದ ಸರ್ವರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು ಸಲ್ಲುತ್ತವೆ. ಸದಸ್ಯರ ಸಹಾಯ ಸಹಾನುಭೂತಿಗಳಿಂದಲೇ ಸಂಘದ ಸರ್ವ ಕಾರ್ಯಗಳೂ ಇದುವರೆಗೆ ನಡೆಯಲು ಸಾಧ್ಯವಾಗಿರುತ್ತದೆ.

ಸಂಘದ ಸಭೆಗಳಿಗೆ ತಮ್ಮ ತಮ್ಮ ಮಂದಿರಗಳಲ್ಲಿ ಎಡೆಯನ್ನಿತ್ತು ಎಲ್ಲ ಅನುಕೂಲಗಳನ್ನು ಒದಗಿಸಿಕೊಟ್ಟು ಉಪಕಾರ ಮಾಡಿರುವ ಶಿವಮೊಗ್ಗ ಗೌರ್ನಮೆಂಟ್ ಹೈಸ್ಕೂಲ್, ಶಿವಮೊಗ್ಗ ಟವನ್ ಮ್ಯುನಿಸಿಪಲ್ ಕೌನ್ಸಿಲ್ ಮತ್ತು ಹಿಂದೆ ಈ ಪಟ್ಟಣದಲ್ಲಿದ್ದ ಇಂಟರ್‌ಮೀಡಿಯಟ್ ಕಾಲೇಜು -ಈ ಸಂಸ್ಥೆಗಳ ಅಧಿಕಾರಿಗಳಿಗೆ ಸಂಘವು ಋಣಿಯಾಗಿದೆ.

ಉಪನ್ಯಾಸಾದಿಕಾರ್ಯಗಳ ಪತ್ರಿಕೆಗಳನ್ನು ಸಕಾಲದಲ್ಲಿ ಮುದ್ರಿಸಿಕೊಟ್ಟು ಉಪಕಾರ ಮಾಡಿರುವ ಶ್ರೀ ಕೃಷ್ಣಾ ಪ್ರೆಸ್ಸಿನವರಿಗೆ ಕೃತಜ್ಞರಾಗಿದ್ದೇವೆ.

ವೇ॥ ಬ್ರ॥ ಶ್ರೀ॥ ಪಂಡಿತ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು ವಯಃ ಪರಿಣತಿಯಿಂದುಂಟಾಗತಕ್ಕ ದೇಹಶ್ರಮವನ್ನು ಲೆಕ್ಕಿಸದೆ, ಈ ಐದು ವರ್ಷಗಳು ಸಂಘದ ಅಧ್ಯಕ್ಷ ಪದವಿಯನ್ನು ವಹಿಸಿ ಕೆಲಸ ಮಾಡಿರುತ್ತಾರಲ್ಲದೆ ತಮ್ಮ ಅಪೂರ್ವವಾದ ವಿದ್ವತ್ತಿನಿಂದಲೂ ವಯೋಗುಣವಾದ ಅನುಭವದಿಂದಲೂ ಸಂಘಕ್ಕೆ ಅಪೂರ್ವವಾದ ಘನತೆಯನ್ನೂ ಗೌರವವನ್ನೂ ಸಂಪಾದಿಸಿ ಕೊಟ್ಟಿರುತ್ತಾರೆ. ಇದಕ್ಕಾಗಿ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರು ಶ್ರೀಮಾನ್ ಶಾಸ್ತ್ರಿಗಳವರಿಗೆ ಅತ್ಯಂತ ಕೃತಜ್ಞರಾಗಿರುತ್ತಾರೆ. ಈಗ್ಯೆ ಎರಡು ವರ್ಷಗಳ ಕೆಳಗೆ ಶ್ರೀಮನ್ಮಹಾರಾಜರವರು ಇವರ ವಿದ್ವತ್ತನ್ನು ಮನ್ನಿಸಿ 'ಆಸ್ಥಾನ ಮಹಾವಿದ್ವಾನ್' ಎಂಬ ಪ್ರಶಸ್ತಿಯನ್ನು ಇವರಿಗೆ ದಯಪಾಲಿಸಿದ್ದು ಎಲ್ಲರಿಗೂ ಸಂತೋಷವನ್ನುಂಟುಮಾಡತಕ್ಕ ವಿಷಯವಾಗಿರುತ್ತದೆ.

ಸಂಘದ ಪ್ರಾರಂಭದಿಂದಲೂ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದ ಶ್ರೀಮಾನ್ ಡಿ. ಗುರುರಾವ್, ಬಿ.ಎ., ಬಿ.ಟಿ., ಯವರು ೧೯೩೫ನೆಯ ಇಸವಿಯ ಜೂನ್ ತಿಂಗಳಲ್ಲಿ ವರ್ಗವಾಗಿ ಬೆಂಗಳೂರಿಗೆ ಹೋಗಬೇಕಾಯಿತು. ಶ್ರೀಮಾನ್ ಗುರುರಾಯರು ಹಿರಿಯ ಕರ್ಣಾಟಕ ಸಂಘವಾದ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಥಮ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದವರು. ಇಂತಹ ಅನುಭವಶಾಲಿಗಳ ನೇತೃತ್ವವನ್ನು ಕಳೆದುಕೊಂಡದ್ದರಿಂದ ಸಂಘಕ್ಕೆ ಉಂಟಾಗಿರುವ ನಷ್ಟವನ್ನು ವಿವರಿಸಬೇಕಾದುದಿಲ್ಲ. ಶ್ರೀಮಾನ್ ಗುರುರಾಯರಿಗೆ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಲಿಚ್ಛಿಸುತ್ತೇವೆ.

ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರಿಗೆ ನನ್ನ ವಿಶೇಷ ಕೃತಜ್ಞತೆಯನ್ನು ವ್ಯಕ್ತಪಡಿಸಲು ತಮ್ಮ ಅನುಮತಿಯನ್ನು ಬೇಡುತ್ತೇನೆ. ಸಂಘದ ಪ್ರಾರಂಭದಲ್ಲಿಯೇ ಕೆಲವರು ಮಹನೀಯರು, ಈ ಊರಲ್ಲಿ ಇದುವರೆಗೆ ಎಷ್ಟೋ ಸಂಸ್ಥೆಗಳಾದವು. ಈಗ ಹೆಸರು ಹೇಳಲು ಒಂದಿಲ್ಲ. ಸಂಘವೂ

ಅಷ್ಟೆ: ಹೊಸತರಲ್ಲಿ ನಾಲ್ಕು ದಿವಸ! ಆಮೇಲೆ ಅವರ ಹೆಸರೇ ಇರುವುದಿಲ್ಲ! ಇಷ್ಟಕ್ಕೋಸ್ಕರ ಸಂಘಗಳೇಕೆ? ಎಂದು ಅಪ್ಪಣೆ ಕೊಡಿಸಿದರು. ದೈವಕೃಪೆಯಿಂದ ಈ ಐದು ವರ್ಷಗಳು ಸಂಘದ ಕೆಲಸಗಳು ಸುಸೂತ್ರವಾಗಿ ನಡೆದು ಸಂಸ್ಥೆಯು ಬಾಳಿ ಬದುಕಿರುವುದಾದರೆ ಅದಕ್ಕೆ ಕಾರ್ಯನಿರ್ವಾಹಕ ಮಂಡಲಿಯವರ ಉತ್ಸಾಹವೂ ಒಮ್ಮನಸ್ಸೂ ಕಾರಣ. ಸಮಿತಿಯ ಸದಸ್ಯರು ತಮ್ಮ ವೈಯಕ್ತಿಕವಾದ ಭಿನ್ನಾಭಿಪ್ರಾಯಗಳೇನೆ ಇರಲಿ- ಅವುಗಳನ್ನು ಬದಗಿರಿಸಿ, ಸಂಘದ ಹಿತವನ್ನೇ ಸದಾ ಎತ್ತಿ ಹಿಡಿದು, ಒಬ್ಬ ಮನುಷ್ಯನಂತೆ ಒಮ್ಮನಸ್ಸಿನಿಂದ ಎಲ್ಲ ಕಾರ್ಯಗಳಲ್ಲಿಯೂ-ಸದಸ್ಯರನ್ನು ಸಂಪಾದಿಸುವುದರಲ್ಲಿ, ಸಂಘದ ಅತಿಥಿಗಳನ್ನು ವಿಚಾರಿಸಿಕೊಳ್ಳುವುದರಲ್ಲಿ, ಸಭೆಗಳಿಗೆ ಬೇಕಾದ ಸಿದ್ಧತೆಗಳನ್ನು ಮಾಡುವುದರಲ್ಲಿ, ಸಹಾಯ ನಾಟಕಗಳು ಪ್ರಯೋಜನಕಾರಿಯಾಗುವಂತೆ ನೋಡಿಕೊಳ್ಳುವುದರಲ್ಲಿ, ಕಡೆಗೆ ಗ್ರಂಥ ಪ್ರಕಟನೆಗೆ ಹಣ ಸಾಲದಿರುವ ಸಮಯದಲ್ಲಿ ಅದನ್ನು ಒದಗಿಸಿಕೊಡುವುದರಲ್ಲಿ -ಹೀಗೆ ನೂರಾರು ವಿಧದಲ್ಲಿ ಸಹಕರಿಸಿ ಸಂಘದ ಕಾರ್ಯಗಳು ಯಶಸ್ವಿಯಾಗುವಂತೆ ಮಾಡಿದ್ದಾರೆ. ಈ ಅಪೂರ್ವವಾದ ಸಹಕಾರಕ್ಕಾಗಿ ನಾನು ಸಮಿತಿಯ ಸದಸ್ಯರಿಗೆಲ್ಲ ವಿಶೇಷ ಋಣಿಯಾಗಿದ್ದೇನೆ.

೧೫. ಸಮರ್ಪಣೆ

ಮಹಾಶಯರೇ, ಸಂಘದಿಂದ ನಡೆಸಿರುವ ಕಾರ್ಯಕಲಾಪಗಳನ್ನೆಲ್ಲ ಇದುವರೆಗೆ ವಿವರಿಸಿದ್ದಾಯಿತು. ಇನ್ನು ಕಾರ್ಯನಿರ್ವಾಹಕ ಮಂಡಲಿಯವರ ಅಪ್ಪಣೆಯ ಮೇರೆಗೆ ಈ ಸಂಘವನ್ನು ತಮ್ಮಲ್ಲಿ ಒಪ್ಪಿಸಲು ಅನುಮತಿಯನ್ನು ಬೇಡುತ್ತೇನೆ.

ಇಷ್ಟು ಕಾಲ ತಾವುಗಳು ನಮ್ಮ ಕಾರುಬಾರುಗಳನ್ನು ಸಮಾಧಾನದಿಂದ, ಸಹಾನುಭೂತಿಯಿಂದ ನೋಡಿದ್ದೀರಿ, ನಿಮ್ಮ ಕೈಲಾದ ಮಟ್ಟಿಗೆ ಸಂಘದ ಉದ್ದೇಶ ಸಾಧನೆಗೆ ಸಹಾಯ ಮಾಡಿದ್ದೀರಿ. ಇವುಗಳಿಗಾಗಿ ಕಾರ್ಯನಿರ್ವಾಹಕ ಮಂಡಲಿಯ ನಾವುಗಳೆಲ್ಲರೂ ನಿಮಗೆ ಅತ್ಯಂತ ಕೃತಜ್ಞರಾಗಿದ್ದೇವೆ. ಸಂಘ ಸ್ಥಾಪನೆಯ ಸಮಯದಲ್ಲಿ ಈ ಸಂಘವನ್ನು ಎತ್ತುವುದೂ ಬಿಡುವುದೂ ನಿಮ್ಮ ಕೈಯಲ್ಲಿದೆ ಎಂದು ವಿಜ್ಞಾಪಿಸಿಕೊಂಡಿದ್ದೆವು. ಪುನಃ ಆ ಮಾತುಗಳನ್ನು ಹೇಳಬಯಸುತ್ತೇವೆ. ಸಂಘದ ಪುರೋಭಿವೃದ್ಧಿ ಇದುವರೆಗೆ ತಮಗೆ ಸೇರಿದ್ದಂತೆ ಇನ್ನು ಮುಂದೆಯೂ ಇದಕ್ಕೂ ವಿಶೇಷವಾಗಿ ತಮಗೇ ಸೇರಿದ್ದಾಗಿರುತ್ತದೆ. ಇನ್ನು ಸಂಘವನ್ನು ತಮ್ಮಲ್ಲಿ ಒಪ್ಪಿಸುವ ಮೊದಲು ಸಂಘದ ಸದ್ಯಃ ಸ್ಥಿತಿಯನ್ನೂ ಮುಂದಿನ ಕಾರ್ಯನೀತಿಯನ್ನೂ ಕುರಿತು ಎರಡು ಮಾತುಗಳನ್ನು ಹೇಳಲು ತಮ್ಮಲ್ಲಿ ಅವಕಾಶವನ್ನು ಬೇಡುತ್ತೇನೆ.

೧೬. ಸಂಘದ ಬೆಳವಣಿಗೆ ಮತ್ತು ಸದ್ಯಃ ಸ್ಥಿತಿ

ಸಂಘದ ಕಾರ್ಯಕ್ಷೇತ್ರವು ಹೇಗೆ ವಿಸ್ತಾರವಾಗುತ್ತ ನಡೆದಿದೆಯೆಂಬುದನ್ನು ಈ ಮೊದಲೆ ವಿವರಿಸಿದೆ. ಅದು ಉಪನ್ಯಾಸಾದಿ ಕಾರ್ಯಗಳನ್ನು ಕುರಿತದ್ದಾಯಿತು. ಇನ್ನೊಂದು ದೃಷ್ಟಿಯಿಂದ ಸಂಘದ ಬೆಳವಣಿಗೆಯನ್ನು ವಿವೇಚಿಸತಕ್ಕದ್ದು ಅತ್ಯಾವಶ್ಯಕ. ಇದು ಸಂಘದ ಆದಾಯ ವ್ಯಯಗಳಿಗೆ, ಆರ್ಥಿಕಸ್ಥಿತಿಗೆ ಸಂಬಂಧಪಟ್ಟದ್ದು. ಆರರಿಂದ ಹತ್ತನೆಯ ಅನುಬಂಧಗಳಲ್ಲಿ ಐದು ವರ್ಷಗಳ ಆದಾಯವ್ಯಯಗಳನ್ನು ವರ್ಷವಾರಾಗಿ ನಮೂದಿಸಿದೆ. ಹನ್ನೊಂದನೆಯ ಅನುಬಂಧ-೧, ೨ನೆಯ ವಿಭಾಗಗಳಲ್ಲಿ ಐದು ವರ್ಷಗಳ ಆದಾಯವ್ಯಯಗಳ ಪರಿಳಿತಗಳನ್ನು ತೋರಿಸಿದೆ. ಹನ್ನೆರಡನೆಯ ಅನುಬಂಧದಲ್ಲಿ ಸಂಘದ ಆಸ್ತಿ ಋಣಗಳ ವಿವರವಿದೆ. ಸಂಘವು ಸದ್ಯಕ್ಕೆ ಋಣವನ್ನು ಮೀರಿ ರೂ. ೩,೪೬೩-೬-೫ಗಳ ಆಸ್ತಿಯುಳ್ಳದಾಗಿದೆ.

ಸದಸ್ಯರ ಚಂದಾ, ಸಹಾಯ ದ್ರವ್ಯ, ಸಹಾಯ ನಾಟಕಗಳ ಉತ್ಪತ್ತಿ, ಪುಸ್ತಕ ವ್ಯಾಪಾರ ಮತ್ತು ಗ್ರಂಥ ಪ್ರಕಟನೆಗಳಿಂದ ಬರುವ ಲಾಭ -ಇವು ಸಂಘದ ಆದಾಯಗಳ ಮೂಲ, ಉಪನ್ಯಾಸಾದಿ ಕಾರ್ಯಗಳು, ಪತ್ರವ್ಯವಹಾರಗಳು, ಆಫೀಸು ಖರ್ಚು -ಇತ್ಯಾದಿ ಬಾಬುಗಳು ಖರ್ಚಿನ ಕಾರಣಗಳು, ಆದಾಯದ ಬಾಬುಗಳಲ್ಲಿ ಸಹಾಯ ನಾಟಕಗಳಿಂದ ಸಹಾಯವನ್ನು ಪ್ರತಿ ವರ್ಷವೂ ನಿರೀಕ್ಷಿಸಲಾಗುವುದಿಲ್ಲ. ಕಳೆದ ಎರಡು ವರ್ಷಗಳಲ್ಲಿ ಈ ಬಾಬಿನಿಂದ ಏನೂ ದೊರೆತಿರುವುದಿಲ್ಲ. ಗ್ರಂಥ ಪ್ರಕಟನೆಯಿಂದ ಬರುವ ಉತ್ಪತ್ತಿಯನ್ನು ಹೊಸ ಪ್ರಕಟನೆಗಳಿಗೆ ವಿನಿಯೋಗಿಸಬೇಕಾಗುತ್ತದೆ. ಪುಸ್ತಕ ವ್ಯಾಪಾರದಿಂದ ಬರುವ ಲಾಭವು ಅತ್ಯಲ್ಪ. ಮುಖ್ಯವಾಗಿ ಉಪನ್ಯಾಸಾದಿ ಕಾರ್ಯಗ್ಗಳೂ ಸಂಘದ ನಿತ್ಯದ ಖರ್ಚುಗಳೂ ಸದಸ್ಯರ ಚಂದಾ ಮೊಬಲಗನ್ನು ಅವಲಂಬಿಸಿ ನಡೆಯಬೇಕಾಗಿದೆ. ಆದರೆ ಸದ್ಯದಲ್ಲಿ ದೊರೆಯುತ್ತಿರುವ ಚಂದಾ ಮೊಬಲಗು ಉಪನ್ಯಾಸಾದಿ ಕಾರ್ಯಗಳಿಗೆ ಏನೇನೂ ಸಾಲದೆಂಬುದು ಅನುಬಂಧದ ಅಂಕೆಗಳಿಂದ ಕಾಣುತ್ತಿದೆ. ಇವುಗಳ ಜೊತೆಗೆ ಇನ್ನು ಮುಂದೆ ಸಿಬ್ಬಂದಿಯ ಖರ್ಚೂ ಸೇರಬೇಕಾಗುತ್ತದೆ. ಸಂಘದ ಗುಮಾಸ್ತೆಯ ಕಾರ್ಯಗಳು ವಿಪರೀತವಾಗಿ ಹೆಚ್ಚಿ, ಸಿಬ್ಬಂದಿಯ ಸಹಾಯವಿಲ್ಲದೆ, ಇವುಗಳನ್ನು ನಿರ್ವಹಿಸಿಕೊಂಡು ಹೋಗತಕ್ಕದ್ದು ಅಸಾಧ್ಯವಾಗಿರುತ್ತದೆ. ತಿಂಗಳೊಂದಕ್ಕೆ ಸರಾಸರಿ ಸುಮಾರು ೨೫-೩೦ ಪತ್ರಗಳು ಸಂಘಕ್ಕೆ ಬರುತ್ತವೆ, ಸುಮಾರು ೫೦-೬೦ ಪತ್ರಗಳು ಸಂಘದಿಂದ ಹೊರಗೆ ಹೋಗುತ್ತವೆ.[೧] ಇವಲ್ಲದೆ ಪುಸ್ತಕ ಪ್ರಕಟನ ವ್ಯಾಪಾರಾದಿಗಳಿಗೆ ಸಂಬಂಧಪಟ್ಟಂತೆ ಕೆಲಸಗಳೂ ಬಹಳವಾಗಿ ಹೆಚ್ಚಿವೆ. ಸಿಬ್ಬಂದಿಯು ಅನಿವಾರ್ಯವಾಗಿದೆ. ಒಟ್ಟಿನಲ್ಲಿ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿ ಚಂದಾ ಮೊಬಲಗು ಹೆಚ್ಚಾಗಿ ದೊರೆಯುವಂತೆ ಮಾಡಿ, ಸಂಘದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸದಿದ್ದಲ್ಲಿ ಮುಂದಿನ ಕಾರ್ಯಗಳನ್ನು ಎಂದಿನಂತೆ ನಡೆಸಿಕೊಂಡುಹೋಗುವುದು ಬಹಳ ದುಸ್ತರವಾಗುತ್ತದೆ.

೧೭. ಮುಂದಿನ ಕಾರ್ಯನೀತಿ

ಸಂಘವು ಇದುವರೆಗೆ ನಡೆಸಿಕೊಂಡು ಬಂದಿರುವ ಕಾರ್ಯಗಳನ್ನಲ್ಲದೆ, ಇನ್ನು ಮುಂದೆ ಅವುಗಳ ಜೊತೆಗೆ ಎರಡು ಹೊಸ ಏರ್ಪಾಡುಗಳನ್ನು ಕೈಕೊಳ್ಳಬೇಕಾಗಿ ಇಲ್ಲಿ ಸೂಚಿಸಬಹುದೆ? ಅವು ಯಾವುವೆಂದರೆ- (೧) ಗ್ರಾಮಾಂತರಗಳಲ್ಲಿ ಜ್ಞಾನಪ್ರಕಾಶ (೨) ಕರ್ಣಾಟಕ ಸಂಘಗಳ ಸಂಘಟನೆ.

೧. ಗ್ರಾಮಾಂತರಗಳಲ್ಲಿ ಜ್ಞಾನಪ್ರಚಾರದ ಅವಶ್ಯಕತೆಯನ್ನು ಕುರಿತು ಈ ಮೊದಲೆ ಸೂಚಿಸಿದೆ. ಈಗ ಎಲ್ಲರ ಗಮನವೂ 'ಹಳ್ಳಿಗಳ ಪುನರುದ್ಧಾರದ ಕಡೆಗೆ ತಿರುಗಿರುವುದು ತಮಗೆಲ್ಲಾ ತಿಳಿದೇ ಇರುವುದರಿಂದ ಈ ವಿಷಯವನ್ನು ವಿಸ್ತರಿಸುವುದು ಅನಾವಶ್ಯಕವಾಗಿರುತ್ತದೆ.

೨. ಕೆಲವು ವರ್ಷಗಳ ಹಿಂದೆ ಸಂಘಗಳ ಸಂಖ್ಯೆಯನ್ನು ಬೆರಳುಗಳಲ್ಲಿ ಎಣಿಸಬಹುದಾಗಿತ್ತು. ಈಚೆಗೆ, ಕಳೆದ ಐದು ವರ್ಷಗಳಲ್ಲಿ ಕರ್ಣಾಟಕ ಸಂಘಗಳು ಕನ್ನಡ ದೇಶದ ಮೂಲೆ ಮೂಲೆಯಲ್ಲೂ ಜನ್ಮವೆತ್ತಿರುವುದಲ್ಲದೆ, ಪೂನಾ, ಬೊಂಬಾಯಿ, ಕಾಶಿ ಮುಂತಾದ ಕನ್ನಡ ದೇಶದ ಹೊರಪ್ರಾಂತಗಳಲ್ಲಿಯೂ ಹುಟ್ಟಿರುವುದೂ ಸಂತೋಷದ ಸಂಗತಿ. ಇಂಥ ಸಂಸ್ಥೆಗಳು ಈಗ ೭೦ಕ್ಕೆ ಮೇಲ್ಪಟ್ಟು ಇವೆಯೆಂದು ತಿಳಿದುಬರುತ್ತದೆ. ಈ ಸಂಸ್ಥೆಗಳೆಲ್ಲ ಸ್ವತಂತ್ರವಾಗಿ ತಮಗೆ

---

೧. ಉಪನ್ಯಾಸಾದಿ ಸಾರ್ವಜನಿಕ ಕಾರ್ಯಗಳಿಗೆ ಸ್ಥಳದವರಿಗೆ ಕಳುಹಿಸುವ ಆಹ್ವಾನ ಪತ್ರಗಳು ಈ ಸಂಖ್ಯೆಯಲ್ಲಿ ಸೇರುವುದಿಲ್ಲ.

ತಿಳಿದಂತೆ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿವೆ. ಒಂದು ಸಂಸ್ಥೆಗೂ ಇನ್ನೊಂದು ಸಂಸ್ಥೆಗೂ ಬಳಕೆಯಿಲ್ಲ. ಈ ಸಂಸ್ಥೆಗಳೆಲ್ಲದರ ಗುರಿಯು ಒಂದೇ ಆಗಿರುವುದರಿಂದ, ಇವುಗಳಲ್ಲಿ ಪರಸ್ಪರ ವ್ಯವಹಾರವನ್ನು ಬೆಳಸಿ ಈ ಸಂಸ್ಥೆಗಳನ್ನು ಸಂಘಟನ ಮಾಡುವುದು ಅವಶ್ಯವಲ್ಲವೆ? ಶಿವಮೊಗ್ಗಯ ಸಂಘವು ಈ ವಿಷಯದಲ್ಲಿ ಮುಂದಾಳುತನವನ್ನು ವಹಿಸಬಹುದಾಗಿದೆಯೆಂದು ಸೂಚಿಸಬಹುದೆ?

ಹೀಗೆ ಅಖಿಲ ಕರ್ಣಾಟಕದ ಸಂಘಗಳನ್ನು ಸಂಘಟಿಸುವ ಸೂಚನೆಯನ್ನು ಶೀಘ್ರದಲ್ಲಿ ಕಾರ್ಯರೂಪಕ್ಕೆ ತರುವುದು ಶ್ರಮಸಾಧ್ಯವಾಗಬಹುದು. ಆದರೂ ಇದು ಪರ್ಯಾಲೋಚಿಸಬೇಕಾದ ಮತ್ತು ಸಾಧಿಸಬೇಕಾದ ವಿಷಯವೆಂದು ತೋರುತ್ತದೆ. ಇದೇ ರೀತಿಯಾಗಿ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಮುಖ್ಯ ಸ್ಥಳಗಳಲ್ಲೆಲ್ಲ ಸಂಘಗಳನ್ನು ಸ್ಥಾಪಿಸಿ, ಅವುಗಳನ್ನು ಒಂದು ನೆಲೆಗೆ ತರುವುದು ಈ ಸಂಘದ ಆದ್ಯಕರ್ತವ್ಯವಾಗಿರುತ್ತದೆ. ಸಾಗರ, ತೀರ್ಥಹಳ್ಳಿ, ಶಿರಾಳಕೊಪ್ಪ -ಈ ಸ್ಥಳಗಳಲ್ಲಿ ಕರ್ಣಾಟಕ ಸಂಘಗಳು ಆಗಲೇ ಏರ್ಪಟ್ಟಿವೆ. ಆನವಟ್ಟಿ, ನಗರ ಮುಂತಾದ ಸ್ಥಳಗಳಲ್ಲಿ ಸಂಘಗಳನ್ನು ಏರ್ಪಡಿಸಲು ಜನರು ಕುತೂಹಲಿಗಳಾಗಿದ್ದಾರೆಂದು ತಿಳಿಯುತ್ತದೆ. ಅಂತೂ ಈ ಮಾರ್ಗದಲ್ಲಿ ಶಿವಮೊಗ್ಗೆಯ ಸಂಘವು ಆಸಕ್ತಿ ಅವಶ್ಯವಾಗಿ ತೋರುತ್ತದೆ.

೧೮. ಉಪಸಂಹಾರ

ಮಹಾಶಯರೇ, ಜನತೆಯ ಹಿತವನ್ನೇ ಸದಾ ಗಮನದಲ್ಲಿರಿಸಿ ನಾಡಿನ ಸೇವೆಗೈದು ಕೀರ್ತಿವೆತ್ತು ನೂರು ಕಾಲ ಬಾಳುವಂತೆ ಸರ್ವಶಕ್ತನು ಈ ಸಂಸ್ಥೆಯನ್ನು ಹರಿಸಲಿ. ಇದು ಎಲ್ಲ ಜನಕ್ಕೂ ಸೇರಿದ ಸಂಸ್ಥೆ. ಇಲ್ಲಿ ಎಲ್ಲ ಕ್ಷುದ್ರ ಭೇದಗಳೂ ಅಳಿಯಲಿ. ಸಂಕುಚಿತ ಮನೋಭಾವಗಳು ಈ ಸಂಸ್ಥೆಯಿಂದ ದೂರವಾಗಿರಲಿ. ಸಂಘದ ಉದ್ದೇಶಗಳು ಯಾವಾಗಲೂ ಉನ್ನತವಾಗಿರಲಿ, ಉದಾರವಾಗಿರಲಿ. ನಾಡನ್ನು ತಮಸ್ಸಿನಿಂದ ಜ್ಯೋತಿಗೊಯ್ಯುವುದೇ ಸಂಘದ ಗುರಿಯಾಗಿರಲಿ. ಅವಿದ್ಯಾವಂತರನ್ನು ವಿದ್ಯಾವಂತರನ್ನಾಗಿಯೂ ವಿದ್ಯಾವಂತರನ್ನು ದೇಶಪ್ರೇಮಿಗಳನ್ನಾಗಿಯೂ ಮಾಡಿ, ದೇಶದಲ್ಲಿ ಶಾಂತಿಯನ್ನೂ ಬೆಳಕನ್ನೂ ಹರಡುವುದೇ ಸದಾ ಸಂಘದ ಪರಮೋದ್ದೇಶವಾಗಿರಲೆಂದು ದೇವರನ್ನು ಎಲ್ಲರೂ ಪ್ರಾರ್ಥಿಸೋಣ.

ಸಂಘವನ್ನು ಇನ್ನು ಒಪ್ಪಿಸಿಕೊಳ್ಳಬೇಕಾಗಿ ತಮ್ಮನ್ನು ಬೇಡುತ್ತೇವೆ.

ಕಾರ್ಯನಿರ್ವಾಹ ಮಂಡಲಿಯ
ಅಪ್ಪಣೆಯ ಮೇರೆಗೆ

ಕೂಡಲಿ ಚಿದಂಬರಂ
ಗೌ॥ ಕಾರ್ಯದರ್ಶಿ
ಕರ್ಣಾಟಕ ಸಂಘ, ಶಿವಮೊಗ್ಗ

ಶಿವಮೊಗ್ಗ
ಫೆಬ್ರವರಿ ೭, ೧೯೩೬

೦

ಅನುಬಂಧ-೧

ಮೊದಲನೆಯ ವರ್ಷದ ಕಾರ್ಯಕಲಾಪಗಳು

೧. ೮-೧೧-೩೦ ಪ್ರಾರಂಭೋತ್ಸವ-

ಅಧ್ಯಕ್ಷರು: ಶ್ರೀಮಾನ್ ಕೆ.ವಿ. ಪುಟ್ಟಪ್ಪ, ಎಂ.ಎ.

(೧) ಭಾರತವಾಚನ- ಶ್ರೀಮಾನ್ ಎಸ್.ಜಿ. ಬಿಂದೂರಾಯರು

(೨) ಸಂಘ ಸ್ಥಾಪನೆಯ ಉದ್ದೇಶಗಳು- ಶ್ರೀಮಾನ್ ಕೂಡಲಿ ಚಿದಂಬರಂ, ಬಿ.ಎ., ಎಲ್ಎಲ್.ಬಿ.

(೩) ಶ್ರೀಮಾನ್ ಪುಟ್ಟಪ್ಪನವರು ಪರಿಚಯ- ಶ್ರೀಮಾನ್ ಬಿ.ಆರ್. ಪುಟ್ಟನಂಜಪ್ಪ, ಬಿ.ಎ.

(೪) ಶ್ರೀಮಾನ್ ಪುಟ್ಟಪ್ಪನವರ ಅಧ್ಯಕ್ಷ ಭಾಷಣ

೨. ೧೦-೧೧-೩೦ ಕವಿತಾವಾಚನ-

ಕವಿಗಳು: ಶ್ರೀಮಾನ್ ಕೆ.ವಿ. ಪುಟ್ಟಪ್ಪ, ಎಂ.ಎ.

೩. ೨೧-೧೧-೩೦ 'ಮೇಘ ಸಂದೇಶ' -

ಉಪನ್ಯಾಸಕರು: ವೇ।। ಬ್ರ।। ಶ್ರೀ।। ಪಂಡಿತ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು

'ಕನ್ನಡ ಮೇಘ ಸಂದೇಶ'ದ ವಾಚನ-

ಶ್ರೀಮಾನ್ ಡಿ. ಗುರುರಾವ್, ಬಿ.ಎ., ಬಿ.ಟಿ.

೪. ೪-೧೨-೩೦ ಶ್ರೀ ಗುರು ಸಮರ್ಥ ನಾಟಕಮಂಡಲಿಯವರ ಸಹಾಯ ನಾಟಕ-

ಅಧ್ಯಕ್ಷರು: ಜಿ. ರುದ್ರಪ್ಪ, ಎಂ.ಎ. (Oxon.), ಬಾರ್ ಅಟ್-ಲಾ, ಶಿವಮೊಗ್ಗಾ ಡಿ।। ಡೆಪ್ಯುಟಿ ಕಮಿಷನರು.

೫. ೯-೧-೩೧ ವಿಮರ್ಶೆಯ ಅವಶ್ಯಕತೆ-

ಉಪನ್ಯಾಸಕರು: ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

೬. ೧೬-೧-೩೧ ಹರಿಹರ 'ಬಸವರಾಜ ದೇವರ ರಗಳೆ'-

ಉಪನಾಸ್ಯಕರು: ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯ, ಎಂ.ಎ.

ಅಧ್ಯಕ್ಷರು: ಶ್ರೀಮಾನ್ ಬಿ.ಎನ್. ರಾಘವಯ್ಯ, ಬಿ.ಎ., ಬಿ.ಎಲ್.

೭. ೨೪-೧-೩೧ ಭಾರತ ವಾಚನ-

ಗಮಕಿಗಳು: ಶ್ರೀಮಾನ್ ಕೆ. ಕೃಷ್ಣರಾಯರು

೮. ೧೯-೨-೩೧ ಕವಿತಾವಾಚನ-

ಕವಿಗಳು: ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

ಅಧ್ಯಕ್ಷರು: ಡಿ ಮತ್ತು ಸೆ. ಜಡ್ಜ್, ಬಿ.ಆರ್. ಕೃಷ್ಣಮಾಚಾರ್, ಬಿ.ಎ., ಬಿ.ಎಲ್.

೯. ೨೩-೨-೩೧ ಕರ್ಣಾಟಕ ಸಂಸ್ಕೃತಿಯೂ ಕನ್ನಡ ಭಾಷೆಯೂ-

ಉಪನ್ಯಾಸಕರು: ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

ಅಧ್ಯಕ್ಷರು: ಡಿ. ಮತ್ತು ಸೆ. ಜಡ್ಜ್, ಬಿ.ಆರ್. ಕೃಷ್ಣಕುಮಾರ್, ಬಿ.ಎ., ಬಿ.ಎಲ್.

೧೦. ೫-೩-೩೧ ಶ್ರೀ ಚಂದ್ರಮೌಳೀಶ್ವರ ನಾಟಕ ಸಭೆಯವರ ಸಹಾಯ ನಾಟಕ

೧೧. ೨೦-೩-೩೧ ಭಾರತವಾಚನ-

ಗಮಕಿಗಳು: ಶ್ರೀಮಾನ್ ಎನ್. ಗುಂಡಪ್ಪನವರು

೧೨. ೮-೪-೩೧ ಮತ್ತು ೧೩. ೯-೪-೩೧ ಸಂಗೀತ-

ಗೊಟ್ಟುವಾದ್ಯವಾದನ: ಶ್ರೀಮಾನ್ ಗೊಟ್ಟುವಾದ್ಯಂ ನಾರಾಯಣಯ್ಯಂಗಾರರು

ಅಧ್ಯಕ್ಷರು: ಡಿ. ಮತ್ತು ಸೆ. ಜಡ್ಜ್, ಬಿ.ಆರ್. ಕೃಷ್ಣಮಾಚಾರ್, ಬಿ.ಎ., ಬಿ.ಎಲ್.

೧೪. ೫-೬-೩೧ ನಾಟಕಾಭಿನಯ-

'ಹೋಂ ರೂಲು' ಮತ್ತು 'ಯಮನ ಸೋಲು'

೧೫. ೩೧-೮-೩೧ ಕುಮಾರ ವ್ಯಾಸನ ಶೈಲಿ-

ಉಪನ್ಯಾಸಕರು: ವೇ॥ ಬ್ರ॥ ಶ್ರೀ॥ ಪಂಡಿತ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು

೧೬. ೬-೧೦-೩೧ (೧) ಕುಮಾರವ್ಯಾಸ-

ಉಪನ್ಯಾಸಕರು: ಶ್ರೀಮಾನ್ ಹೆಚ್. ಶ್ರೀನಿವಾಸರಾವ್, ಬಿ.ಎ., ಬಿ.ಎಲ್.

ಅಧ್ಯಕ್ಷರು: ವೇ॥ ಬ್ರ॥ ಶ್ರೀ॥ ಪಂಡಿತ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು

(೨) ಆಸ್ಥಾನ ವಿದ್ವಾನ್ ಪಿ.ಆರ್. ಕರಿಸಬಸವಶಾಸ್ತ್ರಿಗಳು ಸ್ವರ್ಗಸ್ಥರಾದ ನಿಮಿತ್ತ ದುಃಖಸೂಚಕ ಸಭೆ-

ಉಪನ್ಯಾಸಕರು: ವೇ॥ ಬ್ರ॥ ಶ್ರೀ॥ ಪಂಡಿತ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು

೧೭. ೨೨-೧೧-೩೧ **ಮೊದಲನೆಯ ವಾರ್ಷಿಕೋತ್ಸವ-**

ಅಧ್ಯಕ್ಷರು: ಶ್ರೀಮಾನ್ ಎಂ.ಆರ್. ಶ್ರೀನಿವಾಸಮೂರ್ತಿ, ಬಿ.ಎ.

(೧) ಭಾರತವಾಚನ- ಶ್ರೀಮಾನ್ ಟಿ. ಪ್ರಾಣೇಶಾಚಾರ್, ಬಿ.ಎಸ್‌ಸಿ.

(೨) ಕಾವ್ಯಾವಾಚನ: 'ನಾಗರಿಕ' ಗ್ರಂಥದಿಂದ- ಶ್ರೀಮಾನ್ ಬಿ.ಆರ್. ಪುಟ್ಟನಂಜಪ್ಪ, ಬಿ.ಎ.

(೩) 'ಕನ್ನಡ ಮೇಘ ಸಂದೇಶ'ದ ವಾಚನ- ಶ್ರೀಮಾನ್ ಡಿ. ಗುರುರಾವ್, ಬಿ.ಎ., ಬಿ.ಟಿ.

(೪) ಜನಪದ ಸಾಹಿತ್ಯ ವಾಚನ- ಶ್ರೀಮಾನ್ ಡಿ. ಗುರುರಾವ್, ಬಿ.ಎ., ಬಿ.ಟಿ.

(೫) ವಾರ್ಷಿಕ ವರದಿ- ಶ್ರೀಮಾನ್ ಕೂಡಲಿ ಚಿದಂಬರಂ, ಬಿ.ಎ., ಎಲ್‌ಎಲ್.ಬಿ.

(೬) ಅಧ್ಯಕ್ಷರ ಭಾಷಣ

ಅನುಬಂಧ-೨

ಎರಡನೆಯ ವರ್ಷದ ಕಾರ್ಯಕಲಾಪಗಳು

೧. ೨೩-೧೧-೩೧ 'ಭಕ್ತಿಭಂಡಾರಿ ಬಸವಣ್ಣನವರು'-

ಉಪನ್ಯಾಸಕರು: ಶ್ರೀಮಾನ್ ಎಂ.ಆರ್. ಶ್ರೀನಿವಾಸಮೂರ್ತಿ, ಬಿ.ಎ.

೨. ೪-೧-೩೨[1] ಕಾವ್ಯವಾಚನ-

ವಾಚಕರು: ಶ್ರೀಮಾನ್ ವಿ. ಸೀತಾರಾಮಯ್ಯ, ಎಂ.ಎ.

೩. ೩೧-೧-೩೨ 'ಭಗವದ್ಗೀತೆ'-

ಉಪನ್ಯಾಸಕರು: ಶ್ರೀಮಾನ್ ವೆಂಬಾರ್ ಶ್ರೀನಿವಾಸಾಚಾರ್, ಬಿ.ಎ.

ಅಧ್ಯಕ್ಷರು: ಶ್ರೀಮಾನ್ ಬಿ. ನಾಗೇಶರಾವ್, ಎಂ.ಎ.

೪. ೮-೨-೩೨ ಪುರಂದರದಾಸರ ಜನ್ಮದಿನಾಚರಣೆ-

(೧) ಭಾಷಣ (ಪುರಂದರದಾಸರ ವ್ಯಕ್ತಿತ್ವ) - ಶ್ರೀಮಾನ್ ಬಿ. ನಾಗೇಶರಾವ್ ಎಂ.ಎ.

(೨) ಪುರಂದರದಾಸರ ಕೃತಿಗಳ ಗಾಯನ- ಶ್ರೀಮತಿ ಗಂಗಾಬಾಯಿ

೫. ೧೮-೨-೩೨ ಕವಿತಾವಾಚನ: 'ಚೆಲುವು' ಎಂಬ ಕವನ ಸಂಗ್ರಹದಿಂದ-

ಕವಿಗಳು: ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

---

೧. ಗಾಂಧೀಜಿಯವರ ದಸ್ತಗಿರಿಯ ಪ್ರಯುಕ್ತ ಸಭೆಯು ನಡೆಯಲಿಲ್ಲ.

೬. ೨೭-೩-೩೨ ಪುರಾತನ ಸಾಹಿತ್ಯವೂ ಆಧುನಿಕ ಅಭಿರುಚಿಯೂ-

ಉಪನ್ಯಾಸಕರು: ಶ್ರೀಮಾನ್ ಎಸ್. ವಿಷ್ಣುಭಟ್ಟ, ಬಿ.ಎ., ಎಲ್‌ಎಲ್.ಬಿ.

೭. ೯-೪-೩೨ ಶ್ರೀ ಅಂಬಾಪ್ರಸಾದಿಕ ನಾಟಕಮಂಡಲಿಯವರ ಸಹಾಯಾರ್ಥ ನಾಟಕ.

೮. ೧೭-೪-೩೨ ನಾಟಕವಾಚನ : 'ಶ್ಮಶಾನ ಕುರುಕ್ಷೇತ್ರ'-

ಕವಿಗಳು: ಕೆ.ವಿ. ಪುಟ್ಟಪ್ಪ, ಎಂ.ಎ.

೯-೧೧. ೨೦-೪-೩೨ ರಿಂದ ೨೨-೪-೩೨ರ ವರೆಗೆ (ಮೂರು ದಿವಸಗಳು)

ನಾಟಕಾಭಿನಯ- ವಿಶ್ವವಿದ್ಯಾನಿಲಯ ಕಲಾಸಂಘದ ನಟರಿಂದ-

(೧) ಶಿವಮೊಗ್ಗೆಯಲ್ಲಿ:

(i) ೨೦-೪-೩೨ 'ಯಮನ ಸೋಲು' ಮತ್ತು 'ಆಷಾಢ ಭೂತಿ'

(ii) ೨೧-೪-೩೨ 'ಹೋಂ ರೂಲು' ಮತ್ತು 'ಸಾವಿನ ಸಮಸ್ಯೆ'.

(೨) ಚಿಕ್ಕಮಗಳೂರಿನಲ್ಲಿ

೨೨-೪-೩೨ 'ಆಷಾಢ ಭೂತಿ' ಮತ್ತು 'ಹೋಂ ರೂಲು'

೧೨. ೫-೫-೩೨ ಆಧುನಿಕ ಕವನಪಠನ-

ವಾಚಕರು: ಶ್ರೀಮಾನ್ ಎ.ಸಿ. ನರಸಿಂಹಮೂರ್ತಿ, ಬಿ.ಆರ್. ಪುಟ್ಟನಂಜಪ್ಪ, ಬಿ.ಎ., ಡಿ. ಗುರುರಾವ್, ಬಿ.ಎ., ಬಿ.ಟಿ., ಎಸ್.ವಿ. ಕೃಷ್ಣಮೂರ್ತಿರಾವ್, ಬಿ.ಎಸ್‌ಸಿ., ಎಲ್‌ಎಲ್.ಬಿ.

ಅಧ್ಯಕ್ಷರು: ಶ್ರೀಮಾನ್ ಎ.ಎನ್. ಮೂರ್ತಿರಾವ್, ಎಂ.ಎ

೧೩. ೬-೫-೩೨ ಆಧುನಿಕ ಕನ್ನಡ ಸಾಹಿತ್ಯ-

ಉಪನ್ಯಾಸಕರು: ಶ್ರೀಮಾನ್ ಎ.ಎನ್. ಮೂರ್ತಿರಾವ್, ಎಂ.ಎ.

೧೪. ೧೬-೫-೩೨ 'ಪ್ರಬೋಧ' ಮಾಸಪತ್ರಿಕೆಯ ಸಂಪಾದಕರಾದ ಶ್ರೀಮಾನ್ ಬಿ.ಸಿ.ಎಸ್. ಶರ್ಮ, ಎಂ.ಎ., ಅವರ ನಿಧನ ನಿಮಿತ್ತ ದುಃಖಸೂಚಕ ಸಭೆ.

೧೫. ೧೭-೬-೩೨ ಕಾವ್ಯವಾಚನ : 'ಹರಿಶ್ಚಂದ್ರ ಕಾವ್ಯ'-

ವಾಚಕರು: ಶ್ರೀಮಾನ್ ಕೆ.ವಿ. ಪುಟ್ಟಪ್ಪ, ಎಂ.ಎ.

೧೬. ೨೩-೯-೩೨ 'ಶ್ರೀಮದ್ಭಗವದ್ಗೀತೆ'-

ಉಪನ್ಯಾಸಕರು: ಶ್ರೀಮಾನ್ ಪೌರಾಣಿಕರತ್ನಂ ಹೊಳವನ ಹಳ್ಳಿ ಶೇಷಾಚಾರ್ಯರು

೧೭. ೭-೧೧-೩೨ ಆರ್ಥಿಕ ಸಮಸ್ಯೆ-
ಉಪನ್ಯಾಸಕರು: ಶ್ರೀಮಾನ್ ಎ. ಶೇಷ ಅಯ್ಯಂಗಾರ್, ಎಂ.ಎ.

೧೮. ೧೯-೧೧-೩೨ **ದ್ವಿತೀಯ ವಾರ್ಷಿಕೋತ್ಸವ-**
ಅಧ್ಯಕ್ಷರು: ಶ್ರೀಮಾನ್ ಎ.ಆರ್. ಕೃಷ್ಣಶಾಸ್ತ್ರೀ, ಎಂ.ಎ.

(೧) ಕಾವ್ಯಪಠನ:

(i) ಆಧುನಿಕ ಕವನಗಳಲ್ಲಿ ಕೆಲವು- ಶ್ರೀಮಾನ್ ಹರಿ ನಾರಾಯಣ್, ಬಿ.ಎಸ್‌ಸಿ.

(i) 'ರಕ್ತಾಕ್ಷಿ' (ಕೆಲವು ಭಾಗ)- ಶ್ರೀಮಾನ್ ಬಿ.ಆರ್. ಪುಟ್ಟನಂಜಪ್ಪ. ಬಿ.ಎ.

(೨) ವಾರ್ಷಿಕ ವರದಿ- ಶ್ರೀಮಾನ್ ಕೂಡಲಿ ಚಿದಂಬರಂ, ಬಿ.ಎ., ಎಲ್‌ಎಲ್.ಬಿ.

(೩) ಅಧ್ಯಕ್ಷರ ಭಾಷಣ

(೪) ನಾಟಕಾಭಿನಯ- 'ಗಂಡುಗೊಡಲಿ' : ಗೌರ್ನಮೆಂಟ್ ಹೈಸ್ಕೂಲು ವಿದ್ಯಾರ್ಥಿಗಳಿಂದ

ಅನುಬಂಧ-೩

ಮೂರನೆಯ ವರ್ಷದ ಕಾರ್ಯಕಲಾಪಗಳು

೧. ೨೦-೧೧-೩೨ ಬೆಳಗ್ಗೆ : ಭಾಸನ ಏಕಾಂಕ ನಾಟಕಗಳು-
ಉಪನ್ಯಾಸಕರು: ಶ್ರೀಮಾನ್ ಎ.ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨. " ಸಂಜೆ : ಕವಿತಾವಾಚನ-
ಕವಿಗಳು: ಶ್ರೀಮಾನ್ ಜಿ.ಪಿ. ರಾಜರತ್ನಂ, ಎಂ.ಎ.
ಅಧ್ಯಕ್ಷರು: ಶ್ರೀಮಾನ್ ಎ.ಆರ್. ಕೃಷ್ಣಶಾಸ್ತ್ರೀ, ಎಂ.ಎ.

೩. ೨೨-೧೨-೩೨ ಪರಿಣಾಮವಾದವೂ ನೀತಿಶಾಸ್ತ್ರವೂ (Evolution and Ethics)-
ಉಪನ್ಯಾಸಕರು: ಶ್ರೀಮಾನ್ ಕೆ. ಅನಂತರಾಮಯ್ಯ, ಎಂ.ಎ.

೪. ೨೯-೧-೩೩ 'ಶ್ರೀ ಶಾರದಾ ಶೀಘ್ರಲಿಪಿ' ಎಂಬ 'ಕನ್ನಡ ನುಡಿಹಿಡಿ'-
ಉಪನ್ಯಾಸಕರು: ಶ್ರೀಮಾನ್ ಕೆ. ಅನಂತಸುಬ್ಬರಾಯರು

೫. ೧೩-೨-೩೩ ಸಾಹಿತ್ಯ ವಿಮರ್ಶೆ-
ಉಪನ್ಯಾಸಕರು: ಶ್ರೀಮಾನ್ ಪಾಂಡೇಶ್ವರ ಗಣಪತಿರಾವ್, ಬಿ.ಎ.

೬. ೩-೩-೩೩ ಒಟ್ಟಾವಾ ಸಮ್ಮೇಳನ[೧]-
ಉಪನ್ಯಾಸಕರು: ಶ್ರೀಮಾನ್ ಎ. ಶೇಷ ಅಯ್ಯಂಗಾರ್, ಎಂ.ಎ.

---

೧. ಈ ಸಭೆಯು ನಡೆಯಲಿಲ್ಲ.

೭-೧೧ ೨೯-೩-೩೩ ರಿಂದ ೨-೪-೩೩ರ ವರೆಗೆ (ಐದು ದಿನಗಳು)

'ಶ್ರೀಮದ್ರಾಮಾಯಣ'-

ಉಪನ್ಯಾಸಕರು: ಶ್ರೀಮಾನ್ ಮೈಲಾರ ಜೋಯಿಸರು

೧೨. ೨೮-೪-೩೩ ಸಂಗೀತ ಕಛೇರಿ-

ಆಸ್ಥಾನ ಸಂಗೀತ ಮಹಾ ವಿದ್ವಾನ್ ಶ್ರೀಮಾನ್ ಬಿ. ದೇವೇಂದ್ರಪ್ಪನವರು

೧೩. ೪-೫-೩೩ ಶ್ರೀ ಚಾಮುಂಡೇಶ್ವರೀ ನಾಟಕ ಸಭೆಯ ಸಹಾಯ ನಾಟಕ.

೧೪. ೨೮-೫-೩೩ ಕವನಪಠನ[೧]-

ಕವಿಗಳು: ಶ್ರೀಮಾನ್ ಕೆ.ವಿ. ಪುಟ್ಟಪ್ಪ, ಎಂ.ಎ.

೧೫. ೧೭-೬-೩೩ ಸ್ವಪ್ನಗಳು[೧]-

ಉಪನ್ಯಾಸಕರು: ಶ್ರೀಮಾನ್ ಎನ್.ಎಸ್. ನಾರಾಯಣಶಾಸ್ತ್ರಿ, ಎಂ.ಎ.

೧೬. ೨೮-೭-೩೩ ವ್ಯವಹಾರದಲ್ಲಿ ವೇದಾಂತದ ಪ್ರಯೋಜನ-

ಉಪನ್ಯಾಸಕರು: ವೇ॥ ಬ್ರ॥ ಶ್ರೀ॥ ವೇದಾಂತ ಶಿರೋಮಣಿ ವಿಠ್ಠಲ ಶಾಸ್ತ್ರಿಗಳು

೧೭. ೧೫-೮-೩೩ ಭಾರತವಾಚನ-

ಗಮಕಿಗಳು: ಶ್ರೀಮಾನ್ ಎಸ್.ಜಿ. ಬಿಂದೂರಾಯರು

೧೮. ೧೮-೯-೩೩ ಹಾಸ್ಯರಸ-

ಉಪನ್ಯಾಸಕರು: ಶ್ರೀಮಾನ್ ಜಿ.ಟಿ. ನಾರಾಯಣ ಅಯ್ಯಂಗಾರ್, ಎಂ.ಎ.

೧೯. ೯-೧೧-೩೩ ಕಾವ್ಯವಾಚನ ಸ್ಪರ್ಧೆ-

ಮಿಡಲ್ ಸ್ಕೂಲ್ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದು-

ಮೊದಲನೆಯ ಬಹುಮಾನ: ಐ.ಎಸ್. ರಾಮಪ್ಪ, ೪ನೆಯ ತರಗತಿ ವಿದ್ಯಾರ್ಥಿ. (ಶ್ರೀಮಾನ್ ಎ.ಆರ್. ಕೃಷ್ಣಶಾಸ್ತ್ರಿಗಳ ಬಹುಮಾನ).

ಎರಡನೆಯ ಬಹುಮಾನ: ಎನ್.ಸಿ. ಶ್ಯಾಮಣ್ಣ, ೨ನೆಯ ತರಗತಿ ವಿದ್ಯಾರ್ಥಿ. ಎಸ್. ವಾಸುದೇವರಾವ್. ೧ನೆಯ ತರಗತಿ ವಿದ್ಯಾರ್ಥಿ. (ಸಂಘದ ಬಹುಮಾನಗಳು.)

೩೦. ೧೧-೧೧-೧೩ **ಮೂರನೆಯ ವಾರ್ಷಿಕೋತ್ಸವ–**

ಅಧ್ಯಕ್ಷರು: ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

---

೧. ಈ ಸಭೆಯು ನಡೆಯಲಿಲ್ಲ.

(೧) ಕವಿತಾವಾಚನ-ಶಿವಮೊಗ್ಗೆಯ ಸೋದರ ಸಂಘದವರು

(೨) ಕಾವ್ಯವಾಚನ-

(i) ಆಧುನಿಕ ಕವಿತೆಗಳು

(ii) 'ಹರಿಶ್ಚಂದ್ರಕಾವ್ಯ'

ಶ್ರೀಮಾನ್ ಕೆ.ಜಿ. ಸಂಪತ್ಕುಮಾರಾಚಾರ್, ಬಿ.ಎ., ಬಿ.ಟಿ.

(೩) ವಾರ್ಷಿಕ ವರದಿ- ಶ್ರೀಮಾನ್ ಕೂಡಲಿ ಚಿದಂಬರಂ, ಬಿ.ಎ., ಎಲ್‌ಎಲ್.ಬಿ.

(೪) ಕಾವ್ಯವಾಚನ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನ ವಿನಿಯೋಗ.

(೫) ಅಧ್ಯಕ್ಷರ ಭಾಷಣ.

ಅನುಬಂಧ-೪

ನಾಲ್ಕನೆಯ ವರ್ಷದ ಕಾರ್ಯಕಲಾಪಗಳು

೧. ೧೧-೧೧-೩೩ ಬೆಳಗ್ಗೆ : 'ಜನ್ನನ ಯಶೋಧರ ಚರಿತೆ'-
ಉಪನ್ಯಾಸಕರು: ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

೨. " ಸಂಜೆ : 'ಕನ್ನಡ ಭಾರತ' ಮತ್ತು 'ಜೈಮಿನಿ ಭಾರತ'ಗಳ ವಾಚನ-
ಗಮಕಿಗಳು: ಶ್ರೀಮಾನ್ ಕೆ.ಜಿ. ಸಂಪತ್ಕುಮಾರಾಚಾರ್, ಬಿ.ಎ., ಬಿ.ಟಿ.

೩. ೨೭-೧೧-೩೩ ಗೀತಾ ಜಯಂತ್ಯುತ್ಸವ-
ಉಪನ್ಯಾಸಕರು: ವೇ॥ ಬ್ರ॥ ಶ್ರೀ॥ ವೇದಾಂತ ಶಿರೋಮಣಿ ವಿಠ್ಠಲ ಶಾಸ್ತ್ರಿಗಳು

೪-೧೦. ೨೩-೧೨-೩೩ ರಿಂದ ೩೦-೧೨-೩೩ರ ವರೆಗೆ

ಉಪನ್ಯಾಸ ಸಪ್ತಾಹ-

ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದವರು.

ವಿವರ

೨೩-೧೨-೧೯೩೩

೧. ಪ್ರಥಮ ಪರಿಚಯ-
ಆಸ್ಥಾನ ಮಹಾ ವಿದ್ವಾನ್ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು

೨. ಉಪಕ್ರಮ ಭಾಷಣ-
ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯ, ಎಂ.ಎ.

೩. ವಿಜ್ಞಾನವೆಂದರೇನು?-
ಶ್ರೀಮಾನ್ ಜಿ. ಹನುಮಂತರಾವ್, ಎಂ.ಎ.

೪. ಭಾರತವಾಚನ-
ಶ್ರೀಮಾನ್ ಕೆ. ಕೃಷ್ಣರಾಯರು

೨೪-೧೨-೧೯೩೩

೧. 'ಅಶೋಕ'-
ಶ್ರೀಮಾನ್ ಎನ್. ಕಸ್ತೂರಿ, ಎಂ.ಎ., ಬಿ.ಎಲ್.

೨. ನಾವು ಆಡುವ ಮಾತು-
ಶ್ರೀಮಾನ್ ಟಿ.ಎನ್. ಶ್ರೀಕಂಠಯ್ಯ, ಎಂ.ಎ.

೩. ಹೊಸಗನ್ನಡ ಪದ್ಯವಾಚನ-
ಶ್ರೀಮಾನ್ ಎ.ಎನ್. ಮೂರ್ತಿರಾವ್, ಎಂ.ಎ., ಎನ್. ಶಿವರಾಮಶಾಸ್ತ್ರಿ, ಎಂ.ಎ.

೨೫-೧೨-೧೯೩೩

೧. 'ಪಂಪಭಾರತ ಕರ್ಣ'-
ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯ, ಎಂ.ಎ.

೨. ಜೀವನದ ಪುರುಷಾರ್ಥಗಳು-
ಶ್ರೀಮಾನ್ ಕೆ.ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ.

೩. ಸ್ಥಳೀಯ ಪ್ರಜಾ ಸರ್ಕಾರ-
ಶ್ರೀಮಾನ್ ಬಿ.ಆರ್. ಸುಬ್ಬರಾವ್, ಎಂ.ಎ.

೪. ಸಂಸ್ಕೃತ ಪದ್ಯವಾಚನ-
ಶ್ರೀಮಾನ್ ಎನ್. ಶಿವರಾಮಶಾಸ್ತ್ರಿ, ಎಂ.ಎ.

೨೬-೧೨-೧೯೩೩[೧]

ಬೆಳಗ್ಗೆ : ಮನಶ್ಶಾಸ್ತ್ರದ ಕೆಲವು ಪ್ರಯೋಗಗಳು-
ಎನ್.ಎಸ್. ನಾರಾಯಣಶಾಸ್ತ್ರಿ, ಎಂ.ಎ.

ಸಂಜೆ : ೧. ಸಾಹಿತ್ಯದ ಒರೆಗಲ್ಲು-
ಶ್ರೀಮಾನ್ ಎಸ್.ವಿ. ರಂಗಣ್ಣ, ಎಂ.ಎ.

೨. ಹಳ್ಳಿಯ ಹಾಡುಗಳು-
ಶ್ರೀಮಾನ್ ಟಿ.ಎನ್. ಶ್ರೀಕಂಠಯ್ಯ, ಎಂ.ಎ.

---

೧. ೨೬-೧೨-೧೯೩೩ನೆಯ ಬೆಳಗ್ಗೆ- ತೀರ್ಥಹಳ್ಳಿಯಲ್ಲಿ ಭಾಷಣ ವಾಚನಗಳೂ ೨೭-೧೨-೧೯೩೩ನೆಯ ಸಂಜೆ- ಸಾಗರದಲ್ಲಿ ಕರ್ಣಾಟಕ ಸಂಘದ ಸ್ಥಾಪನಾ ಮಹೋತ್ಸವವೂ ಅಧ್ಯಾಪಕ ವರ್ಗದವರಿಂದ ನಡೆಸಲ್ಪಟ್ಟವು.

೩. ಸಸ್ಯ ರಚನೆ-

ಶ್ರೀಮಾನ್ ಎಲ್. ನಾರಾಯಣರಾವ್, ಎಂ.ಎಸ್‌ಸಿ.

೪. ರಕ್ತ ಸಂಯೋಜನೆ-

ಶ್ರೀಮಾನ್ ಪಿ. ಕೃಷ್ಣರಾವ್, ಬಿಎಸ್‌ಸಿ., ಎಂ.ಬಿ., ಬಿ.ಎಸ್., ಡಿ.ಟಿ. ಎಂ. ಅಂಡ್ ಎಚ್.

೨೮-೧೨-೧೯೩೩

೧. ಭಾಷಣ-

ಡಾ॥ ಇ.ಪಿ. ಮೆಟ್ಕಾಫ್, ಡಿ.ಎಸ್‌ಸಿ., ಎಫ್.ಇನ್‌ಸ್ಟ್.ಪಿ.

೨. ವಿಜ್ಞಾನವು ಮತಕ್ಕೆ ವಿರೋಧಿಸಿಯೇ?-

ಶ್ರೀಮಾನ್ ಜಿ. ಹನುಮಂತರಾವ್, ಎಂ.ಎ.

೩. ಹೊಸಗನ್ನಡ ಗದ್ಯ-

ಶ್ರೀಮಾನ್ ಎ.ಎನ್. ಮೂರ್ತಿರಾವ್, ಎಂ.ಎ.

೪. ಶಿಶುಗಳ ಆಹಾರ-

ಶ್ರೀಮಾನ್ ಕೆ. ಸುಂದರೇಶನ್, ಎಲ್.ಎಂ. ಅಂಡ್ ಎಸ್.

೨೯-೧೨-೧೯೩೩

೧. ಮನಸ್ಸಿನ ವಿಭಜನೆ-

ಶ್ರೀಮಾನ್ ಎನ್.ಎಸ್. ನಾರಾಯಣಶಾಸ್ತ್ರಿ, ಎಂ.ಎ.

೨. ಉಪನಿಷತ್ತುಗಳು-

ಶ್ರೀಮಾನ್ ಎನ್. ಶಿವರಾಮಶಾಸ್ತ್ರಿ, ಎಂ.ಎ.

೩. ಹಣಕಾಸಿನ ಮುಗ್ಗಟ್ಟು-

ಶ್ರೀಮಾನ್ ಬಿ.ಆರ್. ಸುಬ್ಬರಾವ್, ಎಂ.ಎ.

೪. ಶಬ್ದದ ಅಳತೆ ಮತ್ತು ಅದರ ಪ್ರಯೋಜನ-

ಶ್ರೀಮಾನ್ ಪಿ. ಶ್ರೀನಿವಾಸರಾವ್, ಎಂ.ಎಸ್‌ಸಿ

೩೦-೧೨-೧೯೩೩

೧. ಭಾರತ ವಾಚನ-

ಶ್ರೀಮಾನ್ ಕೆ. ಕೃಷ್ಣರಾಯರು

೨. ವಿಶಾಲಭಾರತ-

ಶ್ರೀಮಾನ್ ಎನ್. ಕಸ್ತೂರಿ, ಎಂ.ಎ., ಬಿ.ಎಲ್.

೩. ಸಮಾಪ್ತಿ ಭಾಷಣ-

ಮಿ॥ ಜೆ.ಸಿ. ರಾಲೊ, ಎಂ.ಎ., ಜೆ.ಪಿ.

೧೧. ೩-೨-೩೪ ಭಾರತವಾಚನ-

ಗಮಕಿಗಳು: ಶ್ರೀಮಾನ್ ಕೆ. ಕೃಷ್ಣರಾಯರು

೧೨. ೨೬-೨-೩೪ ಕವಿತಾವಾಚನ-

ಕವಿಗಳು: ಶ್ರೀಮಾನ್ ಪು.ತಿ. ನರಸಿಂಹಾಚಾರ್, ಬಿ.ಎ.

೧೩. ೧೦-೪-೩೪ ಕವಿತಾವಾಚನ: 'ಪಾಂಚಜನ್ಯ' ಮತ್ತು 'ನವಿಲು'-

ಕವಿಗಳು: ಕೆ.ವಿ. ಪುಟ್ಟಪ್ಪ, ಎಂ.ಎ.

೧೪. ೨೭-೬-೩೪ ತ್ರಿಮತ ವೇದಾಂತ-

ಉಪನ್ಯಾಸಕರು: ಹೆಚ್. ಸುಂದರಾಚಾರ್ಯರು

೧೫-೧೭. **ಮೊದಲನೆಯ ವ್ಯಾಖ್ಯಾನಮಾಲೆ-**

ತಾ. ೨೩-೮-೩೪ ರಿಂದ ೨೫-೮-೩೪ರ ವರೆಗೆ

(ಮೂರು ದಿವಸಗಳು)

ಕನ್ನಡ ಜೈನ ಸಾಹಿತ್ಯ-

ಉಪನ್ಯಾಸಕರು: ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

ವಿವರ

೨೩-೮-೩೪ ಜೈನಧರ್ಮದ ಸ್ವರೂಪ.

೨೪-೮-೩೪ ಪಂಪನ 'ಆದಿಪುರಾಣ'.

೨೫-೮-೩೪ 'ಪಂಪ ಭಾರತ' ಮತ್ತು 'ಪಂಪ ರಾಮಾಯಣ'

೧೮. ೧೧-೧೧-೩೪ ಬೆಳಗ್ಗೆ : ರಾಘವಾಂಕನ 'ಹರಿಶ್ಚಂದ್ರ ಕಾವ್ಯ'-

ಉಪನ್ಯಾಸಕರು: ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

ಅಧ್ಯಕ್ಷರು: ಶ್ರೀಮಾನ್ ಡಿ. ಮತ್ತು ಸೆ. ಜಡ್ಜ್, ಹೆಚ್. ಕೆ. ವೀರಬಸವಯ್ಯ, ಬಿ.ಎ., ಬಿ.ಎಲ್.

೧೯. ೧೧-೧೧-೩೪ ಸಂಜೆ : ಈಸ್ಕಿಲೀಸ್ ಮಹಾಕವಿಯ ರುದ್ರನಾಟಕಗಳು-

ಉಪನ್ಯಾಸಕರು: ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ, ಬಿ.ಎಲ್.

ಅಧ್ಯಕ್ಷತೆ: ಶ್ರೀಮಾನ್ ಡಿ. ಮತ್ತು ಸೆ. ಜಡ್ಜ್, ಹೆಚ್. ಕೆ. ವೀರ ಬಸವಯ್ಯ, ಬಿ.ಎ., ಬಿ.ಎಲ್.

೨೦. ಭಾರತವಾಚನ ಕಾವ್ಯವಾಚನ ಸ್ಪರ್ಧೆಗಳು-

(೧) ೧೭-೧೧-೩೪ ಭಾರತವಾಚನ : ಗೌರ್ನಮೆಂಟ್ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದು-

ಮೊದಲನೆಯ ಬಹುಮಾನ: ಎ. ಕೃಷ್ಣಮೂರ್ತಿ, V form ವಿದ್ಯಾರ್ಥಿ

ಎರಡನೆಯ ಬಹುಮಾನ: ಟಿ.ಎಸ್. ವೆಂಕಟಪ್ಪಗೌಡ, V form ವಿದ್ಯಾರ್ಥಿ.

ಮೊದಲನೆಯ ಬಹುಮಾನ ಶ್ರೀಮಾನ್ ಪಸೂಡಿ ವೆಂಕಟಶಾಸ್ತ್ರಿಗಳಿಂದಲೂ ಎರಡನೆಯದು ಸಂಘದಿಂದಲೂ ಕೊಟಲ್ಪಟ್ಟಿತು.

(೨) ೧೯-೧೧-೩೪ ಕವನಪಠನ: ಮಿಡಲ್ ಸ್ಕೂಲ್ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದು-

ಮೊದಲನೆಯ ಬಹುಮಾನ: ಎಸ್. ರಾಮಾಚಾರ್, ಮಿಡಲ್ ೧ನೆಯ ತರಗತಿ ವಿದ್ಯಾರ್ಥಿ.

ಎರಡನೆಯ ಬಹುಮಾನ: ಎನ್.ಸಿ. ಶಾಮಣ್ಣ, ಮಿಡಲ್ ೨ನೆಯ ತರಗತಿ ವಿದ್ಯಾರ್ಥಿ.

ಮೊದಲನೆಯ ಬಹುಮಾನ ಶ್ರೀಮಾನ್ ದೇವಂಗಿ ರಾಮಣ್ಣಗೌಡರಿಂದಲೂ ಎರಡನೆಯದು ಸಂಘದಿಂದಲೂ ಕೊಡಲ್ಪಟ್ಟವು.

(೩) ೧೦-೧೨-೩೪ ಭಾರತವಾಚನ: ಗರ್ಲ್ಸ್ ಮಿಡಲ್ ಸ್ಕೂಲ್ ವಿದ್ಯಾರ್ಥಿನಿಯರಿಗೆ ಏರ್ಪಡಿಸಿದ್ದು-

ಮೊದಲನೆಯ ಬಹುಮಾನ: ಲಲಿಗ್ರೇಸ್, ಮಿಡಲ್ ೪ನೆಯ ತರಗತಿ ವಿದ್ಯಾರ್ಥಿನಿ.

ಎರಡನೆಯ ಬಹುಮಾನ: ಕೆ.ಪಿ. ಶಕುಂತಳಮ್ಮ, ಮಿಡಲ್ ೪ನೆಯ ತರಗತಿ ವಿದ್ಯಾರ್ಥಿನಿ.

ಮೊದಲನೆಯ ಬಹುಮಾನ ಶ್ರೀಮಾನ್ ಭೂಪಾಳಂ ರುಕ್ಮಯ್ಯನವರಿಂದ ಅವರ ಧರ್ಮಪತ್ನಿ ಶ್ರೀಮತಿ ಸುಭದ್ರಮ್ಮನವರ ಹೆಸರಿನಲ್ಲಿಯೂ ಎರಡನೆಯ ಬಹುಮಾನ ಶ್ರೀಮಾನ್ ಹಸೂಡಿ ರಾಮಾಶಾಸ್ತ್ರಿಗಳಿಂದಲೂ ಕೊಡಲ್ಪಟ್ಟವು.

(೪) ೧೧-೧೨-೩೪ ಆಧುನಿಕ ಕವಿತಾವಾಚನ: ಗೌರ್ನಮೆಂಟ್ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದು-

ಮೊದಲನೆಯ ಬಹುಮಾನ: ಎನ್.ಎಸ್. ರಂಗನಾಥರಾವ್, V form ವಿದ್ಯಾರ್ಥಿ.

ಎರಡನೆಯ ಬಹುಮಾನ: ಟಿ.ಎಸ್. ವೆಂಕಟಪ್ಪಗೌಡ ಮತ್ತು ಶ್ರೀಮಾನ್ ಕೆ.ಎಸ್. ನಾಗರಾಜರಾವ್, V form ವಿದ್ಯಾರ್ಥಿಗಳು.

ಮೊದಲನೆಯ ಬಹುಮಾನ ಶ್ರೀಮಾನ್ ಎ.ಆರ್. ಕೃಷ್ಣಶಾಸ್ತ್ರೀ, ಎಂ.ಎ., ಅವರಿಂದಲೂ ಎರಡನೆಯ ಬಹುಮಾನಗಳು ಸಂಘದಿಂದಲೂ ಕೊಡಲ್ಪಟ್ಟವು.

ಮೇಲ್ಕಂಡ ಸ್ಪರ್ಧೆಗಳಲ್ಲಿ ಪರೀಕ್ಷಕರಾಗಿ ಸಹಾಯ ಮಾಡಿದವರು-

ಶ್ರೀಮಾನ್ ಪಂಡಿತ ಕೆ. ಸತ್ಯವರಾಚಾರ್ಯರು.

" ವಿದ್ವಾನ್ ವಿಠ್ಠಲಶಾಸ್ತ್ರಿಗಳು

" ಎಸ್. ವಿಷ್ಣುಭಟ್ಟ, ಬಿ.ಎ., ಎಲ್ಎಲ್.ಬಿ.

" ಎಸ್.ವಿ. ಕೃಷ್ಣಮೂರ್ತಿರಾವ್, ಬಿ.ಎಸ್‌ಸಿ., ಎಲ್ಎಲ್.ಬಿ.

" ಎಸ್.ಆರ್. ನರಸಿಂಹಾಚಾರ್, ಬಿ.ಎ., ಬಿ.ಟಿ.

" ಕೆ. ಶ್ಯಾಮ ಜೋಯಿಸರು.

ವಿವರ

೧೪-೬-೩೫ ಇಂಡಿಯಾ ದೇಶದಲ್ಲಿ ಅರ್ಥಸಾಧನೆ-ಪೀಠಿಕಾಭಾಗ.

೧೫-೬-೩೫ " " " ಅದರ ಸ್ಥಿತಿಗತಿಗಳು.

೧೬-೬-೩೫ ಇಂಡಿಯಾ ದೇಶದ ವ್ಯಾಪಾರ, ಬ್ಯಾಂಕುಗಳು ಮತ್ತು ಹಣಕಾಸಿನ ವ್ಯವಸ್ಥೆ.

೨೦. ೧೬-೬-೩೫ ಬೆಳಗ್ಗೆ : ಆಧುನಿಕ ಕವನ ಸಾಹಿತ್ಯ-

ಉಪನ್ಯಾಸಕರು: ಶ್ರೀಮಾನ್ ವಿ. ಸೀತಾರಾಮಯ್ಯ, ಎಂ.ಎ.

೨೧. ೪-೧೦-೩೫ ನಾಟಕವಾಚನ : 'ಪಾರಸಿಕರು'-

ಕವಿಗಳು: ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

೨೨. ಕಾವ್ಯವಾಚನ ಸ್ಪರ್ಧೆಗಳು-

(೧) ೧೨-೧೨-೩೫ ಗೌರ್ನಮೆಂಟ್ ಮಿಡಲ್ ಸ್ಕೂಲ್ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದು-

ಮೊದಲನೆಯ ಬಹುಮಾನ : ಎನ್.ವಿ. ರಾಮಚಂದ್ರಮೂರ್ತಿ, ೪ನೆಯ ತರಗತಿಯ ವಿದ್ಯಾರ್ಥಿ.

ಎರಡನೆಯ ಬಹುಮಾನ : ಎನ್. ನಾಗರಾಜರಾವ್, ೪ನೆಯ ತರಗತಿಯ ವಿದ್ಯಾರ್ಥಿ; ವೈ.ಕೆ. ತಿಮ್ಮರಸಯ್ಯ, ೩ನೆಯ ತರಗತಿಯ ವಿದ್ಯಾರ್ಥಿ.

ಮೊದಲನೆಯ ಬಹುಮಾನ ಶ್ರೀಮಾನ್ ಎ.ಆರ್. ಕೃಷ್ಣಶಾಸ್ತ್ರೀ, ಎಂ.ಎ., ಅವರಿಂದ ಕೊಡಲ್ಪಟ್ಟಿದ್ದು. ಎರಡನೆಯ ಬಹುಮಾನಗಳು ಶ್ರೀಮಾನ್ ದೇವಂಗಿ ರಾಮಣ್ಣ ಗೌಡರವರಿಂದ ಕೊಡಲ್ಪಟ್ಟವು.

(೨) ೧೩-೧೨-೩೫ ಗೌರ್ನಮೆಂಟ್ ಗರ್ಲ್ಸ್ ಮಿಡಲ್ ಸ್ಕೂಲ್ ವಿದ್ಯಾರ್ಥಿನಿಯರಿಗೆ ಏರ್ಪಡಿಸಿದ್ದು-

ಮೊದಲನೆಯ ಬಹುಮಾನ : ಸಿಂಗಾರಮ್ಮ, ೧ನೆಯ ತರಗತಿಯ ವಿದ್ಯಾರ್ಥಿನಿ.

ಎರಡನೆಯ ಬಹುಮಾನ : ಪುಟ್ಟನರಸಮ್ಮ, ೨ನೆಯ ತರಗತಿಯ ವಿದ್ಯಾರ್ಥಿನಿ.

ಮೂರನೆಯ ಬಹುಮಾನ : ರುಕ್ಮಿಣಿಯಮ್ಮ, ೨ನೆಯ ತರಗತಿಯ ವಿದ್ಯಾರ್ಥಿನಿ.

ಮೊದಲನೆಯ ಬಹುಮಾನ ಶ್ರೀಮಾನ್ ಭೂಪಾಳಂ ರುಕ್ಮಯ್ಯನವರು ಗತಿಸಿದ ತಮ್ಮ ಧರ್ಮಪತ್ನಿ ಶ್ರೀಮತಿ ಸುಭದ್ರಮ್ಮನವರ ಹೆಸರಿನಲ್ಲಿ ಕೊಟ್ಟದ್ದು. ಎರಡು ಮೂರನೆಯ ಬಹುಮಾನಗಳು ಶ್ರೀಮಾನ್ ಹಸೂಡಿ ವೆಂಕಟಶಾಸ್ತ್ರಿಗಳು ಕೊಟ್ಟದ್ದು.

೨೩. ೧೪-೧೨-೩೫ **ಐದನೆಯ ವಾರ್ಷಿಕೋತ್ಸವ-**

ಅಧ್ಯಕ್ಷರು: ಶ್ರೀಮಾನ್ ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಎಂ.ಎ.

(೧) ಸಂಗೀತ- ಸಂಗೀತ ವಿದ್ವಾನ್ ಶ್ರೀಮಾನ್ ಬಿ. ಶೇಷಪ್ಪನವರು.

(೨) ಸಂಘದ ಐದು ವರ್ಷಗಳ ಬೆಳವಣಿಗೆ- ಶ್ರೀಮಾನ್ ಚಿದಂಬರಂ, ಬಿ.ಎ., ಎಲ್ಎಲ್.ಬಿ.

(೩) ಕಾವ್ಯಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನ ವಿನಿಯೋಗ.

(೪) ಅಧ್ಯಕ್ಷರ ಭಾಷಣ.

೨೪. ೧೫-೧೨-೩೫ ಕವಿತಾವಾಚನ-

ಕವಿಗಳು: ಶ್ರೀಮಾನ್ ದ.ರಾ. ಬೇಂದ್ರೆ, ಎಂ.ಎ.

೨೫. ೨೧-೧-೩೬[೧] ಕಾವ್ಯವಾಚನ : 'ಅಶ್ವತ್ಥಾಮನ್'-

ವಾಚಕರು: ವಿ. ವೆಂಕಟಾಚಾರ್, ಎಂ.ಎ., ಬಿ.ಕಾಮ್.

೨೬. ೨೪-೧-೩೬ ಶ್ರೀ ಪುರಂದರದಾಸರ ಜನ್ಮದಿನಾಚರಣೆ-

(೧) ಪುರಂದರದಾಸರ ಕೃತಿಗಳ ಗಾಯನ- ಸಂಗೀತ ವಿದ್ವಾನ್ ಶ್ರೀಮಾನ್ ಎಳಂದೂರು ರಂಗಾಚಾರ್ಯರು.

(೨) ಪುರಂದರದಾಸರ ಜೀವನ ಚರಿತೆ- ಶ್ರೀಮಾನ್ ಆರ್.ಕೆ. ಜಯತೀರ್ಥಾಚಾರ್, ಬಿ.ಎ., ಎಲ್ಎಲ್.ಬಿ.

ಅ

---

೧. ಸಾರ್ವಭೌಮರ ನಿಧನ ಪ್ರಯುಕ್ತ ಈ ಸಭೆಯು ನಡೆಯಲಿಲ್ಲ.

ಸಂಘದ ಪ್ರಕಟನೆಗಳು

			ರೂ.	ಆ.	ಪೈ.
೧. ಸಾಹಿತ್ಯ ಪ್ರಚಾರ (ಭಾಷಣ)					
ಕೆ.ವಿ. ಪುಟ್ಟಪ್ಪ, ಎಂ.ಎ.	...	...	೦	೨	೦
೨. ರಕ್ತಾಕ್ಷಿ (ನಾಟಕ)					
ಕೆ.ವಿ. ಪುಟ್ಟಪ್ಪ, ಎಂ.ಎ.	(ಸಾದ)	...	೧	೮	೦
	(ಕ್ಯಾಲಿಕೊ)	...	೨	೦	೦
೩. ಪಾಂಚಜನ್ಯ (ರುದ್ರ ಕವನಗಳು)					
ಕೆ.ವಿ. ಪುಟ್ಟಪ್ಪ, ಎಂ.ಎ.	(ಸಾದ)	...	೦	೧೨	೦
	(ಕ್ಯಾಲಿಕೊ)	...	೧	೪	೦
೪. ನವಿಲು-೧ (ಲಲಿತ ಕವನಗಳು)					
ಕೆ.ವಿ. ಪುಟ್ಟಪ್ಪ, ಎಂ.ಎ.	(ಸಾದ)	...	೧	೦	೦
೫. ನವಿಲು-೨ (ಲಲಿತ ಕವನಗಳು)					
ಕೆ.ವಿ. ಪುಟ್ಟಪ್ಪ, ಎಂ.ಎ.	(ಸಾದ)	...	೧	೦	೦
ನವಿಲು (೧-೨ ಸೇರಿ)	ಕ್ಯಾಲಿಕೊ)	...	೨	೧೨	೦
೬. ಗಂಡುಗೊಡಲಿ (ನಾಟಕ)					
ಜಿ.ಪಿ. ರಾಜರತ್ನಂ, ಎಂ.ಎ.	...	...	ಮುಗಿದಿವೆ		
೭. ಹನಿಗಳು (ಲಘು ಚಿತ್ರಗಳು)					
ಜಿ.ಪಿ. ರಾಜರತ್ನಂ, ಎಂ.ಎ.	(ಸಾದ)	...	೦	೧೦	೦
	(ಕ್ಯಾಲಿಕೊ)	...	೧	೪	೦
೮. ಕನ್ನಡ ಮೇಘ ಸಂದೇಶ (ಪದ್ಯ ಕಾವ್ಯ)					
ಆಸ್ಥಾನ ಮಹಾವಿದ್ವಾನ್ ಪಂ॥ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿ	(ಸಾದ)	...	೦	೬	೦
೯. ಮಾಟಗಾತಿ (ಸಣ್ಣ ಕಥೆಗಳು)					
'ಆನಂದ'	(ಸಾದ)	...	೦	೧೨	೦
	(ಕ್ಯಾಲಿಕೊ)	...	೧	೪	೦
೧೦. ಪಾತಾಳದಲ್ಲಿ ಪಾಪಚ್ಚಿ (ಬಾಲ ಸಾಹಿತ್ಯ)					
ನಾ. ಕಸ್ತೂರಿ, ಎಂ.ಎ, ಬಿ.ಎಲ್.	(ಸಾದ)	...	೧	೦	೦
	(ಕ್ಯಾಲಿಕೊ)	...	೧	೮	೦

ಮುಂದೆ ಬರುವ ಗ್ರಂಥಗಳು

ಹಗಲುಗನಸುಗಳು (ಪ್ರಬಂಧಗಳು) - ಎ.ಎನ್. ಮೂರ್ತಿರಾವ್, ಎಂ.ಎ.

ಕನ್ನಡ ಜೈನ ಸಾಹಿತ್ಯ (ಸಾಹಿತ್ಯ ಚರಿತ್ರೆ) - ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

ಕನ್ನಡ ವೀರಶೈವ ಸಾಹಿತ್ಯ (ಸಾಹಿತ್ಯ ಚರಿತ್ರೆ) - ಎಂ.ಆರ್. ಶ್ರೀನಿವಾಸಮೂರ್ತಿ, ಬಿ.ಎ.

ಕರ್ನಾಟಕ ಸಂಘ, ಶಿವಮೊಗ್ಗ

ಮೂರು ವರ್ಷಗಳ ವರದಿ

(೭-೨-೩೬ ರಿಂದ ೩೧-೧೨-೩೮ರ ವರೆಗೆ)

ಬೆಂಗಳೂರು ಪ್ರೆಸ್
ಮೈಸೂರು ರೋಡ್, ಬೆಂಗಳೂರು ಸಿಟಿ
೧೯೩೯

ವಿಷಯ ಸೂಚಿಕೆ

೧೬. ಸಂಘವು ಈಚೆಗೆ ಕೈಗೊಂಡಿರುವ ಕಾರ್ಯ:

೧. ವಯಸ್ಕರ ವಿದ್ಯಾಭ್ಯಾಸದ ಮೊದಲನೆಯ ಪುಸ್ತಕದ ಪ್ರಕಟನೆ ಮತ್ತು ವಯಸ್ಕರ ವಿದ್ಯಾಭ್ಯಾಸದ ಶಾಲೆಯ ಸ್ಥಾಪನೆ

೨. "ಸಿದ್ಧರಾಮ ಪುರಾಣ" ಪ್ರಕಟನೆ

೩. ಕನ್ನಡ ಸಾಹಿತ್ಯ ಪರೀಕ್ಷೆಗಳು

೧೭. ಸಂಘದ ವ್ಯಾಪ್ತಿ

೧೮. ಸಂಘದ ಸದ್ಯದ ಹಣಕಾಸಿನ ಸ್ಥಿತಿ

೧೯. ವಂದನೆಗಳು

೨೦. ಉಪಸಂಹಾರ

ಅನುಬಂಧಗಳು

೧. ಲೆಖ್ಖಶೋಧಕರ ವರದಿ...

೨. ಲೆಖ್ಖಶೋಧಕರ ಕೆಲವು ಆಕ್ಷೇಪಣೆಗಳಿಗೆ ಉತ್ತರ

೩. ಆರನೆಯ ವರ್ಷದ ಆಯವ್ಯಯದ ಪಟ್ಟಿ

೪. ಏಳನೆಯ ವರ್ಷದ ಆಯವ್ಯಯದ ಪಟ್ಟಿ

೫. ಎಂಟನೆಯ ವರ್ಷದ ಆಯವ್ಯಯದ ಪಟ್ಟಿ

೬. ಕಳೆದ ಮೂರು ವರ್ಷಗಳ ಆಯದ ಪಟ್ಟಿ

೭. ಕಳೆದ ಮೂರು ವರ್ಷಗಳ ವ್ಯಯದ ಪಟ್ಟಿ

೮. ಗ್ರಂಥ ಕಾಣಿಕೆ, ಮುದ್ರಣದ ವೆಚ್ಚ, ಪುಸ್ತಕ ಭಂಡಾರದ ಖರ್ಚು, ಪುಸ್ತಕಗಳ ಮಾರಾಟವನ್ನು ತೋರಿಸುವ ಪಟ್ಟಿ

೯. ೬ನೆಯ ವರ್ಷದ ಕಾರ್ಯಕಲಾಪಗಳು

೧೦. ೭ನೆಯ ವರ್ಷದ ಕಾರ್ಯಕಲಾಪಗಳು

೧೧. ೮ನೆಯ ವರ್ಷದ ಕಾರ್ಯಕಲಾಪಗಳು

೧೨. ಸಂಘದಿಂದ ಏರ್ಪಡಿಸಿದ ಪ್ರಚಾರೋಪನ್ಯಾಸಗಳು

೧೩. ಆರನೆಯ ವರ್ಷ - ಸ್ಪರ್ಧೆಗಳು "

೧೪. ಏಳನೆಯ ವರ್ಷ - " "

೧೫. ಎಂಟನೆಯ ವರ್ಷ - " "

೧೬. ಜಿಲ್ಲೆಯ ಸಂಘಗಳು ಮತ್ತು ಇತರ ಸಾಹಿತ್ಯ ಸಂಸ್ಥೆಗಳು

೧೭. ಆನವಟ್ಟಿಯ ವಿಶೇಷ ಸಾಹಿತ್ಯೋತ್ಸವದ ಕಾರ್ಯಕ್ರಮ

೧೮. ಜಿಲ್ಲಾ ಸಂಘ ಸಮ್ಮೇಳನಗಳ ಸಂಕ್ಷಿಪ್ತ ವರದಿ

ಕರ್ನಾಟಕ ಸಂಘ, ಶಿವಮೊಗ್ಗ

(ಸ್ಥಾಪನೆ-೧೯೩೦ನೆಯ ಇಸವಿ ನವೆಂಬರ್ ೮)

೭-೨-೧೯೩೬ ರಿಂದ ೩೧-೧೨-೧೯೩೮ರ ವರೆಗಿನ ವರದಿ

ಮಹಾಶಯರೆ,

೧. ಶಿವಮೊಗ್ಗೆಯ ಕರ್ಣಾಟಕ ಸಂಘವು ತಾ|| ೭-೨-೧೯೩೬ ರಿಂದ ತಾ|| ೩೧-೧೨-೧೯೩೮ರ ವರೆಗೆ* ನಡೆಸಿರುವ ಕಾರ್ಯಕಲಾಪಗಳ ವರದಿಯನ್ನು ಕಾರ್ಯನಿರ್ವಾಹಕ ಮಂಡಲಿಯ ಅಪ್ಪಣೆಯ ಮೇರೆಗೆ ತಮಗೆ ಒಪ್ಪಿಸಲು ಅನುಮತಿಯನ್ನು ಬೇಡುತ್ತೇನೆ.

೨. ಕಾರ್ಯನಿರ್ವಾಹಕ ಸಮಿತಿ– ತಾ|| ೧-೩-೧೯೩೬ರಲ್ಲಿ ಆಗ್ಗೆ ಜಿಲ್ಲಾಧಿಕಾರಿಗಳಾಗಿದ್ದ ಶ್ರೀಮಾನ್ ಎಸ್. ನಾರಾಯಣರಾವ್, ಎಂ.ಎ. (ಆನರ್ಸ್) ಅವರ ಅಧ್ಯಕ್ಷತೆಯಲ್ಲಿ ಸೇರಿದ ಸಂಘದ ಸಾಮಾನ್ಯ ಸಭೆಯಲ್ಲಿ ಶ್ರೀಮಾನ್ ಎಸ್. ನಾರಾಯಣರಾವ್, ಎಂ.ಎ. (ಆನರ್ಸ್) ಅವರು ಸಂಘದ ಗೌರವ ಅಧ್ಯಕ್ಷರಾಗಿಯೂ, ಆಸ್ಥಾನ ಮಹಾವಿದ್ವಾನ್ ಪಂಡಿತ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು ಅಧ್ಯಕ್ಷರಾಗಿಯೂ, ಶ್ರೀಯುತರಾದ ಕೂಡಲಿ ಚಿದಂಬರಂ, ಬಿ.ಎ., ಎಲ್‌ಎಲ್.ಬಿ., ಹೆಚ್. ಸಿದ್ಧಯ್ಯ, ಬಿ.ಎ. ಎಲ್‌ಎಲ್.ಬಿ., ಬಿ.ಆರ್. ಪುಟ್ಟನಂಜಪ್ಪ, ಎಂ.ಎ., ಎಲ್‌ಎಲ್.ಬಿ., ಎನ್.ಎಸ್. ಕೃಷ್ಣಮೂರ್ತಿ, ಬಿ.ಎಸ್.ಸಿ., ಎಲ್‌ಎಲ್.ಬಿ., ಆರ್.ಕೆ. ಜಯತೀರ್ಥಾಚಾರ್, ಬಿ.ಎ., ಎಲ್‌ಎಲ್.ಬಿ., ಎಸ್.ವಿ. ಕೃಷ್ಣಮೂರ್ತಿರಾವ್, ಬಿಎಸ್‌ಸಿ., ಎಲ್‌ಎಲ್.ಬಿ. ಭೂಪಾಲಂ ಚಂದ್ರಶೇಖರಯ್ಯ, ಬಿ.ಎ., ಡಿ.ಆರ್. ಮಾನಪ್ಪ, ಎಸ್. ವಿಷ್ಣುಭಟ್ಟ, ಬಿ.ಎ., ಎಲ್‌ಎಲ್.ಬಿ., ಹೆಚ್. ಲಿಂಗಪ್ಪ, ಬಿ.ಎ., ಎಲ್‌ಎಲ್.ಬಿ., ಎ.ಎನ್. ನಾರಾಯಣಭಟ್ಟ, ಬಿ.ಎ., ಎಲ್‌ಎಲ್.ಬಿ., ಬಿ. ವೆಂಕಟಸ್ವಾಮಯ್ಯ, ಬಿ.ಎ., ಬಿ. ಕೃಷ್ಣರಾವ್, ಬಿ.ಎ., ಎಲ್.ಸಿ.ಇ., ಎಲ್. ಸಿದ್ಧಪ್ಪ, ಬಿ.ಎ., ಎಲ್‌ಎಲ್.ಬಿ., ಆರ್. ಕೃಷ್ಣಸೆಟ್ಟಿ, ಬಿ.ಎ., ಎಲ್‌ಎಲ್.ಬಿ. –ಇವರುಗಳು ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿಯೂ ಚುನಾಯಿಸಲ್ಪಟ್ಟರು. ತಾ|| ೪-೩-೧೯೩೬ರಲ್ಲಿ ಕಾರ್ಯನಿರ್ವಾಪಕ ಸಮಿತಿಯು ಶ್ರೀಮಾನ್ ಎಸ್.ವಿ. ಕೃಷ್ಣಮೂರ್ತಿರಾಯರನ್ನು ಸಂಘದ ಕಾರ್ಯದರ್ಶಿ ಗಳನ್ನಾಗಿಯೂ, ಬಿ.ಆರ್. ಪುಟ್ಟನಂಜಪ್ಪನವರನ್ನು ಸಹಾಯಕ ಕಾರ್ಯದರ್ಶಿ ಮತ್ತು ಖಜಾಂಚಿಯವರನ್ನಾಗಿಯೂ

---

೧. ತಾ|| ೮-೧೧-೧೯೩೦ ರಿಂದ ತಾ|| ೭-೨-೧೯೩೬ರ ವರೆಗಿನ ಮೊದಲ ಐದು ವರ್ಷಗಳ ವರದಿ ಈ ಹಿಂದೆ ಪ್ರಕಟವಾಗಿರುತ್ತದೆ.

ಚುನಾಯಿಸಿತು. ಗೌರವಾಧ್ಯಕ್ಷರಾಗಿದ್ದ ಶ್ರೀಮಾನ್ ಎಸ್. ನಾರಾಯಣರಾವ್, ಎಂ.ಎ. (ಆನರ್ಸ್) ಅವರಿಗೆ ವರ್ಗವಾದ ಮೇಲೆ ಅವರ ಸ್ಥಾನಕ್ಕೆ ಬಂದ ಜಿಲ್ಲಾಧಿಕಾರಿಗಳಾದ ಶ್ರೀಮಾನ್ ಎಂ. ಶೇಷಾದ್ರಿ, ಎಂ.ಎ. ಅವರು ಕಾರ್ಯನಿರ್ವಾಹಕ ಸಮಿತಿಯ ಪ್ರಾರ್ಥನೆಯ ಮೇರೆಗೆ ಸಂಘದ ಗೌರವಾಧ್ಯಕ್ಷರಾಗಿರಲು ಒಪ್ಪಿ ಸಂಘದ ಕೆಲಸ ಕಾರ್ಯಗಳಿಗೆ ಪ್ರೋತ್ಸಾಹ ಕೊಡುತ್ತ ಬಂದಿರುತ್ತಾರೆ. ಬೇರೆ ಸ್ಥಳಕ್ಕೆ ವರ್ಗವಾದ ಶ್ರೀಯುತರಾದ ಬಿ. ಕೃಷ್ಣರಾವ್, ಬಿ. ವೆಂಕಟಸ್ವಾಮಯ್ಯ, ಆರ್. ಕೃಷ್ಣಸೆಟ್ಟಿ, ಎ. ವಾಸುದೇವರಾವ್, ಕೂಡಲಿ ಚಿದಂಬರಂ -ಇವರುಗಳ ಸ್ಥಾನಗಳಲ್ಲಿ ಕ್ರಮವಾಗಿ ಶ್ರೀಯುತರಾದ ಹೊಸೂಡಿ ವೆಂಕಟಶಾಸ್ತ್ರಿಗಳು, ಎ. ವಾಸುದೇವರಾವ್, ಬಿ.ಎ., ಎಸ್. ರಘೋತ್ತಮರಾಯರು, ಟಿ. ಗುರುಸಂಜಯ್ಯ, ಬಿ.ಎ., ಬಿ.ಎಲ್., ಆರ್. ಪುಟ್ಟರಾಜ ಅರಸ್, ಎಂ.ಎ., ಬಿ.ಎಲ್. -ಇವರುಗಳನ್ನು ಕಾರ್ಯನಿರ್ವಾಹಕ ಸಮಿತಿಯ ಸದಸ್ಯರನ್ನಾಗಿ ತೆಗೆದುಕೊಳ್ಳಲಾಗಿದೆ. ಕಾರ್ಯನಿರ್ವಾಹಕ ಸಮಿತಿಯು ೧೯೩೬ರಲ್ಲಿ ಹತ್ತು ಬಾರಿಯೂ, ೧೯೩೭ರಲ್ಲಿ ಐದು ಬಾರಿಯೂ, ೧೯೩೮ರಲ್ಲಿ ಹನ್ನೆರಡು ಬಾರಿಯೂ ಸಭೆ ಸೇರಿರುತ್ತದೆ.

೩. **ಸದಸ್ಯ ಸಂಪತ್ತು:** ಕಳೆದ ಮೂರು ವರ್ಷಗಳ ಸದಸ್ಯ ಸಂಪತ್ತು ಈ ರೀತಿ ಇರುತ್ತದೆ:

ವರ್ಷ	ಆಶ್ರಯ ದಾತರು	ಪೋಷಕರು	ಸಾಮಾನ್ಯ	ಒಟ್ಟು ಸದಸ್ಯರು	ವಸೂಲಾದ ಚಂದಾಹಣ		
					ರೂ.	ಆ.	ಪೈ.
೧೯೩೬	೬	೧೮	೧೬೭	೧೯೧	೨೪೯	೮	೦
೧೯೩೭	೭	೧೯	೧೫೩	೧೭೯	೩೦೮	೦	೦
೧೯೩೮	೯	೧೬	೧೫೦	೧೭೫	೨೧೯	೪	೦

ಸಂಘದ ಅಧ್ಯಕ್ಷರಾದ ಆಸ್ಥಾನ ಮಹಾವಿದ್ವಾನ್ ಪಂಡಿತ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳವರನ್ನೂ, ಮೊದಲ ಐದು ವರ್ಷಗಳು ಕಾರ್ಯದರ್ಶಿಗಳಾಗಿ ಸಂಘವನ್ನು ಬೆಳೆಸಿದ ಶ್ರೀಮಾನ್ ಕೂಡಲಿ ಚಿದಂಬರಂ, ಬಿ.ಎ., ಎಲ್‌ಎಲ್.ಬಿ. ಅವರನ್ನೂ, ಸಂಘದ ಪುಸ್ತಕ ಭಂಡಾರಕ್ಕಾಗಿ ರೂ. ೧೫೦-೦-೦ಗಳ ಧನ ಸಹಾಯ ಮಾಡಿದ ಶ್ರೀಮಾನ್ ಕೆ.ವಿ. ಸುಬ್ಬರಾಯರನ್ನೂ ಕಾರ್ಯನಿರ್ವಾಹಕ ಸಮಿತಿಯ ತೀರ್ಮಾನದಂತೆ ಸಂಘದ ಗೌರವ ಸದಸ್ಯರುಗಳನ್ನಾಗಿ ತೆಗೆದುಕೊಳ್ಳಲಾಗಿದೆ. ಸಂಘದ ನಿಯಮಗಳಿಗನುಸಾರವಾಗಿ ಆಶ್ರಯದಾತರು ಮತ್ತು ಪೋಷಕರಿಗೆ ಆಯಾ ವರ್ಷದ ಸಂಘದ ಪ್ರಕಟನೆಗಳನ್ನು ಉಚಿತವಾಗಿ ಹಂಚಲಾಗುತ್ತಿದೆ.

೪. **ಉಪನ್ಯಾಸಾದಿ ಕಾರ್ಯಗಳು-** ಮೂರು ವರ್ಷಗಳಲ್ಲಿ ಈ ಕೆಳಗೆ ಕಂಡಂತೆ ಒಟ್ಟು ೬೨ ಸಭೆಗಳು ಸೇರಿವೆ:

ವಿಷಯ	೧೯೩೬	೧೯೩೭	೧೯೩೮	ಒಟ್ಟು
ಸದಸ್ಯ ಸಭೆ	೨	೩	...	೫
ಕವಿತಾವಾಚನ ಸಭೆ	೨	೩	೩	೮
ಸಂತಾಪಸೂಚಕ ಸಭೆ	೧	೧	...	೨
ಸಾಹಿತ್ಯ ವಿಷಯವಾಗಿ	೬	೮	೬	೨೦
ವಿಜ್ಞಾನ "	೩	೧	೧	೫
ಚರಿತ್ರೆ "	೨	...	...	೨
ವಿದ್ಯಾಭ್ಯಾಸ ಪದ್ಧತಿ	೧	...	೧	೨
ತಾತ್ವಿಕ ವಿಚಾರ "	೧	...	...	೧
ಅರ್ಥಶಾಸ್ತ್ರ "	೧	...	...	೧
ಭಾರತ ವಾಚನ	...	೪	...	೪
ಕಥೆಗಳ ಓದುಗಾರಿಕೆ	...	೧	...	೧
ಸಂಗೀತ ಕಛೇರಿ	...	೧	೨	೩
ಚರ್ಚಾ ಕೂಟ	...	...	೧	೧
ಲಾವಣಿ ಹಾಡುಗಾರಿಕೆ	...	...	೧	೧
ಇತರ ವಿಷಯಗಳು	...	೬	...	೬
ಒಟ್ಟು	೧೯	೨೮	೧೫	೬೨

ಉಪನ್ಯಾಸಕರ ಹೆಸರು ಮತ್ತು ಉಪನ್ಯಾಸ ವಿಷಯಗಳನ್ನು ಅನುಬಂಧದಲ್ಲಿ ವಿವರಿಸಲಾಗಿದೆ.

೫. **ಉಪನ್ಯಾಸಮಾಲೆ:** ೧೦-೮-೧೯೩೮ ರಿಂದ ೧೨-೮-೧೦೩೮ರ ವರೆಗೆ ಬೆಂಗಳೂರಿನ ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಅಧ್ಯಾಪಕರಾದ ಶ್ರೀಮಾನ್ ವಿ. ಸೀತಾರಾಮಯ್ಯ, ಎಂ.ಎ. ಅವರು 'ರಾಜ್ಯ ಪದ್ಧತಿಗಳು' ಎಂಬ ವಿಷಯವಾಗಿ ಪ್ರೌಢವಾದ ಉಪನ್ಯಾಸಗಳನ್ನು ಕೊಟ್ಟರು. ಉಪನ್ಯಾಸಮಾಲೆಯ ಗ್ರಂಥಗಳನ್ನು ಅಚ್ಚುಹಾಕಿಸಲು ಅವಕಾಶ ವಾಗದಿರುವುದಕ್ಕಾಗಿ ತುಂಬ ವಿಷಾದಿಸುತ್ತೇವೆ. ಉಪನ್ಯಾಸಕರು ಹಸ್ತಪ್ರತಿಗಳನ್ನು ಸಿದ್ಧಗೊಳಿಸದಿರುವುದೇ ಇದಕ್ಕೆ ಮುಖ್ಯ ಕಾರಣ. ಕೃಪೆಯಿಟ್ಟು ಹಸ್ತಪ್ರತಿಗಳನ್ನು ಸಿದ್ಧಗೊಳಿಸಿ ಗ್ರಂಥ ಮುದ್ರಣಕ್ಕೆ ಸಹಾಯ ಮಾಡಬೇಕಾಗಿ ಮತ್ತೊಮ್ಮೆ ಈ ಮೂಲಕ ಉಪನ್ಯಾಸಕರನ್ನು ಪ್ರಾರ್ಥಿಸುತ್ತೇವೆ. ದಿವಂಗತ ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯನವರಿಂದ ನಡೆಯಬೇಕಾಗಿದ್ದ 'ಬ್ರಾಹ್ಮಣ ಸಾಹಿತ್ಯ'ದ ಮೇಲಣ ಉಪನ್ಯಾಸಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಾಪಕರಾದ ಶ್ರೀಮಾನ್ ಎ.ಆರ್. ಕೃಷ್ಣಶಾಸ್ತ್ರೀ, ಎಂ.ಎ. ಅವರು ನಡೆಸಿಕೊಡುವುದಾಗಿ ಒಪ್ಪಿದ್ದಾರೆ. 'ಆಧುನಿಕ ಸಾಹಿತ್ಯ'ದ ಮೇಲೆ ಒಂದು ಗ್ರಂಥವನ್ನು ಸಂಘದಿಂದ ಪ್ರಕಟಿಸಲು ಸಿದ್ಧಗೊಳಿಸಿ ಕೊಡುವುದಾಗಿ ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ. ಅವರು ವಾಗ್ದಾನ ಮಾಡಿರುತ್ತಾರೆ.

೬. ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಮಾಲೆ: ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದವರು ೧೯೩೩ನೆಯ ಡಿಸೆಂಬರ್ ತಿಂಗಳಲ್ಲಿ ಶಿವಮೊಗ್ಗೆಯಲ್ಲಿ ಮೊದಲು ಬಾರಿ ಉಪನ್ಯಾಸ ಸಪ್ತಾಹವನ್ನು ನಡೆಸಿದರು. ಅನೇಕ ವಿಷಯಗಳ ಮೇಲೆ ಸ್ವಲ್ಪಕಾಲ ಉಪನ್ಯಾಸ ಮಾಡುವುದರಿಂದ ಉಪನ್ಯಾಸಕರ ಶ್ರಮಕ್ಕೆ ಪ್ರತಿಫಲವಾಗಲಿ, ಸಭಿಕರಿಗೆ ಹೆಚ್ಚಾದ ಉಪಯೋಗವಾಗಲಿ ದೊರೆಯುವುದಿಲ್ಲವೆಂದು ಈಚೆಗೆ ಒಂದೇ ವಿಷಯದ ಮೇಲೆ ೪-೬ ಉಪನ್ಯಾಸಗಳನ್ನು ಕೊಟ್ಟು ಸಭಿಕರಿಗೆ 'ಅನಲ್ಪಕಾಲ ಎಡೆಬಿಡದ ಜ್ಞಾನಬೋಧೆ' ಸಿಕ್ಕುವಂತೆ ಮಾಡಿಕೊಡಬೇಕೆಂದೂ, ಉಪನ್ಯಾಸಗಳ ಪ್ರಯೋಜನವು ಜನತೆಗೆ ಸುಲಭ ದರದಲ್ಲಿ ದೊರೆಯಬೇಕೆಂದು ಅವುಗಳನ್ನು ಚಿಕ್ಕ ಪುಸ್ತಕ ರೂಪದಲ್ಲಿ ದೊರಕಿಸಬೇಕೆಂದೂ ನಿಶ್ಚಯಿಸಿ ಉಪನ್ಯಾಸಮಾಲೆಗಳನ್ನು ನಡೆಸುತ್ತಲಿದ್ದಾರೆ. ಅದರಂತೆ ೧೯೩೮ನೆಯ ಡಿಸೆಂಬರ್ ೨೩ ರಿಂದ ೨೭ರ ವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದವರು 'ಗ್ರೀಕ್ ನಾಗರಿಕತೆ'ಯ ಮೇಲೆ ಉಪನ್ಯಾಸಗಳನ್ನು ನಡೆಸಿ ಗ್ರೀಕರ ಸಂಸ್ಕೃತಿ, ಸಾಹಿತ್ಯ, ನಾಟಕ, ಕಲೆ, ಸಮಾಜ ಜೀವನ, ವಿಜ್ಞಾನ, ವಿದ್ಯಾಭ್ಯಾಸ ಪದ್ಧತಿ ಮುಂತಾದ ವಿಷಯಗಳನ್ನು ತಿಳಿಸಿಕೊಟ್ಟರು.

೭. ವಿಶೇಷ ವಿಷಯಗಳು- (೧) ೧೯೩೬ನೆಯ ಮೇ ತಿಂಗಳಿನಲ್ಲಿ ನಡೆದ ಸಾಹಿತ್ಯ ಪರಿಷತ್ತಿನ ವಿಶೇಷೋತ್ಸವ ಮತ್ತು ಮೊದಲನೆಯ ಅಖಿಲ ಕರ್ನಾಟಕ ಸಂಘ ಸಮ್ಮೇಳನಕ್ಕೆ ಶ್ರೀಮಾನ್ ಕೊಡಲಿ ಚಿದಂಬರಂ, ಬಿ.ಎ., ಎಲ್‌ಎಲ್.ಬಿ. ಅವರು ಸಂಘದ ಪ್ರತಿನಿಧಿಗಳಾಗಿ ಹೋಗಿ ಭಾಗವಹಿಸಿದ್ದರು. ೧೯೩೭ನೆಯ ಮೇ ತಿಂಗಳಿನಲ್ಲಿ ನಡೆದ ವಿಶೇಷ ಸಾಹಿತ್ಯೋತ್ಸವ ಮತ್ತು ೨ನೆಯ ಸಂಘಸಮ್ಮೇಳನಕ್ಕೆ ಸಂಘದ ಪರವಾಗಿ ಕಾರ್ಯದರ್ಶಿಯವರಾದ ಶ್ರೀ ಎಸ್.ವಿ. ಕೃಷ್ಣಮೂರ್ತಿರಾಯರು ಹೋಗಿ ಭಾಗವಹಿಸಿದ್ದರು. ವಿಶೇಷ ಸಾಹಿತ್ಯೋತ್ಸವಕ್ಕೆ ಸಂಘದಿಂದ ರೂ. ೨೦ಗಳ ಧನ ಸಹಾಯ ಮಾಡಲಾಯಿತು. (೨) ೧೯೩೬ನೆಯ ಡಿಸೆಂಬರ್ ತಿಂಗಳಲ್ಲಿ ಹಂಪೆಯಲ್ಲಿ ನಡೆದ ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವಕ್ಕೆ ಸಂಘದಿಂದ ರೂ. ೧೦ಗಳನ್ನೂ ಪುರಜನರಿಂದ ರೂ. ೭೯ಗಳ ಧನ ಸಹಾಯವನ್ನೂ ಒದಗಿಸಲಾಯಿತು. ವಿಜಯನಗರ ಸ್ಮಾರಕೋತ್ಸವ ಸಂಬಂಧ ಸಂಘದಲ್ಲಿ ಡಾ|| ಎಂ.ಎಚ್. ಕೃಷ್ಣ, ಎಂ.ಎ, ಡಿ.ಲಿಟ್. ಅವರಿಂದ 'ಭಾರತದ ಇತಿಹಾಸದಲ್ಲಿ ವಿಜಯನಗರದ ಸ್ಥಾನ' ಎಂಬ ವಿಷಯವಾಗಿಯೂ, ಶ್ರೀಮಾನ್ ಬೇಲೂರು ಕೇಶವದಾಸರಿಂದ 'ವಿಜಯನಗರ ಸ್ಮಾರಕೋತ್ಸವ' ಎಂಬ ವಿಷಯವಾಗಿಯೂ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. (೩) ತಾ|| ೧೦-೧೧-೩೬ರಲ್ಲಿ ಸಂಘದ ಕಾರ್ಯನಿರ್ವಾಹಕ ಸಮಿತಿ ಸಭೆಯಲ್ಲಿ ಬೊಂಬಾಯಿ ಸರ್ಕಾರದವರು ಕನ್ನಡ ಜಿಲ್ಲೆಗಳಲ್ಲಿ ಮರಾಠಿ ಭಾಷೆಗೆ ಪ್ರೋತ್ಸಾಹವಿತ್ತು ಕನ್ನಡ ಭಾಷೆಯನ್ನು ಹೊರದೂಡುತ್ತಿರುವ ಬಗ್ಗೆ ಸಂಘದ ಅಸಮಾಧಾನವನ್ನು ಸೂಚಿಸುವ ಠರಾವನ್ನು ಮಾಡಿಕಳುಹಿಸಲಾಯಿತು. (೪) ಜಿಲ್ಲಾ ಸಂಘ ಸಮ್ಮೇಳನ: ಜಿಲ್ಲೆಯ ಸಂಘಗಳ ಕಾರ್ಯಕ್ರಮವನ್ನು ಒಮ್ಮುಖವಾಗಿ ರೂಪುಗೊಳಿಸುವುದಕ್ಕೂ ಮತ್ತು ಸಂಘಗಳ ಕಾರ್ಯಕರ್ತರ ಪರಸ್ಪರ ಪರಿಚಯ ಮಾಡಿಕೊಳ್ಳುವುದಕ್ಕೂ ಸಹ ಜಿಲ್ಲೆಯ ಮೊದಲನೆಯ ಸಂಘ ಸಮ್ಮೇಳನವನ್ನು ತಾ|| ೭-೨-೩೭ನೆಯ ದಿನ ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯ, ಎಂ.ಎ. ಅವರ ಅಧ್ಯಕ್ಷತೆಯಲ್ಲೂ, ಎರಡನೆಯ ಸಮ್ಮೇಳನವನ್ನು ತಾ|| ೨೦-೩-೩೮ನೆಯ ದಿನ ಶ್ರೀಮಾನ್ ಸಿ.ಕೆ. ವೆಂಕಟರಾಮಯ್ಯ, ಎಂ.ಎ., ಎಲ್‌ಎಲ್.ಬಿ. ಅವರ ಅಧ್ಯಕ್ಷತೆಯಲ್ಲಿಯೂ ಸೇರಿಸಲಾಯಿತು. ಮೊದಲನೆಯ ಸಮ್ಮೇಳನವನ್ನು ಜಿಲ್ಲಾಧಿಕಾರಿಗಳಾಗಿದ್ದ ಶ್ರೀಮಾನ್ ಎಸ್. ನಾರಾಯಣರಾವ್, ಎಂ.ಎ. (ಆನರ್ಸ್) ಅವರೂ,

ಎರಡನೆಯ ಸಮ್ಮೇಳನವನ್ನು, ಜಿಲ್ಲಾಧಿಕಾರಿಗಳಾದ ಶ್ರೀಮಾನ್ ಎಂ. ಶೇಷಾದ್ರಿ, ಎಂ.ಎ. ಅವರೂ ಪ್ರಾರಂಭಿಸಿದರು. ಮೊದಲನೆಯ ಸಮ್ಮೇಳನಕ್ಕೆ ಆಗುಂಬೆ, ತೀರ್ಥಹಳ್ಳಿ, ನಗರ, ಹೊಸನಗರ, ಹೊನ್ನಾಳಿ, ಶಿರಾಳಕೊಪ್ಪ, ಸೋದರ ಸಂಘ ಶಿವಮೊಗ್ಗ, ಹೈಸ್ಕೂಲ್ ಕರ್ನಾಟಕ ಸಂಘ ಶಿವಮೊಗ್ಗ, ಹೊಸನಗರ, ಕುಂಸಿ, ಆನವಟ್ಟಿ, ಸಾಗರ, ಆಗುಂಬೆ, ನರಸಿಂಹರಾಜಪುರಗಳಿಂದಲೂ, ಸಂಘದ ಪ್ರತಿನಿಧಿಗಳು ಬಂದು ಇದ್ದರು. ಅಲ್ಲದೆ ಈ ಸಂಘದ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರೂ ಮತ್ತು ಸದಸ್ಯರುಗಳೂ ಭಾಗವಹಿಸಿ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿರುತ್ತಾರೆ. (೫) ನಾಡ ಹಬ್ಬ: ಕನ್ನಡ ಸಾಹಿತ್ಯ ಪರಿಷತ್ತಿನ ಸಲಹೆಯಂತೆ ತಾ|| ೧೦-೧೦-೩೭ ಮತ್ತು ತಾ|| ೧೧-೧೦-೩೭ನೆಯ ದಿನಗಳಲ್ಲಿ ಶಿವಮೊಗ್ಗೆಯಲ್ಲಿ ಮೊದಲನೆಯ ಬಾರಿ ಕನ್ನಡ ನಾಡ ಹಬ್ಬವನ್ನು ಜಿಲ್ಲಾ ವಿದ್ಯಾಧಿಕಾರಿಗಳಾಗಿದ್ದ ಶ್ರೀಮಾನ್ ಎ. ವಾಸುದೇವರಾವ್, ಬಿ.ಎ. ಅವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಧಾರವಾಡದ ಕರ್ನಾಟಕ ಕಾಲೇಜಿನ ಸಂಸ್ಕೃತ ಅಧ್ಯಾಪಕರಾದ ಶ್ರೀಮಾನ್ ಆರ್.ವ್ಹಿ. ಜಾಗಿರದಾರ್, ಎಂ.ಎ. (ಲಂಡನ್) ಅವರೂ ಕನ್ನಡ ಅಧ್ಯಾಪಕರಾದ ಶ್ರೀಮಾನ್ ಎಸ್.ಎಸ್. ಮಾಳವಾಡ, ಎಂ.ಎ. ಅವರೂ ಸಂಘದ ಆಹ್ವಾನವನ್ನು ಅಂಗೀಕರಿಸಿ ಬಂದು ಭಾಗವಹಿಸಿದ್ದರು. ಅದೇ ಸಮಯದಲ್ಲಿ ಒಂದು ಸಾಹಿತ್ಯ ಮತ್ತು ಕಲಾ ಪ್ರದರ್ಶನವನ್ನೂ, ಕನ್ನಡ ದಾಸರ ಮತ್ತು ಶಿವಶರಣರ ಕೀರ್ತನೆಗಳ ಹಾಡುಗಾರಿಕೆಯನ್ನೂ ಏರ್ಪಡಿಸಲಾಗಿತ್ತು. ೩೦-೯-೩೮ ಮತ್ತು ೧-೧೦-೩೮ನೆಯ ತಾರೀಖುಗಳಲ್ಲಿ ನಾಡಿನ ಪ್ರಸಿದ್ಧ ಕವಿಗಳಾದ ಶ್ರೀಮಾನ್ ಕೆ.ವಿ. ಪುಟ್ಟಪ್ಪ, ಎಂ.ಎ. ಅವರ ಅಧ್ಯಕ್ಷತೆಯಲ್ಲಿ ಎರಡನೆಯ ನಾಡ ಹಬ್ಬವನ್ನು ಆಚರಿಸಲಾಯಿತು. ಶ್ರೀಯುತ ಪುಟ್ಟಪ್ಪನವರು ಅಂದು ಮಾಡಿದ ಭಾಷಣವು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆಯಾದ 'ಪ್ರಬುದ್ಧ ಕರ್ನಾಟಕ'ದ ಬಹುಧಾನ್ಯ ಸಂವತ್ಸರದ ಸಂಕ್ರಾಂತಿ ಸಂಚಿಕೆಯಲ್ಲಿ ಪ್ರಕಟವಾಗಿದೆ. ಮಕ್ಕಳ ನೃತ್ಯ ಗೀತ, ಭಾಷಣಗಳು, ಸ್ಥಳೀಯ ಲೇಖಕರ ಗೋಷ್ಠಿ, ದಾಸರ ಮತ್ತು ಶಿವಶರಣರ ಕೀರ್ತನೆಗಳ ಹಾಡುಗಾರಿಕೆ -ಇವು ಮುಖ್ಯ ಕಾರ್ಯಕ್ರಮಗಳಾಗಿದ್ದವು. ಆಗ್ಗೆ ಸೇರಿಸಿದ ರೂ. ೮-೨-೦ಗಳ ನಿಧಿಯನ್ನು ಪರಿಷತ್ತಿನ ಶಾಶ್ವತ ನಿಧಿಗೆ ಕಳುಹಿಸಲಾಯಿತು. ವಿವರಗಳನ್ನು ಅನುಬಂಧದಲ್ಲಿ ಕೊಟ್ಟಿದೆ. (೬) ಸಾಹಿತ್ಯ ಸಮ್ಮೇಳನ: ಜಮಖಂಡಿಯಲ್ಲಿ ನಡೆದ ೨೨ನೆಯ ಸಾಹಿತ್ಯ ಸಮ್ಮೇಳನದಲ್ಲಿ ಸಂಘದ ಪರವಾಗಿ ಶ್ರೀಮಾನ್ ಕೂಡಲಿ ಚಿದಂಬರಂ ಅವರೂ, ಬಳ್ಳಾರಿಯಲ್ಲಿ ೧೯೩೮ನೆಯ ಡಿಸೆಂಬರಿನಲ್ಲಿ ನಡೆದ ೨೩ನೆಯ ಸಮ್ಮೇಳನದಲ್ಲಿ ಸಂಘದ ಕಾರ್ಯದರ್ಶಿಗಳಾದ ಶ್ರೀಮಾನ್ ಎಸ್.ವಿ. ಕೃಷ್ಣಮೂರ್ತಿರಾಯರೂ ಪ್ರತಿನಿಧಿಗಳಾಗಿ ಹೋಗಿ ಸಮ್ಮೇಳನದಲ್ಲಿಯೂ ಪರಿಷತ್ ಸದಸ್ಯರ ಅಧಿವೇಶನದಲ್ಲಿಯೂ ಪ್ರಮುಖ ಪಾತ್ರವಹಿಸಿದ್ದರು. (೭) ಗ್ರಾಮಾಂತರಗಳಲ್ಲಿ ವಿಶೇಷ ಸಾಹಿತ್ಯೋತ್ಸವ: ಬೆಂಗಳೂರಿನಲ್ಲಿ ಮಾತ್ರ ನಡೆಯುತ್ತಿದ್ದ ವಿಶೇಷ ಸಾಹಿತ್ಯೋತ್ಸವದ ಉಪಯೋಗವು ಗ್ರಾಮಾಂತರಗಳಿಗೂ ಲಭಿಸಬೇಕೆಂಬ ಸಲಹೆಯ ಪ್ರಯೋಜನವು ಮೊದಲು ಶಿವಮೊಗ್ಗ ಜಿಲ್ಲೆಗೆ ದೊರೆಯಿತು. ಬನವಾಸಿಯ ನಾಡಿನವರಾದ ಆನವಟ್ಟಿಯ ಕರ್ನಾಟಕ ಸಂಘದವರು ಈ ಉತ್ಸವದ ಏರ್ಪಾಡಿನ ಹೊರೆಯನ್ನು ನಿರ್ವಹಿಸಲು ಮುಂದೆ ಬಂದು ಆ ಪ್ರಾಂತದ ಪ್ರಮುಖರನ್ನೊಳಗೊಂಡ ಒಂದು ಸ್ವಾಗತ ಮಂಡಲಿಯನ್ನು ರಚಿಸಿ ಮಧ್ಯೆ ಅನೇಕ ವಿಘ್ನಗಳು ಬಂದಾಗ್ಯೂ ಎದೆಗುಂದದೆ ವಿಶೇಷ ಸಾಹಿತ್ಯೋತ್ಸವವನ್ನು ಅತಿ ವಿಜೃಂಭಣೆಯಿಂದ ಯಶಸ್ವಿಯಾಗಿ ನಡೆಸಿದರು. ಆನವಟ್ಟಿಯು ಶಿವಮೊಗ್ಗೆಗೆ ೬೦ ಮೈಲಿ ದೂರದಲ್ಲಿರುವ ಒಂದು

ಸಣ್ಣ ಹಳ್ಳಿ ಮಾತ್ರ. ಆದರೂ ಅಲ್ಲಿಯ ಸಾರ್ವಜನಿಕ ಮುಖಂಡರ ಮತ್ತು ಅಧಿಕಾರಿ ವರ್ಗದರರ ಸಹಕಾರದಿಂದ ಉತ್ಸವವು ದೊಡ್ಡ ಸಮಾರಂಭವಾಗಿತ್ತು. ಪ್ರತಿನಿತ್ಯವೂ ಬೆಳಿಗ್ಗೆ, ಸಂಜೆ ಸಾವಿರಾರು ಜನರು ಸೇರುತ್ತಿದ್ದುದಲ್ಲದೆ, ಗಡಿನಾಡಿನ ತಾಲ್ಲೂಕುಗಳಾದ ಹಾವೇರಿ, ಹಾನಗಲ್ಲು, ಶಿರಸಿ, ಹಿರೇಕೆರೂರು ಪ್ರಾಂತಗಳಿಂದಲೂ ಜನರು ಬಂದು ಉತ್ಸವದ ಉಪಯುಕ್ತತೆಯನ್ನು ಪಡೆದರು. ಸುಮಾರು ೧೫೦ ಜನ ಉಪಾಧ್ಯಾಯರು ಉಪನ್ಯಾಸಗಳ ಪ್ರಯೋಜನಗಳನ್ನು ಪಡೆದರು. ಬೊಂಬಾಯಿ ಸರಕಾರದ ಮರಾಮತ್ ಇಲಾಖೆಯ ಮಂತ್ರಿಗಳ ಕಾರ್ಯದರ್ಶಿಗಳಾದ ಮಾನ್ಯ ಶ್ರೀಮಾನ್ ಟಿ.ಆರ್. ನೆಸ್ವಿ, ಬಿ.ಎ. ಅವರು ಉತ್ಸವದ ಪ್ರಾರಂಭವನ್ನು ನೆರವೇರಿಸಿದರು. ಕನ್ನಡ ನಾಡಿನ ಪ್ರಸಿದ್ಧ ಸಾಹಿತಿಗಳಾದ ರಾಜಸೇವಾಸಕ್ತ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ಶ್ರೀಮಾನ್ ಜಿ.ಪಿ. ರಾಜರತ್ನಂ, ಎಂ.ಎ., ಶ್ರೀಮಾನ್ ಶಿವರಾಮ ಕಾರಂತ, ಶ್ರೀಮಾನ್ ವಿ. ಸೀತಾರಾಮಯ್ಯ, ಎಂ.ಎ., ಶ್ರೀಮಾನ್ ಪಿ. ಶ್ರೀನಿವಾಸರಾವ್, ಎಂ.ಎಸ್‌ಸಿ., ಶ್ರೀಮಾನ್ ಲಕ್ಷ್ಮಣರಾವ್ ಹೊಯ್ಸಳ ಅವರೂ, ಗಮಕವಿದ್ವಾನ್ ಕಳಲೆ ಸಂಪತ್ಕುಮಾರಾಚಾರ್ಯ, ಬಿ.ಎ., ಬಿ.ಟಿ. ಅವರೂ, ಶಿವಮೊಗ್ಗೆಯಿಂದ ಜಿಲ್ಲಾ ಸ್ಕೂಲ್ ಬೋರ್ಡು ಅಧ್ಯಕ್ಷರಾದ ಶ್ರೀಮಾನ್ ಹೆಚ್. ಲಿಂಗಪ್ಪ, ಬಿ.ಎ., ಎಲ್‌ಎಲ್.ಬಿ. ಅವರೂ, ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀಮಾನ್ ಅಬ್ದುಲ್ ಅಜೀಜ್ ಖಾನ್, ಎಂ.ಎಸ್‌ಸಿ., ಬಿ.ಟಿ. ಅವರೂ, ನ್ಯಾಯ ವಿಧಾಯಕ ಸಭೆಯ ಸದಸ್ಯರಾವ ಶ್ರೀಮಾನ್ ಬಿ.ಆರ್. ಪುಟ್ಟಸಂಜಪ್ಪ, ಎಂ.ಎ., ಎಲ್‌ಎಲ್.ಬಿ. ಅವರೂ, ಶ್ರೀ ಎಸ್.ವಿ. ಕೃಷ್ಣಮೂರ್ತಿರಾಯರೂ ಉತ್ಸವದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಜಿಲ್ಲಾಧಿಕಾರಿಗಳೂ ಸಂಘದ ಗೌರವ ಅಧ್ಯಕ್ಷರೂ ಆದ ಶ್ರೀಮಾನ್ ಎಂ. ಶೇಷಾದ್ರಿ, ಎಂ.ಎ. ಅವರು ಸ್ಥಳೀಯ ಅಧಿಕಾರಿಗಳ ಸಹಾಯವನ್ನು ಒದಗಿಸಿಕೊಟ್ಟು ಸಹಾಯ ಮಾಡಿದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಸಾಹುಕಾರ್ ಶ್ರೀಮಾನ್ ಎಣ್ಣೆಕೊಪ್ಪದ ಮಲ್ಲಿಕಾರ್ಜುನಪ್ಪ ಗೌಡರು, ಉಪಾಧ್ಯಕ್ಷರುಗಳಾದ ಶ್ರೀಮಾನ್ ಗುರುನಾಥ ಕೃಷ್ಣ ನಾಡಿಗೇರ್, ಶ್ರೀಮಾನ್ ಕೆ.ಪಿ. ರುದ್ರಪ್ಪ ಗೌಡ, ಕಾರ್ಯದರ್ಶಿಗಳಾದ ಶ್ರೀಮಾನ್ ನಾಡಿಗ ರಾಮರಾವ್, ಬಿ.ಎ. ಅವರೂ, ಶ್ರೀಮಾನ್ ಮೂಗೂರು ಹನುಮಂತಾಚಾರ್ಯರೂ, ಡಾಕ್ಟರ್ ಜಿ.ವಿ. ಶ್ರೀನಿವಾಸಾಚಾರ್ಯರೂ ವಿಶೇಷ ಶ್ರಮವಹಿಸಿ ಉತ್ಸವವನ್ನು ಯಶಸ್ವಿಯಾಗಿ ನಡೆಸಿದರು. ಸಂಘದ ಕಾರ್ಯನಿರ್ವಾಹಕ ಸಮಿತಿಯವರೂ, ಕಾರ್ಯದರ್ಶಿಗಳೂ ಈ ಉತ್ಸವದ ಏರ್ಪಾಟಿನಲ್ಲಿ ಸಹಕರಿಸಿದುದಲ್ಲದೆ, ಸಂಘದಿಂದ ಉತ್ಸವಕ್ಕೆ ರೂ. ೨೫೦ಗಳ ಧನ ಸಹಾಯವನ್ನು ಕೊಡಲಾಯಿತು. (೮) ವಾರ್ಷಿಕೋತ್ಸವಗಳು: ಸಂಘದ ಆರನೆಯ ವಾರ್ಷಿಕೋತ್ಸವವನ್ನು ತಾ|| ೬-೨-೧೯೩೦ನೆಯ ದಿನ ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರಾಗಿದ್ದ ದಿವಂಗತ ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯನವರ ಅಧ್ಯಕ್ಷತೆಯಲ್ಲೂ, ತಾ|| ೧೯-೩-೩೮ನೆಯ ದಿನ ಸಂಘದ ಏಳನೆಯ ವಾರ್ಷಿಕೋತ್ಸವವನ್ನು ಮೈಸೂರು ಸರ್ಕಾರದ ಕನ್ನಡ ಭಾಷಾಂತರಕಾರರಾದ ಶ್ರೀಮಾನ್ ಸಿ.ಕೆ. ವೆಂಕಟರಾಮಯ್ಯ, ಎಂ.ಎ., ಎಲ್‌ಎಲ್.ಬಿ. ಅವರ ಅಧ್ಯಕ್ಷತೆಯಲ್ಲಿಯೂ ನೆರವೇರಿಸಲಾಯಿತು. ಇವರುಗಳು ಸಂಘವು ಕೈಗೊಂಡಿರುವ ಕೆಲಸವನ್ನು ಕೇಳಿ ತಿಳಿದು ಸಂತೋಷಪಟ್ಟುದಲ್ಲದೆ, ತಮ್ಮ ಉದಾತ್ತ ಭಾಷಣಗಳ ಮೂಲಕ ಸಂಘಕ್ಕೆ ವಿಶೇಷ ಪ್ರೋತ್ಸಾಹ ಕೊಟ್ಟಿರುತ್ತಾರೆ. (೯) ತಾ|| ೧-೩-೩೬ನೆಯ ದಿನ ನಡೆದ ಸಾಮಾನ್ಯ ಸಪಸ್ಕರ ಸಭೆಯಲ್ಲಿ ಸಂಸ್ಥಾನದ ದಿವಾನರಾದ ಸರ್ ಮಿರ್ಜಾ ಎಂ. ಇಸ್ಮೇಲ್‌ರವರಿಗೆ ಸಾರ್ವಭೌಮ ಸರಕಾರದಿಂದ 'ಕೆ.ಸಿ.ಐ.ಇ.' ಎಂಬ

18929

ಗಣ್ಯವಾದ ಬಿರುದು ಬಂದುದಕ್ಕಾಗಿ ಅಭಿನಂದಿಸುವ ನಿರ್ಣಯವನ್ನೂ, ಕರ್ನಾಟಕದ ಸುಪ್ರಸಿದ್ಧ ಕವಿಗಳಾದ ರಾಜಕವಿಭೂಷಣ ಶ್ರೀಮಾನ್ ಲಿಂಗರಾಜೇ ಅರಸಿನವರ ನಿಧನದ ಬಗ್ಗೆ ಸಂತಾಪವನ್ನು ಸೂಚಿಸುವ ನಿರ್ಣಯವನ್ನೂ, ತಾ॥ ೨೫-೬-೩೭ರ ಸದಸ್ಯರ ಸಭೆಯಲ್ಲಿ ಶ್ರೀಮಾನ್ ಎನ್.ಎಸ್. ಸುಬ್ಬರಾವ್, ಎಂ.ಎ., ಬಾರ್-ಅಟ್-ಲಾ ಅವರನ್ನು ಮೈಸೂರು ವಿಶ್ವವಿದ್ಯಾನಿಲಯದ ವೈಸ್-ಛಾನ್ಸೆಲರ್ ಪದವಿಗೆ ನೇಮಿಸಿದ್ದಕ್ಕಾಗಿ ಅಭಿನಂದನೆಯ ನಿರ್ಣಯವನ್ನೂ, ಮೈಸೂರು ಸರಕಾರದವರು ಸಂಸ್ಥಾನದ ಪ್ರೌಢಶಾಲೆಗಳಲ್ಲಿ ಭಾಷೇತರ ವಿಷಯಗಳನ್ನು ಕನ್ನಡದಲ್ಲಿಯೇ ಬೋಧಿಸಬೇಕೆಂಬ ಆಜ್ಞೆ ಮಾಡಿದುದಕ್ಕಾಗಿ ಅಭಿನಂದನೆಯ ನಿರ್ಣಯವನ್ನೂ, ತಾ॥ ೩೦-೧೦-೩೭ನೆಯ ದಿನದ ಸದಸ್ಯರ ಸಭೆಯಲ್ಲಿ ಕನ್ನಡ ನಾಡಿನ ಸುಪ್ರಸಿದ್ಧ ಸಾಹಿತಿಗಳಾದ ಶ್ರೀಮಾನ್ ಪಂಜೆ ಮಂಗೇಶರಾಯರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವನ್ನೂ ಅನುಮೋದಿಸಲಾಯಿತು. ತಾ॥ ೬-೧೦-೩೭ನೆಯ ದಿನ ಸಂಘದ ಗೌರವ ಅಧ್ಯಕ್ಷರಾಗಿದ್ದ ಶ್ರೀಮಾನ್ ಎಸ್. ನಾರಾಯಣರಾಯರಿಗೆ ಸತ್ಕಾರ ಸಭೆಯನ್ನು ಏರ್ಪಡಿಸಲಾಗಿತ್ತು. (೧೦) ತಾ॥ ೨೭-೬-೩೮ನೆಯ ದಿನ ಬಂಕಿಮ ಚಂದ್ರ ಛತರ್ಜಿಯವರ ಶತಮಾನೋತ್ಸವ ದಿನವನ್ನು ಏರ್ಪಡಿಸಲಾಗಿತ್ತು. ಶ್ರೀಮಾನ್ ಕೂಡಲಿ ಚಿದಂಬರಂ ಅವರು ಬಂಕಿಮ ಚಂದ್ರರ ಜೀವನ ಚರಿತ್ರೆಯ ಮೇಲೂ, ಅಡ್ವೊಕೇಟ್ ಶ್ರೀಮಾನ್ ಹೆಚ್. ಶ್ರೀನಿವಾಸ ರಾವ್, ಬಿ.ಎ., ಬಿ.ಎಲ್. ಅವರು ವೆಂಕಟಾಚಾರ್ಯರ ಕಾದಂಬರಿಗಳ ಮೇಲೂ ಉಪನ್ಯಾಸಗಳನ್ನು ಮಾಡಿದರು. (೧೧) ಜನಜೀವನದ ಮೇಲೆ ಪರಿಣಾಮಕಾರಿಗಳಾದ ವಿಷಯಗಳ ಮೇಲೆ ಸಾರ್ವಜನಿಕ ಮುಖಂಡರ ಅಭಿಪ್ರಾಯಗಳನ್ನು ಕೇಂದ್ರೀಕರಿಸಿ ಸ್ಪಷ್ಟಗೊಳಿಸಬೇಕೆಂಬ ಉದ್ದೇಶದಿಂದ ತಾ॥ ೭-೮-೩೮ನೆಯ ದಿನ ಅಡ್ವೊಕೇಟ್ ಶ್ರೀಮಾನ್ ಎಂ. ಸುಬ್ಬರಾವ್, ಬಿ.ಎ., ಎಲ್‌ಎಲ್.ಬಿ. ಅವರ ಅಧ್ಯಕ್ಷತೆಯಲ್ಲಿ "ವಾರ್ಧಾ ಶಿಕ್ಷಣ ಕ್ರಮವು ದೇಶದ ಹಿತಕ್ಕೆ ವಿರೋಧವೂ, ಆಚರಣೆಗೆ ತರಲು ಅಸಾಧ್ಯವೂ ಆಗಿದೆ" ಎಂಬ ವಿಷಯವಾಗಿ ಚರ್ಚಾಕೂಟವನ್ನು ಏರ್ಪಡಿಸಲಾಗಿತ್ತು. ಸ್ಕೂಲ್ ಬೋರ್ಡು ಅಧ್ಯಕ್ಷರಾದ ಶ್ರೀಮಾನ್ ಹೆಚ್. ಲಿಂಗಪ್ಪ, ಬಿ.ಎ. ಎಲ್‌ಎಲ್.ಬಿ. ಅವರು ಮತ್ತು ನ್ಯಾಯವಿಧಾಯಕ ಸಭೆಯ ಸದಸ್ಯರಾದ ಶ್ರೀಮಾನ್ ಬಿ.ಆರ್. ಪುಟ್ಟನಂಜಪ್ಪ, ಎಂ.ಎ., ಎಲ್‌ಎಲ್.ಬಿ. ಅವರು ಪರವಾಗಿಯೂ, ನಾರ್ಮಲ್ ಸ್ಕೂಲ್ ಮುಖ್ಯೋಪಾಧ್ಯಾಯರಾದ ಶ್ರೀಮಾನ್ ಬಿ. ಸುಬ್ಬಣ್ಣಾಚಾರ್, ಬಿ.ಎಸ್‌ಸಿ., ಬಿ.ಟಿ. ಅವರು ಮತ್ತು ನ್ಯಾಯವಿಧಾಯಕ ಸಭೆಯ ಸದಸ್ಯರಾದ ಶ್ರೀಮಾನ್ ಹೆಚ್. ಸಿದ್ಧಯ್ಯ, ಬಿ.ಎ., ಎಲ್‌ಎಲ್.ಬಿ. ಅವರು ವಿರೋಧವಾಗಿಯೂ ಮಾತನಾಡಿದರು. ಅನೇಕ ಸದಸ್ಯರೂ ಚರ್ಚೆಯಲ್ಲಿ ಭಾಗವಹಿಸಿದರು. ೪ ಗಂಟೆಗಳ ಕಾಲ ಚರ್ಚೆ ನಡೆದು ನಿರ್ಣಯವು ಬಹುಮತದಿಂದ ಬಿದ್ದು ಹೋಯಿತು.

೮. ಗ್ರಂಥ ಪ್ರಕಟನೆ- ಗ್ರಂಥ ಪ್ರಕಟನಾ ಕಾರ್ಯವು ಪ್ರಾರಂಭದಿಂದಲೂ ಸಂಘದ ಮುಖ್ಯೋದ್ದೇಶಗಳಲ್ಲಿ ಒಂದಾಗಿದೆ. ಸಂಘದ ಪ್ರಕಟನೆಯಾದ 'ರಕ್ತಾಕ್ಷಿ' ಎಂಬ ನಾಟಕ ಗ್ರಂಥವನ್ನು ಮೈಸೂರು ವಿಶ್ವವಿದ್ಯಾನಿಲಯದವರು ಬಿ.ಎ., ಬಿ.ಎ. (ಆನರ್ಸ್), ಬಿ.ಎಸ್‌ಸಿ., ಬಿ.ಎಸ್‌ಸಿ. (ಆನರ್ಸ್) ಪರೀಕ್ಷೆಗಳಿಗೂ, ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ವಿ.ಟಿ.ಸಿ. ಪರೀಕ್ಷೆಗೂ ಪಠ್ಯಪುಸ್ತಕವನ್ನಾಗಿ ನೇಮಿಸಿದ್ದರಿಂದಲೂ ಮೊದಲನೆಯ ಮುದ್ರಣದ ಪ್ರತಿಗಳೆಲ್ಲವೂ ಮುಗಿದ ಕಾರಣದಿಂದಲೂ ಪುನರ್ಮುದ್ರಣ ಕಾರ್ಯವನ್ನು ಕೈಗೊಳ್ಳಬೇಕಾಯಿತು. ಕಳೆದ ಮೂರು ವರ್ಷಗಳಲ್ಲಿ ಸಂಘವು ಈ ಕೆಳಗಿನ ಪಟ್ಟಿಯಲ್ಲಿ ಕಂಡಂತೆ ಗ್ರಂಥ ಪ್ರಕಟನ ಕಾರ್ಯವನ್ನು ಕೈಗೊಂಡಿದೆ:

ವರ್ಷ	ಗ್ರಂಥದ ಹೆಸರು	ಗ್ರಂಥಕರ್ತರು	ವಿಷಯ	ಪ್ರತಿಗಳು
೧೯೩೬	ರಕ್ತಾಕ್ಷಿ (ದ್ವಿತೀಯ ಮುದ್ರಣ)	ಕೆ.ವಿ. ಪುಟ್ಟಪ್ಪ ಎಂ.ಎ.	ನಾಟಕ	೧,೦೦೦
೧೯೩೭	ಹಗಲುಗನಸುಗಳು	ಎ.ಎನ್. ಮೂರ್ತಿರಾವ್ ಎಂ.ಎ	ಪ್ರಬಂಧಗಳು	೧,೦೦೦
”	ನೆಳಲು-ಬೆಳಕು	ವಿ. ಸೀತಾರಾಮಯ್ಯ, ಎಂ.ಎ.	ಕವನ ಸಂಗ್ರಹ	೬೯೭
೧೯೩೮	ವಿಜ್ಞಾನ	ಜಿ. ಹನುಮಂತರಾವ್ ಎಂ.ಎ.	ಲೇಖನಗಳು	೪೦೦
”	ನಾದಲೀಲೆ	ದ.ರಾ. ಬೇಂದ್ರೆ, ಎಂ.ಎ.	ಕವನಗಳು	೧,೦೦೦

ಸಂಘದ ಎಲ್ಲ ಪ್ರಕಟನೆಗಳೂ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರಿಂದ ಶಾಲೆಗಳ ಪುಸ್ತಕ ಭಂಡಾರಗಳಿಗೆ ಸಿಫಾರಸು ಮಾಡಲ್ಪಟ್ಟಿವೆ. ವಿಷಯ ಗೌರವ, ಉಪಯುಕ್ತತೆ, ಅಂದವಾದ ಮುದ್ರಣಗಳಿಗೆ ಕುಂದು ತಾರದಂತೆ ಆದಷ್ಟು ಕಡಮೆ ಬೆಲೆಯಲ್ಲಿ ಪುಸ್ತಕಗಳನ್ನು ಅಚ್ಚುಹಾಕಿಸಲಾಗುತ್ತಿದೆ. 'ನಾದಲೀಲೆ'ಯ ರಕ್ಷಾಕವಚಕ್ಕೆ ಭಾವೋದ್ದೀಪಕ ಚಿತ್ರವನ್ನು ಬರೆದು ಕೊಟ್ಟ ಶ್ರೀಮಾನ್ ಆನಂದರಿಗೆ ನಾವು ಚಿರಋಣಿಗಳು. ಸಂಘದ ಗ್ರಂಥಗಳನ್ನು ಕಾಲ ಕಾಲಕ್ಕೆ ಅಂದವಾಗಿ ಮುದ್ರಣ ಮಾಡಿಕೊಡುತ್ತಲಿರುವ ಬೆಂಗಳೂರು ಪ್ರೆಸ್ಸಿನ ಅಧಿಕಾರಿಗಳಿಗೆ ನಾವು ಕೃತಜ್ಞರು. ಸಂಘದ ನಾಲ್ಕನೆಯ ಪ್ರಕಟನೆಯಾದ 'ಗಂಡುಗೊಡಲಿ'ಯ ಪ್ರತಿಗಳೆಲ್ಲವೂ ಮುಗಿದಿವೆ. 'ಮೇಘಸಂದೇಶ'ದ ಪ್ರತಿಗಳು ಕೆಲವು ಮಾತ್ರ ಇವೆ. ಸಂಘದ ಪ್ರಕಟನೆಗಳು ಅಖಿಲ ಕರ್ನಾಟಕದಲ್ಲಿ ಜನಾದರಣೀಯವಾಗಿವೆ. ಸಂಘದ ಕಾರ್ಯಕ್ಷೇತ್ರದ ವ್ಯಾಪ್ತಿಯು ಸರ್ವತೋಮುಖವಾಗಿ ಹೆಚ್ಚಿರುವುದಕ್ಕೆ ಸಂಘವು ಕೈಗೊಂಡಿರುವ ನಿರ್ದಿಷ್ಟವಾದ ಗ್ರಂಥ ಪ್ರಕಟನ ಕಾರ್ಯ ಮತ್ತು ವ್ಯಾಪಾರ ಶಾಖೆಯು ಬಹುಮಟ್ಟಿಗೆ ಕಾರಣ.

೯. **ಪುಸ್ತಕ ಭಂಡಾರ–** "ಸಂಘದ ಉದ್ದೇಶಗಳಲ್ಲಿ ವಾಚನಾಲಯ ಮತ್ತು ಪುಸ್ತಕ ಭಂಡಾರಗಳನ್ನು ಸ್ಥಾಪಿಸಬೇಕಾದ್ದು ಅತ್ಯವಶ್ಯಕವಾಗಿ ಮಾಡಬೇಕಾದ ಕಾರ್ಯವಾಗಿದೆ" ಎಂದು ಶ್ರೀಮಾನ್ ಕೂಡಲಿ ಚಿದಂಬರಂ ಅವರು ತಮ್ಮ ಮೊದಲ ಐದು ವರ್ಷಗಳ ವರದಿಯಲ್ಲಿ ತಿಳಿಸಿದ್ದರು. ಈ ಕೊರತೆಯನ್ನು ನಿವಾರಿಸಲು ೫-೪-೧೯೩೬ನೆಯ ದಿನ (ಈಚೆಗೆ ದಿವಂಗತರಾದ) ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯ, ಎಂ.ಎ. ಅವರ ಅಧ್ಯಕ್ಷತೆಯಲ್ಲಿ ೨೧೪ ಪುಸ್ತಕಗಳನ್ನೊಳಗೊಂಡ ಒಂದು ಸಣ್ಣ ಗ್ರಂಥಭಂಡಾರವನ್ನು ಪ್ರಾರಂಭಿಸಲಾಯಿತು. ಪುಸ್ತಕ ಭಂಡಾರದ ಬೆಳವಣಿಗೆಯನ್ನು ಈ ಕೆಳಗಿನ ಪಟ್ಟಿಯಲ್ಲಿ ಕಾಣಬಹುದು:-

ವರ್ಷ	ಪುಸ್ತಕಗಳ ಸಂಖ್ಯೆ		ಖರ್ಚುಮಾಡಿದ ಹಣ	ಉಚಿತವಾಗಿ ಬಂದ ಪುಸ್ತಕಗಳು	ವಸೂಲಾದ ಚಂದಾ	ದಿನಾ ಕೊಟ್ಟ ಪುಸ್ತಕಗಳ ಸಂಖ್ಯೆ	ಸದಸ್ಯರ ಸರಾಸರಿ
	ಪ್ರಾರಂಭದಲ್ಲಿ	ಅಂತ್ಯದಲ್ಲಿ	ರೂ. ಆ. ಪೈ		ರೂ. ಆ. ಪೈ		
೧೯೩೬	೨೧೪	೪೪೦	೩೦೦ ೫ ೦	೮೫	೧೦೦ ೦ ೦ (ಸುಮಾರು)	೩೫	೫೨
೧೯೩೭	೪೪೦	೮೬೮	೨೬೬ ೩ ೬	೧೩೨	೧೩೭ ೮ ೦	೪೦	೬೫
೧೯೩೮	೪೬೮	೯೫೩	೧೧೫ ೧೧ ೯	...	೧೩೨ ೧೪ ೦	೬೪ (ಪ್ರತಿ ಸದಸ್ಯರಿಗೆ)	೬೪

೧೯೩೬ನೆಯ ಸಾಲಿನಲ್ಲಿ ಶ್ರೀಮಾನ್ ಎ.ಎನ್. ನಾರಾಯಣಭಟ್ಟರು ೧. ಶ್ರೀ ಕೆ.ಎಸ್. ರಾಮಕೃಷ್ಣಮೂರ್ತಿಯವರು ೧, ಶ್ರೀ ಟಿ. ಸುಬ್ಬರಾಯರು ೪ ಪ್ರಬುದ್ಧ ಕರ್ಣಾಟಕದ ಸಂಪುಟಗಳು, ಶ್ರೀ ಭೂಪಾಲಂ ಚಂದ್ರಶೇಖರಯ್ಯನವರು ೩. ಶ್ರೀ ಎಸ್.ವಿ. ಕೃಷ್ಣಮೂರ್ತಿರಾಯರು ೧೪, ಶ್ರೀ ಕೂಡಲಿ ಚಿದಂಬರಂ ಅವರು ೧೯, ಶ್ರೀ ಡಿ.ಆರ್. ಮಾನಪ್ಪನವರು ೧೧, ಶ್ರೀ ಎ. ಸೀತಾರಾಂ ಅವರು ೧೮ ಮತ್ತು ಆಸ್ಥಾನ ಮಹಾವಿದ್ವಾನ್ ಬ್ರ|| ಶ್ರೀ|| ಪಂಡಿತ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು ೧೪ -ಈ ರೀತಿ ಪುಸ್ತಕಗಳನ್ನೂ, ೧೯೩೭ನೆಯ ಸಾಲಿನಲ್ಲಿ ಶ್ರೀ ಹೆಚ್. ಸೀತಾರಾಮಯ್ಯನವರು ೪೯, ಶ್ರೀ ಎ. ಸೀತಾರಾಮ್ ಅವರು ೩೩, ಆಸ್ಥಾನ ಮಹಾವಿದ್ವಾನ್ ಪಂಡಿತ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು ೫, ಶ್ರೀ ಎಸ್. ರಾಮಚಂದ್ರರಾಯರು ೫ ಗ್ರಂಥಗಳನ್ನೂ ಸಂಘದ ಪುಸ್ತಕ ಭಂಡಾರಕ್ಕೆ ದಾನಮಾಡಿ ಪ್ರೋತ್ಸಾಹ ಕೊಟ್ಟಿದ್ದಾರೆ.

೧೯೩೭ನೆಯ ವರ್ಷದಲ್ಲಿ ಶಿವಮೊಗ್ಗಯ ನಿವೃತ್ತ ಉಪಾಧ್ಯಾಯರಾದ ಶ್ರೀಮಾನ್ ಕೆ.ವಿ. ಸುಬ್ಬರಾಯರು ಪುಸ್ತಕ ಭಂಡಾರಕ್ಕೆ ಗ್ರಂಥಗಳನ್ನು ಕೊಳ್ಳಲು ರೂ. ೧೫೦ಗಳ ಧನಸಹಾಯ ಮಾಡಿದರು. ಸಂಘವು ಶ್ರೀಮಾನ್ ಸುಬ್ಬರಾಯರ ಉದಾರ ಪ್ರೋತ್ಸಾಹಕ್ಕಾಗಿ ಚಿರಋಣಿಯಾಗಿದೆ. ಈಗ ಸಂಘದಲ್ಲಿ ೧,೦೪೨ ಗ್ರಂಥಗಳಿವೆ. ಪಂಪ, ರನ್ನ, ಜನ್ನ, ರತ್ನಾಕರ, ಹರಿಹರ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ, ರುದ್ರಭಟ್ಟ, ಕೇಶಿರಾಜ, ನಯಸೇನ, ನಾಗವರ್ಮ, ಹೊನ್ನಮ್ಮ ಮೊದಲಾದ ಹಳಗನ್ನಡ ಕವಿಗಳ ಮತ್ತು ಕವಯಿತ್ರಿಯರ ಗ್ರಂಥಗಳನ್ನೂ, ಸಾಧ್ಯವಾದಮಟ್ಟಿಗೆ ಹೊಸಗನ್ನಡದ ಎಲ್ಲ ಗ್ರಂಥಗಳನ್ನೂ ಸಂಘದ ಸದಸ್ಯರ ಉಪಯೋಗಕ್ಕಾಗಿ ಪುಸ್ತಕ ಭಂಡಾರದಲ್ಲಿ ಒದಗಿಸಲಾಗಿದೆ. ಹಳಗನ್ನಡ, ಹೊಸಗನ್ನಡದ ಸಾರಸ್ವತ ಸಂಪತ್ತೆಲ್ಲವನ್ನೂ ಸದ್ಯಸರ ವಾಚನಕ್ಕೆ ದೊರಕಿಸಿಕೊಡಬೇಕೆಂಬುದೇ ಸಂಘದ ಧ್ಯೇಯ. ಅದು ಸಾಧ್ಯವಾಗಬೇಕಾದರೆ ಶ್ರೀಮಾನ್ ಕೆ.ವಿ. ಸುಬ್ಬರಾಯರಂತೆ ದಾತೃಗಳು ತಮ್ಮ ಉದಾರ ಸಹಾಯವನ್ನು ಒದಗಿಸಿದರೆ ಮಾತ್ರ ಸಾಧ್ಯ. ಮೊದಲಿನಂತೆ ಹೆಣ್ಣು ಮಕ್ಕಳಿಗೆ ಹೆಚ್ಚು ಅನುಕೂಲವಾಗಲೆಂದು ಪುಸ್ತಕಗಳನ್ನು ಮನೆ ಮನೆಗೆ ತೆಗೆದುಕೊಂಡು ಹೋಗಿ ಕೊಟ್ಟು ತರುವ ಏರ್ಪಾಟನ್ನು ಅನುಗೊಳಿಸಿದೆ.

೧೦. ಗ್ರಂಥ ಪ್ರಚಾರ: ಗ್ರಂಥ ಪ್ರಕಟನೆಯೊಂದಿಗೆ ಬೆಳೆಯುತ್ತಿರುವ ಆಧುನಿಕ ಕನ್ನಡ ಗ್ರಂಥಗಳ ಪರಿಚಯವನ್ನು ಮಹಾಜನರಿಗೆ ಮಾಡಿಕೊಡಬೇಕೆಂದು ಸಂಘವು ತಾ|| ೭-೩-೧೯೩೧ ರಿಂದ ವ್ಯಾಪಾರ ಶಾಖೆಯನ್ನು ನಡೆಸುತ್ತಲಿದೆ. ಕನ್ನಡನಾಡಿನಲ್ಲಿ ಪ್ರಕಟವಾಗುತ್ತಲಿರುವ ಎಲ್ಲ ಗ್ರಂಥಗಳೂ ಸಾಮಾನ್ಯವಾಗಿ ಸಂಘದ ಮಾರಾಟ ಶಾಖೆಯಲ್ಲಿ ದೊರೆಯುವಂತೆ ಅನುಕೂಲಿಸಲಾಗಿದೆ. ಗ್ರಾಮಾಂತರಗಳಲ್ಲಿ ಉಪನ್ಯಾಸಗಳನ್ನು ಏರ್ಪಡಿಸಿದಾಗಲೂ, ಜಿಲ್ಲೆಯ ಸಂಘಗಳ ವಾರ್ಷಿಕೋತ್ಸವಗಳು, ಆನವಟ್ಟಿಯ ವಿಶೇಷ ಸಾಹಿತ್ಯೋತ್ಸವ, ನಾಡಹಬ್ಬ, ಬಳ್ಳಾರಿಯ ಸಾಹಿತ್ಯ ಸಮ್ಮೇಳನ ಮುಂತಾದ ಸಾಧ್ಯವಾದ ಎಲ್ಲ ಸಂದರ್ಭಗಳಲ್ಲಿಯೂ ಗ್ರಂಥ ಪ್ರದರ್ಶನಗಳನ್ನು ಏರ್ಪಡಿಸಿ ಸಾರ್ವಜನಿಕರಿಗೆ ಗ್ರಂಥ ಪರಿಚಯವನ್ನು ಮಾಡಿಕೊಡಲಾಗಿದೆ.

೧೧. ಸಾಹಿತ್ಯ ಪ್ರಚಾರ: ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರೂ, ಹಿರಿಯ ಸಾಹಿತ್ಯ ಸೇವಕರೂ ಆದ ರಾಜಸೇವಾಸಕ್ತ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರು ತಾ|| ೨೩-೫-೩೬ ರಿಂದ ೨೯-೫-೩೬ರ ವರೆಗೆ ಈ ಜಿಲ್ಲೆಯಲ್ಲಿ ೬ ದಿನಗಳಲ್ಲಿ ೨೫೦ ಮೈಲಿಗಳ ಪ್ರವಾಸವನ್ನು ಕೈಗೊಂಡು ಆಗುಂಬೆ, ನಗರ, ಹೊಸನಗರ, ಸೊರಬ, ಷಿಕಾರಿಪುರಗಳಲ್ಲಿ ಸಾಹಿತ್ಯೋಪನ್ಯಾಸಗಳನ್ನು ಕೊಟ್ಟು ಹೊಸ ಸಂಘಗಳನ್ನು ಸ್ಥಾಪಿಸಿದರು. ತೀರ್ಥಹಳ್ಳಿ, ಸಾಗರ, ಶಿರಾಳಕೊಪ್ಪ ಸಂಘಗಳಿಗೆ ಭೇಟಿ ಕೊಟ್ಟು ಉಪನ್ಯಾಸ ಮಾಡಿ

ನವಚೇತನವನ್ನೂವಗಿಸಿವರು. ಅನಂತರ ಸಂಘದ ಸದಸ್ಯರುಗಳು ಚನ್ನಗಿರಿ, ನ್ಯಾಮತಿ, ಹೊನ್ನಾಳಿ, ಹೊಸನಗರ, ಶಿರಾಳಕೊಪ್ಪ, ಷಿಕಾರಿಪುರಗಳಿಗೆ ಹೋಗಿ, ಸಾಹಿತ್ಯ, ವಿಜ್ಞಾನ, ಗ್ರಾಮನೈರ್ಮಲ್ಯಗಳ ವಿಷಯವಾಗಿ ಉಪನ್ಯಾಸಗಳನ್ನೂ, ಹಳಗನ್ನಡ ಮತ್ತು ಆಧುನಿಕ ಗ್ರಂಥಗಳಿಂದ ಕಾವ್ಯವಾಚನಗಳನ್ನೂ ನಡೆಸಿರುತ್ತಾರೆ. ಸಂಘದ ಅಧ್ಯಕ್ಷರಾದ ಆಸ್ಥಾನ ಮಹಾವಿದ್ವಾನ್ ಪಂಡಿತ ಶ್ರೀ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು ಶಿರಾಳಕೊಪ್ಪ ಕರ್ನಾಟಕ ಸಂಘ ವಾರ್ಷಿಕೋತ್ಸವದ ಅಧ್ಯಕ್ಷತೆಯನ್ನು ವಹಿಸಿದ್ದಲ್ಲದೇ ಸಾಗರ-ನರಸಿಂಹರಾಜಪುರದ ಸಂಘಗಳ ಪ್ರಾರಂಭೋತ್ಸವಗಳಲ್ಲಿ ಭಾಷಣಗಳನ್ನು ಮಾಡಿರುತ್ತಾರೆ. ಜಿಲ್ಲಾ ಸರ್ವೆ ಸೂಪರಿಂಟೆಂಡೆಂಟರಾಗಿದ್ದ ಶ್ರೀ ಬಿ. ವೆಂಕಟಸುಬ್ಬಯ್ಯನವರೂ, ಜಿಲ್ಲಾ ವಿದ್ಯಾಧಿಕಾರಿಗಳಾಗಿದ್ದ ಶ್ರೀ ಎ. ವಾಸುದೇವರಾಜ್, ಬಿ.ಎ. ಅವರೂ ಜಿಲ್ಲೆಯ ಮುಖ್ಯ ಸ್ಥಳಗಳಲ್ಲಿ ಮತ್ತು ಸಂಘಗಳಲ್ಲಿ ಉಪನ್ಯಾಸ ಕೊಟ್ಟು ಸಾಹಿತ್ಯ ಪ್ರಚಾರ ಮಾಡಿರುತ್ತಾರೆ. ಶ್ರೀಮಾನ್‌ಗಳಾದ ಕೂಡಲಿ ಚಿದಂಬರಂ, ಎಸ್.ವಿ. ಕೃಷ್ಣಮೂರ್ತಿರಾವ್, ಎಸ್. ವಿಷ್ಣುಭಟ್ಟರು ಶಿರಾಳಕೊಪ್ಪದಲ್ಲೂ, ಶ್ರೀಮಾನ್‌ಗಳಾದ ಟಿ. ಗುರುನಂಜಯ್ಯ, ಎಸ್.ವಿ. ಕೃಷ್ಣಮೂರ್ತಿರಾವ್ ಇವರುಗಳು ನರಸಿಂಹರಾಜಪುರದಲ್ಲೂ, ಶ್ರೀಮಾನ್ ಎಸ್. ವಿಷ್ಣುಭಟ್ಟರು ಸಾಗರದಲ್ಲೂ, ಶ್ರೀಮಾನ್‌ಗಳಾದ ಕೂಡಲಿ ಚಿದಂಬರಂ, ಎಸ್.ವಿ. ಕೃಷ್ಣಮೂರ್ತಿರಾಯರು ಕುಂಸಿ, ಆನವಟ್ಟಿಗಳಲ್ಲೂ ಉಪನ್ಯಾಸಗಳನ್ನೂ ಕಾವ್ಯವಾಚನಗಳನ್ನೂ ಮಾಡಿರುತ್ತಾರೆ. ವಿಶ್ವವಿದ್ಯಾನಿಲಯದ ವಿಶೇಷೋಪನ್ಯಾಸಕ್ಕಾಗಿ ಶ್ರೀಮಾನ್ ಎಸ್.ವಿ. ರಂಗಣ್ಣ, ಎಂ.ಎ. ಅವರು ಬಂದ ಅವಕಾಶವನ್ನು ಉಪಯೋಗಿಸಿಕೊಂಡು ಸಾಗರ, ಶಿರಾಳಕೊಪ್ಪ, ಷಿಕಾರಿಪುರ, ಶಿವಮೊಗ್ಗೆಯಲ್ಲಿ ಅವರಿಂದ ಉಪನ್ಯಾಸಗಳನ್ನು ಏರ್ಪಡಿಸಲಾಗಿದೆ. ಶ್ರೀಮಾನ್ ಎಚ್.ಆರ್. ಮಾಧವರಾಯರು ಸಂಘದ ಕೋರಿಕೆಯಂತೆ ಸಾಗರ, ಷಿಕಾರಿಪುರ, ಶಿರಾಳಕೊಪ್ಪ, ಆನವಟ್ಟಿ ಮುಂತಾದ ಸ್ಥಳಗಳಿಗೆ ಹೋಗಿ ಭಾರತ ವಾಚನ ಕಾವ್ಯ ವಾಚನಾದಿಗಳನ್ನು ನಡೆಸಿರುತ್ತಾರೆ.

೧೨. **ಕಾವ್ಯವಾಚನ ಸ್ಪರ್ಧೆಗಳು-** ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳಲ್ಲಿ ವಾಚನಾಭಿರುಚಿಯನ್ನು ಹೆಚ್ಚಿಸಲು ಸಂಘವು ವಾರ್ಷಿಕೋತ್ಸವ ಸಮಯದಲ್ಲಿ ಪ್ರತಿ ವರ್ಷವೂ ಕಾವ್ಯವಾಚನ ಸ್ಪರ್ಧೆಯನ್ನು ಏರ್ಪಡಿಸುತ್ತಲಿದೆ. ಕಳೆದ ಮೂರು ವರ್ಷಗಳಲ್ಲಿ ಈ ಕೆಳಗೆ ಕಂಡಂತೆ ಬಹುಮಾನಗಳನ್ನು ವಿನಿಯೋಗಿಸಲಾಗಿದೆ:-

ವರ್ಷ	ಒಟ್ಟು ಬಹುಮಾನ	ಬೆಲೆ			ಒಟ್ಟು ಪುಸ್ತಕಗಳು	ಬಹುಮಾನ ಪಡೆದ ವಿದ್ಯಾರ್ಥಿಗಳ ಸಂಖ್ಯೆ
		ರೂ.	ಆ.	ಪೈ		
೧೯೩೬	೧೯	೪೪	೧೨	೦	೬೪	೧೮
೧೯೩೭	೨೭	೪೮	೭	೬	೧೧೩	೨೭
೧೯೩೮	೨೪	೬೧	೮	೦	೧೧೩	೨೫

ಬಹುಮಾನ ವಿನಿಯೋಗಕ್ಕಾಗಿ ಸಂಘದ ಎರಡನೆಯ ವಾರ್ಷಿಕೋತ್ಸವದ ಅಧ್ಯಕ್ಷರಾಗಿ ಬಂದಂದಿನಿಂದ ಧನ ಸಹಾಯ ಮಾಡುತ್ತಲಿರುವ ಶ್ರೀಮಾನ್ ಎ.ಆರ್. ಕೃಷ್ಣಶಾಸ್ತ್ರೀ, ಎಂ.ಎ. ಅವರಿಗೂ, ಸ್ಥಳದ ಮಹನೀಯರಾದ ಶ್ರೀಗಳಾದ ಭೂಪಾಲಂ ರುಕ್ಮಯ್ಯ ನಂಜುಂಡಯ್ಯನವರು, ಹೊಸೂಡಿ ವೆಂಕಟಶಾಸ್ತ್ರಿಗಳು, ಚನ್ನಗಿರಿ ಗೋವಿಂದಸ್ವಾಮಿ ಸೆಟ್ಟರು, ದೇವಂಗಿ ರಾಮಣ್ಣಗೌಡರು, ಹೆಚ್.ಎಸ್. ಮಂಜಪ್ಪಗೌಡರು, ಬಿ. ವೆಂಕಟಸ್ವಾಮಿಯವರು, ಹೆಚ್. ಲಿಂಗಪ್ಪನವರು, ಹೊಸೂಡಿ ರಾಮಾಶಾಸ್ತ್ರಿಗಳು, ಡಾ॥ ಕೆ.ಎನ್. ದತ್ತಾತ್ರಿ, ಹೆಚ್. ಭವಾನಿಶಂಕರರಾಯರು, ಚನ್ನಗಿರಿ ರಾಮಸ್ವಾಮಿಸೆಟ್ಟರು, ಜಿ.ಎಸ್. ಅಣ್ಣಯ್ಯನವರು, ಎಲ್. ಸಿದ್ಧಪ್ಪನವರು, ಜಿ. ಚನ್ನಪ್ಪ

ನವರು, ಶ್ರೀಮತಿ ರಾಜಲಕ್ಷ್ಮಮ್ಮನವರು, ಶ್ರೀಮತಿ ಲಕ್ಷ್ಮಮ್ಮನವರು -ಇವರುಗಳಿಗೂ ಮತ್ತು ಶಿವಮೊಗ್ಗಾ ಮಹಿಳಾ ಸಮಾಜಕ್ಕೂ ಸಂಘವು ಕೃತಜ್ಞತಾಪೂರ್ವಕ ವಂದನೆಗಳನ್ನು ಅರ್ಪಿಸುತ್ತದೆ.

೧೩. **ಸಂಘಕ್ಕೆ ಧನಸಹಾಯ:** ೧೯೩೬ನೆಯ ಸಾಲಿನಲ್ಲಿ ಜಿಲ್ಲಾ ಬೋರ್ಡಿನವರು ೫೦ ರೂಪಾಯಿಗಳನ್ನೂ, ಶಿವಮೊಗ್ಗ ಕೋ-ಆಪರೇಟಿವ್ ಬ್ಯಾಂಕ್, ಲಿಮಿಟೆಡ್ ಅವರು ೨೦ ರೂಪಾಯಿಗಳನ್ನೂ, ಶಿವಮೊಗ್ಗ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಯವರು ೧೫ ರೂಪಾಯಿಗಳನ್ನೂ, ೧೯೩೭ನೆಯ ಸಾಲಿನಲ್ಲಿ ಶಿವಮೊಗ್ಗ ಕೋ-ಆಪರೇಟಿವ್ ಬ್ಯಾಂಕಿನವರು ೨೦ ರೂಪಾಯಿಗಳನ್ನೂ, ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಯವರು ೧೫ ರೂಪಾಯಿಗಳನ್ನೂ, ೧೯೩೮ನೆಯ ಸಾಲಿನಲ್ಲಿ ಶಿವಮೊಗ್ಗ ಕೋ-ಆಪರೇಟಿವ್ ಬ್ಯಾಂಕಿನವರು ೨೦ ರೂಪಾಯಿಗಳನ್ನೂ, ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಯವರು ೧೦ ರೂಪಾಯಿಗಳನ್ನೂ ಸಹಾಯ ಮಾಡಿರುತ್ತಾರೆ. ಈ ಎಲ್ಲ ಸಂಸ್ಥೆಯ ಅಧಿಕಾರಿಗಳಿಗೂ ಸಂಘವು ಚಿರಋಣಿಯಾಗಿದೆ.

೧೪. **ಸಂಘದ ಕಾರ್ಯಾಲಯ:** ೧೯೩೬ನೆಯ ಡಿಸೆಂಬರ್ ತಿಂಗಳವರಿಗೂ ಸಂಘದ ಕಾರ್ಯಾಲಯವು ಒಂದು ಬಾಡಿಗೆಯ ಕೊಠಡಿಯಲ್ಲಿತ್ತು. ಈಚೆಗೆ ಪೌರಸಭೆಯ ಅಧಿಕಾರಿಗಳು ಸಂಘದ ಮೇಲೆ ಅಭಿಮಾನ ತೋರಿ ಶಿವಮೊಗ್ಗ ನಗರಭವನದಲ್ಲಿ ಒಂದು ಅಂದವಾದ ಕೋಣೆಯನ್ನು ಸಂಘದ ಆಫೀಸಿಗೆ ಒದಗಿಸಿಕೊಟ್ಟು ಮಹೋಪಕಾರ ಮಾಡಿರುತ್ತಾರೆ. ನಗರ ಭವನದಲ್ಲಿ ಸಂಘಕ್ಕೆ ಸ್ಥಳ ದೊರಕಿಸುವುದರಲ್ಲಿ ಆಗ್ಗೆ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಟಿ. ರಾಮಯ್ಯ, ಬಿ.ಎ. (ಆನರ್ಸ್) ಅವರೂ, ಪೌರಸಭಾಧ್ಯಕ್ಷರಾಗಿದ್ದ ಶ್ರೀಮಾನ್ ಎಸ್. ಹೈದರಲ್ಲಿ ಖಾನ್ ಅವರೂ, ಪೌರಸಭೆಯ ಉಪಾಧ್ಯಕ್ಷರಾದ ಶ್ರೀಮಾನ್ ಎನ್. ಶ್ರೀಕಂಠಯ್ಯನವರೂ ಆಸಕ್ತಿ ವಹಿಸಿ ಸಹಾಯ ಮಾಡಿದ್ದಕ್ಕಾಗಿ ಈ ಎಲ್ಲ ಮಹನೀಯರಿಗೂ ಸಂಘವು ಚಿರಋಣಿಯಾಗಿದೆ. ಸಂಘದ ಎಲ್ಲ ಸಭೆಗಳೂ ಈಗ ನಗರ ಭವನದಲ್ಲಿಯೇ ನಡೆಯುತ್ತಲಿವೆ. ಸಭೆಗಳನ್ನು ಏರ್ಪಡಿಸುವುದರಲ್ಲಿಯೂ, ನಾಡಹಬ್ಬ ವಾರ್ಷಿಕೋತ್ಸವ ಸಮಯಗಳಲ್ಲಿ ಸಭಾಭವನವನ್ನು ಅಲಂಕರಿಸುವುದರಲ್ಲಿಯೂ ಪೌರಸಭೆಯ ಅಧಿಕಾರ ವರ್ಗದವರ ಉದಾರಾಶ್ರಯವು ಸಂಘಕ್ಕೆ ದೊರೆಯುತ್ತಿರುವುದು ಸ್ತೋತ್ರಾರ್ಹವಾದ ವಿಷಯ.

ಸಂಘದ ಪ್ರಕಟನ ಶಾಖೆ, ಮಾರಾಟ ಶಾಖೆ ಮತ್ತು ಪುಸ್ತಕ ಭಂಡಾರಗಳ ಕಾರ್ಯಕ್ಷೇತ್ರವು ವಿಸ್ತಾರಗೊಳ್ಳುತ್ತಿರುವುದರಿಂದಲೂ, ಸಂಘಕ್ಕೆ ಒಬ್ಬ ಗುಮಾಸ್ತರನ್ನು ನೇಮಿಸಿರುವುದರಿಂದಲೂ, ಕಛೇರಿಯ ಕೆಲಸವು ದಿನೇ ದಿನೇ ಬೆಳೆಯುತ್ತಿರುವುದರಿಂದಲೂ, ಈಗ ಪೌರಸಭೆಯವರು ಕೊಟ್ಟಿರುವ ಕೊಠಡಿಯು ಸಹ ಕಿರಿದಾಗುತ್ತಲಿದೆ. ಪುಸ್ತಕ ಭಂಡಾರದ ವಿಸ್ತಾರಕ್ಕೂ, ವಾಚನಾಲಯ ಸ್ಥಾಪನೆ, ಕಾರ್ಯನಿರ್ವಾಹಕ ಸಮಿತಿಯ ಸಭೆಗಳು, ಪ್ರದರ್ಶನಮಾಲೆ ಮುಂತಾದ ಕೆಲಸ ಕಾರ್ಯಗಳಿಗೂ ಸಂಘಕ್ಕೆ ಒಂದು ಪ್ರತ್ಯೇಕ ಭವನವು ಅತ್ಯವಶ್ಯಕವಾಗಿದೆ. ಸಂಘಕ್ಕೆ ಒಂದು ಸ್ವತಂತ್ರವಾದ ಕಟ್ಟಡವನ್ನು ದೊರಕಿಸಬೇಕೆಂಬ ಅಭಿಲಾಷೆಯು ಕಾರ್ಯನಿರ್ವಾಹಕ ಸಮಿತಿಗೆ ಮೊದಲಿನಿಂದಲೂ ಇದೆ. ಈ ವಿಷಯದಲ್ಲಿ ಉಚಿತ ನಿವೇಶನವನ್ನು ಕೊಡಬಹುದಾಗಿ ನಗರ ಸಭೆಯವರು ಠರಾವು ಮಾಡಿ ಸರಕಾರದ ಮಂಜೂರಾತಿಗೆ ಕಳುಹಿಸಿದ್ದರು. ಆ ಸಂಬಂಧ ನಕ್ಷೆಯನ್ನೂ, ಅಂದಾಜು ಪಟ್ಟಿಯನ್ನೂ ಸಹ ಕಳುಹಿಸಲಾಗಿತ್ತು. ಸಂಘವು ರಿಜಿಸ್ಟರ್ಡ್ ಸಂಸ್ಥೆಯಾದ ನಂತರ ಪುನಃ ಕೇಳಿಕೊಳ್ಳಬೇಕಾಗಿ ಸರಕಾರದವರು ಅಪ್ಪಣೆ ಮಾಡಿರುವುದಾಗಿ ನಗರಸಭೆಯ ಅಧಿಕಾರಿಗಳು ತಿಳಿಸಿದರು. ಈಚೆಗೆ ೧೯೩೬ರಲ್ಲಿ ಸಂಘವು ರಿಜಿಸ್ಟರಾಗಿದೆ. ಈಚೆಗೆ ಈ ವಿಷಯದಲ್ಲಿ ಕಾರ್ಯಕ್ರಮವನ್ನು ಮುಂದುವರಿಸಲಾಗಲಿಲ್ಲ. ಆದರೆ ಸ್ವತಂತ್ರ ಕಟ್ಟಡದ ಅವಶ್ಯಕತೆ ಸಂಘಕ್ಕೆ ದಿನೇ ದಿನೇ ಹೆಚ್ಚುತ್ತಲಿದೆ. ಮಹಾಜನರು ಈ ವಿಷಯದಲ್ಲಿ ಆಸಕ್ತಿ ವಹಿಸಿ ಸಂಘಕ್ಕೆ ಒಂದು ಭವನವನ್ನು ದೊರಕಿಸಿಕೊಡಬೇಕಾಗಿ ಪ್ರಾರ್ಥನೆ.

೧೫. **ಸಂಘ ಮತ್ತು ಸಾಹಿತ್ಯ ಪರಿಷತ್ತು:** ಸಂಗವು ಪರಿಷತ್ತಿನ ಅಂಗಸಂಸ್ಥೆಯಾಗಿ ಪರಿಷತ್ತಿನೊಂದಿಗೆ ನಿಕಟ ಬಾಂಧವ್ಯವನ್ನಿಟ್ಟುಕೊಂಡು ಅಖಿಲ ಕರ್ನಾಟಕದ ಸಾಹಿತ್ಯ ಚಳುವಳಿಗಳಲ್ಲಿ ಭಾಗವಹಿಸುತ್ತಲಿದೆ. ಸಾಹಿತ್ಯ ಪರಿಷತ್ತಿನ ಸಲಹೆಯಂತೆ ನಾಡಹಬ್ಬದ ಆಚರಣೆ, ಭಾಷೇತರ ವಿಷಯಗಳನ್ನು ಕನ್ನಡದಲ್ಲಿ ಕಲಿಸಲು ಮಾಡಿದ ಏರ್ಪಾಟಿಗೆ ಸರಕಾರವನ್ನು ಅಭಿನಂದಿಸುವ ಸಭೆ, ಗ್ರಾಮಾಂತರಗಳಲ್ಲಿ ವಿಶೇಷೋಪನ್ಯಾಸದ ಏರ್ಪಾಡು ಮುಂತಾದ ಏರ್ಪಾಡನ್ನು ಕೈಕೊಳ್ಳಲಾಗಿದೆ. ಪರಿಷತ್ತಿನ ಸದಸ್ಯರ ಅಧಿವೇಶನ, ಸಾಹಿತ್ಯ ಸಮ್ಮೇಳನ, ವಿಶೇಷ ಸಾಹಿತ್ಯೋತ್ಸವಗಳು, ಸಂಘ ಸಮ್ಮೇಳನಗಳಲ್ಲಿ ಸಂಘದ ಪ್ರತಿನಿಧಿಗಳು ಭಾಗವಹಿಸಿರುತ್ತಾರೆ. ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಯವರು ಸಂಘದ ಮೇಲೆ ಅಭಿಮಾನವಿಟ್ಟು ತಮ್ಮಲ್ಲಿದ್ದ ದಿವಂಗತ ಬಿ. ವೆಂಕಟಾಚಾರ್ಯರ ಭಾವಚಿತ್ರವನ್ನು ಸಂಘಕ್ಕೆ ದಾನ ಮಾಡಿರುತ್ತಾರೆ.

೧೬. **ಸಂಘವು ಈಚೆಗೆ ಕೈಗೊಂಡಿರುವ ಕಾರ್ಯ:** (೧) ಸಂಘದಿಂದ ವಯಸ್ಕರ ವಿದ್ಯಾಭ್ಯಾಸಕ್ಕಾಗಿ ಒಂದು ವಯಸ್ಕರ ಶಾಲೆಯನ್ನು ನಡೆಸಬೇಕೆಂಬ ಆಶೆಯು ಮೊದಲಿನಿಂದಲೂ ಇತ್ತು. ಶಿರಾಳಕೊಪ್ಪದ ಕರ್ನಾಟಕ ಸಂಘದ ವಾರ್ಷಿಕೋತ್ಸವ ಸಮಯದಲ್ಲಿ ನಡೆದ ಮೂರನೆಯ ಜಿಲ್ಲಾ ಸಮ್ಮೇಳನದಲ್ಲಿ "ಜಿಲ್ಲೆಯ ಪ್ರತಿ ಸಂಘವೂ ವಯಸ್ಕರ ವಿದ್ಯಾಭ್ಯಾಸಕ್ಕೆ ಶಾಲೆಗಳನ್ನು ನಡೆಸಬೇಕೆಂದು" ನಿರ್ಣಯವಾಯಿತು. ಸಮ್ಮೇಳನದ ಅಧ್ಯಕ್ಷರಾದ ಶ್ರೀಮಾನ್ ಎಂ.ಆರ್. ಶ್ರೀನಿವಾಸಮೂರ್ತಿ, ಬಿ.ಎ. ಅವರು ವಯಸ್ಕರ ವಿದ್ಯಾಭ್ಯಾಸದ ಮೊದಲನೆಯ ಪುಸ್ತಕವನ್ನು ಮುದ್ರಿಸುವುದಾದರೆ ಬರೆದು ಕೊಡುವುದಾಗಿ ವಾಗ್ದಾನ ಮಾಡಿದರು. ಆ ಗ್ರಂಥದ ಮುದ್ರಣಕ್ಕೆ ಹಣವನ್ನು ಮುಂಗಡವಾಗಿ ಕೊಡಲು ಶ್ರೀಮಾನ್ ಭೂಪಾಲಂ ಚಂದ್ರಶೇಖರಯ್ಯನವರು ಮುಂದ ಬಂದರು. ಜಿಲ್ಲಾ ಸಮ್ಮೇಳನದ ಹೊತ್ತಿಗೆ "ವಯಸ್ಕರ ವಿದ್ಯಾಭ್ಯಾಸದ ಮೊದಲನೆಯ ಪುಸ್ತಕ"ವನ್ನು ಅಚ್ಚುಹಾಕಿಸಿ ಕೆಲವು ಪ್ರತಿಗಳನ್ನು ಸಮ್ಮೇಳನದ ಪ್ರತಿನಿಧಿಗಳಿಗೆ ಹಂಚಲಾಯಿತು. ಶಿವಮೊಗ್ಗೆಯಲ್ಲಿ ಸಹ ಎರಡು ವಯಸ್ಕರ ಪಾಠಶಾಲೆಗಳನ್ನು ಸಂಘದಿಂದ ನಡೆಸಲು ಪ್ರಾರಂಭಿಸಲಾಯಿತು. ಶ್ರೀಮಾನ್ ಅನಂತಶರ್ಮರ ನೇತೃತ್ವದಲ್ಲಿ ನಗರದ ಝಾಡಮಾಲಿಗಳ ಕೇರಿಯ ಬಳಿ ಒಂದು ಪಾಠಶಾಲೆಯನ್ನು ನಡೆಸಲಾಗುತ್ತಿದೆ. ಸುಮಾರು ೧೫ ರಿಂದ ೨೦ರ ವರೆಗೆ ಹಿರಿಯರೂ, ೨೦-೩೦ ಜನ ಕಿರಿಯರೂ ವಿದ್ಯಾರ್ಥಿಗಳು ಶಾಲೆಯ ಉಪಯೋಗ ಪಡೆಯುತ್ತಿದ್ದಾರೆ. ಸಂಘದಿಂದ ಹಲಗೆ, ಬಳಪ, ಪುಸ್ತಕಗಳನ್ನು ಒದಗಿಸಲಾಗಿದೆ. ಮೈಸೂರು ಸರಕಾರದ ಮರಾಮತ್ ಇಲಾಖೆಯವರು ತಮ್ಮ ವಶದಲ್ಲಿದ್ದ ಒಂದು ಚಿಕ್ಕ ಭವನವನ್ನು ಶಾಲೆಯ ಉಪಯೋಗಕ್ಕಾಗಿ ಎರವಲಾಗಿ ಕೊಟ್ಟದ್ದಕ್ಕೆ ಸಂಘವು ಜಿಲ್ಲಾ ಮರಾಮತ್ ಶಾಖಾಧಿಕಾರಿಗಳಿಗೆ ಚಿರಋಣಿಯಾಗಿದೆ. ವಯಸ್ಕರ ವಿದ್ಯಾಭ್ಯಾಸದ ಪ್ರಥಮ ಪುಸ್ತಕವನ್ನು ಮೈಸೂರು ಸರಕಾರದ ರೆವಿನ್ಯೂ ಕಮಿಷನರ್ ಅವರು ತಮ್ಮ D_2, Dis No. 275/39-40 ನೆಯ ಆಜ್ಞೆಯಲ್ಲಿ ಪ್ರತಿ ಪಂಚಾಯಿತಿಯವರು ಕೊಳ್ಳಬಹುದೆಂದು ಶಿಫಾರಸು ಮಾಡಿದ್ದಾರೆ. ನಾಡಿನ ಎಲ್ಲ ಪತ್ರಿಕೆಗಳೂ, ಮದರಾಸಿನ ಹಿಂದೂ ಪತ್ರಿಕೆಯೂ ಪುಸ್ತಕವನ್ನು ಮೆಚ್ಚಿವೆ. ಸಾಹಿತ್ಯ ಪರಿಷತ್ತಿನವರು ಸಾಹಿತ್ಯ ಪರೀಕ್ಷೆಗಳಿಗೆ ಮೊದಲನೆಯ ಪರೀಕ್ಷೆಗೆ ಪಠ್ಯಪುಸ್ತಕವನ್ನಾಗಿ ಆರಿಸಿದ್ದಾರೆ. ವಯಸ್ಕರ ವಿದ್ಯಾಭ್ಯಾಸ ಚಳುವಳಿಯು ಮುಂದುವರಿಯ ಬೇಕಾದರೆ ಸ್ವಯಂಸೇವಕರೂ ಧನವೂ ಅತ್ಯವಶ್ಯಕ. ಬೊಂಬಾಯಿ ಸರಕಾರದವರು ಪ್ರತಿ ವಯಸ್ಕರ ಶಾಲೆಯ ಉಪಕರಣಗಳಿಗೆ ೨೫ ರೂಪಾಯಿಗಳನ್ನೂ, ವಿದ್ಯಾವಂತನಾದ ಪ್ರತಿ ವಯಸ್ಕನಿಗೆ ೪ ರೂಪಾಯಿನಂತೆ ಉಪಾಧ್ಯಾಯರಿಗೆ ವೇತನವನ್ನೂ ಕೊಡುತ್ತಲಿದ್ದಾರೆ. ಈ ರೀತಿಯ ಯಾವುದಾದರೊಂದು ಪ್ರತಿಫಲವನ್ನು ಸರಕಾರದವರು ತೋರಿಸದ ಹೊರತು, ವಯಸ್ಕರ ವಿದ್ಯಾಭ್ಯಾಸದ ಸಮಸ್ಯೆಯು ಬಗೆಹರಿಯಲಾರದು. ಮುಂದೆಯೂ ದ್ರವ್ಯಾನುಕೂಲವಾದಂತೆ ಸಂಘವು ತನ್ನ ಶಕ್ತಿಮೀರಿ ಕಾರ್ಯಕ್ರಮವನ್ನು ಮುಂದುವರಿಸುವುದು ಅವಶ್ಯಕವಾಗಿದೆ. (೨) ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯ ಮತ್ತು ಶ್ರೀಮಾನ್ ಡಿ.ಎಲ್. ನರಸಿಂಹಾಚಾರ್, ಎಂ.ಎ. ಅವರಿಂದ ಶೋಧಿಸಲ್ಪಟ್ಟ ರಾಘವಾಂಕ ಕವಿಯ 'ಸಿದ್ಧರಾಮ ಪುರಾಣ' ಎಂಬ ಗ್ರಂಥವನ್ನು

ಮುದ್ರಣಕ್ಕೆ ಕಳುಹಿಸಲಾಗಿದೆ. (೩) ಸಾಹಿತ್ಯ ಪರಿಷತ್ತಿನ ಏರ್ಪಾಟಾದ ಕನ್ನಡ ಸಾಹಿತ್ಯ ಪರೀಕ್ಷೆಗಳಿಗೆ ತರಗತಿಗಳನ್ನು ಏರ್ಪಡಿಸಲು ಇಲ್ಲಿಯೂ ಪ್ರಯತ್ನಿಸಲಾಯಿತು. ತಕ್ಕಷ್ಟು ಜನ ವಿದ್ಯಾರ್ಥಿಗಳು ಬಾರದ ಕಾರಣ ಅನುಕೂಲವಾಗಲಿಲ್ಲ. ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಬಂದರೆ ತರಗತಿಗಳನ್ನೇರ್ಪಡಿಸಲು ಸಂಘದಿಂದ ಎಲ್ಲ ಅನುಕೂಲವನ್ನೂ ಕಲ್ಪಿಸಲಾಗುತ್ತದೆ.

೧೭. **ಸಂಘದ ವ್ಯಾಪ್ತಿ:** ಈವರೆಗೆ ಜಿಲ್ಲೆಯಲ್ಲಿ ಕರ್ನಾಟಕ ಸಂಘಗಳೂ ಸೋದರ ಸಂಘಗಳೂ ಮುಂತಾಗಿ ೧೪ ಸಾಹಿತ್ಯ ಸಂಸ್ಥೆಗಳು ಜ್ಞಾನಪ್ರಚಾರಕ್ಕಾಗಿ ಕೆಲಸ ಮಾಡುತ್ತಲಿವೆ. ಅನೇಕ ಸಂದರ್ಭಗಳಲ್ಲಿ ಜಿಲ್ಲೆಯ ಸಂಸ್ಥೆಗಳು ಕೇಂದ್ರ ಸಂಸ್ಥೆಯಾದ ಈ ಸಂಘದಿಂದ ಸಲಹೆ, ಸೂಚನೆ, ಸಹಾಯವನ್ನು ಅಪೇಕ್ಷಿಸುವುದು ಸಹಜವಾಗಿದೆ. ಜಿಲ್ಲಾ ಸಂಘ ಸಮ್ಮೇಳನದಿಂದ ಪರಸ್ಪರ ಪರಿಚಯ, ಸಹಕಾರ ದೊರೆತು ಸಂಘಟನೆಯ ಪ್ರಯತ್ನ ಸಹ ನಡೆದಿರುತ್ತದೆ. ಜಿಲ್ಲೆಯ ಸಂಘಗಳ ಶಕ್ತಿಯನ್ನು ಅಭಿವೃದ್ಧಿಗೊಳಿಸಿ, ಜಿಲ್ಲೆಯ ಮುಖ್ಯ ಪಟ್ಟಣಗಳು ಮತ್ತು ಗ್ರಾಮಗಳಲ್ಲಿ ಸಂಘಗಳನ್ನು ಸ್ಥಾಪಿಸಿ ನಿರ್ದಿಷ್ಟವಾದ, ನೇರವಾದ ಗುರಿಯಿಂದ ಜ್ಞಾನಪ್ರಚಾರ ಮಾಡಿ ಆ ಮೂಲಕ ಜನತೆಯಲ್ಲಿ ಜ್ಞಾನಕುತೂಹಲವನ್ನು ಉಂಟುಮಾಡಲು ಜನಬಲವೂ, ಧನಬಲವೂ ಅಧಿಕ ಪ್ರಮಾಣದಲ್ಲಿ ದೊರೆತರೆ ಮಾತ್ರ ಸಾಧ್ಯ. ಸಂಘವು ತನ್ನ ಪ್ರಕಟನೆಗಳ ಮೂಲಕವೂ, ಕ್ರಮಬದ್ಧವಾಗಿ ನಡೆಸುತ್ತಿರುವ ಉಪನ್ಯಾಸಾದಿ ಪ್ರಚಾರಾತ್ಮಕ ಕಾರ್ಯಕ್ರಮಗಳಿಂದಲೂ ಅಖಿಲ ಕರ್ನಾಟಕದಲ್ಲೆಲ್ಲಾ ಪರಿಚಯವಾಗಿ, ನಾಡಿನ ಸಂಘಗಳಲ್ಲಿ ಒಂದು ಗಣ್ಯಸ್ಥಾನವನ್ನು ಪಡೆದಿದೆ ಎಂದರೆ ಉತ್ಪ್ರೇಕ್ಷೆ ಏನೂ ಇರುವುದಿಲ್ಲ. ಸಂಘದ ಮೂಲಕ ಬೆಂಗಳೂರು, ಮಂಗಳೂರು, ಧಾರವಾಡಗಳಿಗೆ ಮಧ್ಯವರ್ತಿಯಾಗಿರುವ ಶಿವಮೊಗ್ಗೆಯು ಅಖಿಲ ಕರ್ನಾಟಕದ ಸಾಂಸ್ಕೃತಿಕ ಏಕೀಕರಣ ಚಳವಳಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಲು ಅನುಕೂಲವಿದೆ.

೧೮. **ಸಂಘದ ಹಣಕಾಸಿನ ಸ್ಥಿತಿ:** ಸಂಘದ ಆಫೀಸಿನ ಕೆಲಸಗಳು, ಉಪನ್ಯಾಸಾದಿ ಕಾರ್ಯಕ್ರಮಗಳು, ಪ್ರಕಟನ ಶಾಖೆ, ಮಾರಾಟದ ಶಾಖೆ, ಪುಸ್ತಕ ಭಂಡಾರದ ಕೆಲಸಗಳು ಬಹಳಮಟ್ಟಿಗೆ ಹೆಚ್ಚಿವೆ. ಲೆಖ್ಖ ಶೋಧಕರು ತಮ್ಮ ವರದಿಯಲ್ಲಿ ಸೂಚಿಸಿರುವಂತೆ ಪೂರಾ ತಲಬಿನ ಒಬ್ಬ ವ್ಯವಸ್ಥಾಪಕರನ್ನು ನೇಮಿಸಲು ಯೋಚಿಸುವ ಕಾಲವು ಬಂದಿವೆ. ಅನುಬಂಧವಲ್ಲಿ ಲೆಖ್ಖದ ಪಟ್ಟಿಯಲ್ಲಿ ಕೊಟ್ಟಿರುವಂತೆ ಆಫೀಸು ಖರ್ಚು, ಉಪನ್ಯಾಸಾದಿಗಳ ಖರ್ಚು, ಸಿಬ್ಬಂದಿಯ ಖರ್ಚು ಮತ್ತು ಪ್ರಕಟನಾದಿಗಳ ಖರ್ಚುಗಳು ಅದೇ ಪ್ರಮಾಣದಲ್ಲಿ ಹೆಚ್ಚುತ್ತ ಬಂದಿವೆ. ಸಂಘದ ಪ್ರಕಟನೆಗಳ ಮಾರಾಟದಿಂದ ಬರುವ ಉತ್ಪತ್ತಿಯನ್ನು ಪ್ರಕಟನ ಕಾರ್ಯಕ್ಕೇನೇ ವಿನಿಯೋಗಿಸಬೇಕಾಗುತ್ತದೆ. ಪುಸ್ತಕ ಭಂಡಾರದ ಚಂದಾಹಣವನ್ನು ಮೀರಿ ಪುಸ್ತಕ ಭಂಡಾರಕ್ಕೆ ಪುಸ್ತಕಗಳನ್ನು ಸೇರಿಸಲಾಗಿದೆ. ಸಾಮಾನ್ಯವಾಗಿ ಮಾರಾಟ ಶಾಖೆಗೆ ಬರುವ ಎಲ್ಲ ಹೊಸ ಪ್ರಕಟನೆಗಳ ಒಂದೊಂದು ಪ್ರತಿಯನ್ನೂ ಪುಸ್ತಕಭಂಡಾರಕ್ಕೆ ಸೇರಿಸುತ್ತಿರಲಾಗಿದೆ. ಸದಸ್ಯತ್ವದ ಮತ್ತು ಪುಸ್ತಕ ಭಂಡಾರಕ್ಕೆ ಸೇರಿಸುತ್ತಿರಲಾಗಿದೆ. ಸದಸ್ಯತ್ವದ ಮತ್ತು ಪುಸ್ತಕಭಂಡಾರದ ಚಂದಾ ಹಣದ ಬಾಕಿಯು ಹೆಚ್ಚಾಗಿ ನಿಂತು ವಸೂಲಿಯು ಕಷ್ಟವಾಗುತ್ತಲಿದೆ. ಉಪನ್ಯಾಸಾದಿ ಕಾರ್ಯಕ್ರಮಗಳ ಏರ್ಪಾಟು ಮತ್ತು ಸಿಬ್ಬಂದಿಯ ವೆಚ್ಚವನ್ನು ಚಂದಾ ಹಣದಿಂದಲೇ ಸರಿತೂಗುವಂತೆ ಮಾಡಬೇಕಾದರೆ ಸಂಘದ ಸದಸ್ಯರ ಸಂಖ್ಯೆ ಈಗಿನ ಎರಡರಷ್ಟು ಪ್ರಮಾಣದಲ್ಲಾದರೂ ಇರಬೇಕು. ಸಂಘದ ಕಾರ್ಯವ್ಯಾಪಕತೆಯು ಹೆಚ್ಚುತ್ತಿದ್ದರೂ, ಕಾರ್ಯನಿರ್ವಹಣೆಯಲ್ಲಿ ಮೊದಲಿನಷ್ಟು ಸಹಕಾರವು ದೊರೆಯುತ್ತಿಲ್ಲವೆಂದು ಬಹು ಸಂಕೋಚದಿಂದ ಹೇಳಬೇಕಾಗಿದೆ. ರಾಷ್ಟ್ರನಿರ್ಮಾಣದಲ್ಲಿ ಜ್ಞಾನ ಪ್ರಚಾರವು ಪರಮ ಪವಿತ್ರ ಕಾರ್ಯವೆಂದು ನಂಬುವ ಮಹನೀಯರೆಲ್ಲರೂ ಮುಂದೆ ಬಂದು ನೆರವಾಗಬೇಕೆಂದು ಕೋರುತ್ತೇವೆ.

ಕೊನೆಯ ಪಕ್ಷ ಹೋಬಳಿಗೊಂದು ಸಂಘ, ಪ್ರತಿ ಸಂಘದಲ್ಲೂ ಒಂದು ಪುಸ್ತಕ ಭಂಡಾರ, ಆ ಮೂಲಕ ಜನತೆಯಲ್ಲಿ ಜ್ಞಾನಪ್ರಚಾರ -ಈ ರೀತಿ ಹಳೆಯ ಸಂಸ್ಕೃತಿಯ ಕಣ್ಣನ್ನು ಹೊಸ ಬೆಳಕಿನಿಂದ ತೆರೆದು ಜನತೆಯ ಮಂಗಳವನ್ನು ಸಾಧಿಸಬೇಕೆಂಬುದು ಸಂಘದ ಆಶೆ. ಕನ್ನಡಿಗನ ಕೊರಗು ಇಂದು ಕೂಗಾಗಿ, ಈ ಕೂಗು ವಿಜಯದುಂದುಭಿಯಾಗುವ ದಿನದ ಮುಂಬೆಳಗಿನಲ್ಲಿರುವವರು ನಾವು. ಸಂಘದ ಮುಂದಿನ ನೀತಿಯು ಸದಸ್ಯರ ಕಾರ್ಯನಿಷ್ಠೆಯನ್ನವಲಂಬಿಸಿದೆ.

೧೯. ವಂದನೆಗಳು: ಕಳೆದ ಮೂರು ವರ್ಷಗಳಲ್ಲಿ ಮೊದಲು ಜಿಲ್ಲಾಧಿಕಾರಿಗಳಾದ ಶ್ರೀಮಾನ್ ಎಸ್. ನಾರಾಯಣರಾವ್, ಎಂ.ಎ. (ಆನರ್ಸ್) ಅವರೂ, ಅವರು ವರ್ಗವಾದಂದಿನಿಂದ ಈಗಿನ ಜಿಲ್ಲಾಧಿಕಾರಿಗಳಾದ ಶ್ರೀಮಾನ್ ಎಂ. ಶೇಷಾದ್ರಿ, ಎಂ.ಎ. ಅವರೂ ಸಂಘದ ಗೌರವ ಅಧ್ಯಕ್ಷರುಗಳಾಗಿದ್ದು ಸಂಘಕ್ಕೆ ವಿಶೇಷ ಪ್ರಶಸ್ತಿಯನ್ನೂ ಸಹಾಯವನ್ನೂ ದೊರಕಿಸಿಕೊಟ್ಟಿರುತ್ತಾರೆ.

ಆಸ್ಥಾನ ಮಹಾವಿದ್ವಾನ್ ಪಂಡಿತ ಬ್ರ|| ಶ್ರೀ|| ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು ತಮ್ಮ ತುಂಬು ವಯಸ್ಸಿನಲ್ಲಿ ಸಹ ಸಂಘದ ಅಧ್ಯಕ್ಷತೆಯನ್ನು ಸ್ವೀಕರಿಸಿ ತಮ್ಮ ಅಮೋಘವಾದ ಪಾಂಡಿತ್ಯ ಮತ್ತು ಅನುಭವದ ಉಪಯೋಗವನ್ನು ಸಂಘಕ್ಕೆ ದೊರಕಿಸಿಕೊಟ್ಟು, ಸಂಘಕ್ಕೆ ಒಂದು ಘನತೆಯನ್ನು ಸಂಪಾದಿಸಿಕೊಟ್ಟಿದ್ದಾರೆ.

ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿದ್ದ ಶ್ರೀಯುತ ಬಿ. ಕೃಷ್ಣರಾವ್, ಬಿ.ಎ., ಎಲ್.ಸಿ.ಇ., ಬಿ. ವೆಂಕಟಸ್ವಾಮಯ್ಯ, ಬಿ.ಎ., ಆರ್. ಕೃಷ್ಣಶೆಟ್ಟಿ, ಬಿ.ಎ., ಎಲ್‌ಎಲ್.ಬಿ., ಎ. ವಾಸುದೇವರಾವ್, ಬಿ.ಎ., ಕೂಡಲಿ ಚಿದಂಬರಂ, ಬಿ.ಎ., ಎಲ್‌ಎಲ್.ಬಿ., ಟಿ. ಗುರುನಂಜಯ್ಯ, ಬಿ.ಎ., ಬಿ.ಎಲ್. ಅವರುಗಳೂ, ಈಗಿನ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರೂ ಯಾವ ಶ್ರಮವನ್ನೂ ಲೆಕ್ಕಿಸದೆ, ಸಂಘದ ಕಾರ್ಯನಿರ್ವಹಣೆಯಲ್ಲಿ ಒಮ್ಮನಸ್ಸಿನಿಂದ ಸಹಕರಿಸಿ ಸಂಘದ ಕಾರ್ಯಗಳು ಯಶಸ್ವಿಯಾಗುವಂತೆ ಮಾಡಿದ್ದಾರೆ.

ಅನುಬಂಧಗಳಲ್ಲಿ ವಿವರಿಸಿರುವಂತೆ ಸಂಘದಿಂದ ಏರ್ಪಡಿಸಿದ ಉಪನ್ಯಾಸಾದಿ ಕಾರ್ಯಕ್ರಮಗಳು, ಉಪನ್ಯಾಸಮಾಲೆ, ಉಪನ್ಯಾಸ ಸಪ್ತಾಹ, ಕಾವ್ಯವಾಚನಗಳು, ಭಾರತ ವಾಚನಗಳು, ಸಂಗೀತ ಕಛೇರಿಗಳು, ವಾರ್ಷಿಕೋತ್ಸವ, ನಾಡಹಬ್ಬಗಳು, ನಾಟಕಾಭಿನಯ, ಕಾವ್ಯವಾಚನ ಸ್ಪರ್ಧೆಗಳಲ್ಲಿ ಕನ್ನಡನಾಡಿನ ವಿದ್ವಜ್ಜನರು, ಸಾಹಿತಿಗಳು, ಗಮಕಿಗಳು, ಸಂಗೀತ ವಿದ್ವಾಂಸರು, ಕಲಾವಿದರು, ಸ್ಥಳೀಯ ಮತ್ತು ಜಿಲ್ಲೆಯ ಪ್ರಮುಖರುಗಳು ಅಪೂರ್ವವಾದ ಸಹಾಯ ಮಾಡಿದ್ದಾರೆ.

ಈ ಎಲ್ಲ ಮಹನೀಯರುಗಳಿಗೂ ಸಂಘವು ವಿಶೇಷ ಕೃತಜ್ಞತೆಯನ್ನು ಸಲ್ಲಿಸುತ್ತದೆ.

೨೦. ಉಪಸಂಹಾರ: ತಮ್ಮ ಮೊದಲ ಐದು ವರ್ಷಗಳ ವರದಿಯನ್ನು ಮುಗಿಸುತ್ತ ಶ್ರೀಮಾನ್ ಕೂಡಲಿ ಚಿದಂಬರಂ ಅವರು "ಜನತೆಯ ಹಿತವನ್ನೇ ಸದಾ ಗಮನದಲ್ಲಿರಿಸಿ ನಾಡಿನ ಸೇವೆಗೈದು ಕೀರ್ತಿವೆತ್ತು ನೂರುಕಾಲ ಬಾಳುವಂತೆ ಸರ್ವಶಕ್ತನು ಈ ಸಂಸ್ಥೆಯನ್ನು ಹರಸಲಿ. ಇದು ಎಲ್ಲ ಜನಕ್ಕೂ ಸೇರಿದ ಸಂಸ್ಥೆ. ಇಲ್ಲಿ ಎಲ್ಲ ಕ್ಷುದ್ರಭೇದಗಳೂ ಅಳಿಯಲಿ. ಸಂಕುಚಿತ ಮನೋಭಾವಗಳು ಈ ಸಂಸ್ಥೆಯಿಂದ ದೂರವಾಗಿರಲಿ. ಸಂಘದ ಉದ್ದೇಶಗಳು ಯಾವಾಗಲೂ ಉನ್ನತವಾಗಿರಲಿ, ಉದಾರವಾಗಿರಲಿ. ನಾಡನ್ನು ತಮಸ್ಸಿನಿಂದ ಜ್ಯೋತಿಗೊಯ್ಯುವುದೇ ಸಂಘದ ಗುರಿಯಾಗಿರಲಿ. ಅವಿದ್ಯಾವಂತರನ್ನು ವಿದ್ಯಾವಂತರನ್ನಾಗಿಯೂ, ವಿದ್ಯಾವಂತರನ್ನು ದೇಶಪ್ರೇಮಿಗಳನ್ನಾಗಿಯೂ ಮಾಡಿ, ದೇಶದಲ್ಲಿ ಶಾಂತಿಯನ್ನೂ ಬೆಳಕನ್ನೂ ಹರಡುವುದೇ ಸದಾ ಸಂಘದ ಪರಮೋದ್ದೇಶವಾಗಿರಲೆಂದು ದೇವರನ್ನು ಎಲ್ಲರೂ ಪ್ರಾರ್ಥಿಸೋಣ" ಎಂದರು.

ಅದೇ ಪ್ರಾರ್ಥನೆಯನ್ನೇ ಮತ್ತೊಮ್ಮೆ ನಾನೂ ಸಹ ಮಾಡಿ ತಮ್ಮ ಅಪ್ಪಣೆಯನ್ನು ಪಡೆಯುತ್ತೇನೆ.

ಕಾರ್ಯನಿರ್ವಾಹಕ ಮಂಡಳಿಯ ಅಪ್ಪಣೆಯಂತೆ,
ಎಸ್.ವಿ. ಕೃಷ್ಣಮೂರ್ತಿರಾವ್
ಗೌರವ ಕಾರ್ಯದರ್ಶಿ
ಕರ್ನಾಟಕ ಸಂಘ, ಶಿವಮೊಗ್ಗ

ಶಿವಮೊಗ್ಗ
೧೫-೧೧-೩೯

ಅನುಬಂಧ-೯

ಆರನೆಯ ವರ್ಷದ ಕಾರ್ಯಕಲಾಪಗಳು

೧. ೧-೩-೩೬ ಸಂಘದ ಸದಸ್ಯರ ಸಾಮಾನ್ಯ ಸಭೆ

ಅಧ್ಯಕ್ಷರು: ಎಸ್. ನಾರಾಯಣರಾವ್, ಎಂ.ಎ. (ಆನರ್ಸ್)

೨. ೫-೪-೩೬ ಪುಸ್ತಕಭಂಡಾರದ ಪ್ರಾರಂಭೋತ್ಸವ ಮತ್ತು "ಪಂಪ ಭಾರತ"ದ ಮೇಲೆ ಉಪನ್ಯಾಸ

ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯ, ಎಂ.ಎ. ಅವರಿಂದ

೩. ೧೦-೪-೩೬ ಸಂಘದ ಸದಸ್ಯರ ಸಾಮಾನ್ಯ ಸಭೆ

ಅಧ್ಯಕ್ಷರು: ಶ್ರೀಮಾನ್ ಹೊಸೂಡಿ ವೆಂಕಟಶಾಸ್ತ್ರಿಗಳು

ಸಂಘದ ನಿಬಂಧನೆಗಳನ್ನು ಅನುಮೋದಿಸಲಾಯಿತು.

೪. ೨೪-೪-೩೬ ಮಾತನಾಡುವ ಚಿತ್ರಗಳ ರಹಸ್ಯ (ಸಚಿತ್ರ)

ಉಪನ್ಯಾಸಕರು: ಶ್ರೀಮಾನ್ ಬಿ.ಎಂ. ಶಿವರಾಮಯ್ಯನವರು

೫. ೨೫-೪-೩೬ ೧. ಭಾರತೀಯ ಧರ್ಮಗಳ ಸಾಮಾನ್ಯ ಮೂಲ ತತ್ವಗಳು

ಉಪನ್ಯಾಸಕರು: ಶ್ರೀಮಾನ್ ವೈ. ಸುಬ್ಬರಾಯರು, ಸಂಪಾದಕರು, 'ಆಧ್ಯಾತ್ಮ ಪ್ರಕಾಶ'

೨. ಆಕಾಶ ದಿಗ್ವಿಜಯ (ಸಚಿತ್ರ)

ಶ್ರೀಮಾನ್ ಬಿ.ಎಂ. ಶಿವರಾಮಯ್ಯನವರು

೬. ೨೩-೫-೩೬ ಷೇಕ್ಸ್‌ಪಿಯರ್ ಮಹಾಕವಿ

ಉಪನ್ಯಾಸಕರು: ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರು, ಎಂ.ಎ., ಬಿ.ಎಲ್.

ಅಧ್ಯಕ್ಷರು: ಶ್ರೀಮಾನ್ ಎಸ್. ನಾರಾಯಣರಾವ್ ಎಂ.ಎ. (ಆನರ್ಸ್)

೭. ೧೭-೬-೩೬ ಸಾಹಿತ್ಯ ಸವಿ

ಉಪನ್ಯಾಸಕರು: ಶ್ರೀಮಾನ್ ಎನ್.ಎಸ್. ನಾರಾಯಣಶಾಸ್ತ್ರಿ, ಎಂ.ಎ.

೮. ೨೧-೬-೩೬ ಕವಿತಾವಾಚನ

ಶ್ರೀಮಾನ್ ಕೆ.ವಿ. ಪುಟ್ಟಪ್ಪ, ಎಂ.ಎ.

೯. ೨೬-೭-೩೬ Industrialisation and World Peace

ಶ್ರೀಮಾನ್ ಜೆ.ಸಿ. ಕುಮಾರಪ್ಪ, ಎಂ.ಎ. (ಕೊಲಂಬಿಯ)

೧೦. ೧೦-೮-೩೬ ಜೈಮಿನಿ ಭಾರತ

ಉಪನ್ಯಾಸಕರು: ಶ್ರೀಮಾನ್ ಹೆಚ್. ಶ್ರೀನಿವಾಸರಾವ್, ಬಿ.ಎ., ಎಲ್‌ಎಲ್.ಬಿ., ಅಡ್ವೊಕೇಟ್

ಅಧ್ಯಕ್ಷರು: ಆಸ್ಥಾನ ಮಹಾವಿದ್ವಾನ್ ಪಂಡಿತ ಬ್ರ॥ ಶ್ರೀ॥ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು

೧೧. ೧೫-೧೦-೩೬ ಕನ್ನಡ ವಾಙ್ಮಯ

ಉಪನ್ಯಾಸಕರು: ಶ್ರೀ ನಿರಂಜನ ಶ್ರೀ ಮಹದೇವ ಸ್ವಾಮಿಗಳು

೧೨. ೧೭-೧೦-೩೬ ಭಗವದ್ಗೀತೆ ಮತ್ತು ವಚನ ಸಾಹಿತ್ಯ

ಉಪನ್ಯಾಸಕರು: ಶ್ರೀ ನಿರಂಜನ ಶ್ರೀ ಮಹದೇವ ಸ್ವಾಮಿಗಳು

೧೩. ೧೮-೧೦-೩೬ ಶೃಂಗಾರ ಮತ್ತು ಭಕ್ತಿ

ಉಪನ್ಯಾಸಕರು: ಶ್ರೀ ನಿರಂಜನ ಶ್ರೀ ಮಹದೇವ ಸ್ವಾಮಿಗಳು

೧೪. ೧೩-೧೨-೩೬ ಸಂತಾಪ ಸೂಚಕ ಸಭೆ

ರಾವ್ ಬಹದ್ದೂರ್ ಆರ್. ನರಸಿಂಹಾಚಾರ್, ಎಂ.ಎ. ಅವರ ನಿಧನ ಪ್ರಯುಕ್ತ

ಅಧ್ಯಕ್ಷರು: ಆಸ್ಥಾನ ಮಹಾವಿದ್ವಾನ್ ಪಂಡಿತ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು

೧೫. ೧೬-೧೨-೩೬ ಕವಿತಾ ವಾಚನ

ಶ್ರೀಮಾನ್ ಕೆ.ಎಸ್. ನರಸಿಂಹಸ್ವಾಮಿ

೧೬. ೧೭-೧೨-೩೬ ಭಾರತೀಯ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾನ

ಉಪನ್ಯಾಸಕರು: ಡಾ॥ ಎಂ.ಎಚ್. ಕೃಷ್ಣ, ಎಂ..ಎ., ಡಿ.ಲಿಟ್. (ಲಂಡನ್)

೧೭. ೨೦-೧೨-೩೬ ವಿಜಯನಗರ ಸ್ಮಾರಕೋತ್ಸವ

ಉಪನ್ಯಾಸಕರು: ಶ್ರೀಮಾನ್ ಬೇಲೂರು ಕೇಶವದಾಸರು

ಅಧ್ಯಕ್ಷರು: ಶ್ರೀಮಾನ್ ಎಸ್. ನಾರಾಯಣರಾವ್, ಎಂ.ಎ. (ಆನರ್ಸ್)

೧೮. ೨೪-೧೨-೩೬ ವಿದ್ಯಾಭ್ಯಾಸ ಪದ್ಧತಿಯಲ್ಲಿ ಕೆಲವು ಹೊಸ ಸಮಸ್ಯೆಗಳು

ಉಪನ್ಯಾಸಕರು: ಡಾ॥ ಎಂ. ಸಿದ್ಧಲಿಂಗಯ್ಯ, ಎಂ.ಎ., ಪಿಹೆಚ್.ಡಿ.

ಅಧ್ಯಕ್ಷರು: ಶ್ರೀಮಾನ್ ಎಚ್. ಲಿಂಗಪ್ಪ, ಬಿ.ಎ., ಎಲ್‌ಎಲ್.ಬಿ.

ಅನುಬಂಧ-೧೦

ಏಳನೆಯ ವರ್ಷದ ಕಾರ್ಯಕಲಾಪಗಳು

೧. ೫-೭-೩೭ ಲಕ್ಷ್ಮೀಶನ ಜೈಮಿನಿ ಭಾರತ
ಉಪನ್ಯಾಸಕರು: ಶ್ರೀಮಾನ್ ಎಸ್. ನರಸಿಂಹಮೂರ್ತಿ, ಬಿ.ಎ.
ಅಧ್ಯಕ್ಷರು: ಶ್ರೀಮಾನ್ ಹೆಚ್. ಶ್ರೀನಿವಾಸರಾಯರು, ಬಿ.ಎ., ಎಲ್‌ಎಲ್.ಬಿ.

೨. ೨-೨-೩೭ ಭಾರತ ವಾಚನ
ಶ್ರೀಮಾನ್ ಎಸ್.ಜಿ. ಬಿಂದೂರಾಯರು

೩. ೫-೨-೩೭ ಮಾಯಾದೇವಿಯ ಬಾಲ್ಯ ಮತ್ತು ಮಾಯೆಯ ತಿರಸ್ಕಾರ (ಚಾಮರಸನ ಪ್ರಭುಲಿಂಗಲೀಲೆಯಿಂದ)
ಶ್ರೀಮಾನ್ ಎಸ್.ಜಿ. ಬಿಂದೂರಾಯರು

೪. ೬-೨-೩೭ ಸಂಘದ ಆರನೆಯ ವಾರ್ಷಿಕೋತ್ಸವ
ಅಧ್ಯಕ್ಷರು: ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯ, ಎಂ.ಎ.
೧. ದೇವತಾ ಪ್ರಾರ್ಥನೆ
೨. ಸಭಾಧ್ಯಕ್ಷರ ಪರಿಚಯ
೩. ಭಾರತ ವಾಚನ : ಶ್ರೀಮಾನ್ ಡಿ.ಎಂ. ಸುಬ್ಬರಾಮಯ್ಯ, ಬಿ.ಎ., ಬಿ.ಟಿ. ಅವರಿಂದ
೪. ಕಾವ್ಯ ವಾಚನ : ಶ್ರೀಮಾನ್ ಹೆಚ್.ಆರ್. ಮಾಧವರಾಯರು
೫. ಸಂಘದ ವರದಿ : ಶ್ರೀಮಾನ್ ಎಸ್.ವಿ. ಕೃಷ್ಣಮೂರ್ತಿರಾವ್
೬. ಬಹುಮಾನ ವಿನಿಯೋಗ
೭. ಅಧ್ಯಕ್ಷ ಭಾಷಣ
೮. ಮಂಗಳ

೫. ೭-೨-೩೭ ಮೊದಲನೆಯ ಜಿಲ್ಲಾ ಸಂಘಸಮ್ಮೇಳನ
ಆರಂಭ ಭಾಷಣ: ಶ್ರೀಮಾನ್ ಎಸ್. ನಾರಾಯಣರಾವ್, ಎಂ.ಎ. (ಆನರ್ಸ್)
ಅಧ್ಯಕ್ಷರು: ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯ, ಎಂ.ಎ.
೧. ಭಾರತ ವಾಚನ : ಶ್ರೀಮಾನ್ ಎಸ್.ಜಿ. ಬಿಂದೂರಾಯರು
೨. ಆರಂಭ ಭಾಷಣ
೩. ಸಮ್ಮೇಳನದ ಉದ್ದೇಶ ವಿವರಣೆ
೪. ಸಂಘದ ಪ್ರತಿನಿಧಿಗಳ ಭಾಷಣ
೫. ನಿರ್ಣಯಗಳು
೬. ಅಧ್ಯಕ್ಷರ ಭಾಷಣ

೬. ೭-೨-೩೭ ಸಂಜೆ : ೧. ಪಂಪ ಕುಮಾರವ್ಯಾಸರ ಭಾರತಗಳು

ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯ, ಎಂ.ಎ.

೨. ಸಂಗೀತ

ಶ್ರೀಮಾನ್ ಡಿ.ಎಂ. ಸುಬ್ಬರಾಮಯ್ಯ, ಬಿ.ಎ.,ಬಿ.ಟಿ.

೭. ೨೨-೩-೩೭ ಭಾರತ ವಾಚನ

ಶ್ರೀಮಾನ್ ಎಸ್.ಜಿ. ಬಿಂದೂರಾಯರು

೮. ೧೮-೪-೩೭ ಬೌದ್ಧ ಧರ್ಮ

ಶ್ರೀಮಾನ್ ಜಿ.ಪಿ. ರಾಜರತ್ನಂ, ಎಂ.ಎ.

೯. ೧೯-೪-೩೭ ಕಾವ್ಯ ವಾಚನ

ಶ್ರೀಮಾನ್ ಜಿ.ಪಿ. ರಾಜರತ್ನಂ, ಎಂ.ಎ.

೧೦. ೨-೫-೩೭ ಭಾರತ ವಾಚನ

ಶ್ರೀಮಾನ್ ಕೃಷ್ಣಗಿರಿ ಕೃಷ್ಣರಾಯರು

೧೧. ೧೧-೫-೩೭ ಉಪನ್ಯಾಸ: ಸಾಹಿತ್ಯದಲ್ಲಿ ಸವಿ ಮತ್ತು ಕಾವ್ಯ ವಾಚನ

ಶ್ರೀಮಾನ್ ರಂಗನಾಥ ಎಸ್. ಮುಗಳಿ, ಎಂ.ಎ.

೧೨. ೧೨-೫-೩೭ ಉಪನಿಷತ್ತುಗಳು

ಶ್ರೀಮಾನ್ ವೈ. ಸುಬ್ಬರಾಯರು

೧೩. ೧೩-೫-೩೭ ವೇದಾಂತವೂ ಈಗಿನ ಕೆಲವು ಸಮಸ್ಯೆಗಳೂ

ಶ್ರೀಮಾನ್ ವೈ. ಸುಬ್ಬರಾಯರು

೧೪. ೧೪-೫-೩೭ ಕನ್ನಡ ಪದ್ಯರಚನೆಯಲ್ಲಿ ನನ್ನ ಅನುಭವಗಳು

ಶ್ರೀಮಾನ್ ಪಂಜೆ ಮಂಗೇಶರಾಯರು, ಬಿ.ಎ., ಎಲ್.ಟಿ.

೧೫. ೧೫-೫-೩೭ ಕನ್ನಡಕ್ಕೆ ಪಾಶ್ಚಾತ್ಯರು ಮಾಡಿರುವ ಸೇವೆ

ಶ್ರೀಮಾನ್ ಪಂಜೆ ಮಂಗೇಶರಾಯರು, ಬಿ.ಎ., ಎಲ್.ಟಿ.

(ಮಳೆ ಬಂದ ಕಾರಣ ಉಪನ್ಯಾಸ ನಡೆಯಲಿಲ್ಲ)

೧೬. ೭-೬-೩೭ ಕಾಳಿದಾಸ ಮತ್ತು ಹರೀಶ್ವರ

ಉಪನ್ಯಾಸಕರು: ಕೀರ್ತನ ಕೇಸರಿ

ಶ್ರೀಮಾನ್ ಬಿ. ಶಿವಮೂರ್ತಿಶಾಸ್ತ್ರಿಗಳು

ಅಧ್ಯಕ್ಷರು: ಶ್ರೀಮಾನ್ ಎಸ್. ನಾರಾಯಣರಾವ್, ಎಂ.ಎ. (ಆನರ್ಸ್)

೧೭. ೧೦-೬-೩೭ ಸಂಗೀತ ಕಛೇರಿ

ಶ್ರೀಮಾನ್ ಎಂ.ಎಸ್. ಶೆಲ್ವಪುಳ್ಳೈಯಂಗಾರ್ಯರು

೧೮. ೧೭-೬-೩೭ ಕಥೆಗಳ ಓದುಗಾರಿಕೆ

ಶ್ರೀಮಾನ್ ಎ. ಸೀತಾರಾಂ, ಬಿ.ಎಸ್ಸಿ.

೧೯. ೨೬-೫-೩೭ ವೇದಗಳು

ಉಪನ್ಯಾಸಕರು: ವೇದತೀರ್ಥ, ಸಾಹಿತ್ಯವಿಶಾರದ ಪಂ॥ ಬಿದರೆ ಮಠದ ವೀರಭದ್ರಶಾಸ್ತ್ರಿಗಳು

ಅಧ್ಯಕ್ಷರು: ಶ್ರೀಮಾನ್ ಎಸ್. ನಾರಾಯಣರಾವ್, ಎಂ.ಎ.(ಆನರ್ಸ್)

೨೦. ೩-೭-೩೭ ಸಾರ್ವಜನಿಕ ಸಭೆ

ಅಧ್ಯಕ್ಷರು: ಶ್ರೀಮಾನ್ ಹೆಚ್. ಲಿಂಗಪ್ಪ, ಬಿ.ಎ., ಎಲ್ಎಲ್.ಬಿ.

ನಿರ್ಣಯಗಳು:

೧. ಭಾಷೇತರ ವಿಷಯಗಳನ್ನು ಕನ್ನಡದ ಮೂಲಕ ಬೋಧಿಸಬೇಕೆಂದು ಮೈಸೂರು ಸರಕಾರದವರು ಮಾಡಿರುವ ಏರ್ಪಾಟನ್ನು ಅನುಮೋದಿಸಿ ಅದಕ್ಕೋಸ್ಕರ ಮೈಸೂರು ಸರಕಾರದವರನ್ನು ಈ ಸಭೆಯು ವಂದಿಸುತ್ತದೆ.

೨. ವಿಶ್ವವಿದ್ಯಾನಿಲಯದ ಬಿ.ಎ., ಬಿ.ಎಸ್ಸಿ. ಪಾಸ್ ಮತ್ತು ಆನರ್ಸ್ ತರಗತಿಗಳ ಪ್ರತಿಯೊಂದು ಶಾಖೆಯಲ್ಲಿ ಕನ್ನಡ ವ್ಯಾಸಂಗವು ನಿರ್ಬಂಧವಾಗಿ ನಡೆಯುವಂತೆ ಏರ್ಪಡಿಸಬೇಕೆಂದು ಈ ಸಭೆಯು ಅತಿವಿನಯದಿಂದ ಸೂಚಿಸುತ್ತದೆ.

೩. ಸ್ಥಳೀಯ ಸಂಸ್ಥೆಗಳ ಕಾರ್ಯಕಲಾಪಗಳು ಕನ್ನಡದಲ್ಲಿಯೇ ನಡೆಯುವಂತೆಯೂ, ಕನ್ನಡದಲ್ಲಿಯೇ ಲಿಖಿತವಾಗಿ ನಿಲ್ಲುವಂತೆಯೂ ಸಾರ್ವತ್ರಿಕ ಆಜ್ಞಾಪತ್ರಿಕೆಯನ್ನು ದಯಪಾಲಿಸಬೇಕೆಂದು ಈ ಸಭೆಯು ಬೇಡುತ್ತದೆ.

೪. ಇನ್ನು ಮುಂದೆ ಎಲ್ಲ ಪ್ರಥಮ ದರ್ಜೆಯ ನ್ಯಾಯಸ್ಥಾನಗಳಲ್ಲೂ ಕನ್ನಡವು ಸಾಮಾನ್ಯವಾಗಿ ವಿಚಾರಣೆಯ ಮತ್ತು ಲಿಖಿತದ ಭಾಷೆಯಾಗಿರುವಂತೆ ಏರ್ಪಡಿಸಬೇಕೆಂದು ಈ ಸಭೆಯು ಸರಕಾರವನ್ನು ಪ್ರಾರ್ಥಿಸುತ್ತದೆ.

೨೧. ೧೫-೭-೩೭ ಕನ್ನಡ ನಾಟಕಗಳು

ಉಪನ್ಯಾಸಕರು: ಶ್ರೀಮಾನ್ ದೇವುಡು ನರಸಿಂಹಶಾಸ್ತ್ರಿ, ಎಂ.ಎ.

ಅಧ್ಯಕ್ಷರು: ಶ್ರೀಮಾನ್ ಎ. ವಾಸುದೇವರಾವ್, ಬಿ.ಎ

೨೨. ೨೫-೭-೩೭ ಸರ್ವಜ್ಞನ ವಚನಗಳು

ಉಪನ್ಯಾಸಕರು: ಶ್ರೀನಿರಂಜನ ಶ್ರೀ ಮಹದೇವ ಸ್ವಾಮಿಗಳು

೨೩. ೪-೯-೩೭ ಕವಿ ಷಡಕ್ಷರದೇವ ಮತ್ತು ರಾಜಸೇಖರ ವಿಳಾಸ

ಉಪನ್ಯಾಸಕರು: ಶ್ರೀಮಾನ್ ಹೆಚ್. ಶ್ರೀನಿವಾಸರಾವ್, ಬಿ.ಎ., ಬಿ.ಎಲ್.

ಅಧ್ಯಕ್ಷರು: ಆಸ್ಥಾನ ಮಹಾವಿದ್ವಾನ್ ಪಂಡಿತ ಬ್ರ॥ ಶ್ರೀ॥ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು

೨೪. ೮-೯-೩೭ ಕನ್ನಡ ಲಿಪಿ

ಉಪನ್ಯಾಸಕರು: ವೇದತೀರ್ಥ, ಸಾಹಿತ್ಯವಿಶಾರದ ಪಂಡಿತ ಬಿದರೆ ಮಠದ ವೀರಭದ್ರಶಾಸ್ತ್ರಿಗಳು

೨೫. ೨೦-೯-೩೭ ಯೂರೋಪು ಸಂಚಾರ

ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ ಶ್ರೀಮಾನ್ ಪಿ. ಮಹದೇವಯ್ಯ, ಬಿ.ಎ., ಬಿ.ಎಲ್.

೨೬. ೬-೧೦-೩೭ ಸತ್ಕಾರ ಸಭೆ

ಸಂಘದ ಗೌರವ ಅಧ್ಯಕ್ಷರಾದ

ಶ್ರೀಮಾನ್ ಎಸ್. ನಾರಾಯಣರಾವ್, ಎಂ.ಎ. (ಆನರ್ಸ್) ಅವರ ಗೌರವಾರ್ಥ

೨೭. ೧೦-೧೦-೩೭ ಕನ್ನಡ ನಾಡ ಹಬ್ಬ

ಅಧ್ಯಕ್ಷರು: ಶ್ರೀಮಾನ್ ಎ. ವಾಸುದೇವರಾವ್, ಬಿ.ಎ.

ಬೆಳಿಗ್ಗೆ: ದೇವತಾ ಪ್ರಾರ್ಥನೆ
ಪರಿಚಯ ಭಾಷಣ
ಅಧ್ಯಕ್ಷರ ಮೊದಲ ಮಾತು
ನಾಡ ಹಬ್ಬದ ಅವಶ್ಯಕತೆ : ಶ್ರೀಮಾನ್ ಎಸ್.ಎಸ್. ಮಾಳವಾಡ, ಎಂ.ಎ.
ಭಾರತ ವಾಚನ : ಶ್ರೀಮಾನ್ ಹೆಚ್.ಆರ್. ಮಾಧವರಾವ್
ಸಾಹಿತ್ಯ ಮತ್ತು ಕಲಾ ಪ್ರದರ್ಶನದ ಪ್ರಾರಂಭ : (ಶ್ರೀಮಾನ್ ಕುಕ್ಕೆ ಶ್ರೀಕಂಠಶಾಸ್ತ್ರಿಗಳು ಮತ್ತು ಶ್ರೀಮಾನ್ ಚಂದ್ರಶೇಖರ್ ಅವರ ಸಹಾಯದಿಂದ)

ಸಂಜೆ: ಕಾವ್ಯ ವಾಚನ-ಚಿತ್ರಾಂಗದಾ:
ಶ್ರೀಮಾನ್ ಟಿ. ಪ್ರಾಣೇಶಾಚಾರ್ ಬಿ.ಎ.
ಕೋಲಾಟ: ಬಾಲಕಿಯರಿಂದ
ಆಧುನಿಕ ರಂಗಭೂಮಿ ಮತ್ತು ಸಮಾಜ:
ಶ್ರೀಮಾನ್ ಆರ್.ವ್ಹಿ. ಜಹಗೀರದಾರ್, ಎಂ.ಎ. (ಲಂಡನ್)
ರನ್ನ ಕವಿ : ಶ್ರೀಮಾನ್ ಎಸ್.ಎಸ್. ಮಾಳವಾಡ

ರಾತ್ರಿ: ದಾಸರ ಮತ್ತು ಶಿವಶರಣರ ಕೀರ್ತನೆಗಳ ಹಾಡುಗಾರಿಕೆ:
ವಿದ್ವಾನ್ ಬಿ. ಶೇಷಪ್ಪನವರು
ಶ್ರೀಮಾನ್ ಎಂ. ಮುನಿಯಾಜಿರಾಯರು
ಶ್ರೀಮಾನ್ ಎಂ. ರಾಮಭಟ್ಟರು

೨೮. ೧೧-೧೦-೩೭ ಲೇಖಕರ ಗೋಷ್ಠಿ

ಬೆಳಿಗ್ಗೆ: ೧. ಶ್ರೀಮಾನ್ ಪಂಡಿತ ಭರಮೇಗೌಡರು

೨. ಶ್ರೀಮಾನ್ ಎಸ್.ಎಸ್. ವೀರಪ್ಪ, ಬಿ.ಎಸ್‌ಸಿ. (ಆನರ್ಸ್)

೩. ಶ್ರೀಮಾನ್ ಶ್ರೀನಿವಾಸಮೂರ್ತಿ ಇವರುಗಳ ಕಾವ್ಯ ವಾಚನ

ಸಂಜೆ: ಲಾವಣಿಗಳು: ಶ್ರೀಮಾನ್ ಶ್ರೀನಿವಾಸಮೂರ್ತಿ ಅವರಿಂದ

ಕನ್ನಡ ಸಾಹಿತ್ಯದ ಬೆಳವಣಿಗೆ: ಶ್ರೀಮಾನ್ ಎಸ್. ನಾರಾಯಣ ಮೂರ್ತಿ, ಬಿ.ಎ. (ಆನರ್ಸ್)

ಅಧ್ಯಕ್ಷರ ಭಾಷಣ

ರಾತ್ರಿ: 'ನಾಟಕವೆಂಬ ನಾಟಕ' : ರಾಷ್ಟ್ರ ಯುವಕ ಸಂಘದವರಿಂದ

೨೯. ೧೬-೧೦-೩೭ ಕಾವ್ಯವಾಚನ ಮತ್ತು ಕನ್ನಡ ಗೀತಗಳ ಗಾನ

ಗಮಕ ವಿದ್ವಾನ್ ಶ್ಲೋಕ ಸಂಗೀತ ಶ್ರೀಮಾನ್ ಕಳಲೆ ಸಂಪತ್ಕುಮಾಚಾರ್ಯ, ಬಿ.ಎ., ಬಿ.ಟಿ.

೩೦. ೧೭-೧೦-೩೭ ಭಾರತ ವಾಚನ

ಶ್ರೀಮಾನ್ ಎಂ. ಹರಿನಾರಾಯಣ, ಬಿ.ಎ.

೩೧. ೨೪-೧೦-೩೭ ಭೂಕಂಪಗಳು

ಶ್ರೀಮಾನ್ ಬಿ.ಎ. ಶಿವರಾಮಯ್ಯ

೩೨. ೩೦-೧೦-೩೭ ಸಂತಾಪ ಸೂಚಕ ಸಭೆ

ಶ್ರೀಮಾನ್ ಪಂಜೆ ಮಂಗೇಶರಾವ್, ಬಿ.ಎ., ಎಲ್.ಟಿ. ಅವರ ನಿಧನ ಪ್ರಯುಕ್ತ

ಅಧ್ಯಕ್ಷರು: ಆಸ್ಥಾನ ಮಹಾವಿದ್ವಾನ್ ಪಂಡಿತ ಶ್ರೀಮಾನ್ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು

ಅನುಬಂಧ-೧೧

ಎಂಟನೆಯ ವರ್ಷದ ಕಾರ್ಯಕಲಾಪಗಳು

೧. ೧೬-೧-೩೮ ಶ್ರೀ ನಿಜಗುಣ ಶಿವಯೋಗಿಗಳು

ಉಪನ್ಯಾಸಕರು: ಶ್ರೀಮಾನ್ ಟಿ. ಗುರುಸಂಜಯ್ಯ, ಬಿ.ಎ., ಬಿ.ಎಲ್.

ಅಧ್ಯಕ್ಷರು: ಆಸ್ಥಾನ ಮಹಾವಿದ್ವಾನ್ ಪಂಡಿತ ಶ್ರೀಮಾನ್ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು

೨. ೧೨-೨-೩೮ ತಮಿಳು ಸಾಹಿತ್ಯ

ಶ್ರೀಮಾನ್ ಪಿ.ಎಂ. ಸೋಮಸುಂದರಂ, ಎಂ.ಎ., ಎಲ್.ಟಿ.

೩. ೨೦-೨-೩೮ ಸತ್ತು ಬದುಕಿದ ಅಶ್ವತ್ಥಾಮ

ಶ್ರೀಮಾನ್ ಎಸ್.ವಿ. ರಂಗಣ್ಣ, ಎಂ.ಎ.

೪. ೧೯-೩-೩೮ ಏಳನೆಯ ವಾರ್ಷಿಕೋತ್ಸವ

ಅಧ್ಯಕ್ಷರು: ಶ್ರೀಮಾನ್ ಸಿ.ಕೆ. ವೆಂಕಟರಾಮಯ್ಯ, ಎಂ.ಎ., ಎಲ್‌ಎಲ್‌ಬಿ.

೧. ಪ್ರಾರ್ಥನೆ : ಶ್ರೀ ಗಿರಿಜ-ಅಮೃತಾಬಾಯಿ

೨. ಸಭಾಧ್ಯಕ್ಷರ ಪರಿಚಯ

೩. ಕಾವ್ಯ ವಾಚನ : ಸ್ಪರ್ಧೆಯಲ್ಲಿ ಬಹುಮಾನ ಹೊಂದಿದವರಿಂದ

೪. ಸಂಗೀತ : ಕುಮಾರಿ ಮನೋರಮ-ಕೌಸಲ್ಯ ಅವರಿಂದ

೫. ಸಂದೇಶಗಳು

೬. ಸಂಘದ ವರದಿ : ಶ್ರೀಮಾನ್ ಎಸ್.ವಿ. ಕೃಷ್ಣಮೂರ್ತಿರಾವ್

೭. ಬಹುಮಾನ ವಿನಿಯೋಗ

೮. ಅಧ್ಯಕ್ಷ ಭಾಷಣ

೯. ಮಂಗಳ

ರಾತ್ರಿ: ಯಕ್ಷಗಾನ: ಶ್ರೀಮಾನ್ ಅಬ್ಬೆ ನಾರಾಯಣರಾಯರು ಮತ್ತು ಮಿತ್ರರಿಂದ

೫. ೨೦-೩-೩೮ ಬೆಳಿಗ್ಗೆ : ಜಿಲ್ಲಾ ಎರಡನೆಯ ಸಂಘ ಸಮ್ಮೇಳನ

ಪ್ರಾರಂಭ: ಜಿಲ್ಲಾಧಿಕಾರಿಗಳಾದ ಶ್ರೀಮಾನ್ ಎಂ. ಶೇಷಾದ್ರಿ, ಎಂ.ಎ. ಅವರಿಂದ

ಅಧ್ಯಕ್ಷರು: ಶ್ರೀಮಾನ್ ಸಿ.ಕೆ. ವೆಂಕಟರಾಮಯ್ಯ, ಎಂ.ಎ., ಎಲ್‌ಎಲ್.ಬಿ.

೧. ಆರಂಭ ಭಾಷಣ

೨. ಕಾರ್ಯದರ್ಶಿಗಳ ವರದಿ

೩. ಸಂಘಗಳ ಪ್ರತಿನಿಧಿಗಳ ಭಾಷಣ

೪. ನಿರ್ಣಯಗಳು

೫. ಅಧ್ಯಕ್ಷರ ಭಾಷಣ

೬. ೨೦-೩-೩೮ ಸಂಜೆ: ಕುಮಾರವ್ಯಾಸನ ದ್ರೌಪದಿ

ಶ್ರೀಮಾನ್ ಸಿ.ಕೆ. ವೆಂಕಟರಾಮಯ್ಯ, ಎಂ.ಎ., ಎಲ್‌ಎಲ್.ಬಿ.

೭. ೨೨-೩-೩೮ Sun, Moon and Stars

Prof. H. John Taylor, M.Sc., Ph.D., Wilson College, Bombay

೮. ೬-೫-೩೮ ಲಾವಣಿ ಹಾಡುಗಾರಿಕೆ

ಶ್ರೀಮಾನ್ ಎನ್. ವಿಷಕಂಠರಾಯರು

೯. ೨೮-೫-೩೮ ಕಾವ್ಯ ವಾಚನ (ಶಿಶುಸಾಹಿತ್ಯ)

ಶ್ರೀಮಾನ್ ಜಿ.ಪಿ. ರಾಜರತ್ನಂ, ಎಂ.ಎ.

ಶ್ರೀಮಾನ್ ಎ. ಲಕ್ಷ್ಮಣರಾವ್ ಹೊಯ್ಸಳ, ಬಿ.ಎ.

೧೦. ೨೭-೬-೩೮ ಬಂಕಿಮಚಂದ್ರ ಶತಮಾನೋತ್ಸವ

'ಬಂಕಿಮಚಂದ್ರರ ಜೀವನ ಚರಿತ್ರೆ' : ಶ್ರೀಮಾನ್ ಕೂಡಲಿ ಚಿದಂಬರಂ, ಬಿ.ಎ., ಎಲ್‌ಎಲ್.ಬಿ.

'ವೆಂಕಟಾಚಾರ್ಯರ ಕಾದಂಬರಿಗಳು' : ಶ್ರೀಮಾನ್ ಹೆಚ್. ಶ್ರೀನಿವಾಸ ರಾವ್, ಬಿ.ಎ., ಬಿ.ಎಲ್.

ಅಧ್ಯಕ್ಷರು: ಆಸ್ಥಾನ ಮಹಾವಿದ್ವಾನ್ ಪಂಡಿತ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು

೧೧. ೧೭-೭-೩೮ ವಾರ್ಧಾ ಶಿಕ್ಷಣ ಕ್ರಮ

ಉಪನ್ಯಾಸಕರು: ಶ್ರೀಮಾನ್ ಬಿ. ಸುಬ್ಬಣ್ಣಾಚಾರ್, ಬಿ.ಎಸ್‌ಸಿ., ಬಿ.ಟಿ.

ಅಧ್ಯಕ್ಷರು: ಶ್ರೀಮಾನ್ ಹೆಚ್. ಲಿಂಗಪ್ಪ, ಬಿ.ಎ., ಎಲ್‌ಎಲ್.ಬಿ.

೧೨. ೬-೮-೩೮ ಚರ್ಚಾ ಕೂಟ

ವಿಷಯ: ವಾರ್ಧಾ ಶಿಕ್ಷಣ ಕ್ರಮವು ದೇಶದ ಹಿತಕ್ಕೆ ವಿರೋಧವೂ ಆಚರಣೆಗೆ ತರಲು ಅಸಾಧ್ಯವೂ ಆಗಿದೆ.

ಅಧ್ಯಕ್ಷರು: ಶ್ರೀಮಾನ್ ಮಾಳೂರು ಸುಬ್ಬರಾವ್, ಬಿ.ಎ., ಎಲ್‌ಎಲ್.ಬಿ.

ಪರವಾಗಿ:

೧. ಶ್ರೀಮಾನ್ ಹೆಚ್. ಲಿಂಗಪ್ಪ, ಬಿ.ಎ., ಎಲ್‌ಎಲ್.ಬಿ.

೨. ಶ್ರೀಮಾನ್ ಬಿ.ಆರ್. ಪುಟ್ಟನಂಜಪ್ಪ, ಎಂ.ಎ., ಎಲ್‌ಎಲ್.ಬಿ.

ವಿರೋಧವಾಗಿ:

೧. ಶ್ರೀಮಾನ್ ಬಿ. ಸುಬ್ಬಣ್ಣಾಚಾರ್, ಬಿ.ಎಸ್‌ಸಿ., ಬಿ.ಟಿ.

೨. ಶ್ರೀಮಾನ್ ಹೆಚ್. ಸಿದ್ಧಯ್ಯ, ಬಿ.ಎ., ಎಲ್‌ಎಲ್.ಬಿ.

ನಿರ್ಣಯವು ಬಹುಮತದಿಂದ ಬಿದ್ದುಹೋಯಿತು.

೧೩. ೧೦-೮-೩೮ ರಾಜ್ಯ ಪದ್ಧತಿಗಳು-೧

ಶ್ರೀಮಾನ್ ವಿ. ಸೀತಾರಾಮಯ್ಯ, ಎಂ.ಎ.

೧. ವಿಷಯದ ಸಾಮಾನ್ಯ ಸೂಚನೆ. ೨. ರಾಜ್ಯ-ಸಮಾಜ-ರಾಷ್ಟ್ರ-ವ್ಯವಹಾರ ಪ್ರಪಂಚ. ೩. ಸರಕಾರ-ಪ್ರಭುತ್ವ-ಇತರ ಸಂಸ್ಥೆಗಳು; ಆರ್ಥಿಕ-ವಿದ್ಯಾ-ಮತ ರಾಷ್ಟ್ರೀಯ-ಅಂತರ ರಾಷ್ಟ್ರೀಯ. ೪. ರಾಜ್ಯಾಧಿಕಾರ; ಗುರಿ, ದಾರಿ; ವಿಧೇಯತೆ

ಏಕೆ? ಎಷ್ಟು? ೫. ಜನನದ ಹಕ್ಕು ಬಾಧ್ಯತೆಗಳು; ದೇಶದ ಶಾಸನಗಳು. ೬. ರಾಜ್ಯದ ಕಾರ್ಯಕ್ಷೇತ್ರ; ತತ್ವದಲ್ಲಿ, ವ್ಯವಹಾರದಲ್ಲಿ, ಬಗೆ ಬಗೆಯ ರಾಜ್ಯ ಪದ್ಧತಿಗಳಲ್ಲಿ, ೭. ರಾಜ್ಯಾಂಗ ರಚನೆ -ಒಂದು ರಾಜ್ಯವ್ಯವಸ್ಥೆ ಎಂದರೇನು? ೮. ರಾಜ್ಯಾಂಗ ಪದ್ಧತಿಗಳು; ಹಿಂದಿನವು-ಈಗಿನವು; (೧) ರಾಜನ-ಶ್ರೀಮಂತ ಅಥವಾ ಸಮಿತಿ ವರ್ಗದ-ಪ್ರಜಾಗಣದ ಅಧಿಕಾರದ; (೨) ಬಗೆಗಳು: Rigid, Flexible, Unitary, Federal. ೯. ಪ್ರಜಾ ರಾಜ್ಯ:- (೧) ತತ್ವಭಾಗ-ಲಕ್ಷಣ-ಸಂಸ್ಥೆಗಳು-ಕಾರ್ಯರೀತಿ-ವಿವರ; (೨) ನೇರವಾದ ಅಧಿಕಾರ-ಪಾರ್ಲಿಮೆಂಟರಿ ಪದ್ಧತಿ-ಅಧ್ಯಕ್ಷ ಪದ್ಧತಿ. (೧೦) ಸ್ವಾತಂತ್ರ್ಯದ ಲಕ್ಷಣ, ಬೆಳವಣಿಗೆ; ಸರಕಾರದ ರಕ್ಷಣೆ, ಹೊಣೆಗಾರಿಕೆ; ಪ್ರಜೆಗಳಿಗೆ, ಅಲ್ಪಸಂಖ್ಯೆಯವರಿಗೆ.

೧೪. ೧೧-೮-೩೮ ರಾಜ್ಯಪದ್ಧತಿಗಳು-೨

೧. ನೇರವಾದ ಪ್ರಜಾಧಿಪತ್ಯದಲ್ಲಿ ರಾಜ್ಯಾಂಗ ರಚನೆ-ಸ್ವಿಟ್ಜರ್‌ಲೆಂಡ್. ೨. ಪಾರ್ಲಿಮೆಂಟರಿ ಪದ್ಧತಿ-ಇಂಗ್ಲೆಂಡ್, ೩. ಅಧ್ಯಕ್ಷ ಪದ್ಧತಿ-ಫ್ರಾನ್ಸ್, ಅಮೆರಿಕದ ಸಂಯುಕ್ತ ಸಂಸ್ಥಾನಗಳು, ಲಕ್ಷಣಗಳು- ಅಧಿಕಾರ ವ್ಯವಸ್ಥೆ. ೪. ಸಂಯುಕ್ತ ರಾಜ್ಯಪದ್ಧತಿ;- ತತ್ವಭಾಗ-ವಿವರ. ೫. ತಾರತಮ್ಯಗಳು-ಗುಣದೋಷಗಳು. ೬. ಬ್ರಿಟಿಷ್ ಸಾಮ್ರಾಜ್ಯ ಮಂಡಲ-ರಾಜಕೀಯ ರಚನೆ-ಸಮಸ್ಯೆಗಳು-ಬಿಗಿ. ೭. ರಾಷ್ಟ್ರಗಳ ಸಂಘ.

೧೫. ೧೨-೮-೩೮ ರಾಜ್ಯ ಪದ್ಧತಿಗಳು-೩

(ಅ) ೧. ಇಂಡಿಯಾದಲ್ಲಿ ಹೊಸ ರಾಜಕೀಯ ಘಟನೆ. ೨. ಚರಿತ್ರೆ-ಸ್ವರೂಪ-ವಿವರ-ಭಾಗಗಳು. ೩. ಸಮಸ್ಯೆಗಳು-ಬಲಾಬಲಗಳು. ೪. (೧) ಪ್ರಾಂತ ಮತ್ತು ಸಂಯುಕ್ತ ಅಧಿಕಾರಗಳು. (೨) ದೇಶೀಯ ಸಂಸ್ಥಾನಗಳ ಸೇರಿಕೆ-ಸ್ಥಾನಮಾನಗಳು. ೫. ನಾಳಿನ ನೋಟ.

(ಆ) ಜನತೆಯ ಏಳಿಗೆ-ವಿದ್ಯಾಭ್ಯಾಸ-ಸಂಪ್ರದಾಯಗಳು-ಬದುಕಿನಲ್ಲಿ ರಾಜಕೀಯದ ಸ್ಥಾನ-ಜನದ ಮಂಗಳ

೧೬. ೭-೯-೩೮ ಸಂಗೀತ

ಸಂಗೀತ ವಿದ್ವಾನ್ ಚಿಂತಲಪಲ್ಲಿ ಶೇಷಗಿರಿರಾಯರು

೧೭. ೮-೯-೩೮ ಕನ್ನಡ ಮಾತು

ಶ್ರೀಮಾನ್ ತಿರುಮಲೆ ತಾತಾಚಾರ್ಯ ಶರ್ಮ

೧೮. ೩೦-೯-೩೮ ನಾಡ ಹಬ್ಬ

ಅಧ್ಯಕ್ಷರು: ಶ್ರೀಮಾನ್ ಕೆ.ವಿ. ಪುಟ್ಟಪ್ಪ, ಎಂ.ಎ.

೧. ಪ್ರಾರ್ಥನೆ

೨. ನೃತ್ಯಗೀತ-ಶಿಶುವಿಹಾರದ ಮಕ್ಕಳು

೩. ಅಧ್ಯಕ್ಷರ ಮೊದಲ ಮಾತು

೪. ನವರಾತ್ರಿಯಲ್ಲಿ ಹಬ್ಬ - ಶ್ರೀಮಾನ್ ಬಿ.ಎಸ್. ರಾಘವಯ್ಯ, ಬಿ.ಎ., ಬಿ.ಎಲ್.

೫. ದಾಸರ ಮತ್ತು ಶಿವಶರಣರ ಕೀರ್ತನೆಗಳ ಹಾಡುಗಾರಿಕೆ
ಶ್ರೀಮಾನ್ ವಿದ್ವಾನ್ ಬಿ. ಶೇಷಪ್ಪ
ಶ್ರೀಮಾನ್ ಎಂ. ರಾಮಭಟ್ಟರು
ಶ್ರೀಮಾನ್ ಎಂ. ಮುನಿಯಾಜಿರಾವ್

೧೯. ೧-೧೦-೩೮ ಬೆಳಿಗ್ಗೆ : ಲೇಖಕ ಗೋಷ್ಠಿ

ಅಧ್ಯಕ್ಷರು: ಶ್ರೀಮಾನ್ ಕೆ.ವಿ. ಪುಟ್ಟಪ್ಪ, ಎಂ.ಎ.

೧. ಶ್ರೀಮಾನ್ ಎನ್.ಎಸ್. ವೀರಪ್ಪ, ಬಿ.ಎಸ್‌ಸಿ. (ಆನರ್ಸ್), ಶ್ರೀಮಾನ್ ಎಂ.ಆರ್. ರಾಮಯ್ಯ, ಬಿ.ಎ., ಶ್ರೀ ಎಸ್. ಕೃಷ್ಣಮೂರ್ತಿ (ವಿದ್ಯಾರ್ಥಿ), ಶ್ರೀಮಾನ್ ಸಿ. ಶ್ರೀನಿವಾಸ ಮೂರ್ತಿ -ಇವರುಗಳು ಭಾಗವಹಿಸಿ ತಮ್ಮ ಕವಿತಾ ವಾಚನ ನಡೆಸಿದರು.

೨. ಕಾವ್ಯ ವಾಚನ: ಭಾರತ ಮತ್ತು ಬಸವರಾಜದೇವರ ರಗಳೆ- ಶ್ರೀಮಾನ್ ಹೆಚ್.ಆರ್. ಮಾಧವರಾವ್

ಸಂಜೆ: ೧. ಸಂಗೀತ-ಕುಮಾರಿ ಶಾರದಮ್ಮ

೨. ಬೈಲಾಟಗಳು- ಶ್ರೀಮಾನ್ ಎನ್.ಎಸ್. ವೀರಪ್ಪ, ಬಿ.ಎಸ್‌ಸಿ. (ಆನರ್ಸ್)

೩. ಕನ್ನಡಿಗರ ಧಾರ್ಮಿಕ ಜೀವನ-ಶ್ರೀಮಾನ್ ಟಿ. ಗುರುನಂಜಯ್ಯ, ಬಿ.ಎ., ಬಿ.ಎಲ್.

೪. ಅಧ್ಯಕ್ಷರ ಭಾಷಣ

೨೦. ೭-೧೦-೩೮ ಕಾವ್ಯ ವಾಚನ : ಶ್ಮಶಾನ ಕುರುಕ್ಷೇತ್ರ
ಶ್ರೀಮಾನ್ ಕೆ.ವಿ. ಪುಟ್ಟಪ್ಪ, ಎಂ.ಎ.

೨೧. ೨೨-೧೧-೩೮ ಸಂಗೀತ ಕಛೇರಿ
ಸಂಗೀತ ವಿದ್ವಾನ್ ಶ್ರೀಮಾನ್ ಎನ್.ಎಂ. ಭಟ್ಟರು

೨೨. ೨೩-೧೨-೩೮ ಉಪನ್ಯಾಸ ಮಾಲೆ
ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕ ವರ್ಗದವರಿಂದ

೧. ಪರಿಚಯ ಭಾಷಣ: ಶ್ರೀಮಾನ್ ಎಸ್.ವಿ. ಕೃಷ್ಣಮೂರ್ತಿರಾವ್

೨. ಸ್ವಾಗತ ಭಾಷಣ:

(೧) ಶ್ರೀಮಾನ್ ಜಿ.ಎ. ನಾರಾಯಣ ಸೆಟ್ಟಿ, ಬಿ.ಎ., ಮುನಿಸಿಪಲ್ ಕೌನ್ಸಿಲ್ ಅಧ್ಯಕ್ಷರು

(೨) ಶ್ರೀಮಾನ್ ಹೆಚ್. ಲಿಂಗಪ್ಪ, ಬಿ.ಎ., ಎಲ್‌ಎಲ್.ಬಿ., ಸ್ಕೂಲ್ ಬೋರ್ಡ್ ಅಧ್ಯಕ್ಷರು

(೩) ಕಾವ್ಯ ವಾಚನ: ಶ್ರೀಮತಿ ಬಿ. ನರಸಮ್ಮ

(೪) ಉಪಕ್ರಮ ಭಾಷಣ: ರಾಜಸೇವಾಸಕ್ತ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

(೫) ಗ್ರೀಕ್ ನಾಟಕ: (೧) ಶ್ರೀಮಾನ್ ಎ.ಎನ್. ಮೂರ್ತಿರಾವ್, ಎಂ.ಎ.

(೬) ಅಜಂತ ಎಲ್ಲೋರ (ಸಚಿತ್ರ) ರಾಜಸೇವಾಸಕ್ತ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

೨೩. ೨೪-೧೨-೩೮ ೧. ಗ್ರೀಕ್ ನಾಟಕ-೨
ಶ್ರೀಮಾನ್ ಎ.ಎನ್. ಮೂರ್ತಿರಾವ್, ಎಂ.ಎ.

೨. ಗ್ರೀಕರ ಸಾಮಾಜಿಕ ಜೀವನ
ಶ್ರೀಮಾನ್ ಜಿ. ಹನುಮಂತರಾವ್, ಎಂ.ಎ.

೩. ಗ್ರೀಕರ ಕಲೆ ಮತ್ತು ವಾಸ್ತುಶಿಲ್ಪ (ಸಚಿತ್ರ)
ರಾಜಸೇವಾಸಕ್ತ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

೨೪. ೨೫-೧೨-೩೮ ೧. ಕಾವ್ಯ ವಾಚನ
ಶ್ರೀಮಾನ್ ಡಿ.ಎಲ್. ನರಸಿಂಹಾಚಾರ್, ಎಂ.ಎ.

೨. ಗ್ರೀಕರ ವಿಜ್ಞಾನ
ಶ್ರೀಮಾನ್ ಎನ್. ನಾಗೇಶರಾವ್, ಎಂ.ಎ.

೩. ಗ್ರೀಕರ ರಾಜಕೀಯ ಜೀವನ
ಶ್ರೀಮಾನ್ ಪಿ.ಜಿ. ಸತ್ಯಗಿರಿನಾಥನ್, ಎಂ.ಎ.

೨೫. ೨೬-೧೨-೩೮ ೧. ಕಾವ್ಯ ವಾಚನ
ಶ್ರೀಮಾನ್ ಜಿ.ಪಿ. ರಾಜರತ್ನಂ, ಎಂ.ಎ.

೨. ಗ್ರೀಕರ ತತ್ವಶಾಸ್ತ್ರ
ಶ್ರೀಮಾನ್ ಎಂ.ಎ. ವೆಂಕಟರಾವ್, ಎಂ.ಎ.

೩. ಗ್ರೀಕರ ವಿದ್ಯಾಭ್ಯಾಸ
ಡಾಕ್ಟರ್ ಟಿ. ಸಿದ್ಧಲಿಂಗಯ್ಯ, ಎಂ.ಎ., ಬಿ.ಟಿ., ಪಿಹೆಚ್.ಡಿ.

೨೬. ೨೭-೧೨-೩೮ ೧. ಗ್ರೀಕರ ಮತ್ತು ಹಿಂದೂಗಳ ಸಂಸ್ಕೃತಿ
ಶ್ರೀಮಾನ್ ಜಿ. ಹನುಮಂತರಾವ್

೨. ಭಾರತೀಯರ ಇಂದಿನ ಆರ್ಥಿಕ ದೃಷ್ಟಿ
ಶ್ರೀಮಾನ್ ಎಸ್. ಗೋಪಾಲಸ್ವಾಮಿ, ಎಂ.ಎ.

೩. ಕಾವ್ಯ ವಾಚನ
ಶ್ರೀಮಾನ್ ಜಿ.ಪಿ. ರಾಜರತ್ನಂ, ಎಂ.ಎ.

೨೭. ೨೭-೧೨-೩೮ ಕಾವ್ಯ ವಾಚನ, ಕರ್ಣಾಟಕ ಪುರಾಣ ಮತ್ತು ಹಾರ್ಮೋನಿಯಂ ಪಠಣ
ಶ್ರೀಮಾನ್ ಜಿ.ಪಿ. ರಾಜರತ್ನಂ, ಎಂ.ಎ.

ಅನುಬಂಧ-೧೨

ಸಂಘದಿಂದ ಏರ್ಪಡಿಸಿದ ಪ್ರಚಾರೋಪನ್ಯಾಸಗಳು

ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರಿಂದ

೧. ೨೬-೫-೩೬ ಬೆಳಿಗ್ಗೆ : ತೀರ್ಥಹಳ್ಳಿಯಲ್ಲಿ-

೧. ಪರಿಚಯ ಭಾಷಣ

ಶ್ರೀಮಾನ್ ಬಿ.ಎಲ್. ಶ್ರೀಹರಿ, ಬಿ.ಎ., ಬಿ.ಎಲ್.

೨. ರಾಘವಾಂಕನ ಹರಿಶ್ಚಂದ್ರ ಕಾವ್ಯ

ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

೩. ಕಾವ್ಯ ವಾಚನ-ಹರಿಶ್ಚಂದ್ರ ಕಾವ್ಯದಿಂದ

ಶ್ರೀಮಾನ್ ಕೃಷ್ಣಗಿರಿ ಕೃಷ್ಣರಾಯರು

೨. ೨೬-೫-೩೬ ರಾತ್ರಿ : ಆಗುಂಬೆಯಲ್ಲಿ-

೧. ಪ್ರಾರ್ಥನೆ

ಶ್ರೀ ಜಯಮ್ಮ

೨. ಸ್ವಾಗತ ಭಾಷಣ

ಶ್ರೀಮಾನ್ ಬಿ.ಎಸ್. ನಂಜುಂಡಯ್ಯ

೩. ಪರಿಚಯ ಭಾಷಣ

ಶ್ರೀಮಾನ್ ಎಸ್.ವಿ. ಕೃಷ್ಣಮೂರ್ತಿರಾವ್

೪. ಸಂಘಗಳ ಅವಶ್ಯಕತೆ

ಶ್ರೀಮಾನ್ ಬಿ.ಎಲ್. ಶ್ರೀಹರಿ, ಬಿ.ಎ., ಬಿ.ಎಲ್. ಮತ್ತು
ಶ್ರೀಮಾನ್ ಕೂಡಲಿ ಚಿದಂಬರಂ

೫. ಸಂಘ ಸ್ಥಾಪನೆ ಮತ್ತು ಅಧ್ಯಕ್ಷ ಭಾಷಣ

ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

೩. ೨೭-೫-೩೬ ಸಂಜೆ : ನಗರದಲ್ಲಿ-

೧. ಸತ್ಕಾಟ ಕೂಟ

ಸಾಹುಕಾರ್ ಶ್ರೀ ಸಿ. ಶ್ರೀನಿವಾಸರಾಯರಿಂದ

೨. ಸ್ವಾಗತ ಭಾಷಣ

ಶ್ರೀಮಾನ್ ಸಿ. ಶ್ರೀನಿವಾಸರಾಯರು

೩. ಸಂಘದ ಅವಶ್ಯಕತೆ

ಶ್ರೀಮಾನ್ ಎಸ್.ವಿ. ಕೃಷ್ಣಮೂರ್ತಿರಾವ್

೪. ಸಂಘ ಸ್ಥಾಪನೆ ಮತ್ತು ಉಪನ್ಯಾಸ- ಹರಿಶ್ಚಂದ್ರ ಕಾವ್ಯ
ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರು, ಎಂ.ಎ., ಬಿ.ಎಲ್.

೪. ೨೮-೫-೩೬ ಬೆಳಿಗ್ಗೆ : ಹೊಸನಗರದಲ್ಲಿ-

೧. ಸ್ವಾಗತ ಭಾಷಣ
ಶ್ರೀಮಾನ್ ಗೋವಿಂದಸ್ವಾಮಿ

೨. ಸಂಘದ ಅವಶ್ಯಕತೆ
ನಗರದ ಸಾಹುಕಾರ್ ಶ್ರೀ ಶ್ರೀನಿವಾಸರಾವ್

೩. ಕಾವ್ಯ ವಾಚನ
ಶ್ರೀಮಾನ್ ಕೂಡಲಿ ಚಿದಂಬರಂ ಮತ್ತು
ಶ್ರೀಮಾನ್ ಎಸ್.ವಿ. ಕೃಷ್ಣಮೂರ್ತಿರಾವ್

೪. ಸಂಘ ಸ್ಥಾಪನೆ ಮತ್ತು ಅಧ್ಯಕ್ಷ ಭಾಷಣ
ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

೫. ೨೮-೫-೩೬ ಸಂಜೆ : ಸಾಗರದಲ್ಲಿ-

೧. ಇಕ್ಕೇರಿ-ಕೆಳದಿ ದೇವಾಲಯಗಳ ದರ್ಶನ

೨. ಸತ್ಕಾರ
ಸಾಗರದ ಕ್ಲಬ್ ಸದಸ್ಯರಿಂದ

೩. ಸಭೆ
ಅಧ್ಯಕ್ಷತೆ: ಶ್ರೀಮಾನ್ ಎಲ್. ಮುನಿಸ್ವಾಮಿ, ಬಿ.ಎ., ಬಿ.ಎಲ್. ಅವರು

(i) ಸ್ವಾಗತ ಭಾಷಣ
ಶ್ರೀಮಾನ್ ಕೆ. ವಿಶ್ವೇಶ್ವರರಾವ್

(ii) ಕಾವ್ಯ ವಾಚನ
೧. ಶ್ರೀಮಾನ್ ಕೂಡಲಿ ಚಿದಂಬರಂ
೨. ಶ್ರೀಮಾನ್ ಎಸ್.ವಿ. ಕೃಷ್ಣಮೂರ್ತಿರಾವ್

(iii) ಭಾಷಣ-ಉತ್ತಮ ಸಾಹಿತ್ಯವೆಂದರೇನು
ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

(iv) ವಂದನೆಗಳು
ಅಧ್ಯಕ್ಷರಿಂದ

೬. ೨೯-೫-೩೬ ಬೆಳಿಗ್ಗೆ : ಸೊರಬದಲ್ಲಿ-

೧. ಸ್ವಾಗತ ಭಾಷಣ
ಶ್ರೀಮಾನ್ ಮುಕುಂದ ಶೆಣೈ

೨. ಸಂಘ ಸ್ಥಾಪನೆ

ಶ್ರೀಮಾನ್ ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

೩. ವಂದನೆಗಳು

ಶ್ರೀಮಾನ್ ಚಿತ್ತೂರು ಶ್ರೀನಿವಾಸರಾಯರು

ಶಿರಾಳಕೊಪ್ಪದಲ್ಲಿ-

ಮಧ್ಯಾಹ್ನ : ಬಳ್ಳಿಗಾಂವೆಯ ದೇವಾಲಯಗಳ ದರ್ಶನ

ಸಂಜೆ : ಸಭೆ

೧. ಸ್ವಾಗತ ಭಾಷಣ

ಶ್ರೀಮಾನ್ ಕೆ. ಶೇಷಗಿರಿರಾವ್, ಎಂ.ಎ., ಎಲ್‌ಎಲ್.ಬಿ.

೨. ವರದಿ

ಶ್ರೀಮಾನ್ ಕೆ. ಸುಬ್ರಹ್ಮಣ್ಯಾಚಾರ್ಯರು

೩. ಕಾವ್ಯ ವಾಚನ

ಶ್ರೀಮಾನ್‌ಗಳಾದ ಎಂ. ಸದಾಶಿವಯ್ಯ, ಸೊರಬದ ಸುಬ್ಬರಾವ್, ಬಿ.ಎ., ಬಿ.ಟಿ., ಎಸ್.ವಿ. ಕೃಷ್ಣಮೂರ್ತಿರಾವ್, ಕೂಡಲಿ ಚಿದಂಬರಂ

೪. ಬಸವಣ್ಣನವರು

ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

೫. ವಂದನೆಗಳು

ಶ್ರೀಮಾನ್ ಸೊರಬದ ಸುಬ್ಬರಾಯರು

೭. ೨೯-೫-೩೬ ರಾತ್ರಿ : ಶಿಕಾರಿಪುರದಲ್ಲಿ-

೧. ಪ್ರಾರ್ಥನೆ

ಶ್ರೀಮತಿ ಜಯಮ್ಮ

೨. ಸ್ವಾಗತ ಭಾಷಣ

ಶ್ರೀಮಾನ್ ಕೆ. ಶೇಷಗಿರಿರಾವ್, ಎಂ.ಎ., ಎಲ್‌ಎಲ್.ಬಿ.

೩. ಸಂಘ ಸ್ಥಾಪನೆ

ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

೪. ವಂದನೆಗಳು

ಶ್ರೀಮಾನ್ ಎಸ್.ಬಿ. ದತ್ತಾತ್ರಿರಾವ್ ಸಂಘದ ಸದಸ್ಯರಿಂದ

೮. ೮-೧೦-೨೬ ಚನ್ನಗಿರಿಯಲ್ಲಿ-

ಅಧ್ಯಕ್ಷರು: ಶ್ರೀಮಾನ್ ಹೆಚ್.ಜಿ. ರಾಮಯ್ಯ, ಬಿ.ಎ.

೧. ಪ್ರಾರಂಭ ಭಾಷಣ

ಶ್ರೀಮಾನ್ ಪಿ. ಮುರುಡಪ್ಪ, ಬಿ.ಎ., ಬಿ.ಎಲ್.

೨. ಭಾರತ ವಾಚನ

ಶ್ರೀಮಾನ್ ಹೆಚ್.ಆರ್. ಮಾಧವರಾವ್

೩. ಕಾವ್ಯ ವಾಚನ

ಶ್ರೀಮಾನ್‌ಗಳಾದ ಬಿ.ಆರ್. ಪುಟ್ಟನಂಜಪ್ಪ, ಎಂ.ಎ., ಎಲ್‌ಎಲ್.ಬಿ., ಎಸ್.ವಿ. ಕೃಷ್ಣಮೂರ್ತಿರಾವ್, ಬಿ.ಎಸ್‌ಸಿ., ಎಲ್‌ಎಲ್.ಬಿ.

೪. ಉಪನ್ಯಾಸ: ರಾಘವಾಂಕನ ಹರಿಶ್ಚಂದ್ರ ಕಾವ್ಯ

ಶ್ರೀಮಾನ್ ಕೂಡಲಿ ಚಿದಂಬರಂ, ಬಿ.ಎ., ಎಲ್‌ಎಲ್.ಬಿ.

೫. ಅಧ್ಯಕ್ಷರ ಭಾಷಣ

೯. ೧೬-೧೦-೩೬ ನ್ಯಾಮತಿಯಲ್ಲಿ-

ಅಧ್ಯಕ್ಷರು: ಶ್ರೀಮಾನ್ ಹೆಚ್. ಲಿಂಗಪ್ಪ, ಬಿ.ಎ., ಎಲ್‌ಎಲ್.ಬಿ.

೧. ಪ್ರಾರಂಭ ಭಾಷಣ

೨. (i) ಕಾವ್ಯ ವಾಚನ

ಶ್ರೀಮಾನ್ ಹೆಚ್.ಆರ್. ಮಾಧವರಾಯರು

(ii) ಆಧುನಿಕ ಕವನಗಳು

ಶ್ರೀಮಾನ್‌ಗಳಾದ ಬಿ.ಆರ್. ಪುಟ್ಟನಂಜಪ್ಪ, ಎಂ.ಎ., ಎಲ್‌ಎಲ್.ಬಿ., ಎಸ್.ವಿ. ಕೃಷ್ಣಮೂರ್ತಿರಾವ್, ಬಿ.ಎಸ್‌ಸಿ., ಎಲ್‌ಎಲ್.ಬಿ.

೩. ಉಪನ್ಯಾಸ:

(i) ಮುದ್ದಣನ ರಾಮಾಶ್ವಮೇಧ

ಶ್ರೀಮಾನ್ ಎಸ್. ವಿಷ್ಣುಭಟ್ಟ, ಬಿ.ಎ., ಎಲ್‌ಎಲ್.ಬಿ.

(ii) ಕೆಲವು ಆರೋಗ್ಯ ವಿಚಾರಗಳು

ಡಾಕ್ಟರ್ ಕೆ.ಎನ್. ದತ್ತಾತ್ರಿ, ಎಲ್.ಎಂ.ಪಿ.

೪. ಅಧ್ಯಕ್ಷರ ಭಾಷಣ

೫. ವಂದನೆಗಳು

ಶ್ರೀಮಾನ್ ಎಸ್.ವಿ. ಕೃಷ್ಣಮೂರ್ತಿರಾವ್

೧೦. ೮-೧೦-೩೬ ಹೊನ್ನಾಳಿಯಲ್ಲಿ-

ಅಧ್ಯಕ್ಷರು: ಶ್ರೀಮಾನ್ ಟಿ. ಗುರುನಂಜಯ್ಯ, ಬಿ.ಎ., ಬಿ.ಎಲ್.

೧. ಆರಂಭದ ಭಾಷಣ

ಶ್ರೀಮಾನ್ ಪುಟ್ಟಮಾದಪ್ಪ, ಅಮಲ್ದಾರ್

೨. ಭಾರತ ವಾಚನ

ಶ್ರೀಮಾನ್ ಹೆಚ್.ಆರ್. ಮಾಧವರಾವ್

೩. ರನ್ನನ ಗದಾಯುದ್ಧ

ಶ್ರೀಮಾನ್ ಎಸ್. ವಿಷ್ಣುಭಟ್ಟ, ಬಿ.ಎ., ಎಲ್‌ಎಲ್.ಬಿ.

೪. ಕಾವ್ಯ ವಾಚನ

ಶ್ರೀಮಾನ್ ಬಿ.ಆರ್. ಪುಟ್ಟನಂಜಪ್ಪ, ಎಂ.ಎ., ಎಲ್‌ಎಲ್.ಬಿ.

ಶ್ರೀಮಾನ್ ಎಸ್.ವಿ. ಕೃಷ್ಣಮೂರ್ತಿರಾವ್, ಬಿ.ಎಸ್‌ಸಿ., ಎಲ್‌ಎಲ್.ಬಿ..

ಅನುಬಂಧ-೧೩

ಆರನೆಯ ವರ್ಷ-ಸ್ಪರ್ಧೆಗಳು

ಹೈಸ್ಕೂಲ್:

೧. ಪ್ರಬಂಧ ರಚನೆ

(i) ಶ್ರೀಮಾನ್ ಎ.ಆರ್. ಕೃಷ್ಣಶಾಸ್ತ್ರಿಗಳ ಮೊದಲನೆಯ ಬಹುಮಾನ
ಶ್ರೀ ಬಿ.ಎಸ್. ವಾಸುದೇವಮೂರ್ತಿ

(ii) ಶ್ರೀಮಾನ್ ಹೆಚ್. ಲಿಂಗಪ್ಪನವರ ಎರಡನೆಯ ಬಹುಮಾನ
ಶ್ರೀ ಬಿ. ನಾಗಪ್ಪ

(iii) ಶ್ರೀಮಾನ್ ಹೊಸೂಡಿ ವೆಂಕಟಶಾಸ್ತ್ರಿಗಳ ಮೂರನೆಯ ಬಹುಮಾನ
ಶ್ರೀ ಕೆ.ವಿ. ಭೀಮರಾವ್

೨. ಭಾರತ ವಾಚನ

(i) ಶ್ರೀಮಾನ್ ಹೊಸೂಡಿ ವೆಂಕಟಶಾಸ್ತ್ರಿಗಳ ಮೊದಲನೆಯ ಬಹುಮಾನ
ಶ್ರೀ ಕೆ.ಎಲ್. ಕೃಷ್ಣಮೂರ್ತಿ

(ii) ಶ್ರೀಮಾನ್ ಚನ್ನಗಿರಿ ಗೋವಿಂದಸ್ವಾಮಿ ಸೆಟ್ಟರ ಎರಡನೆಯ ಬಹುಮಾನ
ಶ್ರೀ ಹೆಚ್. ಬೆಟ್ಟಪ್ಪ

೩. ಕಾವ್ಯ ವಾಚನ-೧

(i) ಶ್ರೀಮಾನ್ ದೇವಂಗಿ ರಾಮಣ್ಣಗೌಡರ ಮೊದಲನೆಯ ಬಹುಮಾನ
ಶ್ರೀ ಬಿ.ಎಸ್. ವಾಸುದೇವಮೂರ್ತಿ

(ii) ಶ್ರೀಮಾನ್ ಬಿ. ವೆಂಕಟಸ್ವಾಮಯ್ಯನವರ ಎರಡನೆಯ ಬಹುಮಾನ
ಶ್ರೀ ಹೆಚ್. ಬೆಟ್ಟಪ್ಪ

ಕಾವ್ಯವಾಚನ-೨

(i) ಶ್ರೀಮಾನ್ ಚನ್ನಗಿರಿ ಗೋವಿಂದಸ್ವಾಮಿ ಸೆಟ್ಟರ ಮೊದಲನೆಯ ಬಹುಮಾನ
ಶ್ರೀ ಆರ್.ಎನ್. ಶಂಕರರಾವ್

(ii) ಶ್ರೀಮಾನ್ ಟಿ. ಗುರುನಂಜಯ್ಯನವರ ಎರಡನೆಯ ಬಹುಮಾನ
ಶ್ರೀ ಟಿ.ಡಿ. ಶಂಕರನಾರಾಯಣರಾವ್

ಬಾಲಕಿಯರ ಮಾಧ್ಯಮಿಕ ಶಾಲೆ:

೧. ಭಾರತ ವಾಚನ

(i) ಶ್ರೀಮಾನ್ ದೇವಂಗಿ ರಾಮಣ್ಣಗೌಡರ ಮೊದಲನೆಯ ಬಹುಮಾನ
ಶ್ರೀಮತಿ ಜಯಲಕ್ಷ್ಮಮ್ಮ.

(ii) ಶ್ರೀಮಾನ್ ಭೂಪಾಲಂ ರುಕ್ಮಯ್ಯ (ಸುಭದ್ರಮ್ಮ)ನವರ ಎರಡನೆಯ ಬಹುಮಾನ
ಶ್ರೀಮತಿ ಎನ್. ರುಕ್ಕಮ್ಮಾಳ್

೨. ಕಾವ್ಯ ವಾಚನ-

(i) ಶ್ರೀಮಾನ್ ರುಕ್ಮಯ್ಯ (ಸುಭದ್ರಮ್ಮ)ನವರ ಮೊದಲನೆಯ ಬಹುಮಾನ
ಶ್ರೀಮತಿ ಎಂ.ಜಿ. ಸರೋಜಮ್ಮ

(ii) ಶ್ರೀಮಾನ್ ಭೂಪಾಲಂ ರುಕ್ಮಯ್ಯ (ಸುಭದ್ರಮ್ಮ)ನವರ ಎರಡನೆಯ ಬಹುಮಾನ
ಶ್ರೀಮತಿ ಹೆಚ್. ಗಿರಿಜಮ್ಮ

೩. ಕಾವ್ಯವಾಚನ-೩

(i) ಶ್ರೀಮಾನ್ ಹೊಸೂಡಿ ವೆಂಕಟಶಾಸ್ತ್ರಿಗಳ ಮೊದಲನೆಯ ಬಹುಮಾನ
ಶ್ರೀಮತಿ ಹೆಚ್.ಕೆ. ಶಾರದಮ್ಮ

(ii) ಸಂಘದ ಎರಡನೆಯ ಬಹುಮಾನ
ಶ್ರೀಮತಿ ಬಿ. ಜಯಮ್ಮ

ಬಾಲಕರ ಮಾಧ್ಯಮಿಕ ಶಾಲೆ:

೧. ಕಾವ್ಯ ವಾಚನ-೧

(i) ಶ್ರೀಮಾನ್ ಎ.ಆರ್. ಕೃಷ್ಣಶಾಸ್ತ್ರಿಗಳ ಮೊದಲನೆಯ ಬಹುಮಾನ
ಶ್ರೀ ತಿಮ್ಮರಸಯ್ಯ

(ii) ಸಂಘದ ಎರಡನೆಯ ಬಹುಮಾನ
ಶ್ರೀ ಚಂದ್ರಶೇಖರ

೨. ಕಾವ್ಯ ವಾಚನ-೨

(i) ಶ್ರೀಮಾನ್ ಹೆಚ್. ಲಿಂಗಪ್ಪನವರ ಮೊದಲನೆಯ ಬಹುಮಾನ
ಶ್ರೀ ಅನಂತರಾವ್

(ii) ಸಂಘದ ಎರಡನೆಯ ಬಹುಮಾನ
ಶ್ರೀ ಸೋಮಶೇಖರಯ್ಯ

ಸಂಘದ ಪ್ರಚಾರ ಕಾರ್ಯದಲ್ಲಿ ಸಹಾಯ ಮಾಡಿದುದಕ್ಕಾಗಿ ಶ್ರೀಮಾನ್ ಹೆಚ್.ಆರ್. ಮಾಧವರಾಯರಿಗೆ ಸಂಘದ ಕಾಣಿಕೆ-ಗದುಗಿನ ಭಾರತ.

ಶ್ರೀಮತಿಯರಾದ ಟಿ.ಜಿ. ಶ್ರೀರಂಗಮ್ಮನವರು, ಶ್ರೀರಂಗಮ್ಮನವರು, ಮಿಸ್ ಸುಂದರಮ್ಮ ಅವರುಗಳೂ, ಶ್ರೀಯುತರಾದ ಟಿ. ಗುರುಸಂಜಯ್ಯ, ಬಿ.ಎ., ಬಿ.ಎಲ್., ಕುಕ್ಕೆ ಸೀತಾರಾಮಶಾಸ್ತ್ರಿ ಬಿ.ಎ., ಎಲ್‌ಎಲ್.ಬಿ., ಪಂಡಿತ ಭರಮಗೌಡರು, ಪಂಡಿತ ಬಸವಯ್ಯನವರು, ಎಂ.ಆರ್. ರಾಮಯ್ಯ, ಬಿ.ಎ., ಟಿ. ಪ್ರಾಣೇಶಾಚಾರ್, ಬಿ.ಎ., ವಿದ್ವಾನ್ ಬಿ. ಶೇಷಪ್ಪ -ಇವರುಗಳು ಪರೀಕ್ಷಕರಾಗಿ ಸಹಾಯ ಮಾಡಿದ್ದಾರೆ.

ಅನುಬಂಧ-೧ಳ

ಏಳನೆಯ ವರ್ಷ-ಸ್ಪರ್ಧೆಗಳು

೧. ಗೌ।। ಹೈಸ್ಕೂಲ್, ಶಿವಮೊಗ್ಗ:

(i) ಪ್ರಬಂಧ ರಚನೆ

ಶ್ರೀಮಾನ್ ಎ.ಆರ್. ಕೃಷ್ಣಶಾಸ್ತ್ರಿಗಳ ಮೊದಲನೆಯ ಬಹುಮಾನ
ಶ್ರೀ ಬಿ.ಎಸ್. ವಾಸುದೇವಮೂರ್ತಿ

ಶ್ರೀಮಾನ್ ಹೊಸೂಡಿ ವೆಂಕಟಶಾಸ್ತ್ರಿಗಳ ಎರಡನೆಯ ಬಹುಮಾನ
ಶ್ರೀ ವೈ.ವಿ. ರಾಮದಾಸ್

(ii) ಕಾವ್ಯ ವಾಚನ:

ಸಂಘದ ಮೊದಲನೆಯ ಬಹುಮಾನ
ಶ್ರೀ ಕೆ.ಎಲ್. ಕೃಷ್ಣಮೂರ್ತಿ

ಶ್ರೀಮಾನ್ ದೇವಂಗಿ ರಾಮಣ್ಣಗೌಡರ ಎರಡನೆಯ ಬಹುಮಾನ
ಶ್ರೀ ಎಸ್.ವಿ. ರಾಮಚಂದ್ರಮೂರ್ತಿ

ಶ್ರೀಮಾನ್ ದೇವಂಗಿ ರಾಮಣ್ಣಗೌಡರ ಮೂರನೆಯ ಬಹುಮಾನ
ಶ್ರೀ ಧ್ರುವರಾವ್

೨. ಬಾಲಕರ ಮಾಧ್ಯಮಿಕ ಶಾಲೆ:

ಕಾವ್ಯವಾಚನ

ಶ್ರೀಮಾನ್ ಹೊಸೂಡಿ ರಾಮಶಾಸ್ತ್ರಿಗಳ ಮೊದಲನೆಯ ಬಹುಮಾನ
ಶ್ರೀ ಕೆ. ತಿಮ್ಮರಸಯ್ಯ

ಶ್ರೀಮಾನ್ ಹೊಸೂಡಿ ವೆಂಕಟಶಾಸ್ತ್ರಿಗಳ ಎರಡನೆಯ ಬಹುಮಾನ
ಶ್ರೀ ಶ್ರೀಹರ್ಷ

೩. ಬಾಲಕಿಯರ ಮಾಧ್ಯಮಿಕ ಶಾಲೆ:

(i) ಕಾವ್ಯವಾಚನ - ಹಿರಿಯರಿಗೆ

ಶ್ರೀಮಾನ್ ಭೂಪಾಲಂ ರುಕ್ಮಯ್ಯನವರ ಮೊದಲನೆಯ ಬಹುಮಾನ
ಶ್ರೀ ಎ. ಅಮೃತಾಬಾಯಿ

ಶ್ರೀಮತಿ ಲಕ್ಷ್ಮಮ್ಮನವರ ಎರಡನೆಯ ಬಹುಮಾನ
ಶ್ರೀ ಹೆಚ್. ಗಿರಿಜಾ

(ii) ಕಾವ್ಯ ವಾಚನ-ಕಿರಿಯರಿಗೆ

ಶ್ರೀಮಾನ್ ಭೂಪಾಲಂ ರುಕ್ಮಯ್ಯನವರ ಮೊದಲನೆಯ ಬಹುಮಾನ
ಶ್ರೀ ಹೆಚ್. ಹನುಮಂತಮ್ಮ

ಶ್ರೀಮಾನ್ ಭೂಪಾಲಂ ರುಕ್ಮಯ್ಯನವರ ಎರಡನೆಯ ಬಹುಮಾನ
ಶ್ರೀ ಜಿ.ಎಸ್. ಲೀಲಾವತಿ

೪. ದುರ್ಗಿಗುಡಿ ಪ್ರಾಥಮಿಕ ಬಾಲಿಕಾ ಪಾಠಶಾಲೆ:

ಕಾವ್ಯವಾಚನ

ಶ್ರೀಮಾನ್ ಹೆಚ್. ಭವಾನಿಶಂಕರರಾವ್ ಅವರ ಮೊದಲನೆಯ ಬಹುಮಾನ
ಶ್ರೀ ಸರಸ್ವತಮ್ಮ

ಶ್ರೀಮಾನ್ ಹೆಚ್. ಭವಾನಿಶಂಕರರಾಯರ ಎರಡನೆಯ ಬಹುಮಾನ
ಶ್ರೀ ಶುಭಾಂಗಿ

೫. ದೊಡ್ಡ ಬ್ರಾಹ್ಮಣರ ಬೀದಿಯ ಬಾಲಕಿಯರ ಪ್ರಾಥಮಿಕ ಶಾಲೆ:

ಕಾವ್ಯವಾಚನ

ಸಂಘದ ಮೊದಲನೆಯ ಬಹುಮಾನ
ಶ್ರೀ ನಾಗರತ್ನ

ಸಂಘದ ಎರಡನೆಯ ಬಹುಮಾನ
ಶ್ರೀ ಅಮೃತಮ್ಮ

ಸಂಘದ ಮೂರನೆಯ ಬಹುಮಾನ
ಶ್ರೀ ಸಾಕಮ್ಮ

೬. ವಿಂಗಡಿಸಿದ ಬಾಲಕಿಯರ ಪ್ರಾಥಮಿಕ ಶಾಲೆ:

ಕಾವ್ಯ ವಾಚನ

ಸಂಘದ ಮೊದಲನೆಯ ಬಹುಮಾನ
ಶ್ರೀ ಇಂದಿರಮ್ಮ

ಸಂಘದ ಎರಡನೆಯ ಬಹುಮಾನ
ಶ್ರೀ ಸುಕನ್ಯಾ

೭. ದುರ್ಗಿಗುಡಿ ಬಾಲಕರ ಪ್ರಾಥಮಿಕ ಶಾಲೆ:

ಕಾವ್ಯವಾಚನ

ಡಾಕ್ಟರ್ ಕೆ.ಎನ್. ದತ್ತಾತ್ರಿಯವರ ಮೊದಲನೆಯ ಬಹುಮಾನ
ಶ್ರೀ ನರಹರಿ

ಡಾಕ್ಟರ್ ಕೆ.ಎನ್. ದತ್ತಾತ್ರಿಯವರ ಎರಡನೆಯ ಬಹುಮಾನ
ಶ್ರೀ ಅಬ್ದುಲ್ ರಹೀಂ

೮. ದೊಡ್ಡ ಬ್ರಾಹ್ಮಣರ ಬೀದಿ ಬಾಲಕ ಪಾಠಶಾಲೆ:

ಕಾವ್ಯವಾಚನ

ಶ್ರೀಮಾನ್ ಚನ್ನಗಿರಿ ಗೋವಿಂದಸ್ವಾಮಿ ಸೆಟ್ಟರ ಮೊದಲನೆಯ ಬಹುಮಾನ
ಶ್ರೀ ರಾಘವೇಂದ್ರ

ಶ್ರೀಮಾನ್ ಚನ್ನಗಿರಿ ಗೋವಿಂದಸ್ವಾಮಿ ಸೆಟ್ಟರ ಎರಡನೆಯ ಬಹುಮಾನ
ಶ್ರೀ ಶ್ರೀನಿವಾಸಮೂರ್ತಿ

ಶ್ರೀಮಾನ್ ಚನ್ನಗಿರಿ ಗೋವಿಂಧಸ್ವಾಮಿ ಸೆಟ್ಟರ ಮೂರನೆಯ ಬಹುಮಾನ
ಶ್ರೀ ರಾಜೀವಲೋಚನ

೯. ಕೋಟೆ ಬಾಲಕರ ಪ್ರಾಥಮಿಕ ಶಾಲೆ:

ಕಾವ್ಯವಾಚನ

ಶ್ರೀಮಾನ್ ಚನ್ನಗಿರಿ ಗೋವಿಂದಸ್ವಾಮಿ ಸೆಟ್ಟರ ಮೊದಲನೆಯ ಬಹುಮಾನ
ಶ್ರೀ ಪಿ. ನರಸಿಂಹಮೂರ್ತಿ

ಶ್ರೀಮಾನ್ ಚನ್ನಗಿರಿ ಗೋವಿಂದಸ್ವಾಮಿ ಸೆಟ್ಟರ ಎರಡನೆಯರ ಬಹುಮಾನ
ಶ್ರೀ ಪಾರ್ಥನಾರಾಯಣ ಸೆಟ್ಟಿ

೧೦. ವಿಶೇಷ ಬಹುಮಾನಗಳು: ಸಂಘದಿಂದ
ಕುಮಾರಿ ಮನೋರಮಾ
ಕುಮಾರಿ ಕೌಸಲ್ಯ

ಶ್ರೀಮಾನ್‌ಗಳಾದ-

ಜಿ. ಚನ್ನಪ್ಪ, ಬಿ.ಎಸ್. ರಾಘವಯ್ಯ, ಎಸ್. ವಿಷ್ಣುಭಟ್ಟ, ಎಸ್.ಎಸ್. ವೀರಪ್ಪ, ಕೆರೋಡಿ ಕೃಷ್ಣಮೂರ್ತಿ, ವೆಂಕಟರಾಯರು, ವಿದ್ವಾನ್ ಬಿ. ಶೇಷಪ್ಪ, ವಿಶ್ವನಾಥರಾಯರು, ಕೂಡಲಿ ಚಿದಂಬರಂ, ಟಿ. ಪ್ರಾಣೇಶಾಚಾರ್, ಹೆಚ್.ಆರ್. ಮಾಧವರಾವ್, ಶ್ರೀಮತಿ ಪುಟ್ಟಾರಮ್ಮ -ಇವರುಗಳು ಸ್ಪರ್ಧೆಗಳಲ್ಲಿ ಪರೀಕ್ಷಕರಾಗಿ ಸಹಾಯ ಮಾಡಿದ್ದಾರೆ.

ಅನುಬಂಧ-೧೫

ಎಂಟನೆಯ ವರ್ಷ-ಸ್ಪರ್ಧೆಗಳು

೧. ಹೈಸ್ಕೂಲ್ - ನಾರ್ಮಲ್ ಸ್ಕೂಲ್ ವಿದ್ಯಾರ್ಥಿಗಳಿಗೆ:

(i) ಭಾರತ ವಾಚನ

ಶ್ರೀಮಾನ್ ಎ.ಆರ್. ಕೃಷ್ಣಶಾಸ್ತ್ರಿಗಳ ಮೊದಲನೆಯ ಬಹುಮಾನ
ಶ್ರೀ ಹೆಚ್. ಶಂಕರಭಟ್ಟ (ನಾರ್ಮಲ್ ಸ್ಕೂಲ್)

ಶ್ರೀಮಾನ್ ಹೆಚ್. ಲಿಂಗಪ್ಪನವರ ಎರಡನೆಯ ಬಹುಮಾನ
ಶ್ರೀ ಬಿ. ಕೃಷ್ಣಪ್ಪ (ಹೈಸ್ಕೂಲ್)

(ii) ಕಾವ್ಯ ವಾಚನ

ಶ್ರೀಮಾನ್ ಹೊಸೂಡಿ ವೆಂಕಟಶಾಸ್ತ್ರಿಗಳ ಬಹುಮಾನ

ಶ್ರೀ ಟಿ. ಮಂಜಪ್ಪಯ್ಯ (ನಾರ್ಮಲ್ ಸ್ಕೂಲ್)

(iii) ಭಾಷಣ ಸ್ಪರ್ಧೆ

ಶ್ರೀಮಾನ್ ದೇವಂಗಿ ರಾಮಣ್ಣ ಗೌಡರ ಮೊದಲನೆಯ ಬಹುಮಾನ

ಶ್ರೀ ಟಿ.ಎಂ. ಕೊಟ್ರಯ್ಯ (ನಾರ್ಮಲ್ ಸ್ಕೂಲ್)

ಜಿಲ್ಲಾ ನಾರ್ಮಲ್ ಸ್ಕೂಲ್ ಸಹಕಾರ ಸಂಘದ ಎರಡನೆಯ ಬಹುಮಾನ

ಶ್ರೀ ಬಿ.ಎನ್. ವಾಸುದೇವಮೂರ್ತಿ (ಹೈಸ್ಕೂಲ್)

(iv) ಗದ್ಯ ವಾಚನ

ಶ್ರೀಮಾನ್ ಹೊಸೂಡಿ ವೆಂಕಟಶಾಸ್ತ್ರಿಗಳ ಮೊದಲನೆಯ ಬಹುಮಾನ

ಶ್ರೀ ಧ್ರುವರಾವ್ (ಹೈಸ್ಕೂಲ್)

ಸಂಘದ ಎರಡನೆಯ ಬಹುಮಾನ

ಶ್ರೀ ನಾಗಭೂಷಣರಾವ್ (ಹೈಸ್ಕೂಲ್)

(v) ಪ್ರಬಂಧ ರಚನೆ

ಶ್ರೀಮಾನ್ ಚನ್ನಗಿರಿ ಗೋವಿಂದಸ್ವಾಮಿ ಸೆಟ್ಟರ ಮೊದಲನೆಯ ಬಹುಮಾನ

ಶ್ರೀ ಬಿ.ಎನ್. ವಾಸುದೇವಮೂರ್ತಿ

ಸಂಘದ ಎರಡನೆಯ ಬಹುಮಾನ

ಶ್ರೀ ಹೆಚ್. ಶಂಕರಭಟ್ಟ

18929

೨. ಮಾಧ್ಯಮಿಕ ಶಾಲೆ

ಕಾವ್ಯವಾಚನ (i) ಬಾಲಕರು

ಸಂಘದ ಮೊದಲನೆಯ ಬಹುಮಾನ

ಶ್ರೀ ರಾಯಪ್ಪ

ಶ್ರೀಮಾನ್ ಹೆಚ್. ಭವಾನಿಶಂಕರರಾಯರ ಎರಡನೆಯ ಬಹುಮಾನ

ಶ್ರೀ ಜನಾರ್ದನಯ್ಯ

ಶ್ರೀಮಾನ್ ಜಿ. ಚನ್ನಪ್ಪನವರ ಮೂರನೆಯ ಬಹುಮಾನ

ಶ್ರೀ ವೈ.ಕೆ. ತಿಮ್ಮರಸಯ್ಯ

(ii) ಬಾಲಕಿಯರು

ಶ್ರೀಮಾನ್ ಭೂಪಾಲಂ ರುಕ್ಮಯ್ಯ (ಸುಭದ್ರಮ್ಮ)ನವರ ಮೊದಲನೆಯ ಬಹುಮಾನ

ಶ್ರೀ ಬಿ.ಎಸ್. ಮೈಥಿಲಿ

ಶ್ರೀಮಾನ್ ಭೂಪಾಲಂ ರುಕ್ಮಯ್ಯನವರ ಎರಡನೆಯ ಬಹುಮಾನ

ಶ್ರೀ ಕೆ. ಸಾವಿತ್ರಿ

೨. ಪ್ರಾಥಮಿಕ ಶಾಲೆ

ಕಾವ್ಯ ವಾಚನ (i) ಬಾಲಕರು

ಶ್ರೀಮಾನ್ ಎಲ್. ಸಿದ್ಧಪ್ಪನವರ ಮೊದಲನೆಯ ಬಹುಮಾನ

ಶ್ರೀ ಎನ್. ಕೃಷ್ಣಮೂರ್ತಿ

ಡಾಕ್ಟರ್ ಕೆ.ಎನ್. ದತ್ತಾತ್ರೆಯವರ ಎರಡನೆಯ ಬಹುಮಾನ

ಶ್ರೀ ಚಂದ್ರಪ್ಪ

ಶ್ರೀಮಾನ್ ಚನ್ನಗಿರಿ ರಾಮಸ್ವಾಮಿ ಸೆಟ್ಟರ ಮೂರನೆಯ ಬಹುಮಾನ

ಶ್ರೀ ಸಣ್ಣಪ್ಪ

(ii) ಬಾಲಕಿಯರು

ಮಹಿಳಾ ಸಮಾಜದ ಮೊದಲನೆಯ ಬಹುಮಾನ

ಶ್ರೀ ಎಸ್.ಕೆ. ಚಂದ್ರವದನ

ಶ್ರೀಮತಿ ರಾಜಲಕ್ಷ್ಮಮ್ಮನವರ ಎರಡನೆಯ ಬಹುಮಾನ

ಶ್ರೀ ಕೆ. ಸೇತೂಬಾಯಿ

ಶ್ರೀಮತಿ ರಾಜಲಕ್ಷ್ಮಮ್ಮನವರ ಮೂರನೆಯ ಬಹುಮಾನ

ಶ್ರೀ ಸರಸ್ವತಿ

ಶ್ರೀಮತಿ ಲಕ್ಷ್ಮಮ್ಮನವರ ನಾಲ್ಕನೆಯ ಬಹುಮಾನ

ಶ್ರೀ ಅನಸೂಯ

೪. ಶಿಶುವಿಹಾರದ ಮಕ್ಕಳಿಗೆ ಸಂಘದ ಬಹುಮಾನಗಳು:

(i) ನಾಗರಾಜನ್

(ii) ಲಕ್ಷ್ಮಮ್ಮ

(iii) ಮಹೇಶಚಂದ್ರ

(iv) ಮೀರಾಬಾಯಿ

(v) ಪ್ರಫುಲ್ಲಚಂದ್ರ

೫. ಸಂಘದ ವಿಶೇಷ ಬಹುಮಾನ;

ಶ್ರೀ ಚೊಕ್ಕತಾಯಮ್ಮ

ಶ್ರೀಮತಿ ರಾಜಲಕ್ಷ್ಮಮ್ಮನವರು, ಶ್ರೀಮತಿ ಸೀತಮ್ಮನವರು, ಶ್ರೀಮತಿ ರಾಮಕ್ಕನವರು, ಶ್ರೀಯುತರಾದ ಟಿ. ಗುರುನಂಜಯ್ಯ, ಬಿ.ಎ., ಬಿ.ಎಲ್., ಶ್ರೀ ಎಸ್. ವಿಷ್ಣುಭಟ್ಟ, ಬಿ.ಎ., ಎಲ್‌ಎಲ್.ಬಿ., ಶ್ರೀ ಜಿ.ಎನ್. ಅಣ್ಣಯ್ಯ, ಎಂ.ಎ., ಶ್ರೀ ಕುಕ್ಕೆ ಸೀತಾರಾಮಶಾಸ್ತ್ರಿ, ಬಿ.ಎ., ಎಲ್‌ಎಲ್.ಬಿ., ಶ್ರೀ ಆರ್.ಕೆ. ಜಯತೀರ್ಥಾಚಾರ್, ಬಿ.ಎ., ಎಲ್‌ಎಲ್.ಬಿ., ಶ್ರೀ ಜಿ. ಚನ್ನಪ್ಪ, ಬಿ.ಎ. ಎಲ್‌ಎಲ್.ಬಿ., ಶ್ರೀ ಎನ್.ಎಸ್. ವೀರಪ್ಪ, ಬಿ.ಎಸ್‌ಸಿ. (ಆನರ್ಸ್), ಶ್ರೀ ಎಂ.ಆರ್. ರಾಮಯ್ಯ, ಬಿ.ಎ., ಶ್ರೀ ಎಸ್. ನಾರಾಯಣರಾವ್, ಬಿ.ಎ., ಬಿ.ಟಿ., ಶ್ರೀ ಹೆಚ್.ಆರ್. ಮಾಧವರಾವ್ -ಇವರುಗಳು ಪರೀಕ್ಷಕರಾಗಿ ಸಹಾಯ ಮಾಡಿರುತ್ತಾರೆ.

ಅನುಬಂಧ-೧೬

ಶಿವಮೊಗ್ಗ ಜಿಲ್ಲೆಯ ಸಂಘಗಳು ಮತ್ತು ಸಾಹಿತ್ಯ ಸಂಸ್ಥೆಗಳು

೧. ಕರ್ಣಾಟಕ ಸಂಘ, ಶಿವಮೊಗ್ಗ
೨. ಕರ್ಣಾಟಕ ಸಂಘ, ಹೈಸ್ಕೂಲ್, ಶಿವಮೊಗ್ಗ
೩. ಸೋದರ ಸಂಘ, ಶಿವಮೊಗ್ಗ
೪. ಕರ್ಣಾಟಕ ಸಂಘ, ತೀರ್ಥಹಳ್ಳಿ
೫. ಕರ್ಣಾಟಕ ಸಂಘ, ಆಗುಂಬೆ
೬. ಕರ್ಣಾಟಕ ಸಂಘ, ನಗರ
೭. ಕರ್ಣಾಟಕ ಸಂಘ, ಹೊಸನಗರ
೮. ಕರ್ಣಾಟಕ ಸಂಘ, ಸಾಗರ
೯. ಸೋದರ ಸಂಘ, ಸಾಗರ
೧೦. ಸೋದರ ಸಂಘ, ಸೊರಬ
೧೧. ಕರ್ಣಾಟಕ ಸಂಘ, ಆನವಟ್ಟಿ, ಸೊರಬ ತಾ॥
೧೨. ಕರ್ಣಾಟಕ ಸಂಘ, ಶಿರಾಳಕೊಪ್ಪ
೧೩. ಕರ್ಣಾಟಕ ಸಂಘ, ಷಿಕಾರಿಪುರ
೧೪. ಕರ್ಣಾಟಕ ಸಂಘ, ಕುಂಸಿ

ಅನುಬಂಧ-೧೭

ಆನವಟ್ಟಿಯ ವಿಶೇಷ ಸಾಹಿತ್ಯೋತ್ಸವದ ಕಾರ್ಯಕ್ರಮ

೧. ೨೫-೫-೧೯೩೮ ಸಂಜೆ ೪-೩೦: ಪ್ರಾರಂಭೋತ್ಸವ

ಬೊಂಬಾಯಿ ಸರಕಾರದ ಪಾರ್ಲಿಮೆಂಟರಿ ಸೆಕ್ರಿಟರಿಗಳಾದ ಶ್ರೀಮಾನ್ ಟಿ.ಆರ್. ನೇಸ್ವಿಯವರಿಂದ

ಕಾರ್ಯವಿವರ

ದೇವತಾ ಪ್ರಾರ್ಥನೆ, ಸ್ವಾಗತ ಪದ್ಯಗಳು-ಬಾಲಿಕೆಯರು.

ಭಾಷಣಗಳು:

೧) ಸ್ವಾಗತ ಭಾಷಣ: ಶ್ರೀ ಮಲ್ಲಿಕಾರ್ಜುನಪ್ಪ ಗೌಡರು
೨) ಪರಿಷತ್ತಿನ ಗುರಿ, ಕನ್ನಡದ ಮೇಲ್ಮೆ-ಭಾಷಾ ಪ್ರಚಾರ, ಇತ್ಯಾದಿ: ಶ್ರೀ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರು
೩) ಶಿಶು ಸಾಹಿತ್ಯದಲ್ಲಿನ ಕೆಲವು ಭಾಗಗಳ ವಾಚನ: ಶ್ರೀ ಹೊಯ್ಸಳರು

೪) ರೈತರ ಸಾಲ ಮತ್ತು ಅದರ ನಿವಾರಣೆ: ಶ್ರೀಮಾನ್ ವಿ. ಸೀತಾರಾಮಯ್ಯನವರು, ಎಂ.ಎ.

೫) ವಿದ್ಯುಚ್ಛಕ್ತಿಯ ಪ್ರಯೋಜನಗಳು: ಶ್ರೀ ಪಿ. ಶ್ರೀನಿವಾಸರಾಯರು, ಎಂ.ಎಸ್‌ಸಿ.

ಸಂಗೀತ: ಶ್ರೀ ಕೆ.ಜಿ. ಸಂಪತ್ಕುಮಾರಾಚಾರ್ಯರು, ಬಿ.ಎ. ಬಿ.ಟಿ. ಅವರು

ರಾತ್ರಿ ೯ ಗಂಟೆ: ಯಕ್ಷಗಾನ, ಸಂಗೀತ, ಮೃದಂಗ ವಾದನ: ಶ್ರೀ ಗುರುನಾಥ ಕೃಷ್ಣ ನಾಡಿಗೇರ ಮತ್ತು ಅವರ ಮಿತ್ರರು

೨. ೨೬-೫-೧೯೩೮ ಬೆಳಗ್ಗೆ ೮ ಘಂಟೆಗೆ : ಸಭೆ :

ಅಧ್ಯಕ್ಷರು: ಶ್ರೀ ಬಿ.ಎಂ. ಶ್ರೀಕಂಠಯ್ಯನವರು, ಎಂ.ಎ., ಬಿ.ಎಲ್.

ದೇವತಾ ಪ್ರಾರ್ಥನೆ: ಶ್ರೀ ಎಚ್. ಮಾಧವರಾಯರು ಭಾಷಣ: ಕ್ರಿಮಿಕೀಟಗಳು (ಸಚಿತ್ರ): ಶ್ರೀ ಎಸ್.ವಿ. ಕೃಷ್ಣಮೂರ್ತಿ ರಾಯರು, ಬಿಎಸ್‌ಸಿ., ಎಲ್‌ಎಲ್.ಬಿ.

ಭಾರತ ವಾಚನ: "ಹರಿಶ್ಚಂದ್ರ-ಮಾತಂಗ ಕನ್ಯೆಯರ ಸಂವಾದ" -ಶ್ರೀ ಎಚ್. ಮಾಧವರಾಯರು; "ಆರೋಗ್ಯ ವಿಚಾರ" -ಡಾ॥ ಜಿ.ವಿ. ಶ್ರೀನಿವಾಸಾಚಾರ್ಯರಿಂದ

ಸಂಜೆ ೪ ಘಂಟೆ: ಸಭಾಧ್ಯಕ್ಷರು: ಶಿವಮೊಗ್ಗ ಡಿಸ್ಟ್ರಿಕ್ಟ್ ವಿದ್ಯಾಧಿಕಾರಿಗಳಾದ ಶ್ರೀ ಎಲ್. ಅಬ್ದುಲ್ ಅಜೀಜ್ ಖಾನ್ ಅವರು

ಕಾವ್ಯವಾಚನ: (೧) "ಕೆಲವು ಕವನಗಳು" -ಶ್ರೀ ಎಸ್.ವಿ. ಕೃಷ್ಣಮೂರ್ತಿರಾಯರು, ಬಿ.ಎಸ್‌ಸಿ., ಎಲ್‌ಎಲ್.ಬಿ.; (೨) "ಶಿಶು ಸಾಹಿತ್ಯದಲ್ಲಿನ ಕೆಲವು ಕವನಗಳು" -ಶ್ರೀ ಹೊಯ್ಸಳರವರು

ಚರ್ಚಾಕೂಟ: "ಹಳ್ಳಿಯ ಶಾಲೆಗಳು" -(೧) ಶ್ರೀ ಎಚ್. ಲಿಂಗಪ್ಪನವರು; (೨) ಶ್ರೀ ಕೋ.ಶಿ. ಕಾರಂತರು; (೩) ಶ್ರೀ ಬಿ.ಎಂ. ಶ್ರೀಕಂಠಯ್ಯನವರು

ಭಾಷಣಗಳು: (೧) "ದಾಸರ ಪದಗಳು" -ಶ್ರೀ ಕೂಡಲಿ ಚಿದಂಬರಂ, ಎಂ.ಎ., ಎಲ್‌ಎಲ್.ಬಿ.; (೨) "ವೀರಶೈವ ಸಾಹಿತ್ಯ" -ಶ್ರೀ ಬಿ.ಎಂ. ಶ್ರೀಕಂಠಯ್ಯ ನವರು, ಎಂ.ಎ., ಬಿ.ಎಲ್.; (೩) ಉಪಸಂಹಾರ ಭಾಷಣ: ಅಧ್ಯಕ್ಷರಾದ ಶ್ರೀ ಎಲ್. ಅಬ್ದುಲ್ ಅಜೀಜ್ ಖಾನ್‌ರವರು

ರಾತ್ರಿ ೧೦ ಘಂಟೆಗೆ: ನಾಟಕ ಪ್ರದರ್ಶನ: "ಸಾವಿನ ಸಮಸ್ಯೆ" -ಷಿಕಾರಿಪುರ ಬಾಲಕ ಬಾಲಿಕೆಯರಿಂದ

೩. ೨೭-೫-೧೯೩೮ ಶುಕ್ರವಾರ:

ಬೆಳಿಗ್ಗೆ ೮ ಘಂಟೆ: ಸಭಾಧ್ಯಕ್ಷರು: ಶ್ರೀ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

ಭಾಷಣಗಳು: (೧) "ಜನಪದ ಸಾಹಿತ್ಯ" -ಶ್ರೀ ಕೋ.ಶಿ. ಕಾರಂತರು; (೨) "ಶಿಶು ಸಾಹಿತ್ಯ ವಿಚಾರ" -ಶ್ರೀ ಸೊರಬದ ಸುಬ್ಬರಾಯರು

ಕಾವ್ಯ ವಾಚನ: "ರತ್ನನ ಪದಗಳು" -ಶ್ರೀ ಜಿ.ಪಿ. ರಾಜರತ್ನಂ ಅವರು, ಎಂ.ಎ..

ವಾದ್ಯ: "ಬೀರಡೊಳ್ಳು ವಾದ್ಯ" -ಸೊರಬದ ಶ್ರೀ ಎಸ್. ನರಸಿಂಹಾಚಾರ್ಯರವರು

ಭಾಷಣಗಳು: "ವೃತ್ತ ಪತ್ರಿಕೆ" -ಶ್ರೀ ಬಿ.ಆರ್. ಪುಟ್ಟ ನಂಜಪ್ಪನವರು; "ಹೊಸ ಕನ್ನಡ ಸಾಹಿತ್ಯ" -ಶ್ರೀ ವಿ. ಸೀತಾರಾಮಯ್ಯನವರು

ಉಪಸಂಹಾರ ಭಾಷಣ: ಶ್ರೀ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

ಸಂಜೆ ೪ ಘಂಟೆ: (೧) "ದಾಸರ ಪದಗಳು" (ಉದಾಹರಣಾ ಸಮೇತ)- ಶ್ರೀ ಕೂ. ಚಿದಂಬರಂ; (೨) "ಶ್ರೀ ಬಸವೇಶ್ವರರು" (೩) ಲಾವಣಿ-ಹಾಡುಗಾರಿಕೆ; ಶ್ರೀ ಸೊರಬದ ನರಸಿಂಹಾಚಾರ್ಯರು; (೪) ಕವನ ಪಠನ: ಶ್ರೀ ಎಂ. ಹನುಮಂತಾಚಾರ್ಯರವರು; (೫) ಭಾರತ ವಾಚನ (ಗದುಗಿನ ಭಾರತದಲ್ಲಿ ಕೆಲವು ಭಾಗಗಳು) -ಗಮಕಿ ಶ್ರೀ ಕೆ.ಜಿ. ಸಂಪತ್ಕುಮಾರಾಚಾರ್ರ್ಯರು; ವಂದನಾ ಸಮರ್ಪಣೆ; ಕಾರ್ಯದರ್ಶಿಗಳಾದ ಶ್ರೀ ನಾಡಿಗ ರಾಮರಾಯರು

ನಾಟಕ ಪ್ರದರ್ಶನ: (೧) "ಯಮನ ಸೋಲು", "ಶಾಮಣ್ಣನ ಸಾಹಸ": ಸೊರಬದ ಸೋದರ ಸಂಘದವರು

ಮುಕ್ತಾಯ: ಕನ್ನಡ ಮಾತೆಯ ಜಯಘೋಷ- ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆ

ಅನುಬಂಧ-೧೮

ಜಿಲ್ಲಾ ಸಂಘಸಮ್ಮೇಳನಗಳ ಸಂಕ್ಷಿಪ್ತ ವರದಿ

೧. ಮೊದಲನೆಯ ಜಿಲ್ಲಾ ಸಂಘಸಮ್ಮೇಳನ : ೭-೨-೩೭ರಲ್ಲಿ

ಅಧ್ಯಕ್ಷರು: ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯ, ಎಂ.ಎ.

ಪ್ರಾರಂಭ: ಜಿಲ್ಲಾಧಿಕಾರಿಗಳೂ ಸಂಘದ ಗೌರವ ಅಧ್ಯಕ್ಷರೂ ಆಗಿದ್ದ ಶ್ರೀಮಾನ್ ಎಸ್. ನಾರಾಯಣರಾವ್, ಎಂ.ಎ. (ಆನರ್ಸ್) ಅವರಿಂದ

ಆಗುಂಬೆ, ಹೊಸನಗರ, ಹೊನ್ನಾಳಿ, ಶಿರಾಳಕೊಪ್ಪ, ಶಿಕಾರಿಪುರಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು. ತಮ್ಮ ಸಂಘಗಳ ಸೂಕ್ಷ್ಮ ವರದಿಯನ್ನು ಓದಿ ಪರಸ್ಪರ ಪರಿಚಯ ಮಾಡಿಕೊಟ್ಟರು.

ಜಿಲ್ಲಾ ಸಂಘ ಸಮ್ಮೇಳನವು ಪ್ರತಿ ವರ್ಷವೂ ಸೇರಬೇಕೆಂಬ ನಿರ್ಣಯವು ಅನುಮೋದಿಸಲ್ಪಟ್ಟಿತು.

ಅಧ್ಯಕ್ಷರ ಭಾಷಣದೊಂದಿಗೆ ಮುಕ್ತಾಯವಾಯಿತು.

೨. ಎರಡನೆಯ ಜಿಲ್ಲಾ ಸಂಘ ಸಮ್ಮೇಳನ : ೨೦-೩-೩೮

ಅಧ್ಯಕ್ಷರು: ಶ್ರೀಮಾನ್ ಸಿ.ಕೆ. ವೆಂಕಟರಾಮಯ್ಯ, ಎಂ.ಎ, ಎಲ್‌ಎಲ್.ಬಿ.

ಪ್ರಾರಂಭ: ಶ್ರೀಮಾನ್ ಎಂ. ಶೇಷಾದ್ರಿ, ಎಂ.ಎ., ಜಿಲ್ಲಾಧಿಕಾರಿಗಳು ಮತ್ತು ಸಂಘದ ಗೌರವ ಅಧ್ಯಕ್ಷರು.

ಶಿಕಾರಿಪುರ, ಶಿರಾಳಕೊಪ್ಪ, ಸೋದರ ಸಂಘ-ಶಿವಮೊಗ್ಗ, ಹೊಸನಗರ, ಕುಂಸಿ, ಆನವಟ್ಟಿ, ಸಾಗರ, ನರಸಿಂಹರಾಜಪುರ, ಹೈಸ್ಕೂಲ್ ಕರ್ನಾಟಕ ಸಂಘ-ಶಿವಮೊಗ್ಗ, ಆಗುಂಬೆ- ಈ ಸಂಘಗಳ ಪ್ರತಿನಿಧಿಗಳೂ, ಶಿವಮೊಗ್ಗ ಸಂಘದ ೧೧ ಜನ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರೂ ಇತರ ಸದಸ್ಯರೂ, ಪುರ ಪ್ರಮುಖರೂ ಭಾಗವಹಿಸಿದ್ದರು.

ಅನುಮೋದಿಸಿದ ನಿರ್ಣಯಗಳು

೧. ಕಳೆದ ನಾಲ್ಕು ವರ್ಷಗಳಿಂದ ಕರ್ನಾಟಕ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ದುಡಿದು ಪರಿಷತ್ತಿನ ಗೌರವ ಘನತೆಗಳನ್ನು ಹೆಚ್ಚಿಸಿದ ಶ್ರೀಮಾನ್ ಡಿ.ವಿ. ಗುಂಡಪ್ಪನವರಿಗೆ ಈ ಸಮ್ಮೇಳನವು ತನ್ನ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತದೆ.

೨. ಕನ್ನಡದ ಏಳಿಗೆಗಾಗಿ ತಮ್ಮ ತನು ಮನ ಧನಗಳನ್ನು ಅರ್ಪಿಸಿ ದುಡಿಯುತ್ತಲಿರುವ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರು ಪರಿಷತ್ತಿನ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟುದಕ್ಕೆ ಈ ಸಮ್ಮೇಳನವು ತನ್ನ ಸಂತೋಷವನ್ನು ಸೂಚಿಸಿ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರನ್ನು ಅಭಿನಂದಿಸುತ್ತದೆ.

೩. ಇದುವರೆಗೂ ಜಿಲ್ಲಾಧಿಕಾರಿಗಳಾಗಿದ್ದು ಜಿಲ್ಲೆಯ ಸಂಘಗಳಿಗೆ ತಮ್ಮ ಅಮೋಘವಾದ ಸಲಹೆ ಸಹಾನುಭೂತಿ ತೋರಿಸಿ ಪ್ರೋತ್ಸಾಹಿಸಿದುದಕ್ಕಾಗಿ ಶ್ರೀಮಾನ್ ಎಸ್. ನಾರಾಯಣರಾವ್, ಎಂ.ಎ. (ಆನರ್ಸ್) ಅವರಿಗೆ ಈ ಸಮ್ಮೇಳನವು ತನ್ನ ವಂದನೆಗಳನ್ನು ಅರ್ಪಿಸುತ್ತದೆ.

೪. ಜಿಲ್ಲೆಯ ಕರ್ನಾಟಕ ಸಂಘಗಳು ಕೈಗೊಳ್ಳಬಹುದಾದ ಜ್ಞಾನಪ್ರಚಾರ ಕಾರ್ಯದಲ್ಲಿಯೂ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಕೈಗೊಳ್ಳುವ ಇತರ ಕಾರ್ಯಕ್ರಮದಲ್ಲಿಯೂ ಒಂದು ನಿರ್ದಿಷ್ಟ ಕಾರ್ಯಕ್ರಮವನ್ನು ಗೊತ್ತುಮಾಡಿಸಲು ಒಂದು ಜಿಲ್ಲಾ ಕೇಂದ್ರ ಸಂಸ್ಥೆಯು ಇರಬೇಕೆಂದು ಈ ಸಮ್ಮೇಳನವು ಅಭಿಪ್ರಾಯಪಡುತ್ತದೆ.

೫. ಜಿಲ್ಲಾ ಕರ್ನಾಟಕ ಸಂಘಗಳ ಕೇಂದ್ರ ಸಂಸ್ಥೆಯ ಸಂಘಟನೆಯನ್ನು ತಯಾರಿಸಲು

ಶ್ರೀ ಸಿ.ಎನ್. ಶ್ರೀನಿವಾಸಮೂರ್ತಿ


ಶ್ರೀ ಟಿ. ಗುರುನಂಜಯ್ಯ, ಬಿ.ಎ., ಬಿ.ಎಲ್.

ಶ್ರೀ ಎಸ್.ವಿ. ಕೃಷ್ಣಮೂರ್ತಿರಾವ್, ಬಿ.ಎಸ್‌ಸಿ., ಎಲ್‌ಎಲ್.ಬಿ.


ಇವರುಗಳ ಸಮಿತಿಗೆ ಅಧಿಕಾರ ಕೊಡುತ್ತದೆ.

ಸಂಘದ ಪ್ರಕಟನೆಗಳು

				ರೂ.	ಆ.	ಪೈ.
೧.	ಸಾಹಿತ್ಯ ಪ್ರಚಾರ (ಭಾಷಣ)					
	ಕೆ.ವಿ. ಪುಟ್ಟಪ್ಪ, ಎಂ.ಎ.	...	...	ಮುಗಿದಿವೆ		
೨.	ರಕ್ತಾಕ್ಷಿ (ನಾಟಕ)					
	ಕೆ.ವಿ. ಪುಟ್ಟಪ್ಪ, ಎಂ.ಎ.	(ಸಾದ)	...	೧	೮	೦
		(ಕ್ಯಾಲಿಕೊ)	...	೨	೦	೦
೩.	ಪಾಂಚಜನ್ಯ (ರುದ್ರ ಕವನಗಳು)					
	ಕೆ.ವಿ. ಪುಟ್ಟಪ್ಪ, ಎಂ.ಎ.	(ಸಾದ)	...	೦	೧೨	೦
		(ಕ್ಯಾಲಿಕೊ)	...	೧	೪	೦
೪.	ನವಿಲು-೧ (ಲಲಿತ ಕವನಗಳು)					
	ಕೆ.ವಿ. ಪುಟ್ಟಪ್ಪ, ಎಂ.ಎ.	(ಸಾದ)	...	೧	೦	೦
೫.	ನವಿಲು-೨ (ಲಲಿತ ಕವನಗಳು)					
	ಕೆ.ವಿ. ಪುಟ್ಟಪ್ಪ, ಎಂ.ಎ.	(ಸಾದ)	...	೧	೦	೦
	ನವಿಲು (೧-೨ ಸೇರಿ)	ಕ್ಯಾಲಿಕೊ)	...	೨	೧೨	೦
೬.	ಗಂಡುಗೊಡಲಿ (ನಾಟಕ)					
	ಜಿ.ಪಿ. ರಾಜರತ್ನಂ, ಎಂ.ಎ.	...	...	ಮುಗಿದಿವೆ		
೭.	ಹನಿಗಳು (ಲಘು ಚಿತ್ರಗಳು)					
	ಜಿ.ಪಿ. ರಾಜರತ್ನಂ, ಎಂ.ಎ.	(ಸಾದ)	...	೦	೧೦	೦
		(ಕ್ಯಾಲಿಕೊ)	...	೧	೪	೦
೮.	ಕನ್ನಡ ಮೇಘ ಸಂದೇಶ (ಪದ್ಯ ಕಾವ್ಯ)					
	ಆಸ್ಥಾನ ಮಹಾವಿದ್ವಾನ್					
	ಪಂ॥ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿ	(ಸಾದ)	...	೦	೬	೦
೯.	ಮಾಟಗಾತಿ (ಸಣ್ಣ ಕಥೆಗಳು)					
	'ಆನಂದ'	(ಸಾದ)	...	೦	೧೨	೦
		(ಕ್ಯಾಲಿಕೊ)	...	೧	೪	೦
೧೦.	ಪಾತಾಳದಲ್ಲಿ ಪಾಪಚ್ಚಿ (ಬಾಲ ಸಾಹಿತ್ಯ)					
	ನಾ. ಕಸ್ತೂರಿ, ಎಂ.ಎ, ಬಿ.ಎಲ್.	(ಸಾದ)	...	೧	೦	೦
		(ಕ್ಯಾಲಿಕೊ)	...	೧	೮	೦
೧೧.	ಹಗಲುಗನಸುಗಳು (ಪ್ರಬಂಧಗಳು)					
	ಎ.ಎನ್. ಮೂರ್ತಿರಾವ್, ಎಂ.ಎ.	(ಸಾದ)	...	೦	೧೨	೦
		(ಕ್ಯಾಲಿಕೊ)	...	೧	೪	೦
೧೨.	ನೆಳಲು ಬೆಳಕು (ಕವನ ಸಂಗ್ರಹ)					
	ವಿ. ಸೀತಾರಾಮಯ್ಯ, ಎಂ.ಎ.	...	...	೧	೦	೦
೧೩.	ವಿಜ್ಞಾನ (ಲೇಖನಗಳು)					
	ಜಿ. ಹನುಮಂತರಾವ್, ಎಂ.ಎ.	...	...	೦	೧೨	೦
೧೪.	ನಾದಲೀಲೆ (ಕವನ ಸಂಗ್ರಹ)					
	ದ.ರಾ. ಬೇಂದ್ರೆ, ಎಂ.ಎ.	(ಸಾದ)	...	೦	೧೨	೦
		(ಕ್ಯಾಲಿಕೊ)	...	೧	೪	೦
೧೫.	ವಯಸ್ಕರ ವಿದ್ಯಾಭ್ಯಾಸದ ಮೊದಲನೆ ಪುಸ್ತಕ					
	ಎಂ.ಆರ್. ಶ್ರೀನಿವಾಸಮೂರ್ತಿ, ಬಿ.ಎ.	...	೦	೧	೬	
೧೬.	ಸಿದ್ಧರಾಮ ಪುರಾಣ					
	ರಾಘವಾಂಕ					
	ಸಂಪಾದಕರು: ದಿವಂಗತ ಟಿ.ಎಸ್. ವೆಂಕಣ್ಣಯ್ಯ, ಎಂ.ಎ.					
	ಡಿ.ಎಲ್. ನರಸಿಂಹಾಚಾರ್, ಎಂ.ಎ.					














ಕರ್ನಾಟಕ ಸಂಘ




ಕರ್ನಾಟಕ ಸಂಘ


ಕರ್ನಾಟಕ ಸಂಘ